
ಕರ್ನಾಟಕ ಸರ್ಕಾರ

೫೦ ಕರ್ನಾಟಕ
KARNATAKA

ಸಮಗ್ರ
ಕನ್ನಡ ಜನಪದ ಮತ್ತು ಯಕ್ಷಗಾನ
ಸಾಹಿತ್ಯ ಮಾಲೆ

ಪದ್ಯ ಸಾಹಿತ್ಯ

೧೨



# ಗಣೆ ಪದಗಳು

ಸಂ. ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ – ೪೬

ಪದ್ಯ ಸಾಹಿತ್ಯ ಪ್ರಕಾರ – ೨೭

# ಗಣೆ ಪದಗಳು

ಸಂಪಾದಕರು

ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಬೆಂಗಳೂರು – ೫೬೦ ೦೦೨

**'GANE PADAGALU'** - Edited by **Dr. Meerasabihally Shivanna,** # 27, 1st Floor, 5th Cross, Shanthivana, Sahakaranagar Post, Bangalore-560092. Published by K.A. Dayananda, Director, Dept. of Kannada and Culture, Kannada Bhavana, J.C.Road, Bangalore-560002.

© ಕಾಯ್ದಿರಿಸಿದೆ

**ಆವೃತ್ತಿಯ ಹಕ್ಕು** : ಕನ್ನಡ ಮತ್ತು ಸಂಸ್ಕೃತಿ ಇಲಾಖೆ
**ಪ್ರಥಮ ಮುದ್ರಣ** : ೨೦೧೪
**ಪುಟಗಳು** : lxxiv + ೩೬೬ = ೪೪೦
**ಪ್ರತಿಗಳು** : ೧೦೦೦
**ಬಿಡಿ ಪ್ರತಿ ಬೆಲೆ** : ರೂ. ೫೦/–
Print : 2014
Pages : lxxiv + 366 = 440
Copies : 1000
Price : Rs. 50/-

ಪ್ರಕಾಶಕರು :
ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ
**ಶ್ರೀ ಕೆ.ಎ. ದಯಾನಂದ,** ಕ.ಆ.ಸೇ. ಅವರಿಂದ ಪ್ರಕಟಿತ
**ಸಹಕಾರ : ಶ್ರೀ ಬಿ.ಎನ್. ಪರಡ್ಡಿ,** ರಿಜಿಸ್ಟ್ರಾರ್, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

ಸಂಯೋಜಕರು : **ಡಾ. ಚಕ್ಕೆರೆ ಶಿವಶಂಕರ್**

ಮುಖಪುಟ ವಿನ್ಯಾಸ : **ಪ. ಸ. ಕುಮಾರ್**

**ಮುದ್ರಕರು :**
**ಗೀತಾಂಜಲಿ ಗ್ರಾಫಿಕ್ಸ್**
ನಂ. ಬಿ–71, ನ್ಯೂ ನಂ. 84, ಕೆ.ಎಸ್.ಎಸ್.ಐ.ಡಿ.ಸಿ. ಇಂಡಸ್ಟ್ರಿಯಲ್ ಎಸ್ಟೇಟ್, 6ನೇ ಬಡಾವಣೆ, ರಾಜಾಜಿನಗರ, ಬೆಂಗಳೂರು – 560 010.
ದೂರವಾಣಿ : 23404232

# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಪ್ರಕಟಣ ಯೋಜನೆ

## ಸಂಪಾದಕ ಸಮಿತಿ

ಅಧ್ಯಕ್ಷರು
**ಪ್ರೊ. ಹಿ.ಶಿ. ರಾಮಚಂದ್ರೇಗೌಡ**

ಸದಸ್ಯರು
**ಡಾ. ಸೋಮಶೇಖರ ಇಮ್ರಾಪುರ**
**ಡಾ. ಎಚ್.ಜೆ. ಲಕ್ಕಪ್ಪಗೌಡ**
**ಡಾ. ಎಂ. ಪ್ರಭಾಕರ ಜೋಶಿ**
**ಡಾ. ತೀ.ನಂ. ಶಂಕರನಾರಾಯಣ**
**ಶ್ರೀಮತಿ ಶಾಂತಿನಾಯಕ**
**ಡಾ. ಅರವಿಂದ ಮಾಲಗತ್ತಿ**
**ಡಾ. ಮ.ಗು. ಬಿರಾದಾರ**
**ಪ್ರೊ. ಎ.ವಿ. ನಾವಡ**
**ಡಾ. ವೆಂಕಟೇಶ ಇಂದ್ವಾಡಿ**

ಸದಸ್ಯ ಕಾರ್ಯದರ್ಶಿ
**ಶ್ರೀ ಕೆ.ಎ. ದಯಾನಂದ,** ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಪದನಿಮಿತ್ತ ಸದಸ್ಯರು
**ಶ್ರೀ ಪಿಚ್ಚಳ್ಳಿ ಶ್ರೀನಿವಾಸ**
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು

**ನಾಡೋಜ ಬೆಳಗಲ್ಲು ವೀರಣ್ಣ**
ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು

**ಟಿ. ತಿಮ್ಮೇಗೌಡ**
ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

## ಮೇಲ್ವಿಚಾರಣಾ ಸಮಿತಿ

ಅಧ್ಯಕ್ಷರು
**ಶ್ರೀ ಪಿ.ಎನ್. ಶ್ರೀನಿವಾಸಚಾರಿ,** ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸದಸ್ಯರು
**ಶ್ರೀ ಕೆ.ಎ. ದಯಾನಂದ,** ಕ.ಆ.ಸೇ.,
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಶ್ರೀ ಪಿಚ್ಚಳ್ಳಿ ಶ್ರೀನಿವಾಸ**
ಅಧ್ಯಕ್ಷರು, ಕರ್ನಾಟಕ ಜಾನಪದ ಅಕಾಡೆಮಿ

ಸಂಚಾಲಕರು
**ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ**
ಜಂಟಿ ನಿರ್ದೇಶಕರು (ಆಡಳಿತ)

**ಶ್ರೀ ಬಲವಂತರಾವ್ ಪಾಟೀಲ್**
ಜಂಟಿ ನಿರ್ದೇಶಕರು (ಸು.ಕ.)

**ಶ್ರೀ ಬಿ.ಎನ್. ಪರಡ್ಡಿ**
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಅಕಾಡೆಮಿ

**ಶ್ರೀ ಎನ್. ಹರಿಕುಮಾರ್**
ಲೆಕ್ಕಪತ್ರಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

**ಸಿದ್ಧರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನ ಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೨೮/೨೦೧೪

ದಿನಾಂಕ : ೦೪–೦೨–೨೦೧೪

# ಸಂದೇಶ

ಸಮಾಜ ನಿಂತ ನೀರಲ್ಲ. ಎಲ್ಲ ಕಾಲಘಟ್ಟಗಳಲ್ಲಿ ಚಾರಿತ್ರಿಕ ಭೌಗೋಳಿಕ ಒತ್ತಡಗಳಿಂದ ಬದಲಾವಣೆಗೆ ಒಳಗಾಗುತ್ತಿರುತ್ತದೆ. ಇದು ಎದ್ದು ಕಾಣಿಸುವ ವೇಗದಲ್ಲಿ ಆಗುವಂಥದ್ದೇನಲ್ಲ. ಮಂದಗತಿಯಲ್ಲಿಯೇ ಚಲನಶೀಲತೆಯನ್ನು ಮೈಗೂಡಿಸಿಕೊಳ್ಳುತ್ತಾ ಹೋಗುತ್ತಿರುತ್ತದೆ.

ಮನುಷ್ಯನ ಅಂತರಂಗದ ವಿಕಾಸಕ್ಕೆ ಸಂಬಂಧಿಸಿದ ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರವೂ ಇಂತಹ ಬದಲಾವಣೆಗಳಿಗೆ ಮುಕ್ತ ಮನಸ್ಸಿನಿಂದ ಸ್ಪಂದಿಸುತ್ತಿರುತ್ತದೆ. **ಬದಲಾವಣೆ ಜಗದ ನಿಯಮ** ಎಂಬ ಮಾತಿಗನುಗುಣವಾಗಿ ಎಲ್ಲ ಸೃಜನಶೀಲ ಕಲೆಗಳೂ ಆಯಾ ಕಾಲದೊಂದಿಗೆ ಹೆಜ್ಜೆ ಹಾಕುತ್ತಿರುತ್ತವೆ.

ಸಮುದಾಯ ಹಿತವನ್ನೇ ತನ್ನೊಡಲಲ್ಲಿ ತುಂಬಿಕೊಂಡಿರುವ ಜನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳಲ್ಲೂ ಇಂತಹ ಚಲನಶೀಲತೆ ಗುಪ್ತಗಾಮಿನಿಯಾಗಿ ಪ್ರವಹಿಸುತ್ತಿರುತ್ತದೆ. ಆಯಾಕಾಲದ ಸಮಾಜಕ್ಕೆ ಪ್ರಸ್ತುತವಲ್ಲದ್ದು ಮರೆಯಾಗಿ ಅದರ ಜಾಗದಲ್ಲಿ ಹೊಸದು ಸೃಷ್ಟಿಯಾಗುತ್ತಿದ್ದರೂ ಚಾರಿತ್ರಿಕ ದೃಷ್ಟಿಯಿಂದ, ಮೌಲಿಕ ದೃಷ್ಟಿಯಿಂದ ಅದನ್ನು ಸಂಗ್ರಹಿಸಿಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಜ್ಞಾನದ ಕಣಜವಾಗಿರುವ ಜನಪದ ಸಾಹಿತ್ಯ ಹಾಗೂ ಕಲಾಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯು ಹೊರತರುತ್ತಿರುವುದು ಸ್ತುತ್ಯಾರ್ಹ ಸಂಗತಿಯಾಗಿದೆ.

**ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣತಮತಿಗಳ್** ಎಂಬ ವ್ಯಾಖ್ಯಾನ ನಮ್ಮ ಜನಪದ ಸಾಹಿತ್ಯ ಮತ್ತಿತರ ಸಂಗತಿಗಳ ಸಾರವಾಗಿದೆ. ಕನ್ನಡ ನೆಲ, ಜಲ, ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು

ನಿಜಕ್ಕೂ ನಾಡಿನ ಸಾಂಸ್ಕೃತಿಕ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿವೆ. **ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ** ಯೋಜನೆಯ ಈ ಪುಸ್ತಕಗಳನ್ನು ನಾಡಿನ ಜನ ಸಮುದಾಯ ಆದರದಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನ್ನದು.

ಸುವರ್ಣ ಕರ್ನಾಟಕ ಮಾಲಿಕೆಯಲ್ಲಿ ಈ ಸಂಪುಟಗಳನ್ನು ಹೊರತರಲು ಕರ್ನಾಟಕ ಸರ್ಕಾರದ ಜೊತೆ ಜೊತೆಗೆ ಯೋಜನೆಯ ಯಶಸ್ಸಿಗಾಗಿ ಶ್ರಮಿಸುತ್ತಿರುವ ಯೋಜನೆಯ ಅಧ್ಯಕ್ಷರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡ ಹಾಗೂ ಸಂಪಾದಕ ಮಂಡಳಿಯ ಎಲ್ಲಾ ಸದಸ್ಯರನ್ನು ಅಭಿನಂದಿಸಲು ಇಚ್ಛಿಸುತ್ತೇನೆ.

ನೂರು ಸಂಪುಟಗಳ ಈ ಯೋಜನೆಯಲ್ಲಿ ಈಗಾಗಲೇ ೩೬ ಸಂಪುಟಗಳು ಹೊರಬಂದಿವೆ. ಇನ್ನೂ ೬೪ ಸಂಪುಟಗಳು ಸದ್ಯದಲ್ಲಿಯೇ ಪ್ರಕಟಗೊಳ್ಳಲಿವೆ. ಈ ಮಹತ್ವದ ಯೋಜನೆಗೆ ಸಹಕರಿಸಿದ ಎಲ್ಲಾ ಮಹನೀಯರಿಗೂ ನನ್ನ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ.

**ಸಿದ್ಧರಾಮಯ್ಯ**

**ಉಮಾಶ್ರೀ**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು
ಹಿರಿಯ ನಾಗರಿಕರ ಸಬಲೀಕರಣ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ : ಕಛೇರಿ :
೨೨೨೫೫೨೮೨, ೨೨೦೩೩೪೯೯

ಕೊಠಡಿ ಸಂಖ್ಯೆ : ೨೫೨, ೨ನೇ ಮಹಡಿ
ವಿಧಾನಸೌಧ, ಬೆಂಗಳೂರು

ಸಂ. ಮಮಕಸಂಸ/೨೮೨/೨೦೧೪

ದಿನಾಂಕ: ೨೮-೦೧-೨೦೧೪

# ಸಂದೇಶ

ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಂಸ್ಕೃತಿ, ಭಾಷೆ, ಸಾಹಿತ್ಯಗಳನ್ನು ಸಂರಕ್ಷಿಸುವ, ಉದ್ದೀಪನಗೊಳಿಸುವ ಮಹತ್ವಾಕಾಂಕ್ಷೆಯಿಂದ ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಸ್ಥಾಪಿಸಿದೆ. ಕನ್ನಡ ಭಾಷೆ ಸಾಹಿತ್ಯ ಮತ್ತು ಇತರ ಎಲ್ಲಾ ಕಲೆಗಳ ಅಭಿವೃದ್ಧಿಗೆ ಅಂದಿನಿಂದ ಇಂದಿನವರೆಗೂ ಕ್ರಿಯಾಯೋಜನೆಗಳನ್ನು ರೂಪಿಸಿಕೊಂಡು ಇಲಾಖೆ ಕಾರ್ಯಪ್ರವೃತ್ತವಾಗಿದೆ. ಈಗ **"ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ"** ಎಂಬ ಬೃಹತ್ತಾದ ಯೋಜನೆ ರೂಪಿಸಿ ಜಾನಪದವನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಜಾನಪದ ಮೌಖಿಕ ಪರಂಪರೆಯ ಮೂಲಕ ಮುಂದಿನ ತಲೆಮಾರಿಗೆ ವರ್ಗಾವಣೆಗೊಳ್ಳುವುದಾದರೂ ಕೆಲವು ಅಪರೂಪದ ಮಾಹಿತಿಗಳು, ಸಾಹಿತ್ಯಕ ಮಾದರಿಗಳು ಅದೇ ಪ್ರಮಾಣದಲ್ಲಿ ವರ್ಗಾವಣೆಯಾಗುವುದಿಲ್ಲ. ಒಬ್ಬ ಅಭಿಜಾತ ಕಲಾವಿದ ಹಾಡಿದಂಥ ರೂಪ ಮತ್ತು ಶೈಲಿಯನ್ನು ಆತನ ಸಂತತಿಯೇ ಅನುಸರಿಸಲಾಗಿರುವುದಿಲ್ಲ. ಆ ಒಂದು ಅನನ್ಯತೆ ಅವರಿಗೇ ಮೀಸಲಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಅಂಥ ಅಪರೂಪದ ಸಂಗತಿಯನ್ನು ಉಳಿಸಲು ಮತ್ತು ತೌಲನಿಕವಾಗಿ ಅಧ್ಯಯನ ಮಾಡಲು ದಾಖಲೀಕರಣಗೊಳಿಸುವುದು ಅನಿವಾರ್ಯವಾಗುತ್ತದೆ.

ಜಾನಪದ ಬದುಕಿನ ಅನಂತ ಮುಖಗಳನ್ನು ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ನಂಬಿಕೆ, ನಡವಳಿಕೆ, ಆಚರಣೆ, ಸಂಪ್ರದಾಯಗಳು, ಎಲ್ಲಕ್ಕಿಂತ ಹೆಚ್ಚಾಗಿ ಜೀವನ ಮೌಲ್ಯಗಳು ತುಂಬಿರುವ ಕ್ಷೇತ್ರ. ಅಪ್ರಸ್ತುತವಾಗಿರುವುದನ್ನು

ಇಂದಿನ ದಿನಮಾನಗಳಲ್ಲಿ ಅನುಸರಿಸಬೇಕಾಗಿರುವುದಿಲ್ಲ. ಅದು ಅಪ್ರಸ್ತುತವಾದುದು ಎಂದು ತಿಳಿದುಕೊಳ್ಳುವುದಕ್ಕಾದರೂ ಅದು ದಾಖಲೀಕರಣಗೊಳ್ಳಬೇಕು. ಯಾವುದೇ ಒಂದು ಮೌಲ್ಯ ಕೇವಲ ಒಬ್ಬರಿಂದ ಹೇರಲ್ಪಟ್ಟಿರುವುದಿಲ್ಲ. ಹಲವು ಜನ ಚಿಂತಕರು ಹಲವಾರು ವರ್ಷಗಳ ಕಾಲ ಅದನ್ನು ಜೀವನದಲ್ಲಿ ಅಳವಡಿಸಿ ಸಾಣೆ ಹಿಡಿದಿರುತ್ತಾರೆ. ಈ ಹಿನ್ನೆಲೆಯಲ್ಲಿಯೇ **"ವೇದ ಸುಳ್ಳಾದರೂ ಗಾದೆ ಸುಳ್ಳಾಗದು"** ಎಂಬ ಮಾತು ಬಂದಿರುವುದು.

ಇಂತಹ ಅಪರೂಪದ ಮಾಹಿತಿಯ ಜಾನಪದವನ್ನು ಅಕ್ಷರರೂಪದಲ್ಲಿ ಹಿಡಿದಿಡುವ ಕೆಲಸಕ್ಕೆ ಕೈಹಚ್ಚಿರುವ ಎಲ್ಲ ವಿದ್ವಾಂಸರಿಗೆ, ಎಲ್ಲ ಅಧಿಕಾರಿವರ್ಗದವರಿಗೆ ಅಭಿನಂದಿಸುತ್ತಾ ವಿದ್ವತ್‌ವಲಯ ಈ ಯೋಜನೆಯ ಸಂಪುಟಗಳನ್ನು ಸದುಪಯೋಗಪಡಿಸಿಕೊಳ್ಳಲೆಂದು ಆಶಿಸುತ್ತೇನೆ.



**ಉಮಾಶ್ರೀ**

# ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಿಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ಧಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ-ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೋಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ.ಹಿ.ಶಿ.ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ.ಎಚ್.ಜೆ. ಲಕ್ಕಪ್ಪಗೌಡ, ಡಾ. ತೀ.ನಂ. ಶಂಕರನಾರಾಯಣ, ಶ್ರೀಮತಿ ಶಾಂತಿನಾಯಕ, ಡಾ.ಎಂ.ಪ್ರಭಾಕರ ಜೋಶಿ, ಶ್ರೀ ಅರವಿಂದ ಮಾಲಗತ್ತಿ, ಡಾ. ಮ.ಗು.ಬಿರಾದಾರ, ಪ್ರೊ. ಎ.ವಿ. ನಾವಡ, ಡಾ. ವೆಂಕಟೇಶ ಇಂದ್ವಾಡಿ, ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಅಧ್ಯಕ್ಷರು ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ 'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ' ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳು ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಪಿ.ಎನ್. ಶ್ರೀನಿವಾಸಚಾರಿ ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಸಲಹೆ–ಸಹಕಾರ ಅಮೂಲ್ಯವಾದುವು. ಹಾಗೆಯೇ ಈ ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪಿಚ್ಚಳ್ಳಿ ಶ್ರೀನಿವಾಸ ಮತ್ತು ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ'**ಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**ಕೆ.ಎ. ದಯಾನಂದ,** ಕ.ಆ.ಸೇ.,
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದವೇ ಜಗತ್ತಿನ ಆದಿಮ ಉಸಿರು ಮತ್ತು ಸಂಸ್ಕೃತಿ. ಇಡೀ ಜಗತ್ತಿನ ಮೊಟ್ಟ ಮೊದಲ ಸಾಹಿತ್ಯ, ಸಂಗೀತ, ನೃತ್ಯ, ಕಲೆ ಮತ್ತು ಧರ್ಮವು ಕೂಡ ಜಾನಪದ ಮೂಲದ್ದೇ. ಜಗತ್ತಿನಾದ್ಯಂತ ಇಂದಿನ ಮುಖ್ಯ ಪ್ರವಾಹದ ಎಲ್ಲ ವೈವಿಧ್ಯಮಯ ಕಲೆ-ಧರ್ಮಗಳು ಕುಡಿಯೊಡೆದಿದ್ದು ಸಹ ಅಲ್ಲಲ್ಲಿನ ಜಾನಪದ ವೈಶಿಷ್ಟ್ಯಗಳಿಂದಲೇ ಎಂಬುದು ಎಲ್ಲ ಇತಿಹಾಸಕಾರರ ಮತ್ತು ಸಂಸ್ಕೃತಿ ಚಿಂತಕರ ಒಮ್ಮತಾಭಿಪ್ರಾಯವಾಗಿದೆ. ದುರಂತವೇನೆಂದರೆ ಜಾನಪದ ಪರಂಪರೆಯಲ್ಲಿನ ಅಲಿಪಿ ಮತ್ತು ಥೋಂಡಿ ಲಕ್ಷಣದ ಕಾರಣದಿಂದಾಗಿ ಜಾನಪದದ ಅನೇಕ ಸಾಂಸ್ಕೃತಿಕ ಮೂಲದ ಮಹತ್ವದ ಅಂಶಗಳು, ಆಚರಣಾತ್ಮಕ ಅಭಿವ್ಯಕ್ತಿಗಳು ಇಂದಿನವರೆಗೂ ಯಾವ ರೂಪದಲ್ಲೂ ದಾಖಲಾಗದೇ ಹೋದದ್ದು ಕೇವಲ ಜಾನಪದ ಜಗತ್ತು ಮತ್ತು ವಿದ್ವಾಂಸರಿಗಷ್ಟೇ ಅಲ್ಲದೆ ಸಾಂಸ್ಕೃತಿಕ ಅಧ್ಯಯನಕಾರರಿಗೂ ಆಗಿರುವ, ಎಂದೆಂದಿಗೂ ತುಂಬಲಾರದಂತಹ ಬಹುದೊಡ್ಡ ನಷ್ಟವಾಗಿದೆ. ಈ ಅಪಾಯ ಈ ಕ್ಷಣಕ್ಕೂ ಮುಂದುವರೆದಿದೆ ಯಲ್ಲದೇ ಇಂದಿನ ಅತ್ಯಾಧುನಿಕತೆಯ ವೇಗ ಮತ್ತು ಧಾವಂತದ ಸಂದರ್ಭದಲ್ಲಿ ಅಳಿದುಳಿದ ಮತ್ತೆಷ್ಟೋ ಸಾಹಿತ್ಯ, ಕಲೆ ಮತ್ತು ಆಚರಣೆಗಳು ಆಧುನಿಕತೆಯ ವೇಗ ಸಂಸ್ಕೃತಿಗೆ ಅನುಗುಣವಾದ ವೇಗದಲ್ಲೇ ನಮ್ಮಿಂದ ಶಾಶ್ವತವಾಗಿ ಕಣ್ಮರೆಯಾಗುತ್ತಿವೆ. ಇದು ಇಡೀ ಜಗತ್ತಿನ ಜಾನಪದ ವಲಯದ ಎದುರಿರುವ ಬಹು ದೊಡ್ಡ ಸಂದಿಗ್ಧ ಮತ್ತು ಸವಾಲಾಗಿದೆ. ಹಾಗಾಗಿ ಹಿಂದೆಂದಿಗಿಂತಲೂ ವರ್ತಮಾನದ ಈ ಕ್ಷಣದಲ್ಲಿ ಜಾನಪದೀಯ ಅಭಿವ್ಯಕ್ತಿಗಳನ್ನೆಲ್ಲಾ ದಾಖಲಿಸಿಡುವುದರ ಮೂಲಕವೇ ನಾವು ರಕ್ಷಿಸಿ, ಮುಂದಿನ ತಲೆಮಾರುಗಳಿಗೆ ದಾಟಿಸಬೇಕಾದ ತುರ್ತು ಇದೆ.

ಜನಪದ ಸಾಹಿತ್ಯವೆಂಬುದು ಅಲಿಪಿ ಸಾಹಿತ್ಯ. ಅದನ್ನು ಸಂಗ್ರಹಿಸಿ ಲಿಪಿಬದ್ಧಗೊಳಿಸುವುದರ ಮೂಲಕ ಕಾಪಿಡಬಹುದಾಗಿದೆ. ಆದರೆ ಜಾನಪದದ ಬಹುತೇಕ ಕಲೆ ಮತ್ತು ಆಚರಣೆಗಳು ಲಿಪಿಬದ್ಧಗೊಳಿಸಲಾಗದಂತಹವು. ಅವು ಬಹುತೇಕ ಧಾರ್ಮಿಕ ನೆಲೆಯ ಶ್ರದ್ಧಾವಂತಿಕೆಯ ಅಭಿವ್ಯಕ್ತಿಗಳು. ಅಂತಹ

ಆಚರಣೆಗಳನ್ನು ಜಾನಪದ ವಿದ್ವಾಂಸನೊಬ್ಬ ಪ್ರತ್ಯಕ್ಷವಾಗಿ ಕಂಡು ವಿವರಿಸಬಹುದು; ಇಲ್ಲವೇ ಅದನ್ನು ತನ್ನ ಗ್ರಹಿಕೆಯ ಅನುಸಾರವಾಗಿ ಸಾಂಸ್ಕೃತಿಕ ವಿಶ್ಲೇಷಣೆಗೆ ಒಳಪಡಿಸಬಹುದು. ಆದರೆ ಅಂತಹ ನಿರ್ದಿಷ್ಟ ವಿದ್ವಾಂಸನೊಬ್ಬನ ಗ್ರಹಿಕೆ, ವಿಶ್ಲೇಷಣೆಗಳು ಅಂತಿಮವಾಗಿ ಆತನ ತಿಳಿವಳಿಕೆಯ ಮಿತಿಯೊಳಗಿನವೇ ಆಗಿರಬಲ್ಲದೇ ಹೊರತು ಅಂತಿಮ ಸತ್ಯವಲ್ಲದಿರಬಹುದು. ಜಾನಪದ ಆಚರಣೆಯೊಂದನ್ನು ಗಮನಿಸುವ ಕ್ರಮದಲ್ಲಿನ ಅನೇಕ ಸೂಕ್ಷ್ಮಗಳು ವಿದ್ವಾಂಸರಿಂದ ವಿದ್ವಾಂಸರಿಗೆ ಭಿನ್ನವೂ ಆಗಿರಬಲ್ಲವು. ಹಾಗಾಗಿ ಆಯಾಯಾ ಕಾಲದ ಪ್ರತಿಯೊಬ್ಬ ಆಸಕ್ತ ಜಾನಪದ ವಿದ್ವಾಂಸನೂ ತನಗೆ ಸಾಂಸ್ಕೃತಿಕವಾಗಿ ಮುಖ್ಯ ಎನಿಸುವ ಆಚರಣೆ, ಕಲೆಯಂತಹ ವಿವಿಧ ಪ್ರಕಾರಗಳ ವೈಶಿಷ್ಟ್ಯವನ್ನು ಪ್ರತ್ಯಕ್ಷವಾಗಿಯೇ ಕಂಡು ಅನುಭವಿಸಿ ಬರೆದಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇದ್ದೇ ಇದೆ.

ಆದರೆ ಈಗಾಗಲೇ ನಾವು ಗಮನಿಸಿರುವಂತೆ ಅನೇಕ ಅನನ್ಯವೆಂಬಂತಹ ಜಾನಪದೀಯ ಆಚರಣೆಗಳು ಆಧುನಿಕತೆಯ ಅನ್ಯಾಕ್ರಮಣಶೀಲತೆಯಿಂದಾಗಿ ನೆನಪುಗಳಿಂದಲೂ ಮಾಸಿ ಹೋಗುವಷ್ಟು ವಿನಾಶದ ಹಾಗೂ ಅಳಿವಿನ ಅಂಚಿನಲ್ಲಿವೆ. ಕೆಲವು ಜನಪ್ರಿಯವಾದ ಕಲೆಗಳನ್ನು ಕಲಿಕಾ ಶಿಬಿರಗಳ ಮೂಲಕ ಆಸಕ್ತ ಯುವಕ/ಯುವತಿಯರಿಗೆ ಕಲಿಸುವುದರ ಮೂಲಕವಾದರೂ ಮುಂದುವರೆಯುವಂತೆ ಮಾಡಬಹುದಾಗಿದೆ. ಆದರೆ ನಿರ್ದಿಷ್ಟ ಪಂಗಡದ ನಿರ್ದಿಷ್ಟ ವ್ಯಕ್ತಿಗಳೇ ಪಾತ್ರವಹಿಸುವುದರ ಮೂಲಕವಷ್ಟೇ ಮಂದುವರೆಯಬೇಕಾದ ಅನಿವಾರ್ಯತೆಯ ಆಚರಣೆಗಳನ್ನು ನಾವು ಉಳಿಸಿಕೊಳ್ಳುವ ಬಗೆಯಾದರೂ ಯಾವುದು? ಉದಾಹರಣೆಗೆ; ಈ ನೆಲದ ಆದಿಮ ಧರ್ಮದ ಬಗ್ಗೆ ಅನೇಕ ರಹಸ್ಯಗಳನ್ನು ಉಸುರುವ ಜೇನುಕುರುಬರ ಕೊಂಟು ಪೂಜೆಯ ಆಚರಣೆ, ದಕ್ಕಲರು, ಮಾಸ್ತಿಕರು ಮತ್ತು ಸಿಂಧ್‌ಮಾದಿಗರ ತಂಗಡಿ ದ್ಯಾವ್ರದ ಆಚರಣೆ, ಮೋಡಿ ಹಾಕುವವರ ತಂತ್ರಗಳು, ಮೇರರ ಕಾಡ್ಯಾನಾಟ ಇತ್ಯಾದಿಗಳು ಅಪರೂಪವಾಗುತ್ತಿದೆಯಷ್ಟೇ ಅಲ್ಲದೆ ಕೊಂಟು ಪೂಜೆ, ತಂಗಡಿ ದ್ಯಾವ್ರದಂತಹ ವಿಶಿಷ್ಟವೂ, ಮಹತ್ವದವೂ ಆದ ಆಚರಣೆಗಳು ಈಗಾಗಲೇ ಕಣ್ಮರೆಯಾಗುತ್ತಿವೆ. ಇಂತಹುದೇ ಮತ್ತೆಷ್ಟೋ ಸಾಂಸ್ಕೃತಿಕ ಮಹತ್ವದ ಆಚರಣೆಗಳ ಬಗೆಗಂತೂ ಮಾಹಿತಿ ಕೂಡ ಸಿಗದಂತಾಗಿದೆ. ಬಾಲ್ಯದಲ್ಲಿ ಸ್ವತಃ ನಾವೇ ಪ್ರತ್ಯಕ್ಷವಾಗಿ ಕಂಡುಂಡ ಅನೇಕ ಕಲಾತ್ಮಕ ಜಾನಪದೀಯ ಆಚರಣೆಗಳು ಇಂದು ನಮ್ಮ ನಂತರದ ಪೀಳಿಗೆಯವರ ಪಾಲಿಗೆ ಇಲ್ಲದಂತಾಗಿರುವುದನ್ನು ನಾವೇ ಕಾಣುತ್ತಿದ್ದೇವಲ್ಲ? ಈ ಹಿನ್ನೆಲೆಯಲ್ಲಿ ಈಗಾಗಲೇ ಅಳಿವಿನ ಅಂಚಲ್ಲಿರುವ ಸಾಂಸ್ಕೃತಿಕ ಹಾಗೂ

ಧಾರ್ಮಿಕ ಮೂಲದ ಕೆಲವಾದರೂ ಅತಿ ಮುಖ್ಯ ಆಚರಣೆಗಳನ್ನು ನಾವು ಈ ಡಿಜಿಟಲ್ ಯುಗದಲ್ಲಿ, ಯಾವ ತಂತ್ರಜ್ಞಾನ ಜಾನಪದದ ಅಳಿವಿಗೆ ಕಾರಣವಾಗುತ್ತಿದೆಯೋ ಅದೇ ತಂತ್ರಜ್ಞಾನದ ನೆರವಿನಿಂದಲೇ ದೃಶ್ಯೀಕರಿಸಿ ಮುಂದಿನ ತಲೆಮಾರಿನ ಅಧ್ಯಯನಕಾರರ ಪಾಲಿಗೆ ರಕ್ಷಿಸಿಡಬೇಕಾದ ತುರ್ತು ಮತ್ತು ಒತ್ತಡವೇರ್ಪಟ್ಟಿದೆಯೆಂಬುದೇ ನನ್ನ ಸ್ಪಷ್ಟ ತಿಳಿವಳಿಕೆ. ಜನಪದ ಸಾಹಿತ್ಯ ಪ್ರಕಟಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೋರಿರುವ ಕಾಳಜಿಯನ್ನೇ ವಿಸ್ತರಿಸಿ, ಜಾನಪದ ಆಚರಣೆಗಳ ದೃಶ್ಯ ದಾಖಲಾತಿಯ ವಿಚಾರದಲ್ಲೂ ಮುಂದುವರೆಸಬೇಕೆಂಬುದು ನನ್ನ ವಿನಮ್ರ ಮನವಿ.

ಈ ಹಿನ್ನೆಲೆಯಲ್ಲಿ ಮೌಖಿಕ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸುವುದು ಜಾನಪದ ಪರಂಪರೆಯನ್ನು ಜೀವಂತವಾಗಿಡುವ ಒಂದು ಪಾರ್ಶ್ವ ಪ್ರಯತ್ನ ಮಾತ್ರ. ಆದರೆ ಈ ಪ್ರಯತ್ನವು ಕೂಡ ತನ್ನದೇ ಆದ ಮಹತ್ವವನ್ನು ಒಳಗೊಂಡಿದೆಯಲ್ಲದೇ ಅದರ ಕೊಡುಗೆಯನ್ನು ಯಾವ ರೀತಿಯಲ್ಲೂ ನಗಣ್ಯವಾಗಿಸಲು ಸಾಧ್ಯವಿಲ್ಲ. ಆದರೆ ಬದಲಾಗುತ್ತಿರುವ ಅತ್ಯಾಧುನಿಕ ತಾಂತ್ರಿಕಾವಿಷ್ಕಾರಗಳಿಗೆ ಅನುಗುಣವಾಗಿಯೇ ಸ್ಪಂದಿಸಿ ನಾವು ಇನ್ನು ಮುಂದಿನ ಜಾನಪದೀಯ ಯೋಜನೆಗಳಲ್ಲಿ ಕಲೆ, ಕಲಾವಿದರು ಮತ್ತು ಆಚರಣೆಗಳನ್ನು ದೃಶ್ಯ ರೂಪದಲ್ಲಿಯೂ ದಾಖಲಿಸಿಡಬೇಕಾದ ಅಗತ್ಯ ಮತ್ತು ಅನಿವಾರ್ಯತೆ ಇರುವುದನ್ನು ಮನಗಾಣಬೇಕಾಗಿದೆ. ಈ ಬಗ್ಗೆ ತಜ್ಞ ವಿದ್ವಾಂಸರು ಇನ್ನಾದರೂ ಗಮನ ಹರಿಸಬೇಕಿದೆ.

ಈ ಬಗೆಯ ಗ್ರಹಿಕೆಯ ಹಿನ್ನೆಲೆಯಲ್ಲಿಯೇ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಎಂಬ ಮಹತ್ವಾಕಾಂಕ್ಷೆಯ ಬೃಹತ್ ಯೋಜನೆ ಅಡಿಯಲ್ಲಿ ೧೦೦ ಸಂಪುಟಗಳನ್ನು ಸಂಪಾದಿಸಿ, ಪ್ರಕಟಿಸಲು ತೀರ್ಮಾನಿಸಿತು.

ಕರ್ನಾಟಕ ಜಾನಪದ ಅಕಾಡೆಮಿಯು ಸಹಜವಾಗಿಯೇ ಈ ಬೃಹತ್ ಯೋಜನೆಯ ಗುರುತರ ಜವಾಬ್ದಾರಿಯನ್ನು ಹೊತ್ತು ಅದನ್ನು ಕಾಲಾನು ಕ್ರಮದಲ್ಲಿ ಅನುಷ್ಠಾನಗೊಳಿಸಿ, ಸಂಪುಟಗಳನ್ನು ಸಂಪಾದಿಸಿ ಕೊಡುವ ಕಾರ್ಯವನ್ನು ಯಶಸ್ವಿಯಾಗಿಯೇ ನಿರ್ವಹಿಸಿದೆ. ಜನಪದ ಸಾಹಿತ್ಯ ಪರಂಪರೆಯಲ್ಲಿನ ಪ್ರಕಾರ ವಿಶಿಷ್ಟತೆ, ಭೌಗೋಳಿಕ ವ್ಯಾಪ್ತಿ ಮತ್ತು ಇತಿಹಾಸವನ್ನು ಗಮನದಲ್ಲಿರಿಸಿಕೊಂಡೇ ನಿರ್ದಿಷ್ಟ ಸಂಪುಟಗಳ ವಿನ್ಯಾಸವನ್ನು ರೂಪುಗೊಳಿಸಲಾಗಿದೆ. ನಾಡಿನ ಹೆಸರಾಂತ ಜಾನಪದ ತಜ್ಞರು ಅಮೂಲ್ಯವಾದ

ತಮ್ಮ ಸಮಯ ಮತ್ತು ಶ್ರಮಗಳೊಂದಿಗೆ ಈ ಸಂಪುಟಗಳನ್ನು ಸಿದ್ಧಪಡಿಸಿದ್ದಾರೆ. ಅವರೆಲ್ಲರ ಶ್ರಮ ಸಾರ್ಥಕವಷ್ಟೇ ಅಲ್ಲದೆ, ಸೃಜನಶೀಲ ಜಾನಪದ ಕ್ಷೇತ್ರಕ್ಕೆ ಸಂದ ಅನನ್ಯ ಹಾಗೂ ಅಪರೂಪದ ಕೊಡುಗೆಗಳೆಂದೇ ನಾನು ಭಾವಿಸಿದ್ದೇನೆ. ಈ ಬೃಹತ್ ಯೋಜನೆಯನ್ನು ಆಗುಮಾಡಿಸುವಲ್ಲಿ ಹೀಗೆ ಹೆಗಲಿಗೆ ಹೆಗಲಾಗಿ ನಿಂತು ಸಹಕರಿಸಿದ ಎಲ್ಲ ಮಹನೀಯರಿಗೂ ಅಕಾಡೆಮಿ ತನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತಿದೆ.

ಈ ಯೋಜನೆಯ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇಗೌಡ ಅವರಿಗೂ ಹಾಗೂ ಸಂಪಾದಕ ಮಂಡಳಿಯ ಸದಸ್ಯರಿಗೂ ವಿಶೇಷ ಅಭಿನಂದನೆಗಳು ಸಲ್ಲಲೇಬೇಕು.

ತಮ್ಮ ಉಚಿತವೂ, ವಿದ್ವತ್ಪೂರ್ಣವೂ ಆದ ನುಡಿಗಳೊಂದಿಗೆ ಸಂಪುಟಗಳ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀಮತಿ ಶಾಲಿನಿ ರಜನೀಶ್, ನಿರ್ದೇಶಕರಾದ ಶ್ರೀ ಕೆ.ಎ. ದಯಾನಂದ, ಸಂಚಾಲಕರಾದ ಶ್ರೀ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಈ ಯೋಜನೆಯ ನಿರ್ವಹಣೆಯಲ್ಲಿ ತೋರಿದ ಅಪಾರ ಆಸಕ್ತಿ ಮತ್ತು ಶ್ರದ್ಧೆಗಳಿಗೆ ಇಡೀ ಕನ್ನಡ ನಾಡಿನ ಜಾನಪದ ಜಗತ್ತು ಋಣಿಯಾಗಿದೆ.

ಈ ಬೃಹತ್ ಯೋಜನೆಯ ಅನುಷ್ಠಾನದ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಂಡು ತತ್ಪರತೆಯಿಂದ ಕಾರ್ಯ ನಿರ್ವಹಿಸಿದ ನಮ್ಮ ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಎನ್. ಪರಡ್ಡಿ ಹಾಗೂ ಸಿಬ್ಬಂದಿಗೆ ನೆನಕೆಗಳು.

ಮುಂದಿನ ತಲೆಮಾರಿನ ಸಂಸ್ಕೃತಿ ಚಿಂತಕರು, ಜಾನಪದ ಅಧ್ಯಯನ ಕಾರರ ಪಾಲಿಗೆ ಸಮೃದ್ಧ ಆಕರ ಗ್ರಂಥಗಳಾಗಬಲ್ಲ ಈ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಅಷ್ಟರ ಮಟ್ಟಿಗೆ ಜಾನಪದ ಅಕಾಡೆಮಿಯ ಆಶಯವನ್ನು ಈಡೇರಿಸಿದೆಯೆಂಬುದೇ ನನ್ನ ನಂಬಿಕೆ ಮತ್ತು ಅದೇ ನನ್ನ ನಿಜವಾದ ಸಂತೋಷಕ್ಕೆ ಕಾರಣವಾಗಿದೆ.

**ಪಿಚ್ಚಳ್ಳಿ ಶ್ರೀನಿವಾಸ**
ಅಧ್ಯಕ್ಷರು
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

# ಅಧ್ಯಕ್ಷರ ಮಾತು
## ಪೂರ್ವಾಪರ

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು ಸೋಲಿಸಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ

ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು,

ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ–ಚಿಂತಕರಿಗೆ ಒಂದು ಹೆದ್ದಾರಿಯಾಯಿತು. ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ

ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು. ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯುದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೨೧ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

– ೨ –

## ಮಾತಿನ ಸರಣಿ : ಮುತ್ತಿನ ಬೆಲೆ

**ಬಿ. ಎಂ. ಶ್ರೀಕಂಠಯ್ಯ**

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ–ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ

ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

**ದ. ರಾ. ಬೇಂದ್ರೆ**

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು ! **(ಗರತಿಯ ಹಾಡು ೧೯೩೧)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೫೭)**

**ಬೆಟಗೇರಿ ಕೃಷ್ಣಶರ್ಮ**

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

**ಬಿ. ಎಸ್. ಗದ್ದಿಗೀಮಠ**

‘ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ ‘ವಿಶ್ವಕೋಶ’ವೇ ಆಗಬಹುದೆಂದು ಹೇಳಬಹುದು’. **(ಕನ್ನಡ ಜನಪದ ಗೀತೆಗಳು ೧೯೬೩)**

**ದೇ. ಜವರೇಗೌಡ**

‘ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ’. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

**ಎಚ್. ಎಲ್. ನಾಗೇಗೌಡ**

‘ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು’. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

**ಜೀ.ಶಂ. ಪರಮಶಿವಯ್ಯ**

‘ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು’. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

**– ೩ –**

**ಕಟ್ಟುವ ಕನಸು ; ನೆಟ್ಟ ಸಸಿ**

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕ್ಷೆ, ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸ್ಕೃತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು ಭೋಗ ಸಂಸ್ಕೃತಿಯ ನಡುವಿನ ಈ

ಸಂಘರ್ಷ ಬ್ರಿಟಿಷ್ ವಸಾಹತುಶಾಹಿ ಆಗಮನ ಕಾಲದಿಂದ ಮಾತ್ರವಲ್ಲ ; ಶಿಷ್ಟ ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧ ಕನ್ನಡ ಭಾಷಾ ಅಭಿವೃದ್ಧಿಗಾಗಿ

೨ ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩ ಜಾನಪದ ಅಧ್ಯಯನಕ್ಕಾಗಿ

೪ ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: 'ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ ಅವರೂ ಇದೇ ಮಾರ್ಗದಲ್ಲಿ ಮುನ್ನಡೆದಿದ್ದಾರೆ: "ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ 'ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ. ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು 'ಜಾನಪದ ಸ್ವರೂಪ' (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ. ಜವರೇಗೌಡರ ನುಡಿ ಇದು: 'ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು.... ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ.....ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟ್ರೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯ ಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ.ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯುಗಳು ಮೈಸೂರು ವಿಶ್ವವಿದ್ಯಾಲಯುದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯುವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ–ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಬಿ. ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವನ್ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು, ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ– ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ – ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ

ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.. ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ – ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ , ಧವಳಶ್ರೀ, ಸಿ. ವೀರಣ್ಣ, ಬಿ.ಎಸ್. ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ. ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೭೭ರಲ್ಲಿ ತರೀಕೆರೆಯಲ್ಲಿ, ೧೯೭೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೭೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು

ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ'

ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿದ್ದಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

### ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕ ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರು ಗಮನಿಸಿ;

> 'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
> ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'
>
> **– ರಾಘವಾಂಕ**

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ–ವಿಜ್ಞಾನ. ಒಂದು ದೇಶ ಸಮಗ್ರವಾಗಿ

ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿ ಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೊಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ

ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ–ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು. ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತಃ ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ–ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು. ಇದರಿಂದ ಸಾಹಿತ್ಯವೆಂದರೆ

ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ– ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು

ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ'ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

### ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ
### ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ–ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ

ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು–ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ  ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು..... ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ

ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರ ವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯ ಬಹುದು. ವ್ಯಕ್ತಿಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ಯಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ ಮೀಮಾಂಸೆ ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿ ರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು 'ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ, ಹಳ್ಳಿಯ ಹಾಡು; ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೨-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು

ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕರು ಹಾಗೂ ಸಾಹಿತಿಗಳಾದ ಶ್ರೀ ಕಾ.ತ.ಚಿಕ್ಕಣ್ಣರವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ.

ಈ ಸಂಪುಟಗಳು ಅಚ್ಚುಕಟ್ಟಾಗಿ ಹೊರಬರಲು ಜಾನಪದ ತಜ್ಞರಾದ ಡಾ. ಚಕ್ಕೆರೆ ಶಿವಶಂಕರ್ ಅವರ ಅವಿರತ ಶ್ರಮ ನೆರವಾಗಿದೆ. ಕರ್ನಾಟಕ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಬಿ.ಎನ್. ಪರಡ್ಡಿ ಮತ್ತು ಅಕಾಡೆಮಿ ಸಿಬ್ಬಂದಿ ವರ್ಗ ಶ್ರದ್ಧೆವಹಿಸಿ ಬೆಂಬಲಿಸಿದ್ದಾರೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

# ಪ್ರಸ್ತಾವನೆ

## ಗಣೆ ಸಂಪ್ರದಾಯ

'ಗಣೆ' ಎಂಬ ವಾದ್ಯದ ಹಿನ್ನೆಲೆಯಲ್ಲಿ ಹಾಡುವ ಪದಗಳನ್ನೇ 'ಗಣೆ ಪದಗಳು' ಎಂದು ಕರೆಯುತ್ತಾರೆ. ಕಾಡುಗೊಲ್ಲ, ಬುಡಕಟ್ಟಿಗಷ್ಟೇ ಸೀಮಿತವಾದ ಹಾಡುಗಾರಿಕೆ ಇದಾಗಿದ್ದು, ಗಣೆ ಮತ್ತು ಗಣೆಪದಗಳೆರಡೂ ಕಾಡುಗೊಲ್ಲರ ಸಂಸ್ಕೃತಿಯ ಅನನ್ಯತೆಯ ಸಂಕೇತಗಳಾಗಿವೆ. ಪಶುಪಾಲಕ ಸಂಸ್ಕೃತಿಯ ಕಥನಗಳು ಅವರು ನಡೆದ ಬಂದ ದಾರಿಯ ಇತಿಹಾಸವನ್ನು ತಮ್ಮ ಒಡಲೊಳಗೆ ಇಟ್ಟುಕೊಂಡಿವೆ. ಗತಕಾಲದ ಈ ನೆನಪುಗಳು ಅವರ ಸಾಂಸ್ಕೃತಿಕ ಇತಿಹಾಸದ ಹೆಜ್ಜೆ ಗುರುತುಗಳೂ ಆಗಿವೆ.

ಸುಮಾರು ನಾಲ್ಕು ಅಡಿ ಉದ್ದದ ಬಿದಿರ (ಕೊಳಲನ್ನೇ) ಕೋಲನ್ನೇ ಗಣೆ ಎನ್ನುತ್ತಾರೆ. ಈ ಕೋಲಿನ ಮಧ್ಯೆ ಎರಡು ಅಥವಾ ಮೂರು ಗೆಣ್ಣುಗಳು ಇರುತ್ತವೆ. ಕೋಲಿನ ಒಂದು ತುದಿಯಿಂದ ಮಧ್ಯದಲ್ಲಿರುವ ಗೆಣ್ಣುಗಳ ಕಾಂಡವನ್ನು ಕೊರೆದು (ಅಥವಾ ಕಾದ ಸಲಾಕೆಯನ್ನು ತೂರಿಸಿ ಸುಟ್ಟು) ತೆಗೆದಿರುತ್ತಾರೆ. ಸಲಾಕೆ ತೂರಿಸಿದ ತುದಿಯನ್ನು ನಂತರ ಮೇಣದಿಂದ ಮುಚ್ಚುತ್ತಾರೆ. ಬಿದಿರು ಕೋಲಿನ ಇನ್ನೊಂದು ತುದಿಯ ಗೆಣ್ಣಿನ ಕಾಂಡವನ್ನು ಕೊರೆಯದೆ ಹಾಗೇ ಬಿಡುತ್ತಾರೆ. ಖಾಲಿ ಇರುವ ಗೆಣ್ಣುಗಳ ಮಧ್ಯದ ಒಂದು ತುದಿಯಲ್ಲಿ ತುಟಿ ಇಟ್ಟು ಗಾಳಿ ಊದಲು ಒಂದೇ ಒಂದು ರಂಧ್ರವನ್ನು ಕೊರೆದಿರುತ್ತಾರೆ, ಮತ್ತೊಂದು ತುದಿಯ ಮಧ್ಯಭಾಗದಲ್ಲಿ ಬೆರಳು ತುದಿಗಳಿಂದ ಮುಚ್ಚಿ ನುಡಿಸಲು ಅನುಕೂಲವಾಗುವಂತೆ ನಾಲ್ಕು ರಂಧ್ರಗಳನ್ನು ಕೊರೆದಿರುತ್ತಾರೆ. ಇದರಿಂದ ಇಂಪಾದ ನಾದ ಹೊರಹೊಮ್ಮುತ್ತದೆ.

ಬಿದಿರ ಗೆಣ್ಣನ್ನು ಕೊರೆದು ಮಾಡಿರುವ ಈ ವಾದ್ಯದ ಹೆಸರು ಈ ಪದದೊಂದಿಗೆ ತಳಕು ಹಾಕಿಕೊಂಡಿದೆ. ಅದನ್ನು ಗೆಣ್ಣು ಅಥವಾ ಗಣ್ಣು ಎನ್ನುತ್ತಾರೆ. ಗೆಣ್ಣು ಎಂದರೆ ಬಿದರ ಕೋಲಿನ ಎರಡು ಕಂಟುಗಳ ಮಧ್ಯದ ಭಾಗ. ಇದು ಒಂದು ಗೇಣಿನ ಅಂತರವಿರುವುದನ್ನೇ ಗೇಣು ಎನ್ನಲಾಗಿದೆ. ಈ ಗೇಣು>ಗೆಣ್ಣು>ಗಣ್ಣು>ಗಣೆ ಆಗಿರಬೇಕೆನಿಸುತ್ತದೆ.

ಈ ಗಣೆಯನ್ನು ಒಂದು ರೀತಿಯಲ್ಲಿ ಕೊಳಲಿನ ವಿಸ್ತೃತ ರೂಪ ಎನ್ನಬಹುದು. ಅಥವಾ ವಿಸ್ತೃತ ರೂಪದ ಗಣೆಯೇ ಕಿರಿದಾಗಿ ಕೊಳಲಿನ ರೂಪವನ್ನು ಪಡೆದಿರಬಹುದೇ? ಇಂಥ ಒಂದು ಪುಟ್ಟ ಕೊಳಲನ್ನು ದ್ವಾಪರಯುಗದಲ್ಲಿ ಶ್ರೀಕೃಷ್ಣ ಬಳಸುತ್ತಿದ್ದನೆಂಬುದು ಒಂದು ಐತಿಹ್ಯ. 'ಕೊಳಲು' ಎಂಬ ಶಬ್ದ ಶಿಷ್ಟಮೂಲದ್ದು, ಹೀಗಾಗಿ ಗ್ರಾಮ್ಯರು ಇದನ್ನು ಪಿಳಗೋವಿ, ಪಿಳ್ಳಂಗೋವಿ ಎಂದು ಕರೆಯುತ್ತಾರೆ. ['ಪಿಳ' (ಉದಾ. ಪಿಳ್ಳೆ=ಚಿಕ್ಕ ಹುಡುಗಿ) ಎಂದರೆ 'ಚಿಕ್ಕ' ಎಂಬರ್ಥವಿದೆ. 'ಕೋವಿ' ಆಕಾರದಿಂದ ಇದು ಪಿಳಕೋವಿ>ಪಿಳಗೋವಿ>ಪಿಳ್ಳಂಗೋವಿಯಾಗಿದೆ.]

ದನಗಾಹಿಗಳು ಬೇಸರ ಕಳೆಯಲು ಪಿಳ್ಳಂಗೋವಿಗಳಿಗಿಂತಲೂ ಉದ್ದವಾದ ಗಣೆಯನ್ನು ನುಡಿಸುತ್ತಾ ಕಾಲಕಳೆಯುತ್ತಿದ್ದುದನ್ನು ಕಾಡುಗೊಲ್ಲರ ಹಳೆಯ ಕತೆಗಳಲ್ಲಿ ಗುರುತಿಸಬಹುದು. ಇಲ್ಲಿಗೆ 25–30 ವರ್ಷದ ಕೆಳಗೆ ದನಕಾಯುವರ ಬಳಿ ಇಂಥ ಗಣೆಗಳು ಇರುತ್ತಿದ್ದುದನ್ನು ನಾನೂ ನೋಡಿದ್ದೇನೆ. ಈ ಗಣೆಯ ಮೋಹಕ ನಾದಕ್ಕೆ ಮರುಳಾದ ಗೋವುಗಳು ಗೊಲ್ಲಗೌಡನ ಸುತ್ತ ನೆರೆದಿರುವುದನ್ನು ಚಿತ್ರಿಸುವ ಅನೇಕ ಶಿಲ್ಪಗಳನ್ನು, ವೀರಗಲ್ಲುಗಳನ್ನು ನೋಡಬಹುದು.

ಈ ಗಣೆ ಗೋಪಾಲಕ ಸಂಸ್ಕೃತಿಯ ಪ್ರತೀಕವೆಂಬಂತೆ, ಗೊಲ್ಲ ಜನಾಂಗದಲ್ಲಿ ತನ್ನದೇ ಆದ ಸಾಂಸ್ಕೃತಿಕ ಮಹತ್ವ ಪಡೆದಿರುವುದನ್ನು ಕಾಣಬಹುದು. ಕಾಡುಗೊಲ್ಲರ ಎಲ್ಲ ದೇವಸ್ಥಾನಗಳಲ್ಲಿ ದೇವರೊಂದಿಗೆ ಗಣೆಯನ್ನೂ ಇಟ್ಟು ಪೂಜಿಸುತ್ತಿರುವುದನ್ನು ಗಮನಿಸಬಹುದು. ಅಂದರೆ ಬಹುಶಃ ಈ ದೇವತೆಗಳು ಮಾನವರಂತೆ ಬದುಕಿದ್ದ ಕಾಲದಲ್ಲಿ ಇವನ್ನು ಬಳಸುತ್ತಿದ್ದುದರಿಂದಲೇ ಅವಕ್ಕೆ ಇಲ್ಲಿ ಪೂಜನೀಯ ಸಾಂಸ್ಕೃತಿಕ ಮಹತ್ವ ದೊರೆತಂತೆ ಕಾಣುತ್ತದೆ. ನಂತರ ಗಣೆ ವಾದ್ಯವನ್ನು ದೈವದ ಪ್ರತೀಕವೆಂಬಂತೆ, ಸಾಕ್ಷಾತ್ ದೈವವೆಂಬಂತೆ ಪರಿಭಾವಿಸತೊಡಗಿದುದನ್ನು ಕಾಣಬಹುದು.

ದೈವತ್ವದ ಸ್ಥಾನಕ್ಕೇರಿದ ಈ ಗಣೆ ದೇವರ ಪ್ರತಿನಿಧಿಯೆಂಬಂತೆ 'ಹೇಳಿಕೆ'ಗಳನ್ನು ನೀಡುವುದಕ್ಕೆ ಬಳಸಲು ಪ್ರಾರಂಭಿಸಿದುದನ್ನು ಗಮನಿಸಬಹುದು. ಕಾಡುಗೊಲ್ಲರ ಬಹಳಷ್ಟು ದೇವಸ್ಥಾನಗಳಲ್ಲಿ ಈ ರೀತಿಯ 'ಗಣೆ ಹೇಳಿಕೆ'ಗಳು ನಡೆಯುತ್ತವೆ. ಪೂಜಾರಿ ಸ್ನಾನ ಮಾಡಿದ ನಂತರ, ದೇವರ ಪೂಜೆ ಮಾಡಿ, ಗಣೆ ತೆಗೆದುಕೊಂಡು ಕಂಬಳಿ ಗದ್ದಿಗೆಯ ಮೇಲೆ ಕೂತು ಗಣೆಯನ್ನು ಊದತೊಡಗಿದಂತೆ ಗಣೆಯ ಮೂಲಕ ದೇವರು ಪೂಜಾರಿಯಲ್ಲಿ ಆವಾಹನೆಗೊಳ್ಳುತ್ತದೆ. ಪ್ರಶ್ನೆ ಕೇಳುವ ಮಂದಿಯೂ ಗಣೆಯನ್ನು ಸಾಕ್ಷಾತ್ ದೈವವೆಂದೇ ಬಗೆದು, ಅದಕ್ಕೆ ಪೂಜೆ ಸಲ್ಲಿಸಿ ಪ್ರಶ್ನೆ ಕೇಳುವ ಪರಿಪಾಠ ಇದೆ.[1]

ಈ ಗಣೆಗಳು ಮೂರು–ನಾಲ್ಕು ಅಡಿಗಳಿಂದ ಐದೂವರೆ–ಆರು ಅಡಿಯ ಉದ್ದದವರೆಗೂ ಇರುವುದುಂಟು. ಇಂಥ ಮನುಷ್ಯ ಪ್ರಮಾಣದ ಎರಡು ಅಪೂರ್ವ

1. ಕಾಡುಗೊಲ್ಲರೊಂದಿಗೆ ಸಮಾನ ಸಂಸ್ಕೃತಿಯನ್ನು ಹೊಂದಿರುವ ಮ್ಯಾಸಬೇಡರಲ್ಲು ಪಶುಪಾಲಕ ಪರಂಪರೆ ಇದ್ದಾಗ್ಯೂ ಅವರಲ್ಲಿ ಗಣೆ ಕತೆಗಳಾಗಲಿ, ಗಣೆ ನುಡಿಸುವ ಸಂಪ್ರದಾಯವಾಗಲಿ ಇಲ್ಲದಿರುವುದು ಆಶ್ಚರ್ಯ. ಆದರೆ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನ ಕಂಪಳದೇವರಹಟ್ಟಿಯ ಕಂಪಳರಂಗನ ಗುಡಿಯಲ್ಲಿ ಗಣೆಯೊಂದನ್ನು ಇಟ್ಟಿದ್ದಾರೆ. ಆದರೆ ಇದನ್ನು ವಿಶಿಷ್ಟ ಸಂದರ್ಭದಲ್ಲಿ ಮಾತ್ರ ನುಡಿಸುತ್ತಾರೆ. ಶ್ರಾವಣ ಕಳೆದರೂ ಮಳೆ ಬಾರದಿದ್ದಾಗ ಮಾತ್ರ ಪೂಜಾರಿ ಹಾಡುತ್ತಾ ಗಣೆ ಊದುತ್ತಾನೆ. ಜಗಲೂರು ಪಾಪನಾಯಕನನ್ನು ಕುರಿತ ಕಥೆಯನ್ನು ಆಶ್ಚರ್ಯಕರವೆಂಬಂತೆ ತೆಲುಗು ಭಾಷೆಯಲ್ಲಿ ಹಾಡುತ್ತಾರೆ. ಬೇರೆ ಸಂದರ್ಭದಲ್ಲಿ ಯಾವ ಕಾರಣಕ್ಕೂ ಈ ಹಾಡೂ ಹೇಳುವುದಿಲ್ಲ, ಗಣೆಯನ್ನೂ ಊದುವುದಿಲ್ಲ! (ಈ ಮಾಹಿತಿಯನ್ನು ನನಗೆ ತಿಳಿಸಿದವರು ಮ್ಯಾಸಬೇಡರ ಕಂಪಲದೇವರಹಟ್ಟಿಯ ಜಾತ್ರೆಯ ಬಗ್ಗೆಯೇ ವಿಶೇಷ ಅಧ್ಯಯನ ನಡೆಸುತ್ತಿರುವ ಮಿತ್ರ ಬಿ.ಪಿ. ವೀರೇಂದ್ರ ಕುಮಾರ್ ಅವರಿಗೆ ಕೃತಜ್ಞನಾಗಿದ್ದೇನೆ). ಬೇಡರ ಇತರೆ ದೇವಸ್ಥಾನಗಳಲ್ಲಿ ಗಣೆಗಳನ್ನು ಇಟ್ಟು ಭಕ್ತಿಯಿಂದ ಪೂಜಿಸುವ ಸಂಪ್ರದಾಯ ಇಂದಿಗೂ ಇದೆ.

ಗಣೆಗಳನ್ನು ಹಿರಿಯೂರು ತಾಲ್ಲೂಕಿನ ಇಕ್ಕನೂರಿನ ಕಾಟಂಲಿಂಗನ ಗುಡಿಯಲ್ಲಿ ಇಂದಿಗೂ ಕಾಣಬಹುದು. ಈ ಗಣೆಗಳಿಗೆ ಬೆಳ್ಳಿಯ ತಗಡಿನ ಹೊದಿಕೆಯನ್ನು ಒಕ್ಕಲಿನವರೊಬ್ಬರು ಮಾಡಿಸಿಕೊಟ್ಟಿದ್ದು, ಭವ್ಯವಾಗಿ ಕಾಣುತ್ತವೆ. ಇಲ್ಲಿ ಈ ಗಣೆಗಳನ್ನು 'ಹೇಳಿಕೆ' ನೀಡಲು ಈಗಲೂ ಬಳಸುವುದನ್ನು ನೋಡಬಹುದು.

ಜುಂಜಪ್ಪನ ಸಂಪ್ರದಾಯದಲ್ಲಂತೂ ಈ ಗಣೆಗೆ ಇನ್ನಿಲ್ಲದ ಮಹತ್ವ ಪ್ರಾಪ್ತವಾಗಿದೆ. ಕೆಲವು ಭಕ್ತರು ಗಣೆಯ ತುದಿಗೆ ನಾಗರಹೆಡೆಯನ್ನು ಸಿಕ್ಕಿಸಿ, ಅಲ್ಲಲ್ಲಿ ನವಿಲುಗರಿಯ ಅಲಂಕಾರ ಮಾಡಿದ 'ಹೊತ್ತಾಡೊ ಗಣೆ'ಯನ್ನು 'ಊರಾಡೋ ಗಣೆ'ಯಾಗಿ ಬಳಸಿಕೊಂಡು ಅದನ್ನೊಂದು 'ಚರದೈವ'ವನ್ನಾಗಿಯೇ ಮಾಡಿಬಿಟ್ಟಿದ್ದಾರೆ. ಜುಂಜಪ್ಪನ ಕತೆಯನ್ನು ಹಾಡುವ ಸಂದರ್ಭದಲ್ಲಿ ಕತೆಯ ಮೊದಲಲ್ಲಿ, ಕೊನೆಯಲ್ಲಿ ಮತ್ತು ಮಧ್ಯೆ ಗಣೆಗೆ ಪೂಜೆಯಾಗುತ್ತದೆ. ಗಣೆಗೆ ವಿಭೂತಿ ಹಚ್ಚಿ, ತಾವೂ ಹಚ್ಚಿಕೊಂಡು, ಊದಿನ ಕಡ್ಡಿ ಹಚ್ಚಿ, ಬೆಳಗಿ, ತೆಂಗಿನಕಾಯಿ ಒಡೆದು ಪೂಜೆ ಮಾಡುತ್ತಾರೆ.

ಎತ್ತಪ್ಪನ ಕತೆ ಹಾಡುವ ಸಂದರ್ಭದಲ್ಲೂ ಇದೇ ಸಂಪ್ರದಾಯವನ್ನು ಪಾಲಿಸುತ್ತಾರೆ. ಸಾಮಾನ್ಯವಾಗಿ ಗಣೆಗೆ ಹಾಡುವ ಕಲಾವಿದರೆಲ್ಲ ಗಂಡಸರು, ಅಪರೂಪಕ್ಕೊಮ್ಮೆ ಹೆಂಗಸರೂ ಹಾಡಬಹುದೆಂದು ಜಂಗಮರಹಳ್ಳಿಯ ಚಿಕ್ಕಜ್ಜಿ ತೋರಿಸಿಕೊಟ್ಟಿದ್ದಾಳೆ. ಬಹುಶಃ ಈ ಅಜ್ಜಿ ಮೊದಲ ಮತ್ತು ಕೊನೆಯ ಗಣೆಹಾಡಿನ ಕಲಾವಿದೆ ಎನಿಸುತ್ತದೆ. ಎತ್ತಪ್ಪನ ಕತೆಯನ್ನು ಗಣೆಯಲ್ಲಿ ಹಾಡುವಾಗಲೂ ಜುಂಜಪ್ಪನ ಕತೆ ಹಾಡುವ ಸಂದರ್ಭದಲ್ಲಿನ ಸಂಪ್ರದಾಯವನ್ನೇ ಅನುಸರಿಸುತ್ತಾರೆ.

ಹೀಗೆ ಗಣೆ ಹಿನ್ನೆಲೆಯಲ್ಲಿ ಕತೆಯನ್ನು ಹಾಡುವವರೆಲ್ಲ ತಮ್ಮ ಹಾಡಿಗೆ ಶ್ರುತಿ ಹಿಡಿದ ಗಣೆ ವಾದ್ಯಕ್ಕೆ ಕಾರಣವಾದ 'ಬಿದಿರಮ್ಮ'ನನ್ನು ಕುರಿತ ಪ್ರಾರ್ಥನೆಯೊಂದಿಗೆ ಕತೆಯನ್ನು ಆರಂಭಿಸುವ ಪರಿಪಾಠವಿದೆ. ಈ ಪ್ರಾರ್ಥನೆ ಬಿದಿರಿನ ವಿವಿಧ ಉಪಯೋಗಗಳನ್ನು ಕೊಂಡಾಡುತ್ತಲೇ ಒಂದು ಶ್ರೇಷ್ಠ ಭಾವಗೀತೆಯಾಗಿ ಬಿಡುತ್ತದೆ.[2]

ಮಾತುನಾಡೆ ಬಿದರಮ್ಮ ಮಾತುನಾಡೆ ನನ್ನಮ್ಮ
ಮಾತುನಾಡೆ ತಾಯಮ್ಮ ಸಿವ ನುಡಿಯೇ

ಕಲ್ಲಿನಲ್ಲಿ ವುಟ್ಟೋಳೆ, ಕಲ್ಲಿನಲ್ಲಿ ಬೆಳಿಯೋಳೆ
ಸೊಲ್ಲುಸೊಲ್ಲಿಗೆ ದನಿ ಕೊಡೇ ಬಿದರಮ್ಮ

2. ಡಾ. ಕಾಳೇಗೌಡ ನಾಗವಾರ ಅವರು 'ಬಿದರಮ್ಮ'ನನ್ನು ಕುರಿತ ಭಿನ್ನ ಪಾಠವೊಂದನ್ನು ತಮ್ಮ ಲೇಖನವೊಂದರಲ್ಲಿ ಪ್ರಸ್ತಾಪಿಸುತ್ತಾ, ಅದರ ಕಾವ್ಯಮಯ ಅಂಶಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಪ್ರೀತಿ ಮತ್ತು ನಿರ್ಭೀತಿ: (ಜುಂಜಪ್ಪನ ಕಾವ್ಯ, ಪುಟ 51), ರಶ್ಮಿ ಉದ್ಯಮ ಕೇಂದ್ರ, ಜಯಲಕ್ಷ್ಮೀಪುರಂ, ಮೈಸೂರು–570012.

ನನ್ನ ಸಂಗ್ರಹದ ಪಾಠವನ್ನು ನಾನು ಇಲ್ಲಿ ಪ್ರಸ್ತಾಪಿಸಿದ್ದೇನೆ.

ಉತ್ತಾರಿ ಗುಡ್ಡಕ್ಕೆ ಸುತ್ತೊಯ್ದು ಬೆಳದಲ್ಲಮ್ಮ
ಮಾರನ ಪಣಿವಿನಾಗೆ ಮಾರಾಕಿ ಬೆಳೆದಲ್ಲೆ
ಅಂದವಾದ ಕಣಿಮೆಗೆ ನೀನು ಚಂದವಾಗಿ ಬೆಳೆದಲ್ಲೆ
ಕುಂದಿರಿಪಿ ಬೆಟ್ಟಾಕೆ ಕುಂತೇ ನೀನು ಬೆಳೆದಲ್ಲಮ್ಮ

ದೊಡ್ಡೇರಿ ಸೀಮಿಗೆ ದೊಡ್ಡೋಳು ಕಣೆ ಬಿದಿರಮ್ಮ
ವಡ್ಡೀದ ಬಾಣ ಮರಬಿಲ್ಲ ಚಿಂತುರಕಲ್ಲು
ವಬ್ಬೇಲಾಡೆವಣ್ಣ ಜೀವಬ್ಯಾಟಿಗಳು

ಕುರಿಯ ಕಾವಣ್ಣಗೊಂದು ಕಿರುಗಣ್ಣಿನ ಬಿದಿರಾದೆ
ಮ್ಯಾಕೆ ಕಾವಣ್ಣಗೊಂದು ಗೀಕಿನ ಬೊಳುದಡಿಯಾದೆ
ಎತ್ತು ಕಾವಣ್ಣಗೊಂದು ಮುತ್ತಿನ ಬಾರಿಕೋಲಾದೆ
ಆವು ಕಾವಣ್ಣಗೊಂದು ದ್ಯಾವಗಣ್ಣಿನ ಬಿದಿರಾದೆ
ಎಮ್ಮೆ ಕಾವಣ್ಣಗೊಂದು ಚಿನ್ನದ ಡುಬುಗಣೆಯಾದೆ
ನೀನ್ಯಾರಿಗಲ್ಲದೋಳು

ಅಜ್ಜಿಗೂರುಗೋಲಾದೆ ಅಜ್ಜಗೂರುಗೋಲಾದೆ
ಕುಂಟಾಗೊಂದು ಕೋಲಾದೆ ಬಂಟಾಗೊಂದು ಕೋಲಾದೆ
ಹಟ್ಟೀಯ ಕ್ಯಾತಯ್ಯಗೊಂದು ತೂಗೊ ತೊಟ್ಟಿಲಾದೆ
ವಡ್ನಳ್ಳಿ ಮಾರಕ್ಕಗೊಂದು ವಡ್ಡೀದ ಅರಮನೆಯಾದೆ
ದೊಡ್ಡೋನು ಜುಂಜಪ್ಪಗೊಂದು ವಡ್ಡೀದ ಮರಬಿಲ್ಲಾದೆ
ನೀನ್ಯಾರಿಗಲ್ಲದೋಳು

ಕ್ವಾಟಿಗು ನೀನಾದಲ್ಲೆ ಪ್ಯಾಟಿಗೂ ಪಡಿಯಾದಲ್ಲೆ
ನೀಟಾಗಾರಣ್ಣಗೆ ಊದೋಕೊಂದು ಗಣೆಯಾದೆ
ಕೆಂಬಲ್ಲರು ನಾರೋರಿಗೆ ಕೇರಾಕೊಂದು ಮರವಾದೆ
ಲಂಬಾದೊಂದು ದೊಂಬರ ಗಣೆಯಾದೆ
ಬಲ್ಲಂತ ಜಾಣನ ಗಲ್ಲದ ಮ್ಯಾಲೆ ಸೆಲ್ಲಿನಾಡಮ್ಮ ಸಿವ ನುಡಿಯೇ

ಎಂಬ ಹಾಡು ಬಿದರಮ್ಮನ ಗುಣಗಾನ ಮಾಡುತ್ತದೆ. ತನ್ನ ಹಾಡಿಗೆ ದನಿಯೊದಗಿಸಿದ ಗಣೆಯೂ, ಆ ಗಣೆಗೆ ಕಾರಣವಾದ ಬಿದಿರೂ ನಮ್ಮ ಜನಪದರಿಗೆ ದೈವಗಳಾಗಿ ಕಾಣುತ್ತವೆ. ಯಾವ ಕೃತಕತೆಯ ಸೋಂಕು ಇಲ್ಲದೆ ಸರಳವಾಗಿರುವ ಈ ಹಾಡು ತನಗೆ ತಾನೇ ತನ್ನ ಭಾವಗೀತಾತ್ಮತೆಯಿಂದ ಕೃಷಿಸಂಸ್ಕೃತಿಯ ದಟ್ಟ ಚಿತ್ರಣವನ್ನು ಅತ್ಯಂತ ಆತ್ಮೀಯವಾಗಿ ನೀಡುತ್ತದೆ.

ದಕ್ಷಿಣ ಕರ್ನಾಟಕದಲ್ಲಿ ಮಾದಯ್ಯನ ಕತೆ ಹಾಡಲು ಕಂಸಾಳೆ (ಕಂಸಾಳೆ ಗುಡ್ಡರು) ಹುಟ್ಟಿಕೊಂಡಂತೆ, ಮಂಟೆಸ್ವಾಮಿ ಕತೆಯನ್ನು ಹಾಡಲು ವಿಶಿಷ್ಟ ಬಗೆಯ ತಂಬೂರಿ (ನೀಲಗಾರರು) ಹುಟ್ಟಿಕೊಂಡರೆ; ಉತ್ತರ ಕರ್ನಾಟಕದ ಎಲ್ಲಮ್ಮನ ಕತೆ



ಗಣೆ ಶೃತಿಗೆ ಹಾಡುತ್ತಿರುವ ಕಥೋಪಜೀವಿ

ಹಾಡಲು ಚೌಡಿಕೆ (ಜೋಗತಿಗಳು) ಹುಟ್ಟಿಕೊಂಡರೆ, ಮೈಲಾರಲಿಂಗನ ಕತೆ ಹಾಡಲು ಡೊಳ್ಳು (ಗೊರವಯ್ಯಗಳು) ಹುಟ್ಟಿಕೊಂಡರೆ, ಮಧ್ಯಕರ್ನಾಟಕದಲ್ಲಿ ಎತ್ತಪ್ಪ–ಜುಂಜಪ್ಪ ಮುಂತಾಗಿ ಕಾಡುಗೊಲ್ಲರ ಕತೆಗಳನ್ನು ಹಾಡಲು ಗಣೆ ಎಂಬ ವಿಶಿಷ್ಟ ವಾದ್ಯದ ಹಿನ್ನೆಲೆಯಲ್ಲಿ ನುಡಿಸುವ ಕಥನ ಪರಂಪರೆಯೊಂದು ಹುಟ್ಟಿಕೊಂಡಿದೆ. ಮೇಲ್ಕಂಡ ಎಲ್ಲ ಹಾಡಿನ ಸಂಪ್ರದಾಯಗಳ ಜನ ನಾನಾ ಜಾತಿಗೆ ಸೇರಿದವರಾಗಿದ್ದಾರೆ; ಗಣೆ ಕಾವ್ಯ ಮಾತ್ರ ಕಾಡುಗೊಲ್ಲರಿಗೇ ವಿಶಿಷ್ಟವಾಗಿದ್ದು, ಕಾಡುಗೊಲ್ಲ ಜನಗಳು ಮಾತ್ರ ಹಾಡುವ ಅಪರೂಪದ ಜನಪದ ಕಾವ್ಯ ಪ್ರಕಾರ ಇದಾಗಿದೆ.

## ವಾದ್ಯ ತಯಾರಿಕೆ

ಇಂಥ ಗಣೆ ತಯಾರಿಕೆಯ ಕತೆಯೂ ಸ್ವಾರಸ್ಯಕರವಾಗಿದೆ.

ಚಿತ್ರದುರ್ಗ ನಗರದಲ್ಲಿರುವ ಕಾಡುಗೊಲ್ಲರ ಕ್ಯಾತೇದೇವರ ದೇವಸ್ಥಾನದಲ್ಲಿರುವ ಗಣೆ ತಯಾರಿಸಲು ವಿಶಿಷ್ಟವಾದ ಕ್ರಮವನ್ನೇ ಅನುಸರಿಸುವುದನ್ನು ಕಾಣಬಹುದು.

ಗಣೆಗೆ ಬೇಕಾದ ಈ ಬಿದಿರನ್ನು ತರಲು ಗೊಲ್ಲರವನೇ ನಡೆ–ಮಡಿ ನೇಮದಲ್ಲಿ ಹೋಗಬೇಕು. ಬಿದಿರ ಕಾಡಿಗೆ ಹೋಗಿ ಹುತ್ತದ ಮೇಲೆ ಬೆಳೆದಿರುವ ಬಿದಿರ ಮೆಳೆಯಲ್ಲಿ ಅತ್ಯುತ್ತಮವಾದ ಬಿದಿರಕೋಲನ್ನು ಆರಿಸಬೇಕು. ಅದನ್ನು ಸರಿಯಾದ ತಿಥಿ, ವಾರ, ನಕ್ಷತ್ರ–ಮೂಹರ್ತದಲ್ಲಿ ಪೂಜಿಸಿ ಕಡಿದು ತರಬೇಕು. ಅದನ್ನು ರಂಧ್ರ ಕೊರೆದು ಗಣೆಯನ್ನು ಮಾಡಿ ದೇವರಿಗೆ ಒಪ್ಪಿಸುವವರೆಗೂ ಅವನು ಒಂದೊತ್ತಿನ ನೇಮದಲ್ಲಿರಬೇಕು. ಈ ಗಣೆಯನ್ನು ಸಿಕ್ಕ ಸಿಕ್ಕವರು ಊದುವಂತಿಲ್ಲ. ಇಡೀ ಜೀವಮಾನವೆಲ್ಲ ಒಬ್ಬನೇ ವ್ಯಕ್ತಿ ಊದಬೇಕು. ಅವನು ಸತ್ತ ನಂತರ ಮುಂದಕ್ಕೆ ಗಣೆ ಊದಬೇಕಾದವನನ್ನು ದೇವರೇ ಹೆಸರಿಸುವ ಸಂಪ್ರದಾಯ ಇದೆ.[3] ಈ ಗಣೆ ತಯಾರಿಕೆಯ ಸಂಪ್ರದಾಯ ಹೆಚ್ಚು ಕಡಿಮೆ ಎಲ್ಲ ಕಾಡುಗೊಲ್ಲ ದೇವರುಗಳಿಗೆ ಬಳಸುವ ಗಣೆಗಳಿಗೆ ಅನ್ವಯಿಸುವಂತಿದೆ. ಉಳಿದ ಹವ್ಯಾಸಿ ಗಣೆಗಳ ತಯಾರಿಕೆಗೆ ಈ ಕಟ್ಟುನಿಟ್ಟಿನ ನಿಯಮಗಳು ಅನ್ವಯಿಸುವುದಿಲ್ಲ.

## ಜುಂಜಪ್ಪನ ಬಸವ ಮತ್ತು ಕಥೋಪಜೀವಿಗಳು

ಈ ಗಣೆ ವಾದ್ಯ ಹಾಡುಗಾರಿಕೆಯೊಂದಿಗೆ 'ಜುಂಜಪ್ಪನ ಬಸವ' ಸಂಪ್ರದಾಯವು ತಳಕು ಹಾಕಿಕೊಂಡಿದೆ. ಇದರೊಂದಿಗೇ ಅವಿನಾಸಂಬಂಧದಂತೆ ಕಥೋಪಜೀವಿಗಳ ಬದುಕೂ ಹೆಣೆದುಕೊಂಡಿದೆ.

ಜುಂಜಪ್ಪನ ಸಂಪ್ರದಾಯದಲ್ಲಿ ಜುಂಜಪ್ಪನ ಹೆಸರಿನಲ್ಲಿ ಅನೇಕ ಬಸವಗಳನ್ನು ಬಿಡುತ್ತಾರೆ. ಕಳುವೋರಹಳ್ಳಿ, ಹಾಗಲವಾಡಿಗಳಲ್ಲಿ ಬಸವಗಳನ್ನು ಬಿಟ್ಟಿದ್ದಾರೆ. ಅದೇ ರೀತಿಯಲ್ಲಿ ಎತ್ತಪ್ಪನ ಹೆಸರಿಗೆ ಬಸವಗಳನ್ನು ಬಿಡುವ ಸಂಪ್ರದಾಯ 'ಜುಂಜಪ್ಪನ ಸಂಪ್ರದಾಯ'ದಲ್ಲಿದ್ದಷ್ಟು ಪ್ರಬಲವಾಗಿಲ್ಲ. ಜುಂಜಪ್ಪನ ಹೆಸರಿನಲ್ಲಿ ಈ ಸಂಪ್ರದಾಯ ಸಶಕ್ತವಾಗಲು 'ಬಟ್ಟಣ್ಣ ಬಡಮ್ಮೈಲ'ನ ವಿರೋಚಿತ ವ್ಯಕ್ತಿತ್ವವೇ ಪ್ರೇರಣೆಯನ್ನು ಒದಗಿಸಿದಂತೆ ಕಾಣುತ್ತದೆ. (ಇದೇ ರೀತಿಯ ವ್ಯಕ್ತಿತ್ವವನ್ನು ಎತ್ತಪ್ಪನ ಕತೆಯಲ್ಲಿ ಚಿಕ್ಕರಂಭೆ ಹಸು ಮೆರೆದರೂ ಈ ಸಂಪ್ರದಾಯ ಅಲ್ಲಿ ತಳವೂರಿಲ್ಲದಿರುವುದೇ ವಿಚಿತ್ರ). ಬಟ್ಟಣ್ಣ ಬಡಮ್ಮೈಲನನ್ನು ನಮ್ಮ ಜನಪದ ಕವಿ ಹೀಗೆ ಚಿತ್ರಿಸುತ್ತಾನೆ–

---

3. ಈ ಮಾಹಿತಿಯನ್ನು ನನಗೆ ನೀಡಿದವರು – ಚಿತ್ರದುರ್ಗ ನಗರದ ಕರುವಿನಕಟ್ಟೆ ಸರ್ಕಲ್ ಬಳಿ ಇರುವ ಕ್ಯಾತೆದೇವರ ದೇವಸ್ಥಾನದ ಪೂಜಾರಿ ನಿಂಗಪ್ಪನವರು. ಅವರಿಗೆ ಸುಮಾರು 60 ವರ್ಷವಾಗಿದ್ದು, ಸನ್ನೋರು ಗೊಲ್ಲರ ಬೆಡಗಿಗೆ ಸೇರಿದವರಾಗಿದ್ದಾರೆ.

ದೇವರ 'ಹೇಳಿಕೆಯ ಗಣೆ'ಗಳಾಗಿ ಬಳಸುವಂಥವುಗಳನ್ನು ಮಾತ್ರ ಈ ರೀತಿಯಲ್ಲಿ ತಯಾರಿಸಿದ್ದು, ಉಳಿದಂತೆ ಕಥಾ ಸಂದರ್ಭದಲ್ಲಿ ಬಳಕೆಯಾಗುವ ಗಣೆಗಳಿಗೆ ಈ ಕಟ್ಟುನಿಟ್ಟಿನ ಸಂಪ್ರದಾಯ ಪಾಲಿಸಬೇಕಾದ ಅವಶ್ಯಕತೆಯಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

'ಕಂಬಕಾಕ್ಯಾರೆ ವೊಂಬಣ್ಣದನುಗನ
ನಂದಿಮಕದ ಸೆಲುವಾನ
ಬಸವಣ್ಣನ ಕಂಬಕಾಕ್ಯಾರೆ ಹಗೆಯೋರು'

ಜನಪದ ಕವಿ ಇಲ್ಲಿ ಬಟ್ಟಣ್ಣನನ್ನು 'ನಂದಿಮುಖ'ದವನೆಂದು ಕರೆಯುತ್ತಾನೆ. "ಮುಖವು ಕಿವಿಗಳವೆಗೆ ಬಿಳಿಯ ಬಣ್ಣದ್ದಾಗಿರುವ, ಉಳಿದ ಶರೀರದ ಭಾಗವು ಕೆಂಪು ಬಣ್ಣದಿಂದ ಕೂಡಿರುವ ಹೋರಿಯನ್ನು 'ನಂದಿಮುಖ'ವೆಂದು ಕರೆಯುತ್ತಾರೆ" ಎಂಬ ವಿವರಣೆ ನಕುಲ ಸಂಹಿತೆಯಿಂದ ದೊರೆಯುತ್ತದೆ.

ಬಸವನ ಆರಾಧನೆ ಇಂದು ನಿನ್ನೆಯದಲ್ಲ. ಜುಂಜಪ್ಪನ ಕಾಲಕ್ಕಿಂತಲೂ ಹಿಂದಿನ ಅನೇಕ ಶತಮಾನಗಳಿಂದ ಬಸವನ ಆರಾಧನೆ ನಮ್ಮ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಬೆರೆತು ಬಂದಿದೆ. ಹರಪ್ಪ–ಮೊಹಂಜದಾರೋ ಕಾಲದ ಮುದ್ರೆಗಳ ಮೇಲೆ ಕೆತ್ತಿರುವ 'ಗೂಳಿ' ಚಿತ್ರವನ್ನು ನೋಡಿದರೆ ಸಾಕು, ವ್ಯವಸಾಯಗಾರರಾದ ದ್ರಾವಿಡರ ಬದುಕಿನಲ್ಲಿ ಗೂಳಿಗೆ ಅದೆಷ್ಟು ಪ್ರಾಧಾನ್ಯವಿದೆ ಎಂಬುದು ಅರ್ಥವಾಗಿಬಿಡುತ್ತದೆ. "ದ್ರಾವಿಡರು ಮೆಚ್ಚುತ್ತಿದ್ದುದು, ಪೂಜಿಸುತ್ತಿದ್ದುದು, ಸಾಕುತ್ತಿದ್ದುದು ಗಂಡು ದನ–ಗೂಳಿ, ಎತ್ತು. ದ್ರಾವಿಡರು ಮೂಲದಲ್ಲಿ ಶೈವರು, ಶಿವನೇ ಅವರ ಆರಾಧ್ಯದೈವ. ಶಿವ ಪಶುಪತಿ. ಪಶುಗಳ ಒಡೆಯ. ಶಿವನ ವಾಹನ ವೃಷಭ, ನಂದಿ, ಬಸವ. ಈಗಲೂ ಕೂಡ ಶಿವನನ್ನು, ನಂದಿಯನ್ನು, ಬಸವನನ್ನು ದಕ್ಷಿಣ ಭಾರತದಲ್ಲಿ ಪೂಜಿಸುವಷ್ಟು ಉತ್ತರ ಭಾರತದಲ್ಲಿ ಪೂಜಿಸುವುದಿಲ್ಲ.... ನಮ್ಮ ದಕ್ಷಿಣ ದೇಶದಲ್ಲಿ ನಡೆಯುವಷ್ಟು ಭಾರೀ ದನದ ಜಾತ್ರೆಗಳು ಉತ್ತರ ಭಾರತದಲ್ಲಿ ನಡೆಯುವುದಿಲ್ಲ."[4] ಹೀಗಾಗಿ ದ್ರಾವಿಡರು ಗೂಳಿಗೆ ಕೊಟ್ಟ ಮಹತ್ವದಿಂದ ಅದೊಂದು ಆರಾಧ್ಯ ವಸ್ತುವಾಯಿತು. ಪ್ರತಿಯೊಂದು ಶಿವ ದೇವಾಲಯದ ಹೊರಗೆ ನಂದಿ ವಿಗ್ರಹ ಇರುವುದನ್ನು ನೋಡಿದರೆ ಸಾಕು ಅದು ಶಿವನ ಅವಿಭಾಜ್ಯ ಅಂಗವೆಂದು ತಿಳಿದುಬಿಡುತ್ತದೆ. ಹೀಗಾಗಿ ಶಿವಾರಾಧಕ ಜನ, ಶಿವನಿಗೆ ಪ್ರಿಯವಾದ ಅವನ ವಾಹನವನ್ನು ಭಕ್ತಿಯಿಂದ ಅರ್ಚಿಸುವ ಸಂಪ್ರದಾಯ ಪ್ರಾರಂಭವಾಗಿರಬೇಕು. ಹೀಗಾಗಿ ದೇವರಿಗೋಸ್ಕರ ಬಿಡಬೇಕಾದ ಗೂಳಿಯ ಲಕ್ಷಣಗಳು ಹೀಗೆಯೇ ಇರಬೇಕು ಎಂದು ಬಹು ಹಿಂದೆಯೇ ನಿರ್ಧರಿಸಿದುದನ್ನು ಗಮನಿಸಬಹುದು. "ಕೊಂಬಿನ ತುದಿಗಳು ಹಾಗೂ ಕಣ್ಣುಗಳು ಕೆಂಪು ವರ್ಣದಿಂದ ಕೂಡಿದ್ದು, ಉಳಿದ ಶರೀರದ ಭಾಗವು ಬಿಳಿಯ ಬಣ್ಣದ್ದಾಗಿರುವ ಮತ್ತು ಅವುಗಳ ಖುರಗಳು ನುಣುಪಾಗಿ ಕೆಂಪಾಗಿ ಗೆಜ್ಜರಿ ಬಣ್ಣದಂತೆ ಇರುವ ಹೋರಿಗಿಂತ ಮಿಗಿಲಾದ ಹೋರಿ ಬೇರೆ ಇರುವುದಿಲ್ಲವೆಂದು ತಿಳಿಯಬೇಕು. ಹೋರಿಯ ಕಾಲುಗಳು, ಮುಖ ಮತ್ತು ಬಾಲ (ಬಾಲವು ನೆಲಕ್ಕೆ ಮುಟ್ಟುತ್ತಿರಬೇಕು) ಬಿಳಿಯ ಬಣ್ಣದ್ದಾಗಿಯೂ, ಉಳಿದ ಶರೀರದ

---

4. ಎಂ.ಎಲ್. ನರಸಿಂಹ ಅಯ್ಯಂಗಾರ್ : ನಮ್ಮ ದನಗಳು, ಮೈ.ವಿ., 1973, ಪು. 118

ಭಾಗವು ಅರಗಿನ ಬಣ್ಣದಂತೆಯೂ ಇರುವ ಹೋರಿಯನ್ನು 'ನೀಲ' ಎಂದು ಕರೆಯುತ್ತಾರೆ. ಇಂಥ ಹೋರಿಯನ್ನೇ 'ದೇವರ ಗೂಳಿ' ಎಂದು ಬಿಡಲಾಗುತ್ತಿತ್ತು.[5]

ಆದರೆ ಈಗ ಈ ಲಕ್ಷಣಗಳುಳ್ಳ ಗೂಳಿಯನ್ನೇ ಆರಿಸಿ ಬಿಡುವ ಸಂಪ್ರದಾಯ ಇಲ್ಲ. ದನಗಳ ಏಳಿಗೆ ಆಗದಿದ್ದಾಗ ದೇವರ ಹೆಸರಿಗೆ ದನ ಬಿಡುವ ಹರಕೆ ಮಾಡಿಕೊಳ್ಳುತ್ತಾರೆ. ತಮಗಿಷ್ಟ ಬಂದ ದನವನ್ನೋ, ಕರುವನ್ನೋ ತೆಗೆದುಕೊಂಡು ಹೋಗಿ ದೇವರಿಗೆ ಅರ್ಪಿಸುತ್ತಾರೆ. ಅದರಲ್ಲಿ 'ಪಟ್ಟದ ಬಸವ'ನಾಗಲು (ಅಂದರೆ ದೇವರ ಪಟ್ಟದ ಪ್ರತಿನಿಧಿಯಾಗಲು) ಯೋಗ್ಯವಾದ ರಾಸನ್ನು ಮಾತ್ರ ಉಳಿಸಿಕೊಂಡು, ಉಳಿದವನ್ನು ಮಾರಿ, ಬಂದ ಹಣವನ್ನು ದೇವರಿಗೆ ಅರ್ಪಿಸುತ್ತಾರೆ. ಇಲ್ಲವೇ ದೇವರ ಅಭಿವೃದ್ಧಿಗಾಗಿ ಖರ್ಚು ಮಾಡುತ್ತಾರೆ. ಪಟ್ಟದ ಬಸವನಿಗೆ ದೇವಸ್ಥಾನದಿಂದ ವೃತ್ತಾಕಾರವಾದ ಅಥವಾ ತ್ರಿಶೂಲಾಕಾರವಾದ ಮುದ್ರೆಯನ್ನು ಬಾಲದ ಪಕ್ಕದ ತೊಡೆಯ ಮೇಲ್ಭಾಗದಲ್ಲಿ ಒತ್ತಿ ಕೈಬಿಡುತ್ತಾರೆ.

ದೇವರಿಗೆ ಗೂಳಿ ಬಿಡುವ ಈ ಸಂಪ್ರದಾಯ ಬರಿ ಶಿವನಿಗೆ, ಅವನ ಪರಿವಾರದ ದೇವತೆಗಳಿಗೆ, ಶಿವನ ಭಕ್ತರಿಗೆ ಮಾತ್ರ ಸೀಮಿತವಾಗದೆ ಬೇರೆ ಬೇರೆ ದೇವತೆಗಳ ಹೆಸರಿನಲ್ಲೂ ಗೂಳಿ ಬಿಡುವ ಸಂಪ್ರದಾಯ ಪ್ರಾರಂಭವಾದಂತೆ ಕಾಣುತ್ತದೆ. ವಿಷ್ಣು ಸಂಪ್ರದಾಯಕ್ಕೆ ಸೇರಿದ ರಂಗಧಾಮ, ನರಸಿಂಹ, ತಿಮ್ಮಪ್ಪ ದೇವತೆಗಳಿಗೂ ಗೂಳಿ ಬಿಡುವ ಸಂಪ್ರದಾಯವನ್ನು ಗಮನಿಸಿದರೆ ಇದು ಶೈವ ಸಂಪ್ರದಾಯದ ಪ್ರಭಾವದಿಂದಲೇ ಪ್ರಾರಂಭವಾಗಿರಬೇಕು ಅನಿಸುತ್ತದೆ. ಗಂಡು ದೇವತೆ ಶಿವ–ವಿಷ್ಣುಗಳಿಗೆ ಬಿಟ್ಟರೆ, ಮಾರಮ್ಮನಿಗೆ ಕೋಣಗಳನ್ನು ಅದೇ ದೇವತೆಗೆ ಬಲಿ ಕೊಟ್ಟರೆ, ಗಂಡು ದೇವತೆಗೆ ಬಿಟ್ಟ ಗೂಳಿಗಳನ್ನು ಬಲಿ ಕೊಡದಿರುವುದು ಒಂದು ವಿಶೇಷ. ಗೂಳಿಗಳನ್ನು ದೇವರ ಪ್ರತಿನಿಧಿಗಳೆಂದು ಭಾವಿಸುವುದರಿಂದ ಅವುಗಳು ನಿರಾತಂಕವಾಗಿ ಎಲ್ಲಿ ಬೇಕಾದರೂ ಸಂಚರಿಸಬಹುದು, ಎಲ್ಲಿ ಬೇಕಾದರೂ ಮೇಯಬಹುದು. ಹಿಂದೆ ಯಾರ ಹೊಲಕ್ಕೆ ನುಗ್ಗಿ ಮೇದರೂ ಯಾರೂ ಅಡ್ಡಿಪಡಿಸುತ್ತಿರಲಿಲ್ಲ, ಏಕೆಂದರೆ ದೇವರ ಪ್ರತಿನಿಧಿಯಾದ ಆ ಗೂಳಿ ತಮ್ಮ ಹೊಲಕ್ಕೆ ಕಾಲಿಡುವುದರ ಮೂಲಕ ತಮ್ಮ ಹೊಲದ ಫಸಲು ಸಮೃದ್ಧವಾಗುತ್ತದೆ ಎಂದು ಜನ ನಂಬುತ್ತಿದ್ದುದರಿಂದ ಸಾಮಾನ್ಯವಾಗಿ ಅಡ್ಡಿಪಡಿಸುತ್ತಿರಲಿಲ್ಲ. ಆದರೆ ಭಕ್ತಿ ಕಡಿಮೆಯಾದ ಇಂದಿನ ಪರಿಸರದಲ್ಲಿ ದೇವರ ಗೂಳಿಗಳಾದರೂ ಸರಿ ಅವನ್ನು ಹೊರಕ್ಕೆ ಅಟ್ಟುತ್ತಾರೆ. ಇದು ಸಾಯುವವರೆಗೂ ದೇವರ ಹೆಸರಿನಲ್ಲಿ ಬದುಕುತ್ತದೆ, ಸತ್ತಾಗ ಅದರ ದೇಹವನ್ನು 'ಮಣ್ಣು' ಮಾಡುತ್ತಾರೆ. ದೇಹವನ್ನು ತರಲು ಸಾಧ್ಯವಾಗದಿದ್ದರೆ ಆದರ ಕೊಂಬುಗಳನ್ನು ತಂದು ಸಮಾಧಿ

5. ಆರ್.ಎಸ್. ಜ್ಯೋತಿ : ಪ್ರಾಚೀನ ಹಾಗೂ ಅರ್ವಾಚೀನ ದನಗಳು, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ, 1985, ಪು. 51

ಮಾಡುತ್ತಾರೆ. ಇಂತಹ ಅನೇಕ ಸಮಾಧಿ ಸ್ಮಾರಕಗಳನ್ನು ಬೇವಿನಹಳ್ಳಿ, ದಬ್ಬೆಗಟ್ಟದಲ್ಲಿ ನೋಡಬಹುದು. ತುಮಕೂರು ಜಿಲ್ಲೆಯ ದಬ್ಬೇಘಟ್ಟದ ಬಳಿ ಇರುವ ದೇವರಿಗೆ ಬಿಟ್ಟ ಬಸವಗಳ ಅನೇಕ ಸಮಾಧಿಗಳು ಮತ್ತು ಸಮಾಧಿ ಸ್ತಂಭಗಳು ಗಮನಾರ್ಹ.[6] ಇವನ್ನು 'ಗೋಕಲ್ಲು'ಗಳು ಎಂದು ಕರೆಯುತ್ತಾರೆ. ಎತ್ತಪ್ಪನ ಕಥೆಯಲ್ಲಿ ಬರುವ ಚಿಕ್ಕರಂಭೆ ಜೂಜಿನಲ್ಲಿ ಬೇವಿನಮರ ಹಾರಿ ಗೆದ್ದ ನಂತರ ಸಾಯುತ್ತದೆ. ಅದರ ನೆನಪಿಗಾಗಿ ಜೂಜಿನ ಬೇವಿನ ಮರದ ಬಳಿಯೇ ಚಿತ್ರವಿರುವ 'ಗೋಕಲ್ಲು' ಸ್ಥಾಪಿಸಿರುವುದನ್ನು ನೋಡಬಹುದು.

ಅಬ್ಬೆ ಡುಬಾಯಿಸ್ ಅವರು ಕಳೆದ ಶತಮಾನದಲ್ಲಿ ದನಕ್ಕಿದ್ದ ಸಾಮಾಜಿಕ, ಸಾಂಸ್ಕೃತಿಕ ಮಹತ್ವವನ್ನು ಕುರಿತು ಹೀಗೆ ಹೇಳುತ್ತಾರೆ –

"ನಾನಾ ಬಗೆಯ ವಸ್ತುಗಳನ್ನು ಪೂಜಿಸುವ ಇವರ ತಮ್ಮ ದುಡಿಮೆಯ ಜೊತೆಗಾರರೂ, ಎಲ್ಲ ಬಗೆಯ ವ್ಯವಸಾಯದ ಕೆಲಸಗಳಿಗೆ ಸಹಕಾರಿಗಳೂ ಆಗಿದ್ದ ದನಗಳನ್ನು ಪೂಜ್ಯನೀಯವೆಂದು ಪರಿಗಣಿಸಿ ಗೌರವ ಸಮರ್ಪಣೆ ಮಾಡುವುದು ಅತ್ಯಂತ ಸಹಜವಾದುದು. ಹಿಂದಿನ ಕಾಲದಲ್ಲಿ ಇವುಗಳು ಅವರ ಸಂಪತ್ತಿನ ಮೂಲಗಳಾಗಿದ್ದವು. ಈಗಿನ ಕಾಲದಲ್ಲಿ ಇವುಗಳ ಆಧಾರದ ಮೇಲೆಯೇ ಸಂಪತ್ತನ್ನು ಅಳೆಯಲಾಗುವುದು. ಇವುಗಳನ್ನು ದೇವರೆಂದು ಆರಾಧಿಸದ ದೇಶಗಳಲ್ಲೂ ಇವುಗಳಿಗೆ ತನ್ನದೇ ಆದ ಉನ್ನತವಾದ ಬೆಲೆಯನ್ನು ನೀಡಲಾಗಿದೆ. ಉದಾಹರಣೆಗೆ ರೋಮನ್ನರು ಒಂದು ಹೋರಿಯನ್ನು ಕೊಲ್ಲುವುದು, ಒಬ್ಬ ನಾಗರಿಕನನ್ನು ಕೊಲ್ಲುವಷ್ಟೇ ಗಂಭೀರವಾದ ಅಪರಾಧವೆಂದು ಪರಿಗಣಿಸುತ್ತಾರೆ.[7]

ಭಕ್ತರು 'ಜುಂಜಪ್ಪನ ಬಸವ'ನಾಗಿ ಪಟ್ಟದ ಬಸವನನ್ನು ಬಿಡಲು ಹರಕೆ ಮಾಡಿಕೊಂಡಾಗ ಅವರ "ಅವರ ಕರೀನಲ್ಲಿರುವ (ಕರುಗಳಲ್ಲಿರುವ)ಬೇಕಾದ ಕರ ಹಿಡಿದುಕೊಡುತ್ತಾರೆ. ಅವನ್ನು ಚೆನ್ನಾಗಿ ಮೇಯಿಸಿ, ಮೈತೊಳೆದು ಪೂಜೆ ಮಾಡಿಕೊಂಡಿರುತ್ತಾರೆ. ಹರಕೆಯವರು ಬಂದಾಗ, ಪಟ್ಟಾಭಿಷೇಕಕ್ಕಾಗಿ ಪರುಷವ್ವನ

---

6. "A number of samadhis and tombs of bulls dedicated to the temple at Dabbe Ghatta (Tumkur Dist.) are of importance." Memorial stones, p. 238 (ಆದರೆ ಇತ್ತೀಚೆಗೆ ನಾನು ಅಲ್ಲಿ ಭೇಟಿ ಕೊಟ್ಟು ಪರಿಶೀಲಿಸಿದಾಗ, ಅಂಥ ಯಾವ ಸ್ಮಾರಕಗಳೂ ಅಲ್ಲಿ ಉಳಿದಿಲ್ಲ !)

7. "Was it most natural that those who worshipped so many different objects should offer homage to animals which were so pre-eminently valuable to them, which were their companians in labour, on which they relied to carry on all their agricultural work, which in primitive times constitued their on source of wealth, and which even at the present day from the basis of material wealth all over the world, the nations which do not actually worship them as god were always careful to show the high value they set upon for them. For instance the Romans to kill a bull was accounted a no less crime than to kill a fellow citizen." Abbe Dubois: Hindu manners, customs and ceremonies. P. 638

ಕೆರೆಯಲ್ಲಿ ಮೈತೊಳೆದು, ಜುಂಜಪ್ಪನ ಗುಡ್ಡೆ ಸುತ್ತಿಸಿ, ಹೂವಿನಹಾರ ಹಾಕಿದರೆ 'ಪಟ್ಟಾಭಿಷೇಕ'ವಾದಂತೆ. ಜುಂಜಪ್ಪನ ಗುಡ್ಡೆ ಸುತ್ತು ಹಾಕುತ್ತಲೇ ಅದು 'ಬುದ್ಧಿ' ಬಂದ ಹಾಗೆ ವರ್ತಿಸುತ್ತದೆ. ಅದನ್ನು ಯಾರೂ ಹಿಡಿಯುವುದೇ ಬೇಡ. ಅದಕ್ಕೆ ಒಡವೆ



ಅಲಂಕೃತ ಜುಂಜಪ್ಪನ ಬಸವ

ಅಲಂಕಾರ ಮಾಡಿ ಬಿಟ್ಟರೆ ದೇವರ ಮುಂದೆ 'ನಡೆ–ಮಡಿ' ಮೇಲೆ ಅದೇ ಹೋಗುತ್ತದೆ. ಮಕ್ಕಳಿಲ್ಲದವರು, ಮದುವೆಯಾಗದವರು 'ಮರೆಹಾಕಿದರೆ (ಶರಣಾಗತರಾದರೆ) ಒಳ್ಳೆಯದಾಗುವುದಿದ್ದರೆ ನೆಲದ ಮೇಲೆ ಮಲಗಿದವರನ್ನು ತುಳಿಯದಂತೆ ದಾಟುತ್ತದೆ, ಇಲ್ಲದಿದ್ದರೆ ಅರುಗಾಗಿ (ಪಕ್ಕಕ್ಕೆ) ಹೋಗುತ್ತದೆ. ದೆವ್ವ, ಪೀಡೆ, ಪಿಶಾಚಿಯ ಬಿಡುಗಡೆಯ ಬಗ್ಗೆ 'ಮರೆ' ಹಾಕಿದರೆ, ಅದು ತೊಲಗುವವರೆಗೂ ಬಸವ ಅರುಗಾಗುವುದಿಲ್ಲ."[8]

ಇಂಥ ಬಸವಗಳ ಕೊಂಬಿಗೆ ವಡವೆ ಸಿಕ್ಕಿಸಿ ಅಲಂಕಾರ ಮಾಡಿಕೊಂಡು ಕರೆದುಕೊಂಡು ಛತ್ರ, ಚಾಮರ ಹಿಡಿದುಕೊಂಡು, ಅರೆ–ವಾಲಗದವರನ್ನು ಕರೆದುಕೊಂಡು, ಸುರೆಪಾನ ಹಿಡಿದುಕೊಂಡು ಒಕ್ಕಲಿರುವ ಹಳ್ಳಿಗಳ ಕಡೆ ಹೋಗುತ್ತಾರೆ. ಹೀಗೆ ಹೋಗುವ ಜನಗಳಿಗೆ ಯಾವ ದೀಕ್ಷೆಯೂ ಇರುವುದಿಲ್ಲ. ಹೀಗೆ ಹಿಂದೆ ಹೋಗುವ ಒಂದು ಗುಂಪಿನಲ್ಲಿ ವಾಲಗದವರೂ ಸೇರಿದಂತೆ 25–30 ಜನ ಇರುತ್ತಿದ್ದರು. ಈಗ ಈ ಸಂಖ್ಯೆ 5–6ಕ್ಕೆ ಇಳಿದಿದೆ. ಕೆಲವು ಬಾರಿ ಬಸವನ ಕೋಡಿಗೇ ಪ್ರಭಾವಳಿ, ನಾಗರಹೆಡೆ, ಬಣ್ಣದ ಬಟ್ಟೆಗಳನ್ನು ಕಟ್ಟಿ ಅಲಂಕರಿಸುತ್ತಾರೆ. ಮೈತುಂಬ ಬಣ್ಣದ ಗೌನು ಹಾಕುತ್ತಾರೆ.

---

8. ತೀ.ನಂ.ಶಂ. ರವರು ಕಾ.ಗೋ.ಸಂ.ನಲ್ಲಿ ಜುಂಜಪ್ಪ ದೇವರ ಬಸವನನ್ನು ಬಾವಿ ತೊಡುವ ಜಾಗ ತೋರಿಸಲು ಬಳಸುತ್ತಾರೆ ಎಂಬ ಮಾಹಿತಿ ನೀಡುತ್ತಾರೆ. ಬದಲಾದ ಕಾಲಮಾನಕ್ಕೆ ತಕ್ಕಂತೆ ಈಗ ಜುಂಜಪ್ಪನ ಬಸವನ ಬಳಕೆ ತೀರಾ ಸಾಂಪ್ರದಾಯಕವಾಗಿದೆ, ಮೊದಲಿನ ನಂಬಿಕೆಗಳು ಈಗ ಉಳಿದಿಲ್ಲ.



ಜುಂಜಪ್ಪನ ಬಸವನ ಹಿಂದೆ ವಾದ್ಯ ವಿಶೇಷದವರು

ಬಸವನನ್ನು ಹಗ್ಗ ಹಾಕಿ ಹಿಡಿಯುವಂತಿಲ್ಲ. ಅದಾಗಿ ಅದೇ ತನಗೆ ಇಷ್ಟ ಬಂದ ಮನೆಗೆ ಹೋಗಬಹುದು. ಅದು ಹೋದ ಮನೆಯವರು ಅದು ಕೇಳಿದ್ದನ್ನು ಕೊಡಬೇಕು, ಅಲ್ಲಿಯವರೆಗೂ ಅದು ಅವರ ಮನೆಯ ಮುಂದೆಯೇ ಮಲಗುತ್ತದೆ, ಕೊಡುವವರೆಗೂ ಏಳುವುದಿಲ್ಲ. ಚನ್ನಗಿರಿಯ ಒಬ್ಬ ಸಾಹುಕಾರರು ಹೊಸದಾಗಿ ಕಟ್ಟಿಸಿದ ಮನೆಗೆ ಇನ್ನಿಲ್ಲದಂತೆ ಬೇಡಿಕೊಂಡು ಕರೆದರೂ, ಚಿನ್ನದ ಕರಡಿಗೆಯನ್ನೇ ಹಾಕಿಸುತ್ತೇವೆ ಎಂದರೂ ಹೋಗಲೇ ಇಲ್ಲ.[9]

ಹೀಗೆ ಜುಂಜಪ್ಪನ ಬಸವಗಳನ್ನು ಒಕ್ಕಲು ಮೇಲೆ ಹೊಡೆದುಕೊಂಡು ಹೋಗುವ ಅನೇಕ ತಂಡಗಳು ಶಿರಾ ತಾಲ್ಲೂಕಿನ ಅಜ್ಜೇನಹಳ್ಳಿಯಲ್ಲಿ ಇವೆ. ಇವರು ಬೆಂಗಳೂರು, ಶಿವಮೊಗ್ಗ, ಹಾಸನದತ್ತ ಬೇರೆ ಬೇರೆ ತಂಡಗಳಲ್ಲಿ ಹೋಗುತ್ತಾರೆ. ಶಿವರಾತ್ರಿ ಕಾಲದಲ್ಲಿ ಇವರ ಸಂಚಾರ ಪ್ರಾರಂಭವಾಗುತ್ತದೆ. ಕೆಲವು ತಂಡಗಳು ಯುಗಾದಿಗೆ ವಾಪಸು ಬಂದರೆ, ಮತ್ತೆ ಕೆಲವು ತಂಡಗಳು ದೀಪಾವಳಿಯವರೆಗೂ ಇರುತ್ತವೆ. ಈ ಮಧ್ಯೆ ತಂಡದ ಸದಸ್ಯರು ಅವರ ಊರುಗಳಿಗೆ ಮಧ್ಯೆ ಮಧ್ಯೆ ಹೋಗಿ ಬರುತ್ತಿರುತ್ತಾರೆ. ಹಿಂದಿನ ಕಾಲದಲ್ಲಿ ವಾದ್ಯದವರು ಹೋಗುತ್ತಿದ್ದರು, ಈಗ ಬರೀ 'ಜುಂಜಪ್ಪನ ಬಸವನೋರೆ' ಹೋಗುತ್ತಾರೆ.

ಈ ಹಾಡುಗಾರರು ಹಳ್ಳಿಗಳ ಮೇಲೆ ಜುಂಜಪ್ಪನ ಒಕ್ಕಲು ಇರುವಲ್ಲಿ 'ಜುಂಜಪ್ಪನ ಕಾಣಿಕೆ'ಯೆಂದು ಹರಳು (ಔಡಲ), ಎಣ್ಣೆ, ಹಣ, ಭತ್ತೆಯನ್ನು ವಸೂಲು ಮಾಡಿ ಹೊಟ್ಟೆ ಹೊರೆಯುತ್ತಾರೆ.

ಹೀಗೆ ಒಕ್ಕಲ ಮೇಲೆ ಸಂಗ್ರಹಿಸಿದ್ದರಲ್ಲಿ ಒಂದು ಭಾಗವನ್ನು ದೇವರಿಗೆ ತೆಗೆದು, ಉಳಿದದ್ದನ್ನು ಅವರೇ ಹಂಚಿಕೊಳ್ಳುತ್ತಾರೆ. ಜನ ಜುಂಜಪ್ಪನಿಗೆ ಒಪ್ಪಿಸಿದ ಮೀಸಲು ಹಣ, ಹರಕೆಯ ಹಣ 'ಮುಟ್ಟುವುದಿಲ್ಲ', ತಂದು ದೇವರಿಗೆ ಒಪ್ಪಿಸುತ್ತಾರೆ.

9. ಮನೆಯ ಬಾಗಿಲಿಗೆ ತಾವಾಗಿ ಬರುವ ಹಸುಗಳಿಗೆ, ಹಸು ಮನೆ ಹೊಕ್ಕರೆ ಒಳ್ಳೆಯದೆಂದು ಭಾವಿಸಿ ಅವಕ್ಕೆ ನುಚ್ಚು ಮತ್ತು ಬೆಲ್ಲವನ್ನು ನೀಡುವ ಸಂಪ್ರದಾಯವನ್ನು ಕೆಲವರು ಇಂದಿಗೂ ಆಚರಿಸುವುದನ್ನು ನೋಡಬಹುದು.

ಇವರು 'ಕಳುವೋರಳ್ಳಿ ಜುಂಜಪ್ಪ, ಹಾಗಲವಾಡಿ ಜುಂಜಪ್ಪ' ಎಂದು ಹೇಳುತ್ತಾರಾದರೂ ಇವರಾರೂ ಆ ಸಾಂಸ್ಕೃತಿಕ ಕೇಂದ್ರಗಳಿಂದ ಹೊರಟ ಅಧಿಕೃತ ವ್ಯಕ್ತಿಗಳಲ್ಲ. ಹಾಗೆ 'ಕಾಣಿಕೆಗಾಗಿ ದೇಶಾಂತರ ಕಳಿಸುವ ಪದ್ಧತಿಯೂ ನಮ್ಮಲ್ಲಿಲ್ಲ. ಅವರು ಹೊಟ್ಟೆ ಹೊರಕರು' ಎಂಬ ಖಾರವಾದ ವಿವರಣೆಯನ್ನು ಈ ಕೇಂದ್ರಗಳ ಯಜಮಾನರು ಕೊಡುವುದರಿಂದ, ಇದೊಂದು ಸ್ವಯಂ ಪ್ರೇರಣೆಯಿಂದ ಹೊರಟ ಅಥವಾ ಜೀವನೋಪಾಯಕ್ಕಾಗಿ ಹೊರಟ ಜುಂಜಪ್ಪನ ಪ್ರಚಾರಕರ ತಂಡ ಎನ್ನಬಹುದು. ಜುಂಜಪ್ಪನ ಒಕ್ಕಲಿನವರೇ ವ್ಯವಸಾಯದ ಕೆಲಸಗಳಿಲ್ಲದೆ ಕೂತಾಗ, ಇಂಥ ತಂಡವೊಂದನ್ನು ಕಟ್ಟಿಕೊಂಡು ಗಣೆ ಊದುತ್ತಾ, ಜುಂಜಪ್ಪನ ಕತೆ ಹಾಡುತ್ತಾ, ಊರಾಡುತ್ತಾ ಹೊರಡುತ್ತಾರೆ. ಇಂಥ ತಂಡಗಳಲ್ಲಿ ಅದ್ಭುತವಾದ 'ಕಥೋಪಜೀವಿ'ಗಳು ಹುಟ್ಟಿಕೊಂಡು, ಉಪಜೀವನವಾಗಿದ್ದ ಕಸುಬು ಅರೆವೃತ್ತಿ ಮೇಳವಾಗಿ ಪರಿವರ್ತನೆಗೊಂಡುದೂ ಉಂಟು.[10] ಅರೆವೃತ್ತಿ ಕಲಾಮೇಳಗಳಲ್ಲಿ ರೂಪುಗೊಂಡ ಇಂಥ ತಂಡಗಳಲ್ಲಿ ಬರೀ ಜುಂಜಪ್ಪನ ಕತೆಯೊಂದನ್ನೇ ಅಲ್ಲದೆ ಎತ್ತಪ್ಪನ ಕತೆ, ಚಿತ್ತಯ್ಯನ ಕತೆ ಹೀಗೆ ಅವರ ಸುತ್ತಿನಲ್ಲಿ ಆಳಿ–ಬಾಳಿ ಬದುಕಿದ ಅನೇಕ ಗೋಪಾಲಕ ಜೀವಿಗಳನ್ನು (ಈರಗಾರರನ್ನು) ಕುರಿತು ಕಟ್ಟಿದ ಗಣೆಕತೆಗಳನ್ನೂ ಹಾಡುತ್ತಾರೆ. 'ಜುಂಜಪ್ಪನ ಗಣೆ' ಎಂದು ಹೆಸರಾದಂತೆ 'ಎತ್ತಪ್ಪನ ಗಣೆ'ಎಂದು ಹೆಸರಾಗಿಲ್ಲ.

ಈ ಬಸವಗಳನ್ನು ಬೇಸಾಯಕ್ಕೆ ಉಪಯೋಗಿಸುವುದಿಲ್ಲ. 'ಗರಿ' (ಹಸಿರು) ಕಾಲದಲ್ಲಿ ಹೊಲಗಳಿಗೆ ಬಿಟ್ಟರೆ ಯಾರೂ ತಕರಾರೂ ಮಾಡುವುದಿಲ್ಲ, ಆಗ ಬರೀ ಹುಲ್ಲಿನ ಗರಿಕೆಯ ತುದಿಯನ್ನಷ್ಟೇ ತಿನ್ನುತ್ತವೆ, ಆದರೆ 'ತೆನೆ' ಕಾಲದಲ್ಲಿ ಬಿಡುವುದಿಲ್ಲ.

ಒಕ್ಕಲಿನಿಂದ ಹಿಂದಕ್ಕೆ ಬಂದ ಮೇಲೆ (ಸೋಮವಾರದ ದಿನ) ತಾವು ಸ್ನಾನ ಮಾಡಿ, ಬಸವನ ಮೈ ತೊಳೆದು, ಪರುಷವ್ವನ ಕೆರೆಯಿಂದ ತಂದ ತೀರ್ಥವನ್ನು ಚಿಮುಕಿಸಿ, ಒಡವೆಯನ್ನು ಕಟ್ಟಿ ಎತ್ತಿಡುತ್ತಾರೆ. ಹಟ್ಟಿಗೆಲ್ಲ ತೀರ್ಥ ಹಾಕುತ್ತಾರೆ. ಈ ದೇವರಿಗೆಂದು ಕುರಿ, ಮೇಕೆ ಬಿಟ್ಟವರು ಅವನ್ನು ಇವರಿಗೆ ಒಪ್ಪಿಸಿದರೆ ಅವನ್ನು ಮಾರಿ, ಕಣ್ಣಿಗೆ ಬೇಕಾದ ಒಡವೆ ಮಾಡಿಸಿ ಬಸವನಿಗೆ ತೊಡಿಸುತ್ತಾರೆ. ಜುಂಜಪ್ಪನಿಗೆ ರಕ್ತಮುಖ ಆಗುವುದಿಲ್ಲವಾದ್ದರಿಂದ ಅವನ್ನು ಬಲಿ ಕೊಡುವುದಿಲ್ಲ.

10. ಹೀಗೆ ರೂಪಗೊಂಡ ಶಿರಾ ತಾಲ್ಲೂಕಿನ ದಿ. ಕುಂಬಾರಳ್ಳಿ ಸುಳ್ಳಜ್ಜ, ದಿ. ಓಜುಗುಂಟೆ ಮೂಡ್ಲಜ್ಜ ಎಂಬ 'ಕಥೋಪಜೀವಿ'ಗಳಿಂದ ನಾನು 'ಜುಂಜಪ್ಪನ ಗದ್ಯಕತೆ'ಯನ್ನು ಸಂಗ್ರಹಿಸಿದ್ದೇನೆ. ವೃತ್ತಿ ಕಲಾವಿದರ ನೈಪುಣ್ಯತೆ ಅವರ ಕಥನ ಕಲೆಯಲ್ಲಿದೆ.

'ಜುಂಜಪ್ಪನ ಬಸವ ಸಂಪ್ರದಾಯ'ವನ್ನು ಹೋಲುವ ಅಮೂಲ್ಯವಾದ ಮಾಹಿತಿಯನ್ನು ಅಬ್ಬೆ ಡುಬಾಯಿಸ್ ಹೀಗೆ ಕೊಡುತ್ತಾರೆ: "ಕೆಲವೊಮ್ಮೆ, ಕೊಂಬು, ಮೈಗಳನ್ನು ತುಂಬಾ ಸುಂದರವಾಗಿ ಅಲಂಕಾರ ಮಾಡಿದ ತಮ್ಮ ಬಸವಗಳೊಂದಿಗೆ ಶಿವಪೂಜಕರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಪ್ರಯಾಣ ಮಾಡುತ್ತಾರೆ. ವಾದ್ಯ ಬಾರಿಸುತ್ತಾ, ತರತರದ ಬಟ್ಟೆಗಳನ್ನು (ಬಾವುಟಗಳನ್ನು) ಹೊತ್ತು ಸಾಗುವ ಹಿಂಡು ಹಿಂಡು ಜನ ಇವರೊಂದಿಗಿರುತ್ತಾರೆ. ಈ ರೀತಿಯ ಪ್ರದರ್ಶನದ ನಿಜವಾದ ಉದ್ದೇಶ–ನಂಬಿದ ಭಕ್ತಾದಿಗಳಿಂದ ಭಿಕ್ಷೆ ಎತ್ತುವುದೇ ಆಗಿರುತ್ತದೆ. ಗುಂಪು ಗುಂಪಾಗಿ ಹಿಂಬಾಲಿಸುವ ಜನರ ಆಕಾಂಕ್ಷೆ ಕೂಡ ಆ ಪವಿತ್ರ ಬಸವನನ್ನು ಪೂಜಿಸುವುದೇ ಆಗಿರುತ್ತದೆ. ಈ ಜನ ಮೂಢನಂಬಿಕೆಯನ್ನು ಸಮರ್ಥಿಸುವಂತೆ, ಭಕ್ತಿಯ ಅಭಿವ್ಯಕ್ತಿ ಎಂಬಂತೆ ಪ್ರತಿಯೊಬ್ಬರೂ ಬಸವನನ್ನು ಹಣೆಗೆ ಒತ್ತಿಕೊಂಡು ನಮಸ್ಕಾರ ಮಾಡುತ್ತಾರೆ. ಈ ಪ್ರತಿಯೊಬ್ಬರೂ ಪೂಜಕನಿಗೆ ಅಷ್ಟೇ–ಇಷ್ಟೋ ಕಾಣಿಕೆ ಕೊಟ್ಟೇ ಕೊಡುತ್ತಾರೆ. ಆಮೇಲೆ ಪೂಜಕನು ಸಾಕಷ್ಟು ಕಾಣಿಕೆ ದೊರಕಿದೆ ಎನ್ನಿಸಿದಾಗ ತನ್ನ ಬಸವನನ್ನು ಹಗ್ಗ ಕಳಚಿ (ಸ್ವತಂತ್ರವಾಗಿ ಓಡಾಡಲು) ಬಿಟ್ಟು ಬಿಡುತ್ತಾನೆ.[11]

'ಕೋಲೆಬಸವ'ನವರ ಬಸವನ ವೇಷಭೂಷಣ ಜುಂಜಪ್ಪನ ಬಸವ ಸಂಪ್ರದಾಯದ ಬಸವನನ್ನೇ ಹೋಲುತ್ತದೆ. ಅಲ್ಲಿಯದು ಧಾರ್ಮಿಕ ಬದುಕಿನ ಅಂಗವಾದರೆ, ಕೋಲೆ ಬಸವನದು ಹೊಟ್ಟೆಪಾಡಿನ ಪ್ರದರ್ಶಕ ಕಲೆಯ ಅಂಗವಾಗಿದೆ. ರಾಮ–ಸೀತೆ ಮದುವೆ ಮುಂತಾದ ಆಟಗಳನ್ನೂ ಈ ಬಸವಗಳ ಮೂಲಕ ಆಡಿಸುತ್ತಾರೆ. ಇದು ಜುಂಜಪ್ಪನ ಬಸವ ಸಂಪ್ರದಾಯಕ್ಕಿಂತ ಪ್ರಾಚೀನವಾದ ಆಟದ ಕಲೆ ಎನಿಸುತ್ತದೆ.

ಮಂಟೇಸ್ವಾಮಿ ಸಂಪ್ರದಾಯದಲ್ಲೂ ಬಸವನಿಗೆ ತನ್ನದೇ ಆದ ಮಹತ್ವವಿರುವುದನ್ನು ಗುರುತಿಸಬಹುದು. ಸಿದ್ಧಪ್ಪಾಜಿ ಕ್ಷೇತ್ರವಾದ ಚಿಕ್ಕಲ್ಲೂರು ಬಳಿಯ ಕಾಡಿನ ನಡುವಿನ ತೋಪಿನಲ್ಲಿ ಜಾತ್ರೆಯಾಗುವಾಗ "ಇಲ್ಲಿಗೆ ಜಾತ್ರೆಯ ಸಲುವಾಗಿ ಬೊಪ್ಪಗೌಡನಪುರದಿಂದ ಬಸವನನ್ನು ಮುಂದೆ ಬಿಟ್ಟುಕೊಂಡು ಗುರುಗಳು ಬರಬೇಕು. ಇಲ್ಲಿನ ಜಾತ್ರೆ, ಸಿದ್ಧಪ್ಪಾಜಿ ಉತ್ಸವ ಮುಂತಾದವು ಮುಗಿದ ಮೇಲೆ ಬಸವ ಕಪ್ಪಡಿ ಕ್ಷೇತ್ರಕ್ಕೆ ಬರುತ್ತದೆ. ಕಪ್ಪಡಿಯ

---

11. "Priests of Shiva sometimes travel from district to district with those scared Bulls, whose horns and bodies are decorated with much taste. Large crowds accompany them, carrying flags of various colours and headed by bands of music. The real object of all this display is to collect alms from the faithful, an object which is invariably attained, for multitudes flock to worship the venerated animal, prostrating themselves before it with every absurd demonstration of devotiton that supertition can suggest, and one and all never forget to recompense the leader of the procession, who, when he thinks he has collected sufficient contributions was the sacred beast at liberty again." Abbe Dubois : Hindu manners, customs and ceremonies, 639

ಜಾತ್ರೆ ಒಂದು ತಿಂಗಳ ಕಾಲ ನಡೆಯುತ್ತದೆ. ಇದು ನಮ್ಮ ನಾಡಿನ ಜಾತ್ರೆಗಳಲ್ಲೆಲ್ಲಾ ಬಲು ದೊಡ್ಡದು. ರಾಚಪ್ಪಾಜಿಯವರ ಈ ಜಾತ್ರೆ ಮುಗಿಯುವುದರಲ್ಲಿ ಯುಗಾದಿ ಹತ್ತಿರವಾಗುತ್ತದೆ. ಇಲ್ಲಿಂದ ಬಸವ ಹೊರಟು ಮತ್ತೆ ಬೊಪ್ಪಗೌಡನಪುರವನ್ನು ಸೇರಬೇಕು. ಬೊಪ್ಪಗೌಡನಪುರದ ಸಮೀಪದಲ್ಲಿ ಮುಟ್ಟನಹಳ್ಳಿ ತೋಪು ಎಂಬ ಸ್ಥಳವಿದೆ. ಅಲ್ಲಿ ಕೊನೆಯ ಜಾತ್ರೆ ನಡೆಯುತ್ತದೆ" ಎಂದು ಜೀಶಂಪ ವಿವರಿಸುತ್ತಾರೆ.[12]

ಈ ಜುಂಜಪ್ಪನ ಬಸವ ಸಂಪ್ರದಾಯದೊಂದಿಗೇ 'ಗಣೆ ಸಂಪ್ರದಾಯ'ವೂ ತಳಕು ಹಾಕಿಕೊಂಡಿರುವುದನ್ನು ಕಾಣಬಹುದು.

ಈ ಬಸವ ತಂಡಗಳೊಂದಿಗೆ ಗಣೆ ಊದುವವರೂ ಮತ್ತು ಗಣೆಕತೆ ಹಾಡುವವರೂ, ವಿಶೇಷವಾಗಿ ಜುಂಜಪ್ಪನ ಕಥೆ ಹಾಡುವವರನ್ನು ಕರೆದುಕೊಂಡು ಹೋಗಿರುತ್ತಾರೆ. ಹಳ್ಳಿಗಳಲ್ಲಿ ರಾತ್ರಿ ನಿಂತಾಗ, ಸೇರಿದ ಒಕ್ಕಲಿಗೆ ಗಣೆಹಾಡಿನ ರೂಪದಲ್ಲಿ ಇಲ್ಲವೆ ಗದ್ಯಕತೆಯ ರೂಪದಲ್ಲಿ ಎತ್ತಪ್ಪ–ಜುಂಜಪ್ಪ ಸೇರಿದಂತೆ ಕಾಡುಗೊಲ್ಲರ ದೇವರುಗಳಾದ ಚಿತ್ತಯ್ಯ, ಕಾಟಯ್ಯ, ಈರಗಾರರನ್ನು ಕುರಿತ ಕತೆಗಳನ್ನು ಹೇಳುತ್ತಾರೆ. ಇಂಥ ಜುಂಜಪ್ಪನ ಬಸವ ತಂಡಗಳಲ್ಲಿ ಅಪೂರ್ವವಾದ ಕಥೆಗಾರರು ಹುಟ್ಟಿಕೊಂಡಿದ್ದಾರೆ. ದೈಹಿಕ ಶ್ರಮ ಮಾಡಿ, ದುಡಿದು ತಿನ್ನಲಾಗದ, ವಯಸ್ಸು ಕಳೆದ ಜನ ಈ ಬಗೆಯ ಕಥೆಗಳನ್ನು ಹೇಳುವುದೇ ವೃತ್ತಿ, ಅರೆವೃತ್ತಿ ಮಾಡಿಕೊಂಡವರಿದ್ದಾರೆ. ಹೀಗೆ ಹಾಡುವುದನ್ನೇ ಕಾಯಕ ಮಾಡಿಕೊಂಡ ಪರಂಪರೆಯನ್ನು 'ಕಥೋಪಜೀವಿಗಳು', 'ವೃತ್ತಿಗಾಯಕರು' ಎಂದು ಗುರುತಿಸಿದ ಕೀರ್ತಿ ಜೀಶಂಪ ಅವರಿಗೆ ಸಲ್ಲಬೇಕು. "ಯಾವುದೋ ಒಂದು ವಿಶಿಷ್ಟ ಮತದವರೋ, ಅಥವಾ ಯಾವುದೋ ದೈವದ ಆರಾಧಕರೋ, ಹಾಡುವುದನ್ನು, ಕಥೆ ಮಾಡುವುದನ್ನು, ವೃತ್ತಿಯಾಗಿ ಸ್ವೀಕರಿಸಿರುವವರು'[13] ಎಂದು ಅವರನ್ನು ವ್ಯಾಖ್ಯಾನಿಸುವುದು ಸಮರ್ಪಕವಾಗಿದೆ.

ಇಂತಹ ವೃತ್ತಿಗಾಯಕ ತಂಡಗಳನ್ನು ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲೂ ಕಾಣಬಹುದು. ಕನ್ನಡ ನಾಡಿನಲ್ಲೇ ಮಾದಪ್ಪನ ಪರಂಪರೆಗೆ ಸೇರಿದ 'ಕಂಸಾಳೆಯವರು', ಮಂಟೆಸ್ವಾಮಿ ಪರಂಪರೆಗೆ ಸೇರಿದ 'ನೀಲಗಾರರು', ಮೈಲಾರಲಿಂಗನ ಪರಂಪರೆಗೆ ಸೇರಿದ 'ಗೊರವಯ್ಯಗಳು, ಡೊಳ್ಳಿನವರು', ಎಲ್ಲಮ್ಮನ ಸಂಪ್ರದಾಯಕ್ಕೆ ಸೇರಿದ 'ಚೌಡಿಕೆಯವರು', ಲಂಬಾಣಿ ಸಂಸ್ಕೃತಿಯ 'ದಾಢಿ'ಗಳು ಮುಂತಾಗಿ ಇರುವ ಅನೇಕ ವೃತ್ತಿಗಾಯಕ ಪರಂಪರೆಗೆ ಕಾಡುಗೊಲ್ಲರ 'ಗಣೆ ಸಂಪ್ರದಾಯ'ದ ಕತೆಗಾರರೂ ಸೇರಿಕೊಳ್ಳುತ್ತಾರೆ. ಗಣೆಯವರಲ್ಲಿ ಬಹುಪಾಲು ಅರೆವೃತ್ತಿಗಾಯಕರೇ ಇದ್ದಾರೆ.

---

12. ಜೀ.ಶಂ.ಪ. : ಮಂಟೇಸ್ವಾಮಿಯ ನೀಲಗಾರರು, ಐಬಿಹೆಚ್ ಪ್ರಕಾಶನ, ಬೆಂಗಳೂರು, 1980, ಪು. 17.

13. ಜೀ.ಶಂ.ಪ. : ದ.ಕ.ಜ.ಕಾ. ಪು 63

## ಗಣೆ ಕಾವ್ಯ

ಈ ಎಲ್ಲ ಕಥಾ ಸಂಪ್ರದಾಯಗಳ, ಎಲ್ಲ ವಾದ್ಯಗಳ ಹಿನ್ನೆಲೆಯಲ್ಲಿ ಬಳಸುವ ಕಥನದ ತಿರುಳಿನ ಸ್ವರೂಪ ಮಾತ್ರ ಒಂದೇ ಆಗಿದೆ. ಇದು ಒಂದು ಬಗೆಯ ಪದ್ಯಗಂಧಿಯಾದ ಗದ್ಯ. ಕಾಡುಗೊಲ್ಲರ ಸಂಪ್ರದಾಯದಲ್ಲಿ ಇದನ್ನು 'ಗಣೆ ಕತೆ' (ಗಣೆ ಕಾವ್ಯ) ಎಂದು ಕರೆಯುತ್ತೇವೆ.

ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳಿಗೆ 'ಗಣೆ ಸಂಪ್ರದಾಯ'ವನ್ನು ಹೋಲಿಸಿದರೆ, ಅವೆಲ್ಲಕ್ಕಿಂತ ಭಿನ್ನವಾದ ಪಶುಪಾಲಕ ಸಂಸ್ಕೃತಿಯ ಕತೆಗಳನ್ನೊಳಗೊಂಡ 'ಗಣೆ ಪ್ರಕಾರ' ಪದ್ಯಗಂಧಿಯಾದ ಗದ್ಯ. ಈ ಗದ್ಯದ ಬೆಡಗು ಹರಿಹರನ ಸರಳ ರಗಳೆಯನ್ನು ನೆನಪಿಗೆ ತರುತ್ತದೆ. ಅಲ್ಲಲ್ಲಿ ಪೂರ್ಣ ಗದ್ಯವಾಗಿ ಮತ್ತೆ ರಸಮಯ ಪ್ರಕರಣ ಬರುತ್ತಲೇ ಸಹಜ ಕಾವ್ಯದಿಂದ ಮಿಂಚುವ ಈ ಪ್ರಕಾರ ಚಂಪೂ ಶೈಲಿಯನ್ನು ಹೋಲುತ್ತದೆ. ಕತೆಯ ಉದ್ದಕ್ಕೂ ಸಿದ್ಧ ನುಡಿಗಟ್ಟುಗಳು ಮಿಂಚುತ್ತವೆ. 'ಬೆಲ್ಲ ಬೇಯೋವತ್ತು, ಹರಿಯೋ ಗಂಗಮ್ಮ ನಿಂತು ನಿದ್ದೆ ಮಾಡೋವತ್ತು, ಪಕ್ಷಿ ಜಲಪಲಾಡೊವತ್ತು, ಎದೆಯ ಮ್ಯಾಗಳ ಪುಷ್ಪ ಅರಳೋವತ್ತು'; 'ಮುಡಿಗೆ ಮುನ್ನೂರುಬಾಣ, ನಡುವಿಗೆ ನಾನೂರು ಬಾಣ, ದೊಕ್ಕೆಗೆ ಐನೂರು ಬಾಣ, ಅಂಗೈಲಿ ಹಾವಿನ ಬಾಣ, ಮುಂಗೈಲಿ ಚೇಳಿನ ಬಣ, ನೆತ್ತೀಲಿ ನೆತ್ತರ ಬಾಣ ಧರಿಸಿ', 'ಕೆಸರಲ್ಲಿ ಉಟ್ಟಿದೋನೆ ದಸರುಗೊಂಬಿನ ಬಟ್ಟಣ್ಣ, ನೀರಾಗುಟ್ಟಿದೋನೆ ಲೋಲಪರದೇಶಿ ಬಟ್ಟಣ್ಣ, ಕೊಂಬೀಲಿ ಗಂಭೀರ, ನಾಲಗೇಲಿ ನಕ್ಷತ್ರ, ಬಾಲದಲಿ ಬಲವಂತ, ಕಡುಚೆಲುವ ಬಟ್ಟಣ್ಣ', 'ನಾಗರಾವಿನ ಗಂಡ, ನಾಕುಲೋಕದ ಮಿಂಡ, ಬೂದಿಮುಚ್ಚಿದ ಕೆಂಡ, ಭೂಲೋಕದುದ್ದಂಡ, ದರುಶದ ದಬ್ಬೇಳು ಪಾಳೇಗಾರರಿಗೆಲ್ಲ ಗಂಡ', ಹೀಗೆ ಇವುಗಳು ಅಲ್ಲಲ್ಲಿ ಪ್ರಾಸದಿಂದ, ಲಯದಿಂದ ಕಂಗೊಳಿಸಿ ಕಾವ್ಯಾನುಭೂತಿಯನ್ನು ಉಂಟು ಮಾಡುತ್ತವೆ.

ಗಣೆ ಕಾವ್ಯ ಶಿವಶರಣರ ವಚನದ ಸರಳ, ಸುಂದರ ಅನುಭವ ನೀಡುತ್ತದೆ. ಶಿಷ್ಟಕಾವ್ಯದ ಯಾವ ಆಡಂಬರ, ಅಬ್ಬರಗಳಿಲ್ಲದ ಈ ಗಣೆಕಾವ್ಯ ವಚನಾನುಭೂತಿಯನ್ನು, ಹೃದಯ ಕರಗಿಸುವ ಆದ್ರತೆಯನ್ನು ಉಂಟು ಮಾಡುತ್ತದೆ. ಗಣೆಕಾವ್ಯದ ಹಾಡಿಕೆ ಗಮಕಶೈಲಿಯ ಹಾಡಿಕೆಯನ್ನು ಹೋಲುತ್ತದೆ. ಇದನ್ನು 'ಜನಪದ ಗಮಕ ಶೈಲಿ' ಎನ್ನಬಹುದು. ಶಿಷ್ಟಸಾಹಿತ್ಯದಲ್ಲಿನ ಅಚ್ಚಕನ್ನಡ ಛಂದೋಶೈಲಿಯಲ್ಲಿಯ ಸರಳ, ಸುಂದರ, ಹೃದಯವನ್ನು ಮುಟ್ಟುವ ಅನುಭವವನ್ನೇ ಈ ಜನಪದ ಕಾವ್ಯ–ಗಣೆಕಾವ್ಯ ನೀಡುತ್ತದೆ.

ಕೆಲವು ಹಾಡುಗಾರರ ಗಣೆಕಾವ್ಯಗಳು ತೀರ ಗದ್ಯಮಯವಾಗಿ ತೀವ್ರತೆಯನ್ನು ಕಳೆದುಕೊಂಡು ಪೇಲವವಾದ ಅನುಭವವನ್ನು ಕೊಟ್ಟರೆ, ಮತ್ತೆ ಕೆಲವು ಹಾಡುಗಾರರ ಗಣೆಕಾವ್ಯಗಳು ಕಾವ್ಯಾನುಭವದ ತೀವ್ರತೆಯನ್ನು ನೀಡುತ್ತವೆ.

ಈ ಹಿನ್ನೆಲೆಯಲ್ಲಿ ಗಣೆಕಾವ್ಯದ ಕೆಲವು ತುಣುಕುಗಳನ್ನು ನೋಡಬಹುದು– 'ಆವಿನ ಗೂಡಿನಾಗೆ, ದೇವರ ಬೆರಗಿನಾಗೆ, ಸೊಪ್ಪಿನುಕ್ಕಡದಾಗೆ, ಪಚ್ಚೇದ ತೆನೆಯಾಗೆ ಸತ್ಯವಂತ ಮಲಗಿದಾನೋ ಮಲೆಗೊಂಡೋ', 'ಮುಂದೆ ನಡಿಯೋವು ಮುನ್ನೂರು ಸಾವಿರ, ಹಿಂದೆ ನಡೆಯೋವು ಇನ್ನೂರು ಸಾವಿರ, ದಬ್ಬೇಳು ಸಾವಿರದ ದೇವಗಂಪಳದೆತ್ತು', 'ಮೂವರಿಂದೆ ಒಂದು ಹೆಣ್ಣು ಹುಟ್ಟೈತೆ, ಹೆಣ್ಣಿಂದ ಮಣ್ಣಮ್ಮ, ಮಣ್ಣಿಂದ ಮಲಿಗೊಂಡಗೆ ಮರಣ ತಪ್ಪದಲ್ಲೋ.'

ಕಾಡುಗೊಲ್ಲರ ಅನೇಕ ಈರಗಾರರನ್ನು ಕುರಿತ ಗಣೆಕತೆಗಳು ನಮ್ಮಲ್ಲಿ ಹಾಡಲ್ಪಡುತ್ತಿದ್ದರೂ, ಗಣೆ, ಗಣೆಕತೆಗೆ ಒಂದು ರೀತಿಯ ಖ್ಯಾತಿ ಬಂದಿರುವುದು ಜುಂಜಪ್ಪನ ಕತೆಯಿಂದಲೇ, ಜುಂಜಪ್ಪನ ಕಥೆಯನ್ನು ಹಾಡುವ ಕಥೋಪಜೀವಿಗಳಿಂದಲೇ, ಜೊತೆಗೆ ಗಣೆಯನ್ನು ಜುಂಜಪ್ಪನೆಂದು ವೈಭವೀಕರಿಸಿರುವುದರಿಂದ ಇದು 'ಜುಂಜಪ್ಪನ ಗಣೆ'ಯೂ ಆಗಿದೆ. ಜುಂಜಪ್ಪ–ಎತ್ತಪ್ಪನವರ ಕತೆಯಲ್ಲದೆ ಅನೇಕ ಈರಗಾರರನ್ನು ಕುರಿತು ಹಾಡುವ ವೃತ್ತಿಪರವಲ್ಲದ ಹವ್ಯಾಸಿ ತಂಡಗಳು, ಹಟ್ಟಿಹಟ್ಟಿಯಲ್ಲೂ ದೊರೆಯುತ್ತವೆ. ಆದರೆ ಜುಂಜಪ್ಪನ ಕತೆ, ಎತ್ತಪ್ಪನ ಕತೆ ಹಾಡುವ ಅರೆ ವೃತ್ತಿಶೀಲ ಹಾಡುಗಾರರ ವೈಶಿಷ್ಟ್ಯವೇ ಬೇರೆಯಾಗಿದ್ದು ಅದನ್ನು ವಿವರವಾಗಿ ಪರಿಶೀಲಿಸಬಹುದು.

ಮಾದಯ್ಯ, ಮಂಟೇಸ್ವಾಮಿ, ಮೈಲಾರಲಿಂಗ, ಎಲ್ಲಮ್ಮನ ಕತೆಗಳ ಒಳ ತಿರುಳು ಮತ್ತು ಕಥಾ ಹಂದರವೇ ಕಾಡುಗೊಲ್ಲರ ಪಶುಪಾಲಕ ಕೃಷಿ ಸಂಸ್ಕೃತಿಯ ಕಥಾ ಹಂದರಕ್ಕಿಂತ ಭಿನ್ನವಾಗಿದ್ದು; ಆ ಸಂಪ್ರದಾಯದ ಪ್ರದರ್ಶಕ ಕಲೆಗಳಿಗಿಂತ ಗಣೆ ಹಾಡುಗಾರಿಕೆ ಭಿನ್ನವಾಗಿದೆ.

ಮಾದಯ್ಯನ ಕಂಸಾಳೆ, ಎಲ್ಲಮ್ಮನ ಚೌಡಿಕೆ ಸಂಪ್ರದಾಯದಲ್ಲಿರುವಂತೆ ವಿವಿಧ ಗತಿಯ ಮನಸೆಳೆಯುವ ಹಾಡಾಗಲೀ, ವೈವಿಧ್ಯಮಯ ಕುಣಿತಗಳ ವೈಚಿತ್ರವಾಗಲಿ, ಕಿವಿಗಡಚಿಕ್ಕುವ ವಾದ್ಯಗಳ ಹೋರಾ(ಜೋರಾ)ಗಲಿ ಗಣೆ ಸಂಪ್ರದಾಯದಲ್ಲಿ ಇಲ್ಲ. ಹೀಗಾಗಿ ಪ್ರದರ್ಶಕ ಕಲೆಯಾಗಿ ಗಣೆಪದ ಅವುಗಳಷ್ಟು ಯಶಸ್ವಿಯಲ್ಲವೆನಿಸುತ್ತದೆ. ಗಣೆಯ ನಾದ ಕೂಡ ಸೌಮ್ಯವಾದದ್ದು, ಮಧುರವಾದದ್ದು. ಅದನ್ನು ಎಷ್ಟು ಎತ್ತಿ ನುಡಿಸಿದರೂ ಒಂದು ರೀತಿಯ ಸೌಮ್ಯ, ಸಾತ್ವಿಕ, ಮುಗ್ಧ, ಪ್ರಾಮಾಣಿಕ, ಸರಳ ಕತೆಗಷ್ಟೆ ಹೊಂದಿಕೆಯಾಗುವಂತಿದೆ. ಗಣೆಯ ನುಡಿಸುವಿಕೆಯಲ್ಲೂ ಹೆಚ್ಚಿನ ವೈವಿಧ್ಯಗಳನ್ನು ತರಲು ಸಾಧ್ಯವಿಲ್ಲ. ಸ್ವಲ್ಪ ಹೊತ್ತು ಕೇಳುತ್ತಾ ಹೋದರೆ ನುಡಿತದ ಏಕತಾನತೆ ನಮ್ಮನ್ನು ಕಾಡಿದರೆ ಆಶ್ಚರ್ಯವಿಲ್ಲ. ಬಹಳವೆಂದರೆ ಹಾಡುಗಾರ ತನ್ನ ಧ್ವನಿಯ ಏರಿಳಿತವು, ನಾಟಕೀಯ ಹಾಡಿಕೆಯಿಂದ ಮಾತ್ರ 'ಗಣೆಪದ'ಕ್ಕೆ ಗತ್ತು ತರಬಲ್ಲ. ಹೀಗಾಗಿ ಕಥೆಯತ್ತ ಗಮನವನ್ನು ಸೆಳೆಯಲು, ಕತೆಯ ಕೇಂದ್ರದ ಸುತ್ತಲೇ ನಮ್ಮನ್ನು ಹರಿದಾಡಲು ಬಿಡುತ್ತಲೇ ಒಂದು ರೀತಿಯ ಮೋಹಕತೆಯಿಂದ ಕಟ್ಟಿಹಾಕುತ್ತದೆ. 'ಗಣೆಪದ'ದಲ್ಲಿ ಹೆಚ್ಚಿನ ಹಾವ–ಭಾವಗಳಿಗೂ ಅವಕಾಶವಿಲ್ಲ. ಕರಿಯ ಕಂಬಳಿ ಗದ್ದಿಗೆ ಮೇಲೆ ಕೂತು

ಗಣೆಯೂದುವವನು ಪದದ ಏರಿಳಿವುಗಳಿಗೆ ಅನುಗುಣವಾಗಿ ಮಧುರವಾದ ಧ್ವನಿ ಹೊರಡಿಸುವಲ್ಲಿ ನಿರತನಾದರೆ, ಪದಗಾರ ಕಣ್ಣುಮುಚ್ಚಿ ಎರಡು ಕೈಗಳನ್ನು ಮಡಚಿ ಕಿವಿ ಮುಚ್ಚಿ ಹಾಡತೊಡಗಿದನೆಂದರೆ ಪ್ರಪಂಚವನ್ನೇ ಮರೆತುಬಿಡುತ್ತಾನೆ. ಗಣೆಯ ಗುಂಗಿನ ಗುನುಗುನು ನಾದದಲ್ಲಿ ತೇಲುತ್ತಾ ನಾವು ಕಣ್ಣು ಮುಚ್ಚಿದರೆ (ಕಣ್ಣುಬಿಟ್ಟು ನೋಡುವಂಥದು ಏನೂ ಇರುವುದಿಲ್ಲ). ಇದೊಂದು 'ಶ್ರವ್ಯಕಲೆ'ಯಾಗಿ ಬಿಡುತ್ತದೆ. ಹೀಗಾಗಿ ಗಣೆ ಪ್ರಕಾರದಲ್ಲಿ ಕಥೆಗೇ ಒತ್ತು ಜಾಸ್ತಿ. ಹೀಗಾಗಿ ಪ್ರದರ್ಶನ ದೃಷ್ಟಿಯಿಂದ ಬೇರೆ ಕಲೆಗಳಿಂದ ರಂಗು ಏರಿದಂತೆ, ಗಣೆಪದದಲ್ಲಿ ರಂಗು ಏರಲಾರದು. ಕಂಸಾಳೆ, ಚೌಡಿಕೆ ಕಲೆಯಲ್ಲಿ ಹೆಚ್ಚಿನ ಸಂಖ್ಯೆ ಕಲಾವಿದರು ಭಾಗವಹಿಸಲು ಅವಕಾಶವಿದ್ದರೆ; ಗಣೆ ಕಲೆಯಲ್ಲಿ ಇಬ್ಬರಿಗೆ ಮಾತ್ರ ಅವಕಾಶ–ಒಬ್ಬ ಹಾಡುವವ, ಇನ್ನೊಬ್ಬ ಊದುವವ. ಕಂಸಾಳೆ, ನೀಲಗಾರ, ಎಲ್ಲಮ್ಮನ ಕಲಾವಿದರಂತೆ ವರ್ಣಮಯ ಉಡುಪು ಕೂಡ ಈ ಕಲೆಗೆ ಇರುವುದಿಲ್ಲ; ತಮ್ಮ ಎಂದಿನ ಸಹಜ ಉಡುಗೆ–ತೊಡುಗೆಗಳಲ್ಲೇ ಈ ಕಲೆಯ ಪ್ರದರ್ಶನ ನೀಡಬಹುದಾದ್ದರಿಂದ ಕಣ್ಣುಗಳಿಗೆ ಆಕರ್ಷಕವೂ ಅಲ್ಲ. ಹೀಗಾಗಿ ವರ್ಣಮಯ ಉಡುಗೆ–ತೊಡುಗೆ ಇಲ್ಲದ, ವಾದ್ಯಗಳ ಆರ್ಭಟ ಇಲ್ಲದ, ಕ್ವಚಿತ್ತಾದ ನಾಟಕೀಯ ಸಂಭಾಷಣಾ ಸಾಧ್ಯತೆಗಳು ಇರುವುದನ್ನು ಬಿಟ್ಟರೆ, ಕುಣಿತ, ಹಾವ–ಭಾವಗಳಿಗೆ ಅವಕಾಶವೇ ಇಲ್ಲದೆ ಸದ್ದಿಲ್ಲದೆ ಮೂಲೆಯಲ್ಲಿ ಕೂತು ಕೇಳುವ ಕಥನಕಲೆ ಇದಾಗಿದೆ. ಆದರೆ ಬೇರೆ ಕಲೆಗಳು ಹುಟ್ಟಾ ಪ್ರದರ್ಶಕ ಕಲೆಗಳೇ ಆಗಿದ್ದು, ಜನತೆಯ ನಿರೀಕ್ಷೆಗಳಿಗನುಗುಣವಾಗಿ ತಮ್ಮ ಪ್ರದರ್ಶಕ ಸಾಧ್ಯತೆಗಳನ್ನು ವಾದ್ಯ, ಹಾವ–ಭಾವ, ಕುಣಿತ, ನಾಟಕೀಯ ಸಂಭಾಷಣೆಗಳ ಮೂಲಕ ಹೆಚ್ಚಿಸಿಕೊಂಡವು. ಕಾಡುಜನಗಳ ಈ ಗಣೆಕಾವ್ಯಕ್ಕೆ ಸಾರ್ವಜನಿಕ ಶ್ರೋತೃಗಳೇ ಇಲ್ಲವೆಂದ ಮೇಲೆ ಇದು ಪ್ರದರ್ಶಕ ಕಲೆಯ ಗುಣಗಳನ್ನು ಮೈಗೂಡಿಸಿಕೊಳ್ಳಲು ಸಾಧ್ಯವಾಗಲೇ ಇಲ್ಲ.

ಕಂಸಾಳೆ, ನೀಲಗಾರರು, ಎಲ್ಲಮ್ಮನವರಿಗೆ ಇರುವಂತೆ ಯಾವ ದೀಕ್ಷೆಯ ಸಂಪ್ರದಾಯವೂ ಇಲ್ಲದ ಗಣೆ ಸಂಪ್ರದಾಯಕ್ಕೆ ಕಲಿಯಲೇಬೇಕಾದ ಅನಿವಾರ್ಯತೆ ಇರುವ ಕಲಾವಿದ ವರ್ಗ ಇಲ್ಲದುದರಿಂದ ಈ ಸಂಪ್ರದಾಯದ ಮುಂದುವರಿಕೆಯ ಸಾಧ್ಯತೆಗಳು ಬಹಳ ಮಸುಕಾಗಿವೆ. ಬೇರೆ ಪ್ರಕಾರಗಳಲ್ಲಿ ಕಲಾವಿದ ಉಳಿದರೆ ಕಲೆ ಉಳಿಯುತ್ತದೆ ಎಂಬ ಪರಿಸ್ಥಿತಿ ಇದ್ದರೆ; ಇಲ್ಲಿ (ಈ ಕಲೆಗಾಗಿ ಅರ್ಪಿಸಿಕೊಂಡ) ಕಲಾವಿದನೇ ಇಲ್ಲವೆಂದ ಮೇಲೆ ಕಲೆ ಉಳಿಯುವುದಾದರೂ ಹೇಗೆ ? ಬೇರೆ ಕಲಾಪ್ರಕಾರಗಳಲ್ಲಿಯಂತೆ ಇದನ್ನು ಪೂರ್ಣ ಪ್ರಮಾಣದ ವೃತ್ತಿ ಮಾಡಿಕೊಂಡವರಿಲ್ಲ. ಅಷ್ಟೋ ಇಷ್ಟೋ ಜಮೀನು ಇಟ್ಟುಕೊಂಡ ಜನ, ಕೆಲಸವಿಲ್ಲದ ಕಾಲದಲ್ಲಿ ಇದನ್ನೊಂದು ಉಪವೃತ್ತಿಯನ್ನಾಗಿ ಮಾಡಿಕೊಂಡು ಮತ್ತೆ ಮಳೆ ಬರುತ್ತಲೇ ತಮ್ಮ ಮೂಲ ವೃತ್ತಿಯತ್ತ ಮರಳಿ ಬರುತ್ತಾರೆ. ಕಲೆಯ ಭವಿಷ್ಯ ತನ್ನದೇ ಸಾಂಸ್ಕೃತಿಕ ಸಮಸ್ಯೆಗಳಿಂದ ತೂಗುಯ್ಯಾಲೆಯಲ್ಲಿದೆ.

ಕಾಡುಗೊಲ್ಲರ ವಿಶಿಷ್ಟ ಕಥನ ಸಂಪ್ರದಾಯವಾದ 'ಗಣೆಪದ'ವನ್ನು ಬೇರೆ ವಾದ್ಯಗಳ ಹಿನ್ನೆಲೆಯಲ್ಲಿ ಹಾಡುವ ಮೂಲಕ ಹೊಸ ಸಾಧ್ಯತೆಗಳನ್ನು ತೆರೆಯಬಹುದೇ ಎಂಬುದನ್ನು ಆಲೋಚಿಸಿದರೂ ಭವಿಷ್ಯ ಆಶಾದಾಯಕವಾಗಿ ಕಾಣುತ್ತಿಲ್ಲ. ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಶಿವಪುರದ ಹಟ್ಟಿಯ ಸೂರಪ್ಪ ಎಂಬ ಕಲಾವಿದ ಜುಂಜಪ್ಪನ ಕಥೆಯನ್ನು ಗಣೆ ಇಲ್ಲದೆ ಹಾಡುವ ಪ್ರಯತ್ನ ಮಾಡಿದ್ದಾನೆ. ಈತ ಶ್ರುತಿಗೆ ತಂಬೂರಿ ಬಳಸಿಕೊಂಡು, ತಾಳ ಮತ್ತು ದಮ್ಮಡಿ(ಢಕ್ಕಿ)ಯನ್ನು ಬಳಸಿಕೊಂಡು ಹಾಡಿದ್ದರೂ, ಗಣೆಯ ಧಾಟಿಗಿಂತ ಭಿನ್ನವಾದ ಹೆಚ್ಚಿನ ರಂಗನ್ನು ತುಂಬಲು ಸಾಧ್ಯವಾಗಿಲ್ಲ. ಈ ಕಥನ ಪ್ರಕಾರದ ಮರುಹುಟ್ಟಿನ ಸಾಧ್ಯತೆಗಳನ್ನು ಕಾಲವೇ ಹೇಳಬೇಕಿದೆ.

## ಗಣೆ ಕಾವ್ಯ ಸಮೀಕ್ಷೆ

ಈ ಸಂಗ್ರಹಕ್ಕೋಸ್ಕರ ಆಯ್ದು 'ಗಣೆ ಪದಗಳು' ಕುರಿತು ಕೆಲವು ಮಾತುಗಳು. ಗಣೆಪದ ಜನಪದ ಸಾಹಿತ್ಯದ ಒಳ ವಿಭಾಗಗಳಲ್ಲಿ ಒಂದು. ಆದರೆ ಇಲ್ಲಿಯವರೆಗೆ ಪ್ರಕಟವಾದ ಯಾವ ಕೃತಿಯೂ ಇದನ್ನು ಈ ಶೀರ್ಷಿಕೆಯ ಕೆಳಗೆ ಗುರುತಿಸದೆ, ಕೇವಲ 'ಲಾವಣಿ' ಪ್ರಕಾರ ಎಂದೇ ಕರೆದಿದ್ದಾರೆ. ಹಾಗೂ ಈ ಪ್ರಕಾರದಲ್ಲಿ ಪ್ರಕಟವಾದ ಕೃತಿಗಳ ಸಂಖ್ಯೆ ಕೂಡಾ 6–7 ದಾಟುವುದಿಲ್ಲ. ಹೀಗಾಗಿ ಇದೊಂದು ಅಪರೂಪದ ಪ್ರಕಾರ. ಕನ್ನಡದಲ್ಲಿ ಸಾಕಷ್ಟು ಜನಪದ ಸಾಹಿತ್ಯ ಪ್ರಕಟವಾಗಿದ್ದರೂ 1973 ರವರೆಗೂ ಈ ಪ್ರಕಾರದ ಒಂದೇ ಒಂದು ಪದ್ಯವು ಪ್ರಕಟವಾಗಿರಲಿಲ್ಲ. ಜನಪದ ಸಾಹಿತ್ಯವೆಂದರೆ ಅದೇನಿದ್ದರೂ ತ್ರಿಪದಿ ಎಂದೇ ತಿಳಿದ ಕಾಲಘಟ್ಟವೊಂದಿತ್ತು. ಹಾಡಿನ ಬೇರೆ ಪ್ರಕಾರಗಳ ಕಡೆ ಸಂಗ್ರಾಹಕರ ಗಮನ ಹರಿದೇ ಇರಲಿಲ್ಲ.

ಗಣೆಪದ–ಕಾವ್ಯಪ್ರಕಾರ ಕಾಡುಗೊಲ್ಲ ಬುಡಕಟ್ಟಿನಲ್ಲಿ ಮಾತ್ರ ಕಂಡುಬರುವ, ಅವರ ಸಾಂಸ್ಕೃತಿಕ ಅನನ್ಯತೆಯನ್ನು ಬಿಂಬಿಸುವ ಕಥನ ಕಾವ್ಯವಾಗಿದ್ದು, ಅವರು ಸಾಗಿ ಬಂದ ಇತಿಹಾಸದ ನೆನಪುಗಳ ದಾಖಲೆಯಾಗಿದೆ. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳ ಅಧ್ಯಯನ ಮಾಡಿದ ಜೀಶಂಪ ಅವರು ಇದನ್ನು 'ವೃತ್ತಿಗಾಯಕ ಪರಂಪರೆ'ಯ ಹಿನ್ನೆಲೆಯಲ್ಲಿ 'ಜುಂಜಪ್ಪನ ಸಂಪ್ರದಾಯ'ವೆಂದು ಮೊದಲು ಗುರುತಿಸಿದರು. ಆದರೆ ಅವರು ಯಾವುದೇ 'ಗಣೆಪದ'ಗಳನ್ನು ಪ್ರಕಟಿಸಲಿಲ್ಲ. ನಂತರ ಕಾಡುಗೊಲ್ಲರ ಸಂಪ್ರದಾಯ–ನಂಬಿಕೆಗಳ ಬಗ್ಗೆ ಪಿಎಚ್.ಡಿ. ಅಧ್ಯಯನ್ನು ಕೈಗೊಂಡ ತೀ.ನಂ. ಶಂಕರನಾರಾಯಣರೂ ಈ ಬಗೆಯ ಪದ್ಯಪ್ರಕಾರವನ್ನು ಪ್ರಕಟಿಸಲಿಲ್ಲ. ನಂತರ ಕಾಡುಗೊಲ್ಲರ ಹಟ್ಟಿಯೊಂದನ್ನು ಕುರಿತು ಡಾಕ್ಟರೇಟ್ ಅಧ್ಯಯನ ನಡೆಸಿದ ಕಾಳೇಗೌಡ ನಾಗವಾರ ಅವರ ಅಧ್ಯಯನದಲ್ಲೂ ಈ ಪ್ರಕಾರದ ಸುಳಿವಿಲ್ಲ. ಕಾಡುಗೊಲ್ಲರಿಂದ ಸಾಕಷ್ಟು ಪದ್ಯ ಸಾಹಿತ್ಯವನ್ನು ಸಂಗ್ರಹಿಸಿದ್ದ ಕ.ರಾ.ಕೃ., ಅಂಬಳಿಕೆ ಹಿರಿಯಣ್ಣ, ಕಾಳೇಗೌಡ ನಾಗವಾರ, ಹನೂರು ಅವರ ಪದ್ಯಸಂಗ್ರಹಗಳಲ್ಲೂ ಈ ಪ್ರಕಾರದ ಒಂದು ತುಣುಕೂ ಪ್ರಕಟವಾಗದಿರುವುದು ಗಮನಾರ್ಹ.

ನಾನು ಕಾಡುಗೊಲ್ಲ ಸಾಂಸ್ಕೃತಿಕ ವೀರರನ್ನು ವಿಶೇಷವಾಗಿ (ಎತ್ತಪ್ಪ–ಜುಂಜಪ್ಪನವರ ಬಗ್ಗೆ) ಕುರಿತ ಮಹಾಪ್ರಬಂಧಕ್ಕಾಗಿ ಕ್ಷೇತ್ರಕಾರ್ಯ–ಅಧ್ಯಯನದಲ್ಲಿ ತೊಡಗಿದ್ದಾಗ (1985–95) ಜನಪದ ಸಾಹಿತ್ಯ ಸಂಗ್ರಾಹಕರು ಈ ಪ್ರಕಾರದ ಬಗ್ಗೆ ತಳೆದ ನಿರ್ಲಕ್ಷ್ಯ ನನ್ನ ಗಮನಕ್ಕೆ ಬಂತು. ನಾನು ಆ ವೀರರ ಕಥನಗಳ ಮೂಲಕವೇ ಅಧ್ಯಯನಕ್ಕೆ ತೊಡಗಿದ್ದರಿಂದ ಅಲ್ಲಿಯವರೆಗೂ ದಾಖಲಾಗದ 40ಕ್ಕೂ ಹೆಚ್ಚು ಈರಗಾರರನ್ನು ಕುರಿತ ಗಣೆಕಥೆಗಳನ್ನು ಸಂಗ್ರಹಿಸಿದಾಗ (ಇದುವರೆವಿಗೂ ನಾನೂ ಗಣೆಪದಗಳನ್ನು ಪ್ರಕಟಿಸಲು ಸಾಧ್ಯವಾಗಿಲ್ಲ) ಅದು ಬೇರೆಲ್ಲ ಪದ್ಯ ಪ್ರಕಾರಗಳಿಗಿಂತ ಭಿನ್ನ ಎಂಬುದು ನನ್ನ ಅರಿವಿಗೆ ಬಂತು. ಅದು ಅತ್ತ ಶುದ್ಧ ಪದ್ಯವೂ ಅಲ್ಲದ, ಗದ್ಯವೂ ಅಲ್ಲದ ಸರಳ ರಗಳೆ–ವಚನವನ್ನು ಹೋಲುವ ಗದ್ಯ ಪ್ರಕಾರವಾಗಿದ್ದು. ಈ ಬಗೆಯ ಗಪದ್ಯ ಪ್ರಕಾರ ನಮ್ಮ ಅನೇಕ ಬೇರೆ ಬೇರೆ ಗಾಯಕ ಸಂಪ್ರದಾಯಗಳಲ್ಲಿದ್ದರೂ, ಒಂದೊಂದರ ಹಾಡಿಕೆಯ ಧಾಟಿಯೂ ಒಂದಕ್ಕಿಂತ ಒಂದು ಭಿನ್ನವಾಗಿತ್ತು, ಅವುಗಳ ಸಂಪ್ರದಾಯಗಳೇ ಬೇರೆಯಾಗಿದ್ದವು. ಹೀಗಾಗಿ ಈ ಗಪದ್ಯ ಪ್ರಕಾರಗಳ ಹಾಡಿಗೆ ಶೃತಿಯಂತೆ ಹಿನ್ನೆಲೆಯಾಗಿ ಬಳಸುವ ವಾದ್ಯವನ್ನೇ ಆಧರಿಸಿ ಅವುಗಳಿಗೆ ಕಂಸಾಳೆ ಕಾವ್ಯ, ನೀಲಗಾರರ ಕಾವ್ಯ, ಚೌಡಿಕೆ ಕಾವ್ಯ, ಡೊಳ್ಳು ಕಾವ್ಯ ಎಂಬುದಾಗಿ ಕರೆದೆ. ಇದೇ ಹಿನ್ನೆಲೆಯಲ್ಲಿ ಕಾಡುಗೊಲ್ಲರ ಈ ಕಥನಗೀತೆಗಳಿಗೆ 'ಗಣೆಪದ' ಎಂದು ಮೊದಲ ಬಾರಿಗೆ ಕರೆದು, ಅದರ ಹಿನ್ನೆಲೆ, ಕಾವ್ಯದ ವೈಶಿಷ್ಟ್ಯಗಳನ್ನು ಕುರಿತು ನನ್ನ ಅಧ್ಯಯನ ಸಂದರ್ಭದಲ್ಲಿ (1995) ವ್ಯಾಪಕವಾಗಿ ಚರ್ಚಿಸಿದ್ದೇನೆ. ನಂತರ ಇದು ನನ್ನ ಮಹಾಪ್ರಬಂಧ (2005)ದಲ್ಲಿ ಪ್ರಕಟವಾಯಿತು. (ಈ ಸಂಗ್ರಹಕ್ಕೆ ಬರೆದ ಪ್ರಸ್ತಾವನೆಯಲ್ಲಿ ವಿವರಿಸಿರುವ ಗಣೆ–ಬಸವ ಸಂಪ್ರದಾಯಗಳ ಬಗೆಗಿನ ಮಾಹಿತಿಗಳನ್ನು ಅಲ್ಲಿಂದಲೇ ಬಳಸಿಕೊಂಡಿದ್ದೇನೆ).

ಈ ಪ್ರಕಾರದಲ್ಲಿ ನೂರಾರು ಖಂಡಕಾವ್ಯಗಳು ಹುಟ್ಟಿಕೊಂಡಿವೆ. ಇವೆಲ್ಲ ಬಹುಶಃ ಈರಗಾರರನ್ನು ಆಧರಿಸಿದ ಕಥನಗಳೇ ಆಗಿವೆ. ಸಾಂಸ್ಕೃತಿಕ ವೀರರಾದ ಎತ್ತಪ್ಪ–ಜುಂಜಪ್ಪನವರನ್ನು ಕುರಿತು ಎರಡು ಮಹಾಕಾವ್ಯಗಳು ಮಾತ್ರ ನಿರ್ಮಾಣಗೊಂಡಿವೆ. ಆದರೆ ಜುಂಜಪ್ಪನ ಮಹಾಕಾವ್ಯ ವಿಸ್ತಾರದಲ್ಲಿ–ಗಾತ್ರದಲ್ಲಿ ಎತ್ತಪ್ಪನ ಮಹಾಕಾವ್ಯಕ್ಕಿಂತ ದೊಡ್ಡದು. ಎತ್ತಪ್ಪನದು ಒಂದೇ ತಲೆಮಾರಿನ ಕಥೆಯಾದರೆ, ಜುಂಜಪ್ಪನದು ಮೂರು ತಲೆಮಾರುಗಳ ಕಥೆ.

ಈ ಸಂಗ್ರಹದಲ್ಲಿರುವ ಕಥನಗಳನ್ನು ಜೋಡಿಸಿರುವ ಕ್ರಮಾನುಕ್ರಮಣಿಕೆ ಕೃತಿಗಳು ಪ್ರಕಟವಾದ ಕಾಲವನ್ನು ಆಧರಿಸಿರದೆ, ಕಥನಗಳು ಘಟಿಸಿರಬಹುದಾದ ಕಾಲವನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಜಿಸಲಾಗಿದೆ. ಹೀಗಾಗಿ ಇಲ್ಲಿ ಈರಗಾರ–ಈರಗಾತಿಯರ ಕಥನಗಳಿಂದ (ಸಿಂಪಣ್ಣ, ಹೆಬ್ಬೂರು ಚಿಕ್ಕಣ್ಣ, ಬಯಲುಸೀಮೆ ಗೌಡನ ಮಗಳು) ಹಿಡಿದು, ಪುರಾಣ ಪುರುಷರಾದ ಚಿತ್ತಯ್ಯ–ಕಾಟಯ್ಯರ ಕಥನ (ಚಿತ್ರದೇವರ ಕಾವ್ಯ) ಒಳಗೊಂಡು, ಕಾಡುಗೊಲ್ಲರ ಮೊದಲ ಸಾಂಸ್ಕೃತಿಕ ವೀರ

ಎತ್ತಪ್ಪನ ಮಹಾಕಾವ್ಯ (ಎತ್ತಯ್ಯನ ಕಾವ್ಯ) ಮತ್ತು ಜನಪ್ರಿಯ ಸಾಂಸ್ಕೃತಿಕ ವೀರನಾದ ಜುಂಜಪ್ಪನ ಮಹಾಕಾವ್ಯವನ್ನು ಹಾಡಿದ ವಿವಿಧ ಹಾಡುಗಾರರ ಆಯ್ದ ಭಾಗಗಳನ್ನು (ಎತ್ತಯ್ಯ–ಜುಂಜಯ್ಯ, ಜುಂಜಪ್ಪನ ಕತೆ, ತಾಳೆದುರುಗಿ ಸಂದು, ಜುಂಜಪ್ಪನ ಸಾವು, ಜಾಂಡೇವ ಎತ್ತಿಸಿರೋ) ಇಲ್ಲಿ ಪೋಣಿಸಲಾಗಿದೆ. ಕೊನೆಯದಾಗಿ ಕಾಡುಗೊಲ್ಲರ ಮತ್ತೊಬ್ಬ ಪುರಾಣ ಪುರುಷನ ಸ್ಥಳ ಪುರಾಣ ಹೇಳುವ (ಮಾಗೋಡು ಕಂಬದ ರಂಗನಾಥಸ್ವಾಮಿ ಕಥೆ) ಕಥನದೊಂದಿಗೆ ಖಂಡಕಾವ್ಯಗಳಿಂದ ಹಿಡಿದು ಮಹಾಕಾವ್ಯದವರೆಗೆ ಹರಡಿಕೊಂಡ ಈ ಕಥನಪರಂಪರೆ ಹಲವು ಜಾತಿಯ ಮರಗಳ ಕಾಡಿನಂತೆ, ಹಲವು ತೋಟದ ಹೂಗಳಂತೆ ಕಂಗೊಳಿಸುತ್ತದೆ. ಇಲ್ಲಿ ಕಥನಗಳ ಎಲ್ಲ ವೈವಿಧ್ಯಗಳು ಮೈಗೂಡಿವೆ. ಹಾಗೂ ಕಾಡುಗೊಲ್ಲರು ಮೂಲತಃ ಶೈವಾರಾಧಕರೇ ಆಗಿದ್ದರೂ, ಕಾಲಘಟ್ಟದಲ್ಲಿ ಹಲವು ಪ್ರಭಾವಗಳಿಗೆ ತೆರೆದುಕೊಂಡು ವೈಷ್ಣವಾರಾಧಕರೂ ಆಗಿರುವುದನ್ನು ಈ ಕಥನಗಳು ಹೇಳುತ್ತವೆ. ಹೀಗಾಗಿ ಕಾಡುಗೊಲ್ಲರಲ್ಲಿ ಶೈವ–ವೈಷ್ಣವ ಸಂಸ್ಕೃತಿಗಳ ದಿವ್ಯಸಂಗಮವನ್ನು ಕಾಣಬಹುದು. ಇಲ್ಲಿಯ ಒಂದೊಂದು ಕಥನಗಳೂ ಕಾಡುಗೊಲ್ಲರ ಸಾಂಸ್ಕೃತಿಕ ಸೂಕ್ಷ್ಮಗಳನ್ನು ಅನಾವರಣ ಮಾಡುತ್ತಾ ಹೋಗುತ್ತವೆ. ನಾಗರಿಕ ಜನವಸತಿಯಿಂದ ದೂರದಲ್ಲಿ 'ಗ್ರಾಮದ್ಭಹಿವಾಸಿ'ಗಳಾಗಿ ಹಟ್ಟಿಕಟ್ಟಿಕೊಂಡು, ಹಟ್ಟಿಯ ಸುತ್ತ ಕಳ್ಳೆಬೇಲಿ ಹಾಕಿಕೊಂಡು, ಅನ್ಯಜನ ಪ್ರವೇಶಗಳ ನಿರ್ಬಂಧ ವಿಧಿಸಿಕೊಂಡು, ತಮ್ಮದೇ ಆದ ಆಚಾರ–ವಿಚಾರ, ಮಡಿ–ಮೈಲಿಗೆ ಆಚರಿಸುವ, ತಮ್ಮದೇ ಆದ ಸಾಂಸ್ಕೃತಿಕ ಅನನ್ಯತೆಯನ್ನು ಕಾಪಾಡಿಕೊಳ್ಳಲು ಹೆಣಗುತ್ತಿರುವ, ಮಧ್ಯಕರ್ನಾಟಕದ ಚಿತ್ರದುರ್ಗ–ತುಮಕೂರು ಜಿಲ್ಲೆಗಳ ಪೂರ್ವದಂಚಿನಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಬದುಕುತ್ತಿರುವ ಇವರ ಪಶುಪಾಲಕ ಸಂಸ್ಕೃತಿಯ ಏಳು–ಬೀಳುಗಳನ್ನು ಕಟ್ಟಿಕೊಡುವ, ಶೀಲ–ಶೌಚಗಳಿಗೋಸ್ಕರ ತಮ್ಮ ಪ್ರಾಣವನ್ನೇ ಪಣವಾಗಿಡುವ, ಬೇಡ ನಾಯಕರ ದರ್ಪ–ದೌರ್ಜನ್ಯಗಳಿಗೆ ಸಿಕ್ಕು ತಲೆಯೊಡೆಸಿಕೊಂಡು ಸಾಯುವ, ಮುಗ್ಧ ಪ್ರಾಮಾಣಿಕ ದನಗಾಹಿಗಳ ಹೃದಯವಿದ್ರಾವಕ ಬದುಕನ್ನು ಇಲ್ಲಿಯ ಕಥನಗಳು ನಿರ್ವಚಿಸುತ್ತವೆ.

**ಸಿದ್ಧಗಂಗಯ್ಯ ಕಂಬಾಳು** ಅವರು ಸಂಗ್ರಹಿಸಿ ಪ್ರಕಟಿಸಿದ 'ಮಾತಾಡು ಮಲ್ಲಿಗೆ' (1973) ಕೃತಿಗೆ ತನ್ನದೇ ಆದ ಐತಿಹಾಸಿಕ ಮಹತ್ವವಿದೆ. ಅವರ ಸಂಗ್ರಹದಲ್ಲೂ ಈ ಹಿಂದೆ ಪ್ರಕಟವಾದ ಎಲ್ಲಾ ಜನಪದ ಗೀತ ಸಂಕಲನಗಳಲ್ಲಿ ಇರುವಂತೆ ಇಲ್ಲಿಯೂ ಅದೇ ಮಾದರಿಯ ಗೀತೆಗಳನ್ನು ತಮ್ಮ ಹುಟ್ಟೂರು ಶಿವಗಂಗೆಯ ಬಳಿ ಇರುವ ಕಂಬಾಳು ಗ್ರಾಮದ ಸುತ್ತಿನಲ್ಲಿ ಸಂಗ್ರಹಿಸಿದ್ದಾರೆ. ಜನಪದ ಸಾಹಿತ್ಯವನ್ನು ವೈಜ್ಞಾನಿಕವಾಗಿ ಸಂಗ್ರಹಿಸುವ ವಿಧಾನ ಅವರಿಗೆ ತಿಳಿದಿದೆ ಎಂಬುದನ್ನು ಅವರು ವಕ್ತೃವಿನ ಬಗ್ಗೆ ನೀಡುವ ವಿವರಗಳು, ಗ್ರಾಮ್ಯ ಭಾಷೆ ಸಾಬೀತುಪಡಿಸುತ್ತವೆ. ಹಾಗೂ ಪ್ರತಿ ಗೀತೆಯಲ್ಲಿನ ಗ್ರಾಮ್ಯ ಪದಗಳಿಗೆ ಅಡಿಟಿಪ್ಪಣಿಯಲ್ಲಿ ಅರ್ಥವನ್ನು ನೀಡುವ

ಮೂಲಕ ಆ ಕಾಲಕ್ಕೆ ಹೊಸ ಹಾದಿ ತುಳಿದಿದ್ದಾರೆ. ಆದರೆ ಈ ಸಂಕಲನದ ಸಾಂಸ್ಕೃತಿಕ ವೈಶಿಷ್ಟ್ಯ ಇರುವುದು ಅಲ್ಲಿಯವರೆಗೂ ಹಿಂದೆಲ್ಲೂ ಪ್ರಕಟವಾಗದ 'ಗಣೆಪದ'ಗಳನ್ನು ಮೊಟ್ಟ ಮೊದಲ ಬಾರಿಗೆ ಸಂಗ್ರಹಿಸಿದ ಕೀರ್ತಿ ಕಂಬಾಳು ಅವರಿಗೆ ಸಲ್ಲುತ್ತದೆ. ಈ ಕಾರಣಕ್ಕಾಗಿ ಅದಕ್ಕೆ ಐತಿಹಾಸಿಕ ಮಹತ್ವ ಪ್ರಾಪ್ತವಾಗಿದೆ. ತಾವು ಒಂದು ಹೊಸ ಜನಪದ ಗೀತ ಪ್ರಕಾರವನ್ನು ಪ್ರಕಟಿಸುತ್ತಿದ್ದೇನೆ ಎಂಬ ಕಲ್ಪನೆ ಅವರಿಗೆ ಇಲ್ಲದುದರಿಂದಲೇ ಏನೋ ಕಥನ ಗೀತೆಗಳನ್ನೆಲ್ಲ 'ಲಾವಣಿಗಳು' ಎಂದು ಕರೆದಿದ್ದಾರೆ. ಆದರೆ ಕಾಡುಗೊಲ್ಲರಿಗಷ್ಟೇ ವಿಶಿಷ್ಟವಾದ ಈ ಪ್ರಕಾರವನ್ನು ಈಗ 'ಗಣೆಪದ' ಎಂಬ ಹೆಸರಿನಿಂದ ಕರೆಯುತ್ತಿದ್ದೇವೆ. ಕಂಬಾಳು ಅವರು ಅಂಥ ಕೆಲವು ಅಸಮಗ್ರ ಗಣೆಪದಗಳನ್ನು ಇಲ್ಲಿ ಸಂಗ್ರಹಿಸಿದ್ದಾರೆ. ಅವುಗಳನ್ನಲ್ಲದೆ ಈ ಸಂಗ್ರಹದ ಚಿತ್ರದೇವರ ಕಾವ್ಯ ಮತ್ತು ಮಾಗೋಡು ಕಂಬದ ರಂಗನಾಥಸ್ವಾಮಿ ಕಥೆಗಳನ್ನು ಹೊರತುಪಡಿಸಿದರೆ ಎಲ್ಲಾ 'ಗಣೆಪದ'ಗಳಲ್ಲೂ ಬೇಡರ ದೌರ್ಜನ್ಯಕ್ಕೆ ಬಲಿಯಾಗುವ ಮುಗ್ಧ ಗೊಲ್ಲ ಪಶುಪಾಲಕ ವೀರರ ದುರಂತವೇ ಸ್ಥಾಯಿಯಾಗಿರುವುದನ್ನು ಗುರುತಿಸಬಹುದು.

**'ಸಿಂಪಣ್ಣ'** ಎಂಬ ಮೇಕೆ ಕಾಯುತ್ತಿದ್ದ ಹುಡುಗನನ್ನು ಬೇಡನಾಯಕರು 'ಆಡಿನ ಮರಿ'ಯನ್ನು ಕೊಡಲು ಕೇಳುತ್ತಾರೆ. 'ಆಡಿನ ಮರಿ' ಕೊಟ್ಟರೆ ಕೂಡಿದ ಹೆಣತಿ (ಹೆಂಡ್ತಿ) ಕೊಟ್ಟಂಗೆ ಎಂದು ತಿರಸ್ಕರಿಸಿದ್ದನ್ನೇ ನೆಪ ಮಾಡಿಕೊಂಡು ಅವನ ತಲೆಯೊಡೆಯುವ ಸಂಚು ಮಾಡುತ್ತಾರೆ. ಸಿಂಪಣ್ಣ ಆಲುದೇವರಿಗೆ ಹೋಗಿ ಬರುವಾಗ ಹಾದಿಯಲ್ಲಿ ಕಾದಿದ್ದ ಬೇಡರು ತಲೆಯೊಡೆಯುತ್ತಾರೆ. ಸಿಂಪಣ್ಣ ತನ್ನ ತಂಗಿಯರಿಗೆ 'ಬ್ಯಾಡರ ಕೈಗೆ ನನ್ನ ಬುಲ್ಡೆ (ತಲೆ) ಸಿಗದಂತೆ, ಕೆಂಡಕೊಂಡ ಮಾಡಿ' ಎಂದು ಹೇಳುತ್ತಾನೆ. ಸಿಂಪಣ್ಣನೊಂದಿಗೆ ಅವನ ಪ್ರೀತಿಯ ಸಾಕುನಾಯಿಯೂ ಕೊಂಡ ಹಾರಿ ಸಾಯುತ್ತದೆ. ಅಣ್ಣನಿಲ್ಲದ ತಾವೂ ಬದುಕುವುದಿಲ್ಲವೆಂದು ನಿರ್ಧರಿಸಿದ ಅವನ ತಂಗಿಯರು ಅಣ್ಣನ ದಿವಸಕಾಲ ಮಾಡಿದ ನಂತರ ಅವರೂ ಕೊಂಡ ಬಿದ್ದು ಸಾಯುತ್ತಾರೆ. [ನಾನು ಸಂಗ್ರಹಿಸಿದ ಇದೇ ಕಥೆಯ ಇನ್ನೊಂದು ಆವೃತ್ತಿಯಲ್ಲಿ 'ಬೇಡರಿಂದ ಮುಟ್ಟಲ್ಪಟ್ಟ ದೇಹ ಬಿನ್ನ (ಅಪವಿತ್ರ)ವಾಯಿತು' ಎಂದು ಅಗ್ನಿ ಪ್ರವೇಶ ಮಾಡುತ್ತಾನೆ'.] ಪಾವಿತ್ರ್ಯವನ್ನು ಕಾಪಾಡಿಕೊಳ್ಳಲು ಜೀವವನ್ನೇ ತೃಣವೆಂದು ಬಗೆಯುವ ಪಶುಪಾಲಕ ಕಾಡುಗೊಲ್ಲರ ನಿಲುವು, ಅವರ ನಂಬಿಕೆ, ಮೌಲ್ಯಗಳಿಗೆ ಕನ್ನಡಿ ಹಿಡಿಯುತ್ತದೆ.

**'ಹೆಬ್ಬೂರು ಚಿಕ್ಕಣ್ಣ'**ನ ಕತೆ ಕೂಡ ಸಿಂಪಣ್ಣನ ಕತೆಯ ಆಶಯವನ್ನೇ ಹೊಂದಿದೆ. ಇಲ್ಲಿ ಕರುವಿನ ಕಾರಣದಿಂದ ಕದನ ಹುಟ್ಟುತ್ತದೆ. ತಾಯಿಯ ಮೊಲೆ ಹಾಲು ಇಲ್ಲವೆಂದು ಆವಿನ ಮುದ್ದ ಚಿಕ್ಕಣ್ಣನಿಗೆ ಕೊಟ್ಟ ಕರು ದಿನಕ್ಕೊಂದು ಚಂದವಾಗಿ ಬೆಳೆಯುತ್ತದೆ. ಈ ಕರುವಿನ ಬೆಳವಣಿಗೆ ಮತ್ತು ವರ್ಣನೆ ಜುಂಜಪ್ಪನ ಕತೆಯ ಬಡಮ್ಮೈಲನನ್ನು ನೆನಪಿಸುತ್ತದೆ. ಇದನ್ನು ಕಂಡ ಆವಿನ ಮುದ್ದನ ತಮ್ಮ ಕುರಿಮುದ್ದನ ಕಣ್ಣು ಕಿಸಿರಾಗುತ್ತದೆ, ಅಣ್ಣ ಕೊಟ್ಟ ಕರು ವಾಪಸು ಕೇಳುತ್ತಾನೆ. ಚಿಕ್ಕಣ್ಣ ಮುದ್ದನನ್ನು ಝಾಡಿಸಿ ಒದೆಯುತ್ತಾನೆ.

ಮುದ್ದ ಹೋಗಿ ಬೇಡರ ಮರೆ ಬೀಳುತ್ತಾನೆ. ಬೇಡರ ದಂಡು ಆವಿನಗೂಡಿನಲ್ಲಿ ಬಾಮ್ಮೈದ ಈರಬೋರನೊಂದಿಗೆ ಮಲಗಿದ್ದ ಚಿಕ್ಕಣ್ಣನ ಮೇಲೆ ಬಿದ್ದು ಇಬ್ಬರನ್ನೂ ಕೊಲೆ ಮಾಡುತ್ತದೆ. ಕೆಲವು ದಿನಗಳ ಅಂತರದಲ್ಲಿ ಮದುವೆ ಗೊತ್ತಾಗಿದ್ದ ಚಿಕ್ಕಣ್ಣ ಬೇಡರ ದೌರ್ಜನ್ಯಕ್ಕೆ ಬಲಿಯಾಗುತ್ತಾನೆ.

ಈ ಸಂಗ್ರಹದ ಎಲ್ಲ ಕಥನ ಕವನಗಳು ಖಂಡಕಾವ್ಯದ ಹರಹನ್ನು ಹೊಂದಿದ್ದರೆ, ಜುಂಜಪ್ಪನ ಕಾವ್ಯ ಮಾತ್ರ ಮಹಾಕಾವ್ಯದ ವಿಸ್ತಾರವನ್ನು ಪಡೆದಿದೆ. ಆದರೆ ಎತ್ತಪ್ಪನ ಕಥೆ ಅತ್ತ ಖಂಡಕಾವ್ಯದಷ್ಟು ಚಿಕ್ಕದೂ ಅಲ್ಲ, ಇತ್ತ ಮಹಾಕಾವ್ಯದಷ್ಟು ವಿಸ್ತಾರವೂ ಅಲ್ಲದ ಮಧ್ಯಮ ಗಾತ್ರದ ಕಾವ್ಯ.

**ಜುಂಜಪ್ಪ** ಕಾಡುಗೊಲ್ಲರ ಅತ್ಯಂತ ಜನಪ್ರಿಯ ಸಾಂಸ್ಕೃತಿಕ ವೀರ, ಹಿರಿಯ ಸಾಂಸ್ಕೃತಿಕ ವೀರ ಎತ್ತಪ್ಪನಿಗಿಂತ ಕಿರಿಯವನು. ತಾಯಿಯ ಬೆನ್ನಿನಲ್ಲಿ ಹುಟ್ಟಿದ ಅವತಾರ ಪುರುಷ. ಕೈಲಾಸದ ವೀರಭದ್ರನೇ ಜುಂಜಪ್ಪನಾಗಿ ಹುಟ್ಟಿ ಬಂದವನು. ಇಬ್ಬರೂ ಸಾಂಸ್ಕೃತಿಕ ವೀರರು 'ಎಲ್ಲಿ ಹುಲ್ಲು–ನೀರು ಇದೆಯೋ ಅದೇ ನಮ್ಮ ಮನಿ–ಮಾರು' ಎಂದು ತಮ್ಮ ಪಶುಸಂಪತ್ತಿನೊಂದಿಗೆ ಕಾವಲಿನಿಂದ ಕಾವಲಿಗೆ ಅಲೆಯುತ್ತಾ, ಕೆಣಕಿದವರಿಗೆ ಸಿಂಹಸ್ವಪ್ನವಾಗಿ ಕಾಡುತ್ತಾ, ನಿರಂತರ ಹೋರಾಟ ಮಾಡುತ್ತಲೇ ವ್ಯವಸ್ಥೆಯ ಕುತಂತ್ರಕ್ಕೆ ಬಲಿಯಾದವರು.

ಜುಂಜಪ್ಪನ ಕಾವ್ಯ ಮೂರು ತಲೆಮಾರುಗಳುದ್ದಕ್ಕೂ ಹರಡಿಕೊಂಡ ಕಥನ. ಆದರೆ ಬಹಳಷ್ಟು ಹಾಡುಗಾರರು ಜುಂಜಪ್ಪನ ತಾತ ಮೊದಲ ತಲೆಮಾರಿಗೆ ಸೇರಿದ ದೇವರ ದಯಮಾರನ ಪ್ರಸಂಗವನ್ನೇ ಬಿಟ್ಟು ಹಾಡುವುದುಂಟು. ಇನ್ನೂ ಕೆಲವರು ಜುಂಜಪ್ಪನ ತಂದೆ ಎರಡನೆಯ ತಲೆಮಾರಿನ ಕೆಂಪಿಲಿ ಮಲಿಗೊಂಡನ ಪ್ರಕರಣವನ್ನು ಕೈಬಿಟ್ಟು, ಕೊನೆಯ ಮೂರನೆ ತಲೆಮಾರಿನ ಜುಂಜಪ್ಪನ ಕಥೆಯನ್ನು ಕೇಂದ್ರೀಕರಿಸಿಕೊಂಡು ಹಾಡುವುದುಂಟು. ತೀರಾ ಅಪರೂಪಕ್ಕೆ ಬೆರಳಣಿಕೆಯ ಹಾಡುಗಾರರು ಮಾತ್ರ ಜುಂಜಪ್ಪನ ಸಾವಿನ ಪ್ರಕರಣದ ನಂತರ ಬರುವ ಆತನ ಮಹಿಮಾತಿಶಯದ ಕಥೆಯನ್ನು ಹಾಡುತ್ತಾರೆ. ಜುಂಜಪ್ಪನ ಕಥೆಯಲ್ಲಿ ಅನೇಕ ಪ್ರಸಂಗಗಳು ಇರುವುದರಿಂದ ಕತೆಗಾರ ತನ್ನ ಅಭಿರುಚಿಗೆ ಅನುಗುಣವಾದ ಭಾಗಗಳನ್ನು ಆರಿಸಿಕೊಳ್ಳುವುದುಂಟು. (ಸೋಬಾನೆ ಧಾಟಿಯ ತ್ರಿಪದಿ ಕಾವ್ಯವನ್ನು ಹಾಡುವ ಹೆಂಗಳೆಯರು ಜುಂಜಪ್ಪನ ಮಹಿಮೆಯನ್ನು ಕೊಂಡಾಡುವ, ಹೊಳೆಗೆ ಹೋಗುವ ಪ್ರಸಂಗಗಳಿಗೇ ಹೆಚ್ಚು ಒತ್ತುಕೊಟ್ಟು ಹಾಡುವುದುಂಟು). ಕಥೆಗಾರರು ಕಥೆಯ ಭಾಗಗಳನ್ನು 'ಪರಸಂಗ ಅಥವಾ ಸಂದು (ಸಂಧಿ)' ಎಂಬ ಹೆಸರಿನಿಂದ ಕರೆಯುತ್ತಾರೆ. ಇನ್ನೂ ಕೆಲವು ಜಾಣ ಕಥೆಗಾರರು ಜುಂಜಪ್ಪನ ಕಥೆಯ ಕೆಲವು ಮುಖ್ಯ ಪ್ರಸಂಗಗಳನ್ನು ಆಯ್ದು ಒಂದು ಸಂಕ್ಷಿಪ್ತ ಸಮಗ್ರ ಚಿತ್ರ ಕೊಡುವ ಪ್ರಯತ್ನ ಮಾಡುವುದುಂಟು. ಅಂದರೆ ಈ ಮಹಾಕಾವ್ಯ ಅಗತ್ಯಕ್ಕೆ ತಕ್ಕಂತೆ ಹಿಗ್ಗುವ–

ಕುಗ್ಗುವ ಸಾಧ್ಯತೆಯನ್ನು ಒಳಗೊಂಡಿದೆ. ಕೆಲವು ಹಾಡುಗಾರರ ಕಥೆ ಕಾವ್ಯಮಯ ಗದ್ಯದಿಂದ ಕಂಗೊಳಿಸಿದರೆ, ಇನ್ನೂ ಕೆಲವರದು ನೀರಸ ಗದ್ಯವಾಗಿರುವುದುಂಟು. ಹೀಗೆ ಗಣ್ಯೆ ಕಾವ್ಯ ಸೃಜನಶೀಲ ಕಥೆಗಾರಿಕೆಯ ಅನೇಕ ಸಾಧ್ಯತೆಗಳಿಗೆ ತನ್ನನ್ನು ತೆರೆದುಕೊಂಡಿದೆ.

ಇಲ್ಲಿ ಕಂಬಾಳು ಜುಂಜಪ್ಪನ ಕಥನದ ಹಲವಾರು ಪ್ರಸಂಗಗಳನ್ನು ಇಬ್ಬರು ಭಿನ್ನ ಹಾಡುಗಾರರಿಂದ ಸಂಗ್ರಹಿಸಿದ್ದಾರೆ. ಆದರೆ ಅವರು ಹಾಡದೆ ಬಿಟ್ಟ ತಾಳೇದ ದುರುಗಿ ಸಂದು ಮಾತ್ರ **ಚೆಲುವರಾಜು** (ಜುಂಜಪ್ಪ, 1997) ಸಂಗ್ರಹದಿಂದ ತಂದು ಈ ಕಥನದೊಳಗೆ ಸೇರಿಸಿದ್ದೇನೆ. ಇದರ ಗದ್ಯ ಅತ್ಯಂತ ನೀರಸವಾಗಿರುವುದರಿಂದ ಆ ಪ್ರಕರಣವನ್ನು ಅಲ್ಲಲ್ಲಿ ಆಯ್ದು ಇಲ್ಲಿ ನೀಡಲಾಗಿದೆ.

**'ಎತ್ತಯ್ಯ–ಜುಂಜಯ್ಯ'** ಪ್ರಸಂಗ ಜುಂಜಪ್ಪನ ತಂದೆ ಕೆಂಪಿಲಿ ಮಲಿಗೊಂಡನಿಗೆ ಆಶ್ರಯ ಕೊಟ್ಟ ಹೊನ್ನಟ್ಟಿ ಆಲೇಗೌಡನೇ ಮುಂದೆ ನಿಂತು ಕಂಬೇರಟ್ಟಿಗೆ ಹೋಗಿ ಹೆಣ್ಣು (ಚಿನ್ನಮ್ಮನನ್ನು) ತಂದು ಮದುವೆ ಮಾಡುವ ಘಟನೆಯನ್ನು ವಿವರಿಸುತ್ತದೆ. ಈ ಪ್ರಕರಣಕ್ಕೆ 'ಎತ್ತಯ್ಯ–ಜುಂಜಯ್ಯ' ಎಂಬ ಶೀರ್ಷಿಕೆ ನೀಡಲಾಗಿದೆ. ಎತ್ತಪ್ಪ, ಜುಂಜಪ್ಪ ಇಬ್ಬರು ಭಿನ್ನ ಸಾಂಸ್ಕೃತಿಕ ವೀರರೇ ಆಗಿದ್ದರೂ ಕಥೆಗಾರರು ಇವರಿಬ್ಬರನ್ನು ಒಂದೇ ಎಂಬಂತೆ ಅಭಿನ್ನವಾಗಿ ಗ್ರಹಿಸುತ್ತಾರೆ. ಉತ್ತರ ಭಾಗದಲ್ಲಿ ಹೆಚ್ಚು ಪ್ರಚಲಿತವಿರುವ ಎತ್ತಪ್ಪನ ಕತೆ ದಕ್ಷಿಣಕ್ಕೆ ಚಲಿಸಿದಂತೆಲ್ಲಾ ಜುಂಜಪ್ಪನ ಕಥೆಯೊಂದಿಗೆ ಕೂಡಿಕೊಂಡು 'ಜುಂಜಪ್ಪನ ದಕ್ಷಿಣ ಸಂಪ್ರದಾಯದ ಕಥೆ'ಯ ಹುಟ್ಟಿಗೆ ಕಾರಣವಾಗಿದೆ.

**'ಜುಂಜಪ್ಪನ ಕಥೆ'** ಅನೇಕ ಘಟನಾವಳಿಗಳನ್ನು ಹೊಂದಿದೆ. ಕಂಬೇರ ಚಿನ್ನಮ್ಮ ಬಡತನ ಬರುತ್ತದೆ ಎಂದರೂ ಹೆದರದೆ ಗೌರಸಂದ್ರ ಮಾರಮ್ಮನ ಪ್ರಭಾವದಿಂದ ಜುಂಜಪ್ಪ, ಮಾರಣ್ಣ–ಮೈಲಣ್ಣ, ಮಾರಕ್ಕ ಎಂಬ ಮಕ್ಕಳನ್ನು ಪಡೆಯುತ್ತಾಳೆ. ಜುಂಜಪ್ಪ ತಾಯಿಯ ಶೀಲವನ್ನು ಶಂಕಿಸಿ ಅನೇಕ ಪರೀಕ್ಷೆಗಳನ್ನು ಮಾಡುತ್ತಾನೆ. ಚಿನ್ನಮ್ಮ ಎಲ್ಲವನ್ನೂ ಗೆದ್ದು ತನ್ನ ಪಾತಿವ್ರತ್ಯವನ್ನು ನಿರೂಪಿಸುತ್ತಾಳೆ. ತಂಗಿಯ ಬಡತನವನ್ನು ಕಂಡ ಕಂಬೇರ ಮಾವಗಳು ಸೋದರಳಿಯಂದಿರಿಗೆ ಏಳು ಕರುಗಳನ್ನು ಕೊಡುತ್ತಾರೆ. ಈ ಕರುಗಳು ಬೆಳೆದು ಏಳೂಗೂಡಿನ ದನಗಳಾಗುತ್ತವೆ. ಸೋದರ ಮಾವಗಳು ಅಸೂಯೆಯಿಂದ ಜುಂಜಪ್ಪನ ದನಗಳ ಮರ್ದನಕ್ಕೆ ಮಾಟ–ಮಂತ್ರ–ತಂತ್ರದ ಮೊರೆ ಹೋಗುತ್ತಾರೆ. ಜುಂಜಪ್ಪ ಮಾಟಗ ಮಾಡಿದ ಮಾಂತ್ರಿಕ ಸಾಣೀಕೆರೆ ಪುಟ್ಟನನ್ನು ದಮನ ಮಾಡುತ್ತಾನೆ. ಅಹಂಕಾರದಿಂದ ಮೆರೆಯುತ್ತಿದ್ದ ಆಲೇಗೌಡನ ಹೆಂಡತಿ ಜಾನಕಲ್ ದೊಡ್ಡಕ್ಕನಿಗೂ ಬುದ್ಧಿ ಕಲಿಸುತ್ತಾನೆ.

ಜುಂಜಪ್ಪನ ಸೋದರ ಮಾವಗಳು **'ತಾಳೇದ ದುರುಗಿ'** [ಸಂದು(ಸಂಧಿ)] ಬಳಸಿಕೊಂಡು ಜುಂಜಪ್ಪನ ನಾಶಕ್ಕೆ ಹೋರಾಡುವ ಕತೆ ಒಂದು ಮಿನಿ ಮಹಾಕಾವ್ಯದ

ವಿಸ್ತಾರವನ್ನು ಪಡೆದುಕೊಂಡಿದೆ. ಜುಂಜಪ್ಪ ಪುರ್ಲಳ್ಳಿ ಭೂತಪ್ಪನ ಸಹಾಯದಿಂದ ದುರ್ಗಿಯನ್ನು ಬಲಿ ಹಾಕುತ್ತಾನೆ.

**'ಜುಂಜಪ್ಪನ ಸಾವು'** ಪ್ರಸಂಗದಲ್ಲಿ ತೀರಾ ಸಂಕ್ಷಿಪ್ತವಾಗಿ ಬಡಮ್ಮೈಲ ಎಂಬ ಹೋರಿಯ ಸಾಹಸ ಪ್ರಸ್ತಾಪಿತವಾಗುತ್ತದೆ. ಸೋದರ ಮಾವಗಳು ಕೊನೆಯ ಪ್ರಯತ್ನವಾಗಿ ಜುಂಜಪ್ಪನನ್ನು ಎತ್ತಿನ ಗೂಡಿನಲ್ಲಿ ದೇವರು ಮಾಡಿದ್ದೇವೆಂಬ ನೆಪದಲ್ಲಿ ಕರೆಸಿಕೊಂಡು ವಿಷ ಇಟ್ಟು ಸಾಯಿಸುತ್ತಾರೆ.

**'ಜಾಂಡೇವ ಎತ್ತಿಸಿರೋ'** ಪ್ರಸಂಗ ಜುಂಜಪ್ಪನ ಸಾವಿನ ನಂತರ ಬರುವ, ಹಾಡುಗಾರರು ಅಪರೂಪಕ್ಕೆ ಹಾಡುವ ಪ್ರಸಂಗ. ಸತ್ತ ನಂತರ ಜುಂಜಪ್ಪ ದೇವರಾಗಿ ಹಿರಿಯಟ್ಟಿಯಲ್ಲಿ ನೆಲೆಸಿದಾಗ, ಕೊಳ್ಳೆದಂಡಿನ ಭಯದಿಂದ ತನ್ನನ್ನು ತೊರೆದು ಹೊಗದಿರಲು ಪೂಜಾರಿ ಚಿತ್ತಯ್ಯನಿಗೆ ಹೇಳುವಂತೆ ಅವನ ತಂಗಿ ಚಿತ್ತಮ್ಮನನ್ನು ಒತ್ತಾಯಿಸುವ, ಅವಳು ಮಣಿಯದಿದ್ದಾಗ ಅವಳಿಗೆ ನಾನಾ ಬಗೆಯ ಕಷ್ಟ ಕೊಡುವ ಪ್ರಸಂಗದ ಚಿತ್ರಣ ಇಲ್ಲಿದೆ.

ಈ ಮೂಲಕ ಜುಂಜಪ್ಪನ ಮಹಾಕಾವ್ಯದ ಒಂದು ಸ್ಥೂಲ, ಸಂಕ್ಷಿಪ್ತ ಚಿತ್ರ ದೊರೆಯುತ್ತದೆ. ಈ ಮಹಾಕಾವ್ಯ ಹಾಡಿನ ಎಲ್ಲ ಸಾಧ್ಯತೆಗಳಿಗೆ ಕನ್ನಡಿ ಹಿಡಿಯುತ್ತದೆ.

ಕಂಬಾಳು ಅವರು ಸಂಗ್ರಹಿಸಿದ ಅಧ್ಯಾಯಗಳನ್ನು ಗಮನಿಸಿದರೆ ನಮಗೆ ಒಂದು ವಿಷಯ ಸ್ಪಷ್ಟವಾಗುತ್ತದೆ. ಗಪದ್ಯದಿಂದ ಕೂಡಿದ ಮುಕ್ತಛಂದದ ಗಣೆಪದದ ಶೈಲಿಯನ್ನು ಹೊಂದಿದ ಜುಂಜಪ್ಪನ ಕಥನವನ್ನು ಛಂದಸ್ಸಿನ ಮಿತಿಗೆ ಒಳಪಡಿಸಲು ಪ್ರಯತ್ನ ಮಾಡಿದ್ದಾರೆ. ಆದರೆ ಮುಕ್ತವಾಗಿ ಹರಿಯುವ ಗದ್ಯಕಥನ ಛಂದಸ್ಸಿನ ಬಂಧಕ್ಕೆ ಒಳಪಡಿಸಿದರೆ ಕಥೆ ಅಲ್ಲಲ್ಲೇ ಕಡಿದುಬೀಳುವುದನ್ನು ಕಾಣಬಹುದು. 70ರ ದಶಕದಲ್ಲಿ ಜನಪದ ಸಾಹಿತ್ಯ ಅಂದರೆ ತ್ರಿಪದಿರೂಪದ ಛಂದಸ್ಸು ಎಂಬ ಕಲ್ಪನೆ ಮಾತ್ರ ಇದ್ದ ಕಾಲದಲ್ಲಿ ಸಂಪಾದಿಸ ಹೊರಟ ಮನಸ್ಸಿಗೆ ಅದರ ವಿಚಿತ್ರ ಕಥನ ಗತಿಯ ಜಾಡು ಹಿಡಿಯಲು ಸಾಧ್ಯವಾಗಿಲ್ಲ ಎಂಬುದರೊಂದಿಗೆ ಅದು ಯಾವ ಛಂದಸ್ಸಿನ ಬಂಧಕ್ಕೂ ಒಗ್ಗುವುದಿಲ್ಲ ಎಂಬುದನ್ನು ನೋಡಬಹುದು.

**ಕಾಳೇಗೌಡ ನಾಗವಾರ** ಅವರು ಸಂಗ್ರಹಿಸಿರುವ 'ಬಯಲುಸೀಮೆಯ ಲಾವಣಿಗಳು' (1973) ಕೃತಿಯಿಂದ ಆಯ್ದ 'ಬಯಲುಸೀಮೆ ಗೌಡನ ಮಗಳು' ಕಥೆಯಲ್ಲಿ ಸುರಸುಂದರನಾದ ಗೊಲ್ಲರ ಹುಡುಗನನ್ನು ಊರ ಗೌಡನ ಮಗಳು 'ಇನವಂದ' (ಸರಸ)ಕ್ಕೆ ಕರೆಯುತ್ತಾಳೆ. ನಿರಾಕರಿಸಿದ ಗೊಲ್ಲರ ಹುಡುಗನ ಬಗ್ಗೆ ಚಾಡಿ ಹೇಳಿ ತನ್ನ ತಂದೆಯಿಂದ ಅವನ ತಲೆ ಕಡಿಸಿ, ಶಿರವನ್ನು ತರಿಸಿಕೊಂಡು ಮೆಟ್ಟಿಲು ಮಾಡಿಕೊಂಡು ಮೀಯುತ್ತಾಳೆ. ಇದರಿಂದ ಕೆರಳಿದ ದನಗಳು ಅವಳ ಮೇಲೆ ದಂಡೆತ್ತಿ ಹೋಗಿ, ತಮ್ಮ ಕೊಂಬುಗಳಿಂದ ಅವಳನ್ನು ತಿವಿದು ಕೊಂದು, ಬಚ್ಚಲಲ್ಲಿ ಇದ್ದ ತಮ್ಮ ಒಡೆಯನ

ತಲೆ ತಂದು ಮುಂಡಕ್ಕೆ ಕೂಡಿಸಿ, ಮರುಜವಳಿ ಕಡ್ಡಿ (ಸಂಜೀವಿನಿ ಕಡ್ಡಿ)ಯಿಂದ ಮುಟ್ಟಿಸಿ ಬದುಕಿಸಿಕೊಂಡು ತಮ್ಮ ಪಟ್ಟಣಕ್ಕೆ ಹಿಂತಿರುಗುತ್ತವೆ. ಇಲ್ಲಿ ಮಾನವರ, ಪ್ರಾಣಿಗಳ ಪರಸ್ಪರ ಪ್ರೀತಿಯನ್ನು ಹೃದಯಂಗಮವಾಗಿ ಚಿತ್ರಿಸಲಾಗಿದೆ. ಈ ಪ್ರಸಂಗ ಎತ್ತಪ್ಪನ ಕಥೆಯಲ್ಲಿ ಬರುವ ಗುಡ್ಡದ ಬೋರಿಯ ಪ್ರಸಂಗದ ಪಡಿಯಚ್ಚಿನಂತಿದೆ. ಬಹುಶಃ ಇದು ಎತ್ತಪ್ಪನ ಕಥೆಯಿಂದ ಸಿಡಿದು ಬಂದು ಸ್ವತಂತ್ರ ಕಥೆಯಾಗಿ ರೂಪುಗೊಂಡಿರಬೇಕು ಅನಿಸುತ್ತದೆ.

**ಕೆ.ಎಂ. ಮೈತ್ರಿ** ಅವರ (ಕೃಷ್ಣಗೊಲ್ಲರ ಕಥನ ಕಾವ್ಯಗಳು, 2000) ಸಂಗ್ರಹದಲ್ಲಿನ ಏಕೈಕ ಗಣೆಕಾವ್ಯ 'ಎತ್ತಯ್ಯನ ಕಾವ್ಯ'. ಎತ್ತಪ್ಪ ಕಾಡುಗೊಲ್ಲ ಬುಡಕಟ್ಟಿನ ಮೊಟ್ಟಮೊದಲ ಹಿರಿಯ ಸಾಂಸ್ಕೃತಿಕ ವೀರ. ಎತ್ತಪ್ಪ ಕಾಡುಗೊಲ್ಲ ಸಮುದಾಯದ **'ಕರೇಕಡೆ'** ವಿಂಗಡಿಸಿ ಒಂದು ಸಾಂಸ್ಕೃತಿಕ ಚೌಕಟ್ಟು ಕೊಟ್ಟವನು. ಅಂಬೇರಾಯ–ತುಂಬೇರಾಯರಿಗೋಸ್ಕರ ದನ ಕಾಯಲು ಕೈಲಾಸದಿಂದ  ಅವತರಿಸಿ ಬಂದವನು. ಇವನ ಹುಟ್ಟು ಕೂಡಾ ಅಲೌಕಿಕವಾದುದು. ಹೆತ್ತ ತುಪ್ಪದಲ್ಲಿ ಹುಟ್ಟಿದ, ಎತ್ತುಗಳೇ ಪ್ರಾಣವಾದ ಇವನನ್ನು 'ಎತ್ತಯ್ಯ' ಎಂದು ಕರೆದುದು ಅನ್ವರ್ಥಕವಾಗೇ ಇದೆ. 'ಉಂಡೂ ಉಪವಾಸಿ, ಬಳಸಿ ಬ್ರಹ್ಮಚಾರಿ' ಎಂಬಂತೆ ಗೆಜ್ಜೆಕಾಲು ಮಲ್ಲಮ್ಮನನ್ನು ಮದುವೆಯಾದರೂ ಬ್ರಹ್ಮಚಾರಿಯಂತೆ ಬದುಕಿದವನು. (ಜುಂಜಪ್ಪನೂ ಮದುವೆಯೇ ಆಗದೆ, 16 ವರ್ಷಗಳ ಅತ್ಯಂತ ಚಿಕ್ಕ ಪ್ರಾಯದಲ್ಲಿ ಸೋದರ ಮಾವಗಳ ದ್ವೇಷದ ಕಾರಣ ವಿಷಪ್ರಾಷನಕ್ಕೆ ಬಲಿಯಾದವನು). ಅತ್ಯಂತ ಪವಿತ್ರವಾದ ಗೋಪಾಲನೆಯ ಕಾಯಕ ಮಾಡುವ ವ್ಯಕ್ತಿ ಪರಿಶುದ್ಧನಾಗಿರಬೇಕು ಎಂಬ ನಿಲುವಿಗೆ ಅಂಟಿಕೊಂಡು ಶೀಲ–ಶೌಚಗಳಿಗಾಗಿ ತನ್ನನ್ನೇ ಬಲಿಕೊಟ್ಟುಕೊಂಡವನು. ಎತ್ತಪ್ಪ ಗುಡ್ಡದ ಬೋರಿ ಎಂಬ ಬೇಡನಾಯಕರ ಹೆಣ್ಣಿನ ಪ್ರಣಯವನ್ನು ತಿರಸ್ಕರಿಸಿ, ಅವಳ ಆಗ್ರಹಕ್ಕೆ ಗುರಿಯಾಗಿ, ಸಂಡೂರು ಬೊಮ್ಮನ ಸಂಚಿಗೆ ಬಲಿಯಾಗಿ ಶಿರಚ್ಛೇದನಕ್ಕೆ ಒಳಗಾಗುತ್ತಾನೆ. ಎತ್ತಯ್ಯನ ಬಾಮ್ಮೈದ ವಲಿಗಾನಿ ಭಾವನನ್ನು ಕೊಂದ ಬೊಮ್ಮನನ್ನು ಕೊಂದು ಸೇಡು ತೀರಿಸಿಕೊಳ್ಳುತ್ತಾನೆ.

ಗಂಟ್ಲಾಳು ಚಿನ್ನ ಎಂಬ ಪಾತ್ರ ಒಂದು ಕಡೆ ಗುಡ್ಡದ ಬೋರಿಯ ಪ್ರಿಯಕರನೆಂಬಂತೆ, ಮತ್ತೊಂದು ಕಡೆ ತಮ್ಮನೆಂಬಂತೆ ಚಿತ್ರಿಸಿರುವುದು ಗೊಂದಲಕ್ಕೆ ಕಾರಣವಾಗಿದೆ. ಈ ಕತೆಯಲ್ಲಿ ಎತ್ತಯ್ಯನ ಶಿರಚ್ಛೇದ ಪ್ರಸಂಗವೇ ಬರದೆ, ಕೇವಲ ಅವನ ದೊಕ್ಕೆಗೆ ಸೊಂಡೂರು ಬೊಮ್ಮ ತಿವಿಯುವ ಪ್ರಸಂಗ ಬರುತ್ತದೆ. ಬ್ಯಾಡರಿಂದ ದೇಹ ಎಂಜಲಾಯಿತೆಂದು ತಳಕಿನ ಬೆಟ್ಟದಿಂದ ಬಿದ್ದು ಸಾಯುವಂತೆ ಚಿತ್ರಿಸಲಾಗಿದೆ. ಇದೊಂದು ಭಿನ್ನ ಪಾಠಕ್ಕೆ ಸೇರಿದ ಕತೆ.

ಎತ್ತಪ್ಪ–ಜುಂಜಪ್ಪನ ಕಥನಗಳೆರಡೂ ಹುಲ್ಲು–ನೀರಿಗಾಗಿ, ಶೀಲ–ಶೌಚಗಳಿಗಾಗಿ ಬೇಡನಾಯಕರೊಂದಿಗೆ ಸಂಘರ್ಷಕ್ಕಿಳಿದ ಕತೆಗಳಾಗಿದ್ದು, ಪಶುಪಾಲಕ ಸಂಸ್ಕೃತಿಯ

ಕಾಲಘಟ್ಟದ ಏಳು ಬೀಳಿನ ಹೃದಯ ವಿದ್ರಾವಕ ಚಿತ್ರಣವನ್ನು ಕೊಡುವ ಮೂಲಕ ಅಪರೂಪದ ಕಾವ್ಯಗಳಾಗಿವೆ.

**ಚಿಕ್ಕಣ್ಣ ಯಣ್ಣೆಕಟ್ಟೆ** ಸಂಪಾದಿಸಿರುವ **'ಚಿತ್ರದೇವರ ಕಾವ್ಯ'** (1998) ಕಾಡುಗೊಲ್ಲ ಬುಡಕಟ್ಟಿಗಷ್ಟೇ ಅಲ್ಲ ಮ್ಯಾಸಬೇಡ ಬುಡಕಟ್ಟಿಗೂ ಸೇರಿದ, ಸಾಂಸ್ಕೃತಿಕ ವೀರರ ಛಾಯೆಯುಳ್ಳ ಪುರಾಣ ಪುರುಷರ ಕಥನವನ್ನು ಹೇಳುವ ಕಾವ್ಯ ಒಂದು ಕಾಲಕ್ಕೆ ಈ ಎರಡೂ ಬುಡಕಟ್ಟುಗಳು ಒಂದೇ ಮೂಲಕ್ಕೆ ಸೇರಿದ್ದವೆಂಬುದನ್ನು ಈ ಪುರಾಣ ಪುರುಷರ ಕಥೆಗಳೇ ಸಾಂಕೇತಿಕವಾಗಿ ಹೇಳುತ್ತವೆ. ಈ ಕತೆ ಒಟ್ಟಾರೆ ಪಂಪನ ಆದಿಪುರಾಣದ ಭರತ–ಬಾಹುಬಲಿ ಪ್ರಕರಣವನ್ನು ನೆನಪಿಸುವಂತೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ.

ನಮ್ಮ ದೇವತೆಗಳಲ್ಲೆಲ್ಲಾ ಶಿವ–ಪಾರ್ವತಿಯರೇ ಅತ್ಯಂತ ಕರುಣಾಮಯಿಗಳು. ಲೋಕದ ಕಷ್ಟಕ್ಕೆ ಮಿಡಿಯುವ ಗುಣವುಳ್ಳವರು. ಜಗತ್ತಿನ ಕಷ್ಟ ಸುಖ ವಿಚಾರಿಸಲು ಆಗಾಗ್ಗೆ ಲೋಕಸಂಚಾರ ಮಾಡುವ ಅವರು ಒಮ್ಮೆ ಹೀಗೆ ಬಂದಾಗ, ಬೆಂಕಿ ಬಿದ್ದು ಭೂಮಿಯ ಜೀವರಾಶಿ ಆಕ್ರಂದನ ಮಾಡುತ್ತಿರುವಾಗ, ಕೆಳಗಿಳಿದು ಬಂದು ಬೆಂಕಿ ಆರಿಸುತ್ತಿರುವಾಗ ಪಾರ್ವತಿಯ ಮೈಯಿಂದ ಮೂರು ಬೆವರು ಹನಿಗಳು ಬಿದ್ದು, ಚಿತ್ತಯ್ಯ–ಕಾಟಯ್ಯ–ಓಬಳ ನರಸಿಂಹ ಎಂಬುವವರು ಹುಟ್ಟುತ್ತಾರೆ. ಅವರಿಗೆ ಬದುಕಲು ಬೇಕಾದ ಸೌಕರ್ಯವನ್ನೆಲ್ಲ ಕಲ್ಪಿಸಿ, ಚಿತ್ರಗಿರಿ ರಾಜ್ಯ ಮಾಡಿಕೊಟ್ಟು ಕೈಲಾಸಕ್ಕೆ ಹೋಗುತ್ತಾರೆ.

ಇತ್ತ ಕಾಟಯ್ಯ ಯೋಗಿಯಂತೆ ಬದುಕಿದರೆ ಅತ್ತ ಚಿತ್ತಯ್ಯ ಭೋಗಿಯಂತೆ ರಾಜ್ಯವಾಳುತ್ತಾನೆ. ಇಲ್ಲಿ ಯೋಗ–ಭೋಗಗಳೆರಡರ ಚಿತ್ರವೂ ದೊರೆಯುತ್ತದೆ. ಒಮ್ಮೆ ಬೇಟೆಗೆ ಹೋದ ಚಿತ್ತಯ್ಯ ಬ್ರಾಹ್ಮಣರ ಬೊಮ್ಮಯ್ಯನ ಮಗಳು ಗಂಗಿಮಾಳಮ್ಮನ ಮೇಲೆ ಮೋಹಗೊಂಡು ಮದುವೆಯಾಗುತ್ತಾನೆ. ಬೊಮ್ಮಯ್ಯ ಕೊನೆಗೆ ವಿರೋಧಿಸಿದರೂ ಅಸಹಾಯಕನಾಗುತ್ತಾನೆ.

ಚಿತ್ರಗಿರಿಯ ಅಂಚಿನ ಕತ್ತಲು ಕರಿಮಲೆಯಲ್ಲಿನ ಪ್ರಾಣಿಗಳ ಉಪಟಳವನ್ನು ಸದೆ ಬಡಿಯಲು ಚಿತ್ತಯ್ಯ ತನ್ನ ಖಜಾನೆಯಲ್ಲಿದ್ದ ಸ್ವಯಂಪ್ರಕಾಶವುಳ್ಳ ಭೂಚಕ್ರದ ಗೊಡಗಿ(ಕೊಡೆ)ನೊಂದಿಗೆ ಹೋಗುತ್ತಾನೆ. ಇದು ಆಯುಧಾಗಾರದಲ್ಲಿ ಹುಟ್ಟಿದ ಭೂ ಚಕ್ರದೊಂದಿಗೆ ಜೈತ್ರಯಾತ್ರೆ ಹೊರಟ ಭರತನ ಚಿತ್ರವನ್ನು ನೆನಪಿಸುತ್ತದೆ. ಅರಮನೆಯಲ್ಲಿ ಒಂಟಿಯಾಗಿ ಉಳಿಯಬೇಕಾಗಿ ಬಂದ ಗಂಗಿಮಾಳಮ್ಮನಿಗೆ ಕಾಲ ಕಳೆಯಲು ಮೂಳ ಎಂಬ ನಾಯಿ ಮತ್ತು ಗಿಡುಗ ಎಂಬ ಪಕ್ಷಿಯನ್ನು ಕೊಟ್ಟು ಹೋಗುತ್ತಾನೆ.

ತಿರುಮಣಿ ನಗರದ ಕಳ್ಳ ಕೊರಮರು ಈ ಭೂಚಕ್ರದ ಗೊಡಗನ್ನು ಕದಿಯುತ್ತಾರೆ. ಇಲ್ಲಿಂದ ಕತೆ ಒಂದು ಜನಪದ ಕತೆಯ ಘಟನಾವಳಿಗಳಂತೆ ತಿರುವು ಪಡೆಯುತ್ತದೆ.

ಕಾಟಯ್ಯನ ಕಾಲಜ್ಞಾನದ ಚಿಂತಾಮಣಿ ಹೊತ್ತಿಗೆಯಿಂದ ಗೊಡಗಿನ ನೆಲೆ ತಿಳಿಯುತ್ತದೆ. ಚಿತ್ತಯ್ಯ ರಾಜವೇಶ್ಯೆ ಪದ್ಮಾವತಿಯ ನೆರವು ಪಡೆಯುತ್ತಾನೆ. ಘೋರ ಯುದ್ಧದ ನಂತರ ಗೊಡಗನ್ನು ಮರಳಿ ಪಡೆದ ಚಿತ್ತಯ್ಯ ಹೆಮ್ಮೆ, ಅಹಂಕಾರಗಳಿಂದ ಬೀಗುತ್ತಾ ಬರುವಾಗ ಅವನ ಪೌರುಷಕ್ಕೆ ಯಕಶ್ಚಿತ್ ಕಪ್ಪೆ, ಮೊಲಗಳು ಸವಾಲು ಹಾಕುತ್ತವೆ. ಅವುಗಳೊಂದಿಗೆ ಹೋರಾಡಿ ಸೋತು ಬಸವಳಿದ ಚಿತ್ತಯ್ಯನ ಸಹಾಯಕ್ಕೆ ಅವನ ಹೆಂಡತಿ ಗಂಗಿಮಾಳಮ್ಮ, ಚಿತ್ತಯ್ಯ ಬೇಸರ ಕಳೆಯಲು ಕೊಟ್ಟ ನಾಯಿ, ಗಿಡುಗಗಳೊಂದಿಗೆ ಬರುತ್ತಾಳೆ. ನಾಯಿ ಹೋಗಿ ಮೊಲದ ಬೀಜ ಕಿತ್ತರೆ, ಗಿಡುಗ ಕಪ್ಪೆಯ ಕಣ್ಣು ಕುಕ್ಕಿ ಚಿತ್ತಯ್ಯನಿಗೆ ಗೆಲುವು ತಂದುಕೊಡುತ್ತವೆ. ಆದರೆ ಹೆಣ್ಣಿಂಗಸಿಗೆ ತಾನೇ ಕೊಟ್ಟ ವಸ್ತುಗಳಿಂದ ಗೆಲ್ಲಬೇಕಾಯಿತಲ್ಲ ಎಂದು ಚಿತ್ತಯ್ಯನ ಕೊಳಗೊಂಡ ಗರ್ವರಸ ಸೋರಿ ಹೋಗುತ್ತದೆ. ಇದು ವಿಜಯದ ಹಮ್ಮಿನಿಂದ ಬೀಗುತ್ತಿದ್ದ ಭರತನಿಗೆ ತನ್ನ ಪರಾಕ್ರಮ ದಾಖಲಿಸಲು ಶ್ರೀಪರ್ವತದ ಯಾವ ಶಿಲೆಯೂ ಖಾಲಿ ಇಲ್ಲದುದನ್ನು ಕಂಡಾಗ ಉಂಟಾದ ಗರ್ವರಸದ ವಿಸರ್ಜನೆಯ ಅವನುಭವವೇ ಇಲ್ಲಿಯೂ ಆಗುತ್ತದೆ. ಜೊತೆಗೆ ಬಾಹುಬಲಿಯೊಂದಿಗೆ ಎಲ್ಲ ಸ್ಪರ್ಧೆಗಳಲ್ಲಿ ಸೋತ ಭರತನ ಅವಮಾನದಂತೆಯೇ ತನ್ನ ಹೆಂಡತಿಯ ಪರಾಕ್ರಮದಿಂದ ಮುಖಭಂಗಿತನಾದ ಚಿತ್ತಯ್ಯನ ಸ್ಥಿತಿಯೂ ಆಗುತ್ತದೆ. ಅಲ್ಲಿ ಅಣ್ಣ ಭರತನ ಕ್ರೌರ್ಯದ ನಡವಳಿಕೆ ಬಾಹುಬಲಿಯಲ್ಲಿ ವೈರಾಗ್ಯ ಮೂಡಿಸಿದರೆ, ಇಲ್ಲಿ ಗಂಗಿ ಮಾಳಮ್ಮನಿಗೆ ಗಂಡನ ಔದಾರ್ಯರಹಿತ ಸಂಕುಚಿತ ನಡವಳಿಕೆಯಿಂದ ಅಸಹ್ಯವಾಗಿ ಬಂಡೆದ್ದು ಚಿತ್ತಯ್ಯನನ್ನೇ ತೊರೆದು ಹೋಗುತ್ತಾಳೆ. ವ್ಯವಸ್ಥೆಯ ಜಡ್ಡುಗಟ್ಟಿದ ಪ್ರತಿನಿಧಿಯಂತೆ ಚಿತ್ತಯ್ಯ ಒಂಟಿಯಾಗಿ ಚಿತ್ರಗಿರಿಗೆ ಹೋಗಿ ರಾಜ್ಯಭಾರ ಮಾಡುತ್ತಾನೆ.

ಈ ಇಡೀ ಕತೆಯ ಭೌಗೋಳಿಕತೆಯನ್ನು ಚಿತ್ರದುರ್ಗದ ಪರಿಸರದಲ್ಲಿ ಗುರುತಿಸಬಹುದು. ಚಿತ್ರಗಿರಿಯೇ–ಚಿತ್ರದುರ್ಗ, ಕತ್ತಲು ಕರಿಮಲೆ–ಈಗಿನ ಆಂಧ್ರಕ್ಕೆ ಸೇರಿದ ಕುಂದಿರ್ಪಿ ಬಳಿಯ ಬೆಸ್ತರಹಳ್ಳಿ (ಇಲ್ಲಿ ಬೊಮ್ಮಯ್ಯನ ಮೂಲನಿಧಿ ಇರುವ ದೇವಸ್ಥಾನ ಇದೆ) ಹಾಗೂ 'ತಿರುಮಣಿ' ಕೂಡ ಪಾವಗಡದ ಬಳಿಯ ನಾಗಲಮಡಿಕೆಯ ಪಕ್ಕದಲ್ಲಿ ಇರುವುದೇ ಆಗಿದೆ.

**ಡಾ. ಚಿಕ್ಕಣ್ಣ ಯಣ್ಣೆಕಟ್ಟೆ** (2002) ಯವರೇ ಸಂಗ್ರಹಿಸಿದ ಇನ್ನೊಂದು ಕಾವ್ಯ– **ಮಾಗೋಡು ಕಂಬದ ರಂಗನಾಥಸ್ವಾಮಿ ಕಥೆ.** ಇದು ಸಾಂಪ್ರದಾಯಿಕವಾದ ಶ್ರೀಹರಿಯ ಕಥೆಯನ್ನು ಹೇಳದೆ ಸ್ಥಳೀಯ ದೈವವಾಗಿ ಅವತರಿಸಿ ನೆಲೆನಿಂತ ಕಥೆಯನ್ನು ಹೇಳುತ್ತದೆ. ಹೀಗಾಗಿ ಇದು ಕಂಬದ ರಂಗನ ಸ್ಥಳ ಪುರಾಣವನ್ನು ಹೇಳುವುದರ ಮೂಲಕ ಈ ನೆಲದ ಕಥೆಯೂ ಆಗುತ್ತದೆ.

ಮರದಲ್ಲಿ ಕುಳಿತ ರಂಗನಿಗೆ ಸಿಡಿಲು ಹೊಡೆದು ಭೂಗತನಾದಾಗ ಉಕ್ಕಿನ ಪಾಳಿನ ರೂಪ ಪಡೆಯುತ್ತಾನೆ. ಬಬ್ಬೂರಿನ ಗೌಡ (ಈ ಗ್ರಾಮ ಚಿತ್ರದುರ್ಗ ಜಿಲ್ಲೆಯ

ತಾಲ್ಲೂಕು ಕೇಂದ್ರ ಹಿರಿಯೂರಿನ ಸಮೀಪದಲ್ಲಿದೆ) ಹೊಲ ಉಳುವಾಗ ಕುಳಕ್ಕೆ ತಾಗುತ್ತದೆ. ಈ ಅನಾಹುತದಿಂದ ಗೌಡನ ಸಮಸ್ತ ಪರಿವಾರ ಸಾಯುತ್ತದೆ. ಆದರೆ 'ನೆಲದಲ್ಲಿರುವ ಉಕ್ಕಿನ ಪಾಳು ತೆಗೆದು ಗರುಡಗಂಬ ಮಾಡಿಸಿದರೆ ನೀವೆಲ್ಲ ಬದುಕುತ್ತೀರಿ' ಎಂಬ ಅಶರೀರವಾಣಿಯಂತೆ ಗೌಡ ಗರುಡಗಂಬ ಮಾಡಿಸುತ್ತಾನೆ. ಅದು ಜಲಧಿ ಪೂರ್ಣ್ಯೋಜನೆಯ ನಂತರ ಬ್ಯಾಟೆಮರದಲ್ಲಿ ಲೀನವಾಗುತ್ತದೆ. ನಂತರ ಇದು ದಾಸರ ಚನ್ನಪ್ಪ ಎಂಬ ಕರಡೇರ ಗೊಲ್ಲರ ಹುಡುಗನಿಗೆ ಒಲಿದು, ಸಿರಾ ಬಳಿಯ ಮೇಲುಕುಂಟೆ ಏಣಿಗೆ ಬಂದು ನೆಲೆಸಿ, ಸತ್ತವರನ್ನು ಬದುಕಿಸುವಂತಹ ಅನೇಕ ಪವಾಡಗಳನ್ನು ಮೆರೆಯುತ್ತದೆ. ಅದು ನಿಂತಲ್ಲಿ ನಿಲ್ಲದೆ ಕೆರೆಯಾಗಲಹಳ್ಳಿ, ಬೋರಸಂದ್ರ, ಚಿಕ್ಕನಹಳ್ಳಿ ಮುಂತಾದ ಕಡೆ ಅಲೆಯುತ್ತಾ ಕೊನೆಗೆ ಬಂದು ಮಾಗೋಡಿನಲ್ಲಿ ನೆಲೆಸುತ್ತದೆ. ಹೀಗಾಗಿ ಈ ಕಥೆಯಲ್ಲಿ ಪವಾಡ, ಮಹಿಮೆಗಳು ಇಡಿಕಿರಿದಿರುವುದನ್ನು ಕಾಣಬಹುದು.


ಕಾಡುಗೊಲ್ಲರು ಮೂಲತಃ ಶೈವರೇ ಆದರೂ ವೈಷ್ಣವ ಆರಾಧನೆಯನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ 'ಶೈವ–ವೈಷ್ಣವಗಳ ದಿವ್ಯಸಂಗಮ'ವಾಗುವ ಕಥೆಯನ್ನು ಚಿತ್ತಯ್ಯ–ಕಂಬದ ರಂಗನ ಕಥೆಗಳೇ ಹೇಳುತ್ತವೆ. ನಮ್ಮ ಜನಪದರ ಎಲ್ಲವನ್ನೂ ಅಪ್ಪಿಕೊಳ್ಳುವ ಮಣ್ಣಿನ ಗುಣಕ್ಕೆ ಈ ಖಂಡಕಾವ್ಯಗಳು ಸಾಕ್ಷಿಯಾಗಿವೆ.

* * *

ಈ ಬಗೆಯ 'ಗಣೆ ಪದಗಳು' ಎಂಬ ಹೊಸ ಪ್ರಕಾರವೊಂದನ್ನು ಸಂಪಾದಿಸುವ ಹೊಣೆಯನ್ನು ನನಗೆ ನೀಡಿದ ಪ್ರಧಾನ ಸಂಪಾದಕರಾದ ಪ್ರೊ. ಹಿ.ಶಿ. ರಾಮಚಂದ್ರಗೌಡ ಅವರಿಗೆ, ಇದನ್ನು ಪರಿಶೀಲಿಸಿದ ಚಕ್ಕೆರೆ ಶಿವಶಂಕರ್ ಅವರಿಗೆ, ಈ ಸಂಗ್ರಹಕ್ಕೆ ಆಕರ ಒದಗಿಸಿದ ಎಲ್ಲ ಸಂಗ್ರಾಹಕರಿಗೆ ಕೃತಜ್ಞನಾಗಿದ್ದೇನೆ. ಈ ಕೃತಿಯನ್ನು ಸಂಪಾದಿಸುವಲ್ಲಿ ಆದ ನನ್ನ ಅಕ್ಷಮ್ಯ ವಿಳಂಬವನ್ನೆಲ್ಲ ಪ್ರೀತಿಯಿಂದಲೇ ಸಹಿಸಿದ ಜಾನಪದ ಅಕಾಡೆಮಿಯ ಆಗಿನ–ಈಗಿನ ಅಧ್ಯಕ್ಷರಾದ ಗೊ.ರು.ಚ.– ಡಾ. ಬಾನಂದೂರು ಕೆಂಪಯ್ಯ ಅವರಿಗೆ, ಜಾನಪದ ಅಕಾಡೆಮಿಯ ಅಂದಿನ–ಇಂದಿನ ರಿಜಿಸ್ಟ್ರಾರ್‌ಗಳಾದ ಡಾ. ಪ್ರಸಾದ್‌ಸ್ವಾಮಿ–ಶ್ರೀ ಪರಡ್ಡಿ ಅವರಿಗೆ ನನ್ನ ಗೌರವಪೂರ್ವಕ ನಮನಗಳು ಸಲ್ಲುತ್ತವೆ. ಹಾಗೂ ಅಕಾಡೆಮಿಯ ಪ್ರಕಾಶ್ ಮತ್ತೆ ಮತ್ತೆ ನನ್ನನ್ನು ನೆನಪಿಸುವ ಮೂಲಕ ಈ ಕೆಲಸ ಆಗುವಂತೆ ನೋಡಿಕೊಂಡದ್ದನ್ನು ಸ್ಮರಿಸದಿರಲಾರೆ. ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಗೀತಾಂಜಲಿ ಗ್ರಾಫಿಕ್ಸ್‌ನ ಮುದ್ರಣಾಲಯದವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

16–1–2013 **ಡಾ. ಮೀರಾಸಾಬಿಹಳ್ಳಿ ಶಿವಣ್ಣ**

ಬೆಂಗಳೂರು



ಗೊಲ್ಲನ ಮೋಹನ ಮುರಳಿಗೆ ಮರುಳಾದ ದನಗಳು



ಗಣೆ ನುಡಿಸುತ್ತಿರುವ ಪೂಜಾರಿ



ಜೀವರಾಶಿಯ ಸಾಕಾಣಿಕೆಯಲ್ಲಿ ಪಶುಪಾಲಕರು

## ಪರಿವಿಡಿ


೧. ಸಿಂಪಣ್ಣ ೧

೨. ಹೆಬ್ಬೂರು ಚಿಕ್ಕಣ್ಣ ೫

೩. ಬಯಲು ಸೀಮೆಗೌಡನ ಮಗಳು ೨೭

೪. ಚಿತ್ರದೇವರ ಕಾವ್ಯ ೩೩

೫. ಎತ್ತಯ್ಯನ ಕಾವ್ಯ ೯೩

೬. ಜುಂಜಪ್ಪನ ಪದಗಳು ೧೬೩

೬.೧ ಎತ್ತಯ್ಯ – ಜುಂಜಯ್ಯ ೧೬೩

೬.೨ ಜುಂಜಪ್ಪನ ಕಥೆ ೧೭೯

೬.೩ ತಾಳೇದುರುಗಿ ಸಂದು ೨೦೭


೬.೪ ಜುಂಜಪ್ಪನ ಸಾವು ೨೭೯

೬.೫ ಜಾಂಡೇವ ಎತ್ತಿಸಿರೋ ೨೮೬

೭. ಮಾಗೋಡು ಕಂಬದ ರಂಗನಾಥಸ್ವಾಮಿ ಕಥೆ ೨೯೬




'ಆದಾವ ನಮ್ಮ ಜೋಳ ಉಳಿದಾವು ನಮ್ಮ ಹಾಡು'



ಸಾಂಪ್ರದಾಯಿಕ ಶೈಲಿಯ ಗೊಲ್ಲಭಾಮೆಯರು

## ೧. ಸಿಂಪಣ್ಣ

ಸಿಕ್ಕೋನೆ[1] ಸಿಂಪಣ್ಣ ನಾಡಬ್ಯಾಡರು[2]
ಮ್ಯಾಲೆ ಓಗುತಾನೆ[3] ।
ಸಿಕ್ಕೋನೆ ಸಿಂಪಣ್ಣ ದೊಡಸಿಂಪಿ ಸಿಕ
ಸಿಂಪಿ ತಂಗೇರ್ಗೆ ಏಳುತಾನೆ[4] ।
ಮನೆಯ ಗೂಡುಗಳು ಜ್ವಾಕೆ[5]ಕಣೇರೆಂಬಂತ
ಏಳಿಬಿಟ್ಟು ಸಿಂಪಣ್ಣ ।
ಪುರುಸೌನ[6] ಬೆಟ್ಟದ ನೆತ್ತಿಗೆ ಮ್ಯಾಕೆಗುಳ
ಕರಕಂಡು ।
ಪಿಳ್ಳಂಗೋವಿ[7], ಕೈಯಲ್ಲಿ ಇಡುಕಂಡು ।
ಆಗಲೆ ಸಿಂಪಣ್ಣ ಕಲ್ಲಮ್ಯಾಲೆ ಕೂತಕಂಡು ।
ಆಗಲೆ ಮರಿಗಳ ಮೇssಸಾನೋss ।
ನೋಡೋನೆ ಸಿಂಪಣ್ಣ ಬ್ಯಾಡsರು ಬಂದವ್ರೆ ।
"ಸಿಂಪಣ್ಣ ನಿನ್ನಾಡಿನ ಮರಿಯಾಗೇ ।
ಒಂದಾಡಿನ ಮರಿಯಾನ ಕೊಡುಬಾರೋ ।
ಸಿಂಪಣ್ಣ" ಎಂದೇಳುತಾರೆ ।
"ಎಲೆಲಾ ಬ್ಯಾಡರುಡುಗೋರ ।
ಒಂದಾಡಿನ ಮರಿಯ ಕೊಟ್ಟಾರೆ ।
ಕೂಡಿದೆಣತಿ[8] ಕೊಟ್ಟಂಗೆ ।
ನಾ ಕೊಡಲ್ಲ ಬ್ಯಾಡರೂಡುಗೂರ ।
ಓಗೋಗಿರೋ ಉಡುಗೂರ" ।
ಎಂಬಂತ ಸಿಂಪಣ್ಣ ಏಳುತಾನೆ[9] ।
ಏಳಿದಾಗ ಎಲ್ಲಾರು ಕಾದವ್ರೆ ।
ಸಿಂಪುಣುನ ಬುಲ್ಡೆ[10]ಯ ವಡೆಯಾನ[11] ।
ಉಯ್ಯಾನ ।
ಆಡು ಮರಿಗುಳ ಅಟಮಾಸಿಕೊಂಡೇ ।
ಓಗಬೇಕೂss.... ।
ಆಲ-ದೇವೂರಿಗೆ ಕಾರ್ಯವ ಮಾಡಾಕೆ ।

---

ಹಾಡಿದವರು : **ಬೈಲಪ್ಪ**, ಕಾಡುಗೊಲ್ಲರು, ಬೆಟ್ಟದ ಗೊಲ್ಲರಹಟ್ಟಿ, ಕಂಬಾಳು ಗ್ರೂಪ್, ಶಿವಗಂಗೆ ಅಂಚೆ, ನೆಲಮಂಗಲ ತಾ., ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಸಂಗ್ರಹ : **ಸಿದ್ಧಗಂಗಯ್ಯ ಕಂಬಾಳು**
ಕೃತಿ : ಮಾತಾಡು ಮಲ್ಲಿಗೆ, ಬೆಂಗಳೂರು ವಿ.ವಿ., ಬೆಂಗಳೂರ. 1973

ಓಗಬೇಕು ಸಿಂಪಣ್ಣ ಆಡಿನ ಮರಿಗೂಳ ।
ಸಿಕಸಿಂಪಿ ದೊಡಸಿಂಪಿ
ಪುರಸೌನ ಬೆಟ್ಟದ
ಅರದಂಪೂಲಾ[12]ಎಲ್ಲಾ

ಮೆಚುಕೊಂಡ[13] ಆಡಿನಮರಿಗೂಳ ।
ಗೂಡಿಗೆ ತಂದು ಕೂಡಿ ।
ಕೊಳ್ಳಿರಮ್ಮೋss....

ಗೂಡಿಗೆ ಕೂಡಿಕಂಡು
ಜೀನಂಗಿ ನಾಯಿಮರಿ
ರೊಪ[14]ದಾಗೆ ಬಿಡಿರಮ್ಮೋss...

ಜೂನಂಗಿ ನಾಯಿಮರಿ ।
ರೊಪದಾಗೆ ಬಿಟ್ಟುಕೊಂಡು ।
ಬ್ಯಾಡರು ಕರಿತಾರೇ ಬಹುಜ್ವಾಕೆss...

ಆಲದೇವರೀಗೆ ಕಾರ್‍ಯವ
ಮಾಡಿಕಂಡು ।
ನಾಳೆ ಮೂರು ಗಂಟೇಗೆ ।
ಬರುತೀನಿ ।
ಸಿಂಪಕ್ಕ ಬಹುಜ್ವಾಕೇ ॥

ಆಗಲೇ ಕಾರ್‍ಯವ ಮಾಡಿಕಂಡೂ
ಬರುವಾಗ । ದಾರಿಯ ಕಾದವ್ರೆ ।
ಬ್ಯಾಡರು ತುಂಟ ಬಡ್ಡಿ ಮಕ್ಳೂ ।
ಆಗ ಗೆದ್ದೆಯಾ[15] ಬಂದಾನೂss ।

ಗೆದ್ದೆಯಾ ಬಂದವ್ನೆ ಸಿಂಪಣ್ಣ ।
ಆಗಲೇ ಬ್ಯಾಡರು ನಂಬೀಸಿ ।
ತಲೆಯ ಉಯ್ದವ್ರೆ[16] ಸಿಂಪಣನಾss ।
ಬ್ಯಾಡರು ತಲೆಯ ಉಯ್ದವ್ರೆ ಸಿಂಪಣನಾ ।

ಸಿಕಸಿಂಪಿ ದೊಡಸಿಂಪಿ ।
ನಾಯ್ಕುನ್ನಿ ರಾಮಣ್ಣ 17 ।

ನನ್ನೀಗ ಬುಲ್ದೇಯ ಉಯ್ದವ್ರೇ ।
ನನ್ನೀಗ ಏಳೇಯ ದಿನೂಕೆ ।

ನನಗುಡ್ಡಿಗಾಲವ 18 ಎರೆಯಾಕೆ
ಬನ್ನಿರಮ್ಮೊss.... ।

ಅಣ್ಣ ಸಿಂಪಣ್ಣ ನಿನುಬುಟ್ಟು ।
ಎಂಗೈಯ್ಯ ನಾವೇಯ ಇರೋದು ।
ಆಗಲೇ ಪುರುಸೌನ ಬೆಟ್ಟಾದ ।
ನೆತ್ತಿಗಳ ಸೌದೇಯ ಕಡಿಸವ್ರೋss ॥

ಸೌದೇನ ಕಡಿಸಿ ರಾಸೀನ ಆಕವ್ರೆ ।
ಸೀಮೆ ಎಣ್ಣೆಯ ತರಿಸವ್ರೇ ।
ಸಿಕಸಿಂಪಿ ದೊಡ್ಡಸಿಂಪಿ ।
ಕರಿಯ ಆಡಿನ ಮರಿಯಾ ।
ಬುದ್ಧಿಯ ಏಳೇ ಸಿಂಪಕ್ಕೋss ।

ಆಗಲೇ ನಾನೀಗ ಜೂನಂಗಿ ।
ನಾಯಿಮರೀ । ಜೂನಂಗಿ ನಾಯಿಮರೀ ।
ಏಳೇಯ್ಯಾ19 ದಿನೂಕೆ ಕೆಂಡಕೊಂಡ ।
ಆಗುಲೇ ತಕ್ಸಣ20 ।

ಬ್ಯಾಡಾರು ಕೈಗೆ ಬುರುಡೇಯ
ಕೊಡಲ್ಲೋ ।
ಏಳು ದಿನೂಕೆ ನಾವು ।
ಕೆಂಡಕೊಂಡನಾದಾಗ
ಏಳು ದಿನಕೆ ನಮ್ಮಾವ21 ।
ಗುಡ್ಡಿಗಾಲವ ಎರಿಬೇಕೆಂದೂss ।
ಸತ್ತ ಏಳು ದಿನಕ್ಕೆ ಗುಡ್ಡೆ 22
ಗಾಲವ ಎರಿಬೇಕು ।
ಸಿಕ್ಕ ಆಡಿನ ಮರಿಯೇ ।

ಸತ್ತ ಏಳು ದಿನಕ್ಕೆ ಆಲ[23] ।
ಎರಿಬೇಕು[24] ಎಂಬೂತ ।
ಬೇಡಿಕೊಳುತೀನಿ ।
ಬ್ಯಾಡರು ಕೈಯೊಳು ಮಾತ್ರ ।

ತಲೆಗಳ ಕೊಡಬ್ಯಾಡೀ ।
ಎಂದು ಏಳಿಬಿಟ್ಟ ಸಿಂಪಣ್ಣ ।
ಸಿಕಸಿಂಪಿ ದೊಡಸಿಂಪಿ ।
ಏಳು ದಿನಕೆ ಗುಡ್ಡಿ ಗಾಲವ ।
ಎರೆದು ಕೆಂಡಕೊಂಡ ಆಗ್ಯವ್ರೇss ।

* * *

---

1. ಚಿಕ್ಕವನೆ 2. ಬೇಡರು 3. ಹೋಗುತಾನೆ 4. ಹೇಳುತ್ತಾನೆ 5. ಜೋಕೆ 6. ಬೆಟ್ಟದ ಹೆಸರು 7. ಕೊಳಲು 8. ಹೆಂಡತಿ 9. ಹೇಳುತ್ತಾನೆ. 10. ಬುರುಡೆ(ತಲೆ) 11. ಒಡೆಯೋಣ 12. ಆರೆತಪ್ಪಲು 13. ಮೆಚ್ಚಿಕೆ 14. ದೊಡ್ಡಿ 15. ಗೆದ್ದು 16. ಹೊಡೆ 17. ನಾಯಿಯ ಹೆಸರು 18. ಹಾಲು 19. ಏಳನೇ 20. ತಕ್ಷಣ 21. ನಮ್ಮ ಮಾವ 22. ಸಮಾಧಿ 23. ಹಾಲು 24. ಎರೆಯಬೇಕು.

## ೨. ಹೆಬ್ಬೂರು ಚಿಕ್ಕಣ್ಣ

ಕಾರೇನಳ್ಳಿ [1] ಹಟ್ಟಿವೊಳಗೆ ಒಂದೊಂದೇ ಕೋಪಿನ ದೇವರು ।
ಒಬ್ಬೊಬ್ಬರೇ ಮಾಡ್ತಾರೆ ದಾಯಿಗರು [2]
ಅಳ್ಳೆವ್ವತಾಯ ಆವರಣ್ಣಗುಳು ಎತ್ತೆತ್ತಿ ಆಡ್ತಾರೆ ।
ಒಬ್ಬ ಮಗನಿದ್ದ ಸೆರಿಯಾಕೊಟ್ಟು ದನೀಗೆ ।
ಅಳ್ಳೆವ್ವ ಆ ತಾಯಿ ಹೋತಾಳೆ [ಮಗನತ್ತ]
ಅಳ್ಳೆವ್ವ ಕಾರೇನಹಳ್ಳಿ ಮೂರು ದಿಕ್ಕಿನಾಗೆ ಗೂಡು ಹೊಡೆದವ್ನೆ ।
ಕಾರೇನಳ್ಳಿ ಹಟ್ಟಿವೊಳಗೆ ನಿನ್ನಂದೋರು ಯಾರಮ್ಮ
ಯಾರಮ್ಮ ಬೈದೋರು.....
ಯಾರೂ ಬೈಲಿಲ್ಲ ಯಾರೂ ಅನಲಿಲ್ಲ..... ।
ಕಾರೇನಳ್ಳಿ ಹಟ್ಟಿವೊಳಗೆ ಒಂದೊಂದೆ ಕೋಪಿನ ದೇವರು [3]
ಒಬ್ಬೊಬ್ಬರೇ ಮಾಡ್ತಾರೆ ದಾಯಿಗರು
ಬಾರಪ್ಪ ನನ ಮಗನೆ ಮದುವಿ ಮಾಡತೀನಿ..... ।
ನನ್ನ ದನವೀನ ದುಕ್ಕ [4] ನನವೀಗೆ ಹೋಗವ್ವ ಮನೀಗೆ ।
ತಾಯಿ ಅಳ್ಳೆವ್ವ ಕಣ್ಣೀರಾಕುತಾಳೆ..... ।
ನಿನ್ನ ಕಣ್ಣಾಗೆ ಕಣ್ಣೀರ ಬಿದ್ದಾರೆ ಮುಂದೆ ಒಳ್ಳೇದಾಗಲ್ಲ ।
ಯಾವೆಣ್ಣ [5] ಮನೆ ನೋಡಿಕಂಡು ಬರುತಿ ಹೋಗವ್ವ ।
ಸುಕ್ರವಾರದ [6] ಸಂಜೀಗೆ ನಾನೆ ಬರುತೀನಿ ರಾತಾರಿ [7] ।
ಅವರವ್ವ ಅಳ್ಳೆವ್ವ ತಾಯಿ ಸಿಕ್ಕೀರ ನಾಗಮುದ್ದು [8] ।
ಅವರಣ್ಣನ ಮಗಳು ಮನಿನೋಡಿಕಂಡು ಬಂದವಳೆ ।
ರಾಗೀನೆ ಮಾಡಸುತಾಳೆ ನೆಲ್ಲ [9] ಮಾಡಸುತಾಳೆ ।
ಎಲ್ಲ ಸುಕ್ರವಾರದ ಸಂಜೀಗೆ ಹೆಣ್ಣ ಮಾಡಿಕೊಂಡು
ಬರುತೀವಿ । ಎಲ್ಲ ನೆಂಟರು ಬರಬೇಕು ಸುಕ್ರವಾರದ ಸಂಜೀಗೆ ।
ನೆಂಟರು ಬಂಟರೆಲ್ಲ [10] ಸಂಜೀಗೆ ಹೆಣ್‌ಕರ್‌ಕೊಂಡು
ಬಂದ್ರು । ಎಲ್ಲವ್ವ ತಾಯಿ ಅಳ್ಳೆವ್ವ ನಿನಮಗ ।
ಬರನಿಲ್ಲೊ [11] ಕನಿಮಗ [12] ಕಲಿವೀರ ಸಿಕ್ಕಣ್ಣ–ಬರುಲಿಲ್ಲ ।
ದೊಡಮನಿ ಹಿಟ್ಟಿನೊತ್ತಿಗೆ ದನನೋಡಿ ರಾಡಾಕಿ [13] ಬತ್ತಾನೆ ।
ಕಾರೇನಳ್ಳಿ ಹಟ್ಟಿಗೆ ಬರುತಾನೆ [ಬಂದದ್ದ ಕಂಡು] [14]

---

ಹಾಡಿದವರು : **ಮಾಸಯ್ಯ**, ಕಾಡುಗೊಲ್ಲರು, ಬುಗಡಿಹಳ್ಳಿ, ಗೊಲ್ಲರಹಟ್ಟಿ, ಸರಸೀಪುರ ಅಂಚೆ, ನೆಲಮಂಗಲ ತಾ., ಬೆಂಗಳೂರು ಗ್ರಾಮಾಂತರ ಜಿಲ್ಲೆ

ಸಂಗ್ರಹ : **ಸಿದ್ಧಗಂಗಯ್ಯ ಕಂಬಾಳು**

ಕೃತಿ : ಮಾತಾಡು ಮಲ್ಲಿಗೆ, ಬೆಂಗಳೂರು ವಿ.ವಿ., ಬೆಂಗಳೂರ. 1973

ಬಂದ ಕಾಣೆ ಅಳ್ಳೆವ್ವ ತಾಯಿ ನಿನ ಮಗ ।
ಕಾಲಾರತಿ ತಕೊಂಡ್ಹೋಗಿ[15] ಬೆಳಗಿ ಬೀದಿಗೆ ಸೆಲ್ಲಿ[16] ।
ಅವರವ್ವ ಹಿರಿಯೋಬ್ಬಿ ರಂಗಾಗೆ[17] ಆಸಡ್ಡ ಬಿದ್ದು[18] ಬತ್ತಾಳೆ ।
ಅವ್ರ ಸಾಸರ[19]ಕ್ಕೆ ಸರಿಯಾಗಿ ಹಸೆ ಹಚ್ಚಿ ಸುಕ್ರವಾರದ
ಸಂಜೀಗೆ ಸರಿಮಾಡಿ ಬಿಡುತ್ತಾರೋ ।
ಸನಿವಾರ[20] ಹೊತ್ತುಟ್ಟೋ[21] ಹೊತ್ತಿಗೆ ಚಿಕ್ಕಣ್ಣಗೆ ದಾರೆಮೂರತ[22] ।
ಮಾಡುತಾರೆ । ಸನಿವಾರದ ಸಂಜೀಗೆ ಮನಿಗೆ ಕರಕೊಂಡೋಗಿ
[ಕೈದುಡಗಿಸಿ] ನಂಟರು ಅಕ್ಕಿಕಾಳ ಮನಿಗೆ ಸುರಸುತಾರೆ[23] ।
ಹೆಣು ಗಂಡು ಕೈದುಡಗಿಸಿ[24] ಮನೀಗೆ ಬಿಡುತಾರೋ ।
ಹೊತ್ತಲಿಂತೆ[25] ಎದ್ದ ಚಿಕ್ಕಣ್ಣ ಹೋತೀನಿ ಅಳ್ಳೆವ್ವ ದನವೀಗೆ ।
ಯಾಕೋ ನನ ಮಗನೆ ಚಿಕ್ಕಣ್ಣ ಇಂತಾ ಕಾತಾಳ[26] ಬೀಳುತಿ ।
ನಂಟರು ಬಂಟರನೆಲ್ಲ ಸಾಗಾಕಿ ಹೋಗೀವಂತೇಳಪೋ ।
ನನ್ನ ದನವೀನ ದುಕ್ಕ ನನೀಗೆ ಹೋತೀನಕಣೆಳ್ಳೆವ್ವಾ ।
ಬಾರಪ್ಪ ಮನಿಗೋಗಿ ತಿಂಡೀನಾನ ಮಾಡಿಕೊಡುತಿನಂತ ಅನುತಾಳೆ ।
ಕೂಡೀದ ಸಿಕ್ಕೀರ ನಾಗಮುದ್ದೂಗೆ ಹಾಲ ಪಂಚಾಮೃತ
ದಡಿಗೆ ಮಾಡುತಾರೆ ।
ಆಳ್ಳೆವ್ವ ತಾಯಿ ವೋಗಿ ಬಾರಪ್ಪ ಕೈತೊಳಕೋಂತ ಕರಿತಾಳೋ ।
ಚಿಕ್ಕೀರ ನಾಗಮುದ್ದು ಕೈಗೆ ನೀರುಯ್ಯಿತಾರೆ ತಂದೂ ।
ಆಲಪಂಚಾಮರತದ[27]ಡಿಗೆ ಊಟಕ್ಕಿಕ್ಕೂತಾರೆ ಸಿಕ್ಕೀರನಾಗಮುದ್ದು ।
ಊಟಾ ಮಾಡಿಕೊಂಡು ಹೋತೀನಳ್ಳೆವ್ವಾ ಎಂದು ।
ಊಟಾ ಮಾಡಿಕೊಂಡು ಬೀದ್ಯಾಗೆ[28] ಹೋತಾನೆ ಸಿಕ್ಕಣ್ಣ[29] ।
ಯಿರುಬೋರ[30] ಬಾಮೈದ ಹುಡುಗುಡುಗಾರಕೂಟೆ ಚಂಡನಾಡೂತಾನೋ ।
ನಿಮ್ಮಾವಗೆ ರಾತೆ[31] ಮದುವಾತು[32] ಸನಿವಾರ ।
ಹೋತಾನೆ ಯಿರುಬೋರ ನಿಮ್ಮಾವೋ । ನಿನ್ನಿಂದೆ[33] ನಾನೇ ಬರುತೀನಿ ಮಾವೊ ।
ಬ್ಯಾಡಕಣೋ ಬಾಮೈದ ನನ ದನವೀನ ದುಕ್ಕಕೆ ನೀನು ಬರುಬ್ಯಾಡ ।
ಇಲ್ಲ ಕಣೋ ಮಾವ ನಿನ್ನಿಂದೆ ನಾನೇ ಬರುತೀನೋ ।
ಮನಿಗೆ ಕರಕಂಡು ಬಂದು ಏನವ್ವ ಯಿರುಬೋರ ಬಾಮೈದ ।
ನನ ಹಿಂದೆ ಬಿದ್ದು ಬರುತಾನೆ ।
ಬ್ಯಾಡ ಕಣೋ ಯಿರುಬೋರ ಹೋಗುಬ್ಯಾಡ ।
ಇಲ್ಲಕಾಣಳ್ಳಮ್ಮ ನಾನೇ ಹೋತೀನಿ । ಇಲ್ಲಾ ಕಣಜ್ಜಮ್ಮ ನಾನೇ ಹೋತೀನಿ ।
ಅಕ್ಕಿ ಬಾನುಣ್ಣಕ್ಕಿಕ್ಕಿ[34] ಕರಕೊಂಡೋಗೋ ನನಮಗನೆ ಚಿಕ್ಕಣ್ಣ ।

ಹೊದಿಯಾಕೆ ಬಟ್ಟೆಕೊಟ್ಟು ಕರಕೊಂಡೊಗಪ್ಪ ।
ಹೋಗೋದು ಸರಿಕಣೋ ನನಮಗನೆ ಚಿಕ್ಕಣ್ಣ ।
ಬ್ಯಾಡಾರ ಜಾಲಿ ವನಕೆ ದನಗಳ ಬಿಡುಬ್ಯಾಡ ।
ರಾಡ ತಗದು ಈಸೀಗೆ[35] ದನುಗಳ ಕರಕೊಳೊ ಯಿರುಬೋರ ।
ಯಾವ ಕಾವಲಿಗೆ[36] ಕರಿಯಾಲೊ ದನುಗಳ ।
ಬ್ಯಾಡರು ಜಾಲಿ ವನಕೆ ದನುಗಳ ಬಿಡಬ್ಯಾಡೆಂದು
ಅಳ್ಳೆವ್ವತಾಯಿ ಹೇಳವಳೇ ।
ಎಳ್ಳೊಲದ[37] ಬಾರೀಗೆ[38] ಆರಕೋಳೋ ದನುಗಳ ।
ಬ್ಯಾಡರ ಜಾಲಿಗೆ ದನಗಳ ಬಿಡದ ಮ್ಯಾಲೆ ।
ಸತ್ತಕೂಟಾವೇನೋ ಮಾವಾ [ಎರಡನೇ ಬಾರಿ ಹಾಡಿದಾಗ :
ಬ್ಯಾಡರ ಜಾಲಿವನಕೆ ದನಗಳ ಬಿಡದ ಮ್ಯಾಲೆ ನಾವು
ಸತ್ತಕೂಟಾವೇನೋ ಮಾವ]
ತಾಯಿ ಹೇಳ್ಯವಳೇ ಇರುಬೋರ ಬಾಮ್ಯೆದ ಬಿಡುಬ್ಯಾಡ ।
ನಾಬಿಟೇ ಬಿಡುತೀನಿ ಮಾವ ಬ್ಯಾಡರ ಜಾಲಿಗೆ ದನಗಾಳ ।
ಎಲ್ಲಾನ ಹೋಗಲಿ ಬ್ಯಾಡರ ಜಾಲಿವನಕೆ ವಿರುಬೋರ
ಕರಿಯೋ ದನಗಾಳ ।
ಕರೆದಾನೆ ಬ್ಯಾಡರ ಜಾಲಿವನಕೆ ದನಗಳ ವಿರುಬೋರ ।
ಸಾಯಾನುಕಾಲದ[39] ತನಕ ಮೇಸಿ ದನಗಳ ।
ಬ್ಯಾಡರ ಜಾಲಿವನದಾಗೆ । ಬ್ಯಾಡರ ಜಾಲಿವನಕೆ ಗೂಡತಿರುವಿ[40] ।
ಗೂಡಿಗೆ ದನಗಳ ಬಗುಸಿ[41] ಒಳವೀಕೆ[42]
ಅಲೂ ಪಂಚಾಮೃತದಡೀಗೆ ಮಾಡಿಕೊಂಡುಂಡು ।
ಸೀರ‍್ಯದ ಸಿಕ್ಕಡಿಕೆ[43]ದಾರೇದು ಬಿಳಿಯಾಲೆ[44] ನಾಗಮಂಗಲದ
ಕೆನಿಸುಣ್ಣ । ಸೀರ‍್ಯದ ಸಿಕ್ಕಡಿಕೆ ದಾರೇದು ಬಿಳಿಯಾಲೆ ।
ಮೆಲ್ಲಿ ಇಬ್ಬರೂ । ಚಿಕ್ಕಣ್ಣ ಗಣೆ ತಕ್ಕಂಡ ।
ವಿರುಬೋರ ತಾಳ ತಕ್ಕಂಡ ।
ಗಣ್ಯಾನ[45] ಸುಗುಲೀಗೆ[46] ತಾಳಾದ ಗಸ್ತೀಗೆ ।
ದೊಡ್ಡೊಳವನಳ್ಳಿ ನಾಯ್ಕರ[47] ಮಕ್ಕಳ ಕರಬಾನದ ಸೋಲೆ
ಉದುರುತಾವೇ ।.................
ಯಾವಾನೋ ನಮ್ಮ ಜಾಲಿವನಕೆ ಬಿಟ್ಟು ।
ಗಣೆಯಾನ ಸುಗುಲೀಗೆ ತಾಳಾದ ಗಸ್ತೀಗೆ ।
ನಮ್ಮ ಕರಬಾನದ ಸೋಲೇ ಉದುರೀದೋ ।

ಇಪ್ಪತ್ತು ಸಾವುರದ[48] ಜನಗೂಳೆ ಬೆನ್ನಟ್ಟಿ ಬರುವೋನ ಬನ್ನಿರಿ ।
ಇಪ್ಪತ್ತು ಸಾವುರದ ಜನಗಳೇ ಬರುತಾರೆ ।
ಯಜ್ಜಜ್ಜಮಾನುಗಳು[49] ನಾಯಕರು ।
ಸೋರೆಕುಂಟೆ ಸರಗಲುಪೆಂಟೆ[50] ಗಿರಿಯಣ್ಣ ಗೌಡನ ।
ಬಂದಪ್ಪಣೆ ಕೇಳಿ ನಾವು ಬರುತೀವಿ ।
ನೀವಿಲ್ಲೆ ಇರಿರಂತ ಗಂಡಮನಸ ಮಾಡಿ ಹೋತಾರೆ ।
ಏನೇನೋ ಗಿರಿಯಣಗೌಡ ಯಾರೋ ನಮ್ಮ ಜಾಲಿವನಕೆ
ಬಿಟ್ಟು । ಗಣೆಯಾನ ಸುಗುಲೀಗೆ ತಾಳಾದ ಗಸ್ತೀಗೆ ।
ನಮ್ಮ ಕರಬಾನದ ಸೋಲೆ ಉದುರೋದೋ ।
ಅಟ್ಟಿ ಬರುತೀವಿ ಗಿರಿಯಣ್ಣಗೌಡೋ ।
ಅವ್ನೇ ಬೆದಿರ‍್ಯಾನು ಅವ್ನ ದನಗಳೆ ಬೆದರ‍್ಯಾವು ।
ನೀವು ಹೋಗಬ್ಯಾಡಿ ।
ಹೊತ್ತುಟ್ಟೊ[51] ಹೊತ್ತೀಗೋಗಿ ನಾನೇ ಅಟ್ಟಿ ಬರುತೀನಿ ।
ನಾಯ್ಕ ಮಕ್ಕಳೀರ । ನಿಮ್ಮೂರಿಗೆ ನೀವೋಗಿ
ನಾಯ್ಕ ಮಕ್ಕಳೀರ ।
ಹಿಂದಾಕೆ ತಿರುಗಿ ಹೋತಾರೆ ಇಪ್ಪತ್ತು ಸಾವಿರ
ಜನಗೂಳು । ಹೊತ್ತು ಹುಟ್ಟಿ ಬರುವೋದು ।
ಗಿರಿಯಣ್ಣಗೌಡ ಚಿಕ್ಕಣ್ಣನ ಗೂಡಿನ ಬಾಗಿಲಿಗೋಗಿ ।
ಯಾರಯ್ಯ ಗೂಡಾಗೆ ಇರವೋರೆಂದೇ ಕೇಳುತಾನೆ ।
ಯಾಕೋ ಗಿರಿಯಣ್ಣಗೌಡ ನಾನು ನೀನು ಗೆಣೆತಾನ ।
ಮಾಡಿದೋರಲ್ಲವಾಂತ ಗೂಡಿನ ಬಾಗಿಲ ತೆಗೆದೇ ।
ಒಳಕೇ ಬಿಟುಕೊಳುತಾನೇ ಚಿಕ್ಕಣ್ಣ ।
ಕಲ್ಲಿನಬೆಂಕಿ[52] ಹಚ್ಚಿ ಗೌಡನ್ಯ[53] ಅಡಿಗೆ ಮಾಡೋ
ಈರುಬೋರ । ಗಿರಯಣಗೌಡನು ಚಿಕ್ಕಣ್ಣನು
ಇಬ್ಬರು ಏಗಸಮದಾ[54] ಮಾತಾಡುತಾರೆ ।
ಏನೇನೋ ಚಿಕ್ಕಣ್ಣ ನಿಮ್ಮ ಗಣೆಯಾನ ಸುಗುಲೀಗೆ ।
ತಾಳಾದ ಗಸ್ತೀಗೆ ದೊಡ್ಡೊಳವನಳ್ಳಿ ನಾಯ್ಕರ ಮಕ್ಕಳ
ಕರಬಾಲದ ಸೋಲೆ ಉದುರೋದ್ವಂತೆ ।
ಇಪ್ಪತ್ತು ಸಾವುರದ ದಂಡೇ ಬಂದಿತ್ತು ಕಾಣೋ ಸಿಕ್ಕಣ್ಣ ।
ನಾವಟ್ಟಿ[55] ಬರತೇವಂತ ನಮ ಮೇಲು[56] ಕೇಳಿದರು ।
ಅವ್ನೇ ಬೆದಿರ‍್ಯಾನು ಅವ್ನ ದನುಗಳೇ ಬೆದಿರ‍್ಯಾವು

ಹೋಗಬ್ಯಾಡೀರಂತ ಹೇಳೀದೆ ।
ಹೊತ್ತುಟ್ಟೋ ಹೊತ್ತೀಗೊಗಿ ನಾನಟ್ಟಬರುತೀನಂತ ಹೇಳಿದೆ ಸಿಕ್ಕಣ್ಣ ।
ಕೊಳ್ಳೀರಿ ಮಾವ ಕೈತೊಳಕಳೀಂದು ಈರಬೋರ ಬಾಮೈದ–ನೀರತಂದ ।
ಚಿಕ್ಕಣ್ಣನು ಗಿರಿಯಣಗೌಡ ಕೈಕಾಲು ಮಕವ
ತೊಳಕಂಡು ಇಬ್ಬರು ಸರಿಬೆರಕೆ[57] ಊಟ ಮಾಡತಾರೆ ।
ಊಟಾನೆ ಮಾಡಿ ಸೀರ್ಯದ ಚಿಕ್ಕಡಕೆ ದಾರ್‍ಯಾದ ಬಿಳಿಯೆಲೆ
ನಾಗಮಂಗಲದ ಕೆನಿಸುಣ್ಣ । ಮೆಲುತಾರೆ ಅಡಿಕೇಲೆ ।
ಹೊಗುಬ್ಯಾಡ ಚಿಕ್ಕಣ್ಣ ನಾನು ನೀನು ಇಲ್ಲೇ ಇರುವೋನ ।
ಸೋರೆಕುಂಟೆ–ಸರಗಲುಪೆಂಟೆಗ್ಹೋಗಿ ।
ದನಗಳ ಬಿಟಕೊಂಡೆ ಬರುತೀನಿ ನೀನೋಗುಬ್ಯಾಡ ಚಿಕ್ಕಣ್ಣ ।
ದನಗಾಳ ಬಿಟುಕೊಂಡು ಬಂದ ।
ಗೌಡನ ದನಗೂಳು ಚಿಕ್ಕಣ್ಣನ ದನಗೂಳು.....
ಎಳ್ಳೊಲದ ಬಾರಿಗೆ ಯಾರೊಡದು[58] ಇಬ್ಬರು ।
ಕರಿಯಾ ಗುಂಡಿನ ಮ್ಯಾಲೆ ಕೂಕಂಡೇಗಸಮದ ಮಾತನಾಡುತಾರೆ ।
ದೂಳೀಕಟ್ಯಾಗೆ[59] ಕಟ್ಟೀನಾಕ್ಕೊಂಡು ಆಟಾನಾಡುತಾರೆ ।
ಗಿರಿಯಣಗೌಡ ಆವು ಸೋರೆಕುಂಟೆ ಸರಗಲು ಪೆಂಟೆಗೋಗುತಾವೆ ।
ಚಿಕ್ಕಣ್ಣನ ದನುಗಳು ಎಳ್ಳೋಲದ ಬಾರೆಗೂಡಿ ಗೋಗುತಾವೆ ।
ಏನೇನೋ ಚಿಕ್ಕಣ್ಣ ನೀನೋಗುಬ್ಯಾಡ ।
ನಾನು–ನೀನು ವರ್ಸಾರು ತಿಂಗಳೇ[60] ಇಲ್ಲೇ ಇರುವೋನ ।
ನನ್ನ ದನಗಳು ಕುರಿದಲೆ[61] ಬಿದ್ದೋದೋ ನಿನ್ನಾನೆ ದನಿನಾಗೆ ।
ಮೂರ ಕರುಗಳ ಕೊಟ್ಟೇನೊ ಕೊಟ್ಟೇನೋ[62] ಚಿಕ್ಕಣ್ಣ ।
ನನ್ನವು ಮೂರು ಕರುಗಳ ನೀನೇ ಹೊಡಕೊಂಡೋಗಪ್ಪ
ಅಂಗ್ಯಾಗಲೇಳು ಗಿರಿಯಣ್ಣಗೌಡ ।
ಆವಿನ ಮುದ್ದ[63] ಬಾಯಾಗೆ ಹಲ್ಲಿಲ್ಲ ತಿಕದಾಗೆ ಕೆಚ್ಚಲಿಲ್ಲ ।
ಅಂತಾದೊಂದಸುವೆ[64] ಈದಿರಬೋದು
ಆವಿನ ಮುದ್ದಂದ ಏನೇನೋ ಚಿಕ್ಕಣ್ಣ ।
ನನ್ನ ದನೀನಾಗೆ ಹಸಿನಾಗೆ ಹಾಲಿಲ್ಲ..... ।
ನಿನ್ನಾನೆ ದನವೀಗೆ ಊಡಾಕ್ಕೋ[65] ಈ ಕರುವಾ ।
ನಿನ್ನ ಕರವಾ ನಾನೂಡಾಕ್ಕೋಣೋಕೆ ನನಗೇನ ।
ನನಗೇನ ಕಮ್ಮಿ ಮಾಡ್ಯವನೋ ಹಿರಿಯೋಬಳಿ ರಂಗಾ ।

ಬ್ಯಾಡ ಕಣೋ ಸಿಕ್ಕಣ್ಣ ನಿನ್ನ ಮನಿಯಾಗಿದ್ದರೆ
ಒಂದು ಮುದ್ದಿಟ್ಟ[66] ನುಂಡೇನು ಒಂದು ಮಗೇ[67] ನೀರ ಕುಡಿದೇನು ।
ಅನ್ಯಗರಿಗೆ[68] ಕೊಟ್ಟಾರೆ ನನಗೇನು ಬರುತಾದೋ ।
ಚಿಕ್ಕಣ್ಣ ನಿನ್ನ ಮನಿಯಾಗಿದ್ದರೆ ಒಂದು ಮುದ್ದಿಟ್ಟ ನುಂಡೇನು
ಒಂದು ಮಗೆ ನೀರ ಕುಡಿದೇನು ।
ಕರಿಯಾ ಕಲ್ಲಳ್ಳದಾಗೆ[69] ಹೋಗೋ ಗಂಗಮ್ಮನ ತಕ್ಕೊಂಡು
ಬಾಸೆ ಪರಮಾಣ ಮಾಡತಾನಾವಿನಮುದ್ದ ।
ಈ ಕರುವೀಗೆ ನಾನೇ ತಪ್ಪಾಡಲ್ಲ ಕಣೋ ಚಿಕ್ಕಣ್ಣ
ಬಾರುಬಾರೋ ಈರುಬೋರ ಬಾಮ್ಮೈದ ।
ಹನ್ನೆರಡೆ ವರ್ಸಾದ ಗೊಡ್ಡು ಬಿದ್ದ ಗಂಗೆ ಗೌರಿಯ ಕರಿಯೋ ।
ಗಂಗೆ ಗೌರಿ ಬಂದು ಕರುವ ಬೋರಾಡಿ[70] ಕೊಂಡು ಕುಡುಸುತಾವೆ ।
[ಆಕರ] ಇವತ್ತೆ ಬೆಳಿಯಂದ್ರೆ ನಾಳಿಕೆ ಬೆಳಿಯಾದು ।
ನಾಳಿಕೆ ಬೆಳಿಯಂದ್ರೆ ಇವತ್ತೆ ಬೆಳಿಯೋದು ।
ಏನೇನೋ ಈರುಬೋರ ಬಾಮ್ಮೈದ ।
ಸೋರೆಕುಂಟೆ–ಸರಗಲುಪೆಂಟೆ ಅಂಗಡಿ ಸೆನ್ನ[71] ।
ಅಕ್ಕಸಾಲಿಗರುಡುಗ[72] ನಮ್ಮೋರಿಗೆ ವಡವೆ
ಮಾಡಿಕೊಡು ತರತಾನೇನೋ ಕೇಳಿಕಂಡು ಬಾರೋ ಬಾಮ್ಮೈದ ।
ಸಿನ್ನದ[73] ಹಣೆಕಟ್ಟು ಸಿನ್ನಾದ ಕಾಲಕಡಗ
ಬೆಳ್ಳಿಯ ಕೋಡಣಸು ಬೆಳ್ಳಿಯ ಗುಬುಕಟ್ಟು[74]
ಈ ವಡವೆ ಮಾಡಿಕೊಡುತಾನೇನೋ ಕೇಳಿಬಾರೋ ।
ಸೋರೆಕುಂಟೆ ಸರಗಲು ಪೆಂಟೆಗ್ಹೋದ ವೀರುಬೋರ ಬಾಮ್ಮೈದ ।
ಅಂಗಡಿ ಸೆನ್ನಣ್ಣ ಅಕ್ಕಸಾಲಿಗರುಡುಗ ।
ನಮ್ಮೋರಿ[75]ಗೊಡವೆ ಮಾಡಿಕೊಡುತಾನೇನೋ
ಕೇಳಿಬಾರೆಂದ ನಮ ಮಾವ ।
ಸಿನ್ನದ ಕಾಲಕಡಗ ಸಿನ್ನಾದ ಅಣೆಕಟ್ಟು[76]
ಬೆಳ್ಳಿಯ ಗುಬುಕಟ್ಟು ಬೆಳ್ಳಿಯ ಕೋಡಣಸು
ಮಾಡಿಕೊಡತೀನಿ ಈರುಬೋರಣ್ಣ ।
ನಮ್ಮ ವಡವೆ ಮಾಡೋನಾದರೆ ಊರಾಗೆ ಮಾಡಬ್ಯಾಡ
ಊರಾ ಮೂಡು ದಿಕ್ಕಿನ ಆಲದ ಮರದಡಿಲಿ
ಅಂಗಡಿ ಇಕ್ಕೊಂಡು ಕೂಕೋ[77] ನಾನಿಕ್ಕೇರಿನಾ[78]ಣ್ಯಾವ ತರತೀನಿ ।

ಏನು ಮಾವ ನಮ್ಮೋರಿಗೆ ವಡವೆ ಮಾಡಿಕೊಡು
ತಾನಂತಾನಂತೆ ಅಂಗಡಿಸೆನ್ನಣ್ಣ ।
ಕಾಲುಳ್ಳಬಿಟ್ಟು ಹನ್ನೆರಡೇವರ್ಸಾದ ಗೊಡ್ಡುಗಳ
ಕೆಡವಿ...................?
ಸಣ ಗಂಬಳಿನ್ಹಾಸಿ ಇಕ್ಕೇರಿನಾಣ್ಯಾವ
ಸಣ ಗಂಬಳಿಮ್ಯಾಲೆ ಕೊಂಬಿನಾಗಳದು ಗುಡ್ಡೇನಮಾಡಿದ ।
ಈರುಬೋರು ಬಾಮ್ಮೈದನ ಮ್ಯಾಲೆ ಮೂಟೆ ಕಟ್ಟೊರಸಿ ।
ಏನೇನೋ ಈರುಬೋರ ಬಾಮ್ಮೈದ ನಮ್ಮೊಡವೆ
ಮೂರುತಿಂಗಳು ಮಾಡೀದರಾಗಲ್ಲ ಆರು ತಿಂಗಳು ಮಾಡಿ
ದರಾಗಲ್ಲ ।
ಅಕ್ಕಸಾಲಿಗರುಡುಗ ।
ತಣಿನೀರ ನುಯ್ಯೋಬೇಕು ।
ತಣಿಬಟ್ಟೆ ವದುಕೋಬೇಕು ।
ಆಗೋಭರಣದ[79] ವಡವೇನೆಲ್ಲ ಮನಸೀಗೆತಕ್ಕಂಡು ।
ಅಡಿಗಲ್ಲಮ್ಯಾಲೆ ಕಾಸಿ ಗಟ್ಟಿ ಮಾಡಿಕ್ಕಿ
ಎರಡೇ ಕೈಯಾಗೆ ಸುತ್ತೀಗೆ ತಕ್ಕಂಡು
ಹಾಕಿದರೆ ನಮ್ಮೊಡವೆಯಾಗಿ ನಿಲುತಾವೆ ।
ಆಸಯ್ಯ ಈರುಬೋರ ಸಣಗಂಬಳೀನ ।
ವಡವೆನೆಲ್ಲಾ ಸಣಗಂಬಳೀ ಮ್ಯಾಲಧರಿಸಿ
ಅಕ್ಕಸಾಲಿಗರುಡುಗ ಈರುಬೋರಣ್ಣ ನಮ್ಯಾಲೆ
ಮೂಟೆಕಟ್ಟಿ ಹೊರಸೀದ ।
ಅಕ್ಕ ಸಾಲಿಗರುಡುಗಾ ಒಡ್ಡಯ್ಯ ಬಟ್ಟೆಸೆರಗ ।
ದಟ್ಟಿಪರದೀಗೆ[80] ಕೈಯಿಕ್ಕಿ ಈರುಬೋರ
ಮೂರಿಡಿಯ ಇಕ್ಕೇರಿ ನಾಣ್ಯಾವ ಅಕ್ಕಸಾಲಿಗರುಡ
ಗನಿಗ್ಹಾಕಿ ಕೊಳ್ಳಯ್ಯ ನಿನಕೂಲಿ ನಿನಗೆಂದಾ ।
ಸಿನ್ನಾ[81] ಬೆಳ್ಳೀನೆ ಮಡಿಗಿಕೊಳ್ಳಯ್ಯ[82] ನಿನ್ನ ಉಗುರು ಕಣ್ಣೇ ।
ಮಣ್ಣಾಗಲ್ಲಾ ಅಂತಂದಾ ।

ಬಾರೊ ಮಾವ ವಡವೆ ತಂದಿವ್ನಿ ಇಳಿಸೆಂದ ಗೂಡಿಗೆ ।
ಅಕ್ಕಸಾಲಿಗರ ವಡವೆಯ ಅಂಗೈ[83] ತರುವೊ
ಕಾಗದು ಗೂಡಿಗೆ–। ಕರಿಕಲ್ಹಳ್ಳಕೋಗಿ

ವೊಳೆಬೆಳಗೆ [84] ಮಾಡಿಕೊಂಡು ಬಾ ಹೋಗೋ
ಈರುಬೋರ ಬಾಮೈದ ।
ಬಾರು ಮಾವ ವಳಬೆಳಗ ಮಾಡಿಕೊಂಡು
ಬಂದಿವ್ನಿ । ಮೂಟೆ ಇಳಸು ಬಾರು
ಮಾವ । ಸಣಗಂಬಳೀನ್ಹಾಸಿ ಮೂಟೇನಿಳಿಸಿ ।

ಹೊಂಬಣ್ಣದುನುಗ[85] ನಂದಿ ಮಕದ ಸೆಲುವ[86] ಹೋರಿಯ ಕರದು ।
ವಡವೇಯ ಧರಿಸೋ ಈರುಬೋರ ಬಾಮೈದ ।
ನಾನು ಧರಿಸೀದ ವಡವೇ ಚಂದ್ರ ಸೂರಯದಮ್ಮ [87]
ಇರಾತಕ್ಕ [88] ಇರುತಾದೇನ ಮಾವ
ನೀನೇ ಹೋರಿ ಕರದು ವಡವೆ ಧರಿಸೋ ಮಾವ ।
ವಡವೇನೆ ಧರಿಸೀದ ಹೋರಿಯ ಕರೆದು ।
ವಡವೇನೆ ಧರಿಸೀದ ಸಿಕ್ಕಣ್ಣ ಗಣೆಯಾನೆ ತಕ್ಕಂಡ ।
ವೀರಬೋರ ತಾಳನೆ ತಕ್ಕಂಡ ।
ಗಣೆಯಾನ ಸುಗುಲೀಗೆ ತಾಳಾದ ಗಸ್ತೀಗೆ
ಇಬ್ಬರ ಬುಜದಮ್ಯಾಲೆ ಗದ್ದಾ [89] ನೂರಿಕೊಂಡು ಹೋರಿ ।
ದೂಳಿಕಟ್ಟಿಗೆ[90] ವೊಳೆಬೆಳಗೆ ಹೋತಾದೆ ।
ಸಿಕ್ಕಣ್ಣನ ದನಗಳು ಹಿಂದಿಂದೆ ಹೋತಾವೆ ।
ಆಕsಡೆ ಕೋಡ್ಯಾಗೆ ಕುರಿಯ ಮುದ್ದ [91] ಕೂಕಂಡು ।
ಯಾವನೋ ಗೊಲ್ಲರುಡುಗ ಸತ್ರೀಕ್ಕಿಲ್ಲ[92] ಸೂರೆಪಾನಿಲ್ಲ[93] ।
ಯಾವನೋ ಗೊಲ್ಲರುಡುಗ ವಳೆಬೆಳಗೆ ಮಾಡಾಕೆ
ದೂಳಿಕಟ್ಟಿಗೆ ಹೋದ ಕುರಿಯ ಹುಡುಗುರ್ರಾ ।
ವೊಳೆಬೆಳಗೆ ಮಾಡಿಕೊಂಡು ದೂಪಾಲದ ಮರದತಾಕೆ[94] ಯಾರೊಡೆದ ।
ಆಕಡೆ ಕೋಡ್ಯಾಗೆ ಕುರಿಯಮುದ್ದ ಹುಡುಗುರ್‍ರಕೂಡೆ
ಏನಂತ ನುಡೀತಾನೆ–ಅವ್ನ ದನುಗಳು ಬಿಳಿಯವಾಟೆ[95]
ದನುಗಳು ಬಿಳಿಯಗೊರಸಿನ ದನಗಳು । ನಮದನಗಳು ।
ಕರಿವಾಟೆ ದನಗಳು ಕರಿಯ ಗೊರಸಿನ ದನಗಳು ।
ಇದು ನಮ್ಮಸಿನಾಗೆ ಹುಟ್ಟಿದ ಹೋರಿಕಣಲಾಂತ
ಹೇಳುತಾನೆ ಕುರಿಯಮುದ್ದ ।
ಯಾತರ ಮಾತಾಡತೀಯಲಾ ಕುರಿಯಮುದ್ದ ಕುರಿಯಂಗೆ[96]
ಕುರೀ ಹುಟ್ಟಿಗೆ ಕುರಿಯಿಲ್ಲವೇನೋ ।
ದನೀನ ಹುಟ್ಟಿಗೆ ದನಿಲ್ಲವೇನೋ ಕುರಿಯಮುದ್ದ ।

ಏಳುಪಾಲಿನ[97] ಮ್ಯಾಗೆ ಏಳುಪಾಳಿನ ಕುರಿಯಬಿಟ್ಟು ।
ಯಾತನಾರ[98] ಹಟ್ಟಿಗೆ ಹ್ವಾಗಿ[99] ನಾನು
ಯಜ್ಜಜ್ಜಮಾನರ್ನ ತಾಲೀವಾನರ್ನ [100] ಕೇಳಿಕೊಂಡು ಬರುತೀನಿ ಜ್ವಾಕೆ [101] ।
ಯಜ್ಜಜ್ಜಮಾನುಗಳ ಕೇಳುತಾನೆ ಕುರಿಯಮುದ್ದಣ್ಣ ।
ಆವಿನ ಮುದ್ದಣ್ಣ ಎತ್ತ ಹೋದಾನಂತ ।
ಗೊಟ್ಲು [102] ಗಾಲಬಂತು ದನಗಳಿಗೆ । ಮಲಸೀಮೆಗೋಗ್ಯವನೆ
ಮಲನಾಡಿ ಗೋಗ್ಯವನೆ ।
ಸಿಕ್ಕಿ ಸಿಕ್ಕಿದೋರಿಗೆ ಕರುಗಳ ಕೊಟ್ಟು । ಸಿಕ್ಕಿ ಸಿಕ್ಕಿ ದೋರಿಗೆ ಹೋರಿಗಳ
ಕೊಟ್ಟು ಹೋಗ್ಯವನೆ ।
ಆವಿನ ಮುದ್ದಣ್ಣ ಹೋರಿಗಳ ಕೊಟ್ಟೆ ಹೋಗ್ಯವನೆ ।
ದನವೀನ ಹುಟ್ಟಿಗೆ ದನವಿಲ್ಲವೇನೋ । ಕುರಿಯ ಹುಟ್ಟಿಗೆ ಕುರಿಯಿಲ್ಲವೇನೋ
ಹೋಗೋ ಕುರಿಯ ಮುದ್ದಣ್ಣ ಕುರತಾಕೋ
ಮಲಸೀಮೆಗೆ, ಮಲನಾಡಿಗೋ...... ।
ಒಂದಾನೆ ದಿನದಾಗೆ ಎರಡನೇ ದಿನದಾಗೆ ಹೋದಾನೆ ಕುರಿಯಮುದ್ದಣ್ಣ ।
ಏನೇನೋ ಕುರಿಯಮುದ್ದಣ್ಣ ಮನೇಕಡೆ ಮಕ್ಕುಮರಿ
ಸಂದಾಕವ್ರೇನೋ[103].... ಕೇಳೀದಾವಿನ ಮುದ್ದಣ್ಣ ।
ಎಲ್ರೂ ಚಂದಾಕವ್ರೇಕಣೋ ಆವಿನಮುದ್ದಣ್ಣ
ಆಲ ಪಂಚಮೃತದಡಿಗೆ ಮಾಡಿ ಕೊಳ್ಳೋ । ಕುರಿಯಮುದ್ದಣ್ಣ
ಕೈಕಾಲು ಮಕವ ತೊಳಕಂಡು ಇಬ್ಬರೂ ಊಟಾಕೆ ಕುಂತವ್ರೇ ।
ಊಟಾಮಾಡಿ । ಸೀರ್‍ಯದ ಸಿಕ್ಕಡಿಗೆ ದಾರ್‍ಯಾದ ಬಿಳಿಯೆಲೆ
ನಾಗಮಂಗಲದ ಕೆನಿಸುಣ್ಣ ಸರಿಬೆರಕೆ ಮೆಲ್ಲಿ ।
ಏನೇನೋ ಆವಿನಮುದ್ದಣ್ಣ ಯಾರಿಗಾನ[104] ಒಂದ್ಹಾಲವಿಲ್ಲದ[105]
ಕರುವ ಕೊಟ್ಟಿದಿಯೇನೊ ಯಾರಿಗಾನ ಒಂದ್ಹೊಟ್ಟೆ [106] ಕರುವನೆ ಕೊಟ್ಟು
ಬಂದ್ಯೇನೊ ಆವಿನಮುದ್ದಣ್ಣ ।
ಆದರ ಸುದ್ದಿ ನಿನಗೆ ಬ್ಯಾಡಕಣೋ ಕುರಿಯಮುದ್ದಣ್ಣ ।
ಬಾಯಾಗ ಹಲ್ಲಿಲ್ಲ ತಿಕದಾಗೆ ಕೆಚಲಿಲ್ಲ ।
ಅಂತಾ ಹಸುವೊಂದಿತ್ತು–ಗಂಗಮ್ಮನ ತಕ್ಕಂಡು ।
ಆಣೆಬಾಸೆ ತಕ್ಕೊಂಡು ಬಂದೀವ್ನಿ ಅದರ ಸುದ್ದಿ
ನಿನಗೆ ಬ್ಯಾಡ ಕಣೋ ಕುರಿಯಮುದ್ದಣ್ಣ ।
ಇಪ್ಪತ್ತು ಸಾವುರದ ಕುರಿಯ ಯಜಮಾನಿಕೆ ನನಗೆ ಕೊಟ್ಟರು ।
ಇಪ್ಪತ್ತು ಸಾವುರದ ದನೀನ ಯಜಮಾನಿಕೆ ನಿನಗೆ ಕೊಟ್ಟರು

ಸಿಕ್ಕ ಸಿಕದೋರಿಗೆ ಕರುಗಳ ಕೊಟ್ಟು
ನಮ್ಮ ಮಕ್ಕಳ ಬಾಯಿಗೆ ಇಸವ[107] ಕೊಟ್ಯೇನೋ ಮುದ್ದಣ್ಣ ।
ಒಂದನೆ ದಿನದ್ದಾದಿ[108] ಎರಡನೆ ದಿನದ್ದಾದಿ ಬರುತಾನೆ ಕುರಿಯಮುದ್ದಣ್ಣ ।
ಸಿಕ್ಕಣ್ಣನ ಗೂಡಿನತಾಕೆ ಬಂದೂ ಯಾರಯ್ಯ ಗೂಡಿನಾಗೆ ಇರುವೋರು ।
ನಮ್ಮೋರಿ ನಮೀಗೆ ಬಿಟ್ಟಾರೆ ಸಮನೋಯ್ತು[109]। ನಮ್ಮಿಗು ನಿಮ್ಮಿಗು
ಮಾತುಗಳೆ ಸಂದುಸ್ತಾವೆ । ಒಂದು ಸಾರಿ ಅಂದ ಎರಡು ಸಾರಿ ಅಂದ
ಕುರಿಯಮುದ್ದಣ್ಣ । ಸಿಕ್ಕಣ್ಣ ನಿನಗ್ಯಾಕೋ.... । ಅಂಗಳದ[110]
ಕಿತ್ತು ನೆತ್ತಿಗೇರಿತ್ತು । ಕಟ್ಟಿದಮಂಡೆ ಒದರಿ ಗೂಡಿಂದ ಈಸೆಗೆ[111]
ನೆಗೆದಾಸಿಕ್ಕಣ್ಣ । ಕರಿಯಕಲ್ಲಳ್ಳಕೋಗಿ ಬಿದ್ದ ಕುರಿಯಮುದ್ದ ।
ದಕ್ಕಡಿಗಾರ ಸೂಳೆಮಕ್ಕಳು । ದಕ್ಕದಿಲ್ಲ[112] ಎಂದ ಕುರಿಯಮುದ್ದ ।
ದೊಡ್ಡೊಳವನಳ್ಳಿ ನಾಯ್ಕರ ಮಕ್ಕಳ ಕಟ್ಟಬೇಕಂತ
ಹೋಗ್ತಾನೆ ಕುರಿಯಮುದ್ದ ।
ಒಂದೇ ತಾಯಿ ಮಕ್ಕಳು ಏಳು ಜನ ನಾಯ್ಕ ಮಕ್ಕಳು ।
ಒಕ್ಕಳಾಸಿಕೊಂಡು[113] ಒಕ್ಕುಳವ ಹೊದುಕೊಂಡು । ತೂಗೋ ಮಂಚದ
ಮ್ಯಾಲೆ ಏಳೇ ಜನಗಾಳು ದಾಯಪಗಡೇನಾಡುತಾರೆ ಮಕ್ಕಳು ।
ಹೋಗಿ ಬಾಗಲಾಗೆ ನಿಂತುಕೊಂಡ ಕುರಿಯಮುದ್ದಣ್ಣ ।
ಬಾರಯ್ಯ ಕುರಿಯಮುದ್ದಣ್ಣೆಂದು ಕರೀತಾರೆ ನಾಯ್ಕ ಮಕ್ಕಳು
ನಾನು ಬಂದ ಕಾರ್ಯವು ಮಾಡಿಕೊಡುತೇನಂದ್ರೆ
ಒಳವೀಕೆ ಬರುತೀವಿ ನಾಯ್ಕ ಮಕ್ಕಳಿರೋ ।
ಎಳ್ಳೊಲದ ಬಾರ್‍ಯಾಗೆ[114] ಯಾವೋನೊ ಗೂಡಬಡಕೊಂಡು ಅವ್ನೆ ।
ಅವನ ಮತುಗೋಳ[115] ಮಾಡಬೇಕು ನಾಯ್ಕ ಮಕ್ಕಳಿರೋ ।
ಆಗಾದಾದ್ರೆ[116] ಆಗಲಿ ಹೋಗೋದಾದ್ರೆ ಹೋಗಲಿ ಬಾರಯ್ಯ
ಕುರಿಯಮುದ್ದಣ್ಣ ಒಳವೀಕೆ[117]।
ಅವನ್ನ ಮತುಕೋಳು ಮಾಡಾಕೆ ಬಂದಾರೆ ನಾವೆ ಮತುಕೋಳು ಆದಾರೆ
ನಮ್ಮೆಂಡಿರು ಮಕ್ಕಳಿಗೆ ಯಾರೋ ದಿಕ್ಕು ಕುರಿಯಮುದ್ದೋ ।
ನಿಮ್ಮೆಂಡಿರು ಮಕ್ಕಳಿಗೆ ನಾನೇ ಸಾಯಾತಂಕ ಹಿಟುಬಟ್ಟಿ ಕೊಡುತೀನಂದೇ
ಕಟ್ಟಡಕ ಕರಾರು[118] ಬರದು ಕೊಡುತಾನೆ ಕುರಿಯ ಮುದ್ದಣ್ಣ ।
ಹಂಗಿದ್ದರೆ ಬರುತೀವಿ ನಡೆಯೋ ಕುರಿಯಮುದ್ದಣ್ಣ ।
ಎಂದು ಹೇಳುತಾರೋ ।
ಸನಿವಾರ ಸೀಬಿ[119] ರಂಗನ ಪರಿಸಿಗೆ[120] ಬರುತಾನೆ ನೀವು ಅಲ್ಲಿ ಮತುಕೋಳು
ಮಾಡಬೇಕು ನಾಯ್ಕರ ಮಕ್ಕಳಿರೋ ।

ಕಂಡಳಲ್ಲೋ ಸಿಕ್ಕೀರು ನಾಗ ಮುದ್ದು ಕನಸಾ.... ।
ಏನೇನೇ ಅತ್ಯಮ್ಮ ಮುಂಗೈಯ್ಯಗಳ ಕಡಗ ಕುಸುಕುಸದೆ[121] ।
ಬೀಳುತಾವೆ । ಮುಂಗಯ್ಯಗಳ ಕಡಗ ಕುಸುಕುಸದೆ ಬೀಳುತಾವೆ ಆವಿನ
ಗೌಡನ[122] ತಲಿಮಡುದೋ । ದೊಡ್ಡಳವನಳ್ಳಿ ರಾಜ್ಯಾಕೆ ದನಗೂಳು
ಹೋತಾವೆ ಕಾಣತ್ಯಮ್ಮ ।
ಬೀಸೀದ ಕಯ್ಯೆ ಬೆರಗಾಗಿ ಬಾಯಗಳ ತಂಬುಲವೆ
ಉಡುಉಡಿಯಾಗೆ[123] ಬರುತಾಳೆ ಅಳ್ಳೆವ್ವ ತಾಯಿ ।
ಬಾರುಬಾರೊ ಈರುಬೋರ ಬಾಮ್ಮೆದ ನಮ ತಾಯಿ ಬರುತಾಳೆ
ಬ್ಯಾಗ[124] ಅಡಿಗೆ ಮಾಡೊ ।
ಕೊಳ್ಳವ್ವ ತಾಯಿ ಕೈಗೆ ನೀರೂ ।
ಬ್ಯಾಡಕಣೋ ಸಿಕ್ಕಣ್ಣ ಬ್ಯಾಡರು ಗದ್ದು ಗದ್ದಲ್ಲೊ[125] ।
ಮಾಡಿದ ಬುತ್ತಿ ಬೆನ್ನೀಗೆ ಕಟಿಕೋಳೋ ಬ್ಯಾಡರ
ಗದ್ದಲ್ಲೋ ನಡಿಯೋ ಕಾರೇನಳ್ಳಿ ಹಟ್ಟಿಗೋಗಾನ ।
ಯಾಕವ್ವ ಅಳ್ಳೆವ್ವ ತಾಯಿ ಇಂತ ಕಾತಾಳ[126] ಬೀಳುತೀಯ ।
ನಾವು ಬಂದಾಗ ಸೀಬಿ ರಂಗನಿಗ್ಹಾಲೆರೀತೀವಂತ ।
ಹರಸಿಕೊಂಡಿದ್ದೋ । ಸನಿವಾರ ಸೀಬಿ ರಂಗನ
ಪರಿಸೆ ಹಾಲೆರೆದೇ ಬರುತೀನಮ್ಮೋ ।
ಆಯಿತ್ವಾರ[127] ಹೊತ್ತುಟ್ಟೋ ಹೊತ್ತೀಗೆ ಕಾರೇನಳ್ಳಿ ಹಟ್ಟಿಗೆ
ಮೂಡಲದಿಕ್ಕಿನಾಗೆ ದನುಗೂಳಾನೆ ಕರೀತೀನಿ.... ।
ಚಿಕ್ಕಣ್ಣನ ಬಲಗಡೆ ತೊಡಿಮ್ಯಾಲೆ ಕುಂಡರಿಸಿಕೊಂಡು
ಈರುಬೋರನ ಎಡಗಡಿಯ ತೊಡಿಯಮ್ಯಾಲೆ ಕುಂಡರಿಸಿಕೊಂಡು
ಸರಿಬೆರಕೆ ಊಟ ಮಾಡುತಾರೆ ಮೂರುಜನಾ ।
ಹೋತೀನಿ ಕಣೋ ಸಿಕ್ಕಣ್ಣ ಹೋತೀನೋ ।
ಸನಿವಾರ ಸೀಬಿರಂಗನ ಪರಿಸಿ ಗ್ಹಾಲೆರದು ।
ಆಯಿತ್ವಾರ[128] ಹೊತ್ಹುಟ್ಟೊವಾಗೆ ಕಾರೇನಳ್ಳಿಹಟ್ಟಿಗೆ
ಹೊತ್ಹುಟ್ಟೊವಾಗ್ಗೆ ಮೂಡಲ ದಿಕ್ಕಿನಾಗೆ ನಾನು
ದನುಗೂಳ ಕರಕಂಡೆ ಬರುತೀನಿ ನಡಿಯವ್ವೋ ।
ಅದಗಿದ್ದ[129]ನ್ನೋ ಹೊತ್ತೀಗೆ ಸನಿವಾರ ಬಂತು ।
ಈರುಬೋರ ಬಾಮ್ಮೆದ ಹಾಲ ಕಾವಡಿ ತಕ್ಕಂಡು ಹಾಲ
ಕರಕೊಂಡು ಬಾವೋಗೋ[130] । ಹನ್ನೆರಡೆ ವರ್ಸಾದ [ಗೊಡ್ಡಾದ]
ಗಂಗೆ ಗೌರ್‍ಯಾಗೆ ಹಾಲಕರಕೊಂಡು ಬಾಹೋಗೋ ।

ಜ್ವಾಕೆಕಾಣೋ ಈರುಬೋರ ಬಾಮ್ಮೈದ
ಸೀಬಿರಂಗಗೆ ಹಾಲೆರೆದು ಬರುತೀನಿ ।
ದೊಡ್ಡೊಳವನಳ್ಳಿ ವಡ್ಡರು ಕೈ ಹಾಕ್ಯವರೆ
ಸೀಬಿರಂಗನ ತೇರಿಗೆ ।
ಅಲುಕುಮಲಕನ್ನಲ್ಲೋ[131] ಸೀಬಿರಂಗ
ಸುತ್ತಾಲೆ[132] ನೋಡುತಾರೆ । ವಡ್ಡರು
ಒಂದು ಕೈಗಲ್ಲೆಸಿಗೆ[133] ಹೋಗುತಾನೋ ಚಿಕ್ಕಣ್ಣ ।
ಯಾವಾನೊ ದೊರಿಮಗ ಬರುತಾನೆಂದು
ಪದಿಪಾಲಕರೆಲ್ಲ[134] ಕೈಮುಗಿತಾರೆ ।
ಹೋಗಿ ಸೀಬಿರಂಗನ ಗಾಲಿಮ್ಯಾಗತ್ತಿ [135]।
ಹಾಲೆರೀತಾನೋ ಕನಿಮಗೋ ।
ಹಾಲೆರೆದ ಸಿಕ್ಕಣ್ಣ ಕೆಳಗಿಳಿದು
ಕೈತಪ್ಪಾಳೆ ಉಯ್ಯುತಾನೆ ।
ಸೀಬಿರಂಗಪ್ಪ ಗಲಿ ಗಲಿನ[136] ಮುಂದೂಕೆ ನಡಿತಾನೋ ।
ಅಲ್ಲೀಗೆ ಒದಗಿದನಲ್ಲೋ ಹಾಳ ಕುರೀಮುದ್ದ ।
ಯಾಕೋ ಸೀಬಿರಂಗನ ಪರಿಸ್ಯಾಗಿರುವಕ್ಕಾಗದು ಸಿಕ್ಕಣ್ಣನಿಗೆ ।
ಆಕಡಿಕೆ[137] ತೂಕಡಿಕೆ ಬರುತಾದಂತೇ ।
ಆಸೀಗೆ ಹ್ವಾಗಿ[138] ದೂಪಾಲದ ಮರದಡಿಯೋ
ಆಯ್ದ ಮುಸ್ತಾಪೆಲ್ಲ[139] ತಗುದಿಕ್ಕೆ ಮಲಗುತಾನೆ ಸಿಕ್ಕಣ್ಣ ।
ಅರಗುಂಡಿಸೆಟ್ಟೇರು[140] ಕಂಕುಳಾಗೆ ಬಂಡುಗುಡಲು[141]
ಕೆಂಪೀನ ಕುವ್ವಾಲಿ[142] ಕಯ್ಯಾಗೆ ರುಡ್ಡುಗೋಲು[143]
ಏಳು ಜನಗಳು ಬ್ಯಾಟ್ಯಾಡಿ[144]ಕೊಂಡು ಬರುವಂತೆ[145]
ಬರುತಾರೆ ಏಳು ಕಡೆಯೋ । ಒಂದು ಕೈಗಲ್ಲೆಸಿಗೆ
ನಿಂತುಕೊಂಡು–ಯಾರಯ್ಯಾ ದೂಪಾಲದ ಮರದಡಿಯ
ಮಲಗೀರವರೆಂದು ಕೂಗುತಾರೋ ।

ಗಕ್ಕನೆದ್ದು ಸಿಕ್ಕಣ್ಣ ಯಾಕಂದು ಕೇಳಿದ
ಅಡಿಕ್ಯಾಲೆ[146] ಕೊಡೊ ಸಿಕ್ಕಣ್ಣಾಂತ
ಕೇಳುತಾರೋ ನಾಯ್ಕ ಮಕ್ಕಳು ।

ಯಡಗಡೆ ಬಂದೋಗ್ಗೆ ಯಡಗಡೆ ಕೊಟ್ಟ
ಬಲಗಡೆ ಬಂದೋರ್ಗೆ ಬಲಗಡೆ ಕೊಟ್ಟ
ಏಳು ಜನಗಳಿಗೆ ಅಡಿಕೇಲೆ ಕೊಟ್ಟ ಚಿಕ್ಕಣ್ಣ ।

ಅಡಿಕೇಲೆ ಕೊಟ್ಟಾರೆ ಸಿಕ್ಕಣ್ಣ
ಒಂದು ಕೈಗಲ್ಲೆಸಿಗೆ ಹೋಗಿ ನಿಂತುಕಂಡು ।
ನೀನು ಮೆಟ್ಟಿರುವ ಬಾರುಮೆಟ್ಟನ್ನ 147
ಕೊಡತೀಯ ಸಿಕ್ಕಣ್ಣ ।

ಬಾರುಮೆಟ್ಟ ಕೊಟ್ಟಾರೆ ಪಟ್ಟದ್ದಂಡರ 148 ಕೊಟ್ಟಂಗೆ
ಯಾತಾರ ಮಾತನಾಡತೀರ ಹೋಗುರಲೆ ನಾಯ್ಕ
ಮಕ್ಕಳೀರಾ ।
ಕೊಟ್ಟಾರೆ ಕೊಡಯ್ಯ ಬಿಟ್ಟಾರೆ ಬಿಡಯ್ಯ
ನಡುಗಿಡದಾಗೆ 149 ತಲಿಯ ಒಡೆದೇವು ।

ಯಾರಾದರೂ ನಮ್ಮಣತಮ್ಮಗಳು ಬಂದವರೇನೆಂದು
ಹೋತಾನೆ ಸೀಬಿರಂಗನ ಪರಿಸೆ ಸುತ್ತಾಕೆ ।
ನೋಡೀದ ಸಿಕ್ಕಣ್ಣ ಯಾರೂ ಬಂದಿರಲಿಲ್ಲ ।
ಈರುಬೋರಗೆ ಕಡಲೆ ಬೆಲ್ಲವ ತಕ್ಕಂಡು ।
ಗಂಟು ಕಟಿಕೊಂಡು ದೊಡದೊಡ್ಡ ಹೆಜ್ಜಾಗ ನಡಿತಾನೋ ।

ಎಳ್ಳೊಲದ ಬಾರೆ ಗೂಡೀಗೆ ಹೋತಾನೆ ।
ಬಾರು ಬಾರೋ ಈರುಬೋರ ನಮ್ಮಣ್ಣತಮ್ಮಗಾಳು
ಯಾರೂ ಬಂದಿರಲಿಲ್ಲ ಆಸಯ್ಯ 150
ಸಣಗಂಬಳೀ ನಂದಾ ।
ಸಣ್ಣ ಗಂಬಳೀನ್ಹಾಸಿದರೆ ಕಡಲೆಬೆಲ್ಲ
ಗುಡ್ಡೆ ಉಯ್ಯಾದ ಸಿಕ್ಕಣ್ಣ ।
ದೊಡ್ಡೊಳವನಳ್ಳಿ ನಾಯ್ಕ ಮಕ್ಕಳಿಗು
ನನಗು ಮಾತು ಸಂದಿಸ್ಯಾವೆ 151 ಕಡಲೆ
ಬೆಲ್ಲಾ ತಿಂದಕಂಡು ನೀನೆದ್ದೀರು 152 ।
ನನಿಗ್ಯಾಕೋ 153 ನಿದ್ದೆ ಬರುತಾದೆ ಮಲಗು
ತೀನಿ ಈರುಬೋರ ಬಾಮೈದೋ ।
ನೀನೆ ಮಲಿಕಣೋಂತ ಕಾಲಕ್ಕೆ
ನನ್ನ ಎಬ್ಬರೀಸಿ ಮನಿಕೊಳ್ಳೋ ।

ಕಡಿಲೆ ಬೆಲ್ಲವ ತಿಂದು ಮಾವನ ಮಗುಲಾಗೆ 154
ಮನಿಗ್ಯವನೆ 155 ಈರುಬೋರ ಬಾಮೈದ ।

ದೊಡ್ಡೊಳವನಳ್ಳಿಯಿಂದ ಇಪ್ಪತ್ತು ಸಾವುರ
ದಂಡೇ ಬರುತಾದೆ । ನಿಲುವುಗನ್ನಡಿಯೊಂದ
ಹಿಡಿದಾದೆ । ಧೀನುಧೀನೆಂದು ಬರುತಾದೆ ದಂಡು ।
ತುಗ್ಗಲಿ$_{156}$ ಮರದಳ್ಳಾಕೆ$_{157}$ ಬಂದು
ಕೂಸಾತದೆ$_{158}$ ದಂಡು ।
ಒಂದು ಹೊಟ್ಟೆ ಹುಡುಗಾಗೆ ಏನೊಂದ ಹೇಳುತಾರೆ ।
ನಾಯ್ಕ ಮಕ್ಕಳು.....................................................।

ನೀನಾರಂತ ಕೇಳುತಾರೆ ನಾನು ಗಿರಿಯಣ್ಣಗೌಡನಾಳು ।
ಸೀಬಿರಂಗನ ಪರಿಸೆಗೋಗಿದ್ದೆ ಯಾರು ಸಿಗಲಿಲವಂತ
ಹೇಳಬೇಕು ।
ಸಿಕ್ಕಣ್ಣನ ಗೂಡಿನಾಗೆ ಎಷ್ಟು ಜನಗಳವರೋ ನೋಡಿ
ಕೊಂಡು ಬಾವೋಗು$_{159}$ ।
ಗೂಡೀನ ಬಾಕಲೀಗೆ ಬಂದು ಹುಡುಗ ಕೂಗುತಾದೆ ।
ಯಾರಂತ ಕೇಳುತಾನೆ ಈರುಬೋರ ಬಾಮೈದ ।
ಯಾಕೋ ಈರಬೋರಣ್ಣ–ನಾನು ನೀನು ದೂಳಿಕಟ್ಟೀಗೆ
ಆಡುತ್ತಿದ್ದೋರಲ್ಲೇನೋ । ಸೀಬಿರಂಗನ ಪರಿಸೆಗೋಗಿದ್ದೆ
ಕಾಣೋ ಯಾರು ಜೊತೆಗೆ ಸಿಕಲಿಲ್ಲ ।

ಯಾಕೋ ಸಿಕಣ್ಣಗೆ ಕನಸಾಗೆ ಕಡದಂಗಾತಂತೇ$_{160}$ ।
ಯಾರೋ ಈರುಬೋರ ಬಾಮೈದ ಆಸೆ$_{161}$ ಕೂಗೋರು ।
ಗಿರಿಯಣ್ಣ ಗೌಡನಾಳಂತೆ ಕಾಣ ಮಾವ ಸೀಬಿರಂಗನ
ಪರಿಸಿಗೋಗಿದ್ದನಂತೆ ।

ಜೂಲನಾಯಿ ಕಡದಾರೆ ನಮಗು ಅವ್ರಿಗೂ
ಗೆಳೆತಾನ ಹೋಗವದು$_{162}$ ಬಾಕಲ$_{163}$ ತಗದು
ಒಳವೀಕೆ ಬಿಟುಕೋಳೋ ।
ಈರಬೋರ ಬಾಮೈದ ಒಳವೀಕೆ ಬಿಟುಕೊಂಡೋ ।
ನನಿಗೂ ದೊಡ್ಡೊಳವನಳ್ಳಿ ನಾಯ್ಕರ
ಮಕ್ಕಳಿಗೂ ಮಾತು ಸಂದಿಸ್ಯಾವೋ
ಈರುಬೋರ । ಅದಕೋಟು$_{164}$ ಕಡಿಲೆ
ಬೆಲ್ಲಾವ ಕೊಡೊ ನೀವಿಬ್ಬಾರು ಎದ್ದಿರ್‍ರೋ ।
ಮನಗೀದ$_{165}$ ಸಿಕ್ಕಣ್ಣಾಗೆ ಕೇಡಿನ ನಿದ್ದೆ ।

ಇಬ್ಬರು ಕಡಿಲೆ ಬೆಲ್ಲಾ ತಿಂದುಕೊಂಡು ಕುಂತಿದ್ದೋರು
ನಾವ್ಯಾಕೋ ಇಬ್ಬರೂ ಎದ್ದಿರೋದು ನೀನು ಮನಿಕೋಳೊ[166]।
ಈರಬೋರಣ್ಣ ಮನೀಕಂಡ[167] ಕಡಿಲೆ ಬೆಲ್ಲ ತಿಂದು
ಕೊಂಡು ಎದ್ದಿದ್ದೋನು ಬೇವಿನಾಳು[168] ಇಬ್ಬರೆದೆಯ
ಮ್ಯಾಲೆ ಕೈಯಿಕ್ಕಿ ನೋಡುತಾನೆ ನಾಯಕರುಡುಗಾ ।
ಸಕ್ಕ ಸರಗ[169] ನಿದ್ದೆ ಹೋಗುತಾರೆ ।

ಗೂಡಿನ ಬಾಗಲ ತಗದು ಹೋತಾದೆ ।
ದಂಡಿಗೆ ಸುದ್ದಿ ಕೋಡಾಕೆ[170] ।

ನನ್ನಂತೊನೊಬ್ಬ[171] ಹುಡುಗ ಒಬ್ಬ ದೊಡ್ಡೋನು ।
ಇಬ್ಬರೇ ಕಾಣಯ್ಯ ಗೂಡಾಗಿರೋರು ।
ದಂಡಿಗೇಳುತಾದೆ ಹುಡುಗ ।

ಇಪ್ಪತ್ತು ಸಾವುರದಂಡೇ ಬರುತಾದೋ
ನಿಲವಗನ್ನಡಿ ಹಿಡಿದಾದೆ ಕೈಪಂಜ
ಹಿಡಿದಾದೆ । ಗೂಡಿನ ಬಾಗಲಿಗೆ
ಒದಒದಗಿ[172] ಬಂದೀತು ದಂಡು
ಜೂಲು ನಾಯಿ ಬಗುಳತಾದೋ ।

ಸಿಕ್ಕಣ್ಣನಿಗ್ಯಾಕೋ ಕನಸಾಗೆ ಕಡದಂಗಾತು ।
ಯಾಕೋ ಈರುಬೋರ ಜೂಲು ನಾಯಿ ಬಗಳುತಾದೆ ।

ಈರುಬೋರ ಬಾಮ್ಯೆದ ಎದ್ದು
ನೋಡುತಾನೆ । ಬಂತು ಕಾಣೋ
ಮಾವ ದೊಡ್ಡೊಳವನಳ್ಳಿ ದಂಡು ।

ಹುಡುಗನೆತ್ತೋಯ್ತೋ ಈರುಬೋರ ಬಾಮ್ಯೆದಾ
ಗೂಡಿನಾ ಬಾಕಾಲ ಹಾರೊಡೆದು[173] ಹೋಗ್ಯಾದೆ ಮಾವಾ ।

ನಾನು ಹಿಂದೆ ಹೇಳಲಿಲವೇನೋ
ಈರುಬೋರ ಬಾಮ್ಯೆದೋ ।
ನೆಂಟಾನ ಮಗನಲ್ಲೋ ನಂಟುಸ್ತನದಾಗೆ[174]।
ಮಾತು ಬರುವೋದು[175] ಬಂತ್ಯಲ್ಲೋ ಈರಬೋರ ಬಾಮ್ಯೆದ
ಸೊಪ್ಪೀನ ಉಕ್ಕಡ[176] ಪಚ್ಚೇಯ ಬೆರಗು[177] ಮಾಡಿ
ಈರಬೋರ ಬಾಮ್ಯೆದ ಹೆದರುತಾನೆಂದು ಕುಂಡರಿಸಿದಾ[178]।

ಬನ್ನಿರಾಲಿ[179] ನಾಯ್ಕ ಮಕ್ಕಳೀರ ಕೆತ್ತುರಾಲೆ[180]
ಕಣವನ್ನ ಹೂಡಿರಾಲೆ ರಣಗಂಬಾನ[181] ।
ಒಲೆಯಮ್ಯಾಲೆ ಕರಿಯ ಹುರಳಿ ಕಾಳ ಹುರಿದಂತೆ
ಹುರಿದಿದ್ರೆ ನಾರಿಗಳ್ಳೆವ್ವನ[182] ಮಗನೆ ನಾನಲ್ಲ ಚಿಕ್ಕಣ್ಣ ।

ಇಪ್ಪತ್ತು ಸಾವಿರ ದಂಡಿನಾಗೆ ಹತ್ತು ಸಾವಿರ ದಂಡ ಹೊಡೆದ
ಚಿಕ್ಕಣ್ಣ । ಇನ್ನು ಹತ್ತು ಸಾವುರ ದಂಡೇ ಸೋತು ಹೋತಾದೆ ।
ಶಿವಶಿವೆಂಬೋ ಸಿಪ್ಪಗೂಡೊ[183] ಬೆನ್ನೀಗೆ ಕೊಟಕೊಂಡ
ಸಿಕ್ಕಣ್ಣ । ಗೂಡಿನ ಬಾಕಲಾಗೆ ಹೋತಾದೆ ದಂಡು ।
ಎಟುಕೆಟುಸಿ[184] ನೋಡುತಾನೆ ।

ಹಲ್ಲು ಉದುರಿದೋನು ಬೆನ್ನು ಬಾಗಿದೋನು
ಬ್ಯಾಡರಜ್ಜ[185] ತುಗ್ಗುಲಿ[186] ಮರವನತ್ತ್ಯವನೆ
ಗೂಡಿನ ಬಾಕುಲಾಗೆ ।

ದಂಡು ಹೋತಾದೆಂದು ನೋಡುವಾಗ ಸಿಕ್ಕಣ್ಣ
ಉಕ್ಕೀನುರಿಬಾಣ[187] ಬಿಟ್ಟಾನೆ ಬೇಡರಜ್ಜ ।

ಸಿಕ್ಕಣ್ಣನೆದೆಗೆ ಬಂದು ಸಿಕ್ಕೊಂತು[188]
ಹೊಕ್ಕೊಂತು[189] ಉಕ್ಕಿನೆಂಬೋ ಉರಿಬಾಣ ।
ಮ್ಯಾಕೆ ನೋಡಿದ ತುಗ್ಗುಲಿ ಮರಕೆ ಹತ್ಯವನೆ ಬ್ಯಾಡರಜ್ಜ ।

ಹಿಡಿಕಲ್ಲ ತಕ್ಕಂಡು ಇಟ್ಟಾರೆ ಎಲವಿಲ್ಲ ಮೂಳಿಲ್ಲದಂಗೆ
ಬಿದ್ದೀಯೋ ಕೆಳೀಕೆ । ಹೋಕಾಲೆ ನನ್ನ ದನವೀಗೆ
ಯಾರು ದಿಕ್ಕಿಲ್ಲ ನಿನ್ನ ದಂಡಿಗೆ ಸುದ್ದಿ ಕೊಡೆಂದಾ ।

ಹತ್ತು ಸಾವುರ ದಂಡು ತಿರುಗಿ ಹೋಗುವಾಗ ತಿರುಗಿ
ಹೋತಾನೆ ಅಜ್ಜ । ಬನ್ನಿರಾಲೆ ಸಿಕ್ಕಣ್ಣನ ಹೊಡೆದಿದೀನಂದು
ಹತ್ತು ಸಾವುರ ದಂಡ ತಿರುವುತಾನೆ ।
ಹತ್ತು ಸಾವುರ ದಂಡೆ ತಿರಗಿ ಬರುತಾದೆ ಗೂಡೀಗೆ

ಈರುಬೋರು ಬಾಮೈದ ಪ್ರಾಣ ಹೋತಾದೇ ।
ಹನ್ನೆರಡು ವರ್ಸಾದ ಗೊಡ್ಡು ಗೌರಿಮಾವಳಗೆ
ಹಾಲಕಾವಡಿ ತಕ್ಕಂಡು ಹೋಗಿ ಹಾಲು ಕರಕಂಡು
ಬಾವೋಗೋ । ಪ್ರಾಣ ವೋತಾದೆ ಉಕ್ಕಿನಂಬೋ

ಉರಿಬಾಣ ಕಿತ್ತುಬಿಡೋ ಈರುಬೋರ ಬಾಮ್ಮೈದ ।
ಹಂಗೇ ಬರುವುದಿಲ್ಲ ಕಾಣೋ ಈರುಬೋರು ಬಾಮ್ಮೈದ ।
ಎದಿಯ ಮ್ಯಾಲೊಂದು[190] ಕಾಲು ಕುತ್ತಿಗೆ ಸಿರ[191] ದ ಮ್ಯಾಲೊಂದು
ಕಾಲಿಕ್ಕಿ ಜಗ್ಗೀಸಿ ಕೀಳೊ ಈರುಬೋರ ಬಾಮ್ಮೈದ ।

ಜಗ್ಗೂಗಿ ಕಿತ್ತಾರೆ ಸಿಕ್ಕಣ್ಣನ ಹಾಲುಗಳ್ಳೆ[192]
ನೆಲಕೆ ಬೀಳತಾವೋ । ಹಾಲಕಾಗಡಿ[193]ವಳಗೆ
ಹಾಲ ಬಿಟ್ಟಾರೆ ಚಿಕ್ಕಣ್ಣನಾ ಪ್ರಾಣ ವೋಗುತಾವೆ ।

ಹತ್ತು ಸಾವಿರ ದಂಡೇ ತಿರುತಿರುಗಿ ಗೂಡಿನ ಮಗುಲೀಗೆ
ಒದಒದಗಿ ಬಂತೂ । ಹತ್ತು ಸಾವುರ ದಂಡಿನಾಗೆ
ಐದಸಾವುರ ದಂಡ ಹೊಡದ ಈರಬೋರ ಬಾಮ್ಮೈದ

ಹಿಂಗೇ[194] ಬಗ್ಗೋದಿಲ್ಲೆಂದು[195] ದಂಡು ಎರಡು
ಪಂಗಡವಾಯ್ತು । ಹಿಂದಕೊಂದು ಪಂಗಡ
ಮುಂದಕೊಂದ ಪಂಗುಡ ಹಂಚಿಕೊಂಡು ।
ಮುಂದಲಮಟ್ಟ[196] ನೋಡತಿದ್ದಂಗೆ
ಈರುಬೋರನ ಹಿಂದಲೋರು[197] ಹಿಡಕಂಡು
ಸಿಕ್ಕಣ್ಣನ ತಲೆದಡೆಯಾಗೆ[198] ಕೊರಳ ಕೊಯ್ದಾರು ।

ಚಿಕ್ಕಣ್ಣನ ಬಾರು ಮೆಟ್ಟು ನನಗೆ ಬರಬೇಕು ।
ನನಗೆ ಬರಬೇಕು ಎಂದು ಐದು ಸಾವಿರ ದಂಡು ।
ಅವ್ರೇ[199] ಐದು ಸಾವಿರ ದಂಡೆ ಮಡುಕುಲುವಾಯ್ತು[200] ।
ಇನ್ನು ಏಳೇ ಜನಾ ಈಳ್ಯೇವ[201] ಇಡಿದಿದ್ದೋರು
ನಾಯ್ಕರ ಮಕ್ಕಳು ನಿಲ್ಲುತಾರೋ ।

[ಅವ್ರು ದನುಗುಳ ವಡಕೊಂಡೋಗೋಕೆ ಹೋತಾರೆ ಆ ದನುಗುಳು ಬರುಲ್ಲ
ಆವಾಗ ಅವರೇಚ್ಚೆ ಮಾಡುತಾರೆ ಕನಸ್ನಾಗೆ ಸಿಕ್ಕಣ್ಣ ಬಂದು ಹೇಳುತಾನೆ][202]

ಹಂಗೇ ಬರೋದಿಲ್ಲವಲೇ ನನ್ನ ದನಗುಳು ।
ನನ್ನ ತಲೆದಾಸೆ ಒಂದಿಡಿಯ ಮಣ್ಣ ತಕ್ಕಂಡು ।
ಕಲ್ಲಿಕೋಲ[203] ಹೆಗಲಿಗೇರಿಸಿಕೊಂಡು ಮುಂದೆ ಹೋಗುರಲೇ ।
ನನ್ನ ದನುಗುಳು ಹಿಂದೆ ಬರುತಾವೆ

ಮುಂದೆ ಬಂದ್ರೆ ಆಯ ಬ್ಯಾಡ್ರಮ್ಮ ಹಿಂದೆ ಬಂದ್ರೆ
ಒದೀಬ್ಯಾಡಿ ಕೆಚ್ಚಲಿಗೆ ಕೈಯಿಕ್ಕಿ ಕರೆ
ದಾರೆ ರೈತ[204] ಕರೀರಿ ।
ಸಾಸರಕೆ[205] ಸರಿಯಾಗಿ ದೊಡ್ಡೊಳವನಳ್ಳಿಗೇ
ನಡೀಯರಮ್ಮ । ಹೋತಾವೆ ಸಿಕ್ಕಣ್ಣನ
ದನಗುಳು ದೊಡ್ಡೊಳವನಳ್ಳಿಗೋ ।

ಕಂಡಳಲ್ಲೋ ಸಿಕ್ಕೀರು ನಾಗಮುದ್ದು ।
ಏನತ್ತೆಮ್ಮ ಮುಂಗೈಯಾಗಳ ಕಡಗ
ಕುಸುಕುಸುದೆ ಬೇಯುತಾವೆ ।
ಆವಿನ ಗೌಡನ ತಲೆಮಡದು ಬೀಳುತಾದೆ
ದೊಡ್ಡೊಳವನಳ್ಳಿ ರಾಜ್ಯಕೆ ಹೋತಾವೆ ದನಗುಳು ।

ಬಾಯಾಗಳ ತಂಬುಲವೆ ಉಡಿಉಡಿಯಾಗಿ
ಬರುತಾಳೆ ಅಳ್ಳೆವ್ವ ನಡೆದಕಾಲ
ಪುಳುವಾಗೆ[206] ಬರುತಾಳೆ ಅಳ್ಳೆವ್ವ ತಾಯೀ ।
ಕರಿಯ ಕಲ್ಲಗ್ಗಿನಾಗೆ[207] ರಣದ್ದು[208] ಬೋರಾಡುತಾವೆ
ಗಿರಿಯಣ್ಣಗೌಡ ಎದ್ದು ನೋಡುತಾನೆ ।
ಗೊಲ್ಲರುಡುಗ[209] ನನ್ನವ ಮೂರ ಕರುಗಾಳ ಕೊಟ್ಟು
ನಿನ್ನವ ಮೂರ ಕರುಗಳ ಕೊಟ್ಟ್ಯೆ[210]ನೆಂದಿದ್ದ
ಬಾಡ[211] ಕಳಕೊಂಡು ಹೋಗ್ಯವನೆ ನೋಡಿಕಂಡು
ಹೋಗಾನಂತ ಬಂದವನೆ ಗಿರಿಯಣ್ಣ ಗೌಡ ।

ಈಕಡಿಂದ[212] ಅಳ್ಳೆವ್ವ ತಾಯಿ ಹೋತಾಳೆ ।
ಏನೇನೋ ಗಿರಿಯಣ್ಣಗೌಡ ನನ್ನ ಸಿಕ್ಕೀರ
ನಾಗಮುದ್ದು ಆವನಿಗೌಡನ ತಲೆಮಡದು[213]।
ಮುಂದಲಾ ರಾಜ್ಯಕೆ ದನಗಾಳು ಹೋತಾವೆಂದು
ಕಂಡವಳೇ ।
ನೋಡನಂತ ಬಂದೆ ಕಾಣೋ ಗಿರಿಯಣ್ಣಗೌಡ ।

ನಾನುಕರಿಯ ಕಲ್ಲಗ್ಗಿನಾಗೆ ರಣದ್ದು
ಬೋರಾಡುತ್ತಿದ್ದೋ ನೋಡಾನಂತ ಬಂದೆ
ಕಣಮ್ಮ ಎಂದಾ ।

ಗಿರಿಯಣ್ಣಗೌಡ ಸಿವಸೀವ ಇಪ್ಪತ್ತು ಸಾವುರ ತಲಿಯೇ ಬಿದ್ದಾವೆ
ಕರಿಯ ಕಲ್ಲಗ್ಗಿನಾಗೋ ।

ಸಿಕ್ಕಣ್ಣನ ತಲಿಯ ತಕ್ಕಂಡು
ಕೆಂಡಕೊಂಡವ[214] ಮಾಡಿ
ಗಂಗಮ್ಮಗೆ ಬಿಟ್ಟು ಬರುವೊನಂತ
ಹೋತಾರೆ ಇಬ್ಬರೂ

ಸಿಕ್ಕಣ್ಣನ ತಲಿಯೆ ಸಿಕಲಿಲ್ಲ ।
ಅತ್ತ ತಗುದಾಕವ್ರೆ[215] ಇತ್ ತಗುದಾಕವ್ರೆ
ಇಪ್ಪತ್ತು ಸಾವುರ ತಲಿಗಾಳ

ಅಂತಿ[216] ಕಾಲದಾಗೆ ಸಿಕ್ಕಣ್ಣನ ತಲಿ
ಸಿಕ್ಕಿತು ।
ಸಿರುಗಂಧದ[217] ಸೌದೆ ತಂದು ಸಿಕ್ಕಣ್ಣನ
ಕೆಂಡಕೊಂಡ ಮಾಡುತಾರೆ ।
ಸಿಕ್ಕಣ್ಣನ ತಲೆಯ ಸುಟ್ಟು ಗಂಗಮ್ಮಗೆ
ಬಿಡವೋನೆಂದು ಸುಟ್ಟು । ಸಿಕ್ಕಣ್ಣನ
ತಲೆಯ ಬೂದಿಯ ಕೊಂಡೋಗಿ ಗಂಗಮ್ಮಗೆ
ಬಿಟ್ಟೇ ಬರುತಾರೆ ।
ಗಿರಿಯಣ್ಣಗೌಡನು ಅಳ್ಳೆವ್ವತಾಯಿ ।

ವೋದವನೆ[218] ಗಿರಿಯಣ್ಣಗೌಡ ಇರುವೋನೆ ಸಿಕ್ಕಣ್ಣ
ಬಾರವ್ವ ತಾಯಿ ಮನಿಗೆ ಹೋಗಾನಂತ ಗಿರಿಯಣ್ಣಗೌಡ ।
ಕರಕೊಂಡೋಗಿ ಅಳ್ಳೆವ್ವತಾಯಿಗೆ ಅಂಗು ನೂಲಕಟ್ಟಿ[219]
ಕರಿಯಸ್ಯಾಲೆ[220] ಉಡಿಸಿ ಮಡಿಲಕ್ಕಿ ಕಟ್ಟಿ ನಾನು
ತವರುಯ್ದು ತವರು ನಡೆಸುತೀನಂದು ಹೇಳುತಾನೆ
ಗಿರಿಯಣ್ಣಗೌಡ ।

ಆವಾಗ ಸತ್ತೇಳು ದಿನಕೆ ಹುಟ್ಟುತಾನೆ ಸಿಕ್ಕಣ್ಣ ।
ಸತ್ತೇಳು ದಿನದಲ್ಲಿ ಹೋತಾನೆ ದೊಡ್ಡೊಳವನಳ್ಳಿಗೆ ।
ದನಗಳ ಕರಕೊಂಡೆ ಬರುತಾನೆ ಸಿಕ್ಕಣ್ಣ

ಸೂಜಿಗಲ್ಲ ಬೆಟ್ಟಾದ ಸುತ್ತ ಏಳುತೊರೆಗಳೇ ನಡೀತಾವೆ$_{221}$ ।
ಅತ್ತಲ ತೊರೆ ಅತ್ತ ಕಟ್ಟಿಕೊಳ್ಳಮ್ಮ ಇತ್ತಲ ತೊರಿಗಳ
ಇತ್ತ ಕಟ್ಟಿಕೊಳ್ಳಮ್ಮ । ಕಟ್ಟಿಕೊಂಡೋ ।
ಸೂಜಿಗಲ್ಲ ಬೆಟ್ಟಾಕೆ ದನಗಳ ಹೊಡದು ನಿನ್ನ ತೊರೆಯ
ನೀನು ಕಟ್ಟಿಕೊಳ್ಳಮ್ಮ ಎಂದು ಹೇಳುತಾನೆ ಸಿಕ್ಕಣ್ಣ ।

ಸಿಕ್ಕಣ್ಣಾ ಅಲಗ$_{222}$ ವಡಿಸಿಕೊಂಡು ದೇವರಾತಾನೆ$_{223}$
ಸೂಜಿಗಲ್ಲ ಬೆಟ್ಟದಾಗೆ ಸಿಕ್ಕಣ್ಣನ ದನಗಳವೇ ।
ಜಾತೇರು$_{224}$ ದುರ್ಬೀನಾಕ್ಕೊಂಡು$_{225}$ ನೋಡುತಾರೆ

ಆಗ ಸೊರೆಬುರುಡೆ ಕಟಿಕೊಂಡು ಹೋತಾರೆ ಜಾತೇರು ।
ಒಂದು ದಿನದ ಒಂದೆ ಗುಂಡಿನ ಮ್ಯಾಲೆ ಕೂತುಕೊಂಡು ।
ಹೋತಾರೆ ಜಾತೇರು ಏಳನೇ ದಿನವೇ ಈಜಿಕೊಂಡೇ
ಒಬ್ಬನೇ ಜಾತೇನು ಅದರಗೊಂದೇ ಕರುವ
ತರಬೇಕೆಂದು ಹೋಗಿ ಸೂಜಿಗಲ್ಲ ಬೆಟ್ಟಕೆ ಇಳಿದಾ ।

ದನಗಾಳು ಮೇಯಾಕೆ ಹೋಗಿದ್ದೋ ದನಗಳು ಗಂಡು
ಬಂದುಬಿಟ್ಟೋ ಇವನ್ನ ನೋಡಿ ।
ಪಚ್ಚಾಲಿಮರವನತ್ತಿಕಂಡ$_{226}$ ಜಾತೇನು ।
ದಿನ ಮದ್ಯಾನ$_{227}$ ಕಾದು ದನಗಾಳು ।
ದಿನ ಮದ್ಯಾನಮ್ಯಾಲೆ ಮೇಯಾಕೋದೋ ದನಗಾಳು ।

ಆಗ ಬಂದು ಆಗ್ಹುಟ್ಟಿದ ಕರುವ ತಕ್ಕೊಂಡು
ಬೆನ್ನೀಗೆ ಕಟ್ಟಿಕೊಂಡು । ಒಂದು ದಿನವೇ ಈಜಿಕೊಂಡೇ
ಬರುವಾಗ್ಗೆ ಕರುವೆ ಸತ್ತೋಯ್ತು ।

ದಕ್ಕಡಿಗಾರ$_{228}$ ಸೂಳೇ ಮಕ್ಕಳೋವು ನಮ್ಮೀಗೆ ದಕ್ಕಾದಿಲ್ಲೆಂದು$_{229}$
ಕರುವ ಬೀಸಾಕಿ ಬರುತಾನೆ ಜಾತೇನು.

* * *

1. ಕಾರೇನಹಳ್ಳಿ 2. ದಾಯಾದಿಗಳು 3. ಕೋಮಿನ ದೇವರು (ಒಗ್ಗಟ್ಟಿಲ್ಲದ ಮೇಲೆ ಬೇರೆ ಮಾಡುತ್ತಾರೆ) 4. ವ್ಯಸನ 5. ಯಾವ ಹೆಣ್ಣು 6. ಸುಕ್ರವಾರ ಶುಕ್ರವಾರ (ಹಾಡುಗಾರನಿಗೆ ಸ. ಶ ಪ್ರಜ್ಞೆಯಿಲ್ಲ ಇದನ್ನು ಗಮನಿಸಲೂ ಆಗುವುದಿಲ್ಲ) 7. ರಾತ್ರಿ 8. ಚಿಕ್ಕವೀರ ನಾಗಮುದ್ದು 9. ಭತ್ತ 10. ದ್ವಿರುಕ್ತಿ ನೆಂಟರು ಬಂಟರು 11. ಬರಲಿಲ್ಲ

12. ತರುಣ 13. ಅಗುಳಿ 14. ಹಾಡುವಾತ ಗದ್ಯದಲ್ಲಿ ಹೇಳಿದ 15. ತೆಗೆದುಕೊಂಡು ಹೋಗಿ 16. ಚೆಲ್ಲಿ 17. ಮನೆದೇವರು ಹಿರಿಯೋಬಳಿ ರಂಗ 18. ದೀರ್ಘದಂಡ ನಮಸ್ಕಾರ 19. ಶಾಸ್ತ್ರ 20. ಶನಿವಾರ 21. ಸೂರ್ಯೋದಯ 22. ಧಾರೆ ಮುಹೂರ್ತ 23. ಸುರಿಸುತ್ತಾರೆ. 24. ಕೈ ಕೈ ಹಿಡಿಸಿ 25. ಬೆಳಿಗ್ಗೆ 26. ಕಾತಾಳ, ಆವಸರ 27. ಹಾಲು ಪಂಚಾಮೃತದ ಅಡಿಗೆ 28. ಬೀದಿಯಲ್ಲಿ 29. ಚಿಕ್ಕಣ್ಣಿ 30. ವೀರಬೋರ ಭಾವಮ್ಮೈದುನ 31. ರಾತ್ರಿ 32. ಮದುವೆ ಆಯ್ತು 33. ನಿನ್ನ ಹಿಂದೆ 34. ನೆಲ್ಲು ಅಕ್ಕಿ ಅನ್ನ 35. ಈಚೆಗೆ 36. ಹುಲ್ಲುಗಾವಲು 37. ಎಳ್ಳು ಹೊಲದ 38. ದಿಣ್ಣೆಗೆ 39. ಸಾಯಂಕಾಲ 40. ದೊಡ್ಡಿ ಮಾಡಿ 41. ಹೊಗಿಸಿ(ಅಟ್ಟಿ ಕೂಡಿಹಾಕಿ) 42. ಒಳಕ್ಕೆ 43. ಶಿರಾದ ಚಿಕ್ಕಡಕೆ 44. ದಾರೆ ಸೀಮೆಯ ಬಿಳಿ ವೀಳೆದೆಲೆ 45. ಕೊಳಲಿನಂತಿರುವ ಉದ್ದನೆ ವಾದ್ಯ 46. ನಾದ 47. ದೊಡ್ಡ ಹೊಳವನಳ್ಳಿ ನಾಯಕರ 48. ಸಾವಿರದ 49. ಯಜಯಜಮಾನರು 50. ಒಂದೇ ಪದ ಊರಿನ ಹೆಸರು 51. ಸೂರ್ಯೋದಯ 52. ಚಕಮಕಿ 53. ಗಡಾನ–ಬೇಗನೆ 54. ಯೋಗಕ್ಷೇಮದ 55. ನಾವು ಅಟ್ಟಿ 56. ಸಹಾಯ, ನಾವು ದೊಡ್ಡವರೆಂದು ತಿಳಿದು ಅಪ್ಪಣೆ ಕೇಳಿ 57. ಜೊತೆಯಲ್ಲಿ 58. ತಿರುವಿ ಹೊಡೆ (ತಿರುಗಿಸಿ) 59. ಕಟ್ಟೆಯ ಹೆಸರು 60. ವರ್ಷ ಆರು ತಿಂಗಳು 61. ಅಂದುಕೊಳ್ಳದೆಯೇ, ದಿಕ್ಕಿಲ್ಲದೆ ? ಕಾಯಿಲೆಯಾಗಿ ? 62. ಕೊಟ್ಟಾದರೂ ಕೊಟ್ಟಿಯಾ 63. ವ್ಯಕ್ತಿಯ ಹೆಸರು 64. ಹಸು 65. ತಬ್ಬಲಿ ಕರು ಬೇರೆ ಹಸುವಿನ ಹತ್ತಿರ ಕುಡಿಸುವುದು 66. ರಾಗಿಮುದ್ದೆ 67. ಕುಡಿನೀರಿನ ಮಣ್ಣಿನ ಪಾತ್ರೆ 68. ಬೇರೆಯವರಿಗೆ (ಅನ್ಯರಿಗೆ) 69. ಕರಿಕಲ್ಲ ಹಳ್ಳ 70. ಹುಡುಕಾಡಿ 71. ಚನ್ನ 72. ಹುಡುಗ 73. ಚಿನ್ನದ 74. ಹೋರಿಯ ಗೋಪುರಕ್ಕೆ ಕವಿಚಿ ಕಟ್ಟುವ ವಡವೆ 75. ನಮ್ಮ ಹೋರಿ 76. ಹಣೆಕಟ್ಟು 77. ಕೂತುಕೋ 78. ಇಕ್ಕೇರಿ ನಾಣ್ಯ 79. ಆಗುವ ಆಭರಣ 80. ಪಂಚೆಗೆ ಸಿಕ್ಕಿಸಿಕೊಂಡ ಚೀಲ 81. ಚಿನ್ನ 82. ಮಡಗಿಕೊಳ್ಳಯ್ಯ 83. ಅಂಗೈನ ಹಾಗೆಯೇ 84. ಹೊಳೆಗೆ ಹೋಗಿ ಬೆಳಗಿಕೊಳ್ಳುವುದು 85. ಹೊಂಬಣ್ಣದ ದನ 86. ನಂದಿ ಮುಖದ ಚಲುವ 87. ಸೂರ್ಯ (ಚಂದ್ರ) 88. ಇರುವ ತನಕ 89. ಗಲ್ಲ 90. ಕಟ್ಟೆ (ಹೊಳೆಯ ಹೆಸರು) 91. ಹೆಸರು ಕುರಿಯಮುದ್ದ (ಆವಿನ ಮುದ್ದನ ಸೋದರ) 92. ಛತ್ರಿ 93. ಚಾಮರ ? 94. ಮರದ ಹತ್ತರಕ್ಕೆ 95. ಬಿಳಿ ಮೈಲುಬಣ್ಣದವಷ್ಟೆ 96. ಕುರಿಯ ಹಾಗೆ 97. ಏಳು ಗುಂಪು 98. ಯಾವಲ್ಲಿಯಾದರೂ 99. ಹೋಗಿ 100. ಧಣಿಗಳನ್ನ 101. ಜೋಕೆ 102. ಗೊಟ್ಟು (ಬರ) 103. ಚಂದಾಕವರೇನೋ, ಚನ್ನಾಗಿದ್ದಾರೇನೋ 104. ಯಾರಿಗಾದ್ರೂ 105. ಹಾಲು ಇಲ್ಲದ 106. ಹೊಟ್ಟೆ ಬಂದ, ರೋಗದ ಕರ 107. ವಿಷವ 108. ಒಂದು ದಿನದ ಹಾದಿ 109. ಸಮನಾಯ್ತು, ಸರಿಹೋಯ್ತು 110. ಅಂಗಾಲು 111. ಈಚೆಗೆ 112. ದಕ್ಕುವುದಿಲ್ಲ. 113. ಶ್ರೀಮಂತಿಕೆ 114. ದಿಣ್ಣೆ(ಬಾರೆ) 115. ಸಾಯಿಸು(ಕೊಲ್ಲು) 116. ಹಾಗುವುದಾದರೆ 117. ಒಳಕ್ಕೆ 118. ದ್ವಿರುಕ್ತಿ (ಕರಾರು) 119. ಶೀಬಿ (ತುಮಕೂರು ಜಿಲ್ಲೆಯ ಊರು) 120. ಪರುಷೆ 121. ಕುಸಿ ಕುಸಿದು,

ಜಾರಿ ಜಾರಿ 122. ಗಂಡ(ಚಿಕ್ಕಣ್ಣ) 123. ಹುಡಿಹುಡಿ 124. ಬೇಗ 125. ಸಹವಾಸ, ನೆರೆ, ತಂಟೆ 126. ಆತುರ, ಆವಸರ 127. ಭಾನುವಾರ 128. ಭಾನುವಾರ 129. ಆಗೋ ಇಗೋ ಎನ್ನುವಾಗ 130. ಬಾಹೋಗೋ ಗೌರಿಯಾಗೆ 131. ಅಲುಗಾಡಲಿಲ್ಲ 132. ಸುತ್ತಲೂ 133. ಕೈ ಕಲ್ಲು ಎಸೆಯುವ ಅಂತರ 134. ಪರಿಪಾಲಕರು (ಜನರು) 135. ತೇರಿನ ಗಾಲಿ ಮೇಲಕ್ಕೆ ಹತ್ತಿ 136. ಸರ ಸರನೆ (ಉಲ್ಲಾಸದಿಂದ) 137. ಆಕಳಿಕೆ 138. ಹೋಗಿ 139. ಆಯುಧ ಸಾಮಾಗ್ರಿ 140. ಆರಗುಂಡಿಗೆ ನಾಯಕ ಶೆಟ್ಟರು 141. ಕುಡುಗೋಲು (ಹಾರ ಕೊಡುವ) 142. ಟೋಪಿ 143. ಗೆಡ್ಡೆಕೋಲು 144. ಬೇಟೆಯಾಡಿ 145. ಬರುವ ಹಾಗೆ 146. ಆಡಿಕೆ ಎಲೆ 147. ಚರ್ಮದ ಮೆಟ್ಟು 148. ಮದುವೆಯಾದ ಧರ್ಮಪತ್ನಿ 149. ನಡು ಕಾಡು 150. ಹಾಸು 151. ನಡೆದಿವೆ 152. ನೀನು ಎದ್ದಿರು 153. ನನಗೇತಕ್ಕೋ 154. ಮಗ್ಗುಲಲ್ಲಿ 155. ಮಲಗವನೆ 156. ಚಿಜ್ಜಲುಮರ 157. ಹಳ್ಳಕ್ಕೆ 158. ಸಿದ್ಧವಾಗು. 159. ಬಾಹೋಗು 160. ಕಡಿದ ಹಾಗೆ 161. ಆಚೆ 162. ಹೋಗುವುದು 163. ಬಾಗಿಲ 164. ಅದಕ್ಕೊಷ್ಟು(ಗಿರಿಯಣ್ಣ ಗೌಡನಾಳಿಗೆ) 165. ಮಲಗಿದ 166. ಮಲಗಿಕೋ 167. ಮಲಗಿಕೊಂಡ 168. ಬೇಹಿನಾಳು 169. ಪೂರಾ 170. ಕೊಡುವುದಕ್ಕೆ 171. ನನ್ನಂತಹವನೊಬ್ಬ 172. ಹತ್ತಿರ ಹತ್ತಿರ 173. ತೆರೆದುಹಾಕಿ 174. ನೆಂಟಸ್ತನದಲ್ಲಿ 175. ನಿಷ್ಠೂರ 176. ಗೂಡು 177. ಹಸಿರು ಮರೆಮಾಡು 178. ಕೂರಿಸಿದ 179. ಬನ್ನಿರೆಲೇ 180. ಕೆತ್ತಿ ಹಸನುಮಾಡಿ 181. ರಣಸ್ಥಂಭ 182. ನಾರಿ ಆಳ್ವೆವ್ವನ 183. ಚಿಪ್ಪುಗೊಡಲಿ (ಅಗಲ ಬಾಯುಳ್ಳ) 184. ಅಣುಕಿ(ಎಟುಕಿಸಿ) (ದ್ವಿರುಕ್ತಿ) 185. ಬ್ಯಾಡರ ಅಜ್ಜ 186. ಚಿಜ್ಜಲ ಮರ 187. ಉಕ್ಕಿನ ಉರಿಬಾಣ 188. ಸಿಕ್ಕಿಕೊಂಡಿತು 189. ಹೊಕ್ಕಿಕೊಂಡಿತು 190. ಮೇಲೊಂದು 191. ಶಿರ 192. ಹಾಲಿನಂತಹ ಕರುಳು 193. ಕಾವಡಿ 194. ಹೀಗೆಯೇ 195. ಬಗ್ಗುವುದಿಲ್ಲವೆಂದು 196. ಮುಂದಿನ ಮಟ್ಟ 197. ಹಿಂದನವರು 198. ತಲೆದೆಸೆಯಲ್ಲಿ 199. ಅವರವರೇ 200. ಮಡಿದೋಯ್ತು 201. ವೀಳೆಯವ 202. ವಕ್ತೃವು ತೀರಾ ಗದ್ಯದಲ್ಲಿ ಕತೆಯನ್ನು ಹೇಳಿದ 203. ಬುತ್ತಿ ಚೀಲ 204. ರಕ್ತ 205. ಶಾಸ್ತ್ರಕೆ 206. (ಗಾಯವಾಗೆ ?) ಹುಳು 207. ಕರಿಯಕಲ್ಲಿನ ತಗ್ಗು (ಸ್ಥಳ) 208. ರಣಹದ್ದು 209. ಗೊಲ್ಲರ ಹುಡುಗ 210. ಕೊಟ್ಟೀಯ 211. (ಮಾಂಸ) ಬಾಡು ಹುಲಿ ಹಸು ಕೊಂದು ಹಾಗೇ ಬಿಟ್ಟುಹೋಗಿರುವದೆಂದು 212. ಈ ಕಡೆಯಿಂದ 213. ತಲೆ ಮಡಿದು 214. ಬೆಂಕಿ ಹಚ್ಚಿ ಸುಡುವುದು 215. ತೆಗೆದು ಹಾಕವರೆ 216. ಅಂತ್ಯ ಕಾಲದಾಗೆ 217. ಶ್ರೀಗಂಧ 218. ಹೋದವನೇ 219. ಕೊರಳಿಗೆ ಕಟ್ಟಿಕೊಳ್ಳುವ ಒಂದು ನೂಲೆಳೆ 220. ಕರಿಸೀರೆ 221. ನಡೆಯುತವೆ (ಹರಿಯುತ್ತವೆ) 222. ಕತ್ತಿ (ಅಲಗು) ಅಳವಡಿಸಿಕೊಂಡು 223. ದೇವರಾಗುತ್ತಾನೆ 224. ಬ್ರಿಟಿಷಿನವರು (ಪರಂಗಿಯವರು) 225. ದುರ್ಬೀನು ಹಾಕಿ 226. ಒಂದು ಜಾತಿಯ ಮರವ ಹತ್ತಿಕೊಂಡ 227. ಮಧ್ಯಾಹ್ನ 228. ಬೈಗಳದ ಮಾತು 229. ದಕ್ಕುವುದಿಲ್ಲ.

## ೩. ಬಯಲುಸೀಮೆ ಗೌಡನ ಮಗಳು

ಜಗಂಜ್ಯೋತಿ ಮಾವಿನ ಮರವೆ ತಂದನಾನ
ಬಯಲುಸೀಮೆಯ ಗೌಡನ ಮಗಳೆ ತಂದನಾನ ॥ ಹಿಮ್ಮೇಳ ॥

ಯಾವ ಸೀಮೆ ಗೊಲ್ಲಾರ್ರುಡುಗ
ಏಳು ಸಾವಿರ ಹುಂಡಿ ದನವ
ಹೊಡಕೊಂಡಿ ಗೊಲ್ಲರ್ರುಡುಗ
ಸುರಹೊನ್ನೆ ಮರತಕ್ಕೆ
ಸುರಹೊನ್ನೆ ಮರತಕ್ಕೆ ಬಂದು
ಕರಿಯ ಕಂಬಳಿಯ
ತಿರುಗಿ ಗದ್ದಿಗೆ ಹೂಡಿ
ಕರಿಯ ಕಂಬಳಿಯ
ಬೀಸಿ ಗದ್ದಿಗೆ ಹೂಡಿ
ಕಾಳುನಾಯಿ ಜೂಲುನಾಯಿ
ಏಳು ಸಾವಿರ ಹುಂಡಿ ದನವ
ಮೆಯ್ಯಾಕೆ ಹೊಡೆದುಬುಟ್ಟು
ಚಿನ್ನದ ಕೊರಳ ಬೆಳ್ಳಿಕೊರಳ
ಲಾಲೀಸಿ ನುಡಿತಾನೆ

ಬಯಲುಸೀಮೆ ಗೌಡನ ಮಗಳು
ಬಿಂದಿಗೆಯ ತಕ್ಕೊಂಡು
ನೀರೀಗೆ ಬರುತಾಳೆ
ನೀರೀಗೆ ಬರುವಾಗ
ಅವನು ಲಾಲೀಸಿ ನುಡುದಾನೆ
ಅವಳು ಗ್ಯಾನೇಸಿ ಕೇಳ್ತಾಳೆ
ಬಿಂದಿಗೆಯ ಇಟ್ಟುಬುಟ್ಟು
ಸುರಹೊನ್ನೆ ಮರತಾಕೆ
ಹೋದಾಳೆ ಗೌಡನ ಮಗಳು
ಯಾವ ಸೀಮೆ ಚೆಲುವಾನೊ

---

ಪ್ರತಿಸಾಲಿನ ತುದಿಗೂ ತಪ್ಪದೆ “ತಂದನಾನ” ಎಂದು ಸೇರಿಸಿಕೊಳ್ಳಬೇಕು).

---

ಸಂಗ್ರಹ : **ಡಾ. ಕಾಳೇಗೌಡ ನಾಗವಾರಗಣೆ ನುಡಿಸುತ್ತಿರುವ ಪೂಜಾರಿ**
ಕೃತಿ : ಬಯಲುಸೀಮೆ ಲಾವಣಿಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 1973.

ಯಾವ ನಾಡ ದೊರೆ ಮಗನೊ
ನಾವು ಇವನಂದ ಆಡೂನ ಬಾರೊ
ಕೇಳವ್ವ ನನ ತಾಯಿ
ನಾ ನೋಡಿದರೆ ಗೊಲ್ಲರ ಹುಡುಗ
ನೀ ನೋಡಿದರೆ ಗೌಡರ ಮಗಳು
ನಿನ್ನೊಂದಿಗೆ ಇನವಂದ
ನಾನಾಡೋದಿಲ್ಲ ತಾಯಿ

ಅಂಜಬ್ಯಾಡ ಅಳುಕಬ್ಯಾಡ
ನಾವಿನವಂದ ಆಡೂನ ಬಾ
ನಿನ್ನೊಂದಿಗೆ ಇನವಂದ
ನಾನಾಡೋದಿಲ್ಲ

ಏನೇನ್ಹೇಳಿದರೂವೆ
ಕೇಳದಲೆ ಗೌಡನ ಮಗಳು
ನಿನ್ನೊಂದಿಗೆ ಇನವಂದ
ಆಡಿದರೆ ಸರಿಹೋಯ್ತು
ಇನವಂದ ಆಡದೆ ಹೋದ್ರೆ
ನಿನ್ನ ಶಿರವ ಕಡಿಸೂವೆ
ನಿನ್ನ ಶಿರವಾನೆ ಮೆಟ್ಟಿಕೊಂಡು
ನಾ ತಣ್ಣೀರ ಮೀಯುತೀನಿ

ಅವಳೇನೇನ್ಹೇಳಿದರೂವೆ
ಕೇಳಾನಲ್ಲೆ ಗೊಲ್ಲರ್ಹುಡುಗ
ತೊಟ್ಟಿದ್ದ ಬಳೆಗಳ
ಲಗ್ಗಾನೆ ನರಕಾಳೆ
ಇಕ್ಕಿದ ಸೀರೆ ರವಕೆ
ಪರಪರನೆ ಹರುದಾಳೆ
ಬಳೆಯಗಾಜ ತಕ್ಕೊಂಡವಳು
ಮೈ ಕೈಯ ಗಂಜುಕೊಂಡು
ಬಿಂದಿಗೆಯನಿಟ್ಟುಬಿಟ್ಟು
ಊರಿಗೆ ಹೋಗುತಾಳೆ

ಮಂಚಾಕೆ ಮೊಕಾಡೆಯಾಗಿ
ಮಲಗಾಳೆ ಗೌಡನ ಮಗಳು
ಬಯಲುಸೀಮೆ ಗೌಡನ ಹೆಡ್ತಿ
ಮಗಳಿದ್ದ ಮಂಚಕೆ ಬಂದಳು
ಯಾಕವ್ವ ನನ ಕಂದ
ಊಟಾವ ಮಾಡುಬಾರೆ
ನಿನ್ನ ಊಟ ಯಾರಿಗೆ ಬೇಕು
ನಿನ್ನ ನೋಟ ಯಾರಿಗೆ ಬೇಕು
ಹೋಗವ್ವ ಅಂಗಂದು
ಅವರ ತಾಯಿಯ ಕಳುಗಾಳೊ
ಬಯಲುಸೀಮೆ ಗೌಡನ ಹೆಡ್ತಿ
ತನ್ನ ಗಂಡನಿಗೆ ಹೇಳಿದಳೆ
ಬಯಲುಸೀಮೆ ಗೌಡ ಬಂದಿ
ಏನೆಂದು ಕೇಳುತಾನೆ
ಯಾಕವ್ವ ನನ ಕಂದ

ನಿನ್ನ ಕಷ್ಟವೇನೆ ಸುಖವೇನೆ
ಹೇಳವ್ವ ನನ್ನೊಂದಿಗೆ
ಕೇಳಪ್ಪ ನನ ತಂದೆ
ಅಂಜಿ ಬಿನ್ನ ಮಾಡಲೊ
ನಾನಂಜದೆ ಬಿನ್ನ ಮಾಡಲೊ
ಅಂಜಬ್ಯಾಡ ಅಳುಕಬ್ಯಾಡ
ಹೇಳವ್ವ ನನ್ನೊಂದಿಗೆ
ಕೇಳಪ್ಪ ನನ ತಂದೆ
ಅವನ್ಯಾವ ಸೀಮೆ ಗೊಲ್ಲರ್ಹುಡುಗ
ಅವನು ಏಳು ಸಾವಿರ ಹುಂಡಿ ದನವ
ಅಟ್ಟಿಕೊಂಡು ಗೊಲ್ಲರ್ಹುಡುಗ
ಸುರಹೊನ್ನೆ ಮರತಾಕೆ ಬಂದಿ
ಕರಿಯ ಕಂಬಳಿಯ
ತಿರುಗಿ ಗದ್ದುಗೆಯ ಹೂಡಿ
ಕರಿಯ ಕಂಬಳಿಯ
ಬೀಸಿ ಗದ್ದುಗೆ ಹೂಡಿ

ಕಾಳುನಾಯಿ ಜೂಲುನಾಯಿ
ಏಳು ಸಾವಿರ ಹುಂಡಿ ದನವ
ಮೆಯ್ಯೋಕೆ ಹೊಡುತಾನೆ
ಚಿನ್ನದ ಕೊರಳ ಬೆಳ್ಳಿ ಕೊರಳ
ಲಾಲೀಸಿ ನುಡುದಾನೆ
ಬಿಂದೀಗೆ ತಕ್ಕೊಂಡು
ನಾ ನೀರೀಗೆ ಹೋಗುವಾಗ
ಕಂಡನಲ್ಲೊ ಗೊಲ್ಲರ್ಹುಡುಗ
ಕೈ ಗುದ್ದೀಗೆ ಮೈ ಗುದ್ದೀಗೆ
ಬಂದಾನೆ ಗೊಲ್ಲರ್ಹುಡುಗ
ಬ್ಯಾಡ ಅಂದು ನಾನು
ಸಾರಿ ಹೇಳುತ ಬಂದೆ
ಕೇಳಲಿಲ್ಲ ಗೊಲ್ಲರ್ಹುಡುಗ
ಅವನ ಶಿರವ ಮೆಟ್ಟಿಲುಕೊಂಡು
ನಾ ತಣ್ಣೀರು ಮೀಯಬೇಕು

ಬಂದಾನೆ ಬಯಲುಸೀಮೆ ಗೌಡ
ದಂಡನಾದರೆ ಕರಕೊಂಡು
ಸುರಹೊನ್ನೆ ಮರತಾಕೆ ಹೋಗಿ
ತಪ್ಪು ಕಾಣದೆ ತಾಗು ಕಾಣದೆ
ಅವನ ಶಿರವನ್ನು ಕಡಿತಾನೆ
ಮಗಳಿಗೆ ತಂದು ಕೊಡುತಾನೆ
ಅವನ ಶಿರವ ಮೆಟ್ಟಿಲುಗೊಂಡು
ತಣ್ಣೀರ ಮೀಯುತಾಳೆ

* * * *

ಎಲ್ಲಿ ಕಂಡವೊ ಯಾತಾವು ಕಂಡವೊ
ಬಂದವಲ್ಲೆ ಕಾಳುನಾಯಿ ಜೂಲುನಾಯಿ
ಕಾಳುನಾಯಿ ಜೂಲುನಾಯಿ
ಆಕಾಶಕಾರುತಾವೆ
ಭೂಮಿಗೆ ಬೀಳುತಾವೆ
ಏಳು ಸಾವಿರ ಹುಂಡಿ ದನ
ಬಂದಿನ್ನು ನೋಡುತಾವೆ


ಚೂಜು ಕೊಂಬಿನ ಹೋರಿ
ಬಟ್ಟು ಕೊಂಬಿನ ಬಸವ
ಕಾಮಜೇನು ಅನ್ನುವ ಆಸ
ನವಿಲು ಅನ್ನುವ ಹೋರಿ
ಕಾಳುನಾಯಿ ಜೂಲನಾಯಿ
ಅವ ಕರಕೊಂಡು ಹೋಗುತಾವೆ

ಏಳು ಸಾವಿರ ಹುಂಡಿ ದನ
ಅವನ ಪಟ್ಟಣಕೆ ಹೋಗುತಾವೆ
ಬಯಲುಸೀಮೆ ಗೌಡನ
ಹಟ್ಟಿಗೆ ಹೋಗುತಾವೆ
ಬಯಲುಸೀಮೆ ಗೌಡನ ಮಗಳ
ಗುದ್ದಿ ಜೀವವ ತಗದಿ
ಬಯಲುಸೀಮೆ ಗೌಡನ
ತುಳದಿ ಜೀವವ ತಗದಿ
ಕಾಳುನಾಯಿ ಜೂಲುನಾಯಿ
ಅವನ ಶಿರವನ್ನು ತಗುದಾವೆ
ಈಚೇಗೆ ಮಡಗೀದೊ

ಕಾಮಜೇನು ಅಂಬುವ ಅಸ
ಕೊಂಬಿನೆಡೆಯಲ್ ಮಡಗಿಕೊಂಡು
ಸುರಹೊನ್ನೆ ಮರತಕ್ಕೆ ಬಂದು
ಮುಂಡಕ್ಕೆ ಶಿರವನ್ನು ಮಡಗಿ
ಮರುಜವಳಿ ಕಡ್ಡಿಯ ತಂದು
ಮಂತ್ರಿಸಿ ಜೀವವ ತಂದಿ
ಏಳಯ್ಯ ನನ ತಂದೆ
ನಮ್ಮ ಪಟ್ಟಣಕೆ ಹೋಗೋನಂದು
ಕರಕೊಂಡು ಹೋಗುವಾಗ

ಜಗಂಜ್ಯೋತಿ ಮಾವಿನ ಮರವೆ
ಬಯಲುಸೀಮೆ ಗೌಡನ ಮಗಳೆ

* * *



ಕಾಡುಗೊಲ್ಲರ ನಾಗಾಭರಣ ದೈವಗಳು

# ೪. ಚಿತ್ರದೇವರ ಕಾವ್ಯ

ಭೂಮಿಯ ನೆನದೇವು । ಭೂಲೋಕ ನೆನದೇವು
ಭೂಮಿಯಲಿ ಬೆಳೆವ ಚೆಲುವ ಬಸವನ । ಶ್ರೀರಾಮ ಪಾದ ನೆನೆದೇವು
ಗಂಗೆಯ ನೆನೆದೇವು । ಗೌರಿಯ ನೆನೆದೇವು
ತುಂಬಾನೆ ಕೂಡಲ ಸಂಗಮೇಶ್ವರನ ನೆನೆದೇವು
ಸುತ್ತೇಳು ನೆನೆದೇವು ಸೂರ್ಯನ ನೆನೆದೇವು
ವತ್ತಾರೆ ಈಶ್ವರನ ನೆನೆದೇವೋ ।
ಕೂಡಲ ಮುಕ್ಕುಂಡೀಶ್ವರನ ನೆನೆದೇವೋ ।

ಸತ್ಯಮ್ಮ ಬರುವಾಗ ಬತ್ತಿದ ಕೆರೆ ತುಂಬಿ
ಹಾಲುಕ್ಕಿ ಕರೆಯೋ ಬರುವಾಗ ।
ಉತ್ತುಂಗ ಮಂಡಲದ ನೆಲಸೋಕಿ । ಹಾಲಕ್ಕ
ಕರೆಯೋ ಗುರುವಾಗೋ ।
ಹಿಂಡಲಿ ಕುರಿಯಾ ಕಡಿದು । ದಂಡಿ ಮರಿಯ ಮಾಡಿ
ಮಂಡಲದ ಆರತಿಯ ಬೆಳಗಿದರೋ ।
ಸಾವಿರ ಕುರಿಯ ಕಡಿದು ಗಂಡು ಕುರಿಯ ಮರಿ ಮಾಡಿ
ನಾಡಿಗೆ ಆರತಿಯ ಬೆಳಗಿದರು

ಪಟ್ಟಿ ಸೀರೆನ ಹರಿದು ಕಟ್ಟಮ್ಮ ಬುತ್ತಿಯ
ಹತ್ತೆಂಟು ಜನಕೆ ಅಳಸಾದ ಬುತ್ತಿಯ
ಕಟ್ಟಲು ಹೇಳಿದರೋ ಪಯಣಾಕೋ
ತೋಟ ಮುತ್ತಿದ ಕಂಡೆ । ತೋಟಾದಾಗೊಂದನೆ
ರಣವಾಗಾದು ಕಂಡೆ ! ಬೆಳಕಿರಣ ನೀರುಗಲ್ಲು
ಕೋಲ್ಮಿಂಚು ರಣವಾಗೋದು ಕಂಡೆ
ಅಡ್ಡಾಡೊದಂದು ದೊಡ್ಡ ಮುತ್ತಿನ ಆನೆ
ಕರಿಯಣ್ಣ ತಾಯಮ್ಮ ನೀನು ಕಂಡ ಕನಸು ಬಯವಿಲ್ಲದಂತೋ
ಮೂಗುತಿ ಮುರಿಯದ ಕಂಡೆ । ಮುಗಿಲ ಸಿಡಿಯದ ಕಂಡೆ
ಮುಂದಾಲ ಮುಪ್ಪರಿಗೆ ಕಳಪಿಡಿಯಾದುದು ಕಂಡೆ
ದೊಡ್ಡದೊಂದಾನೆ ರಣವಾಗೋದು ಕಂಡೆ.

---

ಹಾಡಿದವರು : **ನಿಂಗಣ್ಣ**, ಕಾಡುಗೊಲ್ಲರು, ಲಕ್ಕವ್ವನಹಳ್ಳಿ, ಗೊಲ್ಲರಹಟ್ಟಿ, ಶಿರಾ ತಾ.
ಸಂಗ್ರಹ : **ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**
ಕೃತಿ : ಚಿತ್ರದೇವರ ಕಾವ್ಯ, ಗಡಿನಾಡು ಜಾನಪದ ಸಂಪರ್ಕ ಕೇಂದ್ರ, ಕಾಳಿದಾಸನಗರ, ಶಿರಾ, 1998

ಹೊತ್ತುನುಂಟೆದ್ದು ಬಟ್ಟನಾ ಮುಖತೊಳೆದು
ಬಟ್ಟನ ಹರಿನಾಮ ಹಣೆಗಿಟ್ಟು ಈರಣ್ಣ
ಸತ್ಯದಿಂದಲೆ ಕುರಿಯ ಕರೆದಾನು
ಏಳಾವತ್ತಿಗೆದ್ದು ನ್ಯಾರಾನ ಮೊಕ ತೊಳೆದು
ನೀಲಿಯ ತಿಲಕ ಹಣೆಗಿಟ್ಟು ಈರಣ್ಣ
ನಿಡುಗೈಲಿ ಕುರಿಯ ಕರೆದಾನೋ.

ಅಕ್ಕಿ ಕುಟ್ಟಿದೀನಿ ಸಕ್ಕರೆ ಬೆರೆಸಿದ್ದೀನಿ
ತಕ್ಕೊಳೋ ಈರಣ್ಣ ನಿನಗೋಸುಗ
ನಿಡುಗಲ್ಲು ಕಾವಲಿಗೆಡೆಯ ಕೊಡುತೀನಿ

ಮೂಡಲ ಗಿರಿಯಂತೆ ಗೋವರ್ಧನ ಗಿರಿಯಂತೆ
ಮೂಡು ಮೂರು ಮೈಲು ಪಡವ ಮೂರು ಮೈಲು
ಟೆಂಕ ಮೂರು ಮೈಲು । ಬಡಗ ಮೂರು ಮೈಲು
ಹನ್ನೆರಡು ಮೈಲಿ ನೋಡೂ ।
ಬಿದಿರಿಗೆ ಬದಿರು ತಾಕೋದಂತೋ । ಅಂತ್ತೆಂಬಾ ಹೊತ್ತಿಗೆ
ಬೆಟ್ಟ ಹತ್ತಿಕೊಂಡು ಉರಿಯೋದಂತೋ

ಹೆಣ್ಣು ಬೇರುಂಡೆಂಬಾದು । ಗಂಡು ಬೇರುಂಡೆಂಬಾದು
ಎರಡಾನೆ ಪಕ್ಷಿಗಳು ಮರಿಗಳಾ ಮಾಡಿಕೊಂಡು
ಜೀವನವಾ ಮಾಡುತಾವಂತೋ ।
ಪಕ್ಷಿಗಳು ಅಳುತಾವಲ್ಲೋ ನೋಡಣ್ಣ
ಮಕ್ಕಳು ಸಾಯುತಾವೆಂದು । ಮರಿಗಳು ಸಾಯುತಾವೆಂದು
ಕಾರ್ ಕಾರ್ ಅಂದು ಅಳುವುದಲ್ಲೋ ! ನೋಡಣ್ಣ
ಪಕ್ಷಿಗಳ ಶೋಕ ಪಾರ್ವತಿಯ ಕಿವಿಕರಣಕೆ ತಾಗಿದಂತೋ ।
ಕಾರ್ ಕಾರ್ ಅಂದು ಅಳುವುದೆಂತೋ
ಶಿವ ಶಿವನ ಕಾರ್ ಕಾರ್ ಅಂದು ಮರಿಗಳು ಸಾಯುತಾವೆಲ್ಲೋ
ಪಕ್ಷಿಗಳ ಶೋಕವು ಪಾರ್ವತಿಯ ಕಿವಿಕರಣಕೆ ಬಿದ್ದಿತೆಂತ್ತೋ

ಶಿವನು ಪಾರ್ವತಿಯ ಕಾಳಿಂಗನ ಮೇಲೆ ।
ರಥವನ್ನು ಹೂಡಿಕೊಂಡು ಲೋಕ ಸಂಚಾರ ಹೊರಟಾರಂತೋ
ಲೋಕ ಸಂಚಾರ ಹೊರಟಾರಂತೋ । ಅಂತೆಂಬಾ ಹೊತ್ತಿಗೆ

ಪಕ್ಷಿಗಳ ಸೊಲ್ಲು ಪಾರ್ವತಿಯ ಕಿವಿಕರಣಕೆ ಬಿದ್ದಿತೆಂತೋ
ಏನಯ್ಯ ಮಾಸ್ವಾಮಿ ನನ್ನಂಥ ಹೆಣ್ಣುಗಳು
ಶೋಕವಾ ಮಾಡುತಾರೆ । ದುಃಖವ ಮಾಡುತಾರೆ
ಅವರ ಕಷ್ಟವೇನು ಸುಖವೇನು ।
ಅಂಗವೆನು ಬಂಗವೇನು । ಅವರ ಕಷ್ಟವೇನು ದುಃಖವೇನು
ಕೇಳಬೇಕು ಸ್ವಾಮಿ ನಾವು ।

ನಡಿಯಾಲ ಪಾರ್ವತಿಯೆ ನಾವೂರಿಗೋಗಾನ
ಅಂದಾನು ಶಿವನು ಮಾತು ಮುರಿಯೋನಂತೋ
ಶಿವನೆಂದ ಮಾತು ಕೇಳಿ ಪಾರ್ವತಿಯು ಹೇಳುತಾಳೆ

ಕೇಳಲೇ ಮಾಸ್ವಾಮಿ ನಾನೊಂದು ಹೇಳುತೀನಿ
ಸುರಲೋಕ ನರಲೋಕ ದೇವಲೋಕ ಮೂರು
ಲೋಕದೊಳಗೆ ನಮ್ಮನ್ನು ಕಣ್ಣಿಂದ ನೋಡಿದರೆ
ಕಿವಿಯಾರ ಕೇಳಿದರೆ ಮುಂದಕ್ಕೆ ಹೋದಾರು
ಅಂತಂದು ಕ್ಷಮಿಸೋದಿಲ್ಲ ನಮ್ಮನ್ನ ಸ್ವಾಮಿ
ದೇವರು ಅಂಬೋದಿಲ್ಲ ನಮ್ಮನ್ನು ಅಂಬೋಳಂತೋ

ರಥವನ್ನ ನಿಲ್ಲಿಸಿದರಂತೋ । ನೋಡಣ್ಣ ಪಾರ್ವತಿಯು
ರಥದಿಂದಿಳಿದಾಳಂತೋ । ರಥದಿಂದಿಳಿದಾರಂತೋ
ನೋಡಣ್ಣ ಪಕ್ಷಿಗಳ ಶೋಕವ ನೋಡೋರಂತೋ

ಯಾರೋ ಬಂದು ಬೆಟ್ಟಕ್ಕೆ ಬೆಂಕಿಯ ಇಟ್ಟವರೆ
ಮಕ್ಕಳು ಸಾಯುತಾವೆ ಅಲ್ಲೊಂದು ಮರಿಗಳು ಸಾಯುತಾವೆ
ಕಾರ್ ಕಾರ್ ಅಂದು ಅಳುತಾವೆ ಸ್ವಾಮಿ
ಅಂದು ಪಕ್ಷಿಗಳು ಹೇಳುತಾವೆ ಸ್ವಾಮಿ ಅಂತೆಂಬಾ
ಸೊಲ್ಲನ್ನು ಪಾರ್ವತಿಯು ಶಿವನ ಮುಂದೇಳಾಳಂತೋ

ಕೆಡಿಸಬೇಕು ಸ್ವಾಮಿ ನೀನು । ಉರಿಯುವ ಬೆಟ್ಟವ
ಕೆಡಿಸಬೇಕು ದೇವರೆ ನೀವು
ಕೇಳಲೇ ಪಾರ್ವತಿಯೆ ನಾನೇನು ಹೇಳುತೀನಿ
ಮೂಡು ಮೂರು ಮೈಲು । ಬಡಗ ಮೂರು ಮೈಲು

ಟೆಂಕ ಮೂರು ಮೈಲು ಪಡುವ ಮೂರು ಮೈಲು
ಉರಿಯಾ ಬೆಟ್ಟವ ನನ್ನಿಂದ ಕೆಡಿಸಲು ಸಾಧ್ಯವಿಲ್ಲ ಅಂಬಾನಂತೋ ।
ಕೆಡಿಸಬೇಕು ಸ್ವಾಮಿ ನೀವು । ಉರಿಯಾ ಬೆಟ್ಟವ
ಕೆಡಿಸಬೇಕು ಗುರುವೆ ನೀವು ।

ಗಳಗಳನೆ ಬೆವತವನೆ । ಬೆವರನ್ನು ಸುರಿದವನೆ
ತನ್ನ ಮೈಯಗಳ ಅಂಗಿ ತೆಗಿದು ಸ್ವಾಮಿ ಹನ್ನೆರಡು
ಮೈಲಿ ಉರಿಯೋ ಬೆಟ್ಟಕ್ಕೆ ಇಂಡೋನಂತೋ
ಬೆಟ್ಟವನ್ನೇ ಕೆಡಿಸೋರಲ್ಲೋ ಮೂಲೆ ಮೂಲೆಗಳ
ಬೆಂಕಿಯ ಅಳಿಸೋರಲ್ಲೋ ।

ಮೂರನೆ ಕೆಂಡವಲ್ಲೋ ಮಾಸ್ವಾಮಿ ಕೆಡಿಸಬೇಕು
ಅಂಬಾಳಂತೋ । ಕೇಳಾಲೆ ಪಾರ್ವತಿಯೆ ನಾನೊಂದ
ಹೇಳುವೆನು । ಮೂರನೆ ಕೆಂಡದಲ್ಲಿ ದುಸುಮಾನರು
ಇರಬಹುದು । ಶಿಸು ಮಾನ್ಯರು ಇರಬಹುದು
ಅವನೆ ನನಗೆ ಗಂಡನಾಗಿ ಬಿಡಬಹುದು ಅಂಬಾನಂತೋ
ಕಟಿಕೊಂಡರೆ ಆಗೊಲ್ಲ ಬಿಟ್ಟು ಬಿಡು ಎಂಬೋನಂತೋ

ಸ್ವಾಮಿ ಶಿವನೆ ಎದ್ದು ನಿಂತೋ ಹೊತ್ತಿಗೆ
ಪಾರ್ವತಿಯು ಮಕ್ಕಳಿಗೆ ಕೆಡುವುದೆಂತೋ ಅಂಬಾಳಂತೋ
ಆಂಗಂದ ಮಾತಿಗೆ ಪಾರ್ವತಿಯು ಮೂವರು ಮಕ್ಕಳನ್ನು
ಮಡಿಲಾಗೆ ಕಟ್ಟುವಳಂತೋ । ಮಕ್ಕಳಾ ಕಟ್ಟಿ ತಾನೂನು
ರಥದಾಗೆ ಕುಂತಾಳಂತೋ ।
ಅಂತೆಂಬಾ ಹೊತ್ತಿಗಲ್ಲೋ । ಚಿತ್ತಯ್ಯ ನರಸಿಂಹ
ಪಾರ್ವತಿಯ ಎದೆಗೇನೆ ಕಚ್ಚಿದರೆಲ್ಲೋ
ಪಾರ್ವತಿಗೆ ರೋಷನೇ ಉಕ್ಕದಲ್ಲೋ ಆವಾಗ
ಪಾರ್ವತಿಯು ಮಕ್ಕಳ ಭೂಪಾಲಕ್ಕೆ ಕೆಡುವಳಂತೋ

ಸಾಯುತೀನಿ ಸ್ವಾಮಿ ನಾನು । ಬದುಕಲ್ಲ
ಉಳಿಯಲ್ಲ ನಾನು ।
ಅಂತೆಂಬಾ ಮಾತಿಗೆ ಶಿವನು ಐದು ಮಂದಿ
ತಾಯವ್ವನ ಕರೆಸೇವನಂತೋ ।
ಬೇವಿನ ಮರದಮ್ಮ ಬೆಲ್ಲ ನೀಡಲು ಬೇಕು

ಆಲದಾ ಮರದಮ್ಮ ಹಾಲು ಕೊಡಲು ಬೇಕು
ಹತ್ತಿಯ ಮರದಮ್ಮ ಎತ್ತಿ ಮುದ್ದಾಡಮ್ಮ
ಭೂದೇವಿ ಭೂಮಮ್ಮ ಬರವಣಿಗೆ ನೀಡಮ್ಮ
ಆಕಾಶ ರೇಣಮ್ಮ ವಿದ್ಯೆ ಬುದ್ದಿ ಕಲಿಸಮ್ಮ
ಮೂವರು ಮಕ್ಕಳನ್ನು ಗೋವರ್ಧನ ಗಿರಿಯಾಗೆ
ಬಾಳು ಬದುಕು ಮಾಡಬೇಕು ನೀನು ಅಂದು
ಸ್ವಾಮಿ ಶಿವನೇ ಮಕ್ಕಳಾ ಕಳುಸೇನೆಂತೋ !

ಅಂತೆಂಬಾ ಮಾತಿಗೆಲ್ಲೋ ಶಿವ ಪಾರ್ವತಿಯರು
ರಥದ ಮೇಲೆ ಕುಂತಾರಂತೋ । ಕುಂತು
ಭೂ ಸಂಚಾರ ಹೊರಟಾರಂತೋ । ಶಿವ ಪಾರ್ವತಿರು
ಲೋಕ ಸಂಚಾರ ಹೊರಟಾರಂತೋ
ಅರಮನೆಗೆ ಬಂದಾರಲ್ಲೋ । ಶಿವ ಪಾರ್ವತಿಯರು
ಊಟಾನೆ ಮಾಡಿದರಂತೋ । ಶಿವ ಪಾರ್ವತಿಯರು
ಅರಮನೆಲಿ ಮಲಗಿದರಂತೋ । ಆಗ
ಪಾರ್ವತಿ ಮಕ್ಕಳನ್ನ ನೆನಸಿದಳಂತೋ ।
ಏನೆಲೋ ಸ್ವಾಮಿ ನಾನೇನು ಹೇಳುತೀನಿ
ನಾಯಿನೇ ಹೆರುವುದು ನಡು ನೀರಿಗಾಕುವುದು
ನಾಯೆತ್ತಂಗೆ ಹೆತ್ತು ಮಕ್ಕಳನ್ನ ಯಾರ ಕೈಗೆ ಕೊಟ್ಟು
ನಮ್ಮ ಮನೆಯಾಗೆ ನಾವಿದ್ರೆ ಸುಖವೇನು ಫಲವೇನು ಸ್ವಾಮಿ
ಮುಂದೇನಾರೂ ಯಾರಾರು ಮತಿಗಳು ನಿಮ್ಮ ದೇವರೇನು
ದಿಂಡ್ರೇನು ? ಹೆಸರೇನು ? ಕುಲವೇನು ? ಅಂಬ್ತಾ ಕೇಳಿದರೆ
ಮಕ್ಕಳೇನು ಹೇಳುತಾವೆ ಸ್ವಾಮಿ
ಅಂತೆಂಬಾ ಮಾತಿಗೆ ಶಿವನು ರಥವನ್ನು ಹೂಡಿಕೊಂಡು ।
ಶಿವನೂ ಪಾರ್ವತಿಯೂ ಕೂಡಿಕೊಂಡು । ರಥಗಳ ನೋಡಿಕೊಂಡು
ಮಕ್ಕಳಿರುವಂಥ ಜಾಗಕ್ಕೆ ಬರುವರಂತೋ ।

ಊರಿಲ್ಲ ಕೇರಿಲ್ಲ ಸರವಿಲ್ಲ ಮರವಿಲ್ಲ
ನೀರಿಲ್ಲ ನೀಡಿಲ್ಲ ಆದೆಂಬ ಅಡವೀಲಿ ರಥನೇನ ಇಳಿಸಿದಂತೋ ।
ರಥವನ್ನ ಇಳಿಸಿದರಂತೋ । ಸ್ವಾಮಿ ಮಕ್ಕಳಾ ಕರೆದಾರಂತೋ
ಬತ್ತಲೆ ಕರೆದಾರಂತೋ । ನಾಲ್ಕು ಮೂಲೆಗೆ ನಾಲ್ಕು
ಗೇಟನ್ನೇ ಬರೆದಾರಂತೋ ।
ಚೌಕಟ್ಟು ತೆಗೆದಾರಂತೋ । ನಾಲ್ಕು ಮೂಲೆಗೂ ನಾಲ್ಕು

ಚೌಕಟ್ಟು ತೆಗೆದಾರಂತೋ ।
ಬಂಗಾರದ ಕಂಬವಂತೆ ಬಂಗಾರದ ಜಂತಂತೆ
ಬಂಗಾರದ ತೊಲೆಯಂತೆ
ಚಿತ್ತರಗಿರಿ ಎಂಬಾ ಪಟ್ಟಣವ ಹುಟ್ಟಿಸಿದರಂತೋ ।
ಕೋಟೆಯ ಕಟ್ಟಿಸಿದರಂತೋ ! ಕೊತ್ತಲಾ ಮಾಡಿಸಿದರಂತೋ
ಚಿತ್ತರಗಿರಿ ಪಟ್ಟಣವ ಶೃಂಗರಿಸಿ ನಿಲ್ಲಿಸಿದರಂತೋ
ಥಳ ಥಳ ಮಿಂಚಾದಲ್ಲೋ ಚಿತ್ತರ ಗಿರಿ ದಿಗಿಲ್ ದಿಗಿಲ್ ಎಂಥಾ
ಉರಿಯಾದಲ್ಲೋ

ಕುಂದಣನ ಕರೆಸಿದನಲ್ಲೋ । ಸ್ವಾಮಿ ಶಿವನು ಬಲೆಯ ಬರದಾನಂತೋ
ಒಲೆಯ ಕುಂದಣನ ಕಾಲಿಗೆ ಕಟ್ಟಿದರಂತೋ
ಅದಕ್ಕೆ ವಿದ್ಯೆ ಬುದ್ದಿ ಹೇಳೋನಂತೋ

ಗೋವರ್ಧನ ಗಿರಿಯಾಚೆ ನಮ್ಮ ಮೂವರು
ಮಕ್ಕಳು ಇರುವಂತೋ । ನಾವು ಬರೆದಂತ ಒಲೆಯ
ಜಪದ ಮುನಿ ಕಾಟಯ್ಯನ ಅಂಗೈಗೆ ಕೊಡಬೇಕು
ಗುಯ್ ಗುಯ್ ಎಂಬಾದಲ್ಲೋ । ಕುಂದಣ
ಚಿತ್ತರಗಿರಿ ಪಟ್ಟಣ ಬಿಟ್ಟು ಗೋವರ್ಧನಗಿರಿ ಪಟ್ಟಣಕೆ ನಡೆಯೋದಂತೋ
ಶಿವ ಪಾರ್ವತಿ ಬರೆದಂತೆ ಓಲೆಯ
ಜಪದ ಮುನಿ ಕಾಟಯ್ಯನ । ಅಂಗೈ ಮೇಲಿಟ್ಟಿತಂತೋ
ಅಂತೆಂಬಾ ಒಲೆಯ ಜಪದ ಮುನಿ ಕಾಟಯ್ಯ ಓದೋನಂತೋ
ಮೂವರು ಮಕ್ಕಳು ನೀವು ಗೋವರ್ಧನ ಗಿರಿ ಬೆಟ್ಟವ ಬಿಡಬೇಕು
ಚಿತ್ರಯ್ಯನ ಅರಮನೆಗೆ ಹೋಗಬೇಕು ಅಂದು ಬರೆದೈತೋ

ಬೆಟ್ಟವಾ ಬಿಟ್ಟಾರಂತೋ ಚಿತ್ತರಗಿರಿ ಪಟ್ಟಣದ
ಅರಮನೆಗೆ ನಡೆದಾರಂತೋ । ಅರಮನೆಗೆ ನಡೆಯಾರಲ್ಲೋ
ಶಿವ ಪಾರ್ವತಿ ಮಾಯಾನೆ ಆಗೋರಲ್ಲೋ । ಮಾಯಾನೇ ಆಗೋರಲ್ಲೋ
ಮೂವಾರು ಮಕ್ಕಳು ಕೋಟೆಯ ಸುತ್ತುವರಿದು ನೋಡೋರಂತೋ
ಊರಿಲ್ಲ ಕೇರಿಲ್ಲ ನೀರಿಲ್ಲ ನಿಡಿಲ್ಲ
ಪಟ್ಟಣ ಪಾಂಡ್ಯವರಿಲ್ಲ, ಅಡವಾಗೆ ನಾವೆಂಗೆ ಬದುಕೋದು
ಚಿತ್ತರಗಿರಿ ಪಟ್ಟಣ ಸೇರಿ ಇಲ್ಲವೆಂದು ಗೋವರ್ಧನ ಗಿರಿ
ಬೆಟ್ಟಕ್ಕೆ ಹಿಂದಕ್ಕೆ ನಡೆದಾರಂತೋ । ಹಿಂದಾಕೆ ನಡೆದಾರಲ್ಲೋ
ಆಗ ಶಿವ ಪಾರ್ವತಿಯೂ ಇದುರಾಗಿ ನಿಂತರಂತೋ ।
ಎಲ್ಲಿಗೆ ಹೋಗದು ನೀವು ನಮ್ಮ ಮಕ್ಕಳಾ

ಯಾತಕ್ಕೆ ಹೋಗದು ನೀವು
ಊರಿಲ್ಲ ಕೇರಿಲ್ಲ ಸರವಿಲ್ಲ ಸೌದಿಲ್ಲ
ಮರವಿಲ್ಲ ಮಂಡಿಲ್ಲ ಅಡಂಬ ಅಡವ್ಯಾಗೆ
ಯಂಗಮ್ಮ ಬದುಕಾಲಿ ಯಂಗಮ್ಮ ಬಾಳಲಿ ನಾವು
ಗೋವರ್ಧನಗಿರಿಗೆ ಹೋಗುವಿ ಸ್ವಾಮಿ

ಕರಿಯಾನೆ ಬೇಕು ನಮಗೆ । ಬಿಳಿಯಾನೆ ಬೇಕು ನಮಗೆ
ಕತ್ತಿಯ ಕೊಡಬೇಕು ನಮಗೆ । ಹಾಸಿಕೆ ಕೊಡಬೇಕು ನಮಗೋ
ಕರಗುಚ್ಚ ಕೊಡಬೇಕು ನಮಗೋ । ತೋಟವ ಕೊಡಬೇಕು ನಮಗೋ
ಜಂಬಾನೆ ಕೊಡಬೇಕು ನಮಗೆ, ರಿವಾಲು ಕೊಡಬೇಕು ನಮಗೆ
ಯಗ್ಗಡಿ ಕೊಡಬೇಕು ನಮಗೆ । ಭೂಚಕ್ರ ಕೊಡಬೇಕು ನಮಗೆ
ಚಿತ್ತರಗಿರಿ ಪಟ್ಟಣದ ದೊರೆಗಳು ನಾವಾಗುತೀವಿ ಸ್ವಾಮಿ ।

ಇಂತೆಂಬ ಬಿರುದು ಪಡೆದಾರಂತೋ । ಹೆಚ್ಚಿನ
ಬಿರುದಾ ಪಡೆದರಂತೋ । ಅಗೇವು ತೆಗೆಸಿದರೆಲ್ಲೋ
ಪಡೆದಂತಾ ಹೆಚ್ಚಿನ ಬಿರುದುಗಳ ಮುಚ್ಚು ಮಾಳಿಗೆಲ್ಲಾ ಮುಚ್ಚಿದರಂತೋ
ಚಿತ್ತರಗಿರಿ ಪಟ್ಟಣ । ಕಿಡಿಗಣ್ಣನು ಚಿತ್ತಯ್ಯನಿಗೆ
ಪಟ್ಟಾಭಿಷೇಕ ಆಗಬೇಕಲ್ಲೋ
ಮುತ್ತೈದೆ ಕಾದಿವೆಯಲ್ಲೋ ಚಿತ್ತಯ್ಯನಿಗೆ ಮುತ್ತೈದು ಕಾದಿದೆಯಲ್ಲೋ ।
ಅಂತೆಂಬ ಹೊತ್ತಿಗಲ್ಲೋ । ದೇವತರು ಮೂರು ಲೋಕ ತಿರುಗುವರಲ್ಲೋ

ಮೂಡಲ ತಿರುಗೆವರೆ । ಪಡುವಾನ ತಿರುಗೆವರೆ
ಟೆಂಕಾನೆ ತಿರುಗೆವರೆ । ಬಡಗಾನೆ ತಿರುಗೆವರೆ
ಮುರಾನೆ ದಿಕ್ಕೂನು ಸೋಸಿ ನೋಡೋರಂತೋ !
ಕಿಡಿಗಣ್ಣನು ಚಿತ್ತಯ್ಯನು ಕುಂತಾದ ನೋಡಿದಂತೋ ।
ಅಂತೆಂಬ ಹೊತ್ತಿನಲ್ಲೋ । ಜಪದ ಮುನಿ ಕಾಟಯ್ಯ
ಚಿಂತಾಮಣಿ ಹೊತ್ತಿಗೆ ಬಗೆದು ನೋಡೋನಂತೋ
ಒತ್ತಿಗೆಯೂ ಓದಿದನಂತೋ । ನೋಡಣ್ಣ ಒತ್ತಿಗಾಗಿ ಕುಳುವದಲ್ಲೋ ।
ಬೆಸ್ತರ ಹಳ್ಳಿಗೆ ಜಲಮಾನ ಮಗಳಂತೆ
ತುಪ್ಪದಂತಾ ಮುಖವಂತೆ ಮೊಸರಂತಾ ದೆಸೆವಂತೆ
ದೆಸೆವಂತೆ ಮಾಳಮ್ಮನು ಅದಾಳಂತೋ ।
ಕಿಡಿಗಣ್ಣನು ಚಿತ್ತಯ್ಯನು ವತ್ತಿಗೆ ತಿಳುವುದಂತೋ ।

ಜಪದ ಮುನಿ ಕಾಟಯ್ಯನ ವತ್ತಿಗೆಯೊಳಗೆ ಕಾಣೋದಂತೋ
ಕುಂಡಲ ಹೇಳೋದೆಂತೋ ದೇವತರು ಅರಮನೆಗೆ ಬರುವುದಂತೋ ।
ದೇವತರು ಅರಮನೆಗೆ ಬರುವುದೆಂತೋ । ಅರಮನೆಗೆ ಬಂದು
ಪಟದಾನೆ ತಡೆದರಲ್ಲೋ । ಪಟದಾನೆ ತಡೆದಾರಲ್ಲೋ
ಮುತ್ತಿನ ಕಳಸ ಪಡೆದಾರಲ್ಲೋ ।

ಅಂತಂಬಾ ಹೊತ್ತಿಗೆ ದೇವತೆಗಳು ಚಿತ್ತರಗಿರಿ ಅರಮನೆಗೆ ಬಂದುವಲ್ಲೋ
ಬೆಸ್ತರಹಳ್ಳೀಗೆ ತಾನೂನೆ ನಡೆಯುವುದೆಂತೋ
ಅರಮನೆ ಇಳಿವುದಂತೆ । ಬೆಸ್ತ್ರಹಳ್ಳಿಗೆ ತಾನೂನೆ ನಡೆಯುವುದಂತೆ
ಕೆಂಗುದರೆ ಎರಿಕೊಂಡು । ಬೆಸ್ತ್ರಹಳ್ಳೀಗೆ ತಾವೂನೆ ನಡೆಯುವುದಂತೆ
ಚಂದ್ರಾಯುಧ ರಾಯಗತ್ತಿ ಕುದುರೆ ಇಳಿದು
ಯಾವುದಣ್ಣ ಬೊಮ್ಮಣ್ಣನ ಅರಮನೆ ಕೇಳ್ಯಾರಂತೋ ।
ಹಾಸುಗಲ್ಲು ಹಾಸೈತೆ ಮುಚ್ಚುಗಲ್ಲು ಮುಚ್ಚೈತೆ
ಮುಚ್ಚುಗಲ್ಲ ಮೇಲೆ ಚಿತ್ತಾರ ಬರೆದೈತೆ
ಅದು ಕಾಣೋ ಮಾಳಮ್ಮನ ಅರಮನೆ
ಅಂದು ಕಾಣೋ ಮಾಳಮ್ಮನ ಅರಮನೆ ಎಂದು ಹೇಳೋರಂತೋ ।

ಬಂದಂತ ದೊರೆಗಳಿಗೆ ಕಾಲಿಗಗ್ಗರ ಹಾಕಿ
ತುಪ್ಪನೆ ಸಕ್ಕರೆ ಊಣಲಿಕ್ಕಿ ಬೊಮ್ಮಯ್ಯ ।
ಜಂಗಮ ದೊರೆಯ ನೀವು ಬಂದಂತ ಬಗೆಯ
ಏನೆಂದು ಕೇಳೋನಂತೋ
ಮುತ್ತು ಚಿತ್ತರಗಿರಿಯ ಚಿತ್ತಾರದರಮನೆಗೆ
ಮುತ್ತಿನ ತೋರಣದರಮನೆ ಮಾಲಿಂಗೋ
ಮಾಲಿಂಗಗೆಣ್ಣು ಕೊಡಬೇಕೋ । ಮಾಲಿಂಗಾಗೆ
ಹೆಣ್ಣ ಕೊಡಬೇಕೋ ಅಂಬೋನಂತೋ ।

ಅಂಬಾರದಾಗಾಳ ಸಂಬಾರಗಾಗೆಯ ಅಮೃತವ ಚಿತ್ತಯ್ಯಗೆ ।
ರಂಬೆ ಮಾಳಮ್ಮನ ಕೊಡುತೀನಿ ಅಂಬಾನಂತೋ ।
ಆಕಾಶದಾಗಾಡೋ ಕಾಗೆಯ ಮರಿಗಳು ತೂಗುತಲಿ ಎಸತರೆ
ಕನ್ಯೆ ಮಾಳಮ್ಮನ ಕೊಡುತೀನಿ ಅಂಬಾನಂತೋ ।
ಆಕಾಶದಾಗಾಡ ಕಾಗೆಯ ಮರಿಗಳ ಎಸತರೆ ಬೊಮ್ಮಯ್ಯ
ಕನ್ಯಾ ಮಾಳಮ್ಮನ ಬಿಡುಲಾರೆ ಅಂಬಾನಂತೋ ।

ಅಂಬಾರಾದಾಗೋ ಸಂಚಾರಗಂಗೆಯ ಎಸತಾರೆ
ಗಂಗೆ ಮಾಳೀಯ ಕೊಡಬೇಕೋ ಅಂಬಾನಂತೋ ।
ಅಪ್ಪಳುಪ್ಪಿನ ಕಾಯಿ ಕಾಡೆಮ್ಮ ನರಿಹಾಲು ಮುಂಗುಸೀನೆ ತುಪ್ಪ
ಮೊಲಗಿಣ್ಣು ತಂದಾರೆ । ಕನ್ಯೆ ಮಾಳಮ್ಮನ ಕೊಡುತೀನಿ ಅಂಬಾನಂತೋ ।
ಅಪ್ಪಳುಪ್ಪಿನ ಕಾಯಿ ಕಾಡೆಮ್ಮ ನರಿಹಾಲು ಮುಗಸೀನೆ ತುಪ್ಪ
ಮೊಲಗಿಣ್ಣು ತರಲಾರೆ । ರಂಬೆ ಮಾಳಿಯ ಬಿಡಲಾರೆ ಅಂಬಾನಂತೋ ।

ಚಿಕ್ಕ ಬೆಸ್ತ್ರರಳ್ಳಿ ಚಿತ್ತಾರ ಚಿನ್ನಾಕೆ ಹರಿಣಿ ಸರಿದು ತರುತಾರೆ
ಸರಿದು ತರುವಾಗ ನಾಸೋತು ಹೆಣ್ಣು ಕೊಡುತೀನಿ ಅಂಬಾನಂತೋ
ಚಿಕ್ಕ ಬೆಸ್ತ್ರಳ್ಳಿ ಬಳ್ಳಿ ಚಿತ್ತಾರದ ಬಿನ್ನಾಕೆ ಬಾಳೇನೇ ಹಣ್ಣು
ಸರಿದೂ ತರುವಾಗ ಸೋತನು ಬೊಮ್ಮಯ್ಯ ಮೂರ್ತಯ್ಯ
ರಾಯ ಬೆಸ್ತಿರಹಳ್ಳಿ ಬಳ್ಳಿ ರೂವಾರಿದ ಭಿನ್ನಾಕೆ
ನಿಂಬೀಯ ಹಣ್ಣುನೇ ಸರಿದು ತರುವಾಗ
ಗೆದ್ದನು ಚಿತ್ತಯ್ಯ ಮೂರ್ತಯ್ಯ.

ತಿಟ್ಟು ಮುತ್ತಿನ ಚಿತ್ತಾರದ ಗಿರಿಗೆ ಮನೆ ನೋಡಾಕೆ ಬರುತೀವಿ।
ನಾಳೆಣ್ಣ ಆಯತವಾರ ನಾಡಿದ್ದು ಸೋಮವಾರ ತಿಟ್ಟು ಮುತ್ತಿನ।
ಬೆಸ್ತ್ರಳ್ಳಿಗೆ ಮನೆ ನೋಡಾಕೆ ನೀವು ಬರಬೇಕು
ನಾಳಿದ್ದು ಆಯತವಾರ ನಾಡಿದ್ದು ಸೋಮವಾರ
ತಿಟ್ಟು ಮುತ್ತಿನ ಚಿತ್ತರಗಿರಿಗೆ ಮನೆ ನೋಡಾಕೆ ನಾವು ಬರುತೀವಿ॥

ಶಾಸ್ತ್ರವೇ ಮುಗಿಯದೆಲ್ಲೋ । ಶಾಸ್ತ್ರವೇ ಮುಗಿಯದಂತೋ।
ಕಿಡಿಗಣ್ಣನು ಚಿತ್ತಯ್ಯನ ಮದುವೆ ಆರಂಭ ಹಿಡಿಯಾದಂತೋ।
ಎಣ್ಣೆಯ ಸೀಮೆಗೆ ಹೆಣ್ಣೆಯ ತಿರುಗೆವನೆ । ಅಣ್ಣ
ಚಿತ್ತಯ್ಯನ ಮದುವೀಗೆ
ಹಕ್ಕಿಯ ಸಾಲು ಮರದ ಕೊಕ್ಕರೆ ಸೋಬಾನ ಹೇಳಿ
ಹುತ್ತದೊಳಗಣ ನಾಗ ಕತೆ ಹೇಳಿ । ಹುತ್ತಾದಾಗಣ
ನಾಗ ಕತೆ ಹೇಳಿ ಚಿತ್ತರ ಗಿರಿಯ ಚಿತ್ತಯ್ಯಗೆ ಆಸೆ ಬರುವಾಗ
ಆಲಾದ ಮರದೊಳಗ ಕೋಗಿಲೆ ಸಾಲಿಗೆ । ನಾಗಾನೆ ಕಾಳಿಂಗ ಕತೆ ಹೇಳಿ
ನಾಗನೆ ಕಾಳಿಂಗ ಕತೆ ಹೇಳಿ ಮಾಲಿಂಗ ಚಿತ್ತಯ್ಯಗೆ ಆಸೆ ಬರುವಾಗ
ಸೋ ಬನ್ನಿರೇ ಸೋಬಾನ ಬನ್ನಿರೋ ।
ದೊಡ್ಡನೆ ಮನೆಯೊಳಗೆ ಅಂಬಾರದ ಅರಮನೆ ।
ದೊಡ್ಡ ದೊಡ್ಡ ವಾಜಿ ಮಡಿ ಮಾಡಿ । ದೊಡ್ಡ ದೊಡ್ಡ ವಾಜಿ ಮಡಿ ಮಾಡಿ
ದೊಡ್ಡನೆ ಬಿರುದು ಬೊಮ್ಮಣ್ಣನ ಅರಮನೆಗೆ

ಸೋ ಬನ್ನಿರೋ । ಸೋಬಾನೆ ಬನ್ನಿರೋ ।
ಸಣ್ಣನೆ ಮರದ ಹಣ್ಣರವೀಗೆ ಸಣ್ಣ ಹೂಜಿಯ ಬಿಡಿ ಮಾಡೋ
ಸಣ್ಣ ಹೂಜಿಯ ಬಿಡಿ ಮಾಡೋ । ಸೋ ಬನ್ನಿರೋ ಸೋಬಾನೆ ಬನ್ನಿರೋ ।
ದೊಡ್ಡ ದೊಡ್ಡ ಹೂಜಿ ನೆರೆದಾವೆ ಬೊಮ್ಮಣ್ಣನ ಮಡಿಕೆ ಕುಡಿಕೆ
ಅರಮನೆಗೆ ಸೋ ಬನ್ನಿರೋ ಸೋಬಾನೆ ಬನ್ನಿರೋ ।

ಕುಂತಿರುವ ಗಿರಿಯಿಂದ ಕುಂತು ಬಂದವರು
ಅಂಗೈಲಿ ದೂಪ ಎರಚೂತ ಸೋ ಬನ್ನಿರೋ
ಅಂಗೈಲಿ ದೂಪ ಎರಚೂತಾ ಬೊಮ್ಮಣ್ಣನ
ಸಣ್ಣ ಸಾಲರಣೆ ಶಿವಪೂಜೆ ಸೋ ಬನ್ನಿರೋ
ನಿಡುಗಲ್ಲಿನಿಂದ ನಡೆದು ಬಂದರಣ್ಣಾ । ನಡೆದು ಬರಣಿಕೆ
ದುಡ್ಡಿಗೆ ಕೊಂಡಂಥ ಅರುಷಣವನ್ನೆಲ್ಲಾ ದೊಡ್ಡ ಹಂಡೆಗಾಕಿ ।
ದೊಡ್ಡಂಡೆಗೆ ಹಾಕಿ ರುಬ್ಬಿದಂತ ಅರುಷಣವ
ದೊಡ್ಡನು ಚಿತ್ತಯ್ಯನಿಗೆ ಧರಿಸಿದರೆಂತೋ ಸೋ ಬನ್ನಿರೋ
ಕಾಸಿಗೆ ಕೊಂಡಂತ ದೇಶದ ಮ್ಯಾಗಳ ಅರುಷಿಣವ
ಶಾಪ ಕಲ್ಲಿಗೆ ಹಾಕಿ ರುಬ್ಬಿದರೊ । ಸೋ
ಕಂಬಾಳಿ ಗೌಡರ ಎಂಬತ್ತು ಬಡೆದಾನಂತೆ । ಮುತ್ತಿಕ್ಕಿನ
ಬಿರುದಾನಂತೋ ಸೋ ಬನ್ನಿರೋ ಸೋಬಾನೆ ಬನ್ನಿರೋ
ದುಂಡನೆ ಉತ್ತಿಕ್ಕಿ ಬಿರುದಂತೋ । ಚಿತ್ತಯ್ಯಗೆ ದಾರೆ
ಎರೆದಾರಂತೋ ಸೋ ಬನ್ನಿರೋ ।
ಅಸನಾದ ಗೌಡರ ಎಸಳಕ್ಕಿ ಒಡೆದಂತೆ
ಚಿತ್ತಯ್ಯಗೆ ಧಾರೆ ಎರೆದಾರಂತೋ ।

ಜಪದ ಮುನಿ ಕಾಟಯ್ಯ ಬೊಮ್ಮಣ್ಣನ ತೋಪಿಗೆ
ಜಪ ತಪಕೆ ಹೋದಾನಂತೋ । ಜಪತಪಕೆ
ಹೋದಾನಂತೋ ನೋಡಣ್ಣ ಕಾಟಯ್ಯ ತಪಸಿಗೆ ಹೋದೋನಂತೋ
ಪುಸ್ತಕದ ಗಂಟು ನೋಡೋ । ಗುಡ್ಡೆ ಮೇಲಿಕ್ಕನಂತೋ
ಸ್ನಾನವ ಮಡೋನಲ್ಲೋ ಸ್ವಾಮಿ । ಲಿಂಗ ಪೂಜೆ ಆಗೋದಂತೋ
ಅಂತೆಂದಾ ಹೊತ್ತಿಗಲ್ಲೋ ಬೊಮ್ಮಯ್ಯ ಕಾಟಯ್ಯನ ಹುಡುಕೂತ
ಹೋಗೋನಂತೋ ।

ಮದುವೆ ಜಂಬರಾಗೆ ಕಾಟಯ್ಯ ಯಾರೋ
ಏನಾದರೂ ಎಂಬಾರೆ ಮುನಿಸಿಕೊಂಡೋದನಂತೋ
ಬೊಮ್ಮಯ್ಯ ಮಾಡೂದ ಮಜ್ಜನದ ಬಾವಿಗೆ ನಡೆದಾನಂತೋ

ಕಾಟಯ್ಯ ಸ್ವಾಮಿ ಪೂಜೆ ಮಾಡಾನಂತೋ । ಘನ ಗುರುವೆ
ಲಿಂಗ ಪೂಜೆ ಮಡೋನಂತೋ ।
ಜಪದ ಮುನಿ ಕಾಟಯ್ಯ ಕಾಣಲ್ಲ ಅಂಬಾನಂತೋ
ಪುಸ್ತಕದ ಗಂಟು ನೋಡೋ ಬೊಮ್ಮಯ್ಯ ಪುಸ್ತಕದ ಗಂಟು ನೋಡೋ

ರಾಮ ರಾಮ ಗುರುವೆ ಚಿತ್ತಯ್ಯನಿಗೆ ಅರಮನೆಗಿದ್ದಂತ
ಆಭರಣ ಕಾಣಿಸಿದಂತೋ ।
ಪುಸ್ತಕದ ಗಂಟು ನೋಡೋ ಬಲಗೈಲಿ ಮುಚ್ಚಿ ಓಡೋನಲ್ಲೋ
ಅಂತೆಂಬ ಹೊತ್ತಿಗೆ ಘನ ಗುರುವೆ ಗಂಟೆಯ ಹೊತ್ತಿನಲ್ಲೋ
ಪುಸ್ತಕದ ಗಂಟು ಎಡಗೈಲಿ ಹಾಕಿದನಂತೋ
ಘನಗುರುವೆ ಎಡ ಬಗಲಿಗೆ ಹಾಕಿದನಂತೋ ।
ಬೆಸ್ತ್ರಹಳ್ಳಿಗೆ ಬರುವನಂತೋ । ಘನ ಗುರುವೆ ಬೆಸ್ತ್ರಹಳ್ಳಿಗೆ ಬರುವನಂತೋ
ಚಿತ್ತಯ್ಯನ ಮದುವೆ ತಡೆದಾನಂತೋ ।
ಮನೆ ಗಡಿಗೆ ಮಾಡೋರಂತೋ । ಚಿತ್ತರಗಿರಿ ಪಟ್ಟಣದಿ
ಮನೆಗಡಿಗೆ ಮಾಡಿದನಂತೋ ।
ಅಂತೆಂಬಾ ಹೊತ್ತಿಗೆ ಮಹಾ ಗುರುವೆ ಉತ್ತರಕೆ ನಡೆದಾನಂತೋ
ಚಿತ್ತರಗಿರಿ ಪಟ್ಟಣಕೆ ಬಡಗಲ ದಿಕ್ಕಿಗೆ ಡೇರೇನ ಹೊಡೆದಾನಂತೋ
ಕಿಡಿಗಣ್ಣನು ಚಿತ್ತಯ್ಯ ಅರಮನೆ ಬಿಡುವುನಂತೋ ।
ಚಿತ್ತರಿಗಿರಿ ಬಡಗಲಗೆ ಡೇರೇನೆ ಒಡೆದಾನಂತೋ
ಕಾಲಿಗೆ ಬೀಳೋನಂತೋ । ಒಡ್ಡಾ ಬೋವಿ ಕಾಲಿಗೆ ಬೀಳೋನಂತೋ
ಯಾವ ದೇಶ ನಿಂದು ಯಾವೂರ ಬಡ್ಡಿ ಮಗನೋ
ಉತ್ತರ ದೇಶ ನನ್ನದು ನನ್ನ ಹೆಸರು ಒಡ್ಡಾಬೋವಿ
ಚಿತ್ತಕ್ಕೆ ತಿಳಿಯಾದು ಸ್ವಾಮಿ । ನಿನ್ನ ಐಬೋಗ ಒತ್ತಿಗೆ
ಒದಿದರೆ ಒಡೆಯಾದು ತಿಳಿಯಾದು ಸ್ವಾಮೋ ॥
ಒಲಿಗೆ ಒಡೆಯಾದ ಸ್ವಾಮಿ ಜ್ಞಾನಕ್ಕೆ ತಿಳಿಯದು ದೇವರೆ
ನನ್ನೆಸರು ಒಡ್ಡಾಬೋವಿ ಮಾಲಿಂಗ ನಿನ್ನ
ಐಭೋಗ ತಿಳಿಯದು ಅರಿಯದು ಸ್ವಾಮಿ ।

ಹೇಳಲೆ ದಗಡಿಮಗನೆ ಒಡ್ಡಾ ಎಂಬಾನಂತೋ
ಮೂಡಾನೆ ತಿರುಗಿದೆ ಪಡುವಾನೆ ತಿರುಗಿದೆ
ಟೆಂಕಾನೆ ತಿರುಗಿದೆ ಬಡಗಾನೆ ತಿರುಗಿದೆ
ನಾಲ್ಕು ದಿಕ್ಕನು ಸೋಸಿ ನೋಡಿದ ಸ್ವಾಮಿ

ನನ್ನ ನಾಯಕರು ಮಾಡಿದ ಉಡಿದಾರ
ಕಟ್ಟಿದ ಕಾಲಲ್ಲಿ ಇರಲಿಲ್ಲ ಸ್ವಾಮಿ ಅಂಬೋನಂತೋ ।
ಹೇಳಿದರೆ ಪುಡಿ ಪುಡಿ ಆಗುತ್ತೆ ಸ್ವಾಮಿ ಅಂಬೋನಂತೋ
ಮುಗವಡಿ ಕಟ್ಟಿದನಂತೋ । ಆಗವರಿಗೆ ಸಾಲಾವಳಿ ಬಂದಿತೆಂತೋ
ಅರಮನೆಗೆ ಹೊರಡೋನಂತೋ । ಜಪದ ಮುನಿ ಕಾಟಯ್ಯ
ಘನಗುರುವೆ ಅರಮನೆಯಾಗೆ ಮಲಗ್ಯಾನಂತೋ ।
ಹಾವಿನ ಹಾಸಿಗೆ ಚೇಳಿನ ಒರಗುದಿಂಬು । ತೂಗು ಮಂಚದ
ಮ್ಯಾಲೆ ಮಲಗಾನಂತೋ । ಜಪದ ಮುನಿ ಕಾಟಯ್ಯ ತೂಗು ಮಂಚದ
ಮ್ಯಾಲೆ ಮಲಗ್ಯಾನಂತೋ

ಉತ್ತರ ದೇಶದವನು ಒಡ್ಡಾನೆ ಬಂದಾನೆ ಸ್ವಾಮಿ
ಚಿತ್ತರಗಿರಿಯಾಗೆ ಬಡಗಾಲ ದಿಕ್ಕಿನಾಗೆ ಬೀಡನೆ ಬಿಟ್ಟವನೆ
ಒಪ್ಪಂದ ಮಾಡ್ಯೆತೆ ಮುರು ಮುಡಿಯ ಕಟ್ಟಿದರು
ಸಾಲದೋ ಬಂದ್ಯೆತೆ ಸ್ವಾಮಿ
ರಾಮ ರಾಮ ಗುರುವೇ ನಾಗೊಂಡಂಬ ಸುದ್ದಿ ಬಾಣದಂತೆ
ಕಿವಿ ಕರಣಕೆ ಬಿದ್ದಿತೆಂತೋ
ಸಾವುನ ಕೊಡುತಾರ ನಮಗೋ । ಕಡೆಗಂಬ ಕೊಡುತಾರ ನಮಗೋ
ಚಿತ್ತರಗಿರಿ ಪಟ್ಟನ ನಮಗೋ । ತೋರಣ್ಣ ಬೋರಾನೆ ಹಿಡಿದಾವಲ್ಲೋ
ಬಟ್ಟನೆ ಸೆಳೆಯುವರಂತೋ । ಜೇನು ಮರೆದಂಗೆ ಮರದಾವಂತೋ
ಇದೇನೆ ಈರಣ್ಣ । ಇದೇನೋ ಕಂಬಣ್ಣ ಅರಮನೆ ಆಡೋದು
ಬಟ್ಟೇನೆ ಹರಿಯೋದು ಸ್ವಾಮಿ
ನಾಯಿ ಕಂಡ ಭಾಷೆಂತೆ ನನ ಕುಟ್ಟಿ ಹೇಳುವರೆ ।
ಹನ್ನೆರಡು ವರ್ಷ ಮುಚ್ಚು ಬಾಗಲ ಮುಚ್ಚಿ ಎಂಬಾದು
ಕಿವಿ ಕರಣಕೆ ಬಿದ್ದೀತಂತೋ
ಗಬ್ಬಾದ ಕುರಿಯ ಆಹುತಿಯ ಕೊಡುತಾರೆ
ಅಂತೆಂಬ ಹೊತ್ತಿನಲ್ಲೋ ಮುಖ ಮಣಿಯ ಕಟ್ಟಿನಂತೋ ।
ಒಪ್ಪಂದ ಮಾಡೋನಂತೋ ।
ಎಲ್ಲಣ್ಣ ಇರುವುದು । ಹೆಂಗಣ್ಣ ಇರುವುದು
ಯಂಗಣ್ಣ ಬಗೆಯದು ನಾನು ।

ಮುನ್ನೂರು ಗಬ್ಬದ ಕುರಿಯ ಕತ್ತರಿಸಲು ಬೇಕು
ಆರುನೂರು ಗಬ್ಬದ ಕುರಿಯ ಹರಿಸಲೇ ಬೇಕು
ಮೂರು ಕಂಡುಗದಕ್ಕಿ ಅನ್ನದ ರಾಶಿ ಸುರಿಯಲು ಬೇಕು

ಹಾರೋರನ್ನ ಕರೆಸಬೇಕು ಹೋಮನನ ಸುಡಿಸಬೇಕು
ಪುಣವದ್ನೆ ಮಾಡಿಸಬೇಕು ।
ಮುನ್ನೂರು ಗುದ್ದಲಿ ವಡ್ಡರ ಕರೆಸಬೇಕು
ಕಡೆಗನ್ನೆ ಕೊರೆಸಬೇಕು
ಮೂರು ಮುಕ್ಕಾಲು ಗಂಟೆಯೊಳಗೆ ಬಿಲ್ಲು ಬಾಣ
ಕಡೆಗನ್ನ ತೆಗೆಸಿದನಂತೋ । ನೋಡಣ್ಣ ಕಡೆಗನ್ನ ತೆಗೆಸಿದನಂತೋ
ದಂಡಾನೆ ಕಟ್ಟಿದನಲ್ಲೋ । ನೋಡಣ್ಣ ದಂಡಾನು ಕೊಡಬೇಕಲ್ಲೋ
ಮುಂದುಕೋಗೋ ದಂಡು ಯಾವುದು ಗುರುವೆ ಅಂಬೋನಂತೋ ।

ಬನ್ನಿರಿ ಬನ್ನಿರಿ ಊರ ಮುಂದಿನ ಗೌಡರು
ಹೊರಗಡೆಯ ಮಾದಿಗರು । ಕಟ್ಟೆ ಯಜಮಾನರು
ಕಂಠಿ ಮುತ್ತಿನ ಸರದಾರರೂ ಒಂಟೈ ಮುತ್ತಿನಾರರು
ಮಾಮ ಮುತ್ತಿನಾರರು ಹಿಂದಾಲ ವೀರರು ಮುಂದಾಲ ಶೂರರು
ತೋಟಿ ತಳವಾರರು ದಂಡೆ ಸೊಲ್ಲಿಗೆ ಬನ್ನಿರಯ್ಯೋ ।
ಮೂರು ಮುಕ್ಕಾಲು ಗಳಿಗೆಯೊಳಗೆ ಕಲಪಲ್ಯರ ದಂಡು
ಬಂದು ನಿಂತಿತಂತೋ । ದಂಡು ಬಂದು ನಿಂತಿತೆಂತೋ ।
ಬೊಮ್ಮಯ್ಯನ ದಂಡೆಲ್ಲಾ ಬೆನ್ನಹಿಂದೆ ಸರ್ವಂತೂ ರೂಪೂಡಯ್ಯೋ
ಊರ ಮುಂದಲ ಗೌಡರು ಹೊಲಗದ್ದೆ ಮಾನ್ಯರು
ಕಂಠೀಯ ಸರದೋರು । ಮಾಮಾಲೆ ಗಂಟಿಯರು
ಮುಂದಲ ವೀರರು ಹಿಂದಲ ಶೂರರು । ತೋಟಿ ತಳವಾರರೂ ಬನ್ನಿರಂತೋ
ಆರು ಸಾವಿರ ಕರಿಗುದೆರೆ ಆರು ಸಾವಿರ ಬಿಳಿಗುದುರೆ
ಆರು ಸಾವಿರ ಜನ್ನ ಕುದುರೆ ಆರು ಸಾವಿರ ಜಾರು ಕುದುರೆ
ಕಣಕಾಲಿಗೋ ಜಂಗಂತೆ ಮೊಣಕಾಲಿಗೂ ಜಂಗಂತೆ
ಒಂದೊಂದು ಕುದುರೆಗೂ ಹದಿನೆಂಟು ಹದಿನೆಂಟು ಸಾವಿರ
ಕುಂದಣವ ತುಂಬಿದರಂತೋ । ಮೂರು ಮುಕ್ಕಾಲು ಗಳಿಗೆ
ಯೊಳಗಾಗಿ ಕಿಡಿಗಣ್ಣನು ಚಿತ್ತಯ್ಯನ ದಂಡು
ತಟ್ಟೆ ಸಾಲಾಗಿ ನಿಂತಿತೆಂತೋ ।
ಕುಂದಣವ ಬಿಗಿದರೆಂತೋ । ನರಸಿಂಹನ ದಂಡೇ ನಿನ್ನ
ನಮ್ಮಣ್ಣ ದಂಡಾನೆ ತುಂಬಿದನಂತೋ । ನನ ದಂಡೆ ಸರ್ವಂತೂ ರಾಪೂಡಯ್ಯ
ಊರು ಮುಂದಿನ ಗೌಡರು । ಹೊರಗಿನ ಮಾದಿಗರು
ಕಂಠೀಯ ಸರದಾರರು ಮಾಮೂಲೆ ಸರದಾರರು
ಮುಂದಾಲ ವೀರರು ಹಿಂದಾಲ ಶೂರರು
ತೋಟಿ ತಳವಾರರೂ ಬನ್ನಿರಿ ನನ್ನ ದಂಡಿಗೆ

ಸರ್ವಂತೂ ರಾಪೂಡಯ್ಯೋ ।
ಮೂರು ಮುಕ್ಕಾಲು ಗಳಿಗೆಯೊಳಗೆ ಕಿಡಿಗಣ್ಣನು ಚಿತ್ತಯ್ಯನ
ದಂಡು ತಯಾರಾಗಿ ನಿಂತಿತೆಂತೋ
ಕುಂಡಣದ ಬಿಗಿದಾರಂತೋ । ನರಸಿಂಹನ ದಂಡೇ ನಿನ್ನ
ಸರ್ವಂತೂ ರಾಪೂಡಯ್ಯೋ ।
ಬಳಗದವರ ದಂಡು ಎರಡು ಸಾವಿರ
ಬೀಗರ ದಂಡು ಒಂದು ಸಾವಿರ
ಸತ್ಯಪರ ದಂಡು ಏಳು ಸಾವಿರ
ಐದು ಮಂದಿ ದಂಡಾನೂ ಕೂಡಿತೆಂತೋ
ಅಂತೆಂಬಾ ಹೊತ್ತಿಗೆಲ್ಲೋ ಶಾಣಯ ಕೊರಮರು
ಬೊಮ್ಮಯ್ಯನ ದಂಡಿಗೆ ಬಂದನಂತೋ
ಗಿಡಿಗಣ್ಣನು ಚಿತ್ತಯ್ಯನ ದಂಡಿಗೆ ಬಂದನಂತೋ ।

ಏನಯ್ಯ ಚಿತ್ತಯ್ಯ ಕೇಳಯ್ಯ ಹೇಳುತೀನಿ
ದಂಡೋನೆ ಕಟ್ಟಿದೆ । ದರಬಾರನೆ ಕಟ್ಟಿದೆ
ನಿನ್ನ ದಂಡಿಗೆ ಸರಿಯೋಗ । ನಿನ್ನ ದರಬಾರಕೂ ಸರಿಯೋಗ
ಹೆಚ್ಚಿನ ಬಿರುದಿರುವುದು ಯಾವುದು ಕಾಣೋ
ಎಲ್ಲಣ್ಣ ಇರುವುದು ಹೆಂಗಣ್ಣ ಇರುವುದು ಅಂಬೋನಂತೋ
ನನ್ನ ಕೇಳಿದರೆ ನಾನೇನ ಹೇಳಲಯ್ಯ ಕಾಟಯ್ಯನ ಕೇಳೂ ನೀನು
ಅಣ್ಣಯ್ಯ ಅಣ್ಣಯ್ಯ ನಾನೊಂದು ಬೇಡುವೆನು
ದಂಡಿಗೆ ಸರಿಹೋಗೋ ದರಬಾರಿಗೆ ಸರಿಹೋಗ । ನಮ್ಮ
ದವಲತ್ತಿಗೆ ಸರಿ ಹೋಗೂ ಇನ್ನೊಂದು ಹೆಚ್ಚಿನ ಬಿರುದು ಇರುವುದೆಂತೋ
ಯಾರಮ್ಮ ಹೇಳಾರು ಅವರ ಮನೆತನ ಆಳಾಗ । ಅವರ
ಮಕ್ಕಳು ತಿಂದು ಮನೆಯಲ್ಲಿ ಮಸಣಿ ಸೋಗ ಅಂಬಾನಂತೋ
ಆಯಿತೆ ಕಾಣ ಕಾಟಯ್ಯ ಇದು ಕಾಣ ಚಿತ್ತಯ್ಯ ಅಂಬಾನಂತೋ
ಇಬ್ಬರು ದೊರೆಗಳು ಗುದ್ದಾಟ ಬೀಳಾದು ನಡೆಯೋದು
ರಣ ಯುದ್ಧ ನಡೆಯಾದಂತೋ
ತಂದಿಕ್ಕದು ನನ್ನ ಬಾರ ಕೊಡಾದು ನಿನ್ನ ಭಾರ
ತಮ್ಮಯ್ಯ ನೀನೋಡೋ ಹುಸಿನಗೆಯ ನಗುತಾನಂತೋ
ಹೇಳಿದರೆ ಸರಿ ಹೇಳದಿದ್ರೆ ನಾನು ನಾಲಿಗೆ ಇರುಕೊಂಡು
ನಿನ್ನ ಪಾದದ ಕೆಳಗೆ ಪ್ರಾಣ ಬಿಡುವೆ ಗುರುವೇ ಅಂಬಾನಂತೋ
ಹೆಂಡ್ರು ಸತ್ತರೆ ತಿರುಗ ಮದುವೆ ಆಗಬಹುದು ।

ಅವಳದಂತ ಗಿರಿಯ ಕಳಕೊಂಡು ಚಿತ್ತಯ್ಯ ಅದರಾಗೆ।
ನಾವನು ತಿರುಗಾದೋ ಹೇಗೋ

ಹೊನ್ನು ಮೂರು ಮಣ ಬಂಗಾರ ಮೂರು ಮಣ
ತಾಮ್ರ ಮೂರು ಮಣ, ಕಬ್ಬಿಣ ಮೂರು ಮಣ
ಉಕ್ಕು ಮೂರು ಮಣ, ಬೆಳ್ಳಿ ಮೂರು ಮಣ
ಹಸಿರು ಕೆಂಪು ನೀಲ ಕರಿಯ ಬೂದ ಕೆತ್ತಿ ಬಗಿದಂಥ
ಮುನ್ನೂರು ಮುನ್ನೂರು ಆರುನೂರು ಮಣದ ತೂಕ
ರಣದಲ್ಲಿ ರಣಸೂರ ರಣಬೇರಿ ಎಂಬ ಭೂಚಕ್ರ
ಹೆಚ್ಚಿನ ಹಗಾಳಿ ಜಂತಾರೆ ಅದೆಂಗೆ ತೆಗೆಸೋದೆ ಅಂಬೋನಂತೋ
ರಾಮ ರಾಮ ಗುರುವೆ ತೆಗಿಸಿದರೆ ನಾನು ತೆಗಿಸಬೇಕು
ಹೆಕ್ಕಳಿಸಿದೆ ನಾನೇ ಹೆಕ್ಕಳಿಸಬೇಕು
ನರಲೋಕ ಸುರಲೋಕ ದೇವಲೋಕ ಮೂರು ಲೋಕದೊಳಗಾಗಿ
ನನ್ನಂಥ ಉಡುದಾರ ಕಟ್ಟಿದ ಗಂಡು ಇನ್ನು ಹುಟ್ಟೋದಿಲ್ಲವಂತೋ। ಗುರುವೇ
ಅಂಬಾನಂತೋ

ಆರುನೂರು ಗಬ್ಬದ ಕುರಿ ಹರಿಸಬೇಕು
ಮೂರು ಕಂಡುಗದ ಅಕ್ಕಿ ಅನ್ನ ರಾಶಿ ಹಾಕಲು ಬೇಕು
ವಾಮದವರ ಕರೆಸಬೇಕು ನಾಮನೆ ಸುಡಿಸಬೇಕು
ಹಾರುವರನ ಕರೆಸಬೇಕು, ಪುಣವದನೆ ಮಾಡಿಸಬೇಕು
ಮುನ್ನೂರು ಗುದ್ದಲಿ ವಡ್ಡರ ಕರೆಸಬೇಕು, ಭೂಮಿ ಅಗೆಸಲುಬೇಕು
ಹನ್ನೆರಡು ಹನ್ನೆರಡು ಇಪ್ಪತ್ತು ನಾಲ್ಕು ಜೊತೆ ಬಡಿಗೆ ಬಿಡಬೇಕು
ಕಡೆಗನ್ನ ಒಡಿಸಬೇಕಯ್ಯ ಅಂಬೋದಂತೋ।
ಮೂರು ಮುಕ್ಕಾಲು ಗಳಿಗೆ ಒಳಗಾಗಿ ಭೂ ಚಕ್ರದ ಹೆಗ್ಗಾಳೆ ಇಡಿಸಿದನಂತೋ
ಮುತ್ತಾನೆ ಕಟ್ಟಬೇಕೆಂದು ಹೆಣ್ಣಳೆ ಬೀಳೋದಂತೋ
ಓಲೆಯ ಬರೆದಾನಂತೋ ! ಬೊಮ್ಮಯ್ಯ ಕಿಡಿಗಣ್ಣಲಿ ಚಿತ್ತಯ್ಯನ
ದಂಡಿಗೆ ನಡೆದಾನಂತೋ
ಏನಯ್ಯ ಚಿತ್ತಯ್ಯ ಕಾಡನೆ ತರಿಸಿದೆ ಕಾಡಿಗೇ ನಡೆಸೀದೆ
ಕಾಡಿಗೆ ಸರಿಯೋದು। ನಿಮ್ಮ ದಂಡಿಗೆ ಸರಿಯೋದು
ದರಬಾರಿಗೆ ಸರಿಯೋದು ನಿಮ್ಮ ದವಲತ್ತಿಗೆ ಸರಿಯೋದು.
ಇನ್ನೊಂದು ಹೆಚ್ಚಿ ಬಿರುದು ಇರುವುದಯ್ಯೋ
ಎಲ್ಲಣ್ಣ ಇರುವುದು ಹೆಂಗಣ್ಣ ಇರುವುದು
ನನ್ನನಾ ಕೇಳಿದರೆ ನಾನೇನ ಹೇಳಲಯ್ಯ

ಕಾಟಯ್ಯನ ಕೇಳೋ ನೀನು
ಅಣ್ಣಯ್ಯ ಅಣ್ಣಯ್ಯ ಅಣ್ಣ ನಮ್ಮ ಹಿರಿಯಣ್ಣ
ದೊರೆ ತನಗೆ ಸರಿಯೋದು । ದವಲತ್ತಿಗೆ ಸರಿಯೋದು
ಹೆಚ್ಚಿನ ಇನ್ನೊಂದು ಬಿರುದಿರುವುದಯ್ಯೋ
ಎಲ್ಲಣ್ಣ ಇರುವುದು ಹೆಂಗಣ್ಣ ಇರುವುದೋ
ನನ್ನಾನ ಕೇಳಿದರೆ ನಾನೇನ ಹೇಳಲಯ್ಯ

ಕಾಟಯ್ಯನ ಕೇಳೋ ನೀನು
ಅಣ್ಣಯ್ಯ ಅಣ್ಣಯ್ಯ ಅಣ್ಣಾ ನಮ್ಮ ಹಿರಿಯಣ್ಣ
ದೊರೆತನಕೆ ಸರಿಯಾದ । ನಮ್ಮ ದವಲತ್ತಿಗೆ ಸರಿಯಾದ
ನಮ್ಮ ದರಬಾರಿಗೆ ಸರಿಯಾದ ಇನ್ನಾ ಒಂದು
ಹೆಚ್ಚಿನ ಬಿರುದಿರುವುದು ನೋಡೋ
ಯಾರಮ್ಮ ಹೇಳಿದರು ಅವರು ಮನೆ ಆಳಾಗೋಗ
ಅವರ ಮಕ್ಕಳು ಮರಿ ತಿಂದೋಗ ಮನೆಯಲ್ಲ
ಮಸಣಿಸೋಗ ಇಲ್ಲ ಕಾಣ ಚಿತ್ತಯ್ಯ ಅಂಬಾನಂತೆ
ಅದೆ ಕಾಣ ಕಾಟಯ್ಯ ಎಂಬಾನೆ ಇಬ್ರರೂ ।
ದೊರೆಗಳಿಗೂ ಗುದ್ದಾಟ ಬೀಳೋದು । ರಣಾಗ್ರ ನಡೆಯೋದಂತೋ
ತಂದಿಕ್ಕದು ನನ್ನ ಬಾರ ಕೊಡಾದು ಬಿಡಾದು ನಿನ್ನ ಬಾರ
ಎಂಬನು ಬೊಮ್ಮಯ್ಯ ದಾರಿ ನಿಂತ್ಕೊಂಡು ಹುಸಿನಗೆ ನಗುವನಂತೋ
ಹೇಳಿದರೆ ಸರಿ ಹೋಯಿತು ಹೇಳದಿದ್ರೆ ನಾನು ನಾಲಿಗೆ ಇರಕೊಂಡು
ನಿಮ್ಮ ಪಾದದ ಕೆಳಗೆ ಪ್ರಾಣ ಬಿಡುವೆನು ಸ್ವಾಮಿ ಗುರುವೆ ಅಂಬಾನಂತೋ
ಮಕ್ಕಳು ಸತ್ತರೆ ತಿರುಗಾ ಮಕ್ಕಳಾಗಬಹುದು । ಮುತ್ತಿನಂಥ
ಕಿರುಬೆನ್ನ ಕಳಕೊಂಡು ದಿಕ್ಕಿನ ಮೇಲೆಂಗ ನಾನು ತಿರುಗಾಡಾದು ಅಂಬಾನಂತೋ
ಹೊನ್ನ ಮೂರು ಮಣ ತಾಮ್ರ ಮೂರು ಮಣ
ಕಬ್ಬಿಣ ಮೂರು ಮಣ ಉಕ್ಕು ಮೂರು ಮಣ
ಬಂಗಾರು ಮೂರು ಮಣ ಬೆಳ್ಳಿ ಮೂರು ಮಣ
ಹಸಿರು ಕಂದು ಕೆಂಪು ನೀಲ ಕರಿಯ ಚಿತ್ರ ಬಿಗಿದಂತ
ಮುನ್ನೂರು ಮುನ್ನೂರು ಆರುನೂರು ಮಣದ ತೂಕದ
ರಣದಲ್ಲಿ ರಣಸೂರ ರಣಬೇರೆ ಎಂಬ ಭೂಚಕ್ರದ
ಜಂಪಾರೆ ಹೆಚ್ಚಿನ ಅವಳದ ಬಿರುದಿರುವುದು ನಿಜವೆ ಕಾಣಯ್ಯ
ನಿನ್ನಿಂದ ಆದಾದಯ್ಯ ತೆಗೆಸೋದು ಅಂಬಾನಂತೋ
ತೆಗೆಸಿದರೆ ನಾನೇ ತೆಗಿಸಬೇಕು ಎತ್ತಿಳಿಸಿದರೆ ನಾನೇ ಎತ್ತಿಳಿಸಬೇಕು
ನರಲೋಕ ಸುರಲೋಕ ದೇವಲೋಕ ಮೂರು ಲೋಕದೊಳಗೆ

ನನ್ನಂಥ ಉಡುದಾರ ಕಟ್ಟಿದ ಗಂಡು ಇನ್ನು ಹುಟ್ಟೋದಿಲ್ಲ ಅಂಬಾನಂತೋ
ಮುನ್ನೂರು ಗಬ್ಬದ ಕುರಿಯ ಮುರಿಯ ಕೂಡಿಸಲು ಬೇಕು
ಆರುನೂರು ಗಬ್ಬದ ಕುರಿಯ ಅರಿಸಲು ಬೇಕು
ಮೂರು ಕಂಡುಗದಕ್ಕಿ ಅನ್ನದ ರಾಶಿ ಸುರಿಸಬೇಕು
ಹೋಮದವರ ಕರೆಸಬೇಕು ಹೋಮ ಸುಡಿಸಬೇಕು
ಹಾರುವರನ ಕರೆಸಬೇಕು ಪುಣವದನೆ ಮಾಡಿಸಬೇಕು
ಮುನ್ನೂರು ಗುದ್ದಲಿ ವಡ್ಡರ ಕರೆಸಬೇಕು ಭೂಮಿ ಅಗೆಸಲು ಬೇಕು
ಹನ್ನೆರಡು ಹನ್ನೆರಡು ಇಪ್ಪತ್ತನಾಲ್ಕು ಜೊತೆ ಎತ್ತಿನ ವರ್ಜೆ ಕಟ್ಟಿಸಬೇಕು.

ಮುನ್ನೂರು ಒಂದೇ ವಾರದ ದಿನ ಒಂದೇ ಗಳಿಗೆಗೆ ಹುಟ್ಟಿದು
ಬಿಳಿಕೋಳಿ ಹುಂಜದ ತಲೆ ತಂದು ನಿವಾಳಿ ಕೊಡಬೇಕು ಅಂಬಾನಂತೋ
ಒಂದೂನೂ ದೊರೆಯಾದಲ್ಲೋ ನಮ್ಮಣ್ಣ ಒಂದೂ ತಲೆ ದೊರೆಯಾದಲ್ಲೋ
ಒಂದೇ ವಾರದ ದಿನ ಒಂದೇ ಗಳಿಗೆ ಹುಟ್ಟಿದ ಮುನ್ನೂರು ಕೋಳಿ
ಬಿಳಿ ಹುಂಜದ ಒಂದೂ ತಲೇನೂ ದೊರೆಯುವುದಿಲ್ಲೋ ಅಂಬಾನಂತೋ
ಹುಂಜನ ತಲೆ ದೊರೆಯದೆ ಇದ್ದರೆ ಭೂ ಚಕ್ರದ ಗೊಡಗು
ದಕ್ಕಲ್ಲ ಅಂಬಾನಂತೋ ।
ಹೋಗಮ್ಮ ಅಂಬಾನಲ್ಲೋ । ನನ್ನ ಬೆನ್ನ ಅಂಬೋನಲ್ಲೋ
ಹೇಳಿದರೆ ಸರಿ ಹೇಳದಿದ್ರೆ ನಾನು ನಿನ್ನ ಪಾದದ ಕೆಳಗೆ
ನಾಲಿಗೆ ಇರಕೊಂಡು ಪ್ರಾಣ ಬಿಡುವೆ ಸ್ವಾಮಿ ಅಂಬಾನಂತೋ
ಒಂದೇ ದಿನ ಒಂದೇ ಗಳಿಗೆಯಲ್ಲಿ ಹುಟ್ಟಿದ ಮುನ್ನೂರು
ಮುಕ್ಕಣ್ಣನ ಕೊಡುತೀನಿ ಚಿತ್ತಯ್ಯ ನಾನಿನಗೆ ಅಂಬಾನಂತೋ
ಮುನ್ನೂರು ಅಲ್ಲದಿದ್ರೆ ನಮ್ಮಣ್ಣ ಆರುನೂರು ಕೊಟ್ಟೇನು ನಾನು
ಮೂರು ಮುಕ್ಕಾಲು ಗಳಿಗೆಯೊಳಗೆ ಭೂ ಚಕ್ರದ ಒಡವು
ಕೊಡೆಗೆ ಒದೆಸಿದನಂತೋ ।
ನಿಡುಗಲ್ಲು ಗುಡ್ಡವಲ್ಲೋ ಬಿದ್ದಂತೆ ಬಡಗನೆ ಬೀಳೋದಂತೋ
ಅಂತೆಂಬ ಹೊತ್ತಿಗೆಲ್ಲೋ ನೋಡಣ್ಣ ಶಾಡಿಯ ಕೊರಮ ।
ಕಿಡಿಗಣ್ಣನು ಚಿತ್ತಯ್ಯನ ದಂಡಿಗೆ ನಡೆದಾನಂತೋ
ಎನ್ನಯ್ಯ ಚಿತ್ತಯ್ಯ ಕೇಳಯ್ಯ ಹೇಳುತೀನಿ
ಕಾಳೆಯ ತಗೆಸುತೀನಿ ಕಡೆಗೇ ನಡಸೀನಿ
ನನ್ನ ದಂಡಿಗಾಗೋರು ನಿನ್ನ ದಂಡಿಗಾರೋರು
ಕರಪಲ್ಯ ದಂಡಿನವರು ನರಸಿಂಹನ ದಂಡಿನವರು
ಎತ್ತಿ ಹಿಡಿಯೋ ಗಂಡನೂ ಇಲ್ಲವಲ್ಲೋ ಅಂಬಾನಂತೋ
ಎಲ್ಲಣ್ಣ ಇರುವನು ಹೇಗಣ್ಣ ಇರುವನು ಎತ್ತಿಳಿಯೋ ಗಂಡಿಲ್ಲವಯ್ಯೋ

ನನ್ನನೇ ಕೇಳಿದರೆ ನಾನೇನ ಹೇಳಲಿ ! ಕಾಟಯ್ಯನ ಕೇಳೋ ನೀನು
ಅಣ್ಣಯ್ಯ ಅಣ್ಣಯ್ಯ ಹಿರಿಯಾನು ಅಣ್ಣಯ್ಯ
ಕಾಡೆಂಟು ತರಿಸಿದೆ ಪಡೆಯನ್ನೇ ತರಿಸಿದೆ । ನಿನ್ನದಂಡಿಗಾಗದೂ
ನನ್ನ ದಂಡಿಗಾಗದೂ ! ನರಸಿಂಹನ ದಂಡಿನಾಗು ! ಕರಪಲ್ಯರ ದಂಡಿನಾಗೂ
ಎತ್ತಿಡಿಯೋ ಗಂಡು ಇಲ್ಲವಯ್ಯೋ
ಪೇಟ ದಾರಿಗುಂಟೆ ಕಾಡೇ ದಾರಿಗುಂಟೆ
ಕಾಳ ಕೆಂಚ ಬೋರ ಕರೆದು ಬಾರೋ ನೀನು
ಪಂಜರವ ಕಟ್ಟೆವನೆ ಭೂತರವ ಕಟ್ಟಿವನೆ
ಕಿಡಿಗಣ್ಣನು ಚಿತ್ತಯ್ಯನು ಓಡೋ ಬಿರುಸಿಗೆ
ಕಲ್ಲು ಕಲ್ಲು ಕಡಿದಾಡೋವಂತೆ । ಉಕ್ಕಿನ ಗಂಟಲು
ಉದುರಿ ಹೋಗೋವಂತೆ । ಉಕ್ಕಿನ ತೇರು ಹರಿದಂಗೆ ಹರಿಯಾದಂತೆ
ಹೊನ್ನು ಮೂರು ಮಣ ತಾಮ್ರ ಮೂರು ಮಣ
ಕಬ್ಬಿಣ ಮೂರು ಮಣ ಬಂಗಾರ ಮೂರು ಮಣ
ಹಸಿರು ಕೆಂಪು ಹವಳ ನೀಲ ಕೆತ್ತಿ ಬಿಗಿದಂತೆ
ಮುನ್ನೂರು ಮುನ್ನೂರು ಆರುನೂರು ಮಣ ತೂಕದ
ರಣದಲ್ಲಿ ರಣಸೂರ ರಣ ಬೇರೆ ಎಂಬ
ಭೂ ಚಕ್ರದ ಜಂತಾರೆ ದಗಡಿ ಮಗನೆ
ದಂಡಿಗೆ ಬಂದೇನೇಲೋ ಕೆಂಚ ಅಂಬಾನಂತೋ
ನಿನ್ನಂಥ ಅನ್ನ ವಸ್ತ್ರ ಕೊಡೋ ದಣಿ
ಹನುಮಂತ ಅಂಬೋನು ಬಲು ಪಂಡ್ರ ಹೌದು ಸ್ವಾಮಿ
ಚಿತ್ತಯ್ಯ ಅಂಬೋನಂತೋ
ಸಂಬಳನ ಕೊಡೋ ನೀನು ಕೆಂಚಣ್ಣ
ಒಪ್ಪಂದ ಮಾಡೋ ನೀನು ಒಕ್ಕಳ ಭತ್ಯ
ನನಗೆ ವಪ್ಪತ್ತಿಗೆ ಕೊಡಬೇಕು ಗುರುವೇ
ಅನ್ನೊಂದು ಗಿದ್ನ ಅವರೆ ಗುಗ್ರಿ ಕೊಡಬೇಕು
ತೂಗಿದ್ರೆ ಒಂದು ಮಣ ತೂಗಿದಿದ್ರೆ ಒಂದು ಮಣ
ಮೆಣಸಿನ ಗಿದ್ನ ನನಗೆ ಅವರೆ ಗುಗ್ಗರಿ ಕೊಡಬೇಕು ಸ್ವಾಮಿ
ಹೊತ್ತು ಹುಟ್ಟೋದಕ್ಕೂ ಹೊತ್ತು ಮುಳುಗಿದಕ್ಕೂ
ಮುನ್ನೂರು ಮುನ್ನೂರು ಸಂಬಳ ಕೊಡಬೇಕು ಸ್ವಾಮಿ
ಕೊಡುತೀನಿ ಅಂಬಾನಲ್ಲೋ । ಕೆಂಚಣ್ಣ ನಾನು ಬರುತೀನಿ ಅಂಬಾನಲ್ಲೋ
ಮುಂದೇ ಮುಂದೆ ಚಿತ್ತಯ್ಯ । ನೋಡಣ್ಣ ಹಿಂದೆ ಹಿಂದೆ
ಕೆಂಚಣ್ಣನಲ್ಲೋ ಮೋಗಳ ಕೆಂಚಣ್ಣನಂತೋ
ಕೆಳಗಾಡೆ ಹೆಗ್ಗಾಡಂತೋ । ಕೆಂಚಣ್ಣ ಸುಳಿಗಾಳಿಗೆ

ಹೆಗ್ಗಾಡಿ ಬಡಿಯೋದಂತೋ ।
ಸಿಕ್ಕಿದನಲೇ ಕೆಂಚ ನನಗೆ । ದಿಕ್ಕಿದೆನೇಲೋ ಕೆಂಚ ನನಗೆ
ಹನ್ನೆರಡು ವರ್ಷ ಎಲ್ಲೋ ಮುಚ್ಚು ಮಾನ್ಯವಾಗಿದ್ದೆ ನೀನು
ಸಿಕ್ಕಿದೇನೋ ಅಂಬೋನಲ್ಲ । ಕೆಂಚಣ್ಣ ದಕ್ಕಿದೇನೋ ಅಂಬಾನಲ್ಲೋ
ಕಿಲ ಕಿಲನೆ ನಗುವುದಲ್ಲೋ ! ಹೆಗ್ಗಂಬಳಿ ಪಕ ಪಕನೆ ನಗುವುದಲ್ಲೋ
ಕೆಂಚಣ್ಣ ಬರುವವನಲ್ಲೋ । ಜಪದ ಮುನಿ ಕಾಟಯ್ಯನ ಪಾದಕೆ
ಅಡ್ಡ ಬಿದ್ದನಲ್ಲೋ । ಪಾದಕಡ್ಡ ಬಿದ್ದನಲ್ಲೋ । ನೋಡಣ್ಣ
ಪ್ರಜೆಗಡ್ಡುಬಿದ್ದನಂತೋ । ಕಾಲಿಗೆ ನಮಸ್ಕಾರ ಮಾಡೋನಂತೋ
ಭೂ ಚಕ್ರದ ಹೆಗ್ಗಾಳಿ ಎತ್ತಿ ಹೆಗಲಿಗೆ ಹಾಕಿದನಂತೋ
ಬೊಮ್ಮಯ್ಯ ಕಿಡಿಗಣ್ಣನು ಚಿತ್ತಯ್ಯನ ತಂಟೆಗೆ ನಡೆದಾನಲ್ಲೋ

ಏನಯ್ಯ ಚಿತ್ತಯ್ಯ ಕೇಳಯ್ಯ ಹೇಳುತೀನಿ
ಗೊಡುಗುನೇ ತೆಗೆಸೀನಿ ಕಡೆಗೇನಿ ನಡೆಸೀನಿ
ನನ್ನ ದಂಡಿಗಾರು ನಿನ್ನ ದಂಡಿಗಾನು ! ಕರಪಲ್ಯರ
ದಂಡಿನಾಗೂ ! ನರಸಿಂಹನ ದಂಡಿನಾಗೂ
ಕಾಟಯ್ಯನ ದಂಡಿನಾಗೂ ಎತ್ತಿಡಿಯೋ ಗಂಡು
ಇಲ್ಲವಯ್ಯ ಅಂಬಾನಂತೋ
ಎಂದಣ್ಣ ಇರುವುದು ಹೇಗಣ್ಣ ಇರುವುದು
ಅಂದೆನ್ನ ಕೇಳೋನು । ನನ್ನನಾ ಕೇಳಿದರೆ
ನಾನೇನ ಹೇಳಲಯ್ಯ ನಿನ್ನ ಹಿರಿಯಣ್ಣ ಕಾಟಯ್ಯನ
ಕೇಳೋ ನೀನು ।
ಅಣ್ಣಯ್ಯ ಅಣ್ಣಯ್ಯ ಅಣ್ಣ ನಮ್ಮ ಹಿರಿಯೋನು
ಗೂಡುಗೇನು ತೆಗೆಸಿದೇ ಕಡೆಗೇ ನೆಡಿಸಿದೆ ನನ್ನ
ದಂಡಿನಾಗೂ ನಿನ್ನ ದಂಡಿನಾಗೂ ನರಸಿಂಹನ ದಂಡಿನಾಗೂ
ಬೊಮ್ಮಯ್ಯನ ದಂಡಿನಾಗೂ ಎತ್ತಿಡಿಯೋ ಗಂಡು ಇಲ್ಲವಯ್ಯ

ಪೇಟಿ ದಾರಿಗುಂಟಾ ಎದಿರಾಗೆ ಬರುತಾನೆ
ಚಿತ್ರನೆ ಪಿಸೂರು ಮುಂದಾನ ಕರೆದನ್ನ
ಬಾರೋ ನೀನು ।
ಪಂಜಾರ ಕಟ್ಟೆವನೆ ಜೋತುರ ಕಟ್ಟಿವನೆ
ಕಿಡಿಗಣ್ಣನು ಚಿತ್ತಯ್ಯ ಬಡಿದಾಡ ಬಿರುಸ್ಸಿಗೆ
ಕಲ್ಲು ಕಲ್ಲು ಕಡಿದಾಡುತಾವಂತೆ ಉಕ್ಕಿನ ಕಲ್ಲಲ್ಲ
ಹುದುರಿ ಹರಿದಾವಂತೆ ಹೂವಿನ ತೇರಲ್ಲ ಹರಿದಾನಂತೆ

ಹೊನ್ನು ಮೂರು ಮಣ ಚಿನ್ನ ಮೂರು ಮಣ, ತಾಮ್ರ ಮೂರು ಮಣ
ಬೆಳ್ಳಿ ಮೂರು ಮಣ ಕಬ್ಬಿಣ ಮೂರು ಮಣ
ಹಸಿರು ಕಂದು ಕೆಂಪು ನೀಲ ಗಟ್ಟಿಸಿ ಬಿಗಿದಂತೆ
ಮುನ್ನೂರು ಮುನ್ನೂರು ಆರುನೂರು ಮಣದ ತೂಕದ
ರಣದಲ್ಲಿ ರಣವೀರ ರಣಬೇರೆ ಎಂಬ
ಭೂ ಚಕ್ರದ ಜಂಪಾರೆ ಹೆಚ್ಚಿನ ಅವಳದೊಳಗೆ
ಇರುವುದು ನಿಜಕಾಣಲೇ ದಗಡಿ ಮಗನೇ
ದಂಡಿಗೆ ಬಂದೆನಲೇ ಬಡವ ಅಂಬಾನಂತೋ ।
ಈಗಾಡಿದ ಮಾತು ಇನ್ನೊಂದು ತಡ ಆಡಿದರೆ
ಮುಖದ ಮೇಲೆ ಮೂರು ಏಟು ಬಡಿದು ಕಳುಸುತೀನಿ ಅಂಬಾನಂತೋ ।
ಕಿಡಿಗಣ್ಣನು ಚಿತ್ತಯ್ಯನೆಲ್ಲೋ । ನೋಡಣ್ಣ ಕಿಡಿಗಣ್ಣನು ಚಿತ್ತಯ್ಯ
ಹಿಂದಾಕೆ ತಿರುಗಿದನಲ್ಲೋ ।

ಅಣ್ಣಯ್ಯ ಅಣ್ಣಯ್ಯ ಅಣ್ಣ ನಮ್ಮ ಹಿರಿಯೋನು
ಪೇಟೆ ದಾರಿಗುಂಟ ಎದುರಿಗೆ ಬರುವನೋ
ಈಗ ಆಡಿದ ಮಾತು ಇನ್ನೊಂದು ಸಲ ಆಡಿದರೆ
ಮುಖದ ಮೇಲೆ ಮೂರು ಏಟು ಬಡಿದು ಕಳುಸುತೀನಿ
ಚಿತ್ತಯ್ಯ ಗುರುವೇ ಅಂಬಾನಂತೋ !
ಕಿಡಿಗಣ್ಣನು ಚಿತ್ತಯ್ಯ ಚಿತ್ತರಗಿರಿ ಅರಮನೆಗೆ
ಪಟ್ಟದಾನೆ ಹೊಡಿಯೋ ನೀನು ಅಂಬಾನಂತೋ
ಮುತ್ತಿನ ಕಣಜವಲ್ಲೋ । ನನ್ನ ಬೆನ್ನ ಮುತ್ತನೆ ಕೇಳೋ ನೀನು
ಹೇಳನೇ ಮಾಡೋನೇ ನೀಡು । ಆನೆಗೆ ಮೂರನೇ ಮಾಡೋ
ಬರಮನ ಮನೆಗೆ ಹೋಗಿ ಆಳಾಗಿ ದುಡಿಯೋ ನೀನು
ಆಳಾಗಿ ದುಡಿಯೋ ನೀನು
ಬರಮಣ್ಣ ತನ್ನಟ್ಟಿಗೆ ತಾನೆ ಬರುತಾನಲ್ಲೋ ಕೆಲಸವೇ ಅವರದಲ್ಲೋ
ಕಿಡಿಗಣ್ಣನು ಚಿತ್ತಯ್ಯನ ಕಾರ್ಯವು ನಮ್ಮದಲ್ಲೋ
ಕುರುಬರು ಬೇಕಲ್ಲೋ ಕುಂಬಾರರು ಬೇಕು ನೋಡೋ
ಅಗಸರು ಬೇಕು ನೋಡೋ । ತೋಟಿ ತಳವಾರರು ಬೇಕು ನಮಗೋ
ಹನ್ನೆರಡು ಕೈವಾಡವಲ್ಲೋ । ಕೈಯಾಗೆ ಹಿಡಿಕೊಂಡು
ಕೆಲಸ ಬಿದ್ದಾಗ ಇರುವುದೋರು ಎಂಬೋರೆಲ್ಲೋ
ಪಟ್ಟದಾನೆ ಹೊಡೆಯನಲ್ಲೋ ಚಿತ್ತರಗಿರಿ ಅರಮನೆಗೆ ॥
ಚಿತ್ತರಗಿರಿ ಅರಮನೆಗೆ ಮುತ್ತಿನ ಕಣಜ ಮುತ್ತಿನೇ ಕಿತ್ತಾನಂತೋ
ಬರಮನ ಮನೆಗೆ ನೋಡೋ ಆಳಾಗಿ ಹೊಡೆದಾನಂತೋ

ಒಕ್ಕಳಾನೇ ಹೊದ್ದನಂತೋ ಬರಮಣ್ಣ ಹೊಕ್ಕಳಾನೇ ಹಾಸೇನಂತೋ
ತೂಗಾ ಮಂಚದ ಮೇಲೆ ಬರಮಣ್ಣ ತೂಗಿ ಮಲಗಿದನಂತೋ
ಕತ್ತೆಯ ಕಟ್ಯಾಕೆ ಬರಮಣ್ಣನ ಮನೆ ಮುಂದೆ ಬಂಗಾರದ ಗೂಟವಂತೆ
ನನ್ನ ದಂಡು ಕರೆದಿಲ್ಲ ಯಾರೋ ಪರದೇಶಿ
ಮಕ್ಕಳ ಮೇಲೆ ಗುದ್ದಾಟ ಹೋಗಂಗೆ ನನ್ನ
ಕಣ್ಣಿಗೆ ಕಾಣುತಾರೆ ನಮ್ಮ ಪ್ರಜೆಗಳು ಸಾಯುತಾರೋ ।
ಬದುಕುತಾರೋ । ಬತ್ತಾರೋ ಬರೋಲ್ಲವೋ । ನಾನಾದರೂ
ಹೋಗುತೀನಿ ಕಣ್ಣಿಂದ ನೋಡಬೇಕೆಂದು ದಂಡಿಗೆ ನಡೆದಾಳಂತೋ

ಅರಮನೆಯ ಬಿಡುವಾಳಂತೋ । ಮಾಳಮ್ಮ
ಸಣ್ಣ ಅಲೆ ಮರದ ಬಯಲಿಗೆ ನಡೆದಾಳಂತೋ
ಬಯಲಿಗೆ ನಡೆದಾಳೋ । ಕಡಿಗಣ್ಣನು ಚಿತ್ತಯ್ಯ ತಿರುಗಿ ನೋಡಾನಂತೋ
ರಾಮ ರಾಮ ಗುರುವೆ ಕಿಡಿಗಣ್ಣನು ಚಿತ್ತಯ್ಯ
ಅಂಗಾಲನ ಕಿಚ್ಚು ನೆತ್ತಿಗೇರೋನಂತೋ
ತುಪ್ಪ ಅನ್ನ ಬಿಟ್ಟು ಪಟ್ಟೆ ಮಂಚ ಬಿಟ್ಟು
ಮತ್ತೆ ನೀನೂನು ಬಂದು ಕರೆಯೋ ಗಂಗೆ ಮಾಳಿ
ನೆತ್ತರ ನಾಲಿಗೆ ತೆಗೆದೇನೋ ಇರಿದೇನೋ
ಹಾಲು ಅನ್ನ ಬಿಟ್ಟು ತೂಗಾ ಮಂಚ ಬಿಟ್ಟು
ನೀನು ದರೆಗೆ ಕರೆಯೋನು ಗಂಗೆ ಮಾಳಿ
ತಲೆಯಾದ ನಾಲಿಗೆ ತೆರೆದೇನು ತಿಳಿಯಾದು
ಇರಿಯಾದು ಅಂಬಾನಂತೋ
ಯಾವೂರು ದೊರೆಸ್ವಾಮಿ । ಕತ್ತಲು ಕರಿಮಲೆಯೊಳಗೆ
ಬೇಟಿ ವೋಗಾರಂಗೆ ನನ್ನ ಕಣ್ಣಿಗೆ ಕಾಣಲಿಲ್ಲ ।
ಯಾರೋ ಪರದೇಶಿ ಮಕ್ಕಳು ಘೋರುಗ್ರವಾಗಿ
ನಮ್ಮ ಕಣ್ಣಿಗೆ ಕಂಡಾರು । ನಮ್ಮ ದೊರೆಗಳು ಸಾಯುತಾರೋ ಬದುಕುತಾರೋ
ಬರುತಾರೋ ಬರೋಲ್ಲವೋ ಕಣ್ಣಿಂದ ಬಂದು ನೋಡೋ ಸ್ವಾಮಿ
ಹಾಳೂರ ಚಿಂತೆಲ್ಲ ನಾನೇರ ಬರುತೀನಿ
ನಗದು ಮನೆಯಾಗಿರುವ ನಾಯಿ ಕುನ್ನಿ ಕೊಟ್ಟರೆ ನೀನು
ಬರುವವರೆಗೂ ನಾನಾದರೂ ಆಸರೆ ಕಳಕೊಂಡು
ಬೇಸರಿಗೆ ಕಳಕೊಂಡು ಅರಮನೆಗಿರುವೆ ಸ್ವಾಮಿ ।
ಜಟ್ಟಿರು ಕೇಳಿದರೆ ಕುಸ್ತೇರು ಕೇಳಿದರೆ
ಶೂರರು ಕೇಳಿದರೆ ತೋಟಿ ತಳವಾರರು
ಮಾಳಿಯಾಡಿದ ಮಾತು ಎಲ್ಲರೂ ಕೇಳಿದಿರೇನೋ

ನಾನೇನು ಕೆಡುವು ದೌವಲತ್ತು ಕೆಡಬಹುದು
ಚಿತ್ತರಗಿರಿ ಪಟ್ಟಣವೇ ಕೆಡಬಹುದು ನೀನು
ಮುಖದ ಮೇಲೆ ಮೂರು ಏಟು ಬಡಿದು
ಅರರೆ ಅರಮನೆಗೆ ಹೋದಾನಂತೋ ।
ಸತ್ಯವೇ ನಿಲ್ಲದಲ್ಲೋ ನೋಡಣ್ಣ ನನ್ನ
ಸಾಹಸವೇ ನಡೆಯೋದಲ್ಲೋ ।

ನನ್ನ ರಾಜ ಆಡಿದ ಮಾತು ಪ್ರತಿ ಉತ್ತರ ಬರಬಹುದಯ್ಯೋ
ನೆಟ್ಟೈರು ಬನ್ನಿರೋ ತೋಟಿ ತಳವಾರರು ಎಲ್ಲರೂ ಬನ್ನಿರೋ
ನಮ್ಮನೆ ಕರೆದವನು ಮೂಗಿಗೆ ಮೂರೇಟು ಬಡಿದು
ಬೊಮ್ಮನ ಅರಮನೆಗೆ ಹೋಗುತೀನಿ ನಾನು
ಜಟ್ಟಿರು ಬಂದವರೆ ಕುಸ್ತೇರು ಬಂದವರೆ
ವೀರರು ಬಂದವರೆ ಶೂರರು ಬಂದವರೆ
ತೋಟಿ ತಳವಾರರು ಎಲ್ಲರೂ ಬಂದವರೆ
ಪಾಲೇರದ ಕುಲವಂತೆ, ತುಪ್ಪದಂತ ಮುಸುವಂತೆ
ಮಸರಿನೊಳು ಹೆಸರೊಳು ದಿಸೆನಂತೆ ಮಾಳಮ್ಮನು
ಮುಖದ ಮೇಲೆ ಮೂರೇಟು ಒಡೆದವರೆ ಹಿಂದಕೆ ದಬ್ರಿದರಂತೋ
ಚಿತ್ತಯ್ಯ ಕಾಟಯ್ಯನ ದಂಡಿನ ಕಣ್ಣೀರು ಏಳು ಹಳ್ಳವಾಗಿ ಹರಿದಾವಂತೋ
ಆನೇಳು, ಬಂಡೇಳು, ಒಂಟೇಳು ಹರಿದಾರಿಗೆ ನಡೆದಾವಂತೋ

ವಾದವೇ ಬಿದ್ದತಂತೋ ಚಿತ್ತಯ್ಯನಿಗೂ ಮಾಳಮ್ಮನಿಗೂ
ಪ್ರತಿವಾದ ಹುಟ್ಟಿದೆ ನೋಡೋ । ಜಗಳಾನೆ ಬಿದ್ದಿತೆಂತೋ
ಚಿತ್ತಯ್ಯನಿಗೂ ಮಾಳಮ್ಮನಿಗೂ ದೊಡ್ಡ ಜಗಳಂದೂ ಹುಟ್ಟಿದಂತೋ
ಅಳ್ಳಕ್ಕೆ ಹೋಗಲು ಬೇಡ ಮರಳು ಬಗೆಯಲು ಬೇಡ
ಕೊಡನಿಕ್ಕಿ ನೀರು ತುಂಬಿಕೊಂಡು ಗಂಗಾ ಮಾಳಿ
ಬರಿಗೊಡವ ಮನೆಗೆ ತರಬೇಡ ಅಂಬೋನಂತೋ
ಅಕ್ಕಿ ಹಾಕಬೇಡ, ತುಪ್ಪ ಕಾಯಿಸಬೇಡ ಉಣಬೇಡ ।
ಉಪವಾಸ ಇರಬೇಡ ಗಂಗೆಮಾಳಿ ನರಮಾನ್ಯರ ಮೊಕನ ನೋಡಬೇಡ
ಅರಮನೆಗೊಬ್ಬಳೇ ಇರಬೇಡ ಅಂಬೋನಂತೋ
ಬೆಟ್ಟಕ್ಕೆ ಹೋಗಬೇಡ ಗೋರೆತ್ತಿ ನೋಡಬೇಡ
ಸತ್ತ ಮಿಕವ ಮನೆಗೆ ತರಬೇಡ । ಗಂಗಾ ಮಾಳಿ
ಮನವಿಲ್ಲದೆ ಮನೆಗೆ ನೀನು ಬರಬೇಡ ಅಂಬಾನಂತೋ
ಮೈಯಿಗೆ ನೀರು ಹೊಯ್ದಿಲ್ಲ । ಮಂಡೆಗೆ ನೀರು ಹೊಯ್ದಿಲ್ಲ

ಗಂಜೀನ ಸೀರೆ ಉಡಲಿಲ್ಲ ಚಿತ್ತಯ್ಯನ ಗಿರಿಯನ
ನನ್ನಂಥ ಗಂಡ ನಂಬೋನೇನು ನನಗೆಲ್ಲೊ ಎಂಬೋಳಂತೋ
ಮೈಯ ತೊಳಿಯಲಿಲ್ಲ ಮೈಯಿಗೆ ನೀರು ಹುಯ್ಯಲಿಲ್ಲ
ಕರಿಯೋನೆ ಸೀರೆ ಉಡಲಿಲ್ಲ ಚಿತ್ತಗಿರಿಯಾಗೆ
ನಿನ್ನಂಥ ಗಂಡನಿರಬಹುದೋ ಅಂಬೋಳಂತೋ
ಗಂಜಿ ಸೀರೆ ಉಡುವುದೇ ಗಂಗಿ ಮಾಳಿ
ನಿನ್ನಂಥ ಗರತಿ ಉಡುವುದೇ ಗಂಗಿ ಮಾಳಿ
ಮೈಯಾಗೆ ತೊಳೆದಿಲ್ಲ ಮಂಡೆಗೆ ನೀರು ಒಯ್ದಿಲ್ಲ
ಅರಮನೆಗೆ ನಾನೆಂಗೆ ಬರಲೆಂತೋ ಅಂಬಾಳಂತೋ
ಮುತ್ತಿನ ಸರನಾ ಕಿತ್ತು ಬೀಸಾಕಿದಂಗೆ ಎತ್ತಿಲ್ಲೋ ತಾಯಿ
ಎರವಿಗೆ ಏಳು ಮಕ್ಕಳಾ ಹುಟ್ಟಬಾರದು ಏಳು ಜನ್ಮಕ್ಕೂ
ಹವಳಾದ ಸರವಿರದ ಬೀಸಾಕಿದಂಗೆ ಹಡೆದೆಲ್ಲಾ ತಾಯಿ
ಏಳು ಮಕ್ಕಳಾ ಬೀಸಾಕಿದೆಲ್ಲೋ ಸರವರಕೆ ಅಂಬಾಳಂತೋ
ಹೆಣ್ಣಾಗುವುದಕ್ಕಿನ್ನ ಮಣ್ಣಾಗಿ ಹುಟ್ಟಿದರೆ ।
ಮಣ್ಣಿನ ಮೇಲೊಂದು ಮರವಾಗಿ ಹುಟ್ಟಿದರೆ
ಹಕ್ಕಿ ಪಕ್ಷಿಗಳಿಗೂ ಪುಣ್ಯವಂತರಿಗೂ ನೆರಳಾಗಿ ಇರುತೀನಿ
ನಾನು ಕಿರುಕಾಲೆ ಸೊಪ್ಪು ಮೆರೆತೀನಿ । ಕೆರೆ ತುಂಬಿ
ಕೋಡಿ ಹರಿದಂಗೆ ಹರಿತೀನಿ ಅಂಬೋಳಂತೋ ।

ಮುಂಜೆರುಗ ಸೀಳಿದನಂತೋ । ಪ್ರಜೆಗಂಟು ಬಿಗಿದಾನಂತೋ
ಜಪದ ಮುನಿ ಕಾಟಯ್ಯನ ಪಾದಕ್ಕೆ ಅಡ್ಡಬಿದ್ದಳಂತೋ
ಮಾಳಮ್ಮ ಪೇಟಿ ದಾರಿಯ ಹಿಡಿದಾಳಂತೋ ।
ದಾರಿಯ ಹಿಡಿದು ಪೇಟೆ ಹಾದಿಗೆ ಹೋದಾಳಂತೋ ।
ಕುರುಬರ ಮನೆಯೊಳಗೆ ಕುರಿಯನೆ ತಿಂಬಾದು
ಹಾರುವರ ಮನೆಯಲ್ಲಿ ಹಾಲನೆ ಕುಡಿಯೋದು
ಕುಂಬಾರ ಮನೆಯ ಬಟ್ಟಲಾಗೆ ನೀರು ಕುಡಿಯೋದು
ಕುಂಬಾರ ಆವಿಗೆಯೊಳಗೆ ಮಲಗೀತೆ ಮೂಳು
ಸುತ್ತಮುತ್ತ ನಾಡವಳೆ । ನರ ಮನುಷ್ಯರ ಸುಳಿವಿಲ್ಲ
ಬಗ್ಗುತಾ ನಡೆದವಳೆ ಕಂಕುಲುಗೆ ಹಾಕವಳೆ
ಬಂಗಾರದ ಸೆರಗು ಮುರಿದು ಮುಸುರಿಗಿಟ್ಟವಳೆ
ಅರಮನೆಗೆ ನಡೆದಾಳಂತೋ । ಮಾಳಮ್ಮ ಅರಮನೆಗೆ ನಡೆದಾಳಂತೋ
ಕಾಡೆಲ್ಲಾ ಸುತ್ತಾಳೆಲ್ಲೂ ನೋಡಣ್ಣ ಒಂದು ಗಿಡುಗಾನೇ ಸಿಗುವುದೆಲ್ಲೋ
ಅರಮನೆಗೆ ಹೋಗೋಳಲ್ಲೋ ಕೊಪ್ಪರಿಗೆ ನೀರಾನೆ ಕಾಸೋಳಂತೋ

ನೀರಾನೆ ಕಾಸೋಳಲ್ಲೋ ಮೂಳಣ್ಣ ಗಿಡುಗಣ್ಣರಿಗೆ ನೀರಾನೆ ಎರದಾಳಲ್ಲೋ
ಎಣ್ಣೆಯ ಹೊತ್ತಿದಳಂತೋ । ಬಂಗಾರದ ಒಡವೆಯೂ ಹಾಕೋಳಂತೋ
ಆಕಳು ಹಾಲು ತರಿಸೋಳಂತೋ ಸಕ್ಕರೆ ತರಿಸಿದಳಂತೋ
ಚಿತ್ತರಗಿರಿಯ ಮುತ್ತಿನ ಅರಮನೆಗೆ ಅಗ್ಗರಣೆ ಕಾಯೋದಂತೋ
ಅಗ್ಗರಣೆ ಕಾಯೋದಲ್ಲೋ । ಚಿತ್ತರ ಗಿರಿ ಅರಮನೆಗೆ
ಮೂಳಣ್ಣ ಗಿಡುಗಣ್ಣರಿಗೂ ಊಟಾನೆ ಆಗೋದಂತೋ
ಕತ್ತಲು ಕರಿಮಲೆಯಾಗೆ ಶಿಕಾರಿ ಬೇಟೆಗೆ ನಡೆಯರಂತೋ
ಇಳ್ಳು ಏಳು ದಿನ ಹಗಲು ಎಳು ದಿನ
ನಿದ್ದಿಲ್ಲದೆ ಮುದ್ದಿಲ್ಲದೆ ಅನ್ನಿಲ್ಲದೆ ವಸ್ತಿಲ್ಲದೆ
ಕತ್ತಲು ಕರಿಮಲೆಯಾಗೆ ಶಿಕಾರಿ ದಂಡೇ ನಡೆಯೋದಂತೋ
ಹನ್ನೆರಡು ಕ್ವಾಟಿ ದಂಡೋ ನುಗ್ಗಿ ನುಗ್ಗೆಕಾಯಿ ಆದರಂತೋ
ಕತ್ತಲು ಕವಿದೀತಂತೋ ನೋಡಣ್ಣ ಗಿಡಗನೇ ನಿಂತಿತೆಂತೋ
ಗಿಡುಗನೇ ಹೋಗುತೇನೋ ಚಿತ್ತಯ್ಯನ ದಂಡಿಗೊಬ್ಬ
ಅಡಿಯೋಟ್ಟಿ ಪಾಪಿ ಇರುವಾನಂತೋ
ಪಾಪಿನೇ ಇರುವಾನಲ್ಲೋ ದಂಡಿನಿದಿರಿಗೆ ನಮುಸ್ಕಾರ
ಹೊಡೆದಿ ನಿಂತಾನಂತೋ ।
ಇಳ್ಳು ಏಳು ದಿನ ಹಗಲು ಏಳು ದಿನ ಏಳೇಳು ಹದಿನಾಲ್ಕು ದಿನ
ಅನ್ನಿಲ್ಲ, ಮುದ್ದಿಲ್ಲ, ನೀರಿಲ್ಲ, ವಸ್ತಿಲ್ಲ, ಈ ಹೊತ್ತು ಒಂದು ರಾತ್ರಿ
ಕತ್ತಲು ಕರಿಮಲೆಯಾಗೆ ಕೊಡಬೇಕೆಂದು ನಮುಸ್ಕಾರ ಹೊಡೆದಾನಂತೆ
ನಮುಸ್ಕಾರ ಹೊಡೆದಾನಲ್ಲೋ ಕಿಡಿಗಣ್ಣನು ಚಿತ್ತಯ್ಯ
ಯಾರೂ ಹೇಳೋ ದಂಡಿನಾಗೆ ಅಡಿಹೊಟ್ಟಿ ಪಾಪಿ
ಇರುವನಂತೋ ಅಂಬೋನಂತೋ
ಸುರಹೊನ್ನೆ ಮರವ ಹತ್ತಿ ನೋಡೋ । ಬೇಗಾನೆ ಹತ್ತಿ ನೋಡಾನಂತೋ
ಹತ್ತಾನೆ ನೋಡಾನಲ್ಲೋ ಜಾಡನೆ ಹತ್ತಿ ನೋಡಿದನಂತೋ
ನಮ್ಮಣ್ಣ ಜಪದ ಮುನಿ ಕಾಟಯ್ಯ ಗಂಟೆ ಹೊಡೆದೈತೆ
ನೋಡೋಲೆ ಚಿಕ್ಕ ಅಂಬಾನಂತೋ । ಜಾಡನೆ ಹಿಡಿದಾನಂತೋ

ದಂಡಿನಾಗೆ ಬರೋರೆಲ್ಲರೂ ದೊರೆಗಳನ್ನ ಮಾಡಿಬಿಟ್ಟು
ಬೆಂಕಿಲಿ ಹುಟ್ಟದವರೆಲ್ಲಾ ರಾವಣರನ ಮಾಡಿಬಿಟ್ಟು
ಕೋವಿ ಹಿಡಿದಾರನೆಲ್ಲಾ ಬ್ಯಾಟಿಗಾರರೆ ಆಗಾರೆಲ್ಲೋರು
ಸ್ವಾಮಿ ಚಿತ್ತಯ್ಯ ಅಂಬಾರಂತೋ ।
ಕೋವಿ ಹಿಡಿದಾರೆಲ್ಲಾ ಬೇಟಿಗಾರರ್ನ ಮೂಡಿಬಿಟ್ಟು
ದಗಡಿ ಮಗ ಚಿತ್ತಯ್ಯ ಅಂಬಾರಂತೋ

ಗುರುದೇವ ಅಂಬಾನೆಲ್ಲೋ । ನಿಮ್ಮ ಹಿರಿಯಣ್ಣ
ಗುರು ಕೇಳು ಅಂಬಾನಂತೋ
ಆನೆಯ ಕಟ್ಟೈತೆಲ್ಲೋ । ಚಿಕ್ಕಣ್ಣ ಅಂಬಾರಿ ಕಟ್ಟೈತೆ ನೋಡೋ
ಪಾಲಿಕೆ ಕಟ್ಟೈತೆಲ್ಲೋ । ಚಿಕ್ಕಣ್ಣ ಪಲ್ಲಕ್ಕಿ ಹರಡ್ಯೆತೆಲ್ಲೋ
ಪಲ್ಲಕ್ಕಿ ಹರಡ್ಯೆತೆಲ್ಲೋ । ಪಲ್ಲಕ್ಕಿ ಒಳಗ ಜಪದ ಮುನಿ ಕಾಟಯ್ಯ
ಹಿರಿಯಣ್ಣ ಕುಂತಾನಂತೋ
ಬಂಗಾರದ ಕಳಸವಲ್ಲೋ । ಅಣ್ಣ ಶೃಂಗರಿಸಿ ಬಿಡಿಸೈತಂತೋ
ಗುರುತಾನೆ ಹೊಳಯಾದಲ್ಲೋ ರಾಮ ರಾಮ ಏನು ಕಾಲ ಆತು
ಜಪದ ಮುನಿ ಕಂಡು ಅಂಬಾನಂತೋ

ಕಾಳೆ ಕೆಂಚೆಂಬ ಬಡ್ಡಿಮಗ ಒಕ್ಕಳ ಬತ್ಯ ವೊಪ್ಪತ್ತಿಗೆ ತಿಂಬಾನು
ಹನ್ನೊಂದು ಗಿದ್ನ ಅವರೆ ಗುಗ್ರಿ ಒಂದೇ
ಊಟೆಗೆ ತಿಂಬಾನು ಹೊತ್ತು ಹುಟ್ಟಿದರೂ ಹೊತ್ತು ಮುಳುಗಿದರೂ
ಮುನೂರು ಮುನ್ನೂರು ಮುಗಾವಳಿ ಸಂಬಳ ತಿಂಬಾನು
ಗಟ್ಟಿಸಿ ರಣಬೇರಿ ಹಿಡಿದು ಹೆಗ್ಗರಿಸಿ ರಣಗಾಳೆ ಹಿಡಿದು
ಹಿಂದಲ ದಂಡು ಮುಂದಕ್ಕೆ ಮುಂದಲ ದಂಡು ಹಿಂದಕ್ಕಗಬೇಕು
ಎಲು ಕಾಲದಿಂದ ಇರುವಂಥ ಜಪದ ಮುನಿ ಕಾಟಯ್ಯನ ದಂಡು
ಕತ್ತಲು ಕರಿ ಮಲೆಯೊಳಗೆ ಹಿಡಿಯಾಲೆ ಕಾಳ ಹೊಡೆಯಾಲೆ ಬೇರಿ
ಕೆಂಚಾ ಅಂಬಾನಂತೋ
ಕುಂಟ ಕುರುಡ ಹೆಳವ ಮೂಗರ ಎಡ ಬಗಲಿಗೆ
ಅವಿಚಿಕೊಂಡು ಏಳು ಜಾವ ಇರುವಂತಾ
ಜಪದ ಮುನಿ ಕಾಟಯ್ಯನ ದಂಡು ಕಂಬ
ಕರಿಮಲೆಗೆ । ಚಿತ್ತಯ್ಯನ ದಂಡಿನ ಮುಂದೆ ಡೇರೇನೆ ನಿಲ್ಲಿಸಿದನಂತೋ
ಎನಮ್ಮ ಅಂಬಾನಲ್ಲೋ । ನನ ಬೆನ್ನೆ ಕಿಡಿಗಣ್ಣನು ಚಿತ್ತಯ್ಯನು
ಕರಿಸಿದ ಕಾರಣ ಅಂಬೋನಂತೋ
ಅಣ್ಣಯ್ಯ ಹೇಳುತೀನಿ ನಮ್ಮಣ್ಣ ಹೇಳುತೀನಿ
ಇಳ್ಳು ಏಳು ದಿನ ಹಗಲು ಏಳುದಿನ
ಏಳೇಳು ಹದಿನಾಲ್ಕು ದಿನ ನುಗ್ಗಿ ನುಗ್ಗೇಕಾಯಿ ಆಗೈತೆ
ಅನ್ನವಿಲ್ಲ ನಿದ್ರಿಲ್ಲ ಊಟವಿಲ್ಲ, ವಸತಿಲ್ಲ
ಕತ್ತಲು ಕರಿ ಮಲೆಯಾಗೆ ಬುತ್ತಿ ಕೊಡಬೇಕು
ಸ್ವಾಮಿ ಗುರುವೇ ಅಂಬೋನಂತೋ

ಕೇಳಮ್ಮ ಹೇಳುತ್ತೀನಿ ನಾನು । ನನ್ನ ಬೆನ್ನ
ಕೇಳ್ರಯ್ಯ ಹೇಳುತೀನಿ ನಾನು

ಕತ್ತಲುನೂ ಕರಿಮಲೆಯಾಗೆ ಹೊಪ್ಪತ್ತು
ಕೆಂದರು ಮಲೆಯಾಗಿ ಇರುಬಹುದು ನಾವು
ನಮಗೂ ಭಯವಿಲ್ಲವೇನೂ । ನಮ್ಮ ದಂಡಿಗೂ ಭಯವಿಲ್ಲವೇನೂ
ಕೇಳಮ್ಮ ಹೇಳುತೀನಿ ನಾನು । ನನ್ನ ಬೆನ್ನೆ
ಕೇಳಿರಯ್ಯ ಹೇಳುತೀನಿ ನಾನು
ಚಿತ್ತಯ್ಯ ಕಾಟಯ್ಯನಂತೆ ಚಿಕ್ಕವನು ನರಸಿಂಹನಂತೆ
ಚಿತ್ತರಗಿರಿಗವರು ಹೆಚ್ಚಿನ ದೊರೆಗಳಂತೆ
ಗೋವರ್ಧನ ಗಿರಿಯಾಗೆ ಶಿವನ ಬೆವರಾಗುಟ್ಟಿದವರಂತೆ
ಬೆಂಕಿಗುಟ್ಟಿದವರಂತೆ । ಮಂದೀನು ಕಟ್ಟಿಕೊಂಡು
ಮಾರ್ಬಲನ ಕಟ್ಟಿಕೊಂಡು ಕತ್ತಲ ಕರಿಮಲೆಯೊಳಗೆ
ಶಿಕಾರಿ ಬೇಟೆ ಹೋಗುವವರಂತೆ
ಅಣ್ಣನನ್ನೇ ಬಿಟ್ಟು ತಮ್ಮಗಳು ಬಂದಾಗಿ ಅಪಶಕುನ
ಬರುವುದು ಮುಂದೋ ।

ಯಾಗಾನೇ ಹುಟ್ಟಬಹುದು ಮೂಗಾನೇ ಹುಟ್ಟಬಹುದು
ಕುರುಡಾಗೇ ಹುಟ್ಟಬಹುದು ಕುಂಟಾಗೇ ಹುಟ್ಟಬಹುದು
ಹಿರಿಯಾನು ಬಂದಸ್ತು ಇರಿಸಾದು
ಮುಂದೋಳ್ಳೇಯದಾಗಾದು ನಮಗೋ ।
ಸೀಸಾನೆ ಕಾಸೋದೇನೋ ಸ್ಯಾರಿಗೆ ವಜ್ರನೇ ಬಿಗಿಯದೇನೋ
ಮೂರನೇ ಮಾಡದಲ್ಲೋ ಮೊಹರು ಮುದ್ರೆ ಹಾಕೋದಲ್ಲೋ
ನರಸಿಂಹನ ಸ್ಯಾರಿಗೆ ವಜ್ರನ ಬಿಗಿದಾನಂತೋ
ವಸ್ತ್ರವ ಬಿಗಿದಾನಂತೋ । ನೋಡಣ್ಣ ಮೊಹರನ್ನೇ ಮಾಡೋನಲ್ಲೋ
ಮುದ್ರಿಕೆ ಒಡೆದಾನಂತೋ । ಬೊಮ್ಮಯ್ಯನ ಕಾಲಿಗೆ ಜದರವ ಇಳುವುದಲ್ಲೋ
ದಂಡಾನೆ ಒಡೆದಾರಲ್ಲೋ । ಬಂದೂಕ ಬಾರಿನವರು
ನೇಮದ ಬಂದೂಕದವರು । ಚೋಟಾ ಬಂದೂಕದವರು
ಇಸ ಗಳಿಗೆ ತೊಳೆದವರು ಕಕ್ಕೆಯನ್ನು ಕಟ್ಟಿದವರು
ತೊಳೆದಂತೆ ಬಿಟ್ಟವರು ಅಡ್ಡನೆ ಬಿಡುವರಂತೋ
ಭೂ ಚಕ್ರದ ಜಂಪಾರೆ ಹೆಚ್ಚಿನೆ ಕಟ್ಟುವರೆ
ಅವರನ ಬಂಡಿಗೆ ಅವರವರು ಹೋಗುವರೋ
ತಾವಾನೆ ಮಲಗೋರಂತೋ ।
ಕಳ್ಳನಲ್ಲಿ ಬರುತಾನಲ್ಲೋ ಸುಳ್ಳನಲ್ಲಿ ಬರುತಾನಲ್ಲೋ
ಅಂದಾನೆ ನೀ ನೋಡು ಅವರವರೆ ಬಾಂದವರು ಆಗೈವರೋ

ಅಂತೆಂಬಾ ಹೊತ್ತಿಗೆಲ್ಲೋ ಬೊಮ್ಮಯ್ಯ ಅಂಗಾನೇ ಹೇಳೋವನಂತೋ
ಹನ್ನೆರಡು ಮೊಳದ ದಂಡಿನಾಗೆ ಅಲ್ಲಿಂದ ಜಪದ ಮುನಿ ಕಾಟಯ್ಯನ ।
ಪಾದಕ್ಕೆ ಅಡ್ಡ ಬೀಳೋನಂತೋ ।
ಸುತ್ತವರ ಗುಡ್ಡ ಬಿಟ್ಟವನಲ್ಲೋ । ಆಹಾರನೇ ಇಟ್ಟವನಂತೋ
ಅವರವರ ದಂಡಿನಾಗೆ ಅವರವರೆ ಮಲಗದರಂತೋ

ಅಂತೆಂಬಾ ಹೊತ್ತಿಗೆಲ್ಲೋ ಎರಗಂಟೆ ಎರಜನ್ನ ಏಳು ಸಾವಿರ
ಕಳಕೊರಮರ ಕರೆದಾನಲ್ಲೋ । ಕಳ ಕೊರಮರ ಕಟ್ಟಿಕೊಂಡು
ಕೆಂಗರು ಮಲೆಗೆ ಬ್ಯಾಟೆಗೆ ಬಂದವರಂತೋ
ಕತ್ತಲು ಕರಮಲೆಯಾಗೆ, ಭೂ ಚಕ್ರದ ಜಡವಳಿ
ಕಂದರ ಮಲೆ ಕಾಣೋದಂತೋ
ಕೊರಮರ ಮಾಡೆರೆಲ್ಲ ಎರಗಂಟಿ ಎರಜನ್ನ
ಎರಡು ಗಳಿಗೆ ದೊರೆಗಳು ಕೇಳೋರೆಲ್ಲೋ
ಎನರೇ ಸ್ವಾಮಿ ಅಂತೆಂಬಾ ನಡುಗಾಲಿಗೆ
ದೊರೆಗಳು ಇರಬಹುದು ಸ್ವಾಮಿ ಗುರುವೆ ಅಂಬಾನಂತೋ
ಏಳುತಾವ ಏಳು ಸಾವಿರ ಕಳ ಕೊರಮರು ಏಳು ಜನ್ನ ದೊರೆಗಳು
ಗುರುತಿಲ್ಲ ಅಂಬಾನಂತೋ ।
ಕೇಳ್ರಯ್ಯ ಹೇಳುತೀನಿ ನಾನು ಕೊರಮ ಕೇಳ್ರಮ್ಮ ಹೇಳುತೀನಿ ನಾನು
ಚಿತ್ತಯ್ಯ ಕಾಟಯ್ಯನಂತೆ ಚಿಕ್ಕವನು ನರಸಿಂಹನಂತೆ
ಚಿತ್ತರ ಗಿರಿಗವರು ಹೆಚ್ಚಿನ ದೊರೆಗಳಂತೆ
ಗೋವರ್ಧನ ಗಿರಿಗವರು ಶಿವನ ಬೆವರಾಗೆ ಹುಟ್ಟಿದವರಂತೆ
ಕೆಂಡದಾಗೆ ಹುಟ್ಟಿದವರಂತೆ । ಅವರಿಂದ ಸಾಧ್ಯವೆ ಹೊರತು
ಇನ್ಯಾರಿಂದಲೂ ಸಾಧ್ಯವಿಲ್ಲ ಅಂಬೋನಂತೋ ।
ಹೋದಾನ ಹೋಗುತೀವಿ ಸ್ವಾಮಿ ನಾವು । ಕಣ್ಣಿಂದ ನೋಡುತೀವಿ ಸ್ವಾಮಿ
ಹೋದಾನ ಹೋಗರಯ್ಯ ನೀವು ಬರುವಾಗ
ಬಯವಾಗಿ ಬರೋ ನೀವು
ಅಂತೆಂಬ ಹೊತ್ತಿನಾಗೆ ದೊರೆಗಳಾಡಿದ ಮಾತು
ಕಾಟಯ್ಯನ ಕಿವಿಕರಣಕೂ ಬಿದ್ದಿತೆಂತೋ
ಅಂತೆಂಬಾ ಹೊತ್ತಿನಾಗೆ ನೋಡಣ್ಣ ಕೆಂಗರು ಮಲೆ ಬಿಡುವರಂತೋ
ಕರಿ ಮಲೆಯ ಬಿಡುವವನಲ್ಲೋ ಅವರು ದಂಡಾನ ಬಿಡುವವರಲ್ಲೋ
ದಂಡಾನ ಬಿಡುವವರಲ್ಲೋ ನೋಡಣ್ಣ ಕರಿಮಲೆಗೆ ನಡೆವಾರಂತೋ
ಮಂಕು ಬೂದಿ ತೆಗೆಸೋನಲ್ಲೋ ನೋಡಣ್ಣ

ಹನ್ನೆರಡು ಪಟಾಲದ ದಂಡುಗೆ ನುಗ್ಗಿನೇ ಬಂದನಂತೋ
ನುಗ್ಗಿನೇ ಬಂದನಂತೋ ನೋಡಣ್ಣ। ನುಗ್ಗಿ ದಂಡಿನಾಗೆ ಯುದ್ಧಗೆ ತಿರುಗಿ ಬಂದನಂತೆ
ಚಿತ್ತರಗಿರಿಯಿಂದ ಹೆಚ್ಚಿನ ದೊರೆಯಂತೆ
ಗೋವರ್ಧನ ಗಿರಿಯಾಗೆ ಶಿವನ ಬೆವರಿನಾಗೆ ಹುಟ್ಟಿದೋರಂತೆ
ಕೆಂಡದಾಗೆ ಹುಟ್ಟಿದವರಂತೆ। ರವರವ ಅಂಬಾರಂತೆ
ರವರವ ಅಂಬಾರನ ಮಂದೆ ಕಾಯಿಸುವರಂತೆ
ಸೊಪ್ಪು ತಪ್ಪೆಂದವರ ಹುತ್ತ ಸುತ್ತಿಸುವರಂತೆ
ಅರಿತವರಿಗೆ ದೇವರಂತೆ ಮರೆತವರಿಗೆ ಮಿಂಡನಂತೆ
ಹೊತ್ತು ಹುಟ್ಟಿದ್ದುಕ್ಕೂ ಹೊತ್ತು ಮುಳುಗಿದುದಕ್ಕೂ
ಸುತ್ತೇಳು ಪಾಳೆಗಾರರ ತಲೆ ತಂದು
ಚಿತ್ತಯ್ಯನ ಪಾದಕೆ ಮಂಗಳಾರತಿ ಮಾಡಿಸಿಕೊಳ್ಳುವ
ದೊರೆಗಳಿಗೆ ಹಿಡಿಯಲೆ ಕಾಳೆ ಹೊಡೆಯಲೆ ಬೇರಿ
ಕೆಂಚಾ ಅಂಬಾನಂತೆ
ಮಾಲಿಂಗ ಅಂತರಕೆ ನಡೆಯಾನಂತೆ। ಮಾಲಿಂಗಗೆ
ಪಲ್ಲಕ್ಕಿ ಕುಂತಾನಲ್ಲೋ। ಮಾಲಿಂಗ ಆನೆಯ ಹತ್ತವನೆ
ಆನಂದವಾಗಿರುವವನೆ ಮಾಲೆಯ ಧರಿಸವನೆ ಕೊರಳೊಳಗೆ
ಚಿತ್ತರಗಿರಿ ಮಾಲಿಂಗ ಅವನು ಒಂಟೆಯ ಹತ್ತವನೆ
ರುದ್ರಾಕ್ಷಿ ಧರಿಸಿವೆನೆ ಕೊರಳಿಗೆ ಚಿತ್ತರಗಿರಿಯ ಜವದರ
ಕಾಳೆ ಕೆಚ್ಚ ಬಡ್ಡಿ ಮಗನೆ ಎಚ್ಚರಿಸಿ ಧರ್ಮ ಕಹಳೆ ಊದಲೇ
ದಗಡಿ ಮಗನೆ ಅಂಬೋನಂತೋ
ಹೊನ್ನು ಮೂರು ಮಣ, ಚಿನ್ನ ಮೂರು ಮಣ ತಾಮ್ರ ಮೂರು ಮಣ
ಬೆಳ್ಳಿ ಮೂರು ಮಣ ಕಬ್ಬಿಣ ಮೂರು ಮಣ
ಹಸಿರು ಕಂದು ಕೆಂಪು ನೀಲ ಕದಿರು ಕತ್ತಿ ಬಿಗಿದಂತ
ಮುನ್ನೂರು ಮುನ್ನೂರು ಆರುನೂರು ಒಂದೇ ಮಣದ ತೂಕ
ರಣದಲೆ ರಣಸೂರ ರಣಬೀರಿ ಎಂಬ ಭೂ ಚಕ್ರದ
ಹೆಚ್ಚಿನ ಹೆಗ್ಗಾಳೆ ಕಾಳೇ ಬಾಳನ ತಮ್ಮ ಕಾಳೇ ಕೆಂಚೆಂಬ
ಬಡ್ಡಿ ಮಗನೇ ಒಕ್ಕಳ ಭತ್ಯವು ಒಪ್ಪತ್ತಿಗೆ ತಿನ್ನೋನು
ಅನ್ನೊಂದು ಗಿದ್ನ ಅವರೆ ಗುಗ್ರಿ ಒಂದೇ ಊಟಕ್ಕೆ ತಿಂಬೋನು
ಗಟ್ಟಿಸಿ ಬೇರಿ ಹೊಡೆದು ಎತ್ತರಿಸಿ ಹೆಗ್ಗಾಳೆ ಹಿಡಿದರೆ
ಚಿತ್ತರ ಗಿರಿಗೆ ಕಾದು ಕಾವಾಗದಂತೆ ನೀಲಗಿರಿ ಕದಡಿ ನೀರಾಗದಂತೆ
ನೀಡಗಲ್ಲು ಬುಡ ಮೇಲಾಗದಂತೆ ಕಡವೆ ಸಾರಗ ಕಾಡಂಬಿ
ಹೊಲಸೆದ್ದು ಮಲಸೀಮೆಗೆ ಓಡೋವಂತೆ

ಮರ ಮಂಡಿ ಗಿಡಗುಂಟಿ ಭೂ ಪಾದಕ್ಕೆ ಬೀಳಾವಂತೆ.
ಚಿತ್ತರ ಗಿರಿಯ ಬೇರುಗಂಟಿ ಮೇಲೆದ್ದು ಭೂಪಾದಕೆ ಬೀಳಾವಂತೆ
ತಣಿಗೆ ಚೆಂಬೆಲ್ಲಾ ಮುಂಗಾರು ಸಿಡಿಲಂಗೆ ಎರಗಿ ಬೀಳಾವಂತೆ.

ಚಿತ್ತರಗಿರಿಯಾಗಿದ್ದ ತೊಟ್ಟಿಲೊಳಗಣ ಮಕ್ಕಳು ರಕ್ತಾ ಕಾರುತಾ
ಭೂಮಿಗೊ ನೆಲಕ್ಕೋ ಕಾರೋವಂತೋ
ನನ್ನೂರ ಮುಂದೆ ನಾರೋ ಕೆಂಚಣ್ಣ ಇಳಿಯುವಂತಾ ಕಾಣವಲ್ಲೋ
ಕೆಂಚಣ್ಣ ಹೊಡೆವಂತ ಹೇಳೋವಲ್ಲೇ ।
ಅಂತೆಂಬಾ ಹೊತ್ತಿಗೆಲ್ಲೋ ನೋಡಣ್ಣ ವಿಷಗಳಿಗೆ ಹೋಗೋದಂತೋ
ವಿಷಗಳಿಗೆ ಹೋಗೋದಂತೋ ನೋಡಣ್ಣ ಅಮೃತಗಳಿಗೆ ಬರುವುದಂತೋ
ಅಮೃತಗಳಿಗೆ ಬರೋದಲ್ಲೋ ನೋಡಣ್ಣ ಮಾಲಿಂಗ ತಾನೂವ ಕುಂತಾನಂತೋ
ಮಾಲಿಂಗ ಪಲ್ಲಕ್ಕಿ ಕುಂತಾನಂತೋ
ಚಿತ್ರಗಿರಿಗೆ ರಾತ್ರಿಗೆ ಹನ್ನೆರಡು ಪಟಾಲದ ದಂಡೇ ನಡೆಯೋದಂತೋ

ಮೂಡಾಲ ದಿಕ್ಕಿಗೆ ನರಸಿಂಹನ ಡೇರೇವು
ಪಡುವಲ ದಿಕ್ಕಿಗೆ ಚಿತ್ತಯ್ಯನ ಡೇರೇವು
ಬಡಗಾಲ ದಿಕ್ಕಿಗೆ ಬೊಮ್ಮಯ್ಯನ ಡೇರೇವು
ಟೆಂಕಾಲ ದಿಕ್ಕಿಗೆ ಕರಪಲ್ಯರ ಡೇರೇವು
ನಟ್ಟು ನಡುವಗಲ ಬಟ್ಟಂ ಬಯಲಿಗೆ
ದೊಡ್ಡಾನೆ ಭೂತಾಳೆ ಗಜನಿಂಬೆ ಮರದಡಿಗೆ
ಜಪದ ಮುನಿ ಕಾಟಯ್ಯ ಡೇರೇವು ಹೊಡೆಸೇನಂತೋ
ಚಿತ್ತರಗಿರಿಯೋ ಬಿಚ್ಚಾಳೆ ಮರದ ನೆರಳಾ ಮುತ್ತಿನ ಗೊಡಗು
ನಡುವಂತ ಗೆಜ್ಜೆ ಹಿಡಿಯಂತೋ ತಿಳಿದು ಬಂತೋ
ರಾಯ ಚಿತ್ತನ ಗಿರಿಯೋ ಗೊಡಬು ಕಿತ್ತಾಕು ಯಾಲನೆ ಮರವ
ನೆರಳೂ ಗೌಡವರ ಗೊಡುವ ಹಗಲೊತ್ತಿಗೆ ಇಳಿಯ ಅಂಬಾನಂತೋ
ದಿಗ್ ದಿಗನೆ ಉರಿಯೋದೆಲ್ಲೋ ಬಂಗಾರದ ಗೊಡಗು
ತಳ ತಳನೆ ಮಿಂಚೋದಂತೋ
ದಿಗಿ ದಿಗನೆ ಉರಿಯೋದಲ್ಲೋ । ಅವಳಾದ ಗೊಡಗು ತಳ ತಳನೆ ಮಿಂಚೋದಂತೋ ।
ರಾಮ ರಾಮ ಗುರುವೆ ಚಿತ್ತರಗಿರಿ ಮಾಳಮ್ಮನ ಮುತ್ತಿನ ಅರಮನೆಗೆ
ಕಿವಿ ಕರಣಕೆ ಬಿದ್ದಿತಂತೋ
ಹೂ ಮಾಳಿಗೆ ಹತ್ತದಿಳಲ್ಲೋ ಮಾಳಮ್ಮ । ದಂಡಾನೆ ನೋಡಾಳಂತೋ
ಇದೇನೆ ಸೋಜಿಗ ಇದೇನೆ ಕೈ ಯಮತ್ರ ನಮ್ಮನೆ ದೊರೆಗಳು

ಕತ್ತಲೆ ಕರಿಮಲೆಯೊಳಗೆ ಬ್ಯಾಟೆಗೆ ಹೋಗಾರಾಗೆ
ಮುಸರೋಡೆದು ಮಲಗೈತಂತೋ
ಹನ್ನೆರಡು ಸಾವಿರ ದಂಡು ಮಸರೊಡೆದು ಮಲಗೈತಂತೋ
ಏಳು ಸಾವಿರ ಕಳ್ಳ ಕೊರಮರೆಲ್ಲೋ ನೋಡಣ್ಣ
ಕೆಂಗರು ಮಲೆಯ ಬಿಡುವರೆಲ್ಲೋ । ಕೆಂಗರು ಮಲೆ ಬಿಡುವರೆಲ್ಲೋ
ನೋಡಣ್ಣ ಕರಿಮಲೆಗೆ ನಡೆದಾರಂತೋ ।

ಗುರುವಾಕಿದ ಮೋಡಿ ಮೂಡ ಜನರಿಗೆ ತಿಳಿಯಲಿಲ್ಲ
ಮೋಡದೊಳಗಣ ಬೆಂಕಿ ಮುಚ್ಚಿದ ಕೆಂಡ ಮೂಡ ಜನರಿಗೆ
ತಿಳಿಯಲಿಲ್ಲ । ಬೂದಿ ಮುಚ್ಚಿದ ಕೆಂಡ ಭೂಲೋಕದುದ್ದಂಡ
ನಾಗರಾವಿನ ಮಿಂಡ ನರಲೋಕಕೂ ಗಂಡ ಕಾಣೋ
ಕೇಳ್ರಯ್ಯ ಹೇಳುತೀನಿ ನಾವು । ಕೇಳ್ರಮ್ಮ ಹೇಳುತೀನಿ ನಾವು
ಸತ್ತವನೆ ಅಂಬಾನೆ ನೋಡೋ ಬದುಕವನೆ ಕಾಟಯ್ಯ ನೋಡೋ
ಬದುಕವನೆ ಅಂಬಾ ನೋಡೋ । ಸತ್ತವನೆ ಕಾಟಯ್ಯ ನೋಡೋ
ಕಣ್ಣಿಂದ ನೋಡೋರೆಲ್ಲೋ । ಕೊರಮರ ಕಣ್ಣಲ್ಲೇ ಇರುವುದೆಂತೋ
ಬಾಯಿಂದ ಹಾಡೋರೆಲ್ಲಾ ಅವರ ನಾಲಿಗೆ ಉದುರೋದಂತೋ
ಏಳು ಸಾವಿರ ಕಳ್ಳ ಕೊರಮರು ದಂಡಿನಾಗೊಮ್ಮ ಯಜಮಾನ
ಹೆಂಗಾದರೂ ನೋಡ ಈ ಬಿರುದು ನನ್ನ ಕೈಗೆ ಸಿಕ್ಕರಲ್ಲೋ
ನೋಡಣ್ಣ ನನಗವರು ದಕ್ಕಾರಲ್ಲೋ
ಎಳೆಯಾಗೆ ಬೆರೆದೆ ನಾನು ಕರಿನೂಡಲು ಇಳಿಸಿದೆ ನಾನು
ನೂಲಗ್ಗ ಇಳಿ ಬಿಡಬೇಕು । ನೋಡಣ್ಣ ಕಾಲು ಬಿರುದು ಕಚ್ಚದೆಲ್ಲೋ
ಕಾಲಿಡಿದು ಕಚ್ಚಾದೆಲ್ಲಾ ನೋಡಣ್ಣ ಗಂಡೆಂತ್ರ ಮುಟ್ಟದೆಲ್ಲೋ
ಜುಟ್ಟಾಂತ್ರ ಮುಟ್ಟಾದೆಲ್ಲೋ ಭ ಚಕ್ರದ ಗೊಡಗು
ದಗ್ಗಂತ ಕೆಡಬಾದಲ್ಲೋ । ನೂಲಗ್ಗ ಕಡಿಯುವುದಲ್ಲೋ
ಭೂಚಕ್ರದ ಗೊಡಬು ಭೂಕಾರಕ್ಕೂ ಬೀಳೂದೆಲ್ಲೋ
ಆ ಗೊಡಬು ನಮಗೆ ದಕ್ಕಾದೆಲ್ಲೋ । ನೂಲಗ್ಗ ಮಾಡೋರೆಲ್ಲೋ
ನೋಡಣ್ಣ ಚಕ್ಕಳವ ಬಿಡುವದೆಂತೋ । ನೋಡಣ್ಣ ಕಾಲಿಡಿದು ಕಚ್ಚದೆಲ್ಲೋ

ಚಿನ್ನದಂತ ಮಳೆಯಾಗಿ ರನ್ನದಂಥ ಹೊಳೆಯಾಗಿ
ಬಂದವರು ಕಳಕೊರಮರು ಕರಿ ಮಲೆಯ ಕಾಡಿಗೆ
ಅವಳದ ಗೊಡಗು ಅದರಗವರು ತೆಗೆದಾರಂತೋ
ದಿಟ್ಟಿಸಿ ನಿಟ್ಟುಸಿರು ಮೂರು ಮುಕ್ಕಾಲು ಗಳಿಗೆ ಒಳಗಾಗಿ ದಿಲ್ಲಿ ಪಟ್ಟಣದಿಂದ

ಕೆಂಗರು ಮಲೆಗೆ ಓಡಿ ಹೋಗೋರಂತೋ । ಅದರಗವರು
ಏಳು ಸಾಮಿ ಕಳ್ಳ ಕೊರಮರು ಏಳು ಗಂಟಿ ಯರಜನ್ನ ಹೇಳೋರಂತೋ
ಸಣ್ಣನವ ಮನೆಗೆ ಸ್ವಾಮಿ । ಸಣ್ಣ ಬೇಟೆಗೆ ಬಂದೆ ನಾವು
ಕತ್ತಲು ಕರಿ ಮಲೆಯಾಗೆ ನಮ್ಮ ದೊಡ್ಡ ಬೇಟಿ ಸಿಕ್ಕಿತು ಸ್ವಾಮಿ
ಮೂರು ಮುಕ್ಕಾಲು ಗಳಿಗೆ ಒಳಗಾಗಿ ಕೆಂಗರು ಮಲೆಯಿಂದ ಓಡೇರಂತೋ
ಹಾದಿಯ ಮುಚ್ಚು ಏರೆರಂತೋ ಹಾದಿಯ ಮುಚ್ಚು ಮಾಳಿಗೆ
ಮುಚ್ಚೋರಂತೋ । ಕಾಲಾಳು ಕವಿದೀತಂತೋ । ಕರಿಮಲೆಗೆ
ಕತ್ತಲು ಕವಿದೀತಂತೋ ।
ಕರಿಮಲೆಗೆ ನಡೆದಾರಂತೋ । ಕಿಡಿಗಣ್ಣನು ಚಿತ್ತಯ್ಯ ಬಲದಂಡಿಗೆ ನಿಂತರಂತೋ
ಎದ್ದಾಳೋ ಚಿತ್ತಯ್ಯ ಎದ್ದಾಳೋ ನನ್ನ ಕಿರುಬೆನ್ನು
ಯಾರೋ ಪರಸೀಮೆ ದೊರೆ ಮಗ ಕದ್ದು ಹೊತ್ತುಕೊಂಡು ಹೋದಾನಂತೋ
ನಾನಾಕೆನ ನೋಡಲಿಲ್ಲವಲ್ಲೋ । ಕರಿ ಮಲೆಯಾಗೆ
ಕಾವಲು ಕವಿದೈತಂತೋ ।
ರಾಮ ರಾಮ ಗುರುವೇ ಕಡಿಗಣ್ಣನು ಚಿತ್ತಯ್ಯ
ದರಣಿ ಮಂಡಲದುದ್ದಕ್ಕೂ ಬಿದ್ದಾಸಂತೋ
ಬಂಗಾರದ ಗೊಡಬು ಚಂದವಿಲ್ಲ ಮುಂದೆ
ಜಂಗಮಯ್ಯ ಜ್ಞಾಪನ ಮುಂದೆ ಬಂಗಾರದ ಗೊಡಬು
ಕರಿಮಲೆಗೆ ಇಲ್ಲಾವಂತೋ ।
ಮುತ್ತಿನ ಗೊಡಬು ಪಚ್ಚ ಚಿನ್ನದ ಗೊಡಬು
ಕರಿ ಮಲೆಗೆ ಸೋಲಿಲ್ಲವಂತೋ । ಅಂತೆಂಬಾ ಹೊತ್ತಿಗೆಲ್ಲೋ
ಜಪದ ಮುನಿ ಕಾಟಯ್ಯ ನರಸಿಂಹನ ತಲೆದಿಂಬಾಗಿ ನಿಂತನಂತೋ

ನಾಮದವನೆ ಎದ್ದೇಳೋ ನರಸಿಂಹನೇ ಎದ್ದೇಳೋ
ಕಿಡಿಗಣ್ಣನು ಚಿತ್ತಯ್ಯನ ಮಡದಿ ಮಾಳಮ್ಮನ
ಮಲಗಿಸಿಕೊಂಡದ್ದು ಯಾರೋ ಪರಶೀಮೆ ದೊರೆಮಗ
ಕದ್ದು ಹೊತ್ತುಕೊಂಡು ಹೋಗೆವನಂತೋ
ರಾಮ ರಾಮ ಗುರುವೆ ಸಕಲ ಸನ್ಯಾಸಿ । ಎರಿ ಜಂಗಮ
ಪಂಚೇಳು ಕಳಸರವನು । ನೀಲಿ ನಾಮದವನು
ಮುಂಚೇಳು ಉಗ್ರದವತಾರದ ಉರಿನಾಲಿಗೆಯ ನರಸಿಂಹ
ಎತ್ತಿ ಬೀಸಾಕಿ ಜಾಡಿಸಿ ಒಂದೇಟಿಗೆ ! ನರಲೋಕ ಸುರಲೋಕ
ದೇವಲೋಕ ಮೂರು ಲೋಕ ತಕ್ಕಡಿ ಇಕ್ಕಿ ತಾಸಿಡಿದು
ತೂಗೋನಂತೋ । ತಾಸಿಡಿದು ತೂಗಾನಂತೋ । ಬಂಗಾರದ

ಗೊಡಬು ದೊರೆಯದಲ್ಲೋ
ಅಂತೆಂಬಾ ಹೊತ್ತಿಗೆಲ್ಲೋ ಜಪದ ಮುನಿ ಕಾಟಯ್ಯ ಭೂಮಿ ಬಗೆ ಮಾಡಿ
ಭೂಪಾಲಕ್ಕೂ ತುಳಿದಾನಂತೋ । ಚಿಂತಾಮಣಿ ವಜ್ರ ತೆಗೆದು ನೋಡೋನಂತೋ
ರಾಮ ರಾಮ ಗುರುವೆ ನರಸಿಂಹನ ಪ್ರಾಣ ಹೋಗಾದು
ಐದು ನಿಮಿಷ ಇರುವುದಂತೋ ।
ಮೇಘದ ಮಳೆಯೇ ಬಲ್ಲ । ಭೂಮಿ ಕದರೇ ಬಲ್ಲ
ಹಿಂದೆ ಹೋದುದು ಬಲ್ಲ ಮುಂದೆ ಬರುವುದು ಬಲ್ಲ
ಕಾರಣಿಕ ಕಾಟಯ್ಯ ಕರಿಯೋಲೆ ಜಂಗಮ
ನರಲೋಕ ಸುರಲೋಕ ದೇವಲೋಕ

ಮೂರು ಲೋಕದ ಆಡಳಿತ ಅವನಂಗ್ಯೆಯಾಗೆ ಇರುವುದು
ಜಪದ ಮುನಿ ಕಾಟಯ್ಯ ಚಿಂತಾಮಣಿ ವಜ್ರ ಇಡಕೊಂಡು
ನರಸಿಂಹನ ಪ್ರಾಣಕೆ ತುಳಿದಾನಂತೋ । ಕಡು ಕೋಪ
ಎತ್ತಾನಲ್ಲೋ । ನರಸಿಂಹ ಇಳಿಕೋಪ ಮಾಡೋನಲ್ಲೋ
ನರಲೋಕ ಸುರಲೋಕ ದೇವಲೋಕ ಮೂರುಲೋಕ
ಆಡಳಿತ ಅವನ ಅಂಗ್ಯೆಯಾಗೆ ಇರುವುದು ನರಸಿಂಹನ
ಅವತಾರ ನೋಡಿ ಜಪದ ಮುನಿ ಕಾಟಯ್ಯ
ನರಸಿಂಹನ ಭೂಮಿಗೂ ರಾಪೋನಂತೋ
ಅಂತೆಂಬ ಹೊತ್ತಿನಲ್ಲೋ ಮೂರು ಹಳ್ಳನೇ ತೆಗೆದಾನಂತೋ
ಮೂರು ಕುರಿ ಪಿಚಕೆ ಮಂತ್ರಿಸಿ ನರಸಿಂಹನ
ಮುಖದ ಮೇಲೆ ಒಗೆದಾನಂತೋ ।
ಆವಂತರ ಇಳಿದಾನಲ್ಲೋ । ನೋಡಣ್ಣ ಮೈ ಬೂಗರಿ
ಇಳಿದಾನಂತೋ । ಇದಿರಾಗೆ ಇಬ್ಬರು ದೊರೆಗಳು ಕುಂತಾರಂತೋ

ನಾನೊಂದು ಮಾತಾಡಿದ್ದು ಇಂಥ ಕಡು ಕೋಪ ಬಂದಿತೆಲ್ಲೋ
ನಾನೊಬ್ಬ ಅಣ್ಣಾ ನೋಡಾ ನರಸಿಂಹ ನೀನೊಬ್ಬ ಬದಲೇನಯ್ಯ
ನಾನೊಂದು ಮಾತಾಡಿದ್ದು ನಿನಗೆ ಇಂಥ ಕಡುಕೋಪ ಬಂದಿತಯ್ಯ
ವಿದ್ಯೆಯ ಹೇಳೋನಲ್ಲೋ । ನರಸಿಂಹನಿಗೆ ಬುದ್ಧಿಯ ಹೇಳನಲ್ಲೋ
ಮುಂದೆ ಕಾಟಯ್ಯ ಬರುವನಲ್ಲೋ । ಹಿಂದೆ ನರಸಿಂಹ ಬರವನಂತೋ
ಕರಪಲ್ಯರನ ನೀವು ನುಂಗಿ ಪೆಂಟಾನೆ
ಐದು ನಿಮಿಷ ವಾಸನೆ ಮಾಡಬೇಕು ನೀವು
ಬೊಮ್ಮಯ್ಯನಿಗೆ ಹೇಳೋನಲ್ಲೋ ಕಬ್ಬಿಣದ ಕಾಗೆ

ಕೋಟಾನೆ ಕುಕ್ಕಕೆಂದು ಕಾಗೆಯ ನೇಮಿಸಿದನಲ್ಲೋ
ಕಿಡಿಗಣ್ಣನು ಚಿತ್ತಯ್ಯನಲ್ಲೋ ಐದು ನಿಮಿಷ ಕತ್ತೆಯ ಕಾಯೋನಲ್ಲೋ ।
ನರಸಿಂಹನಿಗೆ ಹೇಳೋನಲ್ಲೋ ಐದು ನಿಮಿಷ ಹಂದಿಯ ಕಾಯಬೇಕು ನೀನು
ನಾಲ್ವರಿಗೂ ಶ್ಯಾಕರಿ ನೇಮಿಸಿದನಲ್ಲೋ
ಕೇಳಯ್ಯ ಹೇಳುತೀನಿ ನಾನು ಕರಪಲ್ಯ ಕೇಳಮ್ಮ ಹೇಳುತೀನಿ ನಾನು
ಕಳ್ಳನಾ ಜಾಡು ಕಳ್ಳನೇ ಬಲ್ಲ ನೋಡೋ
ಭೂ ಚಕ್ರದ ಗೊಡಗು ನಿನಗೇನಾ ಗುರುತೇನಯ್ಯ
ನನಗೇನಾರ ಗೊತ್ತಾದರೆ ನುಂಗಿ ಗುಟಾರದಾಗೆ ವಾಸ
ಮಾಡುತ್ತಿರಲಿಲ್ಲ ಸ್ವಾಮಿ ಅಂಬೋನಂತೋ
ಬೊಮ್ಮಯ್ಯನ ಕರೆಸಿದನಲ್ಲೋ । ನೋಡಣ್ಣ
ಹಂತೀನೆ ಕೇಳೋನಲ್ಲೋ । ನನಗೇನಾದರೂ ಗೊತ್ತಾಗಿದ್ದರೆ
ಕಬ್ಬಿಣದ ಕಾಗೆ ವಾಸ ಮಾಡುತ್ತಿರಲಿಲ್ಲ ಸ್ವಾಮಿ
ಏನಯ್ಯ ಚಿತ್ತಯ್ಯ ಭೂ ಚಕ್ರದ ಗೊಡಬಿನ ಸುಳಿವೇನಾದ ಗೊತ್ತೇನಯ್ಯ

ನನಗೇನಾರ ಗೊತ್ತಿದರೆ ನಾನು ಕತ್ತೆ ಕಾಯುತ್ತಿರಲಿಲ್ಲ ಸ್ವಾಮಿ
ನರಸಿಂಹನ ಕೇಳನಲ್ಲೋ । ಭೂ ಚಕ್ರದ ಗೊಡಗಿನ ಸುಳುವಿ
ನಿನಗೇನಾದರೂ ಗುರುತಾಯಿತೇನೋ
ನನಗೇನಾದರೂ ಗೊತ್ತಾಗಿದ್ದರೆ ನಾನು ಹೇಲು ಹೆಮ್ಮಣ್ಣು
ತಿಂಬೋ ಊರು ತಿರುಗನ ಕಾಯುತ್ತಿರಲಿಲ್ಲ ಸ್ವಾಮಿ
ಅಡವಿ ಗುರುವಿಗೆ ಹೊರತಾಗಿ ಇನ್ಯಾರಿಗೂ ಗುರುತಿಲ್ಲ
ಸ್ವಾಮಿ ಅಂತಾ ನರಸಿಂಹ ಅಂಬೋನಂತೋ
ನಾನಾರೆ ಮುಖ ತೋರಿಸಬಾರದೆಂದು ಭೂಮಿಗೆ ಅಡಿ ಮಾಡಿ
ನಮ್ಮ ಜಪದ ಮುನಿ ಕಾಟಯ್ಯನಿಗೆ ಗುರುತೆ ಹೊರತು
ನಮ್ಮ ಭೂ ಚಕ್ರದ ಗೊಡಗು ಇನ್ಯಾರಿಗೂ ಗುರುತಿಲ್ಲ ಸ್ವಾಮಿ

ಬದ್ದಿನ ಕೊರಳಿಗೆ ರುದ್ರಾಕ್ಷಿ ಧರಿಸೇವನಲ್ಲೋ
ಗಬ್ಬನೆ ಸರ್ಪದ ಭೂ ಚಕ್ರದ ಗದ್ದಿಗೆ ಆಗಬೇಕು
ಸ್ವಾಮಿ ನಮಗೋ ।
ಕಡಲೆ ಕಾಳಂಗೆ ಕಡಲೆಯ ಧರಿಸೆ ಏನೋ
ವತಿಗೆಯಾಗಬೇಕು ಸ್ವಾಮಿ ನಮಗೋ
ಮೂಡಲ ಪಡುವಲಾ ದಿಕ್ಕಿನಾಗೆ ವಾರಿಗೆ ಬರಮ್ಮ
ಮಡಿಗೆವನ ಮೂಡಲ ಪಡುವಲ ನಡೆಯಾ

ತಿರುವಿಡಿದ ಉತ್ತರ ದಿಕ್ಕಿನಾಗೆ ವತ್ತಿಗೆ ಬರ್ಮ
ಮಡೆಗೆವನೆ ನೋಡ್ಲೋ ಮುತ್ತಿನಾ ಗೊಡಬು ಉತ್ತರಕೆ
ಕೊಂಬಾರು । ಪುತ್ತಮ್ಮ ನೀವು ಸತ್ತ ಮನೆ ಕಳ್ಳ ಕೊರಮರು
ಸೂಪುತ್ತಿನಾಗೆ ಬರಿದಾರ ಹೋಗೋರಲ್ಲೋ
ಅವಳಾದ ಗೊಡಗು ಅವಳ ಕೂರಿಡೋಗ । ವಾಲಿಮ್ಮನೇ
ಸತ್ತ ಮನೆಗಳು ಕಳ್ಳ ಕೊರಮರು ಸರಸತ್ತಿನ ನಿಂದೆ ಉರಿದಾರು
ಬಂದಂತ ಶಾಪವೆಲ್ಲ ತೀರ ತೀಗಲೆ ತಟ್ಟನೆ ತಗಲಾದಲ್ಲೋ
ಇಟ್ಟಂತ ಶಾಪವೆಲ್ಲ ತಟ್ಟನೆ ತಗಲದೆಲ್ಲೋ
ಕೆಟ್ಟ ಕೊರಮಗೆ ಪಟಿಗಾವ ಸುಡುವುದಲ್ಲೋ
ಇಟ್ಟಂತ ಶಾಪನೆ ತಿರುಗಳಿಗೆ ತಟ್ಟಂತೆ ತಟ್ಟೋದಲ್ಲೋ
ಶಾಪನೇ ತಟ್ರೋದೆಲ್ಲೋ ದೊರೆಗಳಿಗೆ ತಟ್ರಾನೆ ಹೊಳೆಯದಲ್ಲೋ
ನನ್ನ ಬೆನ್ನ ಪಟ್ಟಣವ ಸೇರಿತೆಲ್ಲೋ ।
ಪಟ್ಟಣವ ಸೇರಿತಂತೋ । ನನ್ನ ಬೆನ್ನೆ ಯಾರಮ್ಮ ಹೋಗರು ನೀವು
ಅಂತೆಂಬಾ ಹೊತ್ತಿನಲ್ಲೋ ನರಸಿಂಹ ಉತ್ತರವ ಕೊಚ್ಚನಂತೋ

ಹವಳಾದ ಗೊಡಗು ನೋಡ್ಲೋ । ನರಸಿಂಹ ಅಷ್ಟೊತ್ತಿಗೆ ಹೋಗುವಾಗ
ಅಂತೆಂಬಾ ಧೀರನೆ ಎಲ್ಲಿದ್ದೆಯೋನೋ । ಅಂತೆಂಬ ಶೂರ ಎಲ್ಲಿದ್ದನೋ
ನಮಗೆ ಸಿಕ್ಕದೆಲ್ಲೋ ಆ ಬಿರುದು ನಮಗೆ ದಕ್ಕಾದೆಲ್ಲೋ
ಕೇಳಯ್ಯ ಹೇಳುತೀನಿ ನಾನು ಕಿಡಿಗಣ್ಣನು ಚಿತ್ತಯ್ಯ
ನನ್ನ ಬೆನ್ನ ಕೇಳಮ್ಮ ಹೇಳುತೀನಿ ನಾನು
ಕಿಡಿಗಣ್ಣನು ಚಿತ್ತಯ್ಯ ಹೋದಾರೆ ನಮ್ಮ ಬಿರುದು ನಮಗೆ
ಸಿಕ್ಕೋದೆಲ್ಲೋ । ನಮ್ಮ ಬಿರುದು ನಮಗೆ ದಕ್ಕಾದೆಲ್ಲೋ
ಮೂರನಾ ದಿಕ್ಕಿಗೆ ಅಂಗಮತ ವಾಲೆಯ ಬರೆದಾನಂತೋ
ವಾಲೆಯ ಬರೆದಾನಲ್ಲೋ ವಲ್ಲಿ ಸೆರೆಗೀನ ಕಟ್ಟಿದನಲ್ಲೋ
ಮೂರನೆ ತಿಂಗಳ ಹೋದಂತ ಪತ್ರವ ಬರೆದಾನಂತೋ
ಪತ್ರವ ಬರೆದಾನಲ್ಲೋ ಬೊಕ್ಕಸಕ್ಕೆ ತುಂಬಿನಂತೋ
ಸೂರ್ಯನ ಚಂದ್ರನ ಮೇಲೆ ಭಾಷೆಯ ಮಾಡಿಸಿದನಂತೋ
ಅವರ ಮೇಲೆ ಪ್ರಮಾಣ ಮೂಡಿಸಿದನಂತೋ
ಈ ನಡುವೆ ವಾಲೆ ಬಿಚ್ಚಾಕಿಲ್ಲವೆಂದು
ಸೂರ್ಯ ಚಂದ್ರರಾಣೆಗೂ ಪ್ರಮಾಣ ಮಾಡಿಸಿದನಲ್ಲೋ
ಬಾಳೆಯ ಗಿಡಾಕೆ ಹೋದಾನಂತೋ । ಕಿಡಿಗಣ್ಣನು ಚಿತ್ತಯ್ಯ
ಅಲ್ಲಿಗೂ ಬಂದನಂತೋ

ನಿಂಬೆಯ ಗಿಡ ಕಲ್ಲಿಗೆ ಹೋದಾನಂತೋ । ಕಿಡಿಗಣ್ಣನು
ಚಿತ್ತಯ್ಯ ಅಲ್ಲಿಗೂ ಬಂದನಂತೋ
ಬರದಾ ಕಾಲವಲ್ಲ ಬೊಕ್ಕಸ ತುಂಬಬೇಕು
ಪಕ್ಷಿಮರಿಯಾಗಿ ಅಳಬೇಡ । ತಿರುಗಣಿಯಾಗಿ
ಬಟ್ಟೆ ಹೊಗೆಯುವಳಿಗೆ ಮಗನಾಗಬೇಕು ಅಂಬಾನಂತೋ
ಬರೆದಂತ ವಾಲೆಯ ಹೊಲ್ಲಿಯ ಸೆರಗಿನ ಕಟ್ಟೆ
ಹಲ್ಲಿ ಮರಿ ಹರಿದಂಗೆ ಹರಿದು ಬೆರುಗಣಿಯಾಗೆ
ಬಟ್ಟೆಯೊಗೆಯುವಳಿಗೆ ಮಗನಾಗಿ ಹುಟ್ಟಬೇಕು ಅಂಬಾನಂತೋ
ಲಕ್ಕಿ ಮಗನಾಗಲ್ಲನಲ್ಲೋ ನಾನು ಲಕ್ಕಿ ಮಗ ಆಗೋದಿಲ್ಲೋ
ನಮ್ಮ ಬಿರುದಾನೆ ನೋಡೋ । ಹಾಳಾಗಿ ಹೋಗೋದಲ್ಲೋ
ಲಕ್ಕಿ ಮಗನಾಗಲ್ಲನಲ್ಲೋ ನಮ್ಮಣ್ಣ ಲಕ್ಕಿ ಮಗನಾಗೋಲ್ಲವಲ್ಲೋ
ಆಗಬೇಕು ಅಣ್ಣ ನೀನು । ನಮ್ಮ ಬೆನ್ನ ನಮ್ಮ ಬಿರುದು ನಮಗೆ
ದಕ್ಕ ಬೇಕು । ನಮ್ಮಣ್ಣ ನಮ್ಮ ಬಿರುದು ನಮಗೆ ದಕ್ಕಬೇಕು
ಹೋಗುತೀನಿ ಅಣ್ಣ ನಾನು । ನನ್ನ ಅಣ್ಣ ಹೋಗುತೀನಿ ಸ್ವಾಮಿ ನಾನು
ಕೇಳಮ್ಮ ಹೇಳುತೀನಿ ನಾನು ನನ್ನ ಬೆನ್ನೆ ಕೇಳ್ರಮ್ಮ ಹೇಳುತಿ ನಾನು ।
ಕಾಯಿಲೆ ಬಂದಾಗ ದೇವತರು ಕತ್ತೆ ಕಾಲಿಗೆ ಕೆಡುವಿದರಂತೋ
ಹೋಗುತೀನಿ ಅಣ್ಣ ನಾನು । ನಮ್ಮಣ್ಣ ಹೋಗುತೀನಿ ಸ್ವಾಮಿ ನಾನು
ಅಣ್ಣಾ ತಮ್ಮನಲ್ಲೋ ಎಂದೆಮ್ಮ ನೋಡಾದು ನನ್ನ ಬೆನ್ನೆ ।
ಎಂದೆಮ್ಮ ಕೂಡಾದು ಅಂಬೋನಂತೋ
ತಾಯಿಲ್ಲ ತಂದಿಲ್ಲವಲ್ಲೋ । ಹಿಂಡಗಲಿ ನಿಂತನೆಂತೋ
ಕಿಡಿಗಣ್ಣನು ಚಿತ್ತಯ್ಯ ಹಿಂಡಾಗಲ ಹುಲಿ ನೆಗೆದಂತೆ ನೆಗೆದಾನಂತೋ
ಹಿಂದಾಕಿ ತಿರುಗಿದನಂತೋ । ಕಿಡಿಗಣ್ಣನು ಚಿತ್ತಯ್ಯ ದೂರಾಕೆ
ನೋಡೋನಂತೋ । ಹೋಗುತೀನಿ ಅಣ್ಣ ನಾನು ನಮ್ಮಣ್ಣ
ಹೋಗುತೀನಿ ಸ್ವಾಮಿ ನಾನು । ಬೊಮ್ಮಯ್ಯನ ಕೂಗೋನಲ್ಲೋ
ನನ್ನ ಬೆನ್ನೆ ನೀರೂನೆ ಕುಡಿಯೋ ನೀನು ।
ಮೇಗದೊಳಗಣ ಮಿಂಚಾಗಿ ಕಾವೇರಿ ಹೊಳೆಗೆ ನೆಗೆದಾನಂತೋ
ಅಂತೆಂಬಾ ಹೊತ್ತಿಗೆಲ್ಲೋ ಅಗಸರ ಲಕ್ಕಮ್ಮ ಬಟ್ಟೆ ಗಟ್ಟಿಸಿ ।
ನಡುನೀರಾಗಿ ಒಗೆದಾಳಂತೋ ।
ಎರೂನೆ ಕಟ್ಟಾಳೆಲ್ಲೋ ಲಕ್ಕಮ್ಮ ಹಬ್ಬದೂಟ ಉಂಡಾಳಲ್ಲೋ
ಹಬ್ಬದೂಟ ಉಂಡಾಳಲ್ಲೋ । ಲಕ್ಕಮ್ಮ ಮೂಡು ಮುಖವಾಗಿ ನಿಂತಾಳಲ್ಲೋ
ಮೂಡು ಮುಖವಾಗಿ ನಿಂತಾಳಲ್ಲೋ । ನೋಡಮ್ಮ ಬುಸಗುಟ್ಟಿ ಮಸಕೋಳಂತೋ
ಅಂತೆಂಬಾ ಹೊತ್ತಿಗೆಲ್ಲೋ ನನ್ನ ಬೆನ್ನ ಹೋಗಬೇಕು ಅಂಬಾಳಂತೋ

ಮೇಘದ ಮಳೆಯಾಗಿ ಮಿಂಚಾಗಿ ಹುಲ್ಲು ಹುಳುವಾಗಿ
ಕಾವೇರಿ ಹೊಳೆಗೆ ನಡೆದಾಳಂತೋ । ಘನ ಗುರುವೆ ನಡೆದಾರಂತೋ
ಅಂತೆಂಬಾ ಹೊತ್ತಿಗೆಲ್ಲೋ ಅಗಸರ ಲಕ್ಕಮ್ಮ ಮೂಡು ಮುಖವಾಗಿ ನಿಂತಾಳಂತೋ
ಲಕ್ಕಿಯ ಮಗನೇ ಕಾಣೋ ಹನುಮಂತ ದಂಡಿನಾಗೆ
ಹೋಗೆವನೆ ಕಾಣೋ । ದಂಡಿನಾಗೆ ಹೋಗೆವನೆ ನೋಡಣ್ಣ
ಚಿತ್ತಯ್ಯ ರಾಣಿಗೆ ಹೋಗೋನಂತೋ । ಹನುಮಂತನ
ಗುರು ಕರುಣಿ ಒದಗೋನಂತೋ
ಅಂತೆಂಬಾ ಹೊತ್ತಿಗೆಲ್ಲೋ ಘನ ಗುರುವೆ ಕಾವೇರಿ ಹೊಳೆಗೆ ನಡೆದಾಳಂತೋ
ಉಂಬುವಾಗ ಉಡುವಾಗ ಊರೆಲ್ಲ ನನ್ನ ಬಳಗ
ಅಡವಿಯಾಲೆ ಸೊಪ್ಪು ಮಡಿಲೊಡ್ಡಿ ಕುಯ್ಯುವಾಗ
ಅಡೆದಾ ಅಮ್ಮನ ಅರಿವಿಲ್ಲ ಅಂಬಾರಂತೋ ।
ಯಾರ ಹೊಟ್ಟೆಗೆ ಹುಟ್ಟಿದೋನೋ ಯಾರೆ ಎದೆ ಹಾಲು ಕುಡಿದೋನು
ಉಂಡಾಗ ಕೇಳೋರಂತೋ
ಯಾರೊಟ್ಟೆ ಹುಟ್ಟಿದೋನು ಯಾರೆದೆ ಹಾಲು ಕುಡಿದೋನೆಂಬುದು
ನಿನ್ನ ಕೈಲೊಂದು ಹೇಳುತೀನಿ ನಾನು
ಯಾರೊಟ್ಟಿಗೂ ಹುಟ್ಟಿಲ್ಲ ಯರೆದೆಯಾಲು ಕುಡಿದಿಲ್ಲ
ಯಾವಾಗ ತಿಂದಿದ್ರೋ । ದುಡ್ಡನೇ ಕೊಡಬೇಕೆಂದು ಅಲ್ಲಿಗೆ
ಕಳುವುಳಲೋ । ದಂಟಾನೆ ಕಿತ್ತರಲ್ಲೋ
ನೋಡಣ್ಣ ಹೊರೆಯನ್ನು ಕಟ್ಟಿದರಲ್ಲೋ । ಹೊರೆಯನ್ನೇ
ಕಟ್ಟಿದರೆಲ್ಲೋ । ಲಕ್ಕಮ್ಮನ ನೆತ್ತಿ ಮೇಲೆ ಹೊರೆಸಿದರಂತೋ
ಲಕ್ಕಮ್ಮ ತಟ್ಟನೆ ಕುಂತಾಳಂತೋ । ಎಲೆ ಅಡಿಕೆ ಹಾಕಿದಳಲ್ಲೋ
ತನ್ನ ಮನೆಗೆ ಬಂದಾಳಂತೋ । ಮುಖವನ್ನು ಕನ್ನಡಿಯಲ್ಲಿ ನೋಡಿದಳಂತೋ
ಅಂತೆಂಬಾ ಹೊತ್ತಿಗೆ ಎದುರಿಗೆ ಯಾರೋ ಬರುವರಲ್ಲೋ

ಊರು ಬಾಗಿಲು ಹಾಕೋರಲ್ಲೋ । ಬಾಗಿಲಿಗೆ
ಚಿಂತೋಲೆ ಹಾಕಿದರಂತೋ ।
ಅಂತೆಂಬಾ ಹೊತ್ತಿಗೆಲ್ಲೋ ಕಾಟಯ್ಯ ಸೋಗಾಗಿ ಬರುವನಲ್ಲೋ
ಇವತ್ತಿನಿಂದ ಹೊಸ ಮನುಷ್ಯ ಯಾರನ್ನ ಪಟ್ಟಣದೊಳಕ್ಕೆ
ಬಿಡಕೂಡದೆಂದು ತಿರುಗಣಿ ಊರ ಬಾಗಿಲಿಗೆ ಬೋರ್ಡನೆ ಬರೆದೈತಂತೋ
ಅತ್ತೆಂಬಾ ಹೊತ್ತಿಗೆಲ್ಲೋ ಕಿಡಿಗಣ್ಣನು ಚಿತ್ತಯ್ಯ ತಾನೂನು ಹೋದನಲ್ಲೋ
ಎರಗಂಟಿ ಎರಜನ್ನ ಅಂತೆಂಬ ದೊರೆಗಳು ಬರುವರಲ್ಲೋ
ಮುಚ್ಚು ಬಾಗಿಲು ಹಾಕೈತೆಲ್ಲೋ ಊರ ಬಾಗಿಲಿಗೆ
ಬೋಡಕಲ್ಲು ಹಾಕೈತಂತೋ । ಚಿತ್ತಯ್ಯನು ತಾನೂನು ಹೋಗನಲ್ಲೋ

ಎರಗಂಟಿ ಯರಜನ್ನ ದೊರೆಗಳನ ಹೆಸರಿಡಿದು ಕರೆಯೋನಂತೋ
ಹೆಸರಿಡಿದು ಕರೆಯೋನಲ್ಲೋ ತಾನೂನು ಏನು ದೊಡ್ಡ ಬೈ
ಏನು ಸಣ್ಣ ಬೈ ಎಂದು ಮಾತಾನಾ ಆಡಿಸಿದನಂತೋ
ದುಪ್ಪಡಿಯ ತೆಗೆಯನಲ್ಲೋ ಘನ ಗುರುವೆ ಗೇರೂನೆ ತೆಗೆಯೋನಲ್ಲೋ
ನಮ್ಮ ಇಟ್ಟು ತಿಂದಾರ ನೀವು ಹನುಮಣ್ಣ ನಮ್ಮ ಸೊಪ್ಪು ತಿಂದಾರು
ನೀತೂಕನೆ ಬೇಡವೋ ನಿಮಗೆ ಬಣ್ಣವೇ ಬೇಡನೆ ನಿಮಗೆ
ತೂಕ ಮಾಡಿ ಬಿಡುವರಲ್ಲೋ ನೋಡಣ್ಣ ಒಳಾಕೆ ಚಿಂತೂಲಿ ಮಾಡಿ ಬಿಡುವನಲ್ಲೋ
ಅಂತೆಂಬಾ ಹೊತ್ತಿಗೆಲ್ಲೋ ಕಿಡಿಗಣ್ಣನು ಚಿತ್ತಯ್ಯನೆ ಒಳಾಕೆ ಬಿಡುವಂತೋ
ಒಳಾಕೆ ಬಿಡುವರಲ್ಲೋ ಚಿತ್ತಯ್ಯ ಜಪದ ಮುನಿ ಕಾಟಯ್ಯ
ಬರದಂತೆ ವಾಲೆಯ ಬಿಚ್ಚೋನಲ್ಲೋ
ವಾಲೆಂತು ಬಿಚ್ಚೋರಲ್ಲೋ ಘನಗುರುವೆ ವಾಲೆ ಓದೋನಲ್ಲೋ
ಮತ್ತೋಗಿ ಚಿತ್ತಯ್ಯ ಹಿಂದಾಕೆ–ಬಿದ್ದಾನೆಯೋ
ಹಿಂದಾಕೆ ಬಿದ್ದಾನಂತೆ ಘನಗುರುವೆ ಚೇತರಿಸಿಕೊಂಡು ಎದ್ದಾನಂತೋ
ನಿನ್ನ ಪಾದದ ಮೇಗಳ ದೊಳೆ ನನ್ನ ಆಸೆ ಮೇಲಿದ್ದರೆ
ಡೆಲ್ಲಿ ಪಟ್ಟಣ ಮೂರು ತಿಂಗಳೊಳಗಾಗಿ ಗೆಲ್ಲುತೀನಿ ಗುರುವೆ
ಮೇಘದ ಮಳೆಯ ಬಲ್ಲೆ ಭೂಮಿ ತೂಕನೆ ಬಲ್ಲೆ
ಹಿಂದೆ ಆದುದ ಬಲ್ಲೆ ಮುಂದೆ ಆಗಾದು ಬಲ್ಲೆ
ಕರಣಿಕ ಕಾಟಯ್ಯ ಕರಿಯಾಲ ಜಂಗಮ
ನರಲೋಕ ಸುರಲೋಕ ದೇವಲೋಕ ಮೂರು
ಲೋಕದ ಆಡಳಿತ ನಿನ್ನ ಅಂಗೈಯಾಗಿರುವುದು
ಜಪದ ಮುನಿ ಕಾಟಯ್ಯ ನಿನ್ನ ಪಾದದ ಮೇಗಳ ದೃಷ್ಟಿ
ನನ್ನ ಅಣ್ಣೆ ಮೇಲೆ ಬಿದ್ದರೆ ತಿರುಣಿ ಪಟ್ಟಣ ಗೆಲುತೀನಿ
ಗುರುವೇ ನಿನ್ನ ಪಾದ ಅಂಬಾನಂತೋ

ವಾಲೆಯ ಓದೋನಲ್ಲೋ ನೋಡಣ್ಣ ವಾಲೇಗೇನು ಬರೆದಿರುವುದೋ
ಬಟ್ಟೆಗಣ್ಣನು ನೀನು ನೋಡು ನಿನ್ನ ಉರಿಗಣ್ಣು ಬಿಡಬೇಕಂತೋ
ಲಕ್ಕಮ್ಮನ ಕತ್ತೆ ಕಲ್ಕೇತ ಹೊಳೆಗಾಕಿ
ಉಬ್ಬೆಬಾನಿಯ ಮೂರು ತುಂಡಾಗಂಗೆ ಒದ್ದಾನಂತೋ
ಕತ್ತೆಯ ನೀ ನೋಡೋ ಘನಗುರುವೇ ರೆಂಡಿ ಮುರಿಯಂಗೆ ಒದ್ದಾನಂತೋ
ಎರಗಂಟೆ ಯರಜನ್ನ ಅಂತೆಂಬ ದೊರೆಗಳು ಮೂರು ದಿನ ಅಳಬೇಕೆಂದು ಬರೆದೈತಂತೋ
ಅತ್ತೆಂಬಾ ಹೊತ್ತಿಗೆಲ್ಲೋ ಲಕ್ಕಮ್ಮ ತಾನೂನು ಬರುವಳಂತೋ
ಕತ್ತೆಯ ನೋಡೋಳಲ್ಲೋ ಲಕ್ಕಮ್ಮ ಸೊಂಟಾನೆ ಮುರಿದೈತೆಲ್ಲೋ

ಬಟ್ಟೆಯ ನೋಡೋಳಲ್ಲೋ ಲಕ್ಕಮ್ಮ ಸುಟ್ಟು ಬೂದಿನೇ ಆಗೈತ್ತಲ್ಲೋ
ಉಬ್ಬೆ ಬಾನಿನೇ ನೋಡೋಳಲ್ಲೋ, ಲಕ್ಕಮ್ಮ ಬೀದಿ ಮೇಗಳ–
ಮಣ್ಣ ತೆಗೆದು ತಲೆ ಮೇಲೆ ಹುಯ್ಯಕೊಳ್ಳಂತೋ
ಅಂತೆಂಬಾ ಹೊತ್ತಿಗೆಲ್ಲೋ ಎರಗಂಟಿ ಎರಜನ್ನ ದೊರೆಗಳು ಬರುವರಂತೋ
ಹಿಟ್ಟನ್ನ ಯಾರು ಕೊಡಲಿಲ್ಲ ಬಟ್ಟೆ ಯಾರು ಕೊಡಲಿಲ್ಲ
ಕೂಲಿನ್ಯಾರು ಕೊಡಲಿಲ್ಲ ಅಂದಾನೆ ಕೇಳೋಳಂತೋ
ಹಿಟ್ಟನೆ ಕೊಟ್ಟುನೋ ಮಹಾಸ್ವಾಮಿ ಬಟ್ಟೆನಾ ಕೊಟ್ಟು ನೋಡೋ

ಎಲ್ಲರೂ ಬರುವರೆಲ್ಲೋ ಒಂದೇಟು ಬಡಿಯೋರಲ್ಲೋ
ಒಂದು ಬೈಗುಳ ಬಯ್ಯೋರಲ್ಲೋ ಲೆಕ್ಕವಿಲ್ಲದೆ ಒಂದೇಟು ಬಡಿಯೋರಲ್ಲೋ
ಬಂಗಾರದ ಕಾಲು ನೋಡೋ ಬರಮಣ್ಣ ತೆಗೆದುನೋ ಒಡೆದಾನಂತೋ
ಜ್ಞಾಪಾನ ಮಾಡೋಳಲ್ಲೋ । ನೋಡಣ್ಣ ಮೂಡುಗೆಂತೇರದಲ್ಲೋ
ದೊರೆಗಳು ಬರುವರಲ್ಲೋ ನೋಡಣ್ಣ ಸ್ವಾಮಿ ಪಟ್ಟಣ ಕೇಳಿದರಲ್ಲೋ
ಸ್ವಾಮಿ ಪಟ್ಟಣ ಕೇಳಿದರಲ್ಲೋ ನೋಡಣ್ಣ ತಾನೂನು ಹೋದಳಲ್ಲೋ
ನಿಜರೂಪ ಬಂದಾದೆಲ್ಲೋ । ಸ್ವಾಮಿ ನಿಜರೂಪು ಬಂದಾದಲ್ಲೋ
ಜಪದ ಮುನಿ ಕಾಟಯ್ಯನಲ್ಲೋ । ಬರೆದಂತಾ ವಾಲಿಯ ಓದೋನಂತೋ
ಕ್ವಾಮಟಿಗರ ಕೇರಿಗೆ ತಾನೂನು ಹೋಗಬೇಕಂತ ಓಲೆಗೆ ಹೇಳಿದ್ಯಲ್ಲೋ
ಘನಗುರುವೆ ಕ್ವಾಮಟಿಗರ ಕೇರಿಗೆ ಹೋಗೋನಲ್ಲೋ
ಕೇರಿಗೆ ಹೋಗೋನಲ್ಲೋ ಶೆಟ್ಟಿ ಮನೆಗೆ ಹೋಗೋನಂತೋ

ಉತ್ತರ ದೇಶ ನಮ್ಮದು ನನ್ನೆಸರು ಶಿಪಾಯಿ ಅಮಬೋನಂತೋ
ಕಳ್ಳನ್ನ ಹಿಡಿಯಾಕೆ ನಾನು ಶಿಪಾಯಿ ಅಂಬೋನಂತೋ
ಸಂಬಳಕ್ಕೆ ಇರಿಸಿಕೊತೀಯ ಎಂದು ಕೇಳನಲ್ಲೋ
ಇರಯ್ಯ ಅಂಬಾನಂತೋ ಶೆಟ್ಟಿ ನನ್ನ ಮನೆಯೊಳಗೆ ಇರಯ್ಯ ಎಂಬಾನಂತೋ
ಏಟಾದರೂ ನೀನು ಸತ್ತು ಬೆಳ್ಳುಳ್ಳಿ ಮಾರೋ ಶೆಟ್ಟಿ ಅಂದಾನೆ ಕೇಳೋನಂತೋ
ನಾನು ನೀವು ಒಳಗಿದ್ದರೆ ಕಳ್ಳರ ಗುರುತಾಗಲ್ಲ
ಮಾಳಿಗೆ ಮೇಲಕ್ಕೆ ಹೋಗುತೀನಿ ತಾನು ಅಂಬಾನಂತೋ
ಅಂತೆಂಬಾ ಹೊತ್ತಿಗೆಲ್ಲೋ ಘನ ಗುರುವೆ ಮಾಳಿಗೆ ಅತ್ತೋನಂತೋ
ಮಾಳಿಗೆ ಅತ್ತೋನಂತೋ ಘನಗುರುವೆ ಮಾಳಿಗೆ ಆತ್ತೋನಂತೋ
ಮಾಳಿಗೆ ಆತ್ತೋನಂತೋ । ಶೆಟ್ಟಿ ತಾನು ಮನೆಯೊಳಗೆ ಮಲಗಿದನಂತೋ
ಕಲ್ಲುಕರಗೋ ಹೊತ್ತು । ಬೆಲ್ಲ ಬೇಯೋ ಹೊತ್ತು
ಮಲವೆದ್ದು ಮೇಯೋ ಹೊತ್ತು । ಸರಹೊತ್ತಿಗೆ ಬಂದಿತಂತೋ
ಶೆಟ್ಟಿ ಶೆಟ್ಟಿ ಎಂದು ಘನಗುರುವೆ ಮಾತಾಡಿಸೋನಂತೋ

ಆ ಕಡೆಗೆ ಕೇರಿಗೆ ಗದ್ದಲ ಘನಲಾಗೈತೆ ಅಡಿಕೇನೆ ಕಡಿದಿದ್ದೀನಿ
ಅಂತೆಂಬ ಹೊತ್ತಿಗೆಲ್ಲೋ ಕಿಡಿಗಣ್ಣನು ಚಿತ್ತಯ್ಯ
ತಿರುಗಣಿ ಪಟ್ಟಣವ ಹೊಕ್ಕಾನಂತೋ
ಅರಮನೆಯಲಿ ಮಲಗಿದನಂತೋ । ಘನಗುರುವೆ
ಮೂರನೂ ಮಲಗಿದನಂತೋ । ಅಂತೆಂಬಾ ಹೊತ್ತಿಗೆಲ್ಲೋ
ಜಪದ ಮುನಿ ಕಾಟಯ್ಯ ಬರೆದಂತೆ ವಾಲೆಯ ಓದೋನಂತೋ
ವಾಲೇಯ ಓದೋನಂತೋ ಬಲಬಾಗದ ಮಂಚ ಅಂತಾ ಬರೆದಿತೋ
ಎರಗಂಟೆ ಎರಜನ್ನವಲ್ಲೋ ದೊರೆಗಳಿಗೆ
ಮಂಚಾದ ಕಾಲೂನು ಒಡೆಯಬೇಕೆಂತ ಬರ್ರೈದೈತೋ
ಕೊಟ್ಟಾರೆ ಕೋಡುವುದಂತೋ ಮರದಾಕಿ ಕಾಲು ನೋಡೋ
ಕೊಟ್ಟು ಕೊಡುವರೆಲ್ಲೋ ಬಂಗಾರದ ಕಾಲಿಗೆ ಹೊಡೆಯೋರಂತೋ
ಮೆರದಾನು ಕಾಲು ನೋಡೋ । ಅದನ್ನೇ ಕೊಟ್ಟನೆ ಕೊಡಬಹುದಂತೋ
ಕೊಟ್ಟರೆ ಕೊಟ್ಟು ಬಹುದಂತೋ  ಬಂಗಾರದ ಕಾಲು ಕಳವೇನೋ
ಮುಂಗೋಳಿ ಕೂಗೋದಲ್ಲೋ ನೋಡಣ್ಣ ಮೂಡುಗೆಂಪಾಗದಲ್ಲೋ
ಹೊತ್ತಾನೆ ಹುಟ್ಟೋದಲ್ಲೋ ಬೆಳಕರಿದು ಬರುವುದಂತೋ
ಬೆಳಕರಿದು ಬರುವುದಂತೋ ನೋಡಣ್ಣ ಬಂಗಾರದ ಕಾಲು ತಿರುವುದಂತೋ
ಅಂತೆಂಬಾ ಹೊತ್ತಿಗೆಲ್ಲೋ ನೋಡಣ್ಣ ದೊರೆಗಳಿಗೆ ಹೇಳೋರಂತೋ
ದೊರೆಗಳು ಡಂಗೂರ ಹೊಡೆಸಿದರಂತೋ ।
ಡಂಗೂರದ ಸುದ್ದಿ ಗೊಂದಲ ವಾಗೋದಂತೋ

ಅಂತೆಂಬಾ ಹೊತ್ತಿಗೆಲ್ಲೋ । ಸ್ವಾಮಿ ಜಪದ ಮುನಿ ಬರೆದಂತ
ಓಲೆಯ ಓದೋನಂತೋ । ಓಲೆಯ ಓದಾನಂತೋ ನೋಡಣ್ಣ
ವಾಲೇಗೇನು ಬರೆದಿರುವುದೋ ।
ಪದ್ಮಾವತಿ ಮನೆಗೆ ಹೋಗೋರಲ್ಲೋ । ಪದ್ಮಾವತಿ ಮನೆ ಮುಂದೆ
ಮೇಜುನೇ ಇರುವುದಂತೋ । ಯಾರೂನೇ ಹೋಗೋರಲ್ಲೋ
ಒಂದೇಟು ಹೊಡೆಯೋರಲ್ಲೋ । ಒಂದೇಟು ಒಡೆಯರಲ್ಲೋ ಒಬ್ಬರು ತಾನು
ಹೋಗೋರಂತೋ । ಒಂದೇಟು ಹೊಡೆಯರಂತೋ ನೋಡಣ್ಣ
ಘನಗುರುವೆ ಹೋಗೋರಂತೋ ಡಣ್, ಡಣ್ ಅಂತಾ ಬಡಿದಾರಂತೋ
ಅಂತೆಂಬಾ ಹೊತ್ತಿಗೆಲ್ಲೋ ಪದ್ಮಾವತಿ ನೋಡಾನೆ ನೋಡೋಳಲ್ಲೋ
ಎಲೆಯಾನೆ ಮಡಸೀದ್ದೀನಿ ಸುಣ್ಣೆಲ್ಲ ಅಂಬೋನಂತೋ
ಎಂಗಯ್ಯ ನಾನು ಹುಡುಕೋದು ಅಂದು ಶೆಟ್ಟಿನೇ ಕೇಳನಂತೋ
ಗೂಡೆಯ ಮೇಲೆ ಗೂಡೆ ಒಂಬತ್ತು ಗೂಡೆಯ ಹಾಕಿ
ಸಾಣೆಯ ಬೆರಳಾಗೆ ಶೆಟ್ಟಿ ಸುಣ್ಣವ ತೆಗೆಯೋ ನೀನು

ಗವಾಕ್ಷಗೆ ನೀನು ಕೊಡಯ್ಯ ಅಂಬಾನಂತೋ
ಅಂತೆಂಬಾ ಹೊತ್ತಿಗೆಲ್ಲೋ ।
ಗೂಡೆ ಮೇಲೆ ಗೂಡೆ ಒಂಬತ್ತು ಗೂಡೆ ಹಾಕೋನಂತೋ

ಸಾಣೆ ಬೆರಳಾಗಿ ಸುಣ್ಣವ ತೆಗೆದಾನಂತೋ
ಬಂದಂಳ ದಂಗಾಸೆ ಶೆಟ್ಟಿ ಕೈಯ್ಯಾನೆ ಕೊಡಿಸುವನಂತೋ
ಇನ್ನು ಬಂದಿಲ್ಲ ಅಂಬಾನಲ್ಲೋ । ಘನ ಗುರುವೆ ಬಂದಿಲ್ಲ ಅಂಬಾನಂತೋ
ಅಂತೆಂಬಾ ಹೊತ್ತಿಗೆಲಲ್ಲೋ ಶೆಟ್ಟಿ ಜಂಗಿಸಿ ಕೊಡುವನಲ್ಲೋ
ಜಂಗಿಸಿ ಕೊಡುವನಲ್ಲೋ । ಶೆಟ್ಟಿ ಕೈ ಕೀಲಾಗಿ ಜಡೆದಾನಲ್ಲೋ
ಕೀಲಿಗೆ ಜಡಿದಾನಲ್ಲೋ ಘನಗುರುವೆ ಮಾಡಿಗೆ ಇಳಿದಾನಲ್ಲೋ
ಮಾಳಿಗೆ ಇಳಿದಾನಲ್ಲೋ ಜಪದ ಮುನಿ ಕಾಟಯ್ಯ ಬರೆದಂತೆ ವಾಲೆಯ ಓದಾನಂತೋ

ವಾಲೆಯ ಓದೋನಲ್ಲೋ ಪದ್ಮಾವತಿ ಮನೆಗೆ ಹೋಗಬೇಕೆಂದ
ಬರೆದೈತೋ । ಪದ್ಮಾವತಿ ಮನೆಗೆ ಘನಗುರುವೆ ನಡೆದಾನಂತೋ
ನೆಲ ಕರಣಿ ಮಾಡೋಳಲ್ಲೋ ಪದ್ಮಾವತಿ ನಾಲ್ಕು ಮೂಲೆಗೆ
ನಾಲ್ಕು ತಾಂದಿಗೆ ಹಚ್ಚೋಳಂತೋ । ತಾಂದಿಗೆ ಹಚ್ಚೋಳಲ್ಲೋ
ಪದ್ಮಾವತಿ ಬಂಗಾರದ ಸೀರೆ ಉಟ್ಟಳಲ್ಲೋ ತಲೆಯಾನೆ ಮೇಲೆ
ನೋಡೋ ಪದ್ಮಾವತಿ ಮುಸುಕನೇ ಹಾಕೋಳಂತೋ
ಬಂಗಾರದ ತಂಬಿಗೆಯಲ್ಲೋ ಪದ್ಮಾವತಿ ನೀರಾನೆ ಹಾಕಿದಾಳಲ್ಲೋ
ನೀರನೆ ಹಿಡಿಸಿಲಾಳೆಲ್ಲೋ । ಬಾಕಲಾಗ ಪಂಚಾರದಗೆ ನಿಂತಾಳಂತೋ
ಬಾಕಲಿಗೆ ನಿಂತಾಳಂತೋ । ಘನಗುರುವೆ ತಾನೂನು ಹೋಗನಂತೋ

ಅಂತೆಂಬಾ ಹೊತ್ತಿಗೆಲ್ಲೋ । ಕಿಡಿಗಣ್ಣನು ಚಿತ್ತಯ್ಯಗೆ ನಿಜರೂಪ ಬರುವುದಲ್ಲೋ
ತಳತಳನೆ ಮಿಂಚೋನಂತೋ । ಘನಗುರುವೆ ದಿಗಿದಿಗಿನೆ ಉರಿಯಾನಲ್ಲೋ
ಆಚಾನೆ ಬರುವನಲ್ಲೋ ಪದ್ಮಾವತಿಗೆ ಪ್ರೇಮಾನೆ ಬರುವುದಲ್ಲೋ
ಪ್ರೇಮಾನೆ ಬರುವುದಲ್ಲೋ ಘನಗುರುವೆ ನೀರನ್ನೆ ಕೊಡವಳಂತೋ
ಈತ ನೀನು ಎಲ್ಲಿಗೆ ಹೋಗಿದ್ದೆ ಅಂಬಾಳಂತೋ
ನನ್ನ ವಾರಿಗೆ ಹುಡುಗರು ಗೋಲಿ ಗೆಜ್ಜಿಗೆ ಆಡೋರು
ನಾನು ನೋಡು ಗೋಲಿ ಗೆಜ್ಜಿಗ ಆಡೋಕೆ ಹೋಗಿದ್ದು
ಲೇಟಾಯಿತು ಅಂಬಾನಂತೋ

ಹೊತ್ತನೆ ಮುಳುಕಿದ ಮೇಲೆ ಹನ್ನೆರಡು ಗಂಟೆ ತುಂಬಿದ ಮೇಲೆ
ಊಟ ನಾನು ಮಾಡೋಲ್ಲ ಅಂಬಾನಂತೋ

ಅಂತೆಂಬಾ ಹೊತ್ತಿಗೆಲ್ಲೋ ಪದ್ಮಾವತಿ ಲೇಪದ ದಿಂಬಾನೆ ಹಾಕೋಳಲ್ಲೋ
ಜಾಡಿಯ ಹಾಕೋಳಲ್ಲೋ ಪದ್ಮಾವತಿ ಜಮಕಾನೆ ಹಾಕಿದಳಂತೋ
ತಲೆದಿಂಬು ಹಾಕಿದಳಂತೋ ನಾವು ಮಲಗೋನ ಅಂಬಾಳಂತೋ
ಅಂತೆಂಬಾ ಹೊತ್ತಿಗೆಲ್ಲೋ ಘನಗುರುವೆ ತಾನೂನು ಮಲಗಿದನಂತೋ
ತಾನೂನು ಮಲಗೋನಲ್ಲೋ ಪದ್ಮಾವತಿ ಹತ್ತಿರಕೆ ಬರುವವನಲ್ಲೋ
ಹತ್ತಿರಕೆ ಬರುವವನಲ್ಲೋನ ರೋಮಗಳು ದಬ್ಬಾಳ ಆಗೋದಲ್ಲೋ
ದಬ್ಬಾಳ ಆಗೋವಲ್ಲೋ ಘನಗುರುವೆ ಸಿಟ್ಟನೇ ಬರುವುದಲ್ಲೋ
ಪದ್ಮಾವತಿ ಹೆಣ್ಣಲ್ಲ ನೀನು ಗಿದ್ದಿನಿ ಜಾತಿ ನಿಜ ಅಂಬಾನಂತೋ
ಪದ್ಮಾವತಿ ಹೆಣ್ಣೆ ಆಗಿದ್ದರೆ ಎರಡಂಕುಳದ ಕಳೆ ಮಲಗುತ್ತಿದೆ
ಅಂತೆಂಬಾ ಹೊತ್ತಿಗೆಲ್ಲೋ ಪದ್ಮಾವತಿ ಎರಡು ಅಂಕ ಅಳಕಳೆ ಮಲಗಳಂತೋ
ಈ ಕಡೆ ಮಲಗೋಳಂತೋ ನಿನ್ನ ಕೈ ಹಸ್ತವೇ ಹಾಸಿಕೊಂಬೆ
ನಿನ್ನ ಮಂಡೆ ಮೇಲೆ ನಿನ್ನ ಕೈ ಹಸ್ತದ ಮೇಲೆ ಕೈ ಹಾಕಿ ತೋಳಾನೆ ಕೊಡುವನಂತೋ
ಕೈಯನ ತೆಗೆಯೋಳಂತೋ । ಕೈಯನೆ ತೆಗೆಯಲ್ಲೋ
ಮೋಟು ಕೈಯ ಕುಡಿ ಸೋಗಂತೆ ಸ್ವಾಮಿ ಮಾಯಾನೆ ಆಗೋದಂತೋ
ಮುಂಗೋಳ ಕೂಗೋದಲ್ಲೋ । ನೋಡಣ್ಣ ಮೂಡು ಕೆಂಪೇರಿತಲ್ಲೋ
ಬೆಳ್ಳನೇ ಹುಟ್ಟಾದೆಲ್ಲೋ । ನೋಡಣ್ಣ ಬೆಳಕರಿದು ಬರುವುದಲ್ಲೋ
ಅಂತೆಂಬಾ ಹೊತ್ತಿಗೆಲ್ಲೋ । ಎರಗಂಟಿ ಎರಜನ್ನ ದೊರೆಗಳು ಬರುವರಲ್ಲೋ
ದೊರೆಗಳು ಬರುವರಲ್ಲೋ । ಪದ್ಮಾವತಿ ತಾನೂನು ಮಲಗೋಳಂತೋ
ಎಂಟಾನು ಗಂಟೆ ತಾನೂನು ತುಂಬುದಂತೋ
ಪದ್ಮಾವತಿ ಚಿಲಕನೆ ತೆಗೆದಾಳಂತೋ
ಕಳ್ಳನ್ನ ಹಿಡಿದು ನೀನು ಎರಗಂಟ ಯರಜನ್ನ ದೊರೆಗಳು ಕೇಳಿದರಂತೋ
ಕೇಳಿರೇ ನನ್ನ ಸ್ವಾಮಿ ನಾನೇನು ಹೇಳುತೀನಿ ಒದ್ದೊನೆ ನೋಡಿರೋ
ಹಿಡಿಕೊಂಡ ಕೈ ಬಿಡಲಿಲ್ಲ ಕೈ ಸರಕೊಂಡ ಹೋದಾ ಸ್ವಾಮಿ
ಅಂತೆಂಬಾ ಹೊತ್ತಿನಲ್ಲೋ ಎರಗಂಟಿ ಯೆರಜನ್ನ ದೊರೆಗಳು ಆಳೂನೆ ಕರೆಸಿದರಲ್ಲೋ
ಆಳೂನೆ ಕರೆಸಿದರಲ್ಲೋ ಕೇರಿ ಕೇರಿ ಹುಡುಕಿಸಿದನಲ್ಲೋ
ಎಳಕಂಡು ಬನ್ನಿರಿ ಎಂದು ಹೇಳೋನಲ್ಲೋ
ಹುಡುಕುತ್ತಾ ಆಳುಗಳು ಕ್ವಾಮಟಿಗರ ಕೇರಿಗೆ ಹೋಗೋನಲ್ಲೋ
ಶೆಟ್ಟಿಯ ನೋಡೋರಂತೋ । ಮೋಟು ಕೈಯ ಶೆಟ್ಟಿಯ ನೋಡೋರಂತೋ
ಎಳಕಂಡು ಬರುವರೆಲ್ಲೋ । ಎರಗಂಟಿ ಯರಜನ್ನ ದೊರೆಗಳು ಬಡಿದಾನೆ ನೋಡುವರಂತೋ

ಬಡವರ ಬಗ್ಗರ ಬಡಿಕೊಂಡು ತಿಂಬಾ ನೀನೊಬ್ಬ
ಸಾಹುಕಾರನೇನಲೇ ದಗಡಿ ಮಗನೆ ಶೆಟ್ಟಿ ಅಂಬಾನಂತೋ

ಅಂತೆಂಬಾ ಹೊತ್ತಿಗೆಲ್ಲೋ ಶೆಟ್ಟಿ ಕೀಲೀಗೆ ಒಡೆದಾರಂತೋ
ಕೀಲಿಗೆ ಒಡೆದಾರಂತೋ । ಬಡರ ಕೈಲಿ ।
ಶೆಟ್ಟಿಯ ಹೊಳೆಗೆ ದಬ್ಬಿಸಿದರಂತೋ

ಮೀನು ಮೊಸಣೆ ಎಂಡ್ರಕಾಯಿ ಕೇರೆ ಹಾಕಿಕೊಂಡು
ಚಪ್ಪಾಳೆ ಹೊಡೆಕೊಂಡು ತಿಂಬಾವಂತೋ
ಮೂರುದಿನ ಮಲಗಿದನಲ್ಲೋ ಘನಗುರುವೆ ಮೂರುದಿನ ಮಲಗಿದನಲ್ಲೋ
ಅಂತೆಂಬಾ ಹೊತ್ತಿಗೆಲ್ಲೋ ಜಪದ ಮುನಿ ಕಾಟಯ್ಯ ಬರೆದಂತೆ
ಒಲೆಯ ತೆಗೆದಾನಂತೋ । ವಾಲೆಯ ತೆಗೆದಾನಲ್ಲೋ ವಾಲೆಗೇನು ಬರೆದಿರುವುದೋ
ಇರಗಂಟಿ ಯರಜನ್ನ ಅಂತೆಂಬ ದೊರೆಗಳು ಮನೆಯೊಳಗೆ
ಇನ್ನೂ ಒಂದು ಕಾಲು ಕಡೀಬೇಕಂತ ಬರೆದಂತೋ
ಕೊಟ್ಟನೇ ಕೊಡುವನಲ್ಲೋ ಬಂಗಾರದ ಕಾಲು ಕಳವನೇ ಮಾಡಿದನಯ್ಯ
ಮುಂಗೋಳಿ ಕೂಗೋದಲ್ಲೋ ನೋಡಣ್ಣ ಮೂಡು ಕೆಂಪೇರಿದವೆಲ್ಲೋ ।
ಹೊತ್ತುಟ್ಟಿ ಬರುವುದಲ್ಲೋ ನೋಡಣ್ಣ ಮಂಪರಿದು ಬರುವುದಲ್ಲೋ
ಅಂತೆಂಬಾ ಹೊತ್ತಿನಲ್ಲೋ ನೆಲ ಮುಸರಿ ಎಗೆಯುವನಲ್ಲೋ
ನೆಲ ಮುಸರಿ ತೆಗೆಯುವನಲ್ಲೋ ಬಂಗಾರದ ಕಾಲನು ಕೇಳುವರಲ್ಲೋ
ಕಾಲನೇ ಕಳೆವರಲ್ಲೋ ನೋಡಣ್ಣ ದೊರೆಗಳನ್ನು ಹೆಸರಂತೋ
ಶೆಟ್ಟಿಯ ಮುಂದೆ ನೀರು ಕುಡಿದನಲ್ಲೋ
ನೀರಾನೆ ಕುಡಿಯಾಕೆ ಕಳ್ಳನೆ ಬಂದಿರುವನು ಎಂದು
ಕಾವಲಿಗೆ ತಳವಾರನ ಇಟ್ಟನಂತೋ
ಕಾವಲಿಗೆ ಇಟ್ಟರೆಲ್ಲೋ ನೋಡಣ್ಣ ಕಳ್ಳ ಕೊರಮನ ಹಿಡಿಸಿದರಲ್ಲೋ
ಕಳ್ಳ ಗುಮಾರನ ಹಿಡಿಸಿದರೆಲ್ಲೋ ಕಳ್ಳನೆ ಸಿಕ್ಕದರೆ ಅಳ್ಳಾಕೆ ಹಾಕೋ ನೀನು

ಅಳ್ಳಾಕೆ ಹಾಕೋ ನೀನು ಕಳ್ಳ ಸಿಗದಿದ್ದರೆ ನಾವು ಊರೆಲ್ಲ ಸೇರಿ
ನಿನ್ನ ಕೊಳ್ಳಕ್ಕೆ ಹಾಕುತೀವಿ ಎಂದು ಮಾತಾನೆ ಆಡಿದರಂತೋ
ಅಂತೆಂಬಾ ಹೊತ್ತಿಗೆ ಸ್ವಾಮಿ ಜಪದ ಮುನಿ ಕಾಟಯ್ಯ ಬರೆದಂತೆ
ವಾಲೆಯ ಓದೋನಂತೋ । ವಾಲೆ ಓದೋನಂತೋ
ಬಬ್ಬಲಿ ದಂಡಿಗೆ ಹೋಗಬೇಕಂತ ಬರೆದೈತೋ
ಹೋದನು ಬಂದನು ನನ್ನಳಿಯ ಯಾತಕೆ ಬಂದೆ ಅಯ್ಯ
ಇಲ್ಲಿಗೆ ಯಾತಕೆ ಬಂದೆಯ್ಯ ಮುಂದೆ ನಿಮ್ಮನ್ನ ಅಳುತಾಳೆಂದೋ
ನಿಮ್ಮ ಅಕ್ಕ ಅಳುತಾಳೆಂದೋ ನನ್ನ ಕುಂಟೆ ಹೇಳಿದರಲ್ಲೋ
ಹಿಂದಾಕೆ ಬಂದೆ ನಾನು ಅಂತೆಂದು ಹೇಳೋನಲ್ಲೋ

ಊಟವ ಮಾಡೋ ನೀನು ಅಂಬೋನಂತೋ
ಹನ್ನೆರಡು ಗಂಟೆ ತುಂಬಿದ ಮ್ಯಾಲೆ ನಾನು ತಿಂಬೋದಿಲ್ಲ
ಅನ್ನನ್ನೇ ತಿಂಬಾದಿಲ್ಲ ನಾನು ನೀರನ್ನೆ ಕುಡಿಯೋದಿಲ್ಲ
ನಾನು ಬಲೆಯಾನೆ ಹೂಡೋದಿಲ್ಲ ಅಂದಾನೆ ಹೇಳೋನಲ್ಲೋ

ನೀರಾನೆ ಎರೆಯಾರಲ್ಲೋ ನೋಡಣ್ಣ ದಟ್ಟಿಯ ಉಡಿಸಾರಲ್ಲೋ ।
ಚಿಕ್ಕ ಮನೆಗೆ ಬಿಡುವರಲ್ಲೋ । ಚಿಕ್ಕ ಮನೆಗೆ ಬಿಡೋರಲ್ಲೋ
ನೋಡಣ್ಣ ಮೈಕೈಯ ತಟ್ಟೋರಲ್ಲೋ
ಕತ್ತಲಾಗೆ ಕಾಳಿನ ಕೈಯ ನೋಡೋ
ನಿಮ್ಮಪ್ಪ ನಿಮ್ಮನ್ನ, ತಲೆ ಹಿಡಿದು ತಿಂಬಾನಂತೋ
ಈ ಮಾತು ಆಡಿದಾನಂತೋ
ಅಂತೆಂಬಾ ಹೊತ್ತಿನಲ್ಲೋ, ಬೊಬ್ಬುಲಿ ಪಾಳಾದ ಮರಕೇನ ನಡೆದಾರಂತೆ
ನೆಟ್ಟನೆ ನಡುವೆಯಲ್ಲಿ ಪಾಳಾದ ಮರವನೆ ಇರುವುದಲ್ಲೋ
ಅಂತೆಂಬಾ ಹೊತ್ತಿನಲ್ಲೋ ನೀನುಯಾರೆಂದು ಕೇಳೋನಲ್ಲೋ
ಏನು ಮಾವ, ಅಂಬಾನಂತೋ । ನನ್ನಳಿಯ ಯಾಕೆ ಬಂದೆ, ಅಂಬಾನಂತೋ
ಬಿಡಯ್ಯ, ಮಾವಯ್ಯ ಈ ಹೊತ್ತು ಉಂಬಾದು ನಾಳಿನ ಎಂಬಾನ ಅಂಬಾನಂತೆ
ಈ ಹೊತ್ತು ಮಲಗೋದು ನಾಳಿಕೆ ಮಲಗೋನ
ಈ ಸಂಜೆಯಲಿ ಬಂದವನು ಕಳ್ಳನೇ ಸಿಗಲಿಲ್ಲವಲ್ಲೋ
ಕಳ್ಳನೂ ಸಿಕ್ಕಿದನು ಅಂಬಾನು ನಮಗೆ ಗುರುತೇನೆ ಇಲ್ಲ ಅಂಬಾನಂತೋ
ಕಿಡಿಗಣ್ಣನು ಚಿತ್ತಯ್ಯ ಪಾತಾಳಕೆ ಕೈಯನ್ನೆ ಇಡಿದಾನಂತೋ
ಕೈಯನೇ ಇಡುವನಲ್ಲೋ ಬಬ್ಬುಲಿ ನೋಡಣ್ಣ ಪಾಳವೆ ಹಾಕೋನಂತೋ
ಕಲಿತುಕೊಂಡೆ ಮಾವ ನಾನು ಘನಗುರುವೆ ಅಂಬಾನಂತೋ

ಚಿತ್ತಯ್ಯನು ಭೂಪಾತಕೆ ಕೈಯ್ಯಾನೆ ಇಕ್ಕಾನಲ್ಲೋ
ಕೈಯಾನೆ ಇಡುವನಲ್ಲೋ ಬಬ್ಬುಲಿ ನೋಡಣ್ಣ ಪಾತಾಳಕೆ ಹಾಕೋನಲ್ಲೋ
ಚೇಡಿಸಿದ್ದಾನಲ್ಲೋ । ನನ್ನಳಿಯ ಮನೆಗೆ ಹೋಗಿ ಉಳಿ ಬಾಸಿ ತಾರೋ ನೀನು
ಅಂತೆಂಬಾ ಹೊತ್ತಿನಲ್ಲಿ ಜಪದ ಮುನಿ ಬರೆದಂತ ವಾಲೆಯ ಬಿಚ್ಚೋನಂತೋ
ವಾಲೆಯ ಬಿಚ್ಚೋನಲ್ಲೋ । ಘನಗುರುವೆ ವಾಲೆಯ ಓದೋನಂತೋ
ಬಬ್ಬುಲಿ ಮನೆಯಾಗೆ ಹಾರ ಬಂಡಾರ ತಪ್ಪಲೆ ಹೊನ್ನನೆ ಅಯಿತೆ
ಒಡೆಸಬೇಕು ಅಂಬ್ತಾ ಬರೆದೈತೋ
ಅಂತೆಂಬಾ ಹೊತ್ತಿನಲಿ ಘನಗುರುವೆ ಬೊಬ್ಬಿಲಿ ಮನೆಗೆ ನಡೆಯನಲ್ಲೋ
ಮನೆಗೆ ನಡೆಯಾನಲ್ಲೋ ಅತ್ತೆಮ್ಮ ಅತ್ತೆಮ್ಮ ಎಂದ ಮಾತ ಆಡೋನಲ್ಲೋ

ಮಾವಯ್ಯ ಹೇಳಿದ ಅರೆ ಬಂಡಾರ ತಪ್ಪಲಿ ಹೊನ್ನನೇ ಇರುವುದಂತೋ
ಮಾವಯ್ಯ ಕೇಳಿದ ಎಂದು ಬೊಬ್ಬಲಿ ಹೆಂಡತಿ ಕೂಟ ಹೇಳಿದ ನೋಡ
ಹೊಟ್ಟೆ ಬಟ್ಟೆ ಕಟ್ಟಿದ ನಾನಂಗೆ ಕೊಡಣೆಂದು ಹಿತಾಕಾರನೆಂದು
ಕೊಡಾನೆ ಕೊಡಾನೆ ಅಂಬಾಳೆಯೋ । ಅಂತೆಂಬಾ ಹೊತ್ತಿಗೆಲ್ಲೋ
ಬೊಬ್ಬಲಿ ಹುಳಿ ಬಾಸಿ ಅಂಬಾನಂತೋ
ನಿಮ್ಮಪ್ಪನ ನೀನು ಕೆಯ್ಯಾ ಕೂಡೆ ಬೊಬ್ಬುಲಿ ಎಂದು ಹೇಳೋಲಂತೋ
ಅಂತಂಬಾ ಹೊತ್ತಿಗೆಲ್ಲೋ ಈರಮ್ಮ ಆರೆಯ ತಂದಳಂತೋ
ಆರೆಯೂ ತರುವಳಲ್ಲೋ ನೋಡಣ್ಣ ಅರೆ ಬಂಡೆ ಒಡೆದಾಳಲ್ಲೋ
ಒಂದು ತಪ್ಪಲಿ ಹೊನ್ನು ತಾನೂನು ತೆಗೆದೋಳಲ್ಲೋ
ತಾನೂನು ತೆಗೆದಾಳಲ್ಲೋ ಕಿಡಿಗಣ್ಣನು ಚಿತ್ತಯ್ಯನ ಕೈಗೆ ಕೊಡುವಳಂತೋ
ಘನಗುರುವೆ ಮಾಯಾನೆ ಆಗೋನಂತೋ ಅಂತೆಂಬ ಹೊತ್ತಿಗೆ
ಬೊಬ್ಬುಲಿ ವದರಾಡಿ ಕಣ್ಣನು ಮುಚ್ಚೋದೆಲ್ಲೋ
ಕಣ್ಣನೇ ಮುಚ್ಚಾದೆಲ್ಲೋ ನೋಡಣ್ಣ ಬೆಳ್ಳನೇ ಹುಟ್ಟೋದಲ್ಲೋ
ಬೆಳ್ಳನೇ ಹುಟ್ಟೋದೆಲ್ಲೋ ನೋಡಣ್ಣ ಹೊತ್ತಾನೆ ಹುಟ್ಟಾದೆಲ್ಲೋ
ಎರಗಂಟಿ ಎರಜನ್ನ ದೊರೆಗಳು ಇದ್ದಬದ್ದವರ ಕರೆಯೋರೆಲ್ಲೋ

ಪಾಳಿಯಾಕೆ ಬರುವುದಲ್ಲೋ ಬೊಬ್ಬಲಿ ಕಣ್ಣನೇ ಮುಚ್ಚೋದಲ್ಲೋ
ಕಣ್ಣನೇ ಮುಚ್ಚೋದಲ್ಲೋ ನೋಡಣ್ಣ ಅವರವರೆ ಮಾತಾಡೋರಲ್ಲೋ
ಹಾಕುತೀನಿ ಅಂಬುದಕೆ ಅವರ ಕೊಟ್ಟಾನು ಸಮ ಗಂಟು
ಬೊಬ್ಬಲಿ ಅವನೆ ಹಾಕಿಕೊಂಡವನೆ ಅಂಬೋರಂತೋ
ಅಂತೆಂಬಾ ಹೊತ್ತಿಗೆಲ್ಲೋ ನೋಡಣ್ಣ ಕ್ವಾಣದ ಮರ
ಕಾವೇರಿ ಹೊಳೆಗೇನೆ ಹಾಕೋರಂತೋ
ಮೀನು ಮೊಸಳೆ ಎಂಡರಕಾಯಿ ಕ್ಯಾಕೆ ಹಾಕಿಕೊಂಡು
ಚಪ್ಪಾಳೆ ಹೊಡೆಕೊಂಡು ತಾನೂನು ತಿಂಬಾವಂತೋ
ಅಂತೆಂಬಾ ಹೊತ್ತಿಗೆಲ್ಲೋ ಘನಗುರುವು ಮೂರು ದಿವಸ ಮಲಗಿದನಂತೋ
ಮೂರು ದಿನ ಮಲಗಿದನಂತೋ ನೋಡಣ್ಣ ಜಪದ ಮುನಿ ಬರೆದಂತೆ ವಾಲೆಯ
ಓದೋನಂತೋ
ಏಳು ಸಾವಿರ ಕಳ್ಳ ಕೊರಮರು ದಂಡಿಗೆ ಹೋಗಬೇಕೆಂದು
ಓಲೇಗೆ ಬರೆದಿದೆ ಅಂಬಾನಂತೋ
ಅಂತೆಂಬಾ ಹೊತ್ತಿಗೆಲ್ಲೋ ಘನಗುರುವೆ ತಾನೂನೆ ನಡೆದಾರಂತೋ
ತಾನೂನು ನಡೆದಾರಲ್ಲೋ ಏಳು ಸಾವಿರ ಕಳ್ಳಕೊರಮರ ದಂಡಿಗೆ
ಹೋಗೋರಂತೋ । ಎಲ್ಲಿ ಜೇನು ರೊಟ್ಟಿ ಬಿಟ್ಟು ಹುಳ ಎದ್ದಂಗೆ
ಬೂದೋ ಬೂದೋ ಅಂತಾ ಎರೋರಂತೋ

ಎಲ್ಲಿಂದ ಬಂದೆ ನೀನು । ಎಲೆ ದಗಡಿ ಎತ್ತಲಿಂದ ಬಂದೆ ನೀನು
ಯಾವೂರು ನೀನದು ಎಂದು ಕೇಳಾನಂತೋ
ಏಳು ಸಾವಿರ ಕಳಕೊರಮರು ತಿಂಬುತೀವಿ ಅಂಬಾರಂತೋ
ತಿಂದು ತಿಂದು ತೇಗು ಅಂಬಾರಂತೋ
ತಾಳರಯ್ಯ ಗಳಿಗೆ ನೀವು ಕೊರಮಣ್ಣ ತಾಳರಯ್ಯ ಘಳಿಗೆ ನೀವು
ತಾಳರಯ್ಯ ಕೊರಮರ ನೀವು ತಿಂಬುವಿರಂತೆ ತೇಗುವಿರಂತೆ
ಉತ್ತರ ದೇಶ ನನ್ನದು । ನನ್ನ ಹೆಸರು ಸಿಪಾಯಿ ಅಂಬಾನಂತೋ
ಕಳ್ಳರನ್ನ ಹಿಡಿರೆಲ್ಲೋ ನಾವು ಸಿಪಾಯಿ ಅಂಬಾರಂತೋ
ನಿಮ್ಮನೆ ದೊರೆಗಳು ನಮ್ಮತಾಕೆ ಕಾಗದ ಬರೆದಿದ್ರು
ಅದೆಕೆನಾ ನಾವು ಬಂದಿದ್ದೀವಿ ಅಂಬಾನಂತೋ
ಎರಗಂಟಿ ಎರಜನ್ನ ಅಂತೆಂಬಾ ದೊರೆಗಳು
ಏಳು ಸಾವಿರ ಕಳ್ಳ ಕೊರಮರು ಮಲಗೆವಿರೋ
ಎದ್ದೋವರೆ ನೋಡು ನಾವು ಬರುವಾ ಅಂದೇನೆ ಕಳಿಸಿದರಲ್ಲೋ

ಚಿತ್ತಯ್ಯ ಕಾಟಯ್ಯನಂತೆ ಚಿಕ್ಕವನು ನರಸಿಂಹನಂತೆ
ಚಿತ್ತರ ಸಿರಿಗವರ ಹೆಚ್ಚಿನ ದೊರೆಗಳಂತೆ
ದಂಡಾನೆ ಕಟ್ಟಿಕೊಂಡು ದರಬಾರನೆ ಕಟ್ಟಕೊಂಡು
ಮರಬಲನೆ ಕಟ್ಟಿಕೊಂಡು ಕತ್ತಲು ಕರಿಮಲೆಗೆ
ಶಿಕಾರಿ ಬೇಟಿಗೆ ಬಂದವರಂತೆ
ಭೂಚಕ್ರ ಜಂಪಾರೆ ಹೆಚ್ಚಿನ ಅವಳದ ಗೊಡಗು
ಹೆಚ್ಚಿ ಇಳಿಸಿ ಕೊಂಬಾರಂತೆ
ಒಂದು ಮುಚ್ಚು ಮಾಳಿಗೆಗೆ ಇಟ್ಟರಂತೆ
ನಿಜಲೇನಲೇ ಸೂಳೆ ಮಗನೆ ಅಂಬಾರಂತೋ
ನಿಜ ಕಾಣಯ್ಯ ಅಂಬಾರಲ್ಲೋ ಏಳು ಸಾವಿರ
ಕಳ್ಳಕೊರಮರು ನಿಜ ಕಾಣ ಅಂಬಾರಲ್ಲೋ
ಹಾಸಿಗೆ ಕೊಡ್ರಯ್ಯ ನಮಗೆ ಅಂಬಾನಂತೋ
ಮೂರನೇ ತಿಂಗಳು ನಾವು ನಿದ್ರೆಗೆಟ್ಟು ಮಲಗಾಕೆ
ಹಾಸಿಗೆ ಕೊಡ್ರಯ್ಯ ಅಂಬಾನಂತೋ
ಚಿತ್ತಯ್ಯ ಕಾಟಯ್ಯ ಚಿಕ್ಕೋನ ನರಸಿಂಹನ ದಂಡಿನ
ಮುಂದೆ ಇರುವೆ ಸಾಲು ಎತ್ತನರಿತ್ತಂತೆ ಹೇಳಲೆ
ದಗಡಿ ಮಕ್ಕಳೇ ಕಳ್ಳೆ ಕೊರಮರ ಅಂಬಾನಂತೋ
ಮೂರನೇ ತಿಂಗಳಲ್ಲೋ ಕೊರಮರ ಯಾತರಣ

ಕಾಯೋದು ನೀವು ಅಂಬೋನಂತೋ
ಅಂತೆಂಬಾ ಹೊತ್ತಿಗೆಲ್ಲೋ । ಕಳಕೊರಮರ ಹಾಸಿಗೆ ಕೊಡವರಂತೋ
ಹಾಸಿಗೆ ಕೊಡುವರಲ್ಲೋ ನೋಡಣ್ಣ ಭೂಸಾರಕೆ ಮಲಗೋರಲ್ಲೋ
ಜಪದ ಮುನಿ ಕಾಟಯ್ಯ ಕೆಟ್ಟವೆಂಬ ಚೂರಿ ತೆಗೆದಾನಂತೋ
ಮಂಕು ಬೂದಿ ತೆಗೆದಾನಂತೋ । ಏಳು ಸಾವಿರ ಕೊರಮರ ದಂಡಿಗೆ

ತಾನೂನು ಹೋಗೋನಂತೋ । ಏಳು ಸಾವಿರ ಕಳ್ಳ ಕೊರಮರು
ಮರಿಪಿಡಿದು ಭೂಪಾದಕೆ ಮಲಗೋರಂತೋ
ಜಪದ ಮುನಿ ಕಾಟಯ್ಯ ಬರೆದಂತ ವಾಲೆಯ ಓದೋನಂತೋ
ಹನ್ನೆರಡು ವರ್ಷ ಆನೇಸು ಒಂಟೇಸು
ಪೀಸಾಣಿ ಹೆರುವುದು ಆಗೈತೆ ।
ಏಳುಸಾವಿರ ಕಳ್ಳ ಕೊರಮರ ದಂಡಿನ ಮೇಲೆ ಓಡಿಸಬೇಕಿಲ್ಲ
ಅಂತೆಂಬಾ ಹೊತ್ತಿಗೆ ಘನಗುರುವೆ ಪೀಸಾನೆ ಹರಿದಾನಂತೋ
ಪೀಸಾಡ ತಿರುವಿದರಲ್ಲೋ ಪೀಸಾಡ ಹಾಕಿದ ಆನೆ ಕುದುರೆ
ನೇಸುರಕೆ ನೆಗೆಯೋವಂತೋ ಕೊರಮರ ದಂಡಿನ ಮೇಲೆ
ಪಣ ಪಣ ನಗೆಯೋವಂತೋ
ಅಂತೆಂಬಾ ಹೊತ್ತಿಗೆಲ್ಲೋ ತಿರುಣಿ ಪಟ್ಟಣದ ಮುಂದೆ
ರೈತರ ಕೋಡೀನೇ ಹರಿಯೋದಂತೋ
ಏಳು ಸಾವಿರ ಕಳಕೊರಮನೆ ನುಂಗಿ ನೀರು ಕುಡಿದರಲ್ಲೋ

ಅಂತೆಂಬಾ ಹೊತ್ತಿಗೆಲ್ಲೋ ಎರಗಂಟಿ ಯರಜನ್ನ ದೊರೆಗಳು
ಕಾಡಿನ ಕಡಿಕೆ ನೋಡುವಂತೋ
ಅರಗಿಳಿಯೇ ನೀನೋಡೋ ಮುದ್ದೆ ಬೀಸಾಡೋ
ಮುದ್ದ ಬೀಸಾಡೇ ಹಾಕಿದರಂತೋ
ಜಪದ ಮುನಿ ಕಾಟಯ್ಯ ಬರೆದಂತೆ ವಾಲೆಯ ಓದೋನಂತೋ
ಲಾವರದ ಮೇಲೆ ನೋಡೋ ನನ್ನ ಬೆನ್ನೆ ಹೋಗಬೇಕಂತ
ಬರೆದೈತಂತೋ ಅಂತೆಂಬಾ ಹೊತ್ತಿಗೆಲ್ಲೋ
ಕಣ್ಣ ರೆಪ್ಪೆ ಕೊಯ್ದೋರಂತೋ ವಾಮರದ ಮೇಲೆ ಇರುವನಲ್ಲೋ

ಅಂತೆಂಬಾ ಹೊತ್ತಿಗೆಲ್ಲೋ ಘನಗುರುವೆ ತಾನೂನೆ ಹೋಗೋನಲ್ಲೋ
ಎಲ್ಲಿಂದ ಬಂದೆ ನೀನು ಎಲೆ ದಗಡಿ ಎತ್ತಲಿಂದ ಬಂದೆ ನೀನು
ಅದೇನೋ ಕೇಳೋವೆಲ್ಲೋ । ನನ್ನದು ಉತ್ತರ ದೇಶ ಅಂಬಾನಲ್ಲೋ
ಉತ್ತರಾ ದೇಶ ನನ್ನ ಹೆಸರು ಸಿಪಾಯಿ ಅಂಬಾನಂತೋ

ನಿನ್ನೆಯ ದೊರೆಗಳು ನನ್ನ ತಾಕೆ ಕಾಗದ ಬರೆದಿದ್ದರು
ಅದಕೆ ನಾನು ಬಂದೆನಂತೆ ಅಂಬೋನಂತೋ

ಹಾಸಿಗೆ ಕೊಡೋ ನೀನು ಚಿಕ್ಕಣ್ಣ ಮಲಗೊ ಅಂಬಾನಂತೋ
ಹಾಸಿಗೆ ಕೊಡೋಕೆ ನನ್ನ ಇಷ್ಟರನು ಅಂಬೋನಂತೋ
ಚಿತ್ತಯ್ಯ ಕಾಟಯ್ಯ ಚಿಕ್ಕವನು ನರಸಿಂಹನ ದಂಡಿನಾಗೆ
ಕತ್ತಲು ಕರಿಮಲೆಯಾಗೆ ಇರುವೆ ಸಾಲು ಎತ್ತಿ ನಡೀತೈತೆ
ಹೇಳಲೇ ದಗಡಿ ಮಗನೇ ದೇವದಾರ ಚಿತ್ತ ಅಂಬೋನಂತೆ
ಗುರುತಿಲ್ಲ ಅಂಬಾನಲ್ಲೋ ನನಗೆ ಅರಿವಿಲ್ಲ ಅಂಬೋನಂತೋ
ಚಿತ್ತಯ್ಯ ಕಾಟಯ್ಯ ಚಿಕ್ಕವನು ನರಸಿಂಹನ ದಂಡು
ಎದ್ದೇಳಾದ ಕುಳಿತುಕೊಳ್ಳಾದು ಮಿಸಕಾಡದು
ನೋಡಾಕೆ ಇದ್ದೀನಿ ನಾನು ಅಂದಾನೆ ಹೇಳೋನಲ್ಲೋ
ನೋಡಣ್ಣ ಘನಗುರುವೆ ಹಾಸಿಗೆ ಇಸಕೊಂಡನಲ್ಲೋ
ಹಾಸಿಗೆ ಕೊಡೋನಲ್ಲೋ ಚಿಕ್ಕಣ್ಣ ತಾನೂನೆ ಮಲಗೋನಂತೆ
ಮಂಕು ಭೂದಿ ತೆಗೆದಾನಂತೋ ತಾನೂನೆ ಉದರಿಸಿದನಲ್ಲೋ

ಅಂತೆಂಬಾ ಹೊತ್ತಿಗೆಲ್ಲೋ ಚಿಕ್ಕಣ್ಣ ಮರಪಿಡಿದು ಮಲಗಿದನಂತೋ
ಮರಪಿಡಿದು ಮಲಗಿದನಂತೋ । ಘನಗುರುವೆ
ಎಡಗಾಲ ತೋರಿಸಿದನಂತೋ
ಎಡಕೆ ನೀನೋಡೋ ಚಿಕ್ಕಣ್ಣ ಎಡಾಕೆ ಎಡಗಾಲ ತೋರಿಸಿದನಂತೆ
ಹನ್ನೆರಡು ಮುಟ್ಟು ಪಾವಡಿ ಮೇಲಿಂದ ಕೆಳಕೆ ನಿಮ್ಮದನಂತೋ
ಅಂತೆಂಬ ಚಿಕ್ಕಣ್ಣನಲ್ಲೋ ನೋಡಣ್ಣ ಕಲಿಗಂಡು ಕಲಿಡಾನಲ್ಲೋ
ಅಂತೆಂಬಾ ಹೊತ್ತಿಗೆಲ್ಲೋ ಚಿಕ್ಕಣ್ಣ ಕಣ್ಣನೇ ಮುಚ್ಚೋನಂತೋ
ಅಂಬಾರ ಮಳೆ ಎಂದು ಒಳ್ಳೆ ಮುಂಗಾರದ ಸಿಡಿಲಿನಂಗೋ
ಅಂಬೋದು ಸೋಲಿಸಿದನಂತೋ ಮಲಕದ ಮುತ್ತಿನ ಗೊಡಬು
ಬೂಪ ಚಿತ್ತಯ್ಯನ ದನಿ ಕೇಳೋತೋದಂತೋ
ಅಣ್ಣಗೆ ವಾಲೆಯ ಬರೆದಾನು ! ಅಣ್ಣಗೆ ವಾಲೆಯ ಏನೆಂದು ಬರೆದಾನು

ಚಿಕ್ಕನೆ ಗಿರಿಗೆ ನಾನು ಹೊಕ್ಕು ಮುರು ತಿಂಗಳು
ಮರಿಯಾಗೆ ಅಡಗಿದ್ದ ಹಿರಿಯಣ್ಣ ದಕ್ಕನೆ ನೀವು
ಬರಬೇಕಂತ ಬರೆದೈತಂತೋ । ರಾಯನೇ ನಾನೋಗಿ
ಮೂರು ತಿಂಗಳಾತು ಆರೂರು ಮರಿಯಾಗಿ ಅಡಗಿದ್ದೆ ಹಿರಿಯಣ್ಣ
ದಕ್ಕದು ದಂಡು ಬರಬೇಕೆಂತ ಬರೆದೈತೋ

ಗುಯ್ ಗುಯ್ ಅಂಬೋದಲ್ಲೋ ಗುಂಗಾರಿ । ಅಳೆಂದಾ ಕೊಡುವುದೆಂತೋ
ಗುಂಗಾರಿ ಅಳೆಂದಾ ಕೊಡುವುದೆಂತೋ
ಹಾಲಗ್ಗ ಬೇಡೋದಲ್ಲೋ ಹಾಲಂಗ ಬೇಡುವುದಂತೋ
ಕರಿಮಲೆಗೆ ನಡೆಯೋದಲ್ಲೋ ಕಿಡಿಗಣ್ಣನು ಚಿತ್ತಯ್ಯ
ಬರೆದಂತ ಬಾಲೆಯ ತೊಗೆದನಂತೋ
ಅಂಗೈನ ಇಡುವುದೆಲ್ಲೋ
ಮೂರನೇ ತಿಂಗಳಲ್ಲೋ ನನ್ನ ತಮ್ಮ ಸೇರಿದಂತೆ ಚಿಂತೆಯ
ಮಾಡುತ ಕುಂತಾನಂತೋ । ಮಕ್ಕಳ ಗುಂಡಿ ಜಪದ ಮುನಿ
ಕಾಟಯ್ಯನಿಂಗೆ ಬರೆಯೋ ಅಣ್ಣಸಿತೋ
ಜಾಡನೇ ಕೆತ್ತನಂತೋ । ಜಾಡನೆ ಕೆತ್ತನಲ್ಲೋ
ಹುಲಿ ಹೊಟ್ಟೆಗೆ ಹುಲಿ ಹುಟ್ಟತೆ ಹೊರತಾಗಿ
ಇಲಿ ಹುಟ್ಟಲ್ಲ ಅಂಬೋನಂತೋ
ಅಂತೆಂಬಾ ಹೊತ್ತಿಗೆಲ್ಲೋ ಕಿಡಿಗಣ್ಣನು ಚಿತ್ತಯ್ಯನ
ವಾಲೆಯ ಓದೋನಂತೋ । ವಾಲೆಯ ಓದೋನಲ್ಲೋ
ನೋಡಣ್ಣ ನರಸಿಂಹನ ತಲೆದಿಂಬಗೂ ನಿಂತಾನಂತೋ ।

ತಾಯಿಲ್ಲ ತಂದೆಯಿಲ್ಲ । ಅಣ್ಣಯಿಲ್ಲ ತಮ್ಮಿಲ್ಲ
ಅನಾದ್ರಿ ಪರದೇಶಿ । ಕವಳೆ ಹಣ್ಣಿಗೆ ಕಾಡಿಗೆ ಬಂದೆ ।
ಅಡವಿ ಜೇನು ತುಪ್ಪಕ್ಕೆ ಬಂದೆ । ಚಿತ್ತಯ್ಯ ಕಾಟಯ್ಯ
ಬೇವುಗಾರ ನೀನಾರಲೆ ದಗಡಿ ಮಗನೆ । ಸೂಳೆ ಮಗನೆ
ಅಂದೇನೂ ಹೇಳೋದಂತೋ ।
ಸುಳ್ಳನೆ ಹೇಳುವ ನನಗೆ । ಅಂದೇನೆ ಕೇಳೋನಂತೋ
ಚಿತ್ತಯ್ಯನ ಗಂಡ ನಾನು । ಕಾಟಯ್ಯನ ಮಿಂಡ ನಾನು
ಚಿಕ್ಕವನು ನರಸಿಂಹ ಕಂಠದಕ್ಕೆ ಅಡವು ನಾನು ।
ಗಂಡಾದ್ರೆ ನನ್ನ ಮೇಲೆ ರಣಗ್ರಕ್ಕೆ ಬನ್ನಿ
ಹೆಣ್ಣಾದ್ರೆ ಚಿತ್ರಗಿರಿಯಾಗೆ ಅಡಗಿ ಅಂಬೋನಂತೋ
ತಟ್ಟೆ ತೆಗೆಯೋನಂತೋ । ಬೇವುಗಾರನಿಗೆ ನೂರು ಪಟ್ಟೆ ತೆಗೆಯಾನಂತೋ

ಚಿತ್ತನದು ಒಂದು ಪಟ್ಟೆ, ಕಾಟನದು ಒಂದು ಪಟ್ಟೆ
ನರಸಿಂಹನದು ಒಂದು ಪಟ್ಟೆ
ಗಂಡಾಗಿದ್ರೆ ನನ್ನ ಮೇಲೆ ರಣಾಗ್ರಕ್ಕೆ ಬನ್ನಿ ಹೆಣ್ಣಾದ್ರೆ ಚಿತ್ತರಗಿರಿಯಾಗೆ
ಅಡಗ್ರಿ ಅಂಬೋನಂತೋ
ಚಿತ್ತಗೆ ಗಂಡ ನಾನು । ಕಾಟನಿಗೆ ಮಿಂಡ ನಾನು ।

ನರಸಿಂಹನಿಗೆ ಕಾಟರಿಗೆ ಮಿಂಡ ನಾನು ।
ಅಂದೂನೆ ನೋಡೋ । ನೋಡಣ್ಣ ಮಂಡಾದ್ರಿ ಬೇವೂರಗೆ
ಮೂರು ಪಟ್ಟಿ ತೆಗೆಯೋನಂತೋ ।
ಬೇವುಗಾರ ಚಿತ್ತಯ್ಯನ ದಂಡಿಗೆ ನಡೆಯೋದಂತೆ
ದಂಡಿಗೆ ನಡೆಯೋದಲ್ಲೋ । ಮಂಡಾದ್ರಿ ಕಪ್ಪೆ ತೆಗೆದಂತ
ಪಟ್ಟೆ ಚಿತ್ತಯ್ಯನಿಗೆ ತೋರಿಸಾನಂತೋ । ಚಿತ್ತಗೆ ಗಂಡ
ಕಾಟಗೆ ಮಿಂಡ । ಚಿಕ್ಕವನು ನರಸಿಂಹಗೆ ಕಂಠ ನಾನು ಅಂತಾ
ಮಂಡಾದ್ರಿ ಕಪ್ಪೆ ಹೇಳಿದೆ ಸ್ವಾಮಿ ಅಂಬೋನಂತೋ
ರಾಮ ರಾಮ ಗುರುವೆ ಕಿಡಿಗಣ್ಣನು ಚಿತ್ತಯ್ಯನ ಮೈಯ್ಯಗಳ
ರೋಮ ರೋಮಗಳೆಲ್ಲ ಸಿಡಿದು ನೆಟ್ಟಗಾಗಿ
ತೋಳ ಕಾಲಾಗಿ ಶರೀರವೆ ಬೆಯ್ಯೋದಂತೋ

ಏಟೊತ್ತಿಗೆ ತಿಂದೆನು ನಾನು । ಮಂಡಾದ್ರಿ ಏಟೊತ್ತಿಗೆ ನುಂಗೆನು ನಾನು
ಚಿತ್ತಯ್ಯನು ನೋಡಣ್ಣ ಬಂಡೆ ಸರಕಿಗೆ ನಡೆದಾನಂತೋ
ಬಾಗಿಲು ಸರಕಿನಲ್ಲೋ ನೋಡಣ್ಣ । ಮಂಡಾದ್ರಿ ನೋಡಣ್ಣ
ದೇಕಿ ದೇಕಿಕೊಂಡು ಬರುವುದೆಲ್ಲೋ ।
ದೇಕಿ ದೇಕಿಕೊಂಡು ಬರುವುದೆಲ್ಲೋ । ನೋಡಣ್ಣ ಕಪ್ಪೆ
ಕಿಡಿಗಣ್ಣನು ಚಿತ್ತಯ್ಯನ ಜುಟ್ಟಿಡಿದು ಕೊಂಡು ಗಡಸೋದಲ್ಲೋ

ಮೇಲುಚ್ಚೆ ಹುಯ್ಯೋದಲ್ಲೋ । ನೋಡಣ್ಣ
ಚಿತ್ತಯ್ಯನ ಮುಖ ತುಂಬಾ ಉಗಳಾದಂತೋ ।
ಅಂತೆಂಬಾ ಹೊತ್ತಿಗೆಲ್ಲೋ ಜಪದ ಮುನಿ ಕಾಟಯ್ಯ ಬರವನಂತೋ
ನ್ಯಾಯಾಕೆ ದೊಡ್ಡಾರು ಇರುವರೆಲ್ಲೋ । ನಮ್ಮದು ತಪ್ಪಾದರೆ
ನಮ್ಮನ್ನ ಅಲ್ಲ ಅಂದು ಉಗಿಸಬಹುದು । ನಿಮ್ಮದು ತಪ್ಪಾದರೆ
ನಿಮ್ಮನ್ನ ಅಲ್ಲ ಅಂದು ಉಗಿಸಬಹುದು । ಬಿಡಪ್ಪ ಜಿಟ್ಟ ಅಂಬೋನಂತೋ
ಈ ಮಾತಿಗೆ ಈ ನ್ಯಾಯಕ್ಕೆ ಒಪ್ಪೋನಲ್ಲಾ ಕಾಟ ಅಂಬೋನಂತೋ
ಜಿಟ್ಟನೆ ಬಿಡಿಸಿದನಲ್ಲೋ ಜಪದ ಮುನಿ ಕಾಟಯ್ಯ ಚಿತ್ತಯ್ಯನ
ಜಿಟ್ಟನೇ ಬಿಡಿಸದನೆಲ್ಲೋ

ಊರಿಲ್ಲ ಕೇರಿಲ್ಲ ಸರವಿಲ್ಲ ವರವಿಲ್ಲ ಗಿಡವಿಲ್ಲ ಮರವಿಲ್ಲ
ಮರಡಿಲ್ಲ ಪಟ್ಟಣ ಮಾನ್ಯರಿಲ್ಲ ಅಡನ್ನಡವಿಗೆ
ಜಪದ ಮುನಿ ಕಾಟಯ್ಯ ಅಂಕೋಲು ಮಾಡಿಸಿದನಂತೋ

ಅಂಕೋಲು ಮಾಡಿಸಿದನಂತೋ ನೋಡಣ್ಣ ಮಾತನ್ನ ಆಡಿಸಿದನಂತೋ
ಚಿತ್ತಯ್ಯ ಕಾಟಯ್ಯನಲ್ಲೋ ಚಿಕ್ಕವನು ನರಸಿಂಹ ಒಂತು ಮಾತು
ಆಡಿದರೆ ಹೆಂಬೇಡಿ ಮೂರು ಮಾತು ಆಡೋದಂತೋ
ಕಲ್ಲು ಕರಗೋಹೊತ್ತು ಬೆಲ್ಲ ಬೇಯ ಹೊತ್ತು ।
ನೀರು ನಿದ್ದೆ ಮಾಡೋ ಹೊತ್ತು ಸಕ್ಕಟಿ ಸರಹೊತ್ತಿಗೆ ಬರುತ್ತಾರಂತೋ
ಸಕ್ಕಟಿ ಸರು ಹೊತ್ತಿಗೆ ಬರುತಾರಂತೋ । ಹೆಂಬೇಡಿ ಮಾತಿಗೂ ಮಾತು
ಆಡೋದಂತೋ । ಮೂರು ಮಾತು ಆಡೋದಂತೋ
ಮುಂಗೋಳಿ ಕೂಗೋದಂತೋ ಮೂಡು ಕೆಂಪೇರದಂತೋ
ಕೆಂಪುತಾ ಹರಿದೋತಲ್ಲೋ । ನೋಡಣ್ಣ ಹೊತ್ತಾನೆ ಹುಟ್ಟಾದಲ್ಲೋ
ಮಂಡಾದ್ರಿ ಸುತ್ತ ಮುತ್ತ ನೋಡೋದಲ್ಲೋ
ಸುತ್ತ ಮುತ್ತ ನೋಡೋದಲ್ಲೋ ಹೆಂಬೇಡಿ ।
ನೀರಿಲ್ಲ ನಿಡಿಯಿಲ್ಲ ಮರವಿಲ್ಲ ಮಂಡಿಲ್ಲ
ಪಟ್ಟಣ ಪಾಂಡ್ಯವವಿಲ್ಲ !

ಅಂತೆಂಬಾ ಹೊತ್ತಿಗೆಲ್ಲೋ ಆ ಜಾಗಕೆ ಸ್ಥಾನವೇ ಮಾಡಿಸಿದನೆಂದೋ
ಚಿಕ್ಕ ಬೆಸ್ತಿಗೆ ಬರುವುದಲ್ಲೋ ಹೆಂಬೇಡಿ ಒಂದು ಮಾತು ಹಾಡೋದಂತೋ
ದೊಡ್ಡ ಬಂಬತ್ತಿಗೆ ಬರುವುದಲ್ಲೋ ನೋಡಣ್ಣ ವಾಲಿಗೆ ಹತ್ತೋದಂತೋ
ಒಂದು ಮೂರು ಆಡುವಲ್ಲೋ । ಜಪದ ಮುನಿ ಕಾಟಯ್ಯ
ಕಿಡಿಗಣ್ಣನು ಚಿತ್ತಯ್ಯನಿಗೆ ಕಣ್ಣುಬ್ಬೇ ಹಾರಿಸಿದವಂತೋ
ಕಣ್ಣುಬ್ಬೇ ಆರಿಸಿದವಂತೋ । ಬಂಗಾರದ ಬಾರುಕೋಲು
ತಕ್ಕೊಂಡು ಬಿಟ್ಟನಂತೋ ದಗುನಕ್ಕೆ ಎಗುರೋದಲ್ಲೋ
ಕಪ್ಪೆನೆ ದಿಗಿ ಥಗಿ ತುಳಿಸೋನಲ್ಲೋ

ಚಿತ್ತಯ್ಯ ಕಾಟಯ್ಯನಂತೆ ಚಿಕ್ಕವನು ನರಸಿಂಹನಂತೆ
ಚಿತ್ತರಾಗಿರಿಗವರು ಹೆಚ್ಚಿನ ದೊರೆಗಳಂತೆ
ಮುಂಗಾರ ಮಿಂಚನಾಗಿ ಮಳೆಯನೇ ಬಂದಾಗ
ನಿನ್ನ ಪಾದವೇ ನೆನಸುತೀನಿ । ಬಿಟ್ಟುಬಿಡು
ಬದುಕುತೀನಿ ಸ್ವಾಮಿ ಎಂದು ಹೇಳೋದಂತೋ

ಚಿತ್ತಯ್ಯನಿಗೆ ನೀನು ಮೂರು ಪಟ್ಟೆ ತೆಗೆದು
ನಾನು ನಿನಗೆ ಒಂದು ಪಟ್ಟೆ ತೆಗೆತೀನಿ ಎಂದು
ಒಂದು ಪಟ್ಟೆ ತೆಗೆಯೋದಂತೋ

ಅಂತೆಂಬಾ ಹೊತ್ತಿಗೆಲ್ಲೋ ಹೆಂಬೇಡಿಗೆ ದೇವತರು ಬಂದು
ಸಾವಿರ ರೂಪಾಯಿಯ ಗಂಡಸರು ನೀವು ಚಿಲ್ಲರೆ ಮೂರು
ಕಾಸಿನ ಹೆಂಗಸು ನಾನು । ನನ್ನ ಮ್ಯಾಲೆ ರಣಾಗ್ರಕೆ ಬರಬಹುದೆ
ನೀನೆಂದು ಎಂಥ ಗಂಡಸರಾಯ್ಯ ನೆಲ್ಲೂರು ಸೀಮೆಗಲ್ಲೋ
ಜಪದ ಮುನಿ ಕಾಟಯ್ಯ ಎರಮಲವೇ ಇರುವುದು ನೋಡೋ
ನಿಡಗಲ್ಲು ಗುಡ್ಡ ಕಾದಂಗೆ ಎರಮಲವೇ ಇರುವುದು ನೋಡೋ

ಮೂರು ಎಕರೆ ನೀರು ಎರಮಲವೆ ಮೂಸಿ ನೋಡಿಕೊಂಡು
ಕುಡಿತೈತಂತೋ । ಆರು ಕಂಡುಗದ ಗದ್ದೆ ಆರಿಸಿ ಮೆಯುತ್ತೋ
ಅಂಚಿಹುಲ್ಲು ಮೆಯ್ಯುತ್ತೆ ನೋಡೋ । ಆ ಅಡವೀಯ
ಬೆಂಚೆ ನೀರು ಕುಡಿಯುತ್ತೆ ಕೇಳೋ
ಸಾಣೆಯ ಕಲ್ಲು ಮೇಲೆ ಅದು ಮೀಸೆಯ ಮಸೆಯುತ್ತೈತೆ
ಅದರ ಮೇಲೆ ನೀವು ಹೋದರೆ ನಿಮ್ಮಂಥ
ಗಂಡಸರು ಇಲ್ಲವೆಂದು ನಾನು ಹೇಳುತೀನಿ ಅಂಬೋದಂತೋ

ಹೋಗಬೇಕು ಅಣ್ಣ ನಾನು ನೆಲ್ಲೂರು ಸೀಮೆಗೆ
ಹೋಗಬೇಕು ಸ್ವಾಮಿ ನಾವು
ಕೇಳ್ರಮ್ಮ ಹೇಳುತ್ತೀನಿ ನಾನು । ನನ್ನ ಬೆನ್ನ
ಕಿಡಿಗಣ್ಣನು ಚಿತ್ತಯ್ಯ ಬೇಡ್ರಮ್ಮ ಅಂಬೋನಂತೋ
ಕಪ್ಪೆ ಮೇಲೆ ಹೋದೆ ನೀನು ನೋಡಣ್ಣ ಜುಟ್ಟಿಡಿದು ಬಗ್ಗಿಸಿತಲ್ಲೋ
ಕಿಡಿಗಣ್ಣು ಚಿತ್ತಯ್ಯನ ದಂಡು ಅಗಲಿಸಿಕೊಂಡು ಹೋದಾತಂತೋ

ಜಪದ ಮುನಿ ಕಾಟಯ್ಯನಲ್ಲೋ ನೋಡಣ್ಣ ಹಿಂದೆನೇ ಹೋಗೋನಲ್ಲೋ
ಅಂತೆಂಬಾ ಹೊತ್ತಿಗಲ್ಲೋ ಹೆರ ಮಾಲ ಮಂಡಾದ್ರಿ ಗಿಡದಡಿಯಲ್ಲಿ ಮಲಗೋದಂತೋ
ಮರದಡಿಯಾಗೆ ಮಲಗೋನಂತೋ ನೋಡಣ್ಣ ಧರ್ಮ ಕಹಳೆ ಹಿಡಿಯೋನಂತೋ
ಮಂಡಾದ್ರಿ ಗಿಡ ಬಿಟ್ಟು ಹೆರಮಾಲನೆ ಎದ್ದೋನಂತೋ
ಲೆಕ್ಕವಿಲ್ಲದ ಜಾಲ ನಾಯಿ । ಚಿತ್ತಯ್ಯನ ಲೆಕ್ಕವಿಲ್ಲದ ಜೂಲ ನಾಯಿಗಳು
ಗುಡ್ಡವೇ ಬೋರೆಂದು ಬೀಳಾವಲ್ಲೋ

ಅಂತೆಂಬಾ ಹೊತ್ತಿಗೆಲ್ಲೋ ಚಿತ್ತಯ್ಯ ಕರಿ ಕುದುರೆ ಹತ್ತೋನಂತೋ
ಕರಿ ಕುದುರೆ ಹತ್ತೋನಲ್ಲೋ ನೋಡಣ್ಣ ದರಣಿ ಮಂಡಲಕ್ಕೂ ನೆಗೆಸೋನಂತೆ
ಗಗನ ಮಂಡಲಕೆ ನೆಗೆಸೋನಲ್ಲೋ । ಮೇಲಾಕೆ ನೋಡೋನಲ್ಲೋ

ಜಪದ ಮುನಿ ಕಾಟಯ್ಯ ನಿಲ್ಲಸಯ್ಯ ಕುದುರೆ ನೀನು
ಇದರ ಮೇಲೆ ಹೋದರೆ ನಿನ್ನ ಹೆಂಡತಿ ಮಾಳಮ್ಮ
ಮುಂಡೆಯಾಗುತ್ತಾಳೆ ಚಿತ್ತಯ್ಯ ಅಂಬೋಳಂತೋ
ಅಂತೆಂಬಾ ಹೊತ್ತಿಗೆಲ್ಲೋ ಜಪದ ಮುನಿ ಕಾಟಯ್ಯ
ಓಲೆಯ ಬರೆಯಾನಲ್ಲೋ । ನೋಡಣ್ಣ
ಗುಂಗಾರಿ ಕರೆದಾನಂತೋ । ಕಾಟಯ್ಯ ಬರೆದಂತ ವಾಲೆಯ
ಗುಂಗಾರಿ ಕಾಲಿಗೆ ಕಟ್ಟೋನಂತೋ ।
ಕಾಲಿಗೆ ಕಟ್ಟೋನಲ್ಲೋ ಚಿತ್ತರಗಿರಿ ಪಟ್ಟಣದ ಅರಮನೆಗೆ
ಹೋಗಬೇಕೆಂದು ಹೇಳೋನಂತೋ
ಅಂತೆಂಬ ಗುಂಗಾರಿ ಚಿತ್ತರಗಿರಿ ಪಟ್ಟಣದ ಅರಮನೆಗೆ ಹೋಗೋದಂತೆ

ಆನೆ ಆನೆಗೆ ಜಗಳ ಆನೆ ಮರಿಗೆ ಜಗಳ
ಜಾಣೆಗೆ ಜಗಳ ಬಹು ಜಗಳಾ ಮಾಳಮ್ಮ ನೀನು
ಸಾಕಿದ ಒಂದು ಮೂಳೊಂದು ಯಕ್ಕಲ ಕಳಿಸಬೇಕಂತೆ ಬರದಾನಂತೆ
ಒಂಟಿ ಒಂಟಿಗೆ ಜಗಳ ಒಂಟಿ ಮರಿಗೆ ಜಗಳ
ಒಂಟೆಗಳ ಬಹು ಜಗಳ ನೀನು ಸಾಕಿದ ಗಿಡುಗಾನ ಕಳಿಸಬೇಕಂತೋ
ಅಂತೆಂಬಾ ಹೊತ್ತಿಗೆಲ್ಲೋ ಮಾಳಮ್ಮ ಗಿಡಗನೂ ಮೂಳಗೂ
ಆಕಲ ಹಾಲು ತರಿಸ್ವಾಳಲ್ಲೋ ಮಾಳಮ್ಮ ತೂಕದ ಸಕ್ಕರೆ
ಕಲೆಸ್ಯಾಳಲ್ಲೋ । ತೂಕದ ಸಕ್ಕರೆ ತರಿಸ್ಯಾಳಲ್ಲೋ ಮಾಳಮ್ಮ
ಗಿಡಗಾನೂ ಮೂಳಣ್ಣನಿಗೂ ಹಬ್ಬದಡಿಗೆ ನಡೆಸಾಳಂತೋ
ಮಾಳಮ್ಮ ಚಿತ್ತರಗಿರಿ ಅರಮನೆಯಾಗಿ ಮೂಳಣ್ಣನಿಗೂ ಗಿಡುಗಣ್ಣನಿಗೂ
ಹಬ್ಬದಡಿಗೆ ಮಾಡೋಳಂತೋ । ಅಗ್ಗರಣೆ ಕಾಯೋದಲ್ಲೋ
ಹಾಲೂನೆ ಕಾಯೋದಲ್ಲೋ ನೋಡಣ್ಣ ನನ್ನ ಅರಮನೆಗೆ
ಬಾನಗಳೇ ಇಳಿದಾವಲ್ಲೋ । ಜಾಜಿ ಮಲ್ಲಿಗೆ ನೋಡೋ
ಜೀವತಿಗೆ ಅರಳೋದಂತೋ ।

ಪುರುಷರ ದಂಡಿಗಲ್ಲೋ ನೆಲ್ಲೂರ ಸೀಮೆಗೆ ನಡೆಯಬೇಕು
ನನ್ನ ಮಗನೆ ಉಣ್ಣರಪ್ಪ ಅಂಬೋಳಂತೋ
ತುಪ್ಪಾನೆ ಕಾಯೋದಲ್ಲೋ ಮೂಳಣ್ಣ ಗಿಡುಗಣ್ಣನಿಗೆ
ನೆಲ್ಲೂರ ಸೀಮೆಯಾಗೆ ನನ್ನ ಮಗ ಎರಮಲವ ಗೆಲ್ಲಬೇಕಂತೋ
ಕುರುಬರ ಮನೆಯಾಗೆ ನೀನು ಮಡಿಕೆಗೆ ತಿನ್ನಬೇಕು
ಅರುವರ ಮನೆಯಲ್ಲಿ ಹಾಲನ್ನು ಕುಡಿಯಬೇಕು

ಕುಂಬಾರ ಮನೆಯಲ್ಲಿ ನೀರನ್ನು ಕುಡಿಯಬೇಕು
ಕುಂಬಾರ ಅಬೆ ಗುಂಡಿಯಲ್ಲಿ ಮಲಗಬೇಕು
ನನ್ನ ಅರಮನೆಗೆ ಸಾಕಿದ್ದೀನಿ ಸಲುವಿದ್ದೀನಿ
ನೀವು ದಂಡಿಗೆ ಸರಸರನೆ ನಡಿಬೇಕು
ಇಬ್ಬರು ಮಜ್ಜನ ಮಾಡಬೇಕು ನಡಿರಣ್ಣ ಅಂಬೋಳಂತೋ
ಮಾಳಮ್ಮ ಇಬ್ಬರಿಗೂ ಊಟಕ್ಕೆ ಇಕ್ಕೋಳಂತೋ
ವಿದ್ಯೆ ಅಲ್ಲಿ ಹೇಳೋಳಂತೋ ಮಾಳಮ್ಮ ಬುದ್ಧಿಯಲ್ಲಿ ಹೇಳಾಳಂತೋ

ನಾಯಿಯ ಕೈಗೆ ಸಿಗಬೇಡ ನೀವು । ನರಿಯ ಕೈಗೆ ಸಿಗೂ ಬೇಡ ಗಿಡುಗ
ಆಕಾಶದಾಗೆ ಹೋಗಬೇಕು ನೀನು ಗಿಡುಗಣ್ಣ
ಕಣ್ಣೆಗುಡೆ ಎರಡು ಕೀಳಬೇಕು ನೀನು
ಭೂಮಿ ಮೇಲೆ ಹೋಗಬೇಕು ನೀನು
ಮೂಳಣ್ಣ ತೊರಡು ಬೀಜೆರಡು ಇರಿಬೇಕು ನೀನು
ಒಂದಾನೆ ಪರಲಾಂಗ್ ನೀನು ಎಸಿರಮ್ಮ ಅಂಬೋಳಂತೋ
ಜಪದ ಮುನಿ ಕಾಟಯ್ಯನ ಪಾದಕ್ಕೆ ನಮುಸ್ಕಾರ ಮಾಡ್ರೋ ನೀವು
ತಟ್ಟನೆ ನನ್ನ ಅರಮನೆಗೆ ಬರಬೇಕು ನೀವು

ಅರಮನೆ ಬಿಡುವರಂತೋ ಮೂಳಣ್ಣ ಗಿಡುಗಣ್ಣ ಅರಮನೆ ಬಿಡುವರಂತೆ
ಅರಮನೆ ಬಿಡುವರೆಲ್ಲೋ । ನೆಲ್ಲೂರ ಸೀಮೆಗೆ ಅರಮನೆಗೆ ನೆಗೆದಾರಂತೋ
ಗಿಡ ಮಲೆ ಗಾತ್ರ ಇದ್ದಂತ ಎರಮೊಲ ಇಟ್ಟಿನ ಮುದ್ದೆ ಗಾತ್ರ ಆಗೋದಂತೋ
ಇವೆರಡನ್ನ ನೋಡೋ ಎರ ಮೊಲ ಹಿಂದಕ್ಕೆ ಕಳಿಸಿತಂತೋ
ಕಾಲಂಬ ಕಾಲು ನೋಡೋ ನೋಡಣ್ಣ ಹೊಟ್ಟೆಯ ಕಾಲಡಿಕೆ ಇಕ್ಕೋತಂತೆ
ಕಣ್ಣನ್ನೆ ಮುಚ್ಚೇನಂತೋ ಬಂಗಾರ ಗಿಡ ಬಿಟ್ಟು ತುಂಬೆ ನೆರಳಂತೆ ರಾಚೋನಲ್ಲೋ
ನೆಲವನ್ನೇ ರಾಚೋದಲ್ಲೋ । ಗಿಡುಗಣ್ಣ ಕಣ್ಣು ಗುಡ್ಡೆ ಕೀಳೋದಂತೆ
ಕಣ್ಣುಗುಡ್ಡೆ ಕೀಳೋದೆಲ್ಲೋ ನೋಡಣ್ಣ ತೊರಡು ಬೀಜ ಹಿರಿಯಾದಂತೆ
ಒಂದಾನೆ ಪರಲಾಂಗ್ ನೋಡಣ್ಣ ತಾನೂನೆ ಎಸೆಯೋದಂತೋ

ಜಪದ ಮುನಿ ಕಾಟಯ್ಯನ ಪಾದಕೆ ನಮಸ್ಕಾರ ಮಾಡೋವಂತೋ
ಅರಮನೆಗೆ ತಿರುಗಿದರಲ್ಲೋ । ತಟ್ಟನೆ ಹಿಂದಕ್ಕೆ ತಿರುಗಿದರಂತೋ
ಹಿಂದಾಕೆ ತಿರುಗಿದವೆಲ್ಲೋ । ಚಿತ್ತಯ್ಯ ಪಣಗೋಲ ತೆಗೆದಾನಂತೋ
ಪಣಗೋಲ ತೆಗೆದಾನಂತೋ । ತಗೊಂಡು ತಾನೂನೆ ಜಡಿದಾನಂತೋ
ಕುಯ್ ಕುಯ್ ಎಂದು ಚಿತ್ತರಗಿರಿ ಅರಮನೆಗೆ ಕೇಳಿಸುವಂತೆ

ಬೊಗಳೋದಂತೋ । ಕುಯ್ ಕುಯ್ ಅಂಬಾ ಶಬ್ದ ಮಾಳಮ್ಮನ
ಕಿವಿ ಕರಣಕೆ ಬಿದ್ದೀತಂತೋ ।
ಮನೆಯಾಳ ನನ್ನ ಗಂಡ ಚಿತ್ತಯ್ಯ ನಾಯಿ ಹುಯ್ದೋ
ಆ ಮೂಳಣ್ಣ ಗಿಡುಗಣ್ಣರ ರಕ್ತ ಭೂಮಿಗೆ ಬಿದ್ದರೆ
ಭೂಮಿ ಪಾದ ಉರಿದು ಹಾಳಾಗಿ ಹೋಗುತ್ತದೆ
ಎಂಬುದು ಜಪದ ಮುನಿ ಕಾಟಯ್ಯನ ಕವಿ ಕರಣಕ್ಕೆ ಬೀಳೋದಂತೋ
ಅಂತೆಂಬಾ ಹೊತ್ತಿಗೆಲ್ಲೋ ನಾಯಿ ಮಾಳಮ್ಮನ ಅರಮನೆ ಮುಂದೆ
ಬಂದು ನಿಲ್ಲೋವಲ್ಲೋ । ಬಂಗಾರದ ಸೆರಗಿನಾಗೆ ಮಾಳಮ್ಮ
ನಾಯಿಯ ರೈತನ ಹೊತ್ತಳಾಂತೋ
ನೆಲ್ಲೂರ ಸೀಮೆಗೆ ಹೊರಡೋಳಂತೋ ಮಾಳಮ್ಮ
ಗಾಡಿಯ ಕಟ್ಟಳಂತೋ ಗಾಡಿಯ ತುಂಬಾ ಮಾಂಸವ ತುಂಬಾಳಂತೋ
ಪಟ್ಟಣಕೆ ನಡೆದಾಳಲ್ಲೋ ನಡುವಂತ ಹಾದಿಲಿ ಒಂದು ಮಾಂಸದ
ತುಂಡು ಹಾರಕೆ ಬಿದ್ದಿತಂತೋ ।

ಚಿತ್ತಯ್ಯ ಕಾಟಯ್ಯನಂತೆ । ಚಿಕ್ಕವನು ನರಸಿಂಹನಂತೆ
ಅಂತೆಂಬ ದೊರೆಗಳು ಬೇಟೆ ಆಡಿದರು ಮೊಲನೇ ಇಲ್ಲವಂತೆ
ಮುಂದೆ ಅಪಶಕುನ ಬರುತ್ತೈತೆ ಅಂದಾನೆ ಜಪದ ಮುನಿ
ಕಾಟಯ್ಯ ಅಂತಾನೆ
ಚಿತ್ತವನೆ ತೆಗೆದಾನಲ್ಲೋ ಪಂತಿಯಲ್ಲಿ ಕುಂತವರಿಗೆ
ಕಾಪಾಡಿ ಮಾಡಿದನಂತೋ । ಸೃಷ್ಟಿಯ ಮಾಡೆವನಲ್ಲೋ
ಜಪದ ಮುನಿ ಕಾಟಯ್ಯ ಸೃಷ್ಠಿಯ ಮಾಡಿದನಲ್ಲೋ
ಆರು ಬಂಡಿ ಗಜ್ಜೆ ಹುಲ್ಲು ಮೆಯ್ಯುತ್ತಿದ್ದೆ ನೀನು
ಮೂರು ಕೆರೆಯ ನೀರು ಮೂಸಿ ನೋಡಿ ಕುಡಿತ್ತಿದ್ದೆ ನೀನು
ಅಂಚಿ ಹುಲ್ಲು ಮೆಯ್ಯುತ್ತಿದ್ದೆ । ಬೆಂಚಿ ನೀರು ಕುಡಿತ್ತಿದ್ದೆ ನೀನು
ಪಾಣಿಕಲ್ಲು ಮೇಲೆ ಮೀಸೆ ಮಸೆಯುತ್ತಿದ್ದ ನೀನು ।
ಅಂತೆಂಬಾ ಹೊತ್ತಿಗೆಲ್ಲೋ ನೀನು ಹುಲಿಗಿಣ್ಣ ಕುಡಿಬೇಕು ನೀನು
ಬೇಗೂನೆ ಹೋಗಬೇಕು । ನಿನ್ನೊಟ್ಟಿಗೆ ಗಿಡುಗಣ್ಣನೂ ಇರಬೇಕೆಂದು
ಸೃಷ್ಠಿಯ ಮಾಡಿದನಲ್ಲೋ

ಬಾಯಿನೆ ಇರಬೇಕು ನಿಂಗೆ ಅಂಗಾಲು ಊರಬೇಕೆಂದು
ದಾವೂರ ಆತೆಂದು ಸ್ವಾಮಿ ಸೃಷ್ಠಿಯ ಮಾಡಿದನಂತೋ
ಕಣ್ಣುಗುಡ್ಡೆ ಎಂದು ಮೇಲೆ ಹೊರಳಾಡಬೇಕೆಂದು

ಸ್ವಾಮಿ ಸೃಷ್ಠಿಯ ಮಾಡಿದನಲ್ಲೋ । ಕಿವಿಯು ಎರಡು ನೆಟ್ಟಗಿರ
ಬೇಕೆಂದು । ಹಣೆಯ ಮೇಲೆ ನಾಮ ಇಡಬೇಕೆಂದು । ಸ್ವಾಮಿಯು
ಸೃಷ್ಠಿಯ ಮಾಡಿದನಲ್ಲೋ । ನೆಕ್ಕ ನೆಕ್ಕೋಂಡು ಹೋಗಬೇಕೆಂದು
ಕುಂಟ ಕುಂದಾದ್ರಿ ನೀನು ಗಿಡ ಬಿಡಬೇಕೆಂದು ಸೃಷ್ಠಿಯ ಮಾಡಿದನಂತೋ

ನೆಕ್ಕ–ನೆಕ್ಕೊಂಡು ಹೋಗೋದಲ್ಲೋ । ಅದು ಗಿಡಗಂಟಿ ಬೀಳೋದಲ್ಲೋ
ಮಾಂಸದ ತುಂಡು ಗಿಡವನ್ನೇ ಸೇರೋದಲ್ಲೋ
ಜಪದ ಮುನಿ ಕಾಟಯ್ಯ ಗುಂಡಿಗೂ ಸೃಷ್ಠಿ ಮಾಡಿ ಗಿಡಕೆ ಬಿಟ್ಟನಂತೋ
ದೇವತರು ಅರಮನೆಗೆ ಬರುವುದಂತೋ
ಅಂತೆಂಬಾ ಹೊತ್ತಿಗೆಲ್ಲೋ ಮಾಳಮ್ಮ ಪಟ್ಟಣಕೆ ತನ್ನಿಕು ಚೆಲ್ಲಿಸಿದಳಂತೋ
ನಾಕರಣೆ ಮಾಡಿದಳಲ್ಲೋ ಆರತಿ ಕಟ್ಟಿದಳಲ್ಲೋ
ನೋಡಣ್ಣ ಮುತ್ತಿನಾರತಿಯ ಬಂಗಾರದ ಸೀರೆಯ ಹುಟ್ಟಳಲ್ಲೋ
ಸೀರೆಯ ಹುಟ್ಟಳಲ್ಲೋ । ಬಂಗಾರದ ಸೆರಗ ಮುರಿದು
ಮುಸಗಿಟ್ಟಳಲ್ಲೋ । ಮುತ್ತಿನಾರತಿಯ ನೆತ್ತಿ ಮೇಲಿಟ್ಟಳಲ್ಲೋ
ಕಿಡಿಗಣ್ಣನು ಚಿತ್ತಯ್ಯನ ದಂಡಿಗೆ ನಡೆದಾಳಂತೋ
ಕಿಡಿಗಣ್ಣನು ಚಿತ್ತಯ್ಯನಿಗೆ ಮಾಳಮ್ಮ ಆರತಿ ಬೆಳಗಿದಳು
ಮುಂದಕ್ಕೆ ಬೆಳಗಿದಳಲ್ಲೋ । ಚಿತ್ತಯ್ಯನು ಹಿಂದಾಕೆ ತಿರುಗಿದನಲ್ಲೋ
ಅಂತೆಂಬಾ ಹೊತ್ತಿಗೆಲ್ಲೋ ಜಪದ ಮುನಿ ಕಾಟಯ್ಯ ತಾನೂನೆ ಹೇಳೋನಪ್ಪ
ಕೇಳಮ್ಮ ಹೇಳುತೀನಿ ನಾನು । ನನ್ನ ಬೆನ್ನ ಕೇಳಯ್ಯ ಹೇಳುತ್ತೀನಿ ನಾನು
ನೀನ್ಯಾರೋ ಲೆಕ್ಕವಿಲ್ಲದ ದುಡ್ಡುಕೊಟ್ಟು ಲೆಕ್ಕವಿಲ್ಲದ ನಾಯಿ ಕೊಂಡೆಲ್ಲೋ
ಅಂತೆಂಬ ಎರಮಾಲ ಎದ್ದದ್ದು ಮೈಯನೆ ಕೊಡವೀದೇಟಿಗೆ
ನಿನ್ನ ಲೆಕ್ಕವಿಲ್ಲದ ಜೂಲನಾಯಿ ಗುಡಾನೆ ತೋರಿದವಲ್ಲೋ
ಅಂತೆಂಬಾ ಹೊತ್ತಿಗೆ ನಾಯಿ ಮರಿ ಬೇಕು ಅಂತಾ ಕೇಳಿದರೆ
ಮುಖದ ಮೇಲೆ ಮೂರೇಟು ಬಡಿಸಿದೆಲ್ಲೋ
ಊರಾಗೆ ತಿಂಬಾ ಜಂಪೆದೆಲ್ಲಾ ನಾಯಿ ಎರಮಲವ ಗೆಲ್ಲೋದಲ್ಲೋ
ನಿನ್ನನೆ ರಕ್ತ ಮಾಂಸವಲ್ಲೋ ಆಯಮನ ಶರೀರದಾಗೆ ಇರುವುದಲ್ಲೋ
ಆಯಮ್ಮನ ರಕ್ತ ಮಾಂಸವೆಲ್ಲೋ ನಿನ್ನೆಯ ಶರೀರದಾಗೆ ಇರುವುದಲ್ಲೋ
ಶತ ಪಾದಕ್ಕೆ ಇಬ್ರರದು ನೀವು ನಿನ್ನ ಬೆನ್ನ ಕೇಳ್ರಯ್ಯ ಹೇಳುತೀನಿ
ಮುಂಜರಗ ಹಾಸೆವಳಲ್ಲೋ । ಜಪದ ಮುನಿ ಕಾಟಯ್ಯನ ಪಾದಕ್ಕೆ
ಅಡ್ಡ ಬಿದ್ದಳಂತೋ । ರಜಗಂಟು ಅಡ್ಡ ಬಿದ್ದಳಲ್ಲೋ ನೋಡಣ್ಣ
ದಂಡಿಗೆ ಆರತಿಯ ಬೆಳಗಿದಳಲ್ಲೋ

ಜಪದ ಮುನಿ ಕಾಟಯ್ಯನ ಪಾದಕೆ ಮಾಳಮ್ಮ ಆರತಿಯ ಬೆಳಗಿದಳಲ್ಲೋ
ತಾಯಮ್ಮ ಬರುವಾಗ ಮಜ್ಜಣದ ಕೆರೆ ತುಂಬಿ
ಅರಳಕ್ಕಿ ಕೊರವಂಜಿ ಬರುವಾಗ ಹೋಗುವಾಗ
ನಾಗನೇ ಮಂಡಲದ ನೆಲಸೋಕಿ ಡೆಲ್ಲಿ
ಗೋಕುಲ ಕೇಳಲಿಲ್ಲ ದೇವರು ಕೇಳಲಿಲ್ಲ
ನಿನ್ನ ಹೆಸರು ಕೇಳಲಿಲ್ಲ ಕೊಟ್ಟೆಂಬ ಕೊಡೆಂಬ ನೀನು
ಕೊಡುವುದಿಲ್ಲ ಹೆಣ್ಣ ಬರುವಲ್ಲೋ ಎಂಬಾನಂತೋ
ಹಾವಿ ಹಾವಿನಿಂದ ಹಾವಿನ ಕೊರಳಿನಿಂದ
ಹಾಡಾನೆ ಮಕ್ಕಳ ಶಿವಲಿಂಗ ಅಂದು ಕರಿತೀನಿ
ಕೊಡುವಲ್ಲ ಹೆಣ್ಣ ನಾನು ತರುವಲ್ಲ ಅಂಬಾನಂತೋ
ಎತ್ತು ಎತ್ತಿಗೆ ಲಿಂಗ ಎತ್ತಿನ ಕೊರಳಿಗೆ ಲಿಂಗ
ಹುಟ್ಟಿದ ಮಕ್ಕಳನಾ ಶಿವಲಿಂಗ ಎಂದು ಕರೆತೀನಿ
ಕೊಡೋದಿಲ್ಲ ಹೆಣ್ಣನಾ ತರೋದಿಲ್ಲ ಅಂಬೋನಂತೋ
ಸ್ವಾರಗೆ ಲಿಂಗ ನಿಮ್ಮ ಮನೆಯಾಗೆ
ಸೊಟಕರಿಕೂ ಲಿಂಗ ನಿಮ್ಮ ಮನೆಯಾಗೆ
ಕೊಡೋಲ್ಲ ಹೆಣ್ಣ ಅಂದು ಬೊಮ್ಮಯ್ಯ ಹೇಳೋನಲ್ಲೋ
ಬೊಪ್ಪನೇ ತಿಂಬಾರು ನೀವು । ಬ್ರಹ್ಮಣರ ಕುಲವು ನಮ್ಮದು
ಮಾಂಸವು ತಿಂಬರು ನೀವು । ಮದ್ಯವನ್ನೇ ತಿಂಬರು ನೀವು
ಅಂತೆಂಬಾ ಹೊತ್ತಿಗೆಲ್ಲೋ ಜಪದ ಮುನಿ ಕಾಟಯ್ಯ
ಕರಿಯ ಕೊಂಬಿನ ಕುರಿಯ ತುಪ್ಪ ತೆಗೆದು
ಕಾಡಾಗಳ ತುಪ್ಪೆಂದು ಮರು ಜಗಳೂ ಕಾಟಯ್ಯ
ಜಂಗಮರ ಮತವ ತಟ್ಟನೆ ಕಡಿಸಿದನಂತೋ
ಹಾಳಗುರಿಯ ಬಳ್ಳಿ ಜೋಡಿಗೂ ತುಪ್ಪ ಬಲಿತು
ಕಾಡಾವಿನ ತುಪ್ಪೆಂದು ಮರಬೋಜ ಕಾಟಯ್ಯ
ಜಂಗಮರ ಮತವ ತಟ್ಟನೆ ಕೆಡಿಸಿದನಂತೋ
ನನ್ನಂತೆ ನೀನಾದೆಯಲ್ಲೋ ಬೊಮ್ಮಯ್ಯ
ನಿನ್ನಂತೆ ನಾನಾದೆನಯ್ಯೋ ।
ಕೊಡುತೀನಿ ಮಾಳಮ್ಮ ಎಂದು ಚಲ್ಲನೆ ಕೇಳೋನಂತೋ
ಇಳ್ಯಾವ್ರ ಹಿಡಿದರೆಲ್ಲೋ ಇಬ್ಬರೂ ದೊರೆಗಳು
ಮಾತೇನೂ ಆಡ್ಯಾರಂತೋ ।
ಎಂದಣ್ಣ ಆಯಿತವಾರ । ಎಂದಣ್ಣ ಸೋಮವಾರ

ಸುತಿ ಮತಿ ಬೆಸ್ತ್ರಳ್ಳಿಗೆ
ಮನೆ ನೋಡಾಕೆ ನಾವು ಬರುತೀವಿ ಅಂಬಾರಂತೋ
ನಾಳೆಣ್ಣ ಆಯಿತವಾರ ನಾಡುದ್ದು ಸೋಮವಾರ
ನಾಡುದ್ದು ಸೂಡಿದರೆ ಸುತಿಮತಿ ಬೆಸ್ತ್ರಿಹಳ್ಳಿಗೆ
ಮನೆ ನೋಡಾಕೆ ನೀವು ಬರಬೇಕು ಅಂಬೋರಂತೋ
ಅಂಬಾರದಾಗಿನ ಮಳೆಯಂಗೆ । ಮುಂಗಾರಿನ ಸಿಡಿಲಿನಂಗೆ
ಅಂಬಲಿಸದಂತೆ ಮುಡಿಗದು ಮುತ್ತಿನ ಗೊಡಬು
ತಂದೆ ಚಿತ್ತಯ್ಯನ ದನಿ ಕೇಳಿ ಅರುಚಾದಂತೋ
ಆಕಾಶದ ಮಳೆಯಂಗೆ ಒಳ್ಳೆ ಲೋಕದ ಸಿಡಿಲಿನಂಗೆ
ಆಕರಿಸದಂತೆ ಮುಳಿಗದು ಮುತ್ತಿನ ಗೊಡಬು
ಭೂಪ ಚಿತ್ತಯ್ಯನ ದನಿ ಕೇಳಿ ಅರುಸೋದಂತೋ
ಹನ್ನೆರಡು ಪಾಟಲದ ದಂಡು ಭೂಮಿ ಬಿಟ್ಟು ಏಳೋದಂತೋ
ಕರಿಮಲೆಯ ಬಿಡುವುದಲ್ಲೋ ತಿರುಣಿ ಪಟ್ಟಣಕೆ
ಮೂರುಗಾವುದ ದಂಡು ನಡೆಯೋದಂತೋ
ಅತ್ತಲಿಂದಾ ಬರುವ ಒಳ್ಳೆ ಹತ್ತು ಸಾವಿರ ಕುದುರೆನ
ಉತ್ತರಕ್ಕೂ ಮುಖವಾಗಿ ಅಂಬೋನಂತೋ
ಮೂಡಲಿಂದಾ ಬರುವ ಮೂನ್ನೂರು ಸಾವಿರ ಕುದುರೆ
ಮೂಗಿನ ಮೇಲಿನ ಕರಿಗಡುಬಿನಾ ಕುದುರೆ
ಉತ್ತರಕೆ ಮುಖವಾಗಿ ಅಂಬೋನಂತೋ
ಹತ್ತು ಸಾವಿರ ಕುದುರೆ ಒಳ್ಳೆ ಇಪ್ಪತ್ತು ಸಾವಿರ ಆಳು
ಹತ್ತು ಬೇಟೆ ಬಲವೆ । ಹತ್ತು ಬೇಟೆ ಬಲವೆ ನಿಮ್ಮ
ತಿರುಗಣಿಯ ಸುಡುತೀವಿ ಕಾಲ ಅಂಬಾರಂತೋ
ಆರು ಸಾವಿರ ಕುದುರೆ ಒಳ್ಳೆ ಹದಿನೆಂಟು ಸಾವಿರ ಫಲವೆ
ನಿಮ್ಮ ತಿರುಗಣಿ ದೊರೆಯಾಗೆ ದೂಳು ಮಾಡೇವು
ಬೆಳಗಾಗಿ ಅಂಬೋನಂತೋ

ಕುದುರನೆ ಏರಿಕೊಂಡು ಮಜ್ಜನಕ್ಕೆ ಚಿತ್ತಯ್ಯ
ಬರುತಾನೆ ತಿರುಗಣಿಯ ಬುದ್ಧಿವಂತರಾಗೋ ಇರಹೇಳೋ
ಪಟ್ಟದಾನೆ ಮೇಲೆ ಒಳ್ಳೆ ಉಡುಪು ಹೇರಿಕೊಂಡು
ಜಾವತ್ತಿಗೆ ಚಿತ್ತಯ್ಯ ಬರುತಾನೆ ತಿರುಗಣಿ ಪಟ್ಟಣಕೆ
ಜಲವಂತರಾಗೋ ಇರುಹೇಳೋ ।
ತಿರುಗಣಿಗೆ ಹೋಗೋದಲ್ಲೋ । ತಿರುಣಿ ಪಟ್ಟಣಕೆ

ದಂಡೂನೆ ನಡೆಯೋದಂತೋ
ಬಾಣನೆ ಹಾರಿದವು ಒಳ್ಳೆ ಬಾಣೆಲ್ಲ ಹಾರಿದವು
ಬಾಣನೆ ತಿರುಗಣಿ ಬಾಣ ಹಾರಿದವು ದಗನಾಕೋ
ಗುಂಡಾನೆ ಹಾರಿದವು ಒಳ್ಳೆ ಗುಂಡೆಲ್ಲ ಹಾರಿದವು
ಗುಂಡಾನೆ ತಿರುಗಣಿಯ ಊರ ಮೇಲೆ
ಗುಂಡು ಹಾರಿದವು ದಗನಾಕೋ
ಊರು ಬಾಗಿಲು ತಡೆಯೋದಲ್ಲೋ ನೋಡಣ್ಣ
ಜಾಡಿಸಿ ಒದ್ದಾರಂತೋ
ಮೂಡಲ ಮುಖದಾಗೆಲ್ಲೋ । ಮೂಡಲ ದಿಕ್ಕಿಗೆ
ಕಿಡಿಗಣ್ಣನು ಚಿತ್ತಯ್ಯನ ಡೇರೇವು ನಿಲ್ಲದೆಯೋ
ಪಡುವಾಲ ದಿಕ್ಕಿಗೆಲ್ಲೋ ನೋಡಣ್ಣ ನರಸಿಂಹನ ಡೇರೇವಲ್ಲೋ
ಟಿಂಕಾಲ ದಿಕ್ಕಿಗೆಲ್ಲೋ ನೋಡಣ್ಣ ಬೊಮ್ಮಯ್ಯನ ಡೇರೇವಲ್ಲೋ
ಬಡಗಾಲ ದಿಕ್ಕಿಗೆಲ್ಲೋ ಕಲಪಲ್ಲೆರ ಡೇರೇವಂತೋ
ನಟ್ಟನಾ ನಡುವೆಯಲ್ಲೋ ಭೂ ಚಕ್ರದ ಗೊಡವಿರುವಂತಹ
ಜಪದ ಮುನಿ ಕಾಟಯ್ಯನ ಡೇರೇವು ಒಡೆದಾರಂತೋ
ಡೇರೇವು ಒಡೆಸೆದೆಲ್ಲೋ ನೋಡಣ್ಣ ಮುಟಬಾರದವರು
ಮಟ್ಟಿದರಲ್ಲೋ
ಆರವರನ್ನು ಕರೆಸಿದರೆಲ್ಲೋ ಮುನ್ನೂರು ಗುದ್ನಿ
ಕುರಿಯ ಮುರಿಸಲು ಹೇಳಿದರಂತೋ ।
ಆರುನೂರು ಗಬ್ಬದ ಕುರಿಯ ನೋಡಣ್ಣ
ಹಲಿಯಾನೆ ಬಿಡಿಸಿದನಂತೋ
ಮೂನ್ನೂರು ಗುದ್ದಲಿಗೆಲ್ಲೋ ನೋಡಣ್ಣ
ವಡ್ಡರ ಕರೆಸಿದರಂತೋ । ವಡ್ಡರಾ ಕರೆಸಿದರಾರಲ್ಲೋ
ನೋಡಣ್ಣ ಭೂಮಿನೆ ಅಗಿಸಿದರಂತೋ
ಹನ್ನೆರಡು ಹನ್ನೆರಡು ಇಪ್ಪತ್ತುನಾಲ್ಕು ಜೊತೆ
ಎತ್ತಿನ ವರ್ಜಿನೆ ಕಟ್ಟಿಸಿದನಂತೋ
ವರ್ಜೀನೆ ಕಟ್ಟಿಸಿದನಂತೋ ।
ಜಂಪಾರೆ ಹೆಚ್ಚಿನ ಗೊಡಗು ಕಡೆಗೇನೆ ಒಡಿಸಿದನಂತೋ
ಕಡೆಗೇನೆ ಒಡೆಸಿದನಂತೋ ನೋಡಣ್ಣ ।
ಹತ್ತಿಯ ಮರಕ್ಕೆ ಬಳ್ಳೆ ಹಾಕಿದರೋ ಕತ್ತಿಯ
ಹತ್ತಿ ನೋಡಿದರೆ ತಿರುಗಣೆ ಊರು ಮುಂದೆ
ಹುಟ್ಟಿದ ಮಕ್ಕಳು ಪಟ್ಟಣದಾಗ ಸುಳಿವಿಲ್ಲವಂತೋ


ಆಲದಾ ಮರದಾಗೆ ಹಾಕಿದ ಅಗೇವು
ಆಡೋ ಮಕ್ಕಳು ಸುಳಿವಿಲ್ಲ
ಯರಗಂಟಿ ಎರಜನ್ನರು ಬಿಟ್ಟಂತ ಬಾಣವು
ಜಪದ ಮುನಿ ಕಾಟಯ್ಯನ ಪಾದಕೆ ನಮಸ್ಕಾರ ಮಾಡುತ್ತಾನೆ
ಚಿತ್ತಯ್ಯ ಕಾಟಯ್ಯ ಬಿಟ್ಟಂತ ಬಾಣಗಳು ।
ಬಾಣಗಳು ಬಾಣಕು ತಗುಲಿ । ತಿರುಣಿ ಪಟ್ಟಣದಾಗೆ
ಸೋನೆ ಮಳೆಯಂಗೆ ಉರಿದಾವಂತೋ ।
ಪಟ್ಟಣ ಆಳಾಗೋದಲ್ಲೋ । ನೋಡಣ್ಣ ತಿರುಗಣಿ
ಪಟ್ಟಣವೆ ಆಳಾಗೋದಲ್ಲೋ ।
ಭೂ ಚಕ್ರದ ಗೊಡಗು ತಕ್ಕಂಡು ಒಲೆಮಾರೆ ಬಿಡುವರಂತೋ
ಓಲೆಮಾರೆ ಬಿಡುವರೆಲ್ಲೋ । ನೋಡಣ್ಣ
ತಾನೂನೆ ಬಲಿಯಾಗುವರೆಲ್ಲೋ
ತಾರಾವಳಿಯಾಗುವರೆಲ್ಲೋ । ದೇವತರು
ತಾವು ಕಾಣೆ ಆಗುವರಂತೋ
ನಾಮಕರಣ ಮಾಡುವರೆಲ್ಲೋ ದೇವತರಿಗೆ
ಲಿಂಗ ಪೂಜೆಯಾಗುವುದಂತೋ
ಸಹಸ್ರ ಕಾಟೇಲಿಂಗ । ನೋಡಣ್ಣ ಲಿಂಗ ಪೂಜೆಗೋದಲ್ಲೋ
ಮೂವಾರು ದೇವತರು ಕತ್ತಲು ಕರಿಮಲೆಗೆ
ಮಾಡಿದಂತೆ ಅಡಿಗೆನಾ ಬಾಯಿನೆ ಬಿಚ್ಚೋರಂತೋ
ಬಾಯಿನೆ ಬಿಚ್ಚೋರಲ್ಲೋ । ನೋಡಣ್ಣ
ಉದುರಾನೆ ಹೊಡಿಯೋರಂತೋ
ಮೂವರು ದೇವತರು ಕೂಡೂಟ ಮಾಡಾರಲ್ಲೋ
ಮೂವಾರು ದೇವತರು ಅಲ್ಲಿ ಕೂಡೂಟ
ಮಾಡಾರಂತೋ ।

* * *

## ಅರ್ಥಕೋಶ

ಅಸುಮಗ – ಮುಗ್ಧ ಮನುಷ್ಯ
ಕಲಪಲ್ಯ – ಒಂದು ದಂಡಿನ ಹೆಸರು
ಗೊಡಗು – ಮುತ್ತಿನ ಬಂಗಾರದ ಛತ್ರಿ
ಗಬ್ಬದ ಕುರಿ – ಗರ್ಭಿಣಿ ಕುರಿ
ಅಂಗೇನು – ಋಣ
ಇಳ್ಳು – ರಾತ್ರಿ
ಎರವು – ಆಶ್ರಯ

ಎಳಾವತ್ತು – ಮುಂಜಾವು
ಒಂದಾನೆ – ಒಂದು
ಕೋಲ್ಮಿಂಚು – ಮಿಂಚು
ಭೂಪಾ – ಭೂಮಿ
ಮಂಡಾದ್ರಿ – ಕಪ್ಪೆ
ಮೂಳ – ನಾಯಿಯ ಹೆಸರು
ಶ್ಯಾಕರಿ – ಚಾಕರಿ [ಸೇವೆ]
ಹೊತ್ತಿಗೆ – ಪುಸ್ತಕ
ದುಸುಮಾನ್ಯರು – ಕೆಟ್ಟ ಮನುಷ್ಯರು
ದಗಡಿ ಮಗ – ಹಾದರಕ್ಕೆ ಹುಟ್ಟಿದ ಮಗ
ಹೆಗ್ಗಾಡಿ – ಕಹಳೆ
ತೋಟಿ – ಸೇವಕ
ತಳವಾರ – ಸುದ್ಧಿ ಮುಟ್ಟಿಸುವವನು
ರಾಯಗತ್ತಿ – ಮುಖ್ಯವಾದ ಒಂದು ಕತ್ತಿ, ರಾಜ ಹಿಡಿಯುವ ಆಯುಧ
ವರ್ಜಿ – ನೂಲಗ್ಗೆ
ಮಿಕ – ಪ್ರಾಣಿ
ಪಾಲೇರದ ಕುಲ – ಪವಿತ್ರವಾದ ಕುಲ
ಮುಂಜರುಗು – ಸೀರೆಯ ಸೆರಗು
ಪೀಸಾಡ – ಕುದುರೆ ಮೇಲೆ ಹಾಕುವ ಬಟ್ಟೆ



**ಕಾಡುಗೊಲ್ಲರ ಬಾಳೆಪಟ್ಟೆ ಗುಬ್ಬಗಳು (ಗುಡಿಗಳು)**

## ೫. ಎತ್ತಯ್ಯನ ಕಾವ್ಯ

ಹೆಸ್ರೋ ಎತ್ತದುಕ್ಕಿನ್ನ ಒಳ್ಳೆ ದಶುವಂತನ ನೆನೆದೆವೋ
ಹೆಸ್ರಿಗೆ ಸನ್ನಾರೆ ಮದ್ನಾರೋ । ಬಂಜಿಗೇರಿ
ದೆಸಿವಂತ ಈರಣ್ಣನ ನೆನೆದೆವೋ

ಸೊಲ್ಲೆ ಎತ್ತದುಕ್ಕಿನ್ನ ಒಳ್ಳೆ ಬಲ್ಲಿದೋನ ನೆನದೆವೊ
ಸೊಲ್ಲಿಗೆ ಸಲ್ಲೋರೆ ಮದ್ನಾರೋ । ಬಂಜಿಗೇರಿ
ಗೆಲ್ಲಿದ ಈರಣ್ಣುನ ನೆನೆದೇವೋ

ಎದ್ದು ನೆನೆದೆವೊ ಒಳ್ಳೆ ಮುದ್ದು ಮೂಡುಲಗಿರಿಯಾನ
ಮಗ್ಗೆ ಅರಳ್ಹೊತ್ತಿಲಿ ನೆನೆದೇವೋ

ಸಣ್ಣಕ್ಕಿ ಸಾವಿರ ಒಳ್ಳೆ ಎಣ್ಣೆ ಮೂಗಂಡುದ
ಹಣ್ಣೀನ ಹೆಡಿಗೆ ಹದಿನಾರೊ । ಈರಣ್ಣ
ಸಂಪೂತ್ತಿಲಿ ಇಳುದಾ ಜಲಪಾಕೋ

ಬಾಳೆ ಹಣ್ಣೀನ್ಹಂಗ ಒಳ್ಳೆ ಬಾಗಿರುವ ಗಂಗಮ್ಮ
ತಾವೇನೆ ಕೊಡು ನಮ್ಮ ಗುರುವಿಗೋ । ಈರಣ್ಣಾಗೆ
ಸಾವುರದೊಂದು ಗಂಟೆ ತೊಳಿಯಾಕೋ

ನಿಂಬೆ ಹಣ್ಣೀನ್ಹಂಗ ಒಳ್ಳೆ ತುಂಬಿರುವ ಗಂಗಮ್ಮ
ಇಂಬೇನೆ ಕೊಡು ನಮ್ಮ ಗುರುವಿಗೋ । ಈರಣ್ಣಾಗೆ
ಬಂಗಾರುದ ಗಂಟೆ ತೊಳಿಯಾಕೋ

ಅರಿಯಾ ಮ್ಯಾಲಂಗೂಡಿ ಗಿರಿಯಾ ಮ್ಯಾಲ ಪರವುತವೊ
ಬಲಭುಜದ ಮ್ಯಾಲೊ ಶಿವಶಂಕೊ । ಗೋವಿಂದ
ಹರನಂದು ಗಿರಿಯ ಇಳಿದವ್ನೋ

ಸಾರನೂರ ಗುಡ್ಡದೊಳೆ ಸಾಗಿಗಣ್ಣೀನ ಸತ್ತಿ
ಮಾತುನಾಡ ತಾಯಿ ಮನಬಂದ್ಹಂಗೋ

ದೊಡ್ಡೇರಿ ಸೀಮಿಗೆ ಒಳ್ಳೆ ದೊಡ್ಡೋಳೆ ಕಾಣೆ ಬಿದುರಮ್ಮ
ಒಡ್ಡಿದಲ್ಲೆ ತಾಯಿ ಮರುಬಿಲ್ಲೋ ತಳಕೀನ
ಒಬ್ಬೇಲಾಡಿದಳಮ್ಮ ಜಗಬ್ಯಾಟೋ

---

ಹಾಡಿದವರು : **ಕ್ಯಾತಪ್ಪ**, ಸ್ವಾಮನೋರ ಗೊಲ್ಲರು, ತಾಳಕೆರೆ, ರಾಯದುರ್ಗ ತಾ., ಅನಂತಪುರ ಜಿಲ್ಲೆ, ಆಂಧ್ರ ಪ್ರದೇಶ.
ಸಂಗ್ರಹ : **ಡಾ. ಕೆ.ಎಂ. ಮೈತ್ರಿ**
ಕೃತಿ : ಕೃಷ್ಣಗೊಲ್ಲರ ಕಥನ ಕಾವ್ಯಗಳು, ಪ್ರಸಾರಾಂಗ, ಕನ್ನಡ ವಿ.ವಿ., ಹಂಪಿ, 2000.

ಕಲ್ಲಿನಾಗ ಹುಟ್ಟ್ಯವಳೆ ಕಲ್ಲಿನಾಗ ಬೆಳೆವಳೆ
ಸೊಲ್ಲೆ ಸೊಲ್ಲಿಗೆ ಸ್ಮತಿ ಕಲಸಮ್ಮೋ

ಪಟ್ಟೇಯದಟ್ಟ್ಯಾರು ದನಗಳು ಕಟ್ಟಿದ ಮರುಬಿಲ್ಲನೇ
ಹುಟ್ಟ ಮಾರುಗದೊರಿಗೆ ಮಯಿಗುದ ಗೌಡವೋ
ಕುರಿಯ್ಹಟ್ಟಿ ಕರ್ತಾನೊ ಒಳ್ಳೆ ಹಿರಿಯ್ಹಟ್ಟಿನೇ ಗೌಡವೋ

ಜಂಗಳಿ ಕುದುರ್ಗ್ರೋನಣ್ಣ ಜಂಪಲು ಮಂಡ್ಯೋನಣ್ಣ
ಗಂಡಿನಿ ಕ್ವಾಟೊನಂತೆ ಗಡಿನಾಮುದ ಚಿತ್ತಯ್ಯ
ಜಡಿಯಾ ಜಂಗಮನ ಬಲಗರ್ದೆವೋ

ತರಿಯದು ಕಳ್ಳೇನು ತರುವ ಜನ್ನಿಗವ್ನೇ
ಅಡ್ಡನು ಕಳ್ಳೇನು ದೊಡ್ಡವ್ನು ದಯ ಮಾರ್ರ್ಯೋವ್ನು
ಮಾರಿಕುಲದವ್ನು ಮಯಿಗುದ ಗೌಡಂದಾವೋ

ಲೆಕ್ಕಕೊಂದು ಕರ್ಸ್ರಿ ಎತ್ತೀನ ಬೋಗಿನ
ಚಿಕ್ಕ ಹುಲಿಕುಂಟೆ ಸಬುಗೀನ ದಾಯಾಕೆ
ಆವೆ ಎತ್ತಯ್ಯ ಬರ್ಬೇಕೋ

ಕಲ್ಲೊಂದೇ ಕರಗ ಹೊತ್ತು ಶಿವನು ಬೆಲ್ಲ ಮೇವೊವತ್ತೂ
ಹರ್ದೋಗೊ ಗಂಗಿ ಗೌರಿ ನಿಂತು ನಿದ್ರೆ ಮಾಡೊ ಹೊತ್ತು
ಬೆಂಕಿಗೆ ಸೆದಿಲೆನೆ ಬಡಿಯೊ ಹೊತ್ತು ಮಲ್ಲಣ್ಣ
ಅಷ್ಟೆಂಬೊ ಹೊತ್ತಿನಾಗ
ಕಾಲುತುಣದೆ ಕಾರುಣುವೆ ಏನಂದಾವೋ

ಕಪ್ಪೆ ಕಲುಕುದ ನೀರು ಕುಡಿಸ್ಯಾನೆ ಬಟ್ಟಣ್ಣ
ಕುಲಕೊ ಛಂದಾದ್ದುಲ್ಲು ಮೇಸೆನೋ ಬಟ್ಟಣ್ಣ
ಕಾಲ್ತುಣದೆ ಕಾರುಣವೆ ಏನಂದಾವೋ

ಅಂಜಿ ಬಿನ್ನವ ನಾನು ಮಾಡೆನೋ ಎತ್ತಯ್ಯವೋ
ಅಂಜುದಲೆ ಬಿನ್ನ ಮಾಡಲಿಲ್ಲವೋ

ಅಂಜೋದು ಯಾತಾಕೆ ಅಳೋದು ಯಾತಾಕೆ
ಉಂಡೂನೆ ಊಟುಗುಳು ಕಂಡೂನೆ ಕನಸುಗಳು
ಮನಸೀಲಿಡಬಾರದು ಮತ್ತೆ ಕಾಣೋ ಬಟ್ಟಣ್ಣ
ಬಂದುದ್ದೆ ಬಂದ್ಹಂಗ ಬಿನ್ನ ಮಾಡಮ್ಮೋ

ವತ್ತಾರಿನ ಬಿರಿಗಾಳಿ ಬಯಿಸಾರಿನ ಮುರಿಮಾಡ
ಬಯಿಸೆರಿನ ಬಿರಿಗಾಳಿ ಒತ್ತಾರಿನ ಮುರಿಮಾಡ
ಒಣಸಿಡುಲಾರೆ ಕನಸೊ ನಾನು ಕಂಡೆ ಎತ್ತಯ್ಯ
ಹೊಟ್ಟಿಗುಡುಗು ಕಣಸೆ ನಾನು ಕಂಡೆ ನೋಡೂ
ಎತ್ತಾವಿನ ಶಾಬ್ರುದ ದಿನಮಾನುದ ಕನಸುಗಳೇ
ನಾನೆ ಕಂಡೆ ಕಾಣೊ ಮಯಿಗುದ ಗೌಡ ವೋ

ಮುಂಗಾರಿನ ಮಳೆ ಬಂದು ಮತ್ತೇನೆ ಬಟ್ಟಣ್ಣ
ಮುಂದಲ ಹೊಕ್ಕರು ಕಾಣದಂತೆ ಬೆಳದೈತೆ
ಹಳ್ಳಾದ ಹುಲ್ಲೊಂದು ಹಳ್ಳಡಿ ಬೆಳದಾವಮ್ಮ
ಕಾಡದಾಗೆ ಹುಲ್ಲಂತೆ ಕರಿ ಎತ್ತೀನುದ್ದಮ್ಮ
ಗುಬ್ಬಿಸಿ ರಾಜಣದ್ಹುಲ್ಲು ಕುತಿಗುದ್ದ ಬೆಳದಾವೊ
ಸೂಸುಗುದ ಹುಲ್ಲೆನೆ ತೆರಿ ಹೊಯ್ತಾತೇ ನೋಡೊ
ಈ ಹುಲ್ಲಿನ ಮ್ಯಾಲೆ ಒಳ್ಳೆ ನೀರಿನ ಮ್ಯಾಲೆನೆ
ಬಂದಂದಿಗೆ ನೋಡಿಕೊಂಬೊನಂದಾ ವೋ

ಏಳೇ ದಿನಂಬೊದೊಂದೂ ಏಳ ತಿಂಗಳೆತ್ತಯ್ಯ
ಎಂಟೇ ದಿನಂಬೊದೂ ಎಂಟ ತಿಂಗಳಾಗೋದು
ಮುಂದ್ಲಾಗೆ ಹೋಗಿ ಒಳ್ಳೆ ಹುಲ್ಲೇನಾ ಮೇಯ್ದಾರೆ
ಅದ್ರಿಂದ ನಾವ್ ನೋಡೊ ಪುಳ್ಳೇನಾಯೋದಣ್ಣ
ಅದ್ರಿಂದ ನಾವ್ ನೋಡೊ ಬುಡಸೆ ತಿಂಬೊದಣ್ಣ
ಮುಂದ್ಲಾಗೆ ಹೋಗಿ ಒಳ್ಳೆ ನೀರನ್ನ ಕುಡ್ದಾರೆ
ಅದ್ರಿಂದ ನಾವ್ ನೋಡೊ ಗೋತಾ ಕುಡಿಯೋದಮ್ಮ
ಅದ್ರಿಂದ್ ನಾವ್ ನೋಡು ಗ್ವಾತ ಹಾಕೋದು

ಅರೆ ಕಂಡ ಕಾಣೊ ಎತ್ತಯ್ಯ
ಮಾಡ್ಯವ್ನೆ ನೋಡೊ
ಬಾರಯ್ಯ ಒಲಿಗ್ಯಾನೆ
ಮತ್ತೇನೆ ಮಲ್ಲಯ್ಯ

ನಾವೆ ಉಳಿಯೊ ಹೊತ್ತೆ ಬರ್ಲಿಲ್ಲಾವೋ
ನಾವೆ ಉಳಿಯೋ ಹೊತ್ತ
ಬರ್ಲಿಲ್ಲ ಮಲ್ಲಯ್ಯ
ನಮ್ಮೆತ್ತು ಉಳಿಯ ಹೊತ್ತೆ ಬರ್ಲಿಲ್ಲಾವೋ

ಎತ್ತೆ ಸತ್ತರು ನಾವೇನೆ
ಎತ್ತು ತಿರುಗಲಾಳೇವು
ಆವು ಸತ್ತರು ನಾವು
ಆವು ತಿರುಗುಲಾಳೇವು
ಹೋರಿ ಸತ್ತರು ನಾವು
ಹೋಗಿ ತಿರುಗಲಾಳೇವು
ಹೆಂಡರು ಸತ್ತರು ನಾವು
ಹೆಂಡರುನಾ ಪಡದೆವೋ
ಮಕ್ಕಳು ಸತ್ತರು ನಾವು
ಮಕ್ಕಳೂನ ಪಡದೆವೋ
ಕಾರೆ ಕಣ್ಣೀನ ಕದಪುರುಷ
ಕಾಲಿಲಿ ಗ್ಯಾನುದ್ಧರಿಯೆ
ಬಾಲದಿಲೆ ಬಲವಂತ
ಬೆನ್ನಿಲಿ ಬಲು ಬೇತಾಳ
ಮುನ್ನೂರು ತಡಿಸಿಗಿನ್ನ
ಮುಂದ್ಹುಟ್ಟಿದವ್ನು ಭಟ್ಟಣ್ಣನ್ನಾ
ಅವ್ನು ಸತ್ರೇ ನಾವೆಲ್ಲಿ ತಿರುಗಾಳೇವೋ

ಬಾರಯ್ಯ ಒಳ್ಳೆ ಒಲಿಗ್ಯಾನೆ ಮತ್ತೆನೆ ಮಲ್ಲಯ್ಯಾ
ಸ್ವಾಮಾರದ್ಹೊತ್ತುಗಳು ಮೀರ್ತಾವೆ ಮಲ್ಲಯ್ಯ
ಗೂಡೆ ಕಟ್ಟೇಕಂದ ಮಯಿಗುದ ಗೌಡಾವೋ

ಕಾರೆಕಳ್ಳೆ ಕಡ್ದು ಕರಿವಿನ ಗೂಡ ಹೊತ್ತಿದರು
ಹುಲಿ ಕಳ್ಳೆ ಕಡ್ದು ಉದಿಮೋರೊತ್ತಿದ್ರಣ್ಣ
ಅಂದ ಚಂದದ ಕಳ್ಳೆ ಗಂಧಮಾವುದ ಬೆರ್ಗಣ್ಣ
ಹಚ್ಚನ್ನ ಕಳ್ಳಂತೆ ಪಚ್ಚೆದು ಬೆರ್ಗಣ್ಣ
ಹೂವ್ವಿನುಕ್ಕುಡ ದ್ಯಾವರು ಬೆರಗಣ್ಣ

ಉಳವೆ ಕೋಲು ನೋಡು ಉಗ್ಗುದ ಗಡಿಗೆ ನೋಡು
ಉಕ್ಕುಡುದ ಕೋಪಿಗೆ ಇಟ್ಟವ್ನೆ ಎತ್ತಯ್ಯ

ಅಡಿಯಾ ಸಿಗಸರ್ದವ್ನೆ ಬೆಂಕಿ ಮಾಡಿದುನಣ್ಣ
ಮೂರೆನೆ ಕಣ್ಣಿನುದು ಕರಿಯಾನೆ ಸಿಪ್ಪಿನುದು
ದ್ರಿಷ್ಠಿಯನ್ನಾಕಾಯಿ ತಕ್ಕಂಡು ನಿನ್ನೆತ್ತಯ್ಯ
ಎತ್ತಿಗಾಗೊ ಹೋಮ ಸುಡ್ತಾನಣ್ಣ ವೋ

ಎತ್ತಾವೆ ಗೂಡೆನೆ ಸೇರಿಕ್ಯಂಬೋದು ನೋಡು
ಮೋವುದಾರಿನ ಕರುವನ್ನು ಬಿಟ್ಟವ್ನೆ ಮಲ್ಲಯ್ಯ
ಒಳಸ್ಯಾರಿ ಹೊರಸ್ಯಾರಿ ಆಲೆನೆ ಕರ್ಕಂಡು
ಉಕ್ಕಿರಿಸುಗ್ಗಿ ಮಾಡಿ ಕಡಿಗಿಟ್ಟ ಮಲ್ಲಯ್ಯ
ಜಾಲಿ ಬಂಡಿ ಎಲಿಯ ಪತ್ತುರುವಳ್ಳೆ ಕಟ್ಟಿ
ಸಣ್ಣಾದೊಂದುಟ ಮಾಡಿದುರುಣ್ಣಾ ವೋ

ಸೀಗಿರಿ ಸಿಕ್ಕಡಿಕ್ಯಂತೆ ಬಾಗೂರು ಬಿಳಿ ಎಲಿಯಣ್ಣ
ತಾವೂರಗೆರಿಯೆಂಬೋದು ಸೊಸಿದು ಕೆನಿ ಸುಣ್ಣವಾ
ಗಟ್ಟದನ್ನ ಸೀಮೆ ರಟ್ಟಿ ಎಸಲಿನ ಸೊಪ್ಪು
ಸಣ್ಣದೊಂದಿಳ್ಳೇವು ಮಡಸಿದುಣ್ಣವೋ

ಆವೀನ ಹಾಸೀಗೆಣ್ಣ ಶೇಳಿ ಶೇಳಿನ ಮಂಚಾ
ನಾಗಬೂಷುಣವೆ ತೆಲಿಗಿಂಬು
ಕಲ್ಲಿನಾಸೀಗಂತೆ ಮುಳ್ಳು ಮುಳ್ಳಿನ ಮಂಚ
ಶೆಲ್ಲ್ಯಾರೆ ದಟ್ಟಿ ತೆಲಿಗಿಂಬು

ಹತ್ತು ಸಾವಿರದಂಬು ತಕ್ಕಿಗೆ ಸಾಸಿಕಂಡು
ಹತ್ತು ಸಾವಿರದಂಬು ತೋಳಿಗೆ ಸಾಸಿಕಂಡು
ಬೇವಿನ ಸುರುನರಿ ಬಿಲ್ಲು ಬೆನ್ನಿಗೆ ಕಟ್ಟಿಕೊಂಡು
ಕೈಯಿಲಿ ಕತ್ತಿರಿ ಬಾಣ ನೆತ್ತಿಲಿ ನೆತ್ತುರು ಬಾಣ
ಸುರ್ನಾರೆ ಮರ್ಬಿಲ್ಲು ಒಳ್ಳೆ ಸೂರಿದುನ ಒದಿಯಂಬು
ಸೂಡಿಕಂಡ ಗನಗುರುವೆ ಮತ್ತೆ ನಿನ್ನೆತ್ತಯ್ಯ
ಶಿವಕೊಟ್ಟ ಚಿಪ್ಪುಗೊಡ್ಲಿ ಪಕ್ಕೆಯಲಿಟ್ಟುಕೊಂಡವ್ನೆ
ನಾರಾಯಣ ಕೊಟ್ಟಂತ ನಾರಗಲ್ಲು ನೋಡು
ತಲಿದಿಂಬು ಮಾಡಿದನಣ್ಣ ಮತ್ತೇನ ಎತ್ತಯ್ಯ
ಒಕ್ಲೂವ್ವ ಹಾಸಿಕ್ಯಂಡ ಒಕ್ಲೂವ್ವ ಹೊದ್ದುಕೊಂಡು
ಮನಿಗಿದ್ರೊ ಗೌಡ ಮನಿಗುದ್ನಣ್ಣಾ ವೋ

ಮನ್ಗುವಾಗ ಏನಂದ ಒಳ್ಳೆ ಮತ್ತೇನೆ ಎತ್ತಯ್ಯ
ಹುಲ್ಲನೀರೊ ನೋಡಾಕ ಹೋಗ್ಬೇಕ ಒಲಿಗ್ಯಾನಯ್ಯ
ಮುಂಗಳಿ ಕೂಗೋದಣ್ಣ ಒಳ್ಳೆ ಮೂಡಲು ಕೆಂಪಗಾಗ್ತೊತ್ತಿಗೆ
ಬೆಳವಿನ ಕಾಯೋಟು ಬುತ್ತಿ ಕಟ್ಟಬೇಕಮ್ಮಾ ವೋ

ಮುಂಗೋಳು ಕೂಗ್ಹೋದಣ್ಣ ಒಳ್ಳೇ ಮೂಡಲು ಕೆಂಪಗಾಗ್ಹೊತ್ತಿಗೆ
ಎದ್ದವ್ನೆ ಒತ್ತುಂಟೆ ಮತ್ತೇನೆ ಮಲ್ಲಯ್ಯ
ಮಕಮಾರಿ ತೊಳ್ಕಂಡು ಕಾಲ್‌ಕೈ ತೊಳ್ಕಂಡು
ಮೋವುದಾರಿನ ಕರುವನ್ನೆ ಬಿಟ್ಟವ್ನೆ ಮಲ್ಲಯ್ಯ
ಒಳಸ್ತ್ಯಾರೆ ಹೊರಸ್ತ್ಯಾರೆ ಹಾಲೇನೆ ಕರಕಂಡು
ಉಕ್ಕುರಿಸುಗ್ಗಿ ಮಾಡಿ ಕಡಿಗಿಟ್ಟ ಮಲ್ಲಯ್ಯ
ಜಾಲಿ ಜಂಬಿ ಎಲಿ ಪುತ್ತುರುವಳಿ ಕಟ್ಟಿ
ಬೆಳುವಿನ ಕಾಯೋಟುಬುತ್ತಿ ಕಟ್ಟಿ ಕಡಿಗಿಟ್ಟವ್ನೆ
ಏಳೇಳಿರಿ ಭಾವಾ ಅಡಿಗಾದಾವೋ

ಎದ್ದು ಕಣ್ಹೋ ಎತ್ತಯ್ಯ
ಮತ್ತೇನೆ ಘನಗುರುವೆ
ಮಕಮಾರಿ ತೊಳ್ಕಂಡು
ಕಾಲ್‌ಕೈ ತೊಳ್ಕಂಡು
ಅಗ್ಗಣ್ಣಿಯ ತಕ್ಕಂಡು
ಮಜ್ಜಣ ನೀಡಿಕಂಡು
ಸಣ್ಣಾದೊಂದೂಟ ಮಾಡಿದ್ರಣ್ಣ ವೋ

ಸಣ್ಣಾದೆ ಒಂದೂಟ ಮಾಡಿದನೆ ಎತ್ತಯ್ಯ
ಸಣ್ಣಾದೊಂದಿಳ್ಳೇವು ಧರಿಸಿದ್ನಣ್ಣ ವೋ

ಮದ್ದಿಗಿರಿ ಕಂಬಾಳಿ ತಿದ್ದಿ ಹೆಗಲಿಗ್ಹಾಕವ್ನೆ
ಬೆಳವಿನ ಕಾಯೋಟು ಬುತ್ತಿ ಮೂಲಿಗಾಕಿದುನಣ್ಣಾ
ಕೈಯಿಲಿ ಕತ್ತಿರಿ ಬಾಣ ನೆತ್ತಿಲಿ ನೆತ್ತುರುಬಾಣ
ಸುರ್ನಾರಿ ಮರ್ಬಿಲ್ಲು ಒಳ್ಳೆ ಸೂರಿದುನ ಹೊದಿಯಂಬು
ಸೂಡಿಕೊಂಡು ಗನಗುರು ಮತ್ತೆ ನಿನ್ನೆತ್ತಯ್ಯ
ಶಿವಕೊಗಟ್ಟ ಚಿಪ್ಪುಗೊಡ್ಲಿ ಹೆಗಲಿಗಿಟ್ಟುಕಂಡವನೆ

ನಾರಾಯಣ ಕೊಟ್ಟಂತ ನಾರಗಲ್ಲಿಯೇ ನೋಡು
ಹೆಗಲಿಗ್ಹಾಕಿದುನಣ್ಣ ಮತ್ತೇ ಮಯಿಗುದ ಗೌಡ ವೋ

ಬಾರಯ್ಯ ಒಲಿಗಾನಿ ಮತ್ತೇನೆ ಮಲ್ಲಯ್ಯ
ಹುಲ್ಲು ನೀರೆ ನೋಡಾಕ ಹೋಗ್ತಿನಲ್ಲಿಗಯ್ಯ
ತಣ್ಣನ್ನವು ಮೂರರಕೆ ಕೊಡ್ಬೇಕಂದಾವೋ

ಹೋಗೊನ್ಹೋಗ್ತಿ ಭಾವ ಮತ್ತೇನೆ ಭಾವಯ್ಯ
ಎತ್ತಾವೇ ಏನು ಕೊಟ್ಟು ಪ್ರಾಣ ಪಡಿಯಾಲೋ

ಒಂದೇನೆ ಗೂಡಿಗೆ ಕಂಬೂಳಿ ಕೊಡಯ್ಯ
ಒಂದೇನೆ ಗೂಡಿಗೆ ಕೈಸಿಕ್ಕ ಕೊಡಯ್ಯ
ಒಂದೇನೆ ಗೂಡಿಗೆ ರೂಮಾಲ ಕೊಡಯ್ಯ
ಒಂದೇನೆ ಗೂಡಿಗೆ ನೀನಿರು ವಲಿಗಾನಯ್ಯ
ಅಷ್ಟೊತ್ತಿಗೆ ನಾನೇ ಬರ್ತಿನಂದಾವೋ

ಅರೆ ಎತ್ತಯ್ಯನ ಗೂಡಿನಾ
ಸುತ್ತಾ ಮುತ್ತಾ ನೋಡು
ಈಟೀಟೆ ಕಾಲೋರು
ಈಟೀಟೆ ಕೈಯೋರು
ಹದ್ದುಗಳೇ ಗೆದ್ದುಗಳೇ
ರಣಬಂತುಗಳೇ ಮನಿಯೆ ಕಟ್ಟೈತಮ್ಮಾವೋ

ಅಗೆಯರ ಕೈ ಅಡಿಯಾಗಿ ನಿಮ್ಮ ಕೈಯೆ ಮೇಲಾಗಿ
ದುಸ್ಮಾನ್ನರು ಕೈ ಅಡಿಯಾಗಿ ಬರ್ಲೆಂದ
ನಿಮ್ಮಗಾರೆ ಓ ಭಾವಾ ದೇವಗಾರಾಗಿ ಬರ್ಲಂದ
ತಣ್ಣನ್ನವು ಮೂರ್ಥರಿಕೆ ಕೊಡ್ತಾನಣ್ಣವೋ

ಹುಲ್ಲುನೀರು ನೋಡಾಕೆ ಹೋಗ್ತಾನೆ ಎತ್ತಯ್ಯ
ಕಾಲು ಗಡಸೊವುನಣ್ಣ ತೋಳು ಬೀಸುವುನಣ್ಣ
ಎಡವಿದ್ದ ಕಲ್ಲೆ ಪುಡಿಪುಡಿಯಮ್ಮಾ ವೋ

ಮುಗ್ಗುರಿಸಿ ನಡುದರೆ ಒಳ್ಳೆ ಮೂರು ಗಾವುದಲ್ಹೋಗೋವ್ನೆ
ತಗ್ಗಿ ನಡುದರೆ ನಾಕೆ ಗಾವುದ ವೋ

ಸೂರುದು ಒಂದೇ ಭಾಗ ಚಂದುರು ಒಂದೇ ಭಾಗ
ಸ್ವಾಮಿ ಎತ್ತಯ್ಯ ಒಂದೇ ಭಾಗಣ್ಣಾ ವೋ

ಅಡ್ಡೊಂದೇ ಅರುಗಾವುದೆ ಶಿವನ ನೆನದವ್ನೆ ಎತ್ತಯ್ಯ
ಕಣಕುಪ್ಪೆ ಸೀಮೇನೆ ಕುರಿತು ನೋಡಿದುನೋ ಎತ್ತಯ್ಯ
ಬ್ಯಾಡರು ಸೀಮೇನೆ ಬಗ್ಗಿ ನೋಡಿದುನೋ ಎತ್ತಯ್ಯ
ತುರುಕರು ಸೀಮೇನೇ ತೂರಿ ನೋಡಿದುನೋ ಎತ್ತಯ್ಯ

ಅರ್ತಿ ಐಮಂಗುಳುವೆ ಗುತ್ತಿ ಗುಡಿಯ ಕ್ವಾಟೆ
ಸುತ್ತೇಳು ರಾಜ್ಯಾವು ವತ್ತುಕಟ್ಟಿ ತಿರುಗಿದನೊ
ಎತ್ತಿಗೆ ಹಿಡಿ ಹುಲ್ಲು ಸಿಗಲಿಲ್ಲಾಂದಾವೋ

ಆದುವಾನಿ ಸೀಮೆ ನೋಡಿ ಬಂದೆತ್ತಯ್ಯ
ಆವಿಗೆ ಹಿಡಿ ಹುಲ್ಲೇ ಸಿಗಲಿಲ್ಲಾವೋ

ಸೊಂಡಲೂರ ಸೀಮೇನೆ ಕಂಡುಬಂದ ಎತ್ತಯ್ಯ
ನಮ್ಮ ಆವಿಗಿ ಹಿಡಿ ಹುಲ್ಲು ಸಿಗಲಿಲ್ಲಾವೋ

ಸುತ್ತೇಳ ರಾಜ್ಯವ ವತ್ತುಕಟ್ಟಿ ತಿರುಗಿದನೊ
ನಮ್ಮ ಆವಿಗಿ ಹಿಡಿಹುಲ್ಲು ಸಿಗಲಿಲ್ಲಾವೋ

ಅರ್ ಕಣ್‌ಕುಪ್ಪೆ ಸೀಮೆ ನಾನು
ಕುಂತು ನಾನು ನೋಡಿದೆ
ಬ್ಯಾಡರು ಸೀಮೇನ
ಬಗ್ಗಿ ನಾನು ನೋಡಿದೆ
ತುರುಕರು ಸೀಮೆ ನೋಡು
ತೂರಿ ನಾನು ನೋಡಿದೆ
ಅರ್ತಿ ಐಮಂಗುಳುದ
ಗುತ್ತಿ ಗುಡಿಯ ಕ್ವಾಟೆ
ಸುತ್ತೇಳ ರಾಜ್ಯವು
ವತ್ತುಕಟ್ಟಿ ತಿರುಗಿದೆ
ನಮ್ಮ ಆವಿಗೆ ಹಿಡಿ ಹುಲ್ಲು ಸಿಗಲಿಲ್ಲಾವೋ

ಅರೆ ಹಿರಿಯೋರು ಹೇಳಲಿಕ್ಕೆ
ಕಿರಿಯೋರು ಕೇಳಲಿಕ್ಕೆ
ದೊಡ್ಡೋವ್ರು ಹೇಳಲಿಕ್ಕೆ
ಸಣ್ಣೋವ್ರು ಕೇಳಲಿಕ್ಕೆ
ಇನ್ನೊಂದೇ ಕಾವಲೈತೆ
ಹೆಚ್ಚಿನ ಕಾವುಲು ನೋಡೊ
ಅದು ಒಂದೇ ನಾನು ನೋಡೋನಂದಾವೋ

ಅಲ್ಲಿ ಕುರ್ಕೆಗುಡ್ಡದ ಕಾವಿಲಿಗೆ ನಡ್ದವ್ನೆ ಎತ್ತಯ್ಯ
ಮದ್ದಿಗಿರಿ ಕಂಬಿಳಿಗಳು ತಿದ್ದಿ ಹೊದ್ದೈದಾನೆ
ಕಾವುಲುಗುಂಟು ಕಂಬಳಿ ಎಳದಾಡೋನಣ್ಣಾವೋ

ಕಾವುಲುಗುಂಟ ನೋಡೊ ಕಂಬಳಿ ಎಳದಾಡೋನು
ಕಂಬುಳಿಗೆ ಒಂದೊಂದು ಊಬತ್ತಿ ಬರುತಾವಣ್ಣ
ಒಂದುಗೂಡಿ ನಾವೇನೆ ಒಂದೀ ನಾಡುತಾವೆ
ಮುಂದ್ಲೊತ್ತು ನಾನೇನು ಮಾಡೆನಂದಾವೋ

ಅರೆ ಕೊನೆ ಕೊನಿಯೇ ಕುಂಬಾಕ
ಏರವ್ನೆ ಎತ್ತಯ್ಯ
ಕುರ್ಕೆಗುಡ್ಡದ ನೋಡು
ಮದ್ದಗಿರಿ ಕಂಬಳಿಯ
ತಿದ್ದಿ ಹೊದ್ದೈದ್ದಾನೆ
ಶೋಕ ಮಾಡುವನಣ್ಣಾ ಶಿವನಿಗೋ

ಅರೆ ಎತ್ತಯ್ಯನ ಕಣ್ಣೀರು
ಸಣ್ಣ ಸಣ್ಣ ಸರುವಾಗಿ
ದೊಡ್ಡ ದೊಡ್ಡ ಹಳ್ಳಾಗಿ
ಎತ್ತಯ್ಯನ ಕಣ್ಣೀರು
ಗುಡ್ಡದ ಕೆಳಾಕ ಧುಮುಕೋವಣ್ಣ ವೋ

ಅರೆ ಪಾರ್ವತಿಯೇ ದೇವಿಯಂತೆ
ಪರಮೇಸೂರಾಯಂತೆ
ನಾರಾಯಣ ಮೂರೂತಿ
ಇಂತಿಂಬೋ ಶರಣಾರು
ಆನೆ ಒಂಟೆ ಏರಿಕ್ಯಂಡು
ದೊಡ್ಡ ಬೆಟ್ಟದ ಸಾಲೀಲಿ ಬರ್ತಾರಣ್ಣಾ ವೋ

ಅರೆ ರಥವೆನೆ ಮುರ್ದೈತೆ
ಮೂಲೀಗೆ ಬಿದೈತೆ
ಇನ್ನೇಂಥಾ ಮಾಯಾದ ಮಳೆ ಸುರ್ದೈತಣ್ಣಾ ವೋ

ಆಲಿಸೆ ಲಾಲಿಸೆ ಕೇಳ್ತಾರೆ ಆವಾಗ
ಗುಡ್ಡಾದಾ ಮ್ಯಾಲೆ
ನರಮಾನೋರ ಸಬ್ದಾಗೋದಣ್ಣಾ ವೋ

ಅರೆ ಯಾರನ್ನಾಗಲಿ
ಎಲ್ಲೆನ್ನಾ ಹೋಗಲಿ

ನಡಿಯೆಲೆ ಪಾರವತಿಯೇ
ನಮ್ಮ ಸೀಮೆಗೆ ನಾವೆ ಹೋಗೊನಂದಾ ವೋ

ಅಲ್ಲಿಗಿ ಹೋಗಿ ಬಂದ್ರೆ ಬಂದ್ಹಂಗ
ಬರದ ಮ್ಯಾಲೆ ಎಲೆ ಶಿವನೆ
ನಾಲಿಗೆ ಇರ್‍ಕೊಂಡು
ಪ್ರಾಣನಾದ್ರೆ ಬಿಡ್ತಿನಂದ್ಮು ಪಾರುವತಿಯಮ್ಮಾವೋ

ಎಲಿಗ್ಹೋದೊರನ್ನಾಗ್ಲಿ ಹೆಂಗಸು ರಂಡೆರುನ ಮಾತ್ರ
ಹಿಂದೆ ಕಟ್ಟಿಕೊಂಡು ಹೋಗಬಾರ್‍ದಂದವ್ನೆ
ಇಲ್ಲಿರಿವೆ ಪಾರುವತಿಯೆ ನಾನ್ಹೋಗಿ ಬರ್‍ತಿನಿ
ಅಂದವ್ನೆ ಶಿವನೆ ನಡ್ದವನಣ್ಣಾ ವೋ

ಅರೆ ಗುಡ್ಡದ ಮ್ಯಾಲಾಕ
ನಡ್ದವ್ನೆ ಎಲೆ ಶಿವ್ನೆ
ಎತ್ತಯ್ಯನ ಸಬ್ದ ಕೇಳವ್ನೆ ನೋಡು
ಅವ್ನು ಉರಿಗಣ್ಣು ಬಿಟ್ಟಾರೆ
ಉರಿದು ಹೋಗುತಿನಂದು
ಕಿಡಿಗಣ್ಣು ಬಿಟ್ಟಾರೆ
ಸಿಡಿದು ಬೀಳತಿನಂದು
ಹ್ಯಾಂಗೆ ಹೋಗಲೆಂದ ಎಲೆ ಶಿವ್ನೋ

ಒಂದು ಗುಂಡೀನ ಮರಿಯಲ್ಲೆ
ಕುಂತ್ಕೊಂಡ ಎಲೆ ಶಿವ್ನೆ
ಫಳಫಳ್ನೆ ಮೂರು ಕ್ಯಾಕೆ ಹೊಡ್ದಾನಣ್ಣಾ ವೋ

ಅಲ್ಲಿ ಮದ್ದಿಗಿರಿ ಕಂಬಿಳೀನ ತಿದ್ದಿ ಆರೊಯ್ಯದವ್ನೆ
ಸುತ್ತಾ ಮುತ್ತಾಲಾಯ ನೋಡ್ತಾನೊ ಎತ್ತಯ್ಯ
ಹುಲ್ಲಂಬ ಮನಸೇರು ಮೊದಲಿಲ್ಲಾ ವೋ

ನಾನ ಸೋಕ ಮಾಡುತಿದ್ದೆ
ಚಿಂತೆ ಮಾಡುತಿದ್ದೆ
ನನ್ ನಿದ್ರೆ ಕೆಡಿಸಿದವ್ರು ಯಾರಂದಾ ವೋ

ಸುತ್ತ ಮುತ್ತಲಾಯ ನೋಡವ್ನೆ ಎತ್ತಯ್ಯ
ಯಾರನ್ನ ಆಗಲಿ ಎಲ್ಲನ್ನ ಹೋಗಲಿ
ತಿರುಗಾ ಒಂದೇ ಸೋಕ ಮಾಡೋನಣ್ಣಾ ವೋ

ಬಾರೋ ಬಾರೋ ಎತ್ತಯ್ಯ
ರಾಜ್ಯೇವುಕೆ ಬಂದೈತೊ
ನಿನ್ನೊಬ್ಬನಿಗೆ ಬಂದೈತೊ
ಲೋಕಂಬ ಲೋಕ
ತಲ್ಲಣಿಸಿ ಬಂದೈತೊ
ಅಳಬ್ಯಾಡ ಎತ್ತಯ್ಯ ಅಳಬ್ಯಾಡಣ್ಣಾ ವೋ

ಅಲೆ ನೀನು ಮಾಡಿದ ಪಾಪವೊ
ಅಲ್ಲೇನೊ ಎಲೆ ಶಿವ್ನೆ
ನೀನು ಮಾಡಿದ ಖರ್ಮವೊ
ಅಂದವ್ನೆ ಎತ್ತಯ್ಯ
ಅಳ್ತಾನೆ ಎತ್ತಯ್ಯ ಅಳ್ತಾನಣ್ಣಾ ವೋ

ಹತ್ತು ಸತ್ತರನ್ನ ಹತ್ತನ್ನ ಉಳಿತಾವೆ
ಐದು ಸತ್ತರನ್ನ ಐದನ್ನ ಉಳಿತಾವೆ
ಉದಿಹೋಗೊದಿಲ್ಲ ಮತ್ತೇನೆ ಎತ್ತಯ್ಯ
ಅದ್ರಿಮ್ಯಾಲೆ ಬೆಳೆಸಿರಿ ಮಾಡ್ಯೋನಣ್ಣ
ಅಳಬ್ಯಾಡ ಎತ್ತಯ್ಯ ಅಳಬ್ಯಾಡಣ್ಣ ವೋ

ಇವೊತ್ತು ಹೊತ್ಮುಣ್ಗೊ ಹೊತ್ತಿಗೆ
ಯಾವ ರಾಜ್ಯಕ್ಕ ನೋಡೊ ಮಳೆಯಾಗತೈತಣ್ಣ
ಆ ರಾಜ್ಯಕ್ಕ ನೀನು ಹೋಗಂದಾ ವೋ

ಬಾಯಿ ಮಾತು ಹೇಳಿದುರೆ ನಮ್ಮಿಗೆ ನಂಬಿಗಿಲ್ಲ
ಬಲಗೈಯ ಭಾಷೆ ಕೊಡ್ಬೇಕಂದಾವೋ
ಬಲಗೈಯ್ಯ ಭಾಷೇಯ ಕೊಡ್ತಾನೆ ಎಲೆ ಶಿವ್ನೆ
ಎಡಗೈಯ ನಂಬಿಗೆ ತಕ್ಕಂಡ ಎತ್ತಯ್ಯ
ಇತ್ಲಾಗೇನು ನೋಡ್ತೀ ಅತ್ಲಾಗೆ ನೋಡಂದ
ಮಾಯಿಕಾರ ಶಿವ್ನು ಮಾಯವಾಗವ್ನೋ

ಗುಡ್ಡದ ಮ್ಯಾಲೆ ನೋಡೊ ನಿಂತ್ಕೊಂಡು ಎತ್ತಯ್ಯ
ಯಾವ ರಾಜ್ಯಕ್ಕೆ ನೋಡೊ ಮಳೆ ಆಗತೈತಂದ
ಯಾವ ಸೀಮಿಗೆ ನೋಡೊ ಮಳೆ ಆಗುತೈತಂದ
ಸುತ್ತ ಮುತ್ತಲಾಯ ನೋಡವುನಣ್ಣಾ ವೋ

ಹಗಲ್ಹುಟೊತ್ತಿಗೆ ಒಳ್ಳೆ ಸೊಪ್ಪು ಮಾರೊ ಹೊತ್ತಿಗೆ
ಅಂಗೈಯೋಟು ಮಾಡ ಮುಂಗೈಯೋಟು ಮಿಂಚು
ಎಣೆಕಲ್ಲು ಮಕ್ಕೆ ಮಳೆ ಆಗೋದೋ

ಎಣಿಕಲ್ಲಂಬೋದು ಒಂದು ಹೆಂಗಸಿನ ದೊರಿತಾನ
ಗುಡ್ಡಾದ ಬೋರಮ್ಮನ ದೊರೆತನ ವೋ

ದನಕರುವೆಲ್ಲ ನೋಡೊ ಊರು ಹೊಕ್ಕಂಬೋದು
ಗುಡ್ಡದ ಮ್ಯಾಲೆ ನೋಡು ನಿಂತ್ಕಂಡ ಎತ್ತಯ್ಯ
ದನಕರು ಎಲ್ಲ ನೋಡೊ ಊರು ಸೇರಿಕ್ಯಂಬೋದು
ಮಕ್ಕತ್ತಾಲಾಗಿ ಬರುತೈತಣ್ಣಾವೋ

ಆದ್ಯೇವು ಮುತ್ತೈದೆ ತನಗಾಳೆ ಎತ್ತಯ್ಯ
ಇಳುದೇ ಬಂದಾನೋ ಮಯಿಗೂದ ಗೌಡ ವೋ

ಇಳುದೇ ಬರ್ತಾನಣ್ಣ ಮತ್ತೆ ನಿನ್ನೆತ್ತಯ್ಯ
ಕಾಲು ಗಟ್ಟುಸೋನಣ್ಣ ತೋಳೆ ಬೀಸೋನಣ್ಣ
ಎಡವಿದ ಕಲ್ಲೆ ಪುಡಿ ಪುಡಿಯಣ್ಣಾ ವೋ

ಮುಗ್ಗುರ್ಸಿ ನಡೆದರೆ ಒಳ್ಳೆ ಮೂರು ಗಾವುದ ಹೋಗವ್ನೆ
ತಗ್ಗೀಸಿ ನಡುದಾರೆ ನಾಕೆ ಗಾವುದ ಹೋಗೋನು
ಸೂರುದ ಒಂದೇ ಭಾಗ ಚಂದುರು ಒಂದೇ ಭಾಗ
ಸ್ವಾಮಿ ಎತ್ತಯ್ಯ ಒಂದೇ ಭಾಗಣ್ಣಾ ವೋ

ಎಣೆಕಲ್ಲ ಕಾವಿಲಿಗೆ ನಡದವ್ನೆ ಎತ್ತಯ್ಯ
ಸೆಂಜೇಲಿ ಮಳಿ ಬಂದಾರೆ ಮುಂಜ್ಯಾಲೆ ಹುಲ್ಲಮ್ಮ
ಯಾ ಹುಲ್ಲು ಕೇಳಿತಿಯೆಂದ ಯಾ ಹುಲ್ಲು ಬಿಡ್ತಿಯಾಂದ
ಹುಲ್ಲಿನ ಮ್ಯಾಲೆ ಹುಲ್ಲೆ ಹೊಯ್ದಾಡೋದು
ಮುಂಗಾರುದ ಮಳೆ ಬಂದು ಮತ್ತೇ ಕಣೊ ಬಟ್ಟಣ್ಣ
ಮುಂದ್ಲಾ ಹೊಕ್ಕರು ಕಾಣೊ ಭರದಂಗೆ ಬೆಳೆದೈತೆ

ಹಳ್ಳಾದ ಹುಲ್ಲೊಂದು ಆಳಡಿ ಬೆಳೆದಾವಣ್ಣ
ಕಾಡ್ದಾಗೆ ಹುಲ್ಲಮ್ಮ ಕರಿ ಎತ್ತೀನುದ್ದಮ್ಮ
ಗುಬ್ಬಿಸಿ ರಾಜುಣದುಲ್ಲು ಕುತ್ತಿಗುದ್ದ ಬೆಳೆದಾವೊ
ಸುಸೂಗದ ಹುಲ್ಲೆ ತೆರಿ ಹೊಯ್ಯೋದೋ

ಹುಲ್ಲು ನೋಡಿ ನಿಧಾನ ಬಿದ್ದಾವ್ನೆ ಎತ್ತಯ್ಯ
ಎಣಿಕಲ್ಲು ಕೆರಿಗೆ ನಡದವ್ನೆ ಏ ನೋಡು
ನೀರಿನ ಮ್ಯಾಲೆ ನೀರು ಹೊಯ್ದಾಡುತಾವಮ್ಮಾ

ನೀರು ನೋಡಿ ನಿಧಾನ ಬಿದ್ದವ್ನೆ ಎತ್ತಯ್ಯ
ಸುತ್ತ ಮುತ್ತಲಾಯ ನೋಡಿಕ್ಯಂಡ ಎತ್ತಯ್ಯ
ಪಚ್ಚಾನೆ ಮರ್ಕ ಕುಂತವ್ನನಣ್ಣಾ ವೋ

ಪಚ್ಚಾನೆ ಮರ್ಕೇನೆ ಕುಂತ್ಕೊಂಡು ಎತ್ತಯ್ಯ
ಭಾವಮೈದುನ ಕಟ್ಟಿದ್ದು ಬೆಳವಿನ ಕಾಯೋಟು ಬುತ್ತಿ
ನೆಪ್ಪಿಗೆ ಬರ್‍ತೈತಣ್ಣ ಎತ್ತಯ್ಯಗೋ

ಎಣಿಕಲ್ಲು ಕೆರಿಗೇನೆ ತಕ್ಕೊಂಡು ಬರ್‍ತಾನಣ್ಣ
ಬುತ್ತಿಗೆ ನೀರನ್ನ ತಟ್ಟವ್ನೆ ಎತ್ತಯ್ಯ
ಮೀನಿಗೊಂದು ಮುರ್ಕ ಮುಸಳಿಗೊಂದು ಮುರ್ಕ
ಬಟ್ಟಣ್ಣಗೊಂದು ಮುರ್ಕ ಸಲ್ಲಿಸೋನಮ್ಮಾ ವೋ

ಸಣ್ಣಾದೊಂದೂಟಾನೆ ಮಾಡಿಕೊಂಡು ಎತ್ತಯ್ಯ
ಸಣ್ಣಾದೊಂದಿಳ್ಳೇವು ಧರಿಸಿದುನಣ್ಣಾ ವೋ
ಸಣ್ಣಾದೊಂದು ಈಳ್ಳೇವು ಧರಿಸಿದುನೆ ಎತ್ತಯ್ಯ
ಏಳು ಸಿವುಡೆ ಹುಲ್ಲೇನೆ ಕೊಯ್ದವ್ನೆ ಎತ್ತಯ್ಯ
ಮದ್ದಿಗಿರ ಕಂಬಳಿ ಮೂಲಿಗ್ಹಾಕಿದುನಣ್ಣಾ
ಪನ್ನೀರು ಗಿಂಡ್ಯಾಗೆ ನೀರು ತುಂಬಿಕಂಡವ್ನೆ
ಉಡಿದಟ್ಟಾಕಿಟ್ಟಕಂಡು ಮತ್ತೆ ನಿನ್ನೆತ್ತಯ್ಯ
ಎತ್ತೀಗೆ ಗೌಡ ತಿರುಗಿದುನಣ್ಣಾ ವೋ

ಸಂಜೆಲಿ ಮಳಿ ಬಂದಾರೆ ಮುಂಜ್ಯಾಲೆ ಹುಲ್ಲಮ್ಮ
ಗುಡ್ಡಾದ ಬೋರಮ್ಮನ ದೊರಿತಾನ
ಏಳ ಮಂದಿ ಬ್ಯಾಡುರುನ ಕಳಿಸಿದುಳು ಬೋರಮ್ಮ
ಹುಲ್ಲಿನ ಮ್ಯಾಲೆ ನೋಡೊ ನೊಣವನ್ನ ಕುಂತಾರೆ

ಬಿಲ್ಲಿಲಿ ಕೊಲ್ಲಬೇಕಂತ ಹೇಳಿದುಳೊ ಬೋರಮ್ಮ
ಏಳು ಮಂದಿ ಬ್ಯಾಡುರುನ ಕಳುವಿದಳೋ

ಆನೆ ಒಂಟೆ ಕಾವುಲನ ಹಾಳು ಮಾಡಿ
ಎಣೆಕಲ್ಲು ಕೆರಿಮ್ಯಾಲೆ ನಿಂತಕಂಡು ಬ್ಯಾಡರು
ಮಾತುನಾಡವರಣ್ಣ ಮತ್ತೇ ನೋಡು
ಆ ಮಾತು ಎತ್ತಯ್ಯ ಕೇಳಿದುನೋ ವೋ

ನನ್ನ ಕಂಡರವ್ರು ಒಳ್ಳೆ ಸುಮ್ಮನೆ ಬಿಡ್ತಾರಂದ
ಹ್ಯಾಂಗೆ ಹೋಗೋದಂದ ಮಯಿಗೂದ ಗೌಡಾ ವೋ

ಗಬ್ಬಾದ ಬ್ಯಾಡಾರ ಸಂಗಾತಿನಾಡಾಕೆ
ನನ್ನಿಗೆ ಹೊತ್ತಿಲ್ಲ ಅಂದವ್ನೆ ಎತ್ತಯ್ಯ
ಮಿಡಿ ನಾಗರಾಗಿ ಬರ್ತಾನಣ್ಣವೋ

ಕಾವುಲು ಬಿಟ್ಟ ನೋಡು
ಬಯ್ಲಿಗಿ ಬಂದೈದಾನೆ
ಆದ್ದೇವು ಮುತ್ತೈದುತನಗಾಳು
ಮುಚ್ಚಿ ಕಟ್ಟಿದುನೊ ಮಯಿಮದ ಗೌಡಾ ವೋ

ಕಾಲು ಗಟ್ಟುಸೋನಣ್ಣ ತೋಳೆ ಬೀಸೋನಣ್ಣ
ಎಡವಿದ ಕಲ್ಲೆ ಪುಡಿಪುಡಿಯಮ್ಮೊವೋ

ಮುಗ್ಗುರ್ಸಿ ನಡದಾರೆ ಒಳ್ಳೆ ಮೂರು ಗಾವುದಲಿ ಹೋಗವ್ನೆ
ತಗ್ಗಿಸಿ ನಡದಾರೆ ನಾಕು ಗಾವುದ ಹೋಗೋನು

ಒಡಿಯಾನೇ ಎಂದ್ಹೋದ ಶಿವನ
ಆವತ್ತೆ ನೆಲ್ಕನೆ
ಬಿದ್ದೈತೆ ಬಟ್ಟಣ್ಣ
ದೊಕ್ಕಿ ದೊಕ್ಕಿಗೆ ಶ್ಯಾರೆನೆ
ಉಳವೇನೋ ಬಿದ್ದಾವೊ
ಎತ್ತಿನ ಮ್ಯಾಲೆ ಸೆದಿಲೆ ತೆಲಗೂಡೈತೋ ವೋ

ಅಂತಂಬೋ ಎತ್ತೇನೆ
ಒಡಿಯಾನ ಅರ್ದಾರಿ ಸರ್ದಾರಿ
ಬರುವ ಒಡಿಯಾನ ಗಾಳಿ
ತಗದೈತೆ ಬಟ್ಟಣ್ಣ
ಗಲ್ಲ ಗಲ್ಲ ನೆಲಕ್ಕೂರಿ ಮ್ಯಾಲಕೇಳುವುದೋ

ಅರೆ ಗಲ್ಲ ಗಲ್ಲ ನೆಲಕ್ಕೂರಿ
ಮ್ಯಾಲಕೇಳದ ಬಟ್ಟಣ್ಣ
ಯಾವ ತಗ್ಗಿಗಿ ಬೀಳತೈತೊ
ಯಾವ ಕುಣಿಗೆ ಬೀಳತೈತೊ
ನಮ್ಮ ಭಾವ ಬಂದಾರೆ
ಬೈತಾನೆ ಅಂದವ್ನೆ
ವಲಿಗಾನೆ ಮಲ್ಲಯ್ಯ
ಅಣೆಗೋಲಿನ ಮ್ಯಾಲೆ ಎತ್ತು ತಡದಾನೋ

ಅರೆ ಒಂದೊಂದೆ ಹೆಜ್ಜೇನೆ
ನೂಕಿಕೊಂಡು ಬಟ್ಟಣ್ಣ
ಸೀಗೆ ಪದಿಯ ತಾಕೆ
ಬರ್ತಾನೆ ಮಲ್ಲಯ್ಯ
ಅವ್ರ ಭಾವಾನಾ ತಲಿಯನ್ನೆ ಕಂಡವ್ನಣ್ಣಾ ವೋ

ಭಾವಾನಾ ತಲಿಯಾನೆ ಕಂಡವ್ನೆ ಮಲ್ಲಯ್ಯಾ
ಎತ್ತೇ ಕೈಬಿಟ್ಟವ್ನೆ ವಲಿಗ್ಯಾನೆ ಮಲ್ಲಯ್ಯ
ಸೀಗೆ ಪದಿಯಾಗೆ ಕುಂತ್ನಣ್ಣಾ ವೋ

ಎತ್ತಿನ ತಲಿಯ ತಾನ್ ಕಂಡಾನೆ ಎತ್ತಯ್ಯ
ಕಾಲುಗಟ್ಟಿಸಿ ನಡಿಯವ್ನೊ ಮಯಿಗೂದ ಗೌಡಾ ವೋ

ಕಾಡಿನಲ್ಲಿ ಸೊಪ್ಪುಗುಳು ಓಡಿಲಿ ಹುರುಕೊಂಡು ತಿಂಬೊ
ಕಾಡು ಬ್ಯಾಡರ್ಘುಡುಗಾನೆ ಕಡುಕೊಂಡು ತಿಂಬಾಕೆ
ನನ್ನೆತ್ತೆ ಹೊಡ್ಕೊಂಡೂನೆ ಹೋಗ್ತಿದ್ದ ನೋಡು
ನನ್ನ ತಲಿಯ ಕಂಡಲ್ಲೆ ಕುಂತಾವ್ನನಂದಾ ವೋ

ಬೆಟ್ಟದಲ್ಲಿ ಸೊಪ್ಪುಗೂಳೂ ಓಡಲಿ ಹುರುಕೊಂಡು ತಿಂಬೊ
ಹಟ್ಟಿ ಬ್ಯಾಡಾರ್ಘುಡುಗ ಕಡ್ಕೊಂಡು ತಿಂಬಾಕ
ನನ್ನೆತ್ತೆ ಹೊಡ್ಕೊಂಡೂನೆ ಹೋಗ್ತಿದ್ದಾನೆ ನೋಡು
ನನ್ನ ತಲಿಯ ಕಂಡಲ್ಲೆ ಕುಂತವ್ನನಂದಾ ವೋ

ನನ್ನ ಭಾವ ಮೈದುನ ವಲಿಗ್ಯಾನೆ ಮಲ್ಲಯ್ಯ
ಒಂದ್ ಗಲ್ಲ ಬಡ್ದಾರೆ ಹಾಲಮ್ಮ ಒಲಿಗಾನೆ
ಒಂದ್ ಗಲ್ಲ ಬಡ್ದಾರೆ ನೀರಮ್ಮ ಒಲಿಗಾನೆ
ಹಿಂದ್ಲಾವಿನಾಗಿದ್ದುನೊ ಮುಂದ್ಲಾವಿನಾಗಿದ್ದಾನೋ

ಬ್ಯಾಡಾರ್ದುಡುಗ ಕಡ್ಕೊಂಡು ತಿಂಬಾಕ
ನನ್ನೆತ್ತೆ ಹೊಡ್ಕಂಡು ಹೋಗುತಿದ್ದಾನೆ ನೋಡು
ನನ್ನ ತಲಿಯೆ ಕಂಡವ್ನೆ ಕುಂತಾನಣ್ಣಾ ವೋ

ಒಡಿಯಾನುತಾಕ ನೋಡು ಎತ್ತೇ ಹೋಗೋದಣ್ಣ
ಮದ್ದುಗಿರಿಯ ಕಂಬಳ್ಯಾಗ ಇದ್ದಂತಾನೆ ಹುಲ್ಲು
ಹಿರ್ಕಂಡು ಮುರ್ಕಂಡು ತಿಂದ್ಕೊಂಡು ಬಟ್ಟಣ್ಣ
ತಾಯಿಕೂಟೆ ಕರುವುನೆ ಚಿನ್ನಾಟಟಾಡಿದ್ದಂಗ
ಒಡಿಯಾನ ಮುಂದೆತ್ತು ಬರತೈತಣ್ಣಾ ವೋ

ಸೀಗೆ ಪದಿಯತಾಕೆ ಬಂದವ್ನೆ ಎತ್ತಯ್ಯ
ಯಾರಮ್ಮ ಎಲು ಬಾಲು ಯಾರಮ್ಮ ಎಲು ಕಂದ
ಹಾಲು ಬಾನ ಇಕ್ಕಿ ಕೊಲ್ಲೋರು ಕೊಲ್ಲುತ್ತಾರೆ
ಬಾಲಮ್ಮನ ಭಾಷೆ ತಕ್ಕೊಂಡು ಕೊಲ್ಲೋರು ಕೊಲ್ಲುತ್ತಾರೆ
ಮೂರು ಪೆಟ್ಟು ನಾನುವೆ ಮಾತು ನಡ್ಸೈದ್ದಿನಿ
ನನ್ಮ್ಯಾಲೆ ದೋಷವಿಲ್ಲ ಅಂದವ್ನೆ ಎತ್ತಯ್ಯ
ಸುಕ್ಕುದು ಸುರುನರಿ ಬಿಲ್ಲೊ ತಕ್ಕೊಂಡು ಎತ್ತಯ್ಯ
ಹೊಡ್ದೆ ಬಿಡ್ತಿನಂಥ ಮಯಿಗೂದ ಗೌಡಾ ವೋ

ಹೊಡಿಯೋನ್ಹೊಡಿತೀ ಭಾವ ಅರಪೆಟ್ಟು ಮಾಡಬ್ಯಾಡ
ಒಂದೇ ಪೆಟ್ಟಿಗೆ ನೀನು ಹೊಡಿಯಂದಾ ವೋ

ಆ ಮಾತೂ ಕೇಳವ್ನೆ
ಮತ್ತೇನೆ ಎತ್ತಯ್ಯ
ಸುಕ್ಕುನ ಸುರುನಾರಿ ಬಿಲ್ಲು
ಮಣಕಾಲಿಗಿ ಮುರುಕ್ಯಂಡ
ಅಂಗೈಲಿ ಅರಗಿಣಿ ಬಾರೋ
ಪೊಪ್ಪುನಿಂಗ ನೀನ್ ಬಾರೋ

ಮುಂಗೈಮ್ಯಾಲೆ ಆಡೋ
ಗಿಣಿರಾಮ ವಲಿಗಾನಯ್ಯ
ಭಾವ ಮೈದುನ ನೋಡುಬಾರ
ಬಾಯಿಗಿ ಬೆಲ್ಲ ಬಾರೊ
ಬಾರಯ್ಯ ವಲಿಗನೇ ಮಲ್ಲಯ್ಯವೋ

ಹಾಯೊಂಬೋ ಅಡಿವಂತೆ ಶಿವ್ನ
ಜೀ ಎಂಬ ಮಲಿಯಂತೆ
ಕೊಳ್ಳೊಕೊಳ್ಳೊ ಕಟ್ಟಿಕಂಡು
ಬೋರೆ ಸರಿಯೋರಣ್ಣ
ಭಾಮ್ಯೆದುನ್ನ ನೋಡು
ಭಾವಾ ಹೊಡದ ಅಂಬುತಲೆ
ತಲಿಯಾಗೆ ನಾಲ್ಗಿಯಿರುವ
ಹೆಸರೇ ಆಗತಿತ್ತು ಒಲಿಗ್ಯಾನಂದಾನೋ

ಅತ್ತುರು ಬರುವುದಿಲ್ಲ
ಕರ್ದುರು ಬರುವುದಿಲ್ಲ
ನಮ್ಮುಗ್ಗುರುಕೆ ನಾವೇ ತಾಳಾನಮ್ಮಾ ವೋ

ಬಾರಯ್ಯ ಒಲಿಗ್ಯಾನೆ ಮಲ್ಲಯ್ಯ
ದೊಡ್ಡ ಬೆಟ್ಟ ಸಾಲಿಗೆ ಮತ್ತೆ ನಮ್ಮೆತ್ತಾವೊ
ಸಿಳ್ಳೆನೆ ಹೊಡಿಯೋಳೆ ಸಿಟಿಕೇನೆ ಹಾಕಮ್ಮ
ದೊಡ್ಡ ಬೆಟ್ಟದ ಸಾಲಿಗೆ ಎತ್ತ ಕರಿಯೆಂದಾ ವೋ

ದೊಡ್ಡಬೆಟ್ಟದ ಸಾಲಿಗೆ ಎತ್ತೆ ಕರ್ದಾನಣ್ಣಾ
ದೊಡ್ಡ ಬೆಟ್ಟ ಏರವ್ನೆ ಮತ್ತೇನೇ ಎತ್ತಯ್ಯ
ಏಳು ಸಿವುಡೆ ಹುಲ್ಲೆನೇ ಪುಚ್ಚಾನೆ ಹಿಡ್ಕೊಂಡು
ಏಳ ದಿಕ್ಕಿಗೆ ಗೌಡ ಚಿಮ್ಮಿದ್ನಣ್ಣ ವೋ

ಗ್ವಾದಿಲ್ಯಾಗ ಹುಲ್ಲೆ ಒಳ್ಳೆ ಮೇಯಿದ್ದಂಗೆ ಮೆಯೋದು
ಹುಲ್ಲೇ ಹಾಸಿಕೊಂಡು ಹುಲ್ಲೇ ಹೊದ್ದೊಕೊಂಡು
ಹುಲ್ಲಿನ ಮ್ಯಾಲೆತ್ತಾವೊ ಮನಗಿದುವಣ್ಣಾವೋ
ಹೊಸ ಹುಲ್ಲು ಒಳ್ಳೆ ಮೈದು ಹೊಸನೀರು ಕುಡ್ದಾವೋ
ಎಣೆಕಲ್ಲು ಮಕ್ಕ ರಂಗುಳಿಸ್ಯಾವೋ

ಬಾರಯ್ಯ ಒಲಿಗಾನ ಮತ್ತೇನೆ ಮಲ್ಲಯ್ಯ
ಹೊಸ ಹುಲ್ಲು ಮೈದಾವೊ ಮತ್ತೇ ನಮ್ಮೆತ್ತಾವುಗಳು
ನೀರ್ಢಂಗ ಮಾಡೊನೋ ಮಲ್ಲಯ್ಯ ವೋ

ಹಳ್ಳಿಪಳ್ಳಿ ವಡ್ಡುರುನಾ ಬಿಟ್ಟಿ ಸಾರುಂಗ್ವೊಡಿಸಿದುರೆ
ಬೋರುನ ತಿಪ್ಪೆ ತೊರಿಯೆ ತಿರುವಿಕೊಂಡು ಬಂದಾರೆ
ನಮ್ಮೆತ್ತಾವಿಗೆ ಗಾಡಿ ಮುಗ್ದಿತಮ್ಮಾವೋ

ಹಂಗಲ್ಲ ಒಲಿಗ್ಯಾನಯ್ಯ ಹಿಂಗಲ್ಲಾ ಒಲಿಗಾನಯ್ಯ
ನೀನ್ ಆವ್ ಕಾಯೋ ನಾಗವಳ್ಳಿ ಬೆತ್ತವೆ ತಕ್ಕಂಡು
ದೊಡ್ಡಗ್ವಾಡಿ ಹಳ್ಳದ ಒಬ್ಬೇಲಿರಿಯಾನಯ್ಯ
ಗೆರಿಯಾಗೀಸಿಕೊಂಡು ಹಿಂದಕ ನೋಡದ್ಹಂಗ
ಮುಂದಾಕ ಕೂಗ್ಹೇಳೂತ ಹೋಗಮ್ಮಾವೋ

ಗೆರಿಯಾಗಿಸಿಕಂಡು ಹೋಗೋನಂತ ಮಲ್ಲಯ್ಯ
ಪನ್ನೀರಿ ಗಿಂಡ್ಯಾಗ ಇದ್ದಾಂತ ನೀರು
ಮೊದ್ಲೆ ಗಾಡಿಗಿ ನೀರು ಒಯ್ಯೋನಮ್ಮಾ ವೋ

ನೀರು ಕುಡುದೆ ನಿದಾನ ಬಿದ್ದಾವೊ ಎತ್ತಾವು
ನೀರಿನ ಮ್ಯಾಲ ಎತ್ತಾವೆ ಮನಗಿದುವಣ್ಣಾ ವೋ


ಬಾರಯ್ಯ ಒಲಿಗ್ಯಾನೆ ಮತ್ತೇನೆ ಮಲ್ಲಯ್ಯ
ಹಳ್ಳಿಪಳ್ಳಿ ವಡ್ಡುರುನ ಬಿಟ್ಟ ಸಾರಂಗಿಡುಸಿದುರೆ
ಬೊರುನ ತಿಪ್ಪೆ ತೊರಿಯೆ ತಿರುವಿಕೊಂಡೆ ಬಂದಾರೆ
ನಮ್ಮೆತ್ತಾವಿಗೆ ಗಾಡಿ ಮುಗಿದಿ ತಂದ್ಹೇಳಿದೆ

ನೀವು ಸತ್ಯದಲ್ಲಿ ಶರಣಾರು
ಉತ್ತಮುರ ಮಕ್ಕಾಳು
ನಿಮ್ಮ ಸತ್ತೆವು ಭಾವಾ ನಮ್ಮಿಗೆ ಬಂದೀಂತೆ

ಅಗುಸುರು ಮ್ಯಾಲೆ ಹೋಗೊ ತಬ್ಬಿ ಹೂವ್ವಿನ ಬೂದ
ಆರೋರ ಮ್ಯಾಲ್ಹೋಗೊ ಆಲು ಮುಸುಕದ್ವಾರಿ ಪುಲ್ಲು
ತುರುಕುರು ಮ್ಯಾಲೆ ಹೋಗೊ ತುಂಬುರು ಬಡ್ಡಿ ಕೇಳೊ

ಇಳ್ಳಿಕಿ ಪಾರಿ ತಿರುಗೊ ಗರ್ಡಿನೆ ಹನುಮಂತ
ಹಿಂದ್ಲಾವಿನಾಗೆ ನೆಡಿಯೋ ಕಂದ ಕೊಂಬಿನದೊಂದಂತೆ
ಸೊಂಡಲೂರು ಕೆರಿಯಾಗೆ ದುಂಡಾಪೊಮೇದೋಳೆ

ಹೊಸ ಹುಲ್ಲು ಮೇದ್ವಾ ಹೊಸ ನೀರು ಕುಡ್ದಾವೋ
ಎತ್ತ ನಿಲ್ಲದಿಲ್ಲ ಕಣೊ ಮಲ್ಲಯ್ಯ
ಕುರಿಯಾಳಿರಿಯಟ್ಟಿಗೆ ತಾವರಿಗಿರ ಬಸವಲಿಂಗ
ಸೀಮಿಗೆ ನಿನ್ಹೋಗೊ ಮತ್ತೇನೆ ಮಲ್ಲಯ್ಯ



ಅಡ್ಕೆ ಕಾಯಾಗ ನೀರು ಕಾರೆ ಕಾಯಾಗ ಮಜ್ಜೀಗೆ
ತಕ್ಕೊಂಡೆ ವಲಿಗಾನೆ ಮತ್ತೇನೆ ಮಲ್ಲಯ್ಯ
ತಕ್ಕೊಂಡೆ ಬರ್ಬೇಕಂದಾ
ಉಗುಳೋಯ್ದು ಉಗುಳು ಆರೋಟ್ಹೋತ್ತಿಗೆ
ಆಗತ್ತು ತಪ್ಪಿದುರೆ ಮತ್ತೇನೆ ಮಲ್ಲಯ್ಯ
ಕೆಟ್ಟಾ ಜ್ಯಾತೆನಂದು ಕರ್ದನಂದಾ ವೋ

ಕುರಿಯಾಳ್ಹಿರಿಯ್ಹುಟ್ಟಿ ಒಳ್ಳೆ ತಾವುರಗಿರಿ ಬಸವಂಗೆ
ನಾನೇ ಕಾಣೆ ಕಣೊ ಭಾವಯ್ಯ ವೋ

ಹಾಂಗೆಂಬ ಶಬ್ದನೇ ಕೇಳಿದುರೆ ಎತ್ತಯ್ಯ
ಕುರಿಯಾಳ್ಹಿರಿಯ್ಹುಟ್ಟಿ ಒಳ್ಳೆ ತಾವುರಗಿರಿ ಬಸವಂಗೆ
ನಾನೇ ಕಾಣೆ ಕಣೋ ಭಾವಯ್ಯ ವೋ

ಹಾಂಗೆಂಬ ಶಬ್ದನೇ ಕೇಳಿದ್ರೆ ಎತ್ತಯ್ಯ
ಮುತ್ತೈದುತನುಗಳ ಹೆಗಲಿಗ್ಹಾಕಿದುನಣ್ಣ
ಮಲ್ಲಯ್ಯನ ಕೊರಳಿಗ್ಹಾಕಿದುನಣ್ಣಾ ವೋ

ಅಗಿಯರು ಕೈಯಡಿಯಾಗಿ ನಿಮ್ಮ ಕೈಯೆ ಮೇಲಾಗಿ
ದುಸ್ಮಾನರು ಕೈ ಅಡಿಯಾಗೆ ಬರ್ಲೆಂದ
ನಿಮ್ಮಗಾರೆವು ದೇವಗಾರೆವು ಬಂದವ್ನೆ
ತಣ್ಣನೆ ಮೂರರಿಕೆ ಕೊಡ್ತಾನೆ ಎತ್ತಯ್ಯ
ಕುರಿಯಾಳ್ಹಿರಿಯ್ಹಟ್ಟಿ ತಾವುರುಗಿರಿ ಬಸವಂಗೆ
ಸೀಮೆಗೆ ಮಲ್ಲಯ್ಯ ಬರ್ತಾನಣ್ಣಾ ವೋ

ಕುರಿಯಾಳ್ಹಿರಿಯ್ಹಟ್ಟಿಗೆ ತಾವುರುಗಿರಿ ಬಸವಂಗೆ
ಸೀಮಿಗೆ ಬಂದವ್ನೆ ವಲಿಗ್ಯಾನೆ ಮಲ್ಲಯ್ಯ
ನೀರ ಬಳಸೊ ಬಾವಿತಾಗೆ ಕುಂತವ್ನಣ್ಣಾ ವೋ

ಕನ್ನೇ ಹೆಣ್ಣು ಮಕ್ಕಾಳು ನೀರಿಗೆ ಬರುತಾರಣ್ಣಾ
ಅವ್ರು ಅಕ್ಕಾನ ಸಂಗಾತ ಹೇಳವ್ನೆ ಮಲ್ಲಯ್ಯ
ನಮ್ಮಕ್ಕ ಮಲ್ಲಮ್ಮ ಮತ್ತೇನೆ ನೋಡು
ನಿನತಮ್ಮ ವಲಿಗಾನೆ ಮಲ್ಲಯ್ಯ ಬಂದವ್ನೆ
ನೀರು ಬಳಸೊ ಬಾವಿತಲ್ಲೆ ಕುಂತವ್ನೆ ಅಂಬುತ್ಲೆ
ನಮ್ಮಕ್ಕ ಮಲ್ಲಮ್ಮಗೆ ಹೇಳೀರಮ್ಮಾ ವೋ

ಕನ್ನೇ ಹೆಣ್ಣುಮಕ್ಕಾಳು ಬಂದಾರೆ ನೋಡು
ನಿನ್ನ ತಮ್ಮ ವಲಿಗಾನೆ ಮಲ್ಲಯ್ಯ ಬಂದಾನೆ
ನೀರು ಬಳಸೋ ಬಾವಿತಲ್ಲಿ ಕುಂತವ್ನೆ ಅಂಬುತ್ಲೆ
ಮಲ್ಲಮ್ಮುಗೆ ಆ ಮಾತು ಹೇಳಿದ್ರು ವೋ

ಬುದ್ಧಿವಂತರ ಮಗ್ಳು ಜಾಣೆ ಕಾಣೊ ಮಲ್ಲಮ್ಮ
ಜ್ಞಾನವಂತರ ಮಗಳೆ ಮಲ್ಲಮ್ಮಾ ವೋ

ನನ ತಮ್ಮ ವಲಿಗಾನೆ ಮಲ್ಲಯ್ಯ ಬಂದವನೆಂದು
ಮಾಡಬಾರ್ದ ಅಡಿಗಿನೆ ಮಾಡಿದಳು ಮಲ್ಲಮ್ಮಾ
ಸಗಿಬಾರದ ಅಡಿಗೆ ಸಗುದಾಳಣ್ಣಾ ವೋ

ಜಾಲಿ ಜಂಬಿ ಎಲಿಯೆ ಪತ್ತುರುವಳ್ಳೆ ಕಟ್ಟಿ
ವಲಿಗ್ಯಾನ ಮಲ್ಲಯ್ಯನ ಕರಿಯಲು ಕಳಿಸಿದುಳು ವೋ

ಬಾರಯ್ಯಾ ವಲಿಗಾನೆ ಮತ್ತೆನೇ ಮಲ್ಲಯ್ಯಾ
ಸಣ್ಣದೊಂದದೂಟಾ ಮಾಡೋಣ್ಣಾ ವೋ

ಒಂದೇ ಪತ್ತುರುಳಿಯು ಕಟ್ಟಿಯಾ ಅಕ್ಕಯ್ಯ
ಎರ್ಡೇ ಪತ್ತುರುಳಿಯ ಕಟ್ಟಿಯ ಎಂದಾ ವೋ

ಊರ ಮುಂದೆ ಇರುವಂತ ಆಂಜನೆಯ ಮೂರುತಿಗೆ
ಅಕ್ಕಿ ಬ್ಯಾಳಿ ಕೊಟ್ಟವ್ಳೆ ಮತ್ತೇನೆ ಮಲ್ಲಮ್ಮಾ
ಪೂಜೆ ಪುಸ್ಕಾರವ ಮಾಡಿಸಿದಳು ಮಲ್ಲಮ್ಮ
ಗಂಜಿ ಹಚ್ಚುಡುವೆನೆ ತೆರಿಯೇನೆ ಹಿಡ್ಕೊಂಡು
ವಲಿಗಾನ ಮಲ್ಲಯ್ಯನ ಕರೆಕಳಿಸಿದುಳೊ

ಹಿಂದೆ ಮುಂದೆ ನೋಡು ಮಕವನ್ನೆ ನೋಡಿಕ್ಯಂಡು
ನನ ತಮ್ಮ ವಲಿಗಾನೆ ಮಲ್ಲಯ್ಯ ಬಂದವ್ನೆ
ಅವ್ರ ಅರಮನಿಗಿ ಕರಕೊಂಡು ಬರ್ತಾಳಣ್ಣಾ ವೋ

ನಾನುನೇ ಕೂಡಾ ಉಂಬೋನಂದು
ಒಂದೇ ಪತ್ತುರುಳಿಗೆ ಕಟ್ಟಿದುನಂದೋ
ಅಕ್ಕಂಬ ಕಿಚ್ಚೀಗೆ ಇವತ್ತುಣತೀನಕ್ಕ
ಬೆಳಗಾದ್ರೆ ನಮ್ಮಾ ಭಾವುನ ಕೂಟ ಹ್ಯಾಂಗೆ ಉಣಲಂದಾ ವೋ

ಹಂಗೆಂಬ ಶಬ್ದನೆ ಕೇಳವಳೆ ಮಲ್ಲಮ್ಮ
ಎರ್ಡೆ ಪತ್ತರಳಿಗೆ ಕಟ್ಟಿದುಳಣ್ಣಾ ವೋ

ಅಕ್ಕ ತಮ್ಮ ನೋಡೋ ಸವಪಂತಿಲಿ ಕುಂತ್ಕೊಂಡು
ಅಗ್ಗಣಿಯೆ ತಕ್ಕೊಂಡು ಮಜ್ಜಣ ನೀಡಿಕಂಡು
ಸಣ್ಣದೊಂದೂಟ ಮಾಡಿದರಣ್ಣಾ ವೋ

ಸಣ್ಣದೊಂದೂಟನೆ ಮಾಡಿಕೊಂಡ ಮಲ್ಲಯ್ಯ
ಸಣ್ಣದೊಂದಿಳ್ಳೇ ಧರಿಸಿದುರಣ್ಣಾ ವೋ

ಸ್ವಾಮಾರದ್ಹೊತ್ತುಗಳು ಕೆಡ್ತಾವೆ ಅಕ್ಕಯ್ಯ
ಎತ್ತು ನಿಲ್ಲೊದಿಲ್ಲಮ್ಮಾ ಆವು ನಿಲ್ಲೊದಿಲ್ಲಮ್ಮ
ಅಡ್ಕೆ ಕಾಯಾಗ ನೀರು ಕಾರೆಕಾಯಾಗ ಮಜ್ಜಿಗೆ
ತಕ್ಕೊಂಡು ನಮ್ಮ ಭಾವ ಮತ್ತೇನೆ ಅಕ್ಕಯ್ಯ
ಉಗುಳೈದು ಉಗುಳಾರೋಟ್ಹೊತ್ತಿಗೆ

ಆಗ್ಯತ್ತು ತಪ್ಪಿದುರೆ ಮತ್ತೇನೆ ನೋಡು
ಹೀನು ಜಾತಿಯವ್ನೆಂದು ಕರ್‍ಯಾನಮ್ಮಾ ವೋ

ಮೂಗುತಿ ಮುರುವುದು ಕಂಡೆ
ಮುಂಬಲು ಸುರಿಯೋದು ಕಂಡೆ
ನೆಡಿಗಲ್ಲು ಬೆಟ್ಟಕ್ಕೆ ಬ್ಯಾಗೆ ಬೀಳೋದು ಕಂಡೆ
ಸೊಂದುಲೂರು ಸೀಮ್ಯಾಗೆ ದಂಡಿನಾಗೆ ಹೋಗೊತಲ್ಲಿಯೆ
ನಾನು ಕಂಡೆ ಮಲ್ಲಯ್ಯ
ಕಳ್ಳ ಕಾಕೂರು ಸೀಮಿಗೆ ಹೋಗಬ್ಯಾಡಪ್ಪಾ ವೋ

ಸ್ಯಾವೆ ಸಪ್ಪೆ ಬಣಿವೆ ಕೊಂಡು ಹಾಕಿಸೇನು
ಕಲ್ಲು ಬಾವಿ ನೀರೇನೆ ಕಪ್ಪಿಲಿ ಕಟ್ಟಿ ವಡಿಸೇನು
ಕಳ್ಳ ಕಾಕೂರು ಸೀಮಿಗೆ ಹೋಗುಬ್ಯಾಡಮ್ಮಾ ವೋ

ನಾನು ಹೇಳಿದ ಮಾತು ನಮ್ಮ ಭಾವ ಕೇಳಲಿಲ್ಲ
ನೀನೆ ಬಂದು ಅಲ್ಲೇ ಹೇಳಕ್ಕಾ ವೋ

ಹಂಗೆಂಬ ಶಬ್ದನೆ ಕೇಳಿದಳು ಮಲ್ಲಮ್ಮ
ವಾಡೆದು ನೀರು ಒಂದು ಒಡೆದೊಡೆದು ಕಾಸಿದುಳು
ಕೀಲು ನೀರೂನೇ ನೋಡು ಕೆಲ ಕೆಲದು ಕಾಸಿದ್ಳು
ನಾಗಾಭರಣದಾಗಿದ್ದಂತ ಸೀರೇನ
ಸೆಳದುಟ್ಟಾಳೆ ಮಲ್ಲಮ್ಮ
ಅಡ್ಕೆ ಕಾಯಗ ನೀರು ಕಾರೆ ಕಾಯಗ ಮಜ್ಜಿಗೆ
ತಕ್ಕೊಂಡು ಮಲ್ಲಮ್ಮ ಮತ್ತೇನೆ ನೋಡು
ಎತ್ತಿಗೆ ಮಲ್ಲಮ್ಮ ಬರ್ತಾಳಮ್ಮಾ ವೋ

ಅಕ್ಕ ತಮ್ಮಾ ನೋಡೊ ಹಿಂದೆ ಮುಂದೆ ಹೋಗೋರ
ಬಾರೆ ಬಾರೆ ಅಕ್ಕಯ್ಯ ಮತ್ತೇನೆ ಮಲ್ಲಮ್ಮಾ
ಒಬ್ಬೊರು ಬರುಲಾರಾದ ಪೆಟ್ಟ ನನ್ನ ನೀ ಸೂಳೆ
ಹೆಂಗಸನ್ನ ಕರ್‍ಕೊಂಡು ಬಂದವ್ನೆ ಅಂಬತಾನೆ
ಒಂದೆ ಗಳಿಗೆ ಹಿಂದೆ ಬಾರಕ್ಕಾ ವೋ

ಒಂದು ಗುಂಡಿನ ಮರಿಯಲ್ಲೆ ಕುಂತ್ಕೊಂಡು ಮಲ್ಲಮ್ಮ
ಮೂಡಲ ಮಕನಾಗೆ ನಿತ್ಕೊಂಡ ಎತ್ತಯ್ಯ
ಊರುಗೋಲು ತಿರುವಿಕೊಂಡು ಮತ್ತೇನೆ ನೋಡು
ವಿಳ್ಳೇವು ಗುಡಿಸೊನಣ್ಣಾ ಮಯಿಗೂದ ಗೌಡಾ ವೋ

ಒಪ್ಪಿಕೊಂಡ ಭಾವಯ್ಯ ಮೆಚ್ಚಿಕೊಂಡ ಅಂದಾನೆ
ಒಪ್ಪಿಕೊಂಡ ಕಣೆ ಮಲ್ಲಮ್ಮಾವೋ

ಭಾವ ಭಾವಮ್ಮೈದುನರು ಮಾತನಾಡುತ್ತಾರಣ್ಣ
ಮುತ್ತೀನ ಶೆರಗ್ಹಾಸ್ಯಾವ್ನೆ ಮತ್ತೇನೆ ಮಲ್ಲಮ್ಮಾ
ಬಟ್ಟಣ್ಣೆ ಅಡ್ಡ ಬೀಳವ್ನಂತಾ ವೋ

ಮೂಗುತಿ ಮುರುವುದು ಕಂಡೆ ಮುಂಬಲು ಸುರಿಯೋದು ಕಂಡೆ
ನೆಡಿಗಲ್ಲು ಬೆಟ್ಟಾಕೆ ಬ್ಯಾಗೆ ಬೀಳೋದು ಕಂಡೆ
ಸೊಂಡಲೂರು ಸೀಮ್ಯಾಗೆ ದುಂಡಿನಾಗ್ಹೋಗೊತಲ್ಲಿಯೆ
ನಾನ ಕಂಡೆ ಬಟ್ಟಣಾ ಕಳ್ಳ ಕಾಕುವಾರು ಸೀಮೆಗೆ ಬ್ಯಾಡಪ್ಪಾ ವೋ

ಸ್ಯಾವೆ ಸಪ್ಪೆ ಬಣಿವೆ ಕೊಂಡು ಹಾಕಿಸೇನು
ಕಲ್ಲು ಬಾವಿ ನೀರು ಕಪ್ಪಿಲಿ ಕಟ್ಟಿ ಹೊಡಿಸೇನು
ಕಳ್ಳ ಕಾಕೂರು ಸೀಮಿಗೆ ಹೋಗುಬ್ಯಾಡಯ್ಯವೊ
ಆ ಮಾತು ಕೇಳವ್ನೆ ಮತ್ತೇನೆ ಎತ್ತಯ್ಯ
ಕೈಯಾಗ ಇದ್ದಂತ ಸುಣ್‌ಗಾವಿ ತೊಕ್ಕೊಂಡು
ಒಂದೇ ಪೆಟ್ಟೀಗೆ ಗೌಡ ಹೊಡ್ದವ್ನಣ್ಣಾ ವೋ

ಸ್ವಾಮಾರ ಹೊತ್ತುಗಳು ಕೆಡ್ತಾ ವಲಿಗಾನಯ್ಯ
ಸಿಳ್ಳೆ ಹೊಡ್ದೆ ನೋಡೊ ಚಿಟ್ಗಲಿ ಹಾಕಯ್ಯಾ
ಎಣೆಕಲ್ಲು ಮಕ್ಕೆ ಕೈತಳ್ಳು ಅಂದಾ ವೋ

ಗ್ವಾವಿಯ ಸೀಮಿಗೆ ಆವೆದ್ದು ಹೋದಾರ
ಗ್ವಾವಿಯ ಸೀಮೆ ತೆಲಗರೋ । ಹೆಣುಮಕ್ಕಾಳು
ಆವಿಗೆ ಆರುತಿಯೆ ಬೆಳುಗಿದ್ರೊ । ಹಾಲುನೆ ಕೊಡ್ತಾವೊ
ಆವಿನ ಮುಂದೆ ಬರುವ ಗೌಡಾಗೋ । ಬೆಳಗಿದುರ
ನಮ್ಮ ಮಕ್ಕಳ ಫಲವೆ ಕೊಡ್ತಾನೋ

ಗುತ್ತೀಯ ಸೀಮಿಗೆ ಒಳ್ಳೆ ಎತ್ತೆದ್ದು ಹೋದಾರೆ
ಗುತ್ತಿಯನಾ ಸೀಮೆ ತೆಲ್ಗಾರು । ಹೆಣುಮಕ್ಕಾಳು
ಎತ್ತಿಗೆ ಆರುತಿಯೆ ಬೆಳ್ಗಿದ್ರೊ । ಎತ್ತೇನು ಕೊಡ್ತಾವೆ
ಎತ್ತಿನ ಮುಂದೆ ಬರುವ ಗೌಡಾಗೋ । ಬೆಳ್ಗಿದ್ರುವೆ
ನಮ್ಮ ಮುತ್ತೈದೆತನುಗಳ ಪಡದಾನೋ

ಹೊತ್ತುಗಳು ತಪ್ಪುತಾವೆ ಒಳ್ಳೆ ಹೊತ್ತುಗಳು ಮೀರ್ಯಾವೋ
ಸ್ವಾಮಾದ್ಹೊತ್ತುಗಳು ಕೆಡ್ತಾವೆ । ವಲಿಗ್ಯಾನಯ್ಯ
ಎಣಿಕಲ್ಲು ಮಕ್ಕೆ ಕೈತೋರಂದಾ ವೋ

ಬಲದಲ್ಲಿ ಕಣ್ಣೀರೆ ಎಡದಲ್ಲಿ ವರ್ಸೋನಣ್ಣಾ
ಎಡದಲ್ಲಿ ಕಣ್ಣೀರೆ ಬಲದಲ್ಲಿ ವರ್ಸೋನಣ್ಣಾ
ಹಿಂದಕ ನೋಡ್ಯಾನಣ್ಣಾ ವಲಿಗಾನೆ ಮಲ್ಲಯ್ಯ
ಎಣಿಕಲ್ಲೆ ಮಕ್ಕೆ ಕೈ ತೋರಿದುನೋ ವೋ

ಹಿಂದಕ ನೋಡ್ಲೋನಣ್ಣಾ ಮುಂದಕ ನಡಿಯೋನಣ್ಣಾ
ಒಂದೇಣಿ ಹತ್ತೋರಂತೆ ಒಂದೇಣಿ ಇಳಿಯೋರಂತೆ
ಅವ್ರಕ್ಕನ ಮ್ಯಾಗಾಳಾಸಿ ಮರ್ತಾವರಣ್ಣ । ಮಲ್ಲಮ್ಮ
ಅವ್ರ ಭಾವಾನಾ ಪಂಥಿಲಿ ನಡಿಯೋನಣ್ಣಾ ವೋ

ಎಣಿಕಲ್ಲು ಕಾವಿಲಿವಳಿಗೆ ಮತ್ತೇನೆ ಬೀದೀನೆ ಬೀಡಂದ–
ಎತ್ತಯ್ಯನ ಎತ್ತಾವು ಹೋಗಾನೆ ನಿಬ್ಬುರುಕೆ
ಅತ್ತುಲು ಸೀಮೇ ಬಂದು ಅತ್ತಕೊತ್ತುಲು ಆಗೋದು
ಇತ್ತುಲು ಸೀಮೇ ಬಂದು ಕತ್ತುಲುಗವ್‌ಕಂಬೊದು
ಸುತ್ತೇಳು ರಾಜ್ಯವುಕೆ ಮತ್ತೇಯೇನೆ ನೋಡು
ಮುತ್ತಿನ ಮಳಿ ಸುರುದಂಗ ಸುರಿಯೋದು ಮೋ

ದಂಡೇ ಬರುತ್ತೈತಂಗೋ ದಳವೆ ಬರುತ್ತೈತಂಗೋ
ಮಂದಿ ಬರುತ್ತೈತಂಗೋ ಮರ್ಬಲ ಬರ್ತಾವಂದು
ಗುಡ್ಡಾದ ಬೋರಮ್ಮ ಅಲ್ಲೆ ನನಿಗನ್ನ ಒಂದೇನೆ
ಉತ್ತರುವೇ ಕಳವುಲಿಲ್ಲ ಅಂದವ್ಳೆ ಬೋರಮ್ಮ
ಊರುಸುತ್ತ ಕ್ವಾಟೆಕಟ್ಟಸೋಳಣ್ಣ ವೋ ಬೋರಮ್ಮ ವೋ

ಆಲಂಗುದ ಕ್ವಾಟೆ ಕಟ್ಟಿಸಿದುಳಣ್ಣ ಬೋರಮ್ಮ
ಎಣಿಕಲ್ಲು ಕಾವಿಲಿಗೆ ಮತ್ತೇಯಾನೇ ನೋಡು
ಎತ್ತುಯ್ಯನ ಎತ್ತೇ ವದಗಿದುವಣ್ಣಾ ವೋ

ಎಣಿಕಲ್ಲು ಕಾವಿಲಿಗೆ ಎತ್ತೇ ವದಗಿದುವಣ್ಣಾ
ಕವುಜಾಡಿದ ಪೆಂಟೀಗೆ ಕಂಬಿ ಇಳಿವಿದುರಣ್ಣ
ಡುಕ್ಕುಸಾರೇ ಗಾಡೀಗೆ ಎತ್ತೇ ಕೆದರಿದುವಣ್ಣಾ
ಕವುಜಾಡಿದ ಪೆಂಟೀಗೆ ಕಳ್ಳೇನೆ ಕಡುದವರಣ್ಣಾ
ಹುಲಿಯಾಡಿದ ಪೆಂಟೇಗೆ ಗೂಡೆಕಟ್ಟಿದುರೋ

ಕಾರೆಕಳ್ಳೇ ಕಡುದವ್ನೆ ಕರಿವಿನ ಗೋಡತ್ತಿದುರುಣ್ಣ
ಊಲೀ ಕಳ್ಳೇ ಕಡದು ಉದಿಮೋರತ್ತಿದುರಣ್ಣ
ಅಂದಾ ಶೆಂದುದ ಕಳ್ಳೆ ಗಂದಮಾವುದು ಬೆರಗಣ್ಣ
ಅಚ್ಚನ್ನ ಕಳತೆ ಪಚ್ಯೇದು ಬೆರಗಣ್ಣ
ಹೂವ್ವಿನುಕ್ಕುಡುದ್ಯಾವ್ರು ಬೆರುಗಣ್ಣಾ ವೋ

ಉಳಿವೇ ಕೋಲು ನೋಡು ಉಗ್ಗುದ ಗಡಿಗೇ ನೋಡು
ಉಕ್ಕುಡುದಾ ಕೋಪೀಗೆ ಇಟ್ಟವನೆ ಎತ್ತಯ್ಯ
ಅಡಿಯಾ ಸಿಗಿ ಸರುದವನೆ ಬೆಂಕಿಮಾಡಿದು ಕಣ
ಮೂರೇನೆ ಕಣ್ಣಿನುದು ಕರಿಯಾನೆ ಸಿಪ್ಪಿನಿದು
ದುಷ್ಟಿಯನ್ನಾ ಕಾಯಿ ವಡದವ್ನೆ ಎತ್ತಯ್ಯ
ಎತ್ತೇ ಗೂಡಿಗೆ ತಿರಗರುದವುನೊ
ಮೋವುದಾರಿನ ಕರೂವೇನೆ ಬಿಟ್ಟವನೆ ಮಲ್ಲಯ್ಯ
ವಳಸಾರೀ ವಳುಸಾರೆ ಹಾಲೇನೇ ಕರಕಂಡು
ಅಡಿಗೇ ಮಾಡೇನೆ ಕಾಣೇ ಮಲ್ಲಯ್ಯ ವೋ

ಎಲ್ಲೇ ಕರುವು ಅಲ್ಲೆ ಕಟ್ಟಿಗಂಡ ಎತ್ತಯ್ಯ
ಉಕ್ಕುಡುದಾ ಕೋಪಿನಾಗೆ ಕುಂತವನಣ್ಣಾ ವೋ
ಎತ್ತಯ್ಯ ವೋ
ಪಟ್ಟೇದಟ್ಟ್ಯಾಗೆ ಕೈಹಿಡುತಾನಣ್ಣಾ ವೋ
ಎತ್ತಯ್ಯ ವೋ

ಬಾರಾಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯ
ಎಂತ ವಸ್ತು ನಾವು ಮರುತು ಬಂದೀವಂದಾ ವೋ

ದಿನವಂದೆ ಮನಿಯೋ ಕಟ್ಟುತೀವೆ ಭಾವಯೋ
ದಿನವಂದೆ ಮನಿಯಾ ಬಿಡತೀವಮ್ಮಾ ವೋ ಭಾವಯ್ಯ ವೋ

ಅಚ್ಚಾ ಇದ್ದಲ್ಲಿ ನಮ್ಮ ಮನಿಗಾಳೇ ಭಾವಯ್ಯ
ಬೆಚ್ಚ ಇದ್ದಲ್ಲಿ ನಮ್ಮ ನಿದ್ರಿಗಳಂದಾ ವೋ

ಅಂಗ್ಯಲ್ಲ ವಲಿಗಾನೆ ಇಂಗ್ಯಲ್ಲ ವಲಿಗಾನೆ
ಇಳ್ಳವಡುದ ಗೂಡಿನಾಗೆ ಮತ್ತೇನೆ ಮಲ್ಲಯ್ಯ
ಸುಣ್ಣಗಾವಿ ಮರತೇ ಬಂದೀನಮ್ಮ ವೋ

ನಾಳೇನೆ ಭಾವಯ್ಯ ನಮ್ಮ ಆವು ವಡುಕಂಡ್ಹೋಗಿ
ನಾಳೇ ತರಾನೇಳೇ ಭಾವಯ್ಯ ವೋ

ಅಂಗ್ಯಲ್ಲ ವಲಿಗಾನೆ ಇಂಗ್ಯಲ್ಲ ವಲಿಗಾನೆ
ನೀನಡಿಗೆ ಮಾಡಿ ನೋಡು ಜಾಲಿಜಂಬೀ ಎಲಿಯಾ
ಪತ್ತುರುವಳ್ಳೇ ಕಟ್ಟಿ ಅಗ್ಗುಣಿಯೆ ತಕ್ಕಂಡು
ಸಣ್ಣಾದೊಂದು ನೋಡು ಊಟಮಾಡೋ ವತ್ತೀಗೆ
ಎಲ್ಲಿದ್ದರು ನಾನೇ ಬರ್ತಿನಂದಾ ವೋ

ಆಗತ್ತು ತಪ್ಪಿದುರೆ ಮತ್ತೇನೆ ಮಲ್ಲಯ್ಯ
ಕೆಟ್ಟಜಾತ್ಯೊನೆಂದು ಕರಿಯಮ್ಮಾ ವೋ

ಅಗೆಯರ ಕೈ ಅಡಿಯಾಗಿ ನಿಮ್ಮ ಕೈ ಮೇಲಾಗಿ
ದುಸ್ಮಾನ ಹುಡುಗಾರೇ ಅಡಿಯಾಗಿ ಬರಲಂದ
ನಿಮ್ಮಗಾರೆ ಓ ಭಾವ ದೇವಗಾರಿ ಅಂದವನೆ
ತಣ್ಣನ್ನವು ಮೂರರಿಕೆ ಕೊಡುತಾನೆ ಮಲ್ಲಯ್ಯ
ಈಳ್ಳೆವಡದೇ ಗೂಡೀಗೆ ಬರುತಾನಣ್ಣಾ ವೋ

ಕಾಲು ಗಡಸೋನಣ್ಣ ತೋಳೆ ಬೀಸೋನಣ್ಣ
ಎಡವೀದ ಕಲ್ಲೆ ಪುಡಿಪುಡಿಯಣ್ಣಾ ವೋ
ಈಳ್ಳೆವಡದೆ ಗೂಡಿಗೆ ಬಂದವನೆ ಎತ್ತಯ್ಯ ವೋ
ಗೂಡಿನಾಗೆ ಮಲ್ಲಮ್ಮ ಮನಿಗಳವಳೋ ವೋ

ನೋಡವ್ನೆ ಎತ್ತಯ್ಯಾ ಒಳ್ಳೆ ಮತ್ತೇನೇ ನೋಡು
ಉಡಿ ದಟ್ಟ್ಯಾಗ ಇದ್ದಂತ ಸಂಜೀವಿನ ಮೂರೂತಿ
ತಕ್ಕಂಡ ಎತ್ತಯ್ಯ ಮತ್ತೇನೆ ಯೇನೆ ನೋಡು
ಸೂರಿದುಗೊಂದು ಭಾಗ ಚಂದುರುಗೊಂದು ಭಾಗ
ನಿವ್ವಾಳಿ ತಗುದವ್ನೆ ಮತ್ತೇನೆ ಎತ್ತಯ್ಯ
ಮಲ್ಲಮ್ಮನ ಮಂಡೆಮ್ಯಾಲೆ ಹಿಡಿತಾನಣ್ಣಾ ವೋ

ಹರಹರನೆ ಶಿವು ಶಿವುನೆ
ಉಜ್ಜಣಿ ಪರುಮೂತಿ ಸ್ವಾಮಿ
ಇಷ್ಟೊತ್ತು ನಾವು ನಿದ್ದೆ ತಡದೇವು ಅಂದವಳೆ
ಅಷ್ಟುಂಗುದುಲ್ಲೇ ಎದ್ದವಳೆ
ಅಬುಗಾನೆ ಮಲ್ಲಮ್ಮ
ಎತ್ತಯ್ಯನಾ ಪಾದಾಕೆ ಎರಗಿದುಲಣ್ಣಾ ವೋ

ಬಾರೆ ಬಾರೆ ಎಲುಮಲ್ಲಿ
ಈ ಬುದ್ಧಿ ನಿನಗೆ ತರುವಲ್ಲ ಎಲುಮಲ್ಲಿ
ನಾನು ಉಲಿಗುರಿಗ್ಹೋಗುಲುವಾಗ
ಅಡ್ಡಾ ಆಗಬೋದನೆ
ಆಗಾನೇ ನೋಡು ಮತ್ತೇನೆ ಎತ್ತಯ್ಯ
ಇದ್ದೀವ್ಹೇಳಿದುನಣ್ಣ ಬುದ್ಧಿ ಹೇಳಿದುನಣ್ಣ
ಅವರರುಮನಿಗೆ ಕರಕಂಡು ಬರುತಾರಣ್ಣಾ ವೋ

ಕುರಿಯಾಳ ಹಿರಿಯ್ಹುಟ್ಟೀಗೆ ತಾವುರಿಗಿರಿ ಬಸುವಂಗೆ
ಸೀಮೀಗೆ ಕರಕಂಡು ಬಂದವನೆ ಎತ್ತಯ್ಯ
ಅವುರರಮನಿಗೆ ಗವುಡಾ ಬಿಡುತಾನಣ್ಣಾ ವೋ

ವತ್ತುಗುಳೇ ತಪ್ಪುತಾವು ಗೊತ್ತುಗಳು ಮೀರ್ಯಾವೋ
ಆವೇಳೊದೊತ್ತಾಗಿ ಬರುತಾವೆ ಏಳುಮಲ್ಲಿ
ತಣ್ಣನ್ನವು ಮೂರರಿಕೆ ಕೊಡುಬೇಕಂದಾ ವೋ

ಕಳ್ಳಕಾಕುರು ಸೀಮೀಗೆ ಹೋಗುತೀರೇ ಗೌಡ
ನೀವು ಸತ್ತೆ ಸಾವೂದೇನೋ ಬದುಕಿದ ಬಾಳು ಏನು
ನನಗ್ಹೆಂಗೆ ತಿಳಿಬೇಕು ಮೈಗುದು ಗವುಡಾ ವೋ

ನೀನು ನೀರೆರಕಂಬೇ ನೋಡು
ಬಚ್ಚುಲಾಗೆ ಏಳುಮಲ್ಲಿ
ಕೆಂಮ್ಮಣ್ಣಿಗೊಬ್ಬರ್ಹಾಕು
ಮಲ್ಲಿಗ್ಹೂವ್ವಿನಂಟಾಕು
ದಿನವೇನೇ ನೀರ್ಹೊಯ್ಯಿ
ಹೂವ್ವೇನೆ ಬಿಡುತಾವೆ
ಹೂವ್ವೇನೆ ಕೊಯ್ಕಂಡು
ಕುತಿನಿ ಶೆಂಬೀನಾಕ
ತುಂಬಿಕಂಡು ಏಳುಮಲ್ಲಿ
ನೆಲಿವಿನ ಮ್ಯಾಲಾಕೀಡು
ಅವು ಕಳಕಳನೇ ಅಂದಾರೆ
ನಮ್ಮ ಆವಿನ ಗೌಡಾರೇನೆ
ಐದಾರಂದುಕೊಳ್ಳೆ
ಬಾಡಿಬತ್ತಿ ಬಂದಾರೆ
ನಮ್ಮ ಆವಿನ ಗವುಡುನ ಆಸಿ ಮರಿಯಂದಾ ವೋ

ಅಗಿಯರ ಕೈ ಅಡಿಯಾಗಿ ನಿಮ್ಮ ಕೈ ಮೇಲಾಗಿ
ದುಸ್ತಾನುಡುಗಾರೆ ಅಡಿಯಾಗಿ ಬರ್ಲಂದಳು
ತಣ್ಣನ್ನವು ಮೂರರಿಕೆ ಕೋಡುತಾಳೆ ಮಲ್ಲಮ್ಮ
ಎತ್ತೀಗೆ ಎತ್ತಯ್ಯ ಬರುತಾನಣ್ಣಾ ವೋ

ಜಾಲಿ ಜಂಬಿ ಎಲಿಯೆ ಪತ್ತುರುವಳ್ಳೀ ಕಟ್ಟಿ
ಅಗ್ಗುಣಿಯೆ ತಕ್ಕಂಡು ಮಜ್ಜಣ ನೀಡಿಕಂಡು
ಸಣ್ಣಾದೊಂದು ನೋಡು ಊಟ ಮಾಡೋಹೊತ್ತೀಗೆ
ಕೈಗಲುತಾ ಎತ್ತಯ್ಯ ಕೈಗಲುತಾ ವೋ

ಒಪ್ಪಿಗಂಡ ವಲಿಗಾನೆ ಮೆಚ್ಚಿಗಂಡೆ ಅಂದಾರೆ
ಒಪ್ಪೀಕಂಡೆ ಕಾಣೋ ಭಾವಯ್ಯ ವೋ

ಸಣ್ಣಾದೊಂದು ನೋಡು ಊಟ ಮಾಡಿಕಂಡು
ಸಣ್ಣಾದೊಂದಿಳ್ಳೀವೆ ದರಸಿದುರಣ್ಣಾ ವೋ

ಎಳುಕಲ್ಲು ಕವಲೊಳಗೆ ಏಳುಜೀವಿಗಡ್ಡ್ಯಮ್ಮ
ಯಾವಗಡ್ಡೆ ಒಪ್ಪಿದವೆ ವಲಿಗಾನಂದಾ ವೋ

ದಿನವಂದೇ ಮನಿಯೇ ಒಳ್ಳೆ ಕಟ್ಟತೀವಿ ಭಾವಯ್ಯ
ದಿನ ವಂದೇ ಮನಿಯೇ ಬಿಡತೀವಮ್ಮ ವೋ

ಹಚ್ಚಾಗಿದ್ದಲೆ ನಮ್ಮ ಮನಿಗಾಳೆ ಭಾವಯ್ಯ
ಬೆಚ್ಚಾಗಿದ್ದಲೆ ನಮ್ಮ ನಿದ್ರಿಗಳಂದಾ ವೋ

ಅಂಗ್ಯಲ್ಲ ವಲಿಗಾನೆ ಇಂಗ್ಯಲ್ಲ ವಲಿಗಾನಯ್ಯ
ಏಳ ದಿನುದು ಕಾರ್ಯವುದು ಗೂಡೆ ಕಟ್ಟಬೇಕಮ್ಮ
ಯಾವ ಗಡ್ಡೆ ವಪ್ಪಿದೆ ವಲಿಗಾನಂದಾ ವೋ

ಮರಕೋತಿ ಆಡೀದ ಗುಂಡೀನ ಪೆಂಟೀಗೆ
ಒಪ್ಪೀಕಂಡೆ ಕಾಣೋ ಭಾವಯ್ಯ ವೋ

ಆಸಿನ ಕಳ್ಳೇ ತಾನೊಳ್ಳೆ ಬೀಸಿ ಕಡದೆತ್ತಯ್ಯ
ಬೀಸಿ ಬೀಸಿ ಬೆರಗು ತಿರುವಿದುರಣ್ಣ । ನಿನ್ನೆತ್ತಯ್ಯ
ಮೋಸ ಬ್ಯಾಡರಿಗೆ ತಿಳಿಯಾಲಿಲ್ಲಾ ವೋ

ತುಗ್ಗಿಲಿ ಕಳ್ಳೆ ತಾನೊಳ್ಳೆ ಬಗ್ಗಿಸಿ ಕಡದೆತ್ತಯ್ಯ
ಕಿಗ್ಗಾಕಿಗ್ಗುದು ಬೆರುಗು ತಿರುವಿದುನಣ್ಣ । ನಿನ್ನೆತ್ತಯ್ಯ
ಬುದ್ಧಿ ಬ್ಯಾಡುರಿಗೆ ಅರಿಯಾಲಿಲ್ಲ ವೋ

ಕಾರೆಕಳ್ಳೆ ಕಡುದವುರೇ ಕರುವಿನ ಗೂಡ ತಿರುವವರೆ
ಹುಲೀಕಳ್ಳೇ ಕಡದು ಉದುಮೋರತ್ತಿದುರಣ್ಣ
ಅಂದಾ ಶೆಂದುದ ಕಳ್ಳೆ ಗಂಧ ಮಾವುದು ಬೆರಗಣ್ಣ
ಅಚ್ಚನ್ನ ಕಳ್ಳಂತೆ ಪಚ್ಚೇದು ಬೆರುಗಣ್ಣ
ಹೂವ್ವಿನುಕ್ಕುಡು ದ್ಯಾವುರು ಬೆರಗಣ್ಣಾ ವೋ

ಉಳಿಯೋ ಕೋಲು ನೋಡು ಉಗ್ಗುದು ಗಡಿಗೆ ನೋಡು
ಉಕ್ಕುಡುದ ಕೋಪೀಗೆ ಇಟ್ಟ ನಿನ್ನೆತ್ತಯ್ಯ
ಅಡಿಯಾ ಸಿಗಿಸರುದವನೆ ಬೆಂಕಿ ಮಾಡೀದುರಣ್ಣ
ಮೂರೇನೇ ಕಣ್ಣಿನುದು ಕರಿಯಾನೆ ಸಿಪ್ಪಿನಿಗೆ
ದೃಷ್ಠಿಯನ್ನು ಕಾಯಿ ವಡುದಾನೆ ಎತ್ತಯ್ಯ
ಎತ್ತೇಗೂಡಿಗೆ ತಿರುಗುದವರಮ್ಮ ವೋ

ಎತ್ತೇನೇ ಗೂಡಿಗೆ ಮತ್ತೇನೆ ಎತ್ತಯ್ಯ
ಭಾವಾ ಸುಡುತಾನಣ್ಣ ಮೈಗುದು ಗವುಡ
ಎತ್ತಾವೆ ಗೂಡಿನೇ ಸೇರಿಕಂಬೋದು ನೋಡು
ಮೋವುದಾರಿಲಿ ಕರುವೇನೆ ಬಿಟ್ಟವುನೆ ಮಲ್ಲಯ್ಯ
ವಳಸಾರೆ ವರಸಾರೆ ಹಾಲೇನೆ ಕರಕಂಡು
ಉಕ್ಕುರಿ ಸುಗ್ಗೀ ಮಾಡಿ ಕಡಿಗಿಟ್ಟ ಮಲ್ಲಯ್ಯ
ಜಾಲಿ ಜಂಬೀ ಎಲಿಯೇ ಪತ್ತುರುವಿಳ್ಳೇ ಕಟ್ಟಿ
ಅಗ್ಗುಣಿಯೇ ತಕ್ಕಂಡು ಮಜ್ಜಣ್ಣ ನೀಡೀಕಂಡು
ಸಣ್ಣಾದೋಂದೂಟ ಮಾಡಿಸಿದುರಣ್ಣಾ ವೋ

ಸೀಗುರಿ ಸಿಕ್ಕಿಣಿಕಂತೆ ಬಾಗುರು ಬಿಳಿ ಎಲಿಯಣ್ಣಾ
ತಾವುರುಗಿರಿ ಯಂಬೋದು ಸೋಸಿದ ಕೆನಿ ಸುಣ್ಣಾವ
ಗಟ್ಟಾದನ್ನ ಸೀಮೆ ರೆಟ್ಟಿ ಯೆಸಲಿನ ಸೊಪ್ಪು
ಸಣ್ಣಾದೊಂದಿಳ್ಳೇವೆ ಮಡಿಸಿದುರಣ್ಣಾ । ನಿನ್ನೆತ್ತಯ್ಯ
ಕಲ್ಲಿನ ಕಲ್ಲಿನ ಮಂಚ ಸೆಲ್ಲ್ಯಾರದಟ್ಟೆ ತೆಲಿಗಿಂಬೂ
ಹಾವೀನ ಸೀಗಣ್ಣ ಚೇಳಿನ ಮಂಚ ನಾಗಭೂಷಣವೆ ತೆಲಿಗಿಂಬು

ಹತ್ತು ಸಾವಿರದಂಬು ತೆಕ್ಕಿಗೆ ಸಾಸಿಕಂಡ
ಆರು ಸಾವಿರದಂಬು ತೋಳಿಗೆ ಸಾಸೀಕಂಡ
ಬೇವಿನ ಸುರಿನಾರಿ ಬಿಲ್ಲು ಬೆನ್ನಿಗೆ ಕಟ್ಟೀಕಂಡ
ಕಯ್ಯಲಿ ಕತ್ತಿರಿ ಬಾಣ ನೆತ್ತಿಲಿ ನೆತ್ತುರು ಬಾಣ
ಸುರುನಾರಿ ಮರುಬಿಲ್ಲು ಸೂರಿದುನ ವದಿಯಂಬು
ಸೂಡಿಕಂಡ ಗನಗುರುವೆ ಮತ್ತೆ ನಿನ್ನೆತ್ತಯ್ಯ
ಹೊಕ್ಕುಳುವ ಸೀಕಂಡ ಹೊಕ್ಕಳುವ ವದ್ದುಕಂಡ
ಮನಿಗಿದುರೊ ಗೌಡಾ ಮನಿಗಿದುರಣ್ಣಾ ವೋ

ಮುಂಗಳಿ ಕೂಗೋದಂತೆ ಮೂಡಲು ಕೆಂಪರುವೋದೇ
ಎದ್ದವುಳೆ ಬೋರಮ್ಮ ಮತ್ತೇನೆಯೇ ನೋಡು
ತಣ್ಣೀರು ಮುಳಿಗಿದುಳಣ್ಣ ತಡಿಮುಡಿ ಉಟ್ಟೈದಾಳೆ
ನಿಂತು ತಡಿಮುಡಿ ಮ್ಯಾಲೆ ನಿಂತಗಂಡು ಬೋರಮ್ಮ

ವಡಿಯದ ನಾಗೂರಂತೆ ಹಿಡಿಯದು ಬಿರುದುನಿ ಕಾಳೆ
ನಾಗುಳುನವು ಬೂತೂಳು ತಾಲುಗಳು ಮ್ಯಾಳುಗಳು
ಸಾನ್ಯೆಬಾ ಜಂತುರುಲೆ ಗಡಿಬಿಡಿ ಮಾಡಿಸಿಕಂಡು
ಪಟ್ಟಾದ ಬಿಳಿಯಾನೇನ ಹತ್ತಿಕಂಡು ಬೋರಮ್ಮಾ
ಹಾಲಂಗುದ ಕ್ವಾಟೆಮ್ಯಾಲೆ ನಿಂತಕಂಡು ಬೋರಮ್ಮ
ಆನೆವಂಟೆ ಕಾವಲು ಮಕ್ಕ ಆಯ ನೋಡಿದುಲೋ

ಅಡ್ಡಂದೇ ಆರು ಗಾವುದ ಸುತ್ತ ಮೂರು ಗಾವುದ
ಬೆಳ್ಳಿ ಗೂಡಾರೊಯ್ದಾಂಗೆ ಬಿಗುದು ನಿಂತೈತೋ

ನೋಡಿದುಳೋ ಬೋರಮ್ಮ ನೋಡಿದುಳೋ
ಆಲೆ ಕಾದಾಲು ಕುಡುದು ಗೊಲ್ಲಾಗೆ ಕಾವುರುವು ಎಷ್ಟಿದ್ದೀತೋ
ಅಸಿಯಾಲು ಕುಡುದು ಗೊಲ್ಲಾಗೆ ಮದುವೆಷ್ಟು ಇದ್ದೀತೋ
ಅವನ್ಹೊಟ್ಟೆಗೆ ಹಣವೇಟೈತೊ ಹಟ್ಟ್ಯಾಗ ಹಣವೇಟೈತೋ
ಅವನ ಹೊಟ್ಟೇ ಮುರಿಬೇಕಂದಳು ಬೋರಮ್ಮಾ ವೋ

ಅವನ ಆನೆ ವಂಟೆ ಕಾವೂಲು ಹಾಳು ಮಾಡಿ ಬಿಟ್ಟವನೆ
ಅವುನ ಗೊಲ್ಲಾನ ತಲಿಯೆ ತರಬೇಕಂದುಳು ವೋ

ಗೊಲ್ಲುನ ತಲಿಯೇ ನಾನು ತರದ್ದಿದ್ದುಮ್ಯಾಲೇಯೇ ನೋಡೂ
ಇವು ಮಲಿಯಲ್ಲ ಎಕ್ಕೇ ಕಾಯಿ ಅಂದವಳೆ ಬೋರಮ್ಮ
ಅವುಳೆದಿಯೆ ಅವುಳೇ ತಟ್ಟಿಕಂಬೋಳೂ ವೋ

ಗೊಲ್ಲಾನ ತಲಿಯೇ ನೋಡು ತರಬೇಕು ಅಂದವಳೆ
ಊರಾಗೆ ಇದ್ದಂತ ಗಂಡು ಬೀರಿ ಹುಡುಗುರುನ
ಕರಿಸಿದುಳು ಬೋರಮ್ಮ ಮತ್ತೇಯೇನೆ ನೋಡು
ಅನ್ನಾಕಿಲ್ಲದೋರೀಗೆ ಅನ್ನ ನಾನು ಕೊಡುತೀನಿ
ಬಟ್ಟೆ ಇಲ್ಲಂದರಿಗೆ ಬಟ್ಟೆ ನಾನು ಕೊಡುತೀನಿ
ಗೊಲ್ಲನ ತಲಿಯೆ ನೀವು ತಂದಿದು ನಿಜವಾದರೆ
ತಾಯಿ ಮಗಳು ಮಕ್ಕಳನ ಗಂಡುಳ್ಳ ಹೆಂಡರುನ
ಸರಿಯಪ್ಪಣಿ ಬಿಡಿಸಿ ಕೊಡುತೀಂದವುಳೋ ವೋ

ಊಪಿರಿಕಿದ್ದರುನ ನಾವು ಉಪ್ಪಾದರು ಮಾರಿಕಂಡು
ತಿಂಬುತೀವಿ ಬೋರಮ್ಮ ಮತ್ತೇಯೇನೆ ನೋಡು
ಆಸತ್ತೇದಲ್ಲಿ ಸೆರಣ ಉತ್ತುಮುರೇನೇ ಮಗಾ
ಎತ್ತಯ್ಯನ ಗೊಡವಿ ನಮ್ಮಿಗೆ ಬ್ಯಾಡಮ್ಮ ವೋ

ದಂಡೆಲ್ಲ ಹಿಂದಾಕೆ ಸರದು ಹೋಗುವುದಮ್ಮ
ಕಾಲು ಕಡಗದೋನು ಕೊಳ್ಳಿಲಿ ಪದುಕದೋನು
ಮುಕ್ಕಣ್ಣ ಬಲ್ಲರಿದೋನು ಮುತ್ತಿನ ತೂರೊಯ್ದೋನು
ಜೋಮಲಿ ಗುಂಡಲಿನೋನು ಒಮಲೆ ಗುಂಡೀನೋನು
ಗುಡ್ಡದ ಬೋರಿ ತಮ್ಮ ಗಂಟಾಳು ಶಿನ್ನಯ್ಯ
ನಾನೇ ತರತೀನಿ ಕಾಣೆ ಮತ್ತೇನೇ ಬೋರಮ್ಮ
ನನಿಗೇನು ನೀನು ಕೊಡತೀಯಂದಾ ವೋ

ಗೊಲ್ಲನ ತಲಿಯೇ ನೀನು ತಂದಿದ್ದು ನಿಜವಾದಾರೆ
ಸಾಲುಗ್ವಾದಾಲೆತ್ತೆಮ್ಮ ಸರಳೆಮ್ಮೆ ಹಿಂಡಮ್ಮ
ಕುರಿಯಟ್ಟಿ ಕುರಿಹಿಂಡು ವರಿಗೂಡಿನೆತ್ತಾವು
ಸರಿಪಾಲು ಕೊಡುತಿನಿ ಕಾಣೊ ಶಿನ್ನಯ್ಯ ವೋ

ಅದುವೋಟು ನಾನೇನು ಮಾಡಾಲಿ ಬೋರಮ್ಮ
ಇನ್ನೇನು ಕೊಡಬೇಕು ಶಿನ್ನಯ್ಯ ವೋ

ಗೊಲ್ಲುನ ತಲಿಯೇ ನೀನು ತಂದಿದ್ದು ನಿಜುವಾದಾರೆ
ರಾಮಸಾಲೆ ಹೊನ್ನುಗುಳು ಭೀಮಸಾಲೆ ಹೊನ್ನುಗುಳು
ಸರಿಪಾಲು ಶಿನ್ನ ಸರಿಪಾಲಯ್ಯ ವೋ

ಅದುವೋಟು ನಾನೇನು ಮಾಡಾಲಿ ಬೋರಮ್ಮ
ಇನ್ನೇನು ಕೊಡಬೇಕು ಶಿನ್ನಯ್ಯ ವೋ

ಗೊಲ್ಲುನ ತಲೀಯೇ ನೀನು ತಂದಿದ್ದು ನಿಜುವಾದಾರೆ
ಮನಿಯಾಗೆ ಇರುವಂತ ರಾಮಸಾಲೆ ಹೊನ್ನಗುಳು
ಸರಿಪಾಲು ಶಿನ್ನ ಸರಿಪಾಲಯ್ಯ ವೋ

ಅದುವೋಟು ನಾನೇನು ಮಾಡಾಲಿ ಬೋರಮ್ಮ
ಇನ್ನೇನು ಕೊಡಬೇಕು ಶಿನ್ನಯ್ಯ ವೋ

ಗೊಲ್ಲುನ ತಲಿಯೇ ನೀನು ತಂದಿದ್ದು ನಿಜುವಾದರೆ
ನನ ಮನಿಯಾಗೆ ಇರುವಂತ ಬಕ್ಕುಸ ಬಂಢಾರವು
ಸರಿಪಾಲು ಶಿನ್ನ ಸರಿಪಾಲಯ್ಯ ವೋ

ಸಾಲುಗ್ವಾದುಲೆತ್ತಮ್ಮ ಸರಳೆಮ್ಮೆ ಹಿಂಡಮ್ಮ
ಕುರಿಯಟ್ಟಿ ಕುರಿಹಿಂಡು ವರಿಗೂಡಿನೆತ್ತಾವು
ಮನಿಯಾಗೆ ಇರುವಂತ ಬಕ್ಕುಸು ಬಂಢಾರಾವು
ಸರಿಪಾಲು ಕೊಡತಿನದ್ರೆ ವಲ್ಲಮ್ಮುತಿ ಶಿನ್ನಯ್ಯ
ಇನ್ನೇನು ಕೊಡಬೇಕ್ಹೇಳು ಶಿನ್ನಾಯ್ಯ ವೋ

ಗೊಲ್ಲುನ ತಲಿಯೇ ನೀನೇ ತಂದಿದ್ದು ನಿಜುವಾದಾರೆ
ನೀನು ಕೇಳಿದ್ದೆ ವರುವೆ ಕೊಡತೀನಯ್ಯ ವೋ

ನೀನೇ ನನ ಮಂಚಕ್ಕೆ ವಪ್ಪತ್ತು ಶೈವಾದಾರೆ
ಈಗ ತರತಿನಿ ಗೊಲ್ಲುನ ತಲಿಯೆಂದ ಶಿನ್ನಾ ತಲಿಯೆಂದ ವೋ

ನೀನು ತಂದ ವಂದೀಗೆ ನಾನು ನೋಡೀದಂದೀಗೆ
ಆದಾರಾಗಲ್ಹೋಗೋ ಶಿನ್ನಯ್ಯ ವೋ

ಇಳೈವಿಡುದವನಣ್ಣ ಮತ್ತೇನೆ ಶಿನ್ನಯ್ಯ
ಏಳು ಕಟ್ಟೀ ಬಳ್ಳೀನೆ ತಕ್ಕಂಡ ಎಲು ಶಿನ್ನ
ಏಳು ಬಂದಿರಿ ದೊಣ್ಣೆ ತಕ್ಕಂಡ ಶಿನ್ನಯ್ಯ
ಆವಿನ ಗೂಡೀಗೆ ವದಿಗಿದುನಣ್ಣಾ ವೋ

ಆವಿನ ಗೂಡೀಗೇನೆ ವದಿಗೆನೆ ಶಿನ್ನಯ್ಯ
ಉಕ್ಕುಡುದ ಕೋಪಿನಾಗ ಕುಂತವುನಣ್ಣಾ ವೋ

ಆಗುಸುರು ಬಾಲೆ ಹೋಗೋಳೆ ತಗಸಿ ಹೂವ್ವಿನ ಬೂದ
ಕಾಲು ಕೆದರಿ ಎತ್ತೇ ರಂಗುಳುಸೋದು ವೋ

ಶಾಡೇದೆ ಹುಲ್ಲೇ ಒಂದೀಳ್ಳಡಿಮೆ ಹೋದಣ್ಣ
ಬ್ಯಾಡುರು ಬಂದುರು ಗಾಳಿ ತಗಿಯೋದು । ಕರಿ ಎತ್ತೇ
ಕಾಲು ಕೆದರಿ ಎತ್ತೇ ರಂಗುಳುಸೋದು ವೋ

ಹಳ್ಳಾದ ಹುಲ್ಲೆ ಒಂದಳ್ಳಡಿಮೆ ಹೋದಣ್ಣಾ
ಕಳ್ಳರು ಬಂದುರು ಗಾಳಿ ತಗಿಯೋದು । ಬಿಳಿ ಎತ್ತೇ
ಕಾಲು ಕೆದರಿ ಎತ್ತೇ ರಂಗುಳುಸೋದು ವೋ

ಬಾರಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯ
ಕಡೆಯುಕ್ಕುಡುಕ್ಹೋಗಿ ಆಯ ನೋಡಂದ ವೋ

ಕಡಿ ಉಕ್ಕುಡಕೇ ಬಂದು ನೋಡುತಾನೆ ಮಲ್ಲಯ್ಯ
ಗುಡ್ಡುದ ಬೋರೀ ತಮ್ಮ ಗಂಟಾವುಲು ಶಿನ್ನಯ್ಯ
ಕಡಿ ಉಕ್ಕುಡುದಾಗೆ ಕುಂತವನಂದಾ ವೋ

ಭಾವಾ ಭಾವ ನೋಡೊ ಮತ್ತೇನೆ ಭಾವಯ್ಯ
ಗುಡ್ಡುದು ಬೋರಿ ತಮ್ಮ ಗಂಟಾವುಲು ಶಿನ್ನಯ್ಯ
ಕಡಿ ಉಕ್ಕುಡುದಾಗೆ ಕುಂತವುನಂದಾ ವೋ

ದುಡುದುಂಬಾಕೆ ಅವುನು ಎತ್ತಿ ಬಂದವನಂದು
ಕರದುಂಬಾಕೆ ನೋಡು ಹಾಲಿಗೆ ಬಂದವನ್ಹೆಂಗೋ
ಹೋಗಯ್ಯ ಕೇಳಿಬಾ ಅಂದವಳೆ ಮಲ್ಲಮ್ಮ ವೋ

ನೀ ದುಡದುಂಬಾಕೆ ಎತ್ತಿಗೆ ಬಂದೀಯೇನೋ
ಕರದುಂಬಾಕೆ ನೋಡು ಆವಿಗೆ ಬಂದೀಯೇನು
ಯಾತಕೆ ಬಂದಿದ್ದಾಲೆ ಶಿನ್ನಯ್ಯ ವೋ

ದುಡುದುಂಬಾಕೆ ನನಿಗೆ ಎತ್ತೆನು ಕಡಿಮ್ಯಾಗಿಲ್ಲ
ಕರದುಂಬಾಕೆ ನೋಡು ಆವೇನು ಕಡಿಮ್ಯಾಗಿಲ್ಲ
ಕರೇವುಕೆ ಬಂದೀವಿನೇ ಎಲೆ ಗೊಲ್ಲಾ ವೋ

ಆ ಮಾತು ಕೇಳುವನೆ ವಲಿಗಾನೆ ಮಲ್ಲಯ್ಯ
ಅವುರ ಭಾವ್ನನತಾಕೆ ಅವ್ರನು ಬರುತಾನಣ್ಣ ವೋ

ದುಡುದುಂಬಾಕೆ ಅವನು ಎತ್ತಿಗೆ ಬಂದಿಲ್ಲಂತೆ
ಕರದುಂಬಾಕೆ ನೋಡು ಆವಿಗೆ ಬಂದಿಲ್ಲಂತೆ
ಕಾರೇವುಕೆ ಬಂದವನೆ ಭಾವಯ್ಯ ವೋ

ಮೊದಲಾಡಿದ ಮಾತೇ ಮತ್ತೇ ತೊದಲಾಡಿದೆ ಲಮಡೀಕೆ
ನೀನು ಯಾತಕ ಬಂದಿದ್ದಾಲೆ ಶಿನ್ನಯ್ಯ ವೋ

ಕರಿಮಲ್ಯೆಗೆ ಬಿಳಿಮಲ್ಯೆಗೆ ಕಟ್ಟಿಗೆಗೆ ಹೋಗಿದ್ದೇ
ಹೊತ್ತು ಹೋತು ಗವುಡ ಉಳಕಂಡೆ ಗವುಡ ಉಳಕಂಡೆ ವೋ

ಮೊದಲಾಡಿದ ಮಾತು ಒಳ್ಳೆ ತೊದಲಾಡಿದೆ ಲಮಡೀಕೆ
ಯಾತಕೆ ಬಂದಿದ್ದ್ಯಾಲೆ ಶಿನ್ನಯ್ಯ ವೋ

ಎತ್ತಿನ ಗೂಡಿನಾಗೆ ಬಲು ಎಚ್ಚುಳುವೇಳುತಿದ್ದರು
ನಿದ್ದೆ ಮಾಡಬೇಕಮುತ ಬಂದಿವಿನಿ ಗೌಡ ಬಂದಿವಿನೇ ವೋ

ಎಷ್ಟು ಪೆಟ್ಟು ಕೇಳಿದುರೆ ಹೇಳದಿಲ್ಲ ಎಲೆ ಶಿನ್ನ
ನಿನ್ನೆ ಮಧ್ಯನದ್ಹೊತ್ತಿನಾಗೆ ನಿಮ್ಮಕ್ಕ ಬೋರಮ್ಮ
ತಣ್ಣೀರು ಮುಣಿಗೀ ನೋಡು ತಡಮುಡಿ ಉಟ್ಟಿಕಂಡು
ನಿಂತು ತಡಿಮುಡಿಮ್ಯಾಲೆ ನಿಂತಗಂಡು ನಿಮ್ಮಕ್ಕ
ವಡಿಯದು ನಾಗೂರಂತೆ ಹಿಡಿಯದು ಬಿರ್‍ಯಾದಿನಿಕಾಳಿ
ನಾಗುರುನವು ಬೂತುಗುಳು ತಾಳುಗುಳು ಮ್ಯಾಳುಗಳು
ಶಾನ್ಯೆವ ಜಂತುರುಲೆ ಗಡಿಬಿಡಿ ಮಾಡಿಸಿಕಂಡು
ಪಟ್ಟದ ಬಿಳಿಯಾನೇನ ಹತ್ತಿಕಂಡು ಬೋರಮ್ಮ
ನಮ್ಮ ಆವಿನ ಗೂಡಿಗೇನೆ ಆರುತಿಯೆ ಬೆಳಗಿದ್ದು
ಸುಳ್ಳೋ ಬದ್ದಾವೋ ಶಿನ್ನಯ್ಯ
ಬದ್ದ ಗೊಲ್ಲುನು ಗವುಡ ನಿನಮಾತು ವೋ

ಆ ಗೊಲ್ಲುನ ತಲಿಯೇ ನೋಡು ತರದ ಮೇಲೆಯೇ ನೋಡು
ನನಿಗೆ ಮಲಿಯಲ್ಲ ಎಕ್ಕೇಕಾಯಿ ಅಂದುದ್ದು ನಿಮ್ಮಕ್ಕ
ಸುಳ್ಳೊ ಬದ್ದಾವೋ ಶಿನ್ನಯ್ಯ
ಬದ್ದ ಗೊಲ್ಲುನು ಗವುಡ ನಿನಮಾತು ವೋ

ನನ್ನ ಆನೆ ವಂಟೆ ಕಾವೂಲು ಹಾಳು ಮಾಡಿ ಬಿಟ್ಟವನೆ
ಊರಾಗೆ ಇದ್ದಂತ ಗಂಡಬೀರಿ ಹುಡುಗರುನ
ಕರಿಸಿದ್ದು ನಿಮ್ಮಕ್ಕ ಮತ್ತೇನೆ ಬೋರಮ್ಮ
ಅನ್ನಾಕಿಲ್ಲದೋರಿಗೆ ಅನ್ನಕ್ಕ ನಾನು ಕೊಡತೀನಿ
ಬಟ್ಟೆ ಇಲ್ಲಂದರಿಗೆ ಬಟ್ಟೆ ನಾನು ಕೊಡತೀನಿ
ಗೊಲ್ಲುನ ತಲಿಯೇ ನೀವು ತಂದಿದ್ದು ನಿಜುವಾದಾರೆ

ತಾಯಿ ಮ್ಯಾಗಳ ಮಕ್ಕಳುನ ಗಂಡುಳ್ಳ ಹೆಂಡುರುನ
ಸರಿಯಪ್ಪಣಿ ಬಿಡಿಸಿ ಕೊಡತೀನಿ ಅಂದದ್ದು ನಿಮ್ಮಕ್ಕ
ಸುಳ್ಳೇ ಬದ್ದಾವೊ ಶಿನ್ನಯ್ಯ
ಬದ್ದ ಗೊಲ್ಲುನು ಗವುಡ ನಿನಮಾತು ವೋ

ಆ ದಂಡೆಲ್ಲ ಹಿಂದಾಕೆ ಸರದೂನೆ ಹೋಗೋದು
ನಾನೇನೆ ತರುತಿನಿ ಕಾಣೆ ಮತ್ತೇನೆ ಬೋರಮ್ಮ
ನನಿಗೇನು ನೀನೇನು ಕೊಡತೀನಿ ಅಂದುದ್ದು
ಸುಳ್ಳೋ ಬದ್ದಾವೋ ಶಿನ್ನಯ್ಯ ವೋ

ಗೊಲ್ಲುನ ತಲಿಯೆ ನೀನು ತಂದಿದ್ದು ನಿಜುವಾದರೆ
ಸಾಲು ಗ್ವಾದುಲೆತ್ತಮ್ಮ ಸರಳೆಮ್ಮೆ ಹಿಂಡಮ್ಮ
ಕುರಿಯಟ್ಟಿ ಕುರಿಹಿಂಡು ವರಗೂಡಿನೆತ್ತಾವು
ಸರಿಪಾಲು ಕೊಡತಿನಿ ಅಂದಿದ್ದು ನಿಮ್ಮಕ್ಕ ಬೋರಮ್ಮ
ಸುಳ್ಳೋ ಬದ್ದಾವೋ ಎಲೆ ಶಿನ್ನಾ ವೋ

ಅದು ವೋಟು ನಾನೇನು ಮಾಡಾಲಿ ಬೋರಮ್ಮ
ಇನ್ನೇನು ಕೊಡಬೇಕೋ ಶಿನ್ನಯ್ಯ ಅಂದಾರೆ
ಗೊಲ್ಲುನ ತಲಿಯೆ ನೀನು ತಂದಿದ್ದು ನಿಜುವಾದರೆ
ಮನಿಯಾಗೆ ಇರುವಂತ ಬಕ್ಕುಸ ಬಂಢಾರ
ಸರಿಪಾಲು ಶಿನ್ನಾ ಅಂದಿದ್ದು ನಿಮ್ಮಕ್ಕ
ಸುಳ್ಳೋ ಬದ್ದಾವೋ ಶಿನ್ನಯ್ಯ ವೋ

ಅದು ವೋಟು ನಾನೇನು ಮಾಡಾಲಿ ಬೋರಮ್ಮ
ಇನ್ನೇನು ಕೊಡಬೇಕು ಶಿನ್ನಯ್ಯ ವೋ

ಗೊಲ್ಲುನ ತಲಿಯೆ ನೀನು ತಂದಿದ್ದು ನಿಜುವಾದಾರೆ
ರಾಮಸಾಲೆ ಹೊನ್ನುಗುಳು ಭೀಮಸಾಲೆ ಹೊನ್ನುಗುಳು
ಸರಿಪಾಲು ಕೊಡತೀನಂತ ಅಂದಿದ್ದು ನಿಮ್ಮಕ್ಕ
ಸುಳ್ಳೋ ಬದ್ದಾವೋ ಶಿನ್ನಯ್ಯ ವೋ

ಅದವೋಟು ನಾನೇನು ಮಾಡಾಲಿ ಬೋರಮ್ಮ
ಇನ್ನೇನು ಕೊಡುಬೇಕೊ ಶಿನ್ನಯ್ಯ ವೋ

ನೀನೇ ನನ ಮಂಚ್ದುಕ್ಕೆ ಒಪ್ಪತ್ತು ಶೈವಾದಾರೆ
ಈಗ ತರತೀನಿ ಗೊಲ್ಲನ ತಲಿಯ ಅಂದಿದ್ದು
ಸುಳ್ಳೊ ಬದ್ದಾವೊ ಶಿನ್ನಯ್ಯ ವೋ

ಬದ್ದ ಗೊಲ್ಲುನು ಗೌಡ ನಿನ ಮಾತು ಅಂದಾರೆ
ಏಳಿಕಟ್ಟು ಬಳ್ಳೀನೆ ಎಡಮುರಿಗೆ ಕಟ್ಟಿದುವು
ಏಳು ಬಂದಿರಿ ದೊಣ್ಣಿಗುಳು ಮತ್ತೇನೆ ಆವಾಗ
ತುಡಗ ದನವೇ ಸದಕಿದಂಗೆ ಸದುಕೋವಮ್ಮಾ ವೋ

ಅಲೆ ಕೋಲು ಇಲ್ಲುದ ಕೋಲಿಯೇನೆ ಕಟ್ಟವನೆ ಎತ್ತಯ್ಯ
ಹಗ್ಗಿಲ್ಲದ ಕಟ್ಟೇನೆ ಕಟ್ಟಿದನುಣ್ಣಾ ವೋ
ಹಿಂದಾಕೆ ನೀನೋಡು ತಿರುಗಿ ಹೋಗೂತಿದ್ದ
ನಿಮ್ಮಕ್ಕ ಬೋರಮ್ಮ ಮತ್ತೇನೆ ಶಿನ್ನಯ್ಯ
ಆ ಸತ್ತೇದಲಿ ಶರಣಾರು ಉತ್ತುಮುರ ಮಕ್ಕಾಳು
ಸತ್ತ್ಯದ ಮಾತನ್ನ ಹೇಳಲಿಲ್ಲ ಅಂಬುತುಲೆ
ಕೇಳುತಾಳೆ ನಿಮ್ಮಕ್ಕ ಮತ್ತೇನೆ ಬೋರಮ್ಮ
ಏನ ಮಾತೇಳಾತೀಯೋ ಶಿನ್ನಯ್ಯ ವೋ

ನಾನೇನಮುತ ಹೇಳಲಿ ಗೊಲ್ಲುನು ಗವುಡ
ಅಂದವನೆ ಶಿನ್ನಯ್ಯ ಮತ್ತೇಯೇನೆ ನೋಡು

ಅವರ ಅಸಿವೀಗ್ಹಾಲು ಕೊಡತಾರೆ ಬಸವೂಗೆ ಪತರಿ ಕೊಡುತಾರೆ
ಸಿಸುವಾಗೆ ಬೆಣ್ಣೇನೇ ಕೊಡುವಂತ ಶರಣಾರು
ಅವರ ಗೊಡುವೆ ಬ್ಯಾಡಂತ ಹೇಳಯ್ಯ ವೋ

ಸತ್ತ್ಯದು ಮಾತು ನೀನು ಹೇಳಿದುರೆ ಶಿನ್ನಯ್ಯ
ಕೋಲಿಲ್ಲದ ಕೊಲಿಯ ಬಿಡತಾವ ನೋಡು
ಅಗ್ಗಿಲ್ಲದ ಕಟ್ಟೆ ಬಿಡುವೋದಿಲ್ಲಂದ ವೋ

ಅಲೆ ಊರಾಗುಂಟಾ ಹೋಗುತಾನೆ
ಮತ್ತೇನೇ ಶಿನ್ನಯ್ಯ
ತುಡುಗು ದನುವೇ ಸದುಕಿದಂಗೆ
ಸದಕೋವಮ್ಮ ವೋ

ಅವರರಮನಿಗೆ ಹೋಗ್ಯಾನೆ ಮತ್ತೇನೆ ಶಿನ್ನಯ್ಯ
ಅವರು ಸತ್ತೇದಲಿ ಶರಣಾರು ಉತ್ತುಮುರ ಮಕ್ಕಾಳು

ಅಸಿವಿಗ್ಹಾಲು ಕೊಡುತಾರೆ ಬಸುವುಗೆ ಪತ್ತಿರಿ ಕೊಡುತಾರೆ
ಸಿಸುವಾಗೆ ಬೆಣ್ಣೇನೆ ಕೊಡುವಂತ ಶರಣಾರು
ಅವರ ಗೊಡವೆ ಬ್ಯಾಡಕ್ಕ ಅಂದವನೋ ವೋ

ಅವರ ಗೊಡವೆ ಬ್ಯಾಡಮ್ಮಂತ ಯಾವಾಗ ಹೇಳಿದುರಿ
ಕೋಲಿಲ್ಲದ ಕೊಲಿಯ ಬಿಡತಾವ ನೋಡು
ಅಗ್ಗಿಲ್ಲದ ಕಟ್ಟೆ ಬಿಡುವೋದಿಲ್ಲಂದ ವೋ

ಅಲೆ ಊರಾಗುಂಟಾ ಹೋಗುತಾನೆ
ಮತ್ತೇನೇ ಶಿನ್ನಯ್ಯಾ
ತುಡುಗು ದನುವೇ ಸದುಕಿದಂಗೆ
ಸದಕೋವಮ್ಮ ವೋ

ಅವರರಮನಿಗೆ ಹೋಗ್ಯಾನೆ ಮತ್ತೇನೆ ಶಿನ್ನಯ್ಯ
ಅವರು ಸತ್ತೇದಲಿ ಶರಣಾರು ಉತ್ತುಮುರ ಮಕ್ಕಾಳು
ಅಸಿವಿಗ್ಹಾಲು ಕೊಡುತಾರೆ ಬಸುವುಗೆ ಪತ್ತಿರಿ ಕೊಡುತಾರೆ
ಸಿಸುವಾಗೆ ಬೆಣ್ಣೇನೆ ಕೊಡುವಂತ ಶರಣಾರು
ಅವರ ಗೊಡವೆ ಬ್ಯಾಡಕ್ಕ ಅಂದವನೋ ವೋ

ಅವರ ಗೊಡವೆ ಬ್ಯಾಡಮ್ಮಂತ ಯಾವಾಗ ಹೇಳಿದುರಿ
ಕೋಲಿಲ್ಲುದ ಕೊಲಿಯೋನೆ ಅಗಿಲ್ಲುದ ಕಟ್ಟೇನೆ
ಕೆಳಾಕೆ ಉದುರಿ ಬೀಳುವಮ್ಮಾ ವೋ

ಹಿಂಗ್ಯಾದರೀಗೊಲ್ಲ ಬಗ್ಗೋದಿಲ್ಲಮ್ಮ
ದಂಡೇ ಕಟ್ಟಬೇಕಂದಾ ಶಿನ್ನಯ್ಯ ವೋ

ದಂಡೇ ಕಟ್ಟುಬೇಕಂದ
ದಳವೆ ಕಟ್ಟುಬೇಕಂದ
ಮಂದೀ ಕಟ್ಟಬೇಕಂದ
ಮರ್ಬಲ ಕಟ್ಟಬೇಕಂದ
ಆನೆ ಮಕುದರ ದಂಡಂತೆ
ಒಂಟೆ ಮಕುದರ ದಂಡಂತೆ
ನೆಮಿಕರುತರ ದಂಡಂತೆ
ಗುಡ್ಡುದು ಬೋರೀದಂಡು
ಹನ್ನೆರಡು ಕೂಮೆ ದಂಡು ಕುಸಿ ಮಾಡಿದುನೋ

ಹನ್ನೆರಡು ಕೂಮೆ ದಂಡು ಕುಸಿಮಾಡಿದ ಕಾಣೆ ಶಿನ್ನಯ್ಯ
ಆವಿನ ಗೂಡಿಗೆ ವದಗಿದುರಣ್ಣಾ ವೋ

ಮುಂಗೊಳಿ ಕೂಗ್ಹೊತ್ತೀಲಿ ಒಳ್ಳೆ ಮೂಡಲ ಕೆಂಪೇರ್ಹೊತ್ತೀಗೆ
ಆವಿನ ಗೂಡಿಗೇನೆ ವದಿಗವನೆ ಶಿನ್ನಯ್ಯ
ಒತ್ತುಂಟೆ ಎದ್ದವನೆ ವಲಿಗಾನೆ ಮಲ್ಲಯ್ಯ
ಮಕಮಾರಿ ತೊಳಕಂಡ ಕಾಲಕೈ ತೊಳಕಂಡು
ಮೊವುದಾರಿ ಕರುವೀನೆ ಬೆಟ್ಟವನೆ ಮಲ್ಲಯ್ಯ
ಎಣಿಕಲ್ಲ ಮಕ್ಕಾಯ ನೋಡಿದುನಣ್ಣಾ ವೋ

ಕಾಲಾಗುಳ ಸುರುವ್ಹಗ್ಗ ಕಾಲಾಗೆ ತುಣಕಂಡು
ತೊಡಿಯಾಗಳ ಬುಡ್ಡಿ ಒಳ್ಳೆ ತೊಡಿಯಾಗಿರಿಕಿಸಿಕಂಡ್ಹೆ
ಎಣಿಕಲ್ಲು ಮಕ್ಕಾಯ ನೋಡಿದುನಣ್ಣಾ ವೋ

ಭಾವ ಭಾವ ನೋಡೊ ಮತ್ತೇನೆ ಭಾವಯ್ಯ
ನಾವೇ ಉಳಿಯೋ ಹೊತ್ತೆ ಬರಲಿಲ್ಲ
ನಮ್ಮ ಎತ್ತೇ ಉಳಿಯಾ ಹೊತ್ತೇ ಬರಲಿಲ್ಲ ವೋ

ಗಂಡಾಗ್ಹುಟ್ಟೋ ಬದಲು ಹೆಣ್ಣಾಗ್ಹುಟ್ಟಿದ್ದಾರೆ
ಕರಿಯೆ ಸೀರೆ ಉಡುಸಿ ಕರಿಯ ಬಳಿಯನ್ನಾ ತೊಡಸಿ
ತವರು ತವರು ನಾನು ನೆಡೆಸುತ್ತಿದ್ದೆಂದ ವೋ

ಗಂಡಾಗ್ಹುಟ್ಟೋ ಬದಲು ಹೆಣ್ಣಾಗ್ಹುಟ್ಟಿದ್ದಾರೆ
ಹೆಣ್ಣಾಗ್ಹುಟ್ಟೊ ಬದಲು ಮಣ್ಣಾಗ್ಹುಟ್ಟಿದ್ದಾರೆ
ಮಣ್ಣೇನಲ್ಲೇ ನೋಡು ಮರ್ನನ್ನಾಗಿ ಹುಟ್ಟಿದುರೆ
ಮರದ ನೆಳ್ಳಾಗನ್ನಾನೇ ಪುಣ್ಯವುಳ್ಳ ಪುರುಸೂರು
ಕುಂತಗಂಡನ್ನಾ ನೋಡು ಬಾಳ್ವೇವು ಮಾಡತಿದ್ದರು
ಆನೆ ಹೊಟ್ಟ್ಯಾಗೇನೆ ಸೂಲಂಗಿ ಹುಟ್ಟೇದ್ಹಂಗೆ
ಯಾಕೆ ಹುಟ್ಟೇದ್ಯೋ ಮಲ್ಲಯ್ಯ ವೋ

ಗುಡ್ಡುದ ಬೋರೆ ತಮ್ಮ ಗಂಟಾವುಲು ಸಿನ್ನಯ್ಯ
ಹನ್ನೆರಡು ಕೂಮೆ ದಂಡೆ ತಂದವನಂದಾ ವೋ

ಬಂದರು ಬರಲ್ಹೊಗಾಲೊ ಕರಿಯಂದಾ
ಹಾಲು ಕರದು ಕಡಿಯಾಕೆ ಇಟ್ಟವನೆ ಮಲ್ಲಯ್ಯ

ಬಾರಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯ
ಒಂದಗಲ್ಲ ಬಡಿದಾರೆ ಹಾಲನ್ನ ವಲಿಯಾನೆ
ಒಂದಗಲ್ಲ ಬಡಿದಾರೆ ನೀರನ್ನ ವಲಿಯಾನೆ
ಹೆದರಿಯೋ ತಮ್ಮ ಬೆದರೀಯಂದಾ ವೋ

ಬಾರಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯ
ದುಡುದುಂಬಾಕೆ ಅವರು ಎತ್ತಿಗೆ ಬಂದವರಂಗೊ
ಕರದುಂಬಾಕೆ ನೋಡು ಆವಿಗೆ ಬಂದವನ್ಹೆಂಗೊ
ಯಾತಕೆ ಬಂದಿದ್ದ್ಯಾಲೆ ಶಿನ್ನಯ್ಯ ವೋ

ಅಸುಮಗ ವಲಿಗಾನಯ್ಯ ಹೆದರೀಯ ಬೆದರೀಯ
ಬಟ್ಟಣ್ಣು ವಡಕಂಡು ಹೋಗಪ್ಪ ವೋ

ಮುಂದಮುಂದೆ ಬಟ್ಟಣ್ಣ ಹಿಂದ್ಹಿಂದೆ ಮಲ್ಲಯ್ಯ
ಬಟ್ಟಣ್ಣನ ಬಾಲಾನೆ ಹಿಡಕಂಡು ಮಲ್ಲಯ್ಯ
ಗುಡ್ಡದ ಬೋರೀ ತಮ್ಮ ಗಂಟಾವುಲು ಶಿನ್ನಯ್ಯ
ಅವನು ತಾಕೆ ಬಟ್ಟಣ್ಣ ಬರತಾನಣ್ಣಾ ವೋ

ದುಡುದುಂಬಾಕೆ ನೀನು ಎತ್ತಿಗೆ ಬಂದಿಯೇನೋ
ಕರದುಂಬಾಕೆ ನೋಡು ಆವಿಗೆ ಬಂದಿಯೇನೋ
ಯಾತಕೆ ಬಂದಿದ್ದಯಾಲೆ ಶಿನ್ನಯ್ಯ ವೋ

ದುಡುದುಂಬಾಕೆ ನನಿಗೆ ಎತ್ತೇನು ಕಡಿಮ್ಯಾಗಿಲಲ
ಕರದುಂಬಾಕೆ ನನಿಗೆ ಆವೇನು ಕಡಿಮ್ಯಾಗಿಲ್ಲ
ಕಾರ್‍ಯಾವುಕೆ ಬಂದೀನೋ ಎಲೆ ಗೊಲ್ಲಾ ವೋ

ಆ ಮಾತು ಕೇಳವನೆ ವಲಿಗಾನೆ ಮಲ್ಲಯ್ಯ
ಹಿಂದಾಕೆ ತಿರಗಿ ಬರುತಾನಣ್ಣಾ ವೋ

ದುಡುದುಂಬಾಕೆ ಅವನು ಎತ್ತೂ ವಲ್ಲಾನಂತೆ
ಕರದುಂಬಾಕೆ ನೋಡು ಆವು ವಲ್ಲಾನಂತೆ
ಕಾರ್‍ಯಾವುಕೆ ಬಂದವನೆ ಭಾವಯ್ಯ ವೋ

ಬಾರಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯ
ಮೂರು ಕೂತೆ ಕೂಗಮ್ಮ ಮೂರು ಕ್ಯಾಕೆ ಹೊಡಿಯಮ್ಮ
ನಿಮ್ಮಕೈ ಮೇಲಾಗಾಲಿ ನಮ್ಮ ಕೈ ಅಡಿಯಾಗಾಲಿ

ಮೂರು ಕೂತೆ ಕೂಗಮ್ಮ ಮೂರು ಕ್ಯಾಕೆ ಹೊಡಿಯಯ್ಯ
ಬಾರಯ್ಯ ಮಲ್ಲಯ್ಯ ಮನಗಂದಾ ವೋ

ನಿಮ್ಮ ಕೈ ಮೇಲಾಗಾಲಿ ನಮ್ಮ ಕೈ ಅಡಿಯಾಗಾಲಿ
ಮೂರು ಕೂತೆ ಕೂಗ್ಯವನೆ ಮೂರು ಕ್ಯಾಕೆ ಹೊಡದವನೆ
ಬಂದವನೆ ಮಲ್ಲಯ್ಯ ಮನಿಗಿದುನಣ್ಣಾ ವೋ

ಗುಡ್ಡುದ ಭೋರಿ ತಮ್ಮ ಗಂಟಾವುಲು ಶಿನ್ನಯ್ಯ
ಆವು ಕತ್ತೀಲಿ ಕಡದಾರೆ ಕೊಂಬಡ್ಡ ಕೊಡುತಾವೆ
ಬಿಲ್ಲೀಲಿ ಹೊಡುದಾರೆ ಬಾಲಡ್ಡ ಕೇಡುತಾವೆ
ಬಂದುಕುದಲಿ ಹೊಡೆದಾರೆ ಹಣಿಯಡ್ಡ ಕೊಡುತಾವೆ
ಏಳೆಂಬೇಳ ದಿನಕೆ ಗುಡ್ಡದ ಬೋರೀ ತಮ್ಮಾ
ಮದ್ದೆಗುಂಡೆಲ್ಲ ಕಳಕಂಡ ವೋ

ಅವನ ಮದ್ದೆಗುಂಡೆಲ್ಲ ಕಳಕಂಡ ಶಿನ್ನಯ್ಯ
ಇಂಗ್ಯನ್ನ ಈ ಗೊಲ್ಲ ಬಯಿಲಿಗಿ ಬರಲಂದವನೆ
ನಮ್ಮ ಕೈ ಮೇಲಾಗಿತ್ತು ನಿಮ್ಮ ಕೈ ಅಡಿಯಾಗಿತ್ತು
ನಿಮ್ಮ ಕೈ ಮೇಲಾಗಾಲಿ ನಮ್ಮ ಕೈ ಅಡಿಯಾಗಲಿ
ಅಂದವನೆ ಶಿನ್ನಾ ಕೂಗಿದುನಣ್ಣಾ ವೋ

ನಿಮ್ಮ ಕೈ ಮೇಲಾಗಲಿ ನಮ್ಮ ಕೈ ಅಡಿಯಾಗಾಲಿ
ಮೂರು ಕೂತೆ ಯಾವಾಗ ಕೂಗ್ಯಾವನೆ ಶಿನ್ನಯ್ಯ
ಹೇಳಯ್ಯ ವಲಿಗಾನೆ ಮಲ್ಲಯ್ಯ ವೋ

ಆನಿಗೇಯೇ ನೋಡು ಆವು ವಾರಿಮಾಡಮ್ಮ
ಒಂಟೀಗೆಯೇ ನೋಡು ಎತ್ತು ವಾರಿಮಾಡಮ್ಮ
ಕಾಲೂರಿ ಮನಿಷರಿಗೆ ಮತ್ತೇನೆ ಮಲ್ಲಯ್ಯ
ಮೂಗಿಮಣಕ ವಾರಿ ಮಾಡಂದಾ ವೋ

ಕುದರೀಗೆಯೇ ನೋಡು ಮತ್ತೇನೆ ಮಲ್ಲಯ್ಯ
ಮುದಿಯಾವು ನೋಡು ವಾರೀನೆ ಮಾಡಂದ
ನಾಲಕ್ಕೆ ತೊಟ್ಟೇನೆ ಮಾಡವನೆ ಮಲ್ಲಯ್ಯ
ನಮ್ಮ ಕೈ ಅಡಿಯಾಗಿತ್ತು ನಿಮ್ಮ ಕೈ ಮೇಲಾಗಿತ್ತು
ನಮ್ಮ ಕೈ ಮೇಲಾಗಿತ್ತು ನಿಮ್ಮ ಕೈ ಅಡಿಯಾಗಿತ್ತು
ಮೂರು ಕೂತೆ ಕೂಗವನೆ ವಲಿಗಾನೆ ಮಲ್ಲಯ್ಯ
ಬಂದವನೆ ಮಲ್ಲಯ್ಯ ಮನಿಗ್ಯಾನಣ್ಣಾ ವೋ

ಕಾರಣಿಕದ ಪುರಸ ಕಾಲಿಲಿ ಗ್ಯಾನುದ್ದರಿಯೆ
ಬಾಲುದುಲೆ ಬಲವಂತ ಬೆನ್ನಿಲಿ ಬಲು ಬೇತಾಳ
ಮುನ್ನೂರು ತಡಿಸಿಗಿನ್ನ ಮುಂದುದಿಟ್ಟಿದನು ಬಟ್ಟಣ್ಣ
ಕಾಲುಕೆದರಿಯೇ ನೋಡು ರಂಕೇನೆ ಹೊಡದಾರೆ
ಗುಡ್ಡಾದ ಬೋರಮ್ಮನ ಅರಮನಿಯಾಗಿರುವಂತ
ಕಂಚನ ಕರಬಾನುಗಳೆ ಗದಗದನೆ ನಡಿಗಿ
ನೆಲಕೆ ಬೀಳೂವಮ್ಮಾ ವೋ

ಕಾಲಿಲಿ ತುಣಿಯೋವಣ್ಣ ಕೊಂಬಿಲಿ ಸಿಮ್ಮೋವಣ್ಣೊ
ಅವುರಿಗೆ ಹನ್ನೆರಡು ಕೋಮೇದಂಡೆ ಮತ್ತೇನೆ ಆವಾಗ
ಅವುರು ಕರುಳು ತಗದೆ ಬೆನ್ನಿಗೆ ಜನ್ನಿವಾರ ಹಾಕಿಕಂಬೋವಣ್ಣಾ ವೋ

ಗುಡ್ಡಾದ ಬೋರಮ್ಮ ಒಳ್ಳೆ ಮತ್ತೇನೆ ಆವಾಗ
ನಮ್ಮೊರೆ ಉಳಿಯೋ ಹೊತ್ತೆ ಬರಲಿಲ್ಲ ವೋ

ತಣ್ಣೀರು ಮುಣಿಗಿದುಳಣ್ಣ ತಡಿಮುಡಿ ಉಟ್ಟೈದಾಳೆ
ನಿಂತು ತಡಿಮುಡಿ ಮ್ಯಾಲೆ ಮತ್ತೇನೆ ಬೋರಮ್ಮ
ಮಳಿ ಬಂದಾರ್ಹುಟ್ಟುಕೆ ಹುಲ್ಲು ಬೀಜ ಅಲ್ಲಮ್ಮ
ಗುಡ್ಡಾದ ಬೋರಮ್ಮನ ಹೆಸರನ್ನ ಹೇಳಾಕೆ
ಒಬ್ಬರಿಬ್ಬುರನ್ನಾನೆ ಉಳಕಂಬಲಿ ಮಲ್ಲಯ್ಯ
ನಮ್ಮೆತ್ತಾವೆ ಹಿಂದಾಕೆ ಕೂಗಂದ–ವೋ

ಹನ್ನೆರಡೆ ಲಕ್ಕೂಸದ ದಂಡೀನ ಪೈಕಾಗಿ
ಗುಡ್ಡುದ ಬೋರಿ ತಮ್ಮ ಗಂಟಾವುಲು ಶಿನ್ನಯ್ಯ
ಒಬ್ಬಾನೆ ಶಿನ್ನ ಉಳಕಂಡ ವೋ

ಎತ್ತಾವೆ ಯಾವಾಗ ಕೂಗ್ಯಾವೇನೆಯೇ ನೋಡು
ಒಬ್ಬಾನೆ ಶಿನ್ನ ಉಳಕಂಡಾ ವೋ

ಇಂಗ್ಯಾದಾರೀ ಗೊಲ್ಲ ಬಗ್ಗೋದಿಲ್ಲಂದವನೆ
ಒಂದಕಿವಿ ಆಸೊರದು ಒಂದು ಕಿವಿ ವದಿಯರದು
ಆವರಿಬ್ಬರ ದಂಡೆ ತರಬೇಕಂದ ವೋ

ಆವರಿಬ್ಬರ ದಂಡೆ ಒಳ್ಳೆ ತಂದವನೆ ಶಿನ್ನಯ್ಯ
ಒಂದುರು ಮ್ಯಾಲೆ ಒಂದು ಹೆಣಗುಳು ಬಿದ್ದೈದಾವೆ

ಒಂದುರು ಮ್ಯಾಲೆ ಒಂದು ದಟ್ಟುಗುಳು ನೋಡಿದರು
ಅವರಿಗಾದ ಪೂಜೇನೆ ನಮಿಗಾಗುತ್ತೈತಂದ್ರು
ಹೇಳುದುಲೆ ದಂಡೆ ಹೋಗುವುದಮ್ಮ ವೋ

ಆವಾಗ ಶಿನ್ನಯ್ಯ
ಬಾರೆಬಾರೇ ಬೋರಮ್ಮ
ನಾನು ಬೀಳೊ ಪಾಟೆಲ್ಲ
ಬಿದ್ದ ಕಾಣೆ ಬೋರಮ್ಮ
ನಮ್ಮಿಗೆ ಸಿಕ್ಕೋರಲ್ಲ
ನಮ್ಮಿಗೆ ದಕ್ಕೋರಲ್ಲ
ನಿನಗೆ ಬೇಕಾದರೆ ನೀನು ಹೋಗಮ್ಮ ವೋ

ಬಾರೆಬಾರೇ ಬೋರಮ್ಮ
ನಾನು ಬೀಳೋ ಪಾಟೆಲ್ಲ
ಬಿದ್ದೆ ಕಾಣೇ ಬೋರಮ್ಮ
ನಿನಗೆ ಬೇಕಾದರೆ ನೀನು ಹೋಗಮ್ಮ ವೋ

ಅಂಗ್ಯಂಬ ಸಬುದ ಒಳ್ಳೆ ಕೇಳಿದುಳೊ ಬೋರಮ್ಮ
ತಣ್ಣೀರು ಮುಣಿಗಿದುಳಣ್ಣ ತಡಿಮುಡಿ ಉಟ್ಟೈದಾಳೆ
ನಿಂತೆ ತಡಿಮುಡಿ ಮ್ಯಾಲೆ ನಿಂತಕಂಡೆ ಬೋರಮ್ಮ
ವಡಿಯದು ನಾಗೂರಂತೆ ಹಿಡಿಯದು ಬಿರ್‍ಯಾದಿನಿಕಾಳಿ
ನಾಗುರು ನವಬೂತುಗಳು ತಾಳುಗುಳು ಮಾಳುಗುಳು
ಶಾನ್ಯೆ ಬಜಂತುರುಲೆ ಗಡಿಬಿಡಿ ಮಾಡಿಸಿಕಂಡು
ಪಟ್ಟದ ಬಿಳಿಯಾನೇನ ಹತ್ತಿಕಂಡು ಬೋರಮ್ಮ
ಆವಿನ ಗೂಡೀಗೆ ತಿರುಗಿದುಳಣ್ಣಾ ವೋ

ಎತ್ತಯ್ಯನ ಎತ್ತಾವು
ಏಳೆಂಬೇಳು ದಿನ
ಮೇವು ಮೇದಿರುಲಿಲ್ಲ
ನೀರು ಕುಡುದಿರುಲಿಲ್ಲ
ತೆಪ್ಪೆಯಾಕಿರುಲಿಲ್ಲ
ಗ್ವಾತ ವಯ್ದಿರುಲಿಲ್ಲ
ಅವ್ರು ಮಕ್ಕಳಿಗೇ ನೋಡು
ಆಲೇ ಕುಡಿಸಿರಲಿಲ್ಲ

ಗುಡ್ಡುದು ಬೋರೀ ತಮ್ಮ
ಗಂಟಾವುಲು ಶಿನ್ನಾಯ್ಯಗೆ
ವಾದೇ ಪಂತಕ್ಕೆ ಬಂದು ನಿಂತೈದಾವಣ್ಣ ವೋ

ಎತ್ತಿನ ಗೂಡೀನಾಗೊಳ್ಳೆ ಸೊಪ್ಪಿನ ಬೆರಿಗೀನಾಗೆ
ಅಪ್ಪಾ ಎತ್ತಯ್ಯ ಮನಿಗವುನೋ

ಆವಿನ ಗೂಡೀನಾಗೊಳ್ಳೆ ಬೇವಿನ ಬೆರಿಗೀನಾಗೆ
ಸ್ವಾಮಿ ಎತ್ತಯ್ಯ ಮನಿಗವುನೋ

ಆವಿನ್ಹಿಂದೆ ವಲಿಗಾನೆ ಮಲ್ಲಯ್ಯ ಹೋಗ್ಯಾನೆ
ಗೂಡಿನಾಗೆ ಎತ್ತಯ್ಯ ಮನಿಗವುನಣ್ಣಾ ವೋ

ಪಟ್ಟದ ಬಿಳಿಯಾನೆ ಒಳ್ಳೆ ಬಾಗುಲಿಗೆ ಕಟ್ಟಿದಳು
ಒಕ್ಕವಳೆ ಬೋರಮ್ಮ ವಳಿಯಾಕೋ

ಆವಿನ ಗೂಡೀನಾಕೆ ಹೋದಾಳೆ ಬ್ಯಾಡೂತಿ
ಸಾದಾ ಕಿನ್ನೂರಿ ನುಡುಸೂತಾ । ಬೋರಮ್ಮಾ
ಆವೀಗೆ ನಮಿಗೆ ಇನುವಂದ್ಲು

ಎತ್ತೀನ ಗೂಡೀನಾಕೆ ಒಕ್ಕವಳೆ ಬ್ಯಾಡೂತಿ
ಜೊತ್ತೆ ಕಿನ್ನೂರಿ ನುಡಿಸೂತ । ಬೋರಮ್ಮ
ಎತ್ತೀಗೆ ನನಿಗೆ ಇನುವಂದ್ರಲು

ಸಿಕ್ಕಾ ವೋಡಿಕಲ್ಲು ಸಿತ್ತಾರದರು ಮನಿಯಾಗೆ
ಕೆತ್ತೀ ಮಂಚ ವರುಮೂಡಿ । ಊರಿನ ಗವುಡ
ಒಪ್ಪುತ್ತಾಡನು ಬಾರೊ ಪಗಡೀಯ ಗೌಡ ಪಗಡೀಯೇ

ರಾಯ ಎಣಿಕಲ್ಲು ರುವ್ವಾರದ ಅರಮನಿಯಾಗೆ
ಮಾಡಿಸಿದನೇ ಮಂಚ ವರಮೂಡಿ । ಊರಿನ ಗವುಡ
ಜಾವೊತ್ತಾಡನು ಬಾರೋ ಪಗಡೀಯ ಗವುಡ ಪಗಡೀಯೋ

ಬ್ಯಾಡ ಕಾಣೆ ಬೋರಮ್ಮ
ಕಂಕನಲಿ ಬ್ಯಾಡಾರು
ನಮ್ಮಿಗಳಿ ಮಕ್ಕಾಳು
ನಂಬಿಸಿ ಕಲಿ ಬ್ಯಾಡಾರು

ನಿಮ್ಮಿಗೆ ಅಳಿಮಕ್ಕಾಳು
ನೀನೆ ಕಾಣೆ ಬೋರಮ್ಮ
ನಮಿಗೆ ಕಿರುತಂಗಿ ಬೋರಮ್ಮಾ
ಹೋಗಮ್ಮ ತಾಯಿ ನಿಮ್ಮ ಅರಮನಿಗೋ

ಕಾಡು ನೆಲ್ಲಿ ಸೊಪ್ಪು ಓಡಲಿ ಉರುಕಂಡು ತಿಂಬೋ
ಕಾಡುಬ್ಯಾಡುರಿಗೆ ಎಲ್ಲಿ ಕುಲವಯ್ಯ । ಗೊಲ್ಲನ ಗೌಡ
ಜಾವತ್ತಾಡನು ಬಾರೊ ಪಗಡೀಯ ಗವುಡ ಪಗಡೀಯಾ

ಬೆಟ್ಟದ ನೆಲ್ಲಿ ಸೊಪ್ಪು ಬೆಟ್ಟಿಲಿ ಮುರಕಂಡು ತಿಂಬೊ
ಹಟ್ಟೀ ಬ್ಯಾಡುರುಗೆಲ್ಲಿ ಕುಲವಯ್ಯ । ಗೊಲ್ಲನ ಗೌಡ
ಒಪ್ಪತ್ತಾಡನು ಬಾರೋ ಪಗಡೀಯ ಗವುಡ ಪಗಡೀಯೋ

ಬ್ಯಾಡ ಕಣೇ ಬೋರಮ್ಮ
ನಮ್ಮ ಮಂಡಿಗುಳು ಮುಟ್ಟಿದುರೆ
ದಂಡಿಗುಳು ಎದ್ದಾವು
ಜಡಿಗಾಳು ಮುಟ್ಟಿದುರೆ
ದಾಳುಗಳು ಎದ್ದಾವು
ಉರಿಗಣ್ಣು ಬಿಟ್ಟಾರೆ
ಉರುದು ಹೋಗೂತೀ ನೀನು
ಸಿಡಿಗಣ್ಣು ಬಿಟ್ಟಾರೆ
ಸಿಡದು ಬೀಳುತಿ ನೀನು
ನನ್ನಗೊಡವೆ ಬ್ಯಾಡಕಾಣೆ ಬೋರಮ್ಮ ವೋ

ಅಂಚಿನ ಸೀರೆ ಉಡುತಿನಿ ಕಂಚಿನ ಕಡಗಿಡುತೀನಿ
ನಿಮ್ಮಾನೆಡತೆ ನಾವು ನೆಡತೀನಿ । ಊರಿನ ಗೌಡ
ಒಪ್ಪುತ್ತಾಡನು ಬಾರೊ ಪಗಡೀಯ ಗೌಡ ಪಗಡೀಯೋ

ಕಟ್ಟೆ ತಪ್ಪುಕೊಡತೀನಿ ಹಟ್ಟಿ ತಪ್ಪು ಕೊಡತೀನಿ
ನಿಮ್ಮ ಬಟ್ಟಣ್ಣಾಗೆ ತಪ್ಪೇ ಕೊಡತೀನಿ । ಊರಿನ ಗೌಡ
ಜಾವೊತ್ತಾಡನು ಬಾರೊ ಪಗಡಿಯೇ ಗೌಡ ಪಗಡೀಯೇ

ಬ್ಯಾಡ ಕಣೇ ಬೋರಮ್ಮ
ನಮ್ಮ ಸತ್ತೇವು ಕೆಡುತಾವು
ಹೋಗಮ್ಮ ತಾಯಿ ನಿಮ್ಮ ಅರಮನಿಗೇ ವೋ

ನಾನು ಉರಿಗಣ್ಣು ಬಿಟ್ಟಾರೆ
ಉರುದು ಹೋಗೂತೀ ನೀನು
ಕಿಡಿಗಣ್ಣು ಬಿಟ್ಟಾರೆ
ಸಿಡದು ಬೀಳೂತೀ ನೀನು
ನನ್ನ ಗೊಡವೆ ಬ್ಯಾಡಕಾಣೆ ಬೋರಮ್ಮ ವೋ

ಪಾರ್ವತಿಯೇ ದೇವಿಯಂತೆ
ಪರಮೀಸುರಾಯಂತೆ
ನಾರಾಯಣ ಮೂರೂತಿ
ಇಂತೆಂಬೊ ಶೆರಣಾರು
ಆಕಸಕ ಹಂದುರುನ್ಹಾಕಿ
ಭೂಮಿಗರಿಣೇ ಇಟ್ಟವರೆ
ಎತ್ತೀಗೆ ಎತ್ತಯ್ಯಾಗೆ
ಎತ್ತಿಗಾರೆ ವಯ್ದವರೆ
ನಮ್ಮ ಸತ್ತ್ಯೆವು ಕೆಡತವು ಕಾಣೆ ಬೋರಮ್ಮ ವೋ

ಆಗಾಲೇಯೇ ನೋಡು ಮತ್ತೇನೆ ಬೋರಮ್ಮ
ಕೈ ಮೈಯಿ ಮುಟ್ಟಾಕೆ ಒದಗಿದುಳಣ್ಣ ವೋ

ನಮ್ಮ ಸತ್ತೇವು ಕೆಡುತಾವೆ ಮತ್ತೇನೆ ಬೋರಮ್ಮ
ಮುಟ್ಟಬ್ಯಾಡೆ ತಾಯಿ ನನ್ನ ಮುಟ್ಟುಬ್ಯಾಡಂದ ವೋ

ಅತ್ತಿತ್ತ ಜರಗನಂತೆ ಮತ್ತೇನೆ ಎತ್ತಯ್ಯ
ನನ್ಹತ್ತುರಿಕೆ ಬೋರಮ್ಮ ಒದುಗವುಳು
ನಮ್ಮ ಸತ್ತೇವೆ ಕೆಡುತಾವೆ ಮತ್ತೇನೆ ಬೋರಮ್ಮ
ಮುಟ್ಟು ಬ್ಯಾಡೆ ತಾಯಿ ನನ್ನ ಮುಟ್ಟುಬ್ಯಾಡಂದಾ ವೋ

ಎದ್ದೇನೆ ನೋಡತಾನೆ ಮತ್ತೇನೆ ಎತ್ತಯ್ಯ
ಎತ್ತಾವೀನ ಸಬುದು ಮೊದಲಿಲ್ಲ ವೋ

ಪಟ್ಟದ ಬಿಳಿಯಾನೇನ ಬಾಗಿಲುಗೆ ಕಟ್ಟವಳೇ
ನೋಡವನೆ ಎತ್ತಯ್ಯ ನೋಡಿದುನಣ್ಣಾ ವೋ

ಕರಿಯಾ ಓಬೇನ್ಹಳ್ಳಿ ಕರದರೆ ಓ ಅಂಬೋಳೆ
ಕಳ್ಳಾನೇ ಬ್ಯಾಡುರಿಗೆ ಕೈಸೆರಿಯೋ ಕೊಟ್ಟ್ಯಮ್ಮ
ಎಲ್ಹೋದೆ ತಾಯಿ ನೀನು ಎಲ್ಹೋದೆಂದ ವೋ

ಸುತ್ತೇಳು ರಾಜ್ಯಾವು ವತ್ತಗಟ್ಟಿ ಮೇದಮ್ಮ
ಕಳ್ಳಾನೆ ಬ್ಯಾಡುರುಗಿ ಕೈಸೆರಿಯೆ ಕೊಟ್ಯಮ್ಮ
ಎಲ್ಲೋದೆ ತಾಯಿ ನೀನು ಎಲ್ಲೊಂದೆಂದ ವೋ

ಆದೂವಾನಿ ಸೀಮೆ ಹೋಗಿ ಬಂದಕ್ಕಯ್ಯ
ಕಳ್ಳಾನೆ ಬ್ಯಾಡುರಿಗೆ ಕೈಸೆರಿಯೇ ಕೊಟ್ಯಮ್ಮ
ಸೊಂಡಾಲೂರು ಕೆರಿಯಾಗೆ ದುಂಡಾಪು ಮೇದೋಳೆ
ಗಂಡುರು ಗೂಳಿ ಗರತಿ ಎಲ್ಲೋದೆ ತಾಯಿ ನೀನು ಎಲ್ಲೋದೆಂದೆ ವೋ

ಅಲೆ ಗೊಡ್ಡುಗಾಳಿ ಕಿವು ಕರುಣುಕೆ
ಆಮಾತು ಕೇಳಿದಣ್ಣ
ನಮ್ಮನಾಳಿದಂತ ವಡಿಯಾನ
ಕೈ ಸೆರಿಯೇ ಕೊಟ್ಟ ಮ್ಯಾಲೆ
ನಾವು ಬದುಕಿದ್ದಿರಾಗೆ ಫಲವಿಲ್ಲಾ ವೋ

ಆಕಸ ಗಡ ಗುಟ್ಟಾದಣ್ಣ
ಭೂಮಿ ತಳ್ಳಣಿಸೋದು
ಆವೀನ ಗೂಡಿಗೆ ಬಂದೈತೆ ಗೊಡ್ಡಗಾಳಿ
ಪಟ್ಟದ ಬಿಳಿಯಾನೇನ ಕಾಲು ತಳುದೇನಾ ನೋಡು
ಕಳ್ಳು ತಗದು ಆವಾಗ ಎಣಿಕಲ್ಲು ಪಟ್ಟಣುಕೆ
ಎಣಿಕಲ್ಲು ಪಟ್ಟಣುಕೆ ಸೂರಿ ಮಾಡೈತೇ
ನೋಡಿದುಳೇ ಬೋರಮ್ಮ ನೋಡಿದುಳೋ

ನೀನು ಬರುದಿದ್ರೆ ಅಸ್ಟೆವೋತು ಮತ್ತೇಯೇ ಏ ಗೌಡ
ನಿನ್ನಾವಿನಾಗೆ ಇರುವಂತ ಗೊಡ್ಡಗಾಳೀನ ಮಾತ್ರ
ನಮ್ಮ ಏಳಜಿಟ್ಟಿ ಪಾಲೀಗೆ ಮುಚ್ಚುಲುದನ್ನ ಉಳಿಗೆ
ಕಡಿಯೇನೇ ಕೊಟ್ಟಾರೆ ಮತ್ತೇನೆ ಎತ್ತಯ್ಯ
ನೀನೇ ಅಣ್ಣಾ ನಾನೇ ತಂಗ್ಯಂದುಳು ವೋ

ಕೊಟ್ಟೊಂದೇ ಮಾತೀಗೆ ಕೊಟ್ಟರ‍್ಯಾರೆ ಬೋರಮ್ಮ
ಬಿಟ್ಟೊಂದೇ ಮಾತೀಗೆ ಬಿಟ್ಟರ‍್ಯಾರೆ ಬೋರಮ್ಮ
ಮೊದಲಾಡಿದ ಮಾತು ನಾನು ತೊದುಲಾಡೋದಿಲ್ಲ ಕಾಣೆ
ಕೊಟ್ಟು ಹೋಗೋ ತಾಯಿ ನಿಮ್ಮ ಅರಮನಿಗೆ ವೋ

ಮಾತುಕೊಟ್ಟ ಎತ್ತಯ್ಯ ಮುತ್ತೂನೇ ವಡುದಂಗೆ
ಗೊಡ್ಡು ಗಾಳಿ ಮಾತು ಕೊಟ್ಟು ಮೈಗುದುಗೌಡಾ ವೋ

ತುರುಕುರು ಸೀಮ್ಹಿಗೋಗಿ ನಿನ್ನ ಕಡಿಯೆ ಕೊಡುತಾನೆ
ಬ್ಯಾಡುರ ಸೀಮಿಗೆ ಬಂದು ನನ್ನ ಕಡಿಯೆ ಕೊಟ್ಟವನೆ
ಮಲ್ಲಮ್ಮೇಳಿದ ಮಾತು ತಪ್ಪುಲಿಲ್ಲ ಹಿರಿಯಣ್ಣ
ನೆಲವ್ಯೆದೆ ನೆತ್ತುರುವೆ ಕಕ್ಕುತಾವೆ ನೋಡು ವೋ

ಗೊಡ್ಡ ಗಾಳಿ ಮಾತೂನೇ ಮಾಡಿಕಂಡು ಬೋರಮ್ಮ
ಅವರರಮನಿಗೆ ಬೋರಮ್ಮ ತಿರಗಿದುಳೇ ವೋ

ಬಾರಯ್ಯ ವಲಿಗಾನೇ ಮತ್ತೇನೆ ಮಲ್ಲಯ್ಯ
ನಮ್ಮ ಸತ್ತೇವು ಕೆಟ್ಟಾವು ನಿತ್ತೇವು ಕೆಟ್ಟಾವು
ನಿರ್ದುಣ ದುರ್ಬದುಕು ಕೆಡತಾವೆ ಮಲ್ಲಯ್ಯ
ಗೊಡೇ ಕಟ್ಟ ಬೇಕಂದ ಮ್ಯೆಗುದು ಗೌಡವೋ

ಕಾರೆಕಳ್ಳೆ ಕಡುದವರೆ ಕರಿವಿನ ಗೂಡೊತ್ತಿದುರು
ಊಲಿ ಕಳ್ಳೇ ಕಡದು ಉದಿಮೋರೊತ್ತಿದುರಣ್ಣ
ಅಂದಾ ಶೆಂದುದ ಕಳ್ಳೆ ಗಂಧ ಮಾವುದ ಬೆರಗಣ್ಣ
ಅಚ್ಚನು ಕಳ್ಳ್ಯೆಂತೆ ಪಚ್ಯೇದು ಬೆರುಗುಣ್ಣ
ಹೂವ್ವಿನುಕ್ಕುಡು ದ್ಯಾವುರು ಬೆರಗಣ್ಣಾ ವೋ

ಉಳುವೇನೇ ಕೋಲಣ್ಣ ಉಗ್ಗುದಾನೇ ಗಡಿಗಣ್ಣ
ಉಕ್ಕುಡುದ ಕೋಪೀಗೆ ಇಟ್ಟವನೆ ಎತ್ತಯ್ಯ
ಅಡಿಯಾ ಸೀಗೆ ಸರುದವನೆ ಬೆಂಕಿ ಮಾಡಿದುನಣ್ಣ
ಮೂರೇನೆ ಕಣ್ಣಿನುದು ಕರಿಯಾನೆ ಸಿಪ್ಪಿನುದು
ದೃಷ್ಟಿಯನ್ನ ಕಾಯಿ ವಡುದವನೆ ಎತ್ತಯ್ಯ
ಎತ್ತಯ್ಯ ಗೂಡೆ ತಿರಗಿ ಗರುದವನಣ್ಣಾ ವೋ

ನೆಲವ್ಯೆದೆ ನೆತ್ತೂರುನೆ ಕಕ್ಕೂವಮ್ಮಾ
ಬೆಳ್ಳಿಗಾವಿನ ಸೋಕ ಬಲುಸೋಕಾ ವೋ

ಬಂಡಾಟಕೇ ನೋಡು ಬದಲಾಟಾಕೇ ನೋಡು
ಕುತ್ತುವಾಸುಕೆ ಗೂಡು ಸೇರಿದುವಮ್ಮಾ ವೋ

ಗೂಡೇನೆ ಸೇರೊಂದೆ ಯಾವಾಗ ಏ ನೋಡು
ಮೋವುದಾರಿನ ಕರುವೇನೆ ಬಿಟ್ಟವನೆ ಮಲ್ಲಯ್ಯ
ಒಳುಸಾರೆ ವರುಸಾರೆ ಹಾಲೇನೆ ಕರಕಂಡು
ಉಕ್ಕುರಿ ಸುಗ್ಗಿ ಮಾಡಿ ಕಡಿಗಿಟ್ಟ ಮಲ್ಲಯ್ಯ
ಜಾಲೀ ಜಂಬೀ ಎಲೆಯೇ ಪತ್ತುರುವಿಳ್ಳೇವು ಕಟ್ಟಿ

ಅಗ್ಗಿಣಿಯೆ ತಕ್ಕಂಡು ಮಜ್ಜುಣ ನೀಡಿಕೊಂಡು
ಸಣ್ಣಾದೊಂದೂಟ ಮಾಡಿದುನಣ್ಣಾ ವೋ

ಸಣ್ಣಾದೊಂದೂಟ ಒಳ್ಳೆ ಮಾಡವನೆ ಎತ್ತಯ್ಯ
ಸಣ್ಣಾದೊಂದಿಳ್ಳೇವು ಧರಿಸಿದುನಣ್ಣಾ ವೋ

ಹಾವೀನ ಸೀಗಣ್ಣ ಸೇಳಿನ ಸೆಳಿ ಮಂಚ
ನಾಗಬೂಸುಣ್ಣುವೋ ತಲಿಗಿಂಬು ವೋ

ಕಲ್ಲೀನ ಸೀಗಂತೆ ಮುಳ್ಳೆ ಮುಳ್ಳೀನ ಮಂಚ
ಶೆಲ್ಲ್ಯಾರೆ ದಟ್ಟಿ ತೆಲಿಗಿಂಬು ವೋ

ಹತ್ತು ಸಾವಿರುದಂಬು ತೆಕ್ಕೀಗೆ ಸಾಸೀಕಂಡು
ಆರು ಸಾವಿರದಂಬು ತೋಳಿಗಿ ಸಾಸಿಕಂಡು
ಬೇವಿನ ಸುರನಾಗಿ ಬಿಲ್ಲು ಬೆನ್ನಿಗೆ ಕಟ್ಟೀಕೊಂಡು
ಕೈಯಿಲಿ ಕತ್ತಿರಿ ಬಾಣ ನೆತ್ತಿಲಿ ನೆತ್ತುರು ಬಾಣ
ಸುರುನಾರಿ ಮರ್ಬಿಲ್ಲು ಸೂರಿದುನ ವದಿಯಂಬು
ಸೂಡಿಕಂಡ ಗನಗುರುವೆ ಮತ್ತೆ ನಿನ್ನೆತ್ತಯ್ಯ
ಒಕ್ಕುಳುವ್ವ ಹಾಸಿಕಂಡ ಒಕ್ಕುಳುವ್ವ ವದ್ದುಕಂಡ
ಮನಿಗಿದುನೋ ಗೌಡ ಮನಿಗಿದುನಣ್ಣಾ ವೋ

ಕಲ್ಲು ಕರುಗೋ ಹೊತ್ತಣ್ಣ
ಬೆಲ್ಲ ಬೇಯೋ ಹೊತ್ತಣ್ಣ
ಹರಿದ್ಹೋಗೊ ಗಂಗಿ ಗೌರಿ
ನಿಂತು ನಿದ್ರೆ ಮಾಡವೊತ್ತು
ಕಲ್ಲು ಕರಗೋ ಹೊತ್ತಣ್ಣ
ಗೊಡ್ಡಗಾಳಿ ಬಟ್ಟಣ್ಣ ಮಾತು ನೋಡೋ
ಅಂಬೆರಾಯಿರಾಣೆ
ತುಂಬೆರಾಯಿರಾಣೆ
ಅಕ್ಕಮಾರಿ ನಿನ್ನಾಣೆ
ಶಿಕ್ಕಮಾರಿ ನಿನ್ನಾಣೆ
ದ್ಯಾವುರು ದೈಮಾರವ್ವನಾಣೆಂದಾ ಅವುನ ವೋ ಆಣೆಂದಾ ವೋ

ಅಂಬಂತ ಅರಿಸೀರಿ ಕೊಂಬೆತ್ತಿ ಕೂಗೀರಿ
ನಿಮ್ಮ ಮಕ್ಕಳಿಗೆ ನೀವೇ ಹಾಲೇ ಕುಡಿಸೀರೆಂದ

ತೆಪ್ಪೆ ನೀವ್ಹಾಕಿರಿ ಗ್ವಾತ ನೀವ್ಹೊಯ್ಯೀರಿ
ಆಣೆ ಕಟ್ಟಿದ ಕಾಣೊ ಬಟ್ಟಣ್ಣಾ ವೋ

ತೆಕ್ಕಗಡಿಗೇ ನೋಡು ಕೊಂಬಿಗೆ ತಗಲ್ಹಾಕಿಕಂಡು
ಮುಂದಮುಂದೆ ಗೊಡ್ಡುಗಾಳಿ ಮತ್ತೇನೆ ಆವಾಗ
ಸಿಳ್ಳೆ ವೈದೇತಣ್ಣ ಸಿಟಿಗೆ ಆಕೇತಣ್ಣಾ
ಪಿಲಿಪಿರಿ ಸತ್ತೇ ವ್ಯಾಳಗರದೇತಣ್ಣಾ ವೋ

ಮುಂದ ಮುಂದೆ ಗೊಡ್ಡುಗಾಳಿ ಮತ್ತೇನೆ ಆವಾಗ
ಬಾಗಲ ಕಳ್ಳೇನೋಡು ಬಾಲಕ ತಗಲಿಸಿಕಂಡು
ಎಜ್ಜೆನ ಸವನ ಮಾಡಿಕಂಡ ಮತ್ತೇನೆ ಬಟ್ಟಣ್ಣ
ಹಿಂದ್ಹಿಂದೆ ಬಟ್ಟಣ್ಣ ಬರ್ತಾನಣ್ಣಾ ವೋ

ಅರೆ ಬೋರುನ ತಿಪ್ಪೇರ ತರಿಯೇ
ಆಸೆ ಗಡ್ಡೆ ಈಸೆ ಗಡ್ಡೆ
ಸೋಸಿ ಅರಿಯಳ ಕಾಣೆ ಗಂಗಮ್ಮ ವೋ

ಆಸೆ ಗಡ್ಡೇ ನೋಡು ಈಸೆ ಗಡ್ಡೆ ನೋಡು
ಸೋಸಿ ಅರಿಯಾಳು ಕಾಣೋ ಗಂಗಮ್ಮ ವೋ

ಬಾರೆಬಾರೆ ಗಂಗಮ್ಮ
ಎತ್ತಯ್ಯನ ಎತ್ತಾವು
ಮೂಡಲ ಸೀಮೇಲಿಂದ
ಪಡವುಲು ಸೀಮೇಗೇನು
ಹೋಗುತಾವೋ ಗಂಗಮ್ಮ
ವಣಿಕೆ ಬಂಡೋಟ್ಹೊಳಿಯೆ ಬಿಡಬೇಕಂದ ವೋ

ಅತ್ತಲ್ಲ ನೀರು ನೋಡು ಅತ್ತಲಾಗೆ ನಿಲ್ಲಾವು
ಇತ್ತಲ ನೀರು ನೋಡು ಇತ್ತಲಾಗೆ ನಿಲ್ಲಾವು
ನಡಿವೇನೆ ಗಂಗಮ್ಮ ಬಾಜೇನೆ ಬಿಡುತಾಳೆ
ಎತ್ತಯ್ಯನ ಎತ್ತಾವು ಆಸೆ ಗಡ್ಡಿಗ್ಹೋಗೋದು
ಬಾಗಲ ಕಳ್ಳೇ ನೋಡು ಬಟ್ಟಣ್ಣನ ಹೆಜ್ಜೇ ನೋಡು
ಎತ್ತಯ್ಯನ ಮಜ್ಜುಣುವೆ ಕರುವೇನೆ ಆದಾವು
ಗಂಗಮ್ಮಳಿಗೆ ಶಾಜ ಕೊಡುತರಣ್ಣಾ ವೋ

ತಪಗಾನ್ವಳ್ಳಿತಾಗ ತಪ್ಪೆ ಆಕಿದುವಣ್ಣ
ಗಂಜಿಗುಂಟೇತಾಗೇನೆ ಗಂಜೇ ವಯ್ಯಿತಾವಂತೆ
ಬೋರುನತಿಪ್ಪೇತಾಗ ಬೋರೂನೆ ಸರಕಂಡು
ಅವರು ಮಕ್ಕಳಿಗೆ ಅವರೆ ಹಾಲೇ ಕುಡಿಸಿದುರಣ್ಣಾ ವೋ

ಅಲೆನಾಲಕ್ಕೆ ತಟ್ಟೆನೆ ಮಾಡವನೆ ಬಟ್ಟಣ್ಣ
ನಾಲಕ್ಕೇ ದಿಕ್ಕಿಗೆ ಹೊಡದವನಣ್ಣಾ ವೋ

ಗುತ್ತಿ ಗುಡಿಯೆಕ್ವಾಟೆ ಮೇದಕಂಡು ಎತ್ತಯ್ಯ
ಜೆನ್ನಿಗ್ಯಾಗಳ ನೀರು ಕುಡುದು ತಾಳೆ ಮರದ ಗಡ್ಡೀಗೆ
ತಾಳೆಮರದ ಗಡ್ಡೀಗೆ ತಾವು ಗೂಡಿನ ಪೆಂಟೇಗೆ
ತಳಕಿನ ಬೆಟ್ಟಾಕೆ ನೀವೆ ಬರಬೇಕಂದಾ ವೋ

ಸುತ್ತೇಳು ರಾಜ್ಯವು ಒಳ್ಳೆ ವತ್ತುಗಟ್ಟಿ ಹೋದಮ್ಮ
ಬೋರನತಿಪ್ಪೇಗ ನೋಡು ತೊರಿಯಾಗೆ ನೀರು ಕುಡುದು
ತಾರಮರದು ಗಡ್ಡೀಗೆ ತಾವು ಗೂಡಿನ ಪೆಂಟೇಗೆ
ತಳಕಿನ ಬೆಟ್ಟಕ ನೀವೆ ಬರಬೇಕಂದಾ ವೋ

ಸಂಡಲೂರು ಎರಿಯಾಗೆ ಬಿಳಿ ಜ್ವಾಳ ಮೇದಕಂಡು
ಜನ್ನಿಗ್ಯಾಗಳ ನೀರು ಕುಡುದು ತಾಳೆಮರದ ಗಡ್ಡೀಗೆ
ತಾವುಗೊಡಲಿ ಪೆಂಟೀಗೆ ಮತ್ತೇನೆ ಎತ್ತಯ್ಯ
ತಳಿಕಿನ ಬೆಟ್ಟಾಕೆ ನೀವೆ ಬರಬೇಕಂದಾ ವೋ

ಸುತ್ತಾ ಮುತ್ತಾ ನೋಡು ಹೊಡದವನೆ ಬಟ್ಟಣ್ಣ
ಅಣ್ಣಾ ತಂಗೀ ನೋಡು ಗೊಡ್ಡಗಾಳಿ ಯಾವಾಗ
ತಕ್ಕಿಗಡಿಗೆ ಹೊತ್ತುಕಂಡು ಮತ್ತೇನೆ ಆವಾಗ
ತಳಕಿನ ಬೆಟ್ಟಾಕ್ಕೋಗಿ ಮಲಗಿದುರಣ್ಣಾ ವೋ

ಮುಂಗೋಳಿ ಕೂಗೊದ್ಹೊತ್ತು ಒಳ್ಳೆ ಮೂಡಲು ಕೆಂಪೇರುವುದೇ
ಎದ್ದವನೆ ಎತ್ತಯ್ಯ ಮೈಗುದುಗೌಡಾ ವೋ

ಹೇಳಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯ
ನಮ್ಮ ಎತ್ತುವಿನ ಸೆಬುದಾ ನೆಲಿಯಿಲ್ಲ ವೋ

ಆ ದಿನ್ನೇ ಹತ್ತಿ ಒಳ್ಳೆ ಅತ್ತಲಾಗಿ ನೋಡಂದಾರೇ
ಅಲ್ಲೇ ಗೋಲಿ ಗಜ್ಜುಗ ಆಡೇನಮ್ಮ ವೋ

ಈ ದಿನ್ನೆ ಹತ್ತಿ ಒಳ್ಳೆ ಇತ್ತಲಾಗೆ ನೋಡಂದಾರೇ
ಅಲ್ಲೇ ಗೋಲಿ ಗಜ್ಜುಗ ಆಡೋನಮ್ಮ ವೋ

ಹತ್ತೀಯ ಮರಗಳಿರೋ
ಇವ್ರ ಮುತ್ತೀನ ಸರಗಾಳಿರೋ
ನಮ್ಮ ಭಾವ ಎತ್ತಯ್ಯ
ನಾವೆದ್ದು ಬರುವ ಮರಗಳಿರೋ ಕಾಣೀರೋ ವೋ

ಹಾಲದಾ ಮರಗಳಿರೋ
ನಿಮ್ಮ ಕೊರಳಾಗಿರುವ ಹೂವ್ವಿನ ಸರಗೊಳ್ಳಿರೋ
ನಮ್ಮ ಭಾವ ಎತ್ತಯ್ಯನ
ನಾವೆದ್ದೆ ಬರುವ ಮರಗಳಿರೋ ಕಾಣಿರೋ ವೋ

ಆ ದಿನ್ನೆ ಹತ್ತಿ ಒಳ್ಳೆ ಅತ್ತಲಾಗೆ ನೋಡಂದಾರೇ
ಅಲ್ಲೇ ಗೋಲಿ ಗಜ್ಜುಗಾಡೋನಮ್ಮ ವೋ

ಅತ್ತಿಮರ ಹಾಲುದು ಮರ
ಕಟ್ಟೆಕಿರು ನೆಲ್ಲಿಮರ
ಹುಣಸೇಮರಾ ನೋಡು
ಬೇವೀನಮರಾ ನೋಡು
ಬೇರೀಗೆದ್ದು ಬಂದು
ಎತ್ತಯ್ಯಗೆ ಸಾಕುಸಿ ನುಡಿಯೊವಮ್ಮಾ ವೋ

ಮೂಡಲ ಸೀಮೀಗೇನೆ ಹೋಗಲಿಲ್ಲ ಎತ್ತಯ್ಯ
ಪಡುವುಲು ಸೀಮೀಗೇನೆ ಹೋಗಯ್ಯದಾವೇ ನೋಡು
ನಿಮ್ಮ ಸತ್ತೇವೆ ಕೆಡುತಾವೆ ಅಂದವನಣ್ಣಾ ವೋ

ನಿಮ್ಮ ಸತ್ತೆವು ಕೆಡುತಾವಂತ ಹೇಳಿದುನೆ ಕಾಣಯ್ಯ
ಬಾರಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯ
ಅಲ್ಲೆ ಬ್ಯಾಡಾರ್ಹುಡುಗ ಗೋಲೀಯಾಡೂತಾನೆ
ಅವನನ್ನ ನೋಡಿದುನ್ಹಂಗ ಕೇಳಿ ಬಾ ಹೋಗಮ್ಮಾ
ಏನಲೆ ಬ್ಯಾಡಾರ್ಹುಡುಗ ಮತ್ತೇನೇಯೋ ನೋಡು
ನಮ್ಮೇತ್ತಾವಿನ ದಾರಿ ನೋಡಿದಂದಾ ವೋ

ಮೀದ್ದಾವುಲು ದಾವಾನೆ ಸೂಪುಸುನಾಕೇ ಗೊಲ್ಲ
ಮಿಯಪ್ಪುತುವೆ ಪೆಟ್ಟಂಟಿವ್ರಂದ ಬ್ಯಾಡಾರ್ಹುಡುಗ ವೋ

ಭಾವ ಭಾವ ನೋಡು ಮತ್ತೇನೆ ಭಾವಯ್ಯ
ಎದ್ದಾವುಲು ದಾವಾನೆ ಸೂಪುಸುನಾಕೆ ಗೊಲ್ಲ
ಮಿಯಪ್ಪುತುವೆ ಪೆಟ್ಟಿಂಟಿವ್ರಂದ ಬ್ಯಾಡಾರ್ಘುಡುಗಾ ವೋ

ಅಂಗ್ಯಲ್ಲ ವಲಿಗಾನೆ ಹಿಂಗ್ಯಲ್ಲ ವಲಿಗಾನೆ
ಎಳದೀನಿ ಗುಂಡಿಲಿ ಸಂದೀಲಿ ಬಿದ್ದೈತೆ
ಮೂಗಿ ಮಣಕ ಬಿದ್ದ್ಯೈತೆ ಮುದಿಯಾವು ಬಿದ್ದ್ಯೈತೆ
ಸೆರಮ ಬಿಡಿಸಿ ಕೊಡು ಬಾರಂದ ಕರದು ಹೋಗಮ್ಮ ವೋ

ಬಾರಲೇ ಬ್ಯಾಡಾರ್ಘುಡುಗ ಮತ್ತೆ ಹೊನ್ನೂರಪ್ಪ
ಮುದಿಮಣಕ ಸತ್ತ್ಯೈತೆ ಮುದಿಯಾವು ಸತ್ತ್ಯೈತೆ
ಎಳದೀನಿ ಗುಂಡೀಲಿ ಸಂದೀಲಿ ಬಿದ್ದ್ಯೈತೆ
ಸೆರಮ ಬಿಡಿಸಿ ಕೊಡು ಬಾರೋ ಬ್ಯಾಡಾರ್ಘುಡುಗಾ ವೋ

ಯಾಡಸಚ್ಚೇದೆ ಮಾ ಅಯ್ಯ ಯಾಡ ಸಚ್ಚೇದೆ ಮಾತಂಡ್ರಿ

ಸ್ವಾರೇನೆ ತಕ್ಕಂಡು ಸೂರೀನೆ ತಕ್ಕಂಡು
ಓಡೋಡಿ ಬರುತಾನಯ್ಯ ಬ್ಯಾಡಾರ್ಘುಡುಗಾ ವೋ

ಎಳದನಿಗುಂಡೀಲಿ ಹತ್ತಿಸವರೆ ಕಾಣಯ್ಯ
ದೊಬ್ಬಯ್ಯ ಮಲ್ಲಯ್ಯ ಬೀಳಂಗ ವೋ

ಅದ್ವಾನ ಪೀಣೀಗಿ ಸೆಯ್ಯದ್ದು ಮಾಯಯ್ಯ
ನಾಯಾಡಲು ಬಿಡ್ಲು ಮಕಮು ಸೂಡ ಕುಣ್ಣಟ್ಲ ಸೂಡು
ಎದ್ದಾವುಲು ದಾವಾನೆ ಸುಪುಸ್ತಾನಂದ ವೋ

ಕೇಳಿಯಾಕೆ ಇಳಿಸಿದುರು ಮತ್ತೇನೆ ಆವಾಗ
ಮೀ ಎದ್ದಾವುಲು ದಾವಾನೆ ಸುಪುಸುನಾಕೆ ಗೊಲ್ಲ
ಮೀಯಪ್ಪುತುವೆ ಪೆಟ್ಟಿಂಟಿವ್ರಂದ ಬ್ಯಾಡಾರ್ಘುಡುಗಾವೋ

ಅಂಗ್ಯಲ್ಲ ವಲಿಗಾನೆ ಹಿಂಗ್ಯೆಲ್ಲ ವಲಿಗಾನೆ
ಕರಿಯೇನೆ ಕಂಬೂಳಿ ಗದ್ದೀಗೆ ಆಸಯ್ಯ
ಮೂಂಟೇನೆ ಕಟ್ಟಯ್ಯ ವಲಿಗಾನೆ ಮಲ್ಲಯ್ಯ
ಬೋರನತಿಪ್ಪೆ ತರಿಗೆ ಹೊತ್ತುಕಂಡನ್ನಾ ಬಂದಿ
ಕೆರಿಗುಂಟ ಹುಳ್ಳಿ ಬಿಡೋನಂದಾ ವೋ

ಮೂಟೇನೇ ಕಟ್ಟವರೆ ಮತ್ತೇನೆ ಆವಾಗ
ಬೋರುನೆತಿಪ್ಪೆ ತರಿಗೆ ಹೊತ್ತುಕಂಡನ್ನ ಹೋಗಿ
ಉಳ್ಳಿ ಬಿಡಬೇಕಂದ್ರೆ
ಅದ್ವಾನುದ ಪೀಣಿಗಿ ಸೆಯದ್ದು ಮಾಯಯ್ಯ
ನಾ ಯಾಡುಲು ಬಿಡ್ಡುಲು ಮಕಮ ಸೂಡಕುಣ್ಣಟ್ಲ ಸೂಡು
ಎದ್ದಾವುಲು ದಾವ ಸೂಪುಸ್ತಾನಂದಾ ವೋ

ಮೂಟೇನೆ ಬಿಚ್ಚಿದುರು ಮತ್ತೇನೆ ಆವಾಗ
ಬೋರನುತಿಪ್ಪೆ ತರಿಗೆ ಆಶೆಗಡ್ಡೆ ಈಸೆಗಡ್ಡೆ
ಸೋಸಿ ಅರಿಯಳು ಕಾಣೋ ಗಂಗಮ್ಮ ವೋ

ಅರೆ ಮೂರು ಪೆಟ್ಟೇ ಮುಣಮುಣಗಿ
ಎದ್ದಾನು ಬ್ಯಾಡಾರುಡುಗ
ಬಾಗಲ ಕಳ್ಳೇ ನೋಡು ಬಟ್ಟಣ್ಣನ್ಹೆಜ್ಜೆ ನೋಡು
ಎತ್ತಯ್ಯನ ಮಜ್ಜುಣವೆ ಕರುವೇನೆ ತಕ್ಕಂಡು
ಬಯಿಲಿಗೆ ಬರುತಾನಣ್ಣ ಬ್ಯಾಡಾರ್ರುಡುಗ ವೋ

ಬಾರಲೆ ಬ್ಯಾಡಾರ್ರುಡುಗ ಮತ್ತೇ ಹೊನ್ನೂರಪ್ಪ
ಸೂರಿದು ಮುಣಿಗಿದುತಾಕೆ ಶಂದುರ ಹುಟ್ಟಿದುತಾಕೆ
ಏನು ವರವೆ ಕೇಳುತೀಯೆ ಕೇಳಿದ್ದೆ ವರವೆ ಕೊಡತೀನಣ್ಣ ವೋ

ಏಮಿಸ್ತೆ ಏಮಿ ಪೇರುಂಟದಿ ಮಾಯಯ್ಯ
ಮಾಕುಲಮೇನೆ ಸೂಸ್ತೆ ಮಿಂಡ್ಲಿಕಿ ಪುಟ್ಟಿನ ಕುಲುಮು
ಮಲ್ಲೆನುಗ ಪಿಲಿಪಂಜೆ ಪಿನ್ನಿಸುತ್ತೂರ ಪಿಲ್ಲಾಲು
ನೀರಿಗಂಟೆ ತಾನಾಮು ಈ ಗೌಡಾ ವೋ

ಸೂರಿದು ಹುಟ್ಟೇದುತಾಕೆ ಶಂದುರು ಮುಣಿಗಿದುತಾಕೆ
ಎಂಥ ವರವೆ ಕೇಳಿದಲೆ ಮತ್ತೆ ಬ್ಯಾಡಾರ್ರುಡುಗ
ಕೊಟ್ಟೇ ಹೋಗಯ್ಯ ನಿಮ್ಮರಮನಿಯೇ ವೋ

ನೀರಿಗಂಟೆ ತಾನಾಮು ತಕ್ಕಂಡು ಬ್ಯಾಡಾರ್ರುಡುಗ
ಅವರರಮನಿಗೆ ಅವನೇ ಬರುತಾನಣ್ಣಾ ವೋ

ಬಾರೆಬಾರೇ ಗಂಗಮ್ಮ
ಎತ್ತಯ್ಯನ ಎತ್ತಾವು

ಎತ್ತಯ್ಯಾನೆ ಎತ್ತಾವು
ಎತ್ತ್ಯಾಯ್ಯಾನೆ ನೋಡು
ಆಸೆಗಡ್ಡೇ ಹೋಗಬೇಕು
ಒಣಿಕೆ ಬಂಡೋಟೋಳಿಯೆ ಬಿಡಬೇಕಂದಾ ವೋ

ಆಶೇ ಗಡ್ಡೀಗೇನು ಹೋಗಬೇಕು ಅಂದಾರೆ
ಗಂಗಮ್ಮುನ ಸಾಜ ಕೊಡಬೇಕಂದ ವೋ

ನೆನಿಯಕ್ಕಿ ನೆನುಗಡಲೆ ಕಡದೇಬೇ ಕಬ್ಬಿನ ಕೋಲು
ಸುಲುದು ತೆಂಗಿನ ಕಾಯ ಐದೆಲಿಯೆ ಐದಡಿಕೆ
ಐದೇ ಅಂಗೂದಾರ ಮತ್ತೇನೆ ಆವಾಗ
ಗಂಗಮ್ಮನ ಸಾಜಾ ಕೊಡುತಾನಣ್ಣಾ ವೋ

ಗಂಗಮ್ಮನ ಸಾಜಾನೆ ಕೊಡುತಾನೆ ಎತ್ತಯ್ಯ
ಅತ್ತುಲು ನೀರು ನೋಡ ಅತ್ತುಲುಗೆ ನಿನ್ನಾವು
ಇತ್ತುಲು ನೀರು ನೋಡು ಇತ್ತುಲಾಗೆ ನಿಮ್ಮಾವು
ನಡಿವೇನೆ ಗಂಗಮ್ಮ ಬಾಜೇನೆ ಬಿಡುತಾಳೆ
ಆಸೇ ಗಡ್ಡೀಗಾಗ ಬರುತಾರಣ್ಣಾ ವೋ

ಬಾವ ಬಾಮ್ಮೈದುನುರು ಹೋಗುತಾರೆಯೆ ನೋಡು
ಸೊಂಡುಲೂರು ಎರಿಯಾಗೆ ಬಿಳುಜ್ವಾಳುದ ಸೊಪ್ಪ್ಯಾಗೆ
ಎರಡ್ಡೋರಿ ಕಾಡುತಪ್ಪಿ ಮೇಯೋವಮ್ಮಾ ವೋ

ಬಾರಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯೋ
ನಮ್ಮೆರಡ್ಡೋರಿಯೆ ನೋಡು ನಮ್ಮೊವಾಗಿದಾವೆ
ಕೂಗಯ್ಯ ವಲಿಗಾನೆ ಬರುಲಂದಾ ವೋ

ಅಲೆ ಎರಡ್ಡೋರೆ ಆವಾಗ
ಕೂಗಿದಾಗ ಮಲ್ಲಯ್ಯ
ಓಡೋಡಿ ಎರಡ್ಡೋರಿ ಬರುತಾವಮ್ಮಾ ವೋ

ಅಲ್ಲೇ ಬಾವಮ್ಮೈದುನುರು ಎರಡ್ಡೋರಿ ವಡಕಂಡು
ಹೋಗುತಾರೆ ಹಿಂದೆಮುಂದೆ
ಆಲೋಜಿ ಸಾವೂಕಾರ
ಅವರೀಗೆ ಎದರೀಗೆ ಬರುತಾನಣ್ಣಾ ವೋ

ಏನಯ್ಯಾ ಎತ್ತಿನಗೌಡ ಎತ್ತಯ್ಯ
ಎರಡೋರಿ ನಿನ್ನವುಕೆ ಬೆಲೆ ಹೇಳಯ್ಯ ವೋ



ಎತ್ತಿನಗೌಡ ಎತ್ತಯ್ಯ ಆಲೋಜಿ ಸಾವುಕಾರ
ಬೆಲಿಯೆ ಹೇಳುತಾನೋ ಮೈಗುದು ಗೌಡಾ ವೋ

ತೆಲಿಗೀಲಿ ಹೇಳಾತಿ ಕನ್ನುಡುವೆ ಹೇಳಲ
ಕನ್ನಡುವೆ ಹೇಳಿದುರೆ ನನ್ನಿಗೆ ತಿಳಿಯೋದಿಲ್ಲ
ತೆಲುಗೆ ಹೇಳಬೇಕೋ ಮೈಗುದು ಗೌಡಾ ವೋ

ಎತ್ತಿನಗೌಡ ಎತ್ತಯ್ಯ ಬೆಲಿಯೇ ಹೇಳುತಾನಣ್ಣ
ಮುಂದ್ರಕಾಡ್ಲುಕಿ ಮುಪ್ಪಯ್ಯಿ ಎನಿಕಿಕಾಡ್ಲುಕಿ ಎನುಬೈಯ್ಯಿ
ತ್ವಾಕೂಕಿ ತೊಂಬಯ್ಯ ನೆಡ್ಡೀಕಿ ಡೆಬ್ಬಯ್ಯಿ
ಕೊಂಬುಲುಕೇನೆ ನೂರು ಬೆಲಿಮುಗಿತೇ ಸೆಟ್ಟಿ ಬಿಲಿಮುಗಿತಣ್ಣಾ ವೋ

ಅಲೆ ಲೆಕ್ಕಾವಿಲ್ಲಾದಣುವೆ ಗಕ್ಕುನೆ ಸುರಿವೈದಾನೆ
ವಡಿಯನ ಗಂಟನೋಡು ಬಂದೈತೆ ಸಾವುಕಾರ
ನಮ್ಮೆಂಟಾಣಿ ಮಾತ್ರ ಕೊಡಬೇಕಂದಾ ವೋ

ಲೆಕ್ಕಾವಿಲ್ಲಾದ್ದಣುವೆ ಗಕ್ಕುನ ಸುರಿವೈದೀನಿ
ಎಂಟಾಣಿ ನಾನು ಕೊಡುಲಾರೆಂದಾ ವೋ
ವಡಿಯಿನ ಗಂಟೀನಾಗೆ ಕಡಿಮಾದುರು ಶಿಂತಿಲ್ಲ
ನಮ್ಮೆಂಟಾಣಿ ನಾನು ಬಿಡುಲಾರೆಂದಾ ವೋ

ಕಾಲುರಿ ದುಡ್ಡುನೋಡು ಎಂಟಾಣಿ ಅಂದವನೆ
ಲೆಕ್ಕಾವಿಲ್ಲಾದಣುಪಿ ಗಕ್ಕನು ಸುರಿವೈದೀನಿ
ಎಂಟಾಣಿ ನಾನೇ ಕೊಡುಲಾರೆಂದಾ ವೋ

ಅಲೆ ಕೊಡುದಿದ್ದರೆ ಶಿಂತಿಲ್ಲ ಅಂದವನೆ ಎತ್ತಯ್ಯ
ಹಗ್ಗ ಬೀಸವನಣ್ಣ ತೆಕ್ಕೆ ಹಾಕಿದುನಣ್ಣ
ಒಂದೇಣತ್ತೀಗೆ ಒಂದೇಣಿಳಿಯತ್ತೀಗೆ
ಎರಡೋರಿ ಹುರ್ಲು ಬಿದ್ದು ಸಾಯಿಲಂದ ಎತ್ತಯ್ಯ
ಎರಡೋರಿ ಆವಾಗ ವಡುಕೊಡುತಾವಣ್ಣಾ ವೋ

ಒಂದೇಣತ್ತೋದಂತೆ ಒಂದೇಣಿಳಿಯೋವಣ್ಣ
ಎರಡೋರಿ ಹುರ್ಲುಬಿದ್ದು ಸಾಯೋವಣ್ಣ ವೋ

ಅಲೆಬಾರಯ್ಯ ಎಲೆ ಗೌಡ
ಎತ್ತಿನಗೌಡೆತ್ತಯ್ಯ
ನಿಮ್ಮೆಂಟಾಣಿ ಕೊಡತೀನಿ
ನಮ್ಮೆರಡ್ಹೋರಿ ಎಬ್ಬಿಸಿ ಕೊಡಬೇಂಕದಾ ವೋ

ಎಂಟಾಣಿ ಕೊಡುತಾನೆ
ಆಲೋಜಿ ಸಾವುಕಾರ
ಆವುಕಾಯೋ ನಾಗುವಳ್ಳಿ
ಬೆತ್ತಾವೆ ತಕ್ಕಂಡು
ಬಡುದು ಬಡುದೇ ಎರಡ್ಹೋರಿ ಎಬ್ಬುಸೋನಣ್ಣಾ ವೋ

ಎತ್ತಿನ ಗೌಡೆತ್ಯ ಆಲೋಜಿ ಸಾವುಕಾರ
ಅಂಜು ಮುತ್ತಿನಳ್ಳಿ ಅಂಬೊ ಊರೊಂದೆ ಕಟ್ಟಿಸಿದುರಣ್ಣ
ಸ್ವಾಮಾರುದು ಸಂತೇ ಮೆರಿಸಿದುರಣ್ಣಾ ವೋ

ಸ್ವಾಮಾರ ಸಂತೇನೆ ಮೆರಿಸವರೆ ಆವಾಗ
ಅಣವಿನ ಕಾಯೋಟು ದೂಪ ಅಡ್ಡನ ದೂಪಾನೊಯ್ದು
ಮೂರೇನ ಕಣ್ಣಿನದು ಕರಿಯಾನೆ ಸಿಪ್ಪಿನುದು
ದೃಷ್ಠಿಯನ್ನಾ ಕಾಯಿ ತಕ್ಕಂಡು ನಿನ್ನೆತ್ತಯ್ಯ
ತಳಕಿನ ಬೆಟ್ಟಾಕಾಗ ಬರುತಾನಣ್ಣಾ ವೋ

ತಳಕಿನ ಬೆಟ್ಟಾಕೇನೆ ಬಂದವನೆ ಎತ್ತಯ್ಯ
ಗೊಡ್ಡಗಾಳೀ ಬಟ್ಟಣ್ಣ
ತಳಕಿನ ಬೆಟ್ಟದ ಮ್ಯಾಲೆ
ಅಣ್ಣಾ ತಂಗಿ ಅಲ್ಲಿ ಮನಿಗವರಣ್ಣಾ ವೋ

ಮದ್ದೀಗೇರಿ ಕಂಬುಳಿ ಒಳ್ಳೆ ತದ್ದೀ ಗದ್ದಿಗಿ ಮಾಡಿ
ಅಡ್ಡಾಬೀಳುತಾನೋ ಮೈಗುದು ಗೌಡಾ ವೋ

ಮೂಡಾಲಡ್ಡು ಬಿದ್ದಾರೆ ಪಡುವುಲು ಮಕುನಾಗೋದು
ಟೆಂಕಾಲಡ್ಡು ಬಿದ್ದಾರೆ ಬೆಡಗುಲು ಮಕುನಾಗೋದು
ಎತ್ತೀನ ಮನುಯಾವಾಗ ತಿರುವಿದುನಣ್ಣಾ ವೋ

ಅಲ್ಲೇ ಅಡಿವಿನ ಕಾಯಿ ಅಡಿದೂಪ
ಅಡ್ಡಾವ ದೂಪಾಸುಟ್ಟು
ಮೂರೇನೆ ಕಣ್ಣಿನುದು
ಕರಿಯಾನೆ ಸಿಪ್ಪಿನುದು
ದೃಷ್ಟಿಯನ್ನ ಕಾಯೆ
ವಡದವನೇ ಎತ್ತಯ್ಯ
ಎತ್ತಿನ ಮನುವಾಗ ತಿರುವಿದುನಣ್ಣಾ ವೋ

ಎತ್ತಾವು ಎತ್ತಲಾಗೆ ಹೋದಾವಮುತ ಕೇಳಿದುರೆ
ಸುತ್ತಾ ಮುತ್ತು ಹೋದಾವು ಅತ್ತಿ ಬರುತಾವೆತ್ತಯ್ಯ
ಸೊಂಡುಲೂರಿಗೆ ಹೋದಾವೆ ಬರುಲಿಲ್ಲಾ ವೋ

ಬಿಟ್ಟಕೈಯಿ ಬೀಸಿದ್ದಂಗೆ ಮತ್ತೇನೆ ಎತ್ತಯ್ಯ
ಸೊಂಡುಲೂರಿಗೆ ಆಗ ಬರುತಾನಣ್ಣಾ ವೋ

ಸೊಂಡಲೂರು ಬೊಮ್ಮಯ್ಯ ಹಿಂದುಲಾವು ಮುಂದಲಾವು
ಎತ್ತಾವೆ ವಡಕಂಡ ಮತ್ತೇನೆ ಬೊಮ್ಮಯ್ಯ
ನೆಡಿವೆ ಕುಂತಾನೋ ಬೊಮ್ಮಯ್ಯ ವೋ

ನಿನ್ನಾನೆ ಸೀಮೀಗೆ ನೀನೊಬ್ಬ ಶೆರಣಯ್ಯ
ನನ್ನಾನೆ ಸೀಮೀಗೆ ನಾನು ಒಬ್ಬ ಶೆರಣಯ್ಯ
ನನ್ನ ಸೀಮಿಗೆ ನೋಡು ನಿನ್ನಾವಾದರು ಬರಬವುದು
ಇದಕ್ಕೆಲ್ಲೋ ಕರ್ತೋರು ಮತ್ತೇನೆ ಎತ್ತಯ್ಯ
ನಾನು ನೀನು ಕಲತು ಮತ್ತೇನೆ ಎತ್ತಯ್ಯ
ಸಣ್ಣಾದೊಂದು ನ್ಯಾಯ ಮಾಡಬೇಕಂದ ವೋ

ನ್ಯಾಯಾನೆ ಮಾಡಕೆ ಮತ್ತೇನೆ ಬೊಮ್ಮಯ್ಯ
ನಿನ್ನ ಆದ್ದೇವುಗಳು ಇಲ್ಲಾದವೆ ನೋಡು
ನನ್ನ ಆದ್ದೇವುಗಳು ಅಲ್ಲೈದಾವೆ ನೋಡು
ಮೂರು ದಿನಕೆ ವಾದ ಪಂತ ಕಟ್ಟೇನಮ್ಮಾ ವೋ

ನಾನೇ ಬರುದಿದ್ದಾರೆ ನಿನ್ನಿಗೇನ ನಡಿಯಂದ
ನೀನೆ ಬರದಿದ್ದಾರೆ ನನ್ನಿಗೇನ ನಡಿಯಂದ
ಮೂರ ದಿನಕೆ ವಾದ ಪಂತ ಕಟ್ಟಿಕಂಡ ಎತ್ತಯ್ಯ
ಎತ್ತ ವಡಕಂಡೆ ಬರತಾನಣ್ಣಾ ವೋ

ಅಲೆ ಮುಂದ ಮುಂದೇ ಬಂದವನೆ
ಸೊಂಡಲೂರು ಬೊಮ್ಮಯ್ಯ
ಬರಗಿನ ಮುಳ್ಳು ನೋಡು
ಎದುರೊಂದು ಮಾಡೀಕಂಡು
ಗಂಜೀ ಅಚ್ಚುಡುವೇನೆ ವದ್ದುಕಂಡು ಬೊಮ್ಮಯ್ಯ
ಸೀಗೆ ಪದಿಯಾಗೇನೆ ಕುಂತಕಂಡು ಬೊಮ್ಮಯ್ಯ
ಎಳಗರು ಅರಿಚಿದ್ಹಂಗೆ ಅರಿಚಿದುನಣ್ಣಾ ವೋ

ಸೀಗೇನೆ ಪೊದಿಯಾಗೆ
ಕುಂತಕಂಡೇ ಬೊಮ್ಮಯ್ಯ
ಎಳಗರು ಅರಿಸಿದ್ಹಂಗೆ
ಅರಿಸುದುನಣ್ಣಾ ವೋ

ಮುಗೀಮಣಕಾ ಈದ್ಯೆತೆ
ಮುದಿಯಾವು ಈದ್ಯೆತೆ
ಕರುವೇಳಾಲಿಲ್ಲೆಂದ
ಮತ್ತೇನೆ ಎತ್ತಯ್ಯ
ಸೀಗೆ ಮೊದಿಯಾಕೇನೆ

ಬಗ್ಗೀನೆ ನೋಡಿದುರು
ಆಲುಗಳ್ಳ ಕುಪ್ಪೇನೆ
ಬೀಳ್ಹಂಗೆ ವಡುದವನೆ
ಸೊಂಡಲೂರು ಬೊಮ್ಮಯ್ಯ
ಓಡ್ಹೋದಾ ಬೊಮ್ಮಯ್ಯ ಓಡ್ಹೋದಾ ವೋ

ಇವನು ಹುರಿಗಣ್ಣು ಬಿಟ್ಟಾರೆ
ಉರುದು ಹೋಗುತಿದ್ದವನು
ಕಿಡಿಗಣ್ಣು ಬಿಟ್ಟಾರೆ
ಸಿಡಿದು ಬೀಳೂತಿದ್ದವುನು
ಎಷ್ಟು ಎಷ್ಟು ನೆಮ್ಮಿದುರೆ
ಬ್ಯಾಡರನ್ನ ನೆಮ್ಮುಬಾರ್ದು
ಬೇವಿನ ಕಾಯೋಟಿಸುವೆ
ಬಿಡುಲಿಲ್ಲ ಅಂದವನೆ
ಓಡ್ಹೋದನ ಮೇಲೆ ಕೈಯಿ ನಾನು ಹೆಂಗೆ ಬಿಡುಲಂದಾ ವೋ

ಆಲುಗಳ್ಳೆ ತಕ್ಕಂಡ ಡಕ್ಕಿಗೆ ತಂಬೀಕಂಡ
ಪಟ್ಟೆದಟ್ಟಿ ಬಿಗುದೆ ಕಟ್ಟಿದುನಣ್ಣಾ ಎತ್ತಯ್ಯ
ಎತ್ತಾವೆ ವಡಕಂಡೆ ಬರುತಾನಣ್ಣಾ ವೋ

ಹಾಲೀನಂಥಾ ಮಕುವೆ ನೀರಾಗಿ ಬರುತಾನೆ
ಹೂವ್ವೀನಂತಾ ಮಕುವೆ ಬಾಡಿ ಬತ್ತಿ ಬರುತಾನೆ
ಯಾಕೋ ನಮ್ಮ ಭಾವಯ್ಯ ಸಪ್ಪುಗು ಬರುತಾನಂದು
ಶಿಂತೆ ಮಾಡುತಾನೋ ಮಲ್ಲಯ್ಯ ವೋ

ಹಾಲೀನಂಥಾ ಮಕುವೆ ನೀರಾಗಿ ಬಂದೀಯೆ
ಹೂವ್ವೀನಂಥಾ ಮಕುವೆ ಬಾಡಿಬತ್ತಿ ಬಂದೀಯೆ
ಯಾಕೋ ಬಾವಯ್ಯ ಸಪ್ಪಗೆ ಬರ್ತೀಯಂದಾ ವೋ

ಒಂದಗಲ್ಲು ಬಡುದಾರೆ ಆಲಂಬ ವಲಿಗಾನೆ
ಒಂದಗಲ್ಲು ಬಡುದಾರೆ ನೀರಂಬ ವಲಿಗಾನೆ
ಹಸುಮಗನ ಕೂಟೇನ್ಹೇಳಾಲಂದಾ ವೋ

ಹೇಳಬೇಕೊ ಭಾವಯ್ಯ ಅಂದವನೆ ಮಲ್ಲಯ್ಯ
ಸೊಂಡಲೂರು ಬೊಮ್ಮಯ್ಯ ಎತ್ತಾವು ತರಬಿದ್ದ

ನಿನ್ನಾ ಸೀಮೀಗೆನೆ ನೀನೊಬ್ಬ ಶರಣಯ್ಯ
ನನ್ನಾ ಸೀಮೀಗೇನು ನಾನು ಒಬ್ಬ ಶರಣಯ್ಯ
ನನ್ನಾ ಸೀಮೀಗೇನೆ ನಿನ್ನಾವಾದುರು ಬರಬೋದು
ನಿನ್ನಾ ಸೀಮೀಗೇನೆ ನನ್ನಾವಾದುರು ಬರಬೋದು
ಇದಕ್ಕೆಲ್ಲೆ ಕರ್ತೋರ್ೀರು ಮತ್ತೇನೆ ಬೊಮ್ಮಯ್ಯ
ನಮ್ಮೆತ್ತಾವುಗಳು ಮತ್ತೇ ಕೈಬಿಡಂದಾ ವೋ

ಇಲ್ಲಿ ನಾನೇನು ಕಲತು ಮತ್ತೇನೆ ಎತ್ತಯ್ಯ
ಸಣ್ಣಾದೊಂದು ನ್ಯಾಯ ಮಾಡಬೇಕಂದಾ ವೋ

ನ್ಯಾಯಾ ಮಾಡಾಕೆ ಮತ್ತೇನೆ ಬೊಮ್ಮಯ್ಯ
ನಿನ್ನಾ ಆದ್ಯೇವುಗಳು ಇಲ್ಲೈದಾವೆ ನೋಡು
ನನ್ನ ಆದ್ದೇವುಗಳು ಅಲ್ಲೈದಾವೆ ನೋಡು
ಮೂರು ದಿನಕೇ ನೋಡು ವಾದ ಪಂಥ ಕಟ್ಟೇನು
ನಾನೇ ಬರದಿದ್ದಾರೆ ನನ್ನೀಗೆ ನಡಿಯಂದ
ನೀನೇ ಬರದಿದ್ದಾರೆ ನನ್ನಿಗೇನೀ ನಡಿಯಂದ
ವಾದ ಪಂಥ ಕಟ್ಟಿಕಂಡು ಎತ್ತಾವು ಬಿಡಿಸಿಕಂಡು
ಮುಂದ ಮುಂದೆ ಬಂದವನೆ ಸೊಂಡಲೂರು ಬೊಮ್ಮಯ್ಯ
ಗಂಜೀಯಚ್ಚುಡುವೇನೆ ವದ್ದಕಂಡು ಬೊಮ್ಮಯ್ಯ
ಸೀಗೆ ಪದಿಯಾಗೇನೆ ಕುಂತಕಂಡು ಬೊಮ್ಮಯ್ಯ
ಎಳಿಗರುವರಿಸಿದ್ದಂಗೆ ಅರಿಸಿದುನಣ್ಣ ವೋ

ಮೂಗು ಮಣುಕ ಈದ್ಯೆತೆ ಮುದಿಯಾವು ಈದ್ಯೆತೆ
ಕರುವೇಳಾಲಿಲ್ಲೆಂದು ಬಗ್ಗಿ ನಾನು ನೋಡಿದೆ
ಹಾಲುಗಳ್ಳೆ ಕುಪ್ಪೇನೆ ಬೀಳ್ಡಂಗೆ ಹೊಡೆದು
ಓಡ್ಹೋದ ಬೊಮ್ಮ ಓಡ್ಹೋದಾ ವೋ

ಎಳ್ಳುಕಾಳೋಟು ನೋಡು ಮುಳ್ಳೇನೆ ಮನಿಯೋಟೆ
ವರುವೇನೆ ಕೊಡುಬೇಕು ಮತ್ತೇನೆ ಭಾವಯ್ಯ
ಶಿನ್ನುದ ಸಿರಿವಗ್ಗಾನೆ ಕೊಟ್ಟಾರೆ ಭಾವಯ್ಯ
ತಣ್ಣನ್ನವು ಮೂರರಿಕೆ ಕೊಟ್ಟಾರೆಯೇ ನೋಡು
ಈಗ ತರತೀನವುನ ತಲಿಯಂದಾ ವೋ

ಎಳ್ಳಕಾಳೋಟು ನೋಡು ಮುಳ್ಳನೇ ಮನಿಯೋಟು
ವರುವೇನೆ ಕೊಡುತಾನೆ ಮತ್ತೇನೆ ಎತ್ತಯ್ಯ

ಶಿನ್ನುದ ಸಿರಿವಗ್ಗಾಗನೆ ಕೊಟ್ಟಾವನೆ ಎತ್ತಯ್ಯ
ತಣ್ಣನ್ನವು ಮೂರರಿಕೆ ಕೊಡುತಾಣ್ಣಾ ವೋ

ಸೊಂಡಲೂರಿಗೆ ನೋಡು ಬಂದವನೆ ಮಲ್ಲಯ್ಯ
ಆಡೋ ಹಸುಮಗನಾದ ವಲಿಗಾನೆ ಮಲ್ಲಯ್ಯ
ನೀರುಬಳಸೋ ಬಾವಿತಾಗೆ ಕುಂತವನಣ್ಣಾ ವೋ

ಸೊಂಡಲೂರು ಬೊಮ್ಮಯ್ಯ
ಸತ್ತೇದಲ್ಲೆ ಶರಣು
ಉತ್ತಮುರೇನೆ ಮಗಾ
ಎತ್ತಯ್ಯನ್ನ ನಾನು
ನಟ್ಟಮುರುದು ಬಂದೀವಿನಿ
ಹಾಲು ತುಪ್ಪ ತರಿಸೀನಿ
ಬೆಳ್ಳೀ ಬಟ್ಟಲುದಾಗ
ಅರವತ್ತು ಕಂಡೂಗ
ಅಕ್ಕಿ ಬೇಸೈದಾನೆ
ಊರುಸುತ್ತಾ ಕ್ವಾಟೆ ಕಟ್ಟಿಸೆವನಣ್ಣಾ ವೋ

ಊರುಸುತ್ತ ಕ್ವಾಟೇನೆ ಕಟ್ಟಿಸವನೆ ಬೊಮ್ಮಯ್ಯ
ಅರವತ್ತು ಕಂಡೂಗ ಅಕ್ಕಿ ಬೇಸೈದಾನೆ
ಊರಿಗನ್ನ ಹಾಕಿಸಿ ಪುಣ್ಯೇವು ಪಡಿಬೇಕಂದು
ಆಗಾನೆ ಬೊಮ್ಮಯ್ಯ ಮಾಡವನಣ್ಣಾ ವೋ

ಹೊಸ ಮನುಷ್ಯರು ಬರುದ್ದಂಗೆ ಮತ್ತೇನೆ ಬೊಮ್ಮಯ್ಯ
ಊರುಸುತ್ತ ಕ್ವಾಟೆ ಕಟ್ಟಿಸೆವುನಣ್ಣಾ ವೋ

ಆಡೋ ಹಸುಮಗುವಾದ ವಲಿಗಾನೆ ಮಲ್ಲಯ್ಯ
ನೀರು ಬಳಸೋ ಬಾವಿತಾಗೆ ಕುಂತಗಂಡೆ ಮಲ್ಲಯ್ಯ
ಕನ್ನೇ ಹೆಣ್ಣುಮಕ್ಕಾಳು ನೀರೀಗೆ ಹೋಗ್ಯವ್ರೆ
ಎತ್ತಿಕಂಬಾಕ್ಹೋದಾರೆ ಮತ್ತೇನೆ ಮಲ್ಲಯ್ಯ
ಕಾರುಕಾರು ಅಂಬೂತ ಅಡವಿಗೆ ಬರುತಾನಣ್ಣಾ
ಎಲ್ಡುಕಣ್ಣು ಕಾಣಾದ ಕುಲ್ಡಮುಂಡೆಯೇ ನೋಡು
ಬುಡ್ಡೀನೆ ತಕ್ಕಂಡು ನೀರೀಗೆ ಬಂದಾರೆ
ಮಕ್ಕಳಿಲ್ಲ ಮರಿಯಿಲ್ಲ ಮತ್ತೇನೆ ಕುರುಡಮುಂಡೆ
ಈ ಹುಡುಗುರ ಎತ್ತಿಕಂಡ್ಹೋಗಿ ಸಾಕಂದ್ರೋ ವೋ

ಬಾರಪ್ಪ ನನ್ನ ಮಗನೆ ಅಂದಾರೆ ಕುಲ್ಡುಮುಂಡೆ
ಕಂಕುಳುಕೆ ಮಲ್ಲಯ್ಯ ಬರುತಾನಣ್ಣಾ ವೋ

ನೆತ್ತಿಮ್ಯಾಲೇಯೇ ನೋಡು ಬುಡ್ಡೀನೆ ಹೊತ್ತುಕೊಂಡು
ಕಂಕುಳುದಾಗೆ ನೋಡು ಮಲ್ಲಯ್ಯನ ಎತ್ತಿಗಂಡು
ಸೊಂಡಲೂರು ಊರಾಕೆ ಬಂದವಳೇಯೇ ನೋಡು
ಯಾಕಜ್ಜಿ ನಿಮ್ಮೂರು ಹಿಂಗೈತಂದಾ ವೋ

ಸತ್ತೇದಲ್ಲಿ ಶರಣಂತೆ ಉತ್ತುಮುರು ಮಗುನಂತೆ
ಎತ್ತುತುಪ್ಪದಾಗೆ ಹುಟ್ಟಿದ ಎತ್ತಯ್ಯನ್ನಾ ನೋಡು
ಸೊಂಡಲೂರು ಬೊಮ್ಮಯ್ಯ ನಟ್ಟಮುರುದು ಬಂದವನೆ
ಬೆಳ್ಳೀ ಬಟ್ಟುಲುದಾಗೆ ಹಾಲು ತುಪ್ಪವಯ್ಕಂಡು
ಇಸಬಾಯಿ ತೊಳಿತಾನಂತೆ ನನಕಂದ ವೋ

ಅರವತ್ತು ಕಂಡೂಗ ಅಕ್ಕೀ ಬೇಸೈದಾನೆ
ಊರೀಗನ್ನ ಹಾಕಿಸಿ ಪುಣ್ಣೆವು ಪಡಿತಾನಂತೆ
ಬಾರಜ್ಜಿ ನಾವು ನೋಡಾಕೆ ಹೋಗೋನಂದಾ ವೋ

ಅಲೆ ಕುಲ್ಡುಮುಂಡೆ ಬುಡ್ಡೀನೆ ಮನಿಯಾಗೆ ಇಳಿವುದಲ
ಕಂಕುಳಕೆತ್ತೀಕಂಡು ಬಂದವಳೇಯೇ ನೋಡು
ಪಾತುರುದರು ಕಾಣಯ್ಯ ಬಗ್ಗುದುರು ಕಾಣಯ್ಯ
ನಾಂತೇವು ತುಣಿಯೋರಂತೆ ಮತ್ತೇನೆ ಆವಾಗ
ನೋಡಿಕಂಡು ಪಾಡಿಕಂಡು ಕುಂತಕಂಡು ಕುಲ್ಡುಮುಂಡೆ
ಹಾಡಿಕಂಡ ವಲಿಗಾನೆ ಮತ್ತೇನೆ ಮಲ್ಲಯ್ಯ
ಒಂದೊಂದೆ ಪಾವುಟಿಗೆ ಹತ್ತಿದುನಣ್ಣಾ ವೋ

ಅಲೆ ಗವ್ವಾಸುಲಿ ಸರಿಸರಿಗೇನೆ ಹೋಗೇನೆ ಮಲ್ಲಯ್ಯ
ಸೊಂಡಲೂರು ಬೊಮ್ಮಯ್ಯ
ಏಳುಮಂದಿ ಸೂಳೇರುನ
ಮುಂದೆ ಕುಂದ್ರಿಸಿಕಂಡು
ಏಳು ಮಂದಿ ಹೆಂಡುರುನ
ಪಕ್ಕಿಗೆ ಕುಂದುರಿಸಿಕೊಂಡು
ನೆಡಿವೇ ಕುಂತವನೆ ಬೊಮ್ಮಯ್ಯ ವೋ

ಕಳ್ಳಾ ನನ್ನಂದೀರಿ
ಸುಳ್ಳಾ ನನನಂದೀರಿ

ಸತ್ತೇದಲ್ಲೆ ಶರಣ
ಉತ್ತುಮುರೇನೆ ಮಗಾ
ಎತ್ತಯ್ಯನ್ನ ನಾನು
ನಟ್ಟಿಮುರುದೆ ಬಂದಿವಿನಿ
ಇಸಬಾಯಿ ತೊಳಿತೀನಂದ ಬೊಮ್ಮಯ್ಯ ವೋ

ಮೊದಲೇನೆ ಕೂತೇನೆ ಕೂಗ್ಯವನೆ ಬೊಮ್ಮಯ್ಯ
ಆಲಿಸಿ ಕೇಳಿದಾನೆ ವಲಿಗಾನೆ ಮಲ್ಲಯ್ಯ
ಇನ್ನೊಂದು ಕೂತೇನೆ ಯಾವಾಗ ಕೂಗಿದುನೆ
ಶಿನ್ನುದು ಸಿರಿವಗ್ಗಾನೆ ಇಳಿಯೇನೆ ಬಿಟ್ಟವನೆ
ಇನ್ನೊಂದೆ ಕೂತೇನೆ ಯಾವಾಗ ಕೂಗಿದುನೆ
ಯಳಕಂಡ ಮಲ್ಲಯ್ಯ ಸೆಳಕಂಡಾ ವೋ

ಅಂಬೆರಾಯೂರಾಣೆ ತುಂಬೆರಾಯೂರಾಣೆ
ಅಕ್ಕಾಮಾರಿ ನಿನ್ನಾಣೆ ಶಿಕ್ಕುಮಾರಿ ನಿನ್ನಾಣೆ
ಕಡುವೋ ಕೊಡಲಿಯಾಣೆ ಕಟ್ಟೊ ಕವಣೀಯಾಣೆ
ಬಟ್ಟಣ್ಣುನ ಪಾದುದಾಣೆ ಮತ್ತೇಯೇನೆ ನೋಡು
ನಮ್ಮಾ ಭಾವನ ಪ್ರಾಣ್ಹೋಗಾತಂಕ ನಿನ ಪ್ರಾಣ್ಹೋದೀತಂದ
ಆಣೆ ಕಟ್ಟಿದು ಕಾಣೊ ವಲಿಗಾನೆ ಮಲ್ಲಯ್ಯ
ಶೆಂಡು ಕೈಯಾಗಿಡುಕಂಡು ಮುಂಡಾನೇನೆ ಕಡದು
ಮುಂಡಾನೆ ಕೆಳಿಯಾ ಒಗುದವುನಣ್ಣಾ ವೋ

ಕಳ್ಳ ನನ್ನಾಂದೀರಿ ಸುಳ್ಳು ನನ್ನಂದೀರಿ
ಸತ್ತೇದಲ್ಲೇ ಶರಣ ಉತ್ತುಮರೆನೆ ಮಗ
ಎತ್ತಯ್ಯನ ಭಾಮೈದನ ವಲಿಗಾನೆ ಮಲ್ಲಯ್ಯ
ಭಾವನ ಪ್ರಾಣ ತಗಿಯಾಕೆ ಇವನಿದ್ದ ಬೊಮ್ಮಯ್ಯ
ಇವನ ಪ್ರಾಣ ತಗಿಯಾಕೆ ನಾನೇ ಹುಟ್ಟಿವಿನಂದ
ಮೂರು ಕೂತೆ ಕೂಗ್ಯವನೆ ಮೂರು ಕ್ಯಾಕೆ ಹೊಡುದವನೆ
ಕಾಕ್ಯಾರೆ ಬಂದ್ಹಂಗೆ ಬಂದವುನಣ್ಣಾ ವೋ

ಏಳು ಮಂದೀ ಸೂಳೇರು
ಏಳು ಮಂದೀ ಹೆಂಡೂರು
ಅಲ್ಲಿ ಕುಂತಕಂಡೆ ಸೋಬಾನ ಹೇಳ್ಯಾರಣ್ಣಾ ವೋ

ಹಾಳಾ ಸೊಂಡುಲೂರಿಗೆ ಮ್ಯಾಲೇಳು ಸೌಕಿಪಾರ
ವಲಿಗಾನೆ ಮಲ್ಲಯ್ಯ ತಲಿಯೆ ಕೊಂಡ್ಹೋದ

ಕೆಟ್ಟಾ ಸೊಂಡಲೂರಿಗೆ ಸುತ್ತೇಳ ಸೌಕಿಪಾರ
ವಲಿಗನೆ ಮಲ್ಲಯ್ಯ ತಲಿಯೇನೆ ಕೊಂಡ್ಹೋದ ವೋ

ಅಲೆ ಏಳು ಮಂದೀ ಅವರೇನೆ
ಸೋಬಾನ ಹೇಳಿಕಂಡು ಕುಂತವರಣ್ಣಾ ವೋ

ಬಾರಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯ
ಈವತ್ತು ಕಡದೂ ಕಳ್ಳೆ ಹಿಂದೆಂದು ಕಡುದೇವು
ವಾದಿ ಬೀದೀಕೆ ಕಳ್ಳೆ ಕಡುದೇವಂದೋ ವೋ

ವಾದೀ ಬೀದಿಗೆ ಕಳ್ಳೆ ಕಡದವುರೆ ಆವಾಗ
ಈವತ್ತ ಕಟ್ಟಿದ ಗೂಡು ಇನ್ನೆಂದು ಕಟ್ಟೇವು
ವಾದಿಗಿ ಬೀದಿಗೆ ಗೂಡೇ ಕಟ್ಟೇನಂದಾ ವೋ

ವಾದೀ ಬೀದಿಗೆ ಗೂಡೆ ಕಟ್ಟಿದವನೆ ಎತ್ತಯ್ಯ
ಇವತ್ತೆ ಕರದ್ಹಾಲು ಇನ್ನೆಂದು ಕರದೇವು
ವಾದಿಗೆ ಬೀದಿಗೆ ಹಾಲು ಕರಿಯಂದಾ ವೋ

ಎತ್ತಿಗ್ಹೆಸರೆ ಕರದನಲ್ಲ ಆವಿಗ್ಹೆಸರೆ ಕರದನಲ್ಲ
ಈವತ್ತೆ ಎತ್ತಯ್ಯ ಹೆಸರೇ ಕರದವುನಣ್ಣಾ ವೋ

ಕರಿಯ ಓಬ್ಬಾನಳ್ಳಿ ಕರದಾರೆ ಓ ಅಂಬೋಳೆ
ನೀನೆದ್ದೆ ಬಾರಮ್ಮ ನಿಮ್ಮ ಕರುವೀಗೋ

ಕಡಿಯಂಚಿನಾಗ್ಹುಟ್ಟಿದೋಳೆ ಕರದರು ಓ ಅಂಬೋಳೆ
ನೀನೆದ್ದೆ ಬಾರಮ್ಮ ನಿಮ್ಮ ಕರುವೀಗೋ

ಗುತ್ತಿಲಿ ಗುಡಿಕ್ವಾಟೆ ಸುತ್ತಿಲಿ ಮೇದಕ್ಕಯ್ಯ
ನೀನೆದ್ದೆ ಬಾರಮ್ಮ ನಿಮ್ಮ ಕರುವೀಗೋ

ಆದುವಾನಿ ಸೀಮೆಗೋಗಿ ಬಂದಕ್ಕಯ್ಯ
ನೀನೆದ್ದೆ ಬಾರಮ್ಮ ನಿಮ್ಮ ಕರುವೀಗೋ

ಸೊಂಡಾಲೂರು ಸೀಮ್ಯಾಗೆ ದುಂಡಾಪುಮೇದೊಳೆ
ಗಂಡುರು ಗೂಳಿಗರತಿ ನೀನೆದ್ದೆ ಬಾರಮ್ಮ ನಿಮ್ಮ ಕರುವೀಗೋ

ವಾದಿಗಿಬೀದಿಗೆ ಹಾಲು ಕರಿತಾನೇ ಎತ್ತಯ್ಯ
ಗುಡ್ಡುದು ಬೋರಿತಮ್ಮ
ಗಂಟಾವುಲು ಶಿನ್ನಯ್ಯ
ಮೂಲಗ್ಗ ತಕ್ಕಂಡು
ಸ್ವಾರೇನೇ ತಕ್ಕಂಡು
ಸೂರೀನೆ ತಕ್ಕಂಡು
ಗೊಡ್ಡುಗಾಳಿ ಮಾತೇನೆ ಕೊಟ್ಟಿದ್ದಾ ಎತ್ತಯ್ಯ
ಮೋಸೂಗಾಳಿಗ್ಡಗ್ಗ ಬೀಸಿದುನಣ್ಣಾ ವೋ

ಮೋಸೂಗಾಳಿಗ್ಡಗ್ಗ ಯಾವಾಗ ಬೀಸಿದುನೆ
ಎತ್ತಯ್ಯನ ಮುಂದಾಕೆ ಯಳಕಂಡೇ ಹೋದಣ್ಣ
ಉಕ್ಕುಡುಕಾನಿಸಿದ್ದ ಸುಕ್ಕುನು ಸುರನಾರಿಬಿಲ್ಲು
ತಕ್ಕಂಡು ಎತ್ತಯ್ಯ ಎಳಸಿದುನೋ
ಭಾವಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯ
ಎಂಜೂಲಾದವು ಕಾಣೋ ಮಲ್ಲಯ್ಯ ವೋ

ನಮ್ಮಿಗೆ ಸರಿಯಾದೋರು ಬ್ಯಾಡರಲ್ಲ ಮಲ್ಲಯ್ಯ
ಶೆಕ್ಕೇಲಲ್ಡಾಲೊಯ್ದಿದಿದ್ದು ಜಕ್ಕಣಿಪುಲ್ಲಾರಾವು
ಹಾಲೇನೆ ಕರಿಯಯ್ಯ ವಲಿಗಾನೆ ಮಲ್ಲಯ್ಯ
ಅವನ ಬಾಯಾಕೆ ಈಸು ಇವನು ಬಾಯಾಕೆ ಈಸು
ಹಾಲೇನೆ ಬಿಡಯ್ಯ ವಲಿಗಾನೆ ಮಲ್ಲಯ್ಯ
ಕ್ಯಾಕುರಿಸಿ ಮಕದ ಮ್ಯಾಲೆ ಉಗುಳಯ್ಯ ಮಲ್ಲಯ್ಯ
ಯಡಗಾಲೀಲೆ ನೋಡು ಯಬ್ಬಟ್ಟೀಲ್ಲೇ ನೋಡು
ಗುಡ್ಡಾದ ಕೆಳಿಯಾಕೆ ವದಿಯಣ್ಣಾ ವೋ

ಶೆಕ್ಕೇಲಾಲ್ಡೊಯ್ದಿದ್ದು ಜಕ್ಕಣಿ ಪುಲ್ಲಾರಾವು
ಹಾಲೇನೆ ಕರುದವುನೆ ವಲಿಗಾನೆ ಮಲ್ಲಯ್ಯ
ಅವುನು ಬಾಯಾಕೆ ಈಸು ಇವುನು ಬಾಯಾಕೇ ಈಸು
ಹಾಲೇನೆ ಬಿಟ್ಟವನೆ ವಲಿಗಾನೆ ಮಲ್ಲಯ್ಯ
ಕ್ಯಾಕುರಿಸಿ ಮಕದ ಮ್ಯಾಲೆ ಉಗುದವುನೆ ಮಲ್ಲಯ್ಯ
ಎಡಗಾಲೀಲೇ ನೋಡು ಯಬ್ಬಟ್ಟೀಲೇ ನೋಡು
ಗುಡ್ಡಾದ ಕೆಳಿಯಾಕೆ ವಗುದವುನಣ್ಣಾ ವೋ

ಬಾರಯ್ಯ ವಲಿಗಾನೆ ಮತ್ತೇನೆ ಮಲ್ಲಯ್ಯ
ಸೂರಿದು ಹುಟ್ಟಿದುತಾಕೆ ಶೆಂದುರು ಮುಣಿಗಿದುತಾಕೆ

ಏನು ವರುವೆ ಕೇಳೀಯೋ
ಕೇಳಿದ್ದೆ ವರುವೆ ಕೊಡತೀನಂದಾ ವೋ

ಸ್ವಾಮವಾರದೊತ್ತುಗುಳು ತಪ್ಪುತಾವೇ ಮಲ್ಲಯ್ಯ
ಕೇಳಿದ್ದೆ ವರುವೆ ಕೊಡತೀನಂದಾ ವೋ

ಏನು ಕೊಟ್ಟರೇ ಭಾವ ಹೆಸರಿತ್ತೈತೆ ಭಾವ
ಮುಂದುಲು ಪೂಜೆಕೊಡು ಮುಂದಲುಬಾಗುಲು ಕೊಡು
ಮುಂದಲಿಳ್ಳೀವು ಭಾವ ಕೊಡಬೇಕಂದಾ ವೋ

ಸೂರಿದು ಮುಳಗೀದುತಾಕೆ ಶಂದುರು ಹುಟ್ಟಿದುತಾಕೆ
ಎಂಥ ವರುವೇ ಕೇಳಿದೋದೆ ಮತ್ತೇನೆ ಮಲ್ಲಯ್ಯ
ಕೊಟ್ಟೇ ಹೋಗಯ್ಯ ಅಂದವುನಣ್ಣಾ ವೋ

ಬಾರಯ್ಯ ವಲಿಗಾನೆ
ಸ್ವಾಮಾರಾದೊತ್ತುಗಳು
ಕೆಡತಾವಲಿಗಾನಯ್ಯ
ಇತ್ತುಲಾಗೇನು ನೋಡುತೀಯಿ
ಅತ್ತುಲಾಗೆ ನೋಡಂದ
ಮಾಯಿಕಾರ ಎತ್ತಯ್ಯ ಮಾಯಿವಾಗ್ಯೆನೋ

ಅಲೆ ಎತ್ತಯ್ಯ ಯಾವಾಗ
ಮಾಯವಾದಾನೆ ನೋಡು
ಕರಿಯೇನೆ ಆಕಾಳು
ಕರಿಯ ಕಲಾಗವಣ್ಣ
ಬಿಳಿಯೇನೆ ಆಕಳು
ಬಿಳಿಯ ಕಲ್ಲಾಗೋವಂತೆ
ಗೊಡ್ಡಗಾಳಿ ನಿಲ್ಲುವುಗಲ್ಲಾಗಿ ನಿಂತೈತಣ್ಣಾ ವೋ

ಅವುರೆಲ್ಲರೂನು ಮ್ಯಾಲೆ
ನಾನ್ಯಾಕಿರುಬೇಕಂದ
ವಲಿಗಾನೇ ಮಲ್ಲಯ್ಯ
ಬಾಗಲು ಪಂಚಿ ಹಿಡುಕಂಡು ನಿಂತವುನಣ್ಣಾ ವೋ

ಕುರಿಯಾಳ್ಹಿರಿಯ್ಹುಟ್ಟ್ಯಾಗೆ
ತಾವುರಿಗಿರಿ ಬಸುವಂಗೆ

ಸೀಮ್ಯಾಗೆ ಇದ್ದಂತ
ಅಬುಗಾನೆ ಮಲ್ಲಮ್ಮ
ನೆಲಿಮಾಳಿಗ್ಯಾಗೇ ಮಲ್ಲಮ್ಮ ಮಡಿಗಿದುಳೋ ವೋ

ಅಣ್ಣಾ ನಿಮ್ಮುನಾಡೇವೋ ಅಪ್ಪಾ ನೀಮ್ಮಾ ಮೆರಿಸೇವೋ
ಅಪ್ಪಾ ನಿಮ್ಮ ನಿದ್ರಿಗುಳೇ ಕೆಡಿಸೇವೋ । ಚಳ್ಳಾಕೆರಿ
ಪಟ್ಟೆ ಮಂಚದು ಮೇಲೆ ಪವಡಿಂಚೋ

ಅಣ್ಣಾ ನಿಮ್ಮಾನಾಡೇವೋ ಅಪ್ಪ ನಿಮ್ಮುನ ಮೆರಿಸೇವೋ
ಅಪ್ಪ ನಿಮ್ಮ ನಿದ್ರಿಗುಳೆ ಕೆಡಿಸೇವೋ । ತಳುಕಿನ ಬೆಟ್ಟಾ
ತೂಗೂ ಮಂಚುದು ಮ್ಯಾಲೆ ತೂಗ್ಯಾವೋ

ತಾಯಿ ನಿಮ್ಮನ್ಹಾಡೇವೋ ತಾಯಿ ನಿಮ್ಮುನ ಪಾಡೇವೋ
ತಾಯಿ ನಿಮ್ಮ ನಿದ್ರಿಗುಳೇ ಕೆಡಿಸೇವೋ । ಗೌರೂಸಂದ್ರ
ತೂಗೋ ಮಂಚುದು ಮ್ಯಾಲೆ ತೂಗ್ಯಾಡೋ

ರಾಮು ಲಚ್ಚುಮುಣ್ಣಂಬೊ ಗಂಡುಮಕ್ಕುಳು ಕೊಡು ದೊರಿಯೇ
ಗಂಗಮ್ಮ ಗೌರಮ್ಮಂಬೋ ಹೆಣ್ಣು ಮಕ್ಕಳು ಕೊಡು ದೊರಿಯೆ
ಬಕ್ಕುಸು ಬಂಢಾರ ಕೊಡು ಮೈಗುದು ಗೌಡಾವೋ

ಹಣವೇ ಹೆಚ್ಚಾಲಾಗಿ ಮನಿತುಂಬ ಮಕ್ಕುಳಾಗಿ
ನೀನು ಮಾಡೀದ ಭೂಮಿ ಬೆಳಿಯಾಲೋ । ಕಾಮಣ್ಣ ನಿನಿಗೆ
ಹೆಚ್ಚೊಕ್ಕಲಾಗಿ ನೀನು ಬದುಕಣೋ

ಮಕ್ಕಳು ಮನಿತುಂಬಾಗಿ ರೊಕ್ಕ ಕೈತುಂಬಾಗಿ
ನಿ ಮಾಡೀದ ಭೂಮಿ ಬೆಳಿಯಾಲೋ । ಕಾಮಣ್ಣ ನಿನಿಗೆ
ಹೆಚ್ಚಿಬರಲೊ ನಿಮ್ಮ ದೊರಿತಾನೋ

ರೆಡ್ಡಿಯಳ್ಳೀ ಶೆಲುವ ಕಾಣೋ
ಬಂಜಿಗೆರಿಯೇ ಈರಣ್ಣ
ಗ್ವಾಪುನಳ್ಳಿ ಈರಣ್ಣ
ಮೊದ್ದುಲು ಬಂಡೀರಣ್ಣ
ದುಪ್ಪೆಬಂಡೇ ಈರಣ್ಣ
ಸಾಲುಸತ್ತಿರಿಗಿರಿ ಈರಣ್ಣ
ನೂರೊಂದಲಿಗೀನ ಸೆಲುವ
ಬಂದಂತ ಗಂಡಾಂತ್ರ ಬಯಿಲು ಮಾಡಯ್ಯ ವೋ

ಅಕ್ಕಮಾರಿ ಶಿಕ್ಕುಮಾರಿ
ದ್ಯಾವುರು ದಯಿಮಾರವ್ವ
ಗೌರುಸಂದ್ರುದಕ್ಕಯ್ಯ
ಬಳ್ಳಾರಿ ದುರುಗಮ್ಮ
ಅಡ್ಡ ಬೆಟ್ಟುದ ಮಾರಮ್ಮ
ಯರಬಳ್ಳಿ ಮಾರಕ್ಕ
ಬಂದಂತ ಗಂಡಾಂತ್ರ ಬಯಿಲು ಮಾಡಮ್ಮ ವೋ
ವದ್ದಿಕೆರಿಯೇ ಸಿದ್ದಕಾಣೆ
ಗಾಳಿ ಪೂಜೆ ಗಾಡಿಗುನೆ
ಹೊನ್ನು ಬಂಡೇಶನಿಗೆ
ಬಂದಂತಾ ಗಂಡಾಂತ್ರ ಬಯಲು ಮಾಡಯ್ಯ ವೋ

ಕಲ್ಲೇ ಕಂಬಂದಯ್ಯ ಬಿಲ್ಲು ಬಾಣಾದಯ್ಯ
ಎಲ್ಲೇ ಐದಾನೆ ನಮ್ಮ ಮನಿಸ್ವಾಮಿ । ನರಸಿಂಹ
ಮಲ್ಲೀಗ್ಹೋನ್ನುದಾಗೆ ಸಿವುಪೂಜೇ

ಲೆಕ್ಕಾವಿಲ್ಲಾದ್ಹೋವು ಲೆಕ್ಕುಸುವೇಳಿದುರೇನು
ಹೊಂದೀಕಿಲ್ಲಾದ್ಹೋವು ಒಂಬತ್ತೇಳಿದುರೇನು
ಮುದ್ರಿಕಿಲ್ಲಾದ್ಹೋವು ಮೂವತ್ತೇಳಿದುರೇನು
ಹೊನ್ನಾಬಂಡೆ ನಮ್ಮಪ್ಪುನ ಶಿನ್ನಿಗನೇ ಇನ್ನಾಮ್ಯಾಲೆ
ಹೇಳಿದ್ದುರಾಗೆ ಫಲವಿಲ್ಲೋ ವೋ

ಶರಣಯ್ಯ ಶಿವುನೀಗೆ
ಶರಣಯ್ಯ ಈ ಮನಿಯ
ಒಡೆಯ ಆಂಜೀಣಯ್ಯಗೆ
ಶರಣಂದೇ ಕೈ ನಾವು ಮುಗುದೇವೋ

ಎಡಗೈಯೇ ಎಂಜಾಲು
ಬಲಗೈಯೇ ಎಂಜಾಲು
ಒಪ್ಪಿಕಳ್ಳೊ ಆಂಜಿನಯ್ಯ ನೀನು ಮೆಚ್ಚಿಕಳ್ಳಪ್ಪಾ ವೋ

ಮ್ಯಾಕೆ ಕಾಯಣ್ಣಾಗೆ ಲೋಕದ ಪುಳುಗೋವಾದೆ
ಕುರಿಯ ಕಾಯಣ್ಣಾಗೆ ಕುರಿಗಣ್ಣಿನ ಕೋಲಾದೆ
ಆವು ಕಾಯೇ ಅಣ್ಣಾಗೆ ದೇವುಗಣ್ಣಿನ ಬೆತ್ತಾದೆ
ದೊಡ್ಡಾನೆತ್ತಯ್ಯಗೊಂದು ವಡ್ಡಿದ ಮರುಬಿಲ್ಲಾದೆ

ದೊಡ್ಡೊನು ಜುಂಜಪ್ಪಾಗೆ ವಡ್ಡಿದ ಅರುಮನಿಯಾದೆ
ಆಲು ಕ್ಯಾತೆಲಿಂಗಾಗೆ ತೂಗೊ ತೊಟ್ಟಿಲು ನೀನಾದೆ
ಹಟ್ಟಿ ಕ್ಯಾತಯ್ಯಗೊಂದು ಪಟ್ಟಿದು ಮಂಚಾನಾದೆ
ಮೂಡುಲುಗಿರಿ ತಿಮ್ಮಪ್ಪಗೆ ಮುತ್ತಿನ ಬವುನಾಸಾದೆ
ಹಂದುಲುಗಿರಿ ತಿಮ್ಮಪ್ಪಗೆ ಶೆಂದುವಾದ ಗೂನಿಯಾದೆ
ಅಜ್ಜಾದೆ ಕೋಲಾದೆ ಅಜ್ಜಿಗೆ ಪುಟ್ಟಿಗ್ಯಾದೆ
ಗೆಜ್ಜೆಕಾಲ್ ಮೊಮ್ಮಗ್ಗೆ ತೂಗೊ ತೊಟಿಲು ನೀನಾದೆ
ನೀನ್ಯಾರಿಗಲ್ಲದೋಳೆ ಬಿದುರಮ್ಮ ವೋ



ದೊಡ್ಡೀರಿ ಸೀಮೀಗೆ ಒಳ್ಳೆ ದೊಡ್ಡಳುಕಾಣೆ ಬಿದುರಮ್ಮ
ಒಡ್ಡೀದಲ್ಲೋ ತಾಯಿ ಮರಬಿಲ್ಲೋ । ಥಳಕೀನ
ವಬ್ಬೆಲಾಡೀದಮ್ಮ ಜಗುಬ್ಯಾಟೆ ವೋ

ಸಾರೂನೂರು ಗುಡ್ಡಾದೋಳೆ ಸಾಗಿಗಣ್ಣಿನ ಸೊತ್ತಿ
ಸೋಬಾನಿಲ್ಲಿಗೆ ಸಾಕು ಮಾಡಮ್ಮ ವೋ

## ಜಯಮಂಗಳಂ

ಒಳದಂಡ ವರದಂಡ
ವರಗೆ ನಾಲಕ್ಕು ದಂಡ
ಕಾಡು ಗೊಲ್ಲುನುತಾಗೆ
ಕೈದಂಡ ತಕ್ಕಂಡು
ಈರಾದ ಈರಗೆ
ಈರ ಜುಂಜಪ್ಪಗೆ
ಮಾರ ಮುತ್ತಪ್ಪಗೆ
ಗುರುವೆ ಶಿತ್ತಯ್ಯಗೆ
ಗುಡ್ಡದೆತ್ತಯ್ಯಗೆ
ತಂದೆ ಮುರಿವಣ್ಣಗೆ
ತಾಯಿ ಶಿನ್ನಮ್ಮಗೆ
ಆವೀನ ಮ್ಯಾಲಾಡೊ ಮಾರಣ್ಣಗೆ
ಜಯಮಂಗಳಂ ನಿತ್ಯ ಸುಬಮಂಗಳಂ

ಒಳದಂಡ ವರದಂಡ
ವರಗೆ ನಾಲಕ್ಕು ದಂಡ
ಕಾಡು ಗೊಲ್ಲುನುತಾಗೆ
ಕೈದಂಡ ತಕ್ಕಂಡು
ಈರಾದ ಈರಗೆ
ಈರ ಜುಂಜಪ್ಪಗೆ
ಮಾರ ಮುತ್ತಪ್ಪಗೆ
ಗುರುವೆ ಶಿತ್ತಯ್ಯಗೆ
ಗುಡ್ಡದೆತ್ತಯ್ಯಗೆ
ತಂದೆ ಮುರಿವಣ್ಣಗೆ
ತಾಯಿ ಶಿನ್ನಮ್ಮಗೆ
ಆವೀನ ಮ್ಯಾಲಾಡೋ ಮೈಲಣ್ಣಗೆ
ಜಯಮಂಗಳಂ ನಿತ್ಯ ಸುಬಮಂಗಳಂ

ಒಳದಂಡ ವರದಂಡ
ವರಗೆ ನಾಲಕ್ಕು ದಂಡ
ಕಾಡು ಗೊಲ್ಲುನುತಾಗೆ
ಕೈದಂಡ ತಕ್ಕಂಡು
ಈರಾದ ಈರಗೆ
ಈರ ಜುಂಜಪ್ಪಗೆ
ಮಾರ ಮುತ್ತಪ್ಪಗೆ
ಗುರುವೆ ಶಿತ್ತಯ್ಯಗೆ
ಗುಡ್ಡದೆತ್ತಯ್ಯಗೆ
ತಂದೆ ಮುರಿವಣ್ಣಗೆ
ತಾಯಿ ಶಿನ್ನಮ್ಮಗೆ
ಎತ್ತೀನ ಮ್ಯಾಲಾಡೋ ಜುಂಜಪ್ಪಗೇ
ಜಯಮಂಗಳಂ ನಿತ್ಯ ಸುಬಮಂಗಳಂ

❑ ❑ ❑

# ೬. ಜುಂಜಪ್ಪನ ಪದಗಳು

## ೬.೧ ಎತ್ತಯ್ಯ–ಜುಂಜಯ್ಯ

ಎತ್ತಯ್ಯ[1] ಅಂದಾರೆ ।
ಎಸರೀಗೆ[2] ದೊಡ್ಡೋನು ।
ಪಟ್ಟಿದಟ್ಟೇನು ದೈಮಾರೋನು ।

ಹೆಸರೀಗೆ ದೊಡ್ಡೋನು
ಲೋಕಕ್ಕೆ ದೊಡ್ಡೋನು ।
ನಿನ್ನಂತ ಸತ್ಯವಂತ
ಯಾರಿಲ್ಲ ಲೋಕಕ್ಕೆ ।

ಮಾಯಕಾರನು ನೀನು
ಮಾಯಿಕಾರನು ನೀನು ದೇಸಕ್ಕೆ[3]
ನಿನ್ನ ಕಂಡರೆ ಎದರೋರು
ಬೆಚ್ಚೋದು ಲೋಕದ ಜನರು ।

ನಿನ್ನ ಮಾಯವ ಕಂಡೋರೆ
ಇಲ್ಲಾ ಕಣಯ್ಯ ದೇಸ್ಯ[4]ದ ಮ್ಯಾಲೆ ।
ಅವರು ಮಲಗುವ ಮಂಚ್ಯ[5]ದ
ಮ್ಯಾಲೆ ಆಡೋದು ನಾಟ್ಯ ಸರ್ಪವೂ ।

ಅಂತ ಸತ್ಯವಂತ[6] ಪುರುಷ[7]
ನೀನು ಲೋಕದಲ್ಲಿ ।

ನಿನ್ನ ನಾಡಿನ ಜನರು ಕೂಡಲೀ ।
ನಿನ ಕಂಡರೆ ದೇಶದ
ಮಕ್ಕಳು ಕೂಡ ಸ್ವಾಮಿ
ಜುಂಜಪ್ಪ ಎಂದು ಧ್ಯಾನವಾ ಮಾಡೋರು ।

ಸ್ಮರಣೇಯ ಮಾಡೋರು
ಅಂತ ಸತ್ಯವಂತ ಕಣಯ್ಯ
ನೀನು ಎತ್ತಯ್ಯ ಜುಂಜಪ್ಪ ।

---

ಹಾಡಿದವರು : **ಕರಿಯಪ್ಪ**, ಕಾಡುಗೊಲ್ಲರು, ಬೆಟ್ಟದ ಗೊಲ್ಲರಹಟ್ಟಿ, ಶಿವಗಂಗೆ ಅಂಚೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಸಂಗ್ರಹ : **ಸಿದ್ಧಗಂಗಯ್ಯ ಕಂಬಾಳು**
ಕೃತಿ : ಮಾತಾಡು ಮಲ್ಲಿಗೆ
ಪ್ರಕಟಣೆ : ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರ. 1973

ಆವಿನಲ್ಲೇ [8] ಸೇಳಿನಲ್ಲೇ[9]
ಮಣಿಗಾರ[10] ಕಾಣಯ್ಯ ನೀನೂ
ಅವು ಕೂಡ ನಿನ್ನ
ಆಜ್ಞೆಯಂತೇ ಇರುವ್ವೋವು ।

ಸಾಸ[11]ವಂತ ಸತ್ಯವಂತ
ನೀನು ನಿನ್ನಂತ
ಸತ್ಯವಂತ ಈ ದೇಶ
ದಲ್ಲೆ ಇಲ್ಲವಯ್ಯೋ ।

ವನ್ನಟ್ಟಿ [12] ಆಲೇಗೌಡನೂ ।
ಅವನ ಏಳು ಗೂಡಿನ
ದನಗಳೇ ಓದಾವೂ ।
ಏಳು ಗೂಡಿನ ದನಗಳು ಓದಂತ ಕಾಲದಲ್ಲೀ ।

ಶಿವಗೋಳು ಶಿವಿಸಿಂತೆ[13] ।
ಮಾಡುವಂತ ಕಾಲದಲ್ಲಿ ।
ಕೆಂಪನುಮಲ್ಲೇಗೌಡಾನು ।
ಅವನ ಕಡೆ ದಿಷ್ಟೀನೇ ಮಾಡಾನು ।

ದಿಷ್ಟಿ ಮಾಡಿದಂತ ಕಾಲದಲ್ಲಿ
ಆಲೇಯಗೌಡನ ಕೇಳುತಾನೆ
"ಯಾಕಯ್ಯ ಆಲೇಗೌಡ
ಅನ್ನ ನೀರುನೇ ಬಿಟ್ಟು ।

ಯೋಸನ್ನೆ [14]ಯ ಮಾಡುತಿಯಾ ।
ನೀನು ಯೋಸನೆಯ ಮಾಡಲು
ಬ್ಯಾಡ ಸಿವ[15]ಸಿಂತೆ ಮಾಡಲು
ಬ್ಯಾಡ" ನನ್ನ ಶಿವಸಿಂತೆ ಸಿವಗೋಳ

ಏನೆಂದು ಏಳಲೊ
ಸ್ವಾಮಿ । ಏಳು ಗೂಡಿನ
ದನಗಳು ಏಳು
ದಿನದೊಳಗೆ ಸತ್ತೋದೊ ।

ಓದಾವೊ ಸ್ವಾಮಿ ನಾನು ಮಾನವ ಜಲುಮ
ಎಂಗೆ ಒರಿಲಯ್ಯೋ..... ।

ಅವಾಗ ಏನೆಂದು ಕೇಳು
ತಾನೆ ಸ್ವಾಮಿ । "ಆದರೆ
ಆಗಲೀ ಇಷ್ಟು ದನಗಳೇ
ಓದಾವು[16] ನಿನ್ನ ವಟ್ಟೆಯ [17]
ಕರುವ ಕೊಡಯ್ಯೋ"

ನಾನು ಸಾಕಿಕೊಳುತೀನಿ ।
ಎಂದಾನು । ಈ ವಟ್ಟಿಕರವ ।
ತಕ್ಕೊಂಡು[18] ಓಗಿ ಸ್ವಾಮಿ ।
ನೀವೆ ಸಾಕಿಕೊಳ್ಳೀ ।

ಬ್ಯಾಡ ಬ್ಯಾಡ ಆಲೇಗೌಡಾನೇ
ನೀನು ಎದರಬೇಡ ।
ಬೆಚ್ಚ [19]ಬೇಡಾ । ನಾನು
ಇದ್ದೀನಿ ನಿನ್ನ ಬಲಬುಜವಾಗಿ ।

ನಿನ್ನ ಏಳು ಗೂಡ ದನಗಳಿಗೆ
ಇನ್ನೇಳು ಗೂಡ ದನಗಾಳ
ಎಚ್ಚಿಸು[20]ತೀನಿ ಆಲೇಗೌಡ
ವರ್ಸ[21]ತುಂಬೋವತ್ತಿಗೆ ।

ಇನ್ನು ಅವಳಿ ಜವಳಿ ಕರುಗಳು
ಉಟ್ಟಿದವಯ್ಯೋ[22]ಗಂಗೆ
ಗೌರಿ ಎಂದು ಅವಕೆ
ಹೆಸರಾನೇ ಕಟ್ಟಿದ ಸ್ವಾಮಿ

ಇಂಗೆ ವರ್ಸ ವರ್ಸವೂ
ಬೆಳಸಿದ ದನಗಳ ಸ್ವಾಮಿಗ
ಕೆಂಪನುಮಲ್ಲೇಗೌಡನ
ಮನೆಯಲ್ಲಿ ಇದ್ದುಕೊಂಡೇ ।

ಆವಾಗ ಏಳುತಾನೆ ।
"ದನಗಳಿಗೆ ಮೇವಿಲ್ಲ ।
ನೀರಿಲ್ಲ ಕೆಂಪನುಮಲ್ಲೇಗೌಡಾನೆ ।
ನಾನು ಊರಾಗೆ ಇರೋದಿಲ್ಲ" ।

"ಅಲ್ಲೇಯ ಗೌಡಾನೆ ನಾನು
ಮದಗಲ್ಲು[23]ಗುಟ್ಟಕ್ಕೆ ವಡೀತೀನಿ ।
ದನಗುಳನ ಅಲ್ಲಿ
ರೊಪ್ಪನ ಆಕಿಕೊಂಡು

ಅಲ್ಲಿ ಅಗಲು[24] ರಾತ್ರಿ
ವಾಸವನೇ ಇರುತೀನಿ"
ಆಗ ಏನೆಂದು ಏಳು
ತಾನೆ ಆಲೆಯಗೌಡಾನು ।

ಊಟಕ್ಕೆ ಏನು ಮಾಡಿ
ಕೊಳುತೀಯ ಎಂದು ಕೇಳುತಾನೆ ।
ಕೆಂಪನುಮಲ್ಲೇಗೌಡ
ಆವಾಗ ಆಲ್ಲೇಯಗೌಡನ್ನ ।

ಏಳುತಾನೆ ಕೆಂಪನುಮಲ್ಲೇ
ಗೌಡ ಆಲೆಯಗೌಡನಿಗೆ
ನಿನ್ನ ಊಟವೂ ಬ್ಯಾಡನೀಗೆ
ನೀನ್ಯಾಕೆ ನನಗೆ ದಣಿತೀಯ ।

ನನ್ನ ವಟ್ಟೆ ಆತುರಕ್ಕೆ
ಗಂಗೆ ಗೌರಿ ಎಂಬ ಹಸುವಿನಲ್ಲಿ
ಹಾಲನ್ನೇ ಸೇವಾನೆ
ಮಾಡಿಕೊಳುತಿನಯ್ಯೋ ।

ಆಲೆಗೌಡಾನು ಏಳುತಾನೆ
ಎಣ್ತೆ[25]ಕೈಯಲ್ಲಿ ಸತ್ಯ
ವಂತನು ಸ್ವಾಮಿ ಸತ್ಯ
ಪುರುಷನು ಸ್ವಾಮಿ ಎಂದೂ

ನೀನು ನಮ್ಮ ಮನ್ಗೆ ಬಂದ
ದೆಸೆಯಲ್ಲಿ । ನಾವು ಬದುಕಿ
ಕೊಂಡೊ । ನಮ್ಮ ಬಾಗ್ಯಾದ
ಲಕ್ಷ್ಮಿ ಬಂದಂತಾಯ್ತು ತಾಯಿ ।

ಅಂಗಂತ ಯಂಡ್ತಿ[26] ಕೈಯ್ಯಲ್ಲಿ
ಏಳ್ತಾನೆ । ಏಳಿದಂತ
ಕಾಲದಲ್ಲಿ ಇನ್ನೊಂದು
ಯೋಸನೇ[27] ಅವರಿಬ್ಬರೂ ಮಾಡ್ತಾರೆ ।

ಆಗ ಏನೆಂದು ಮಾತುಗಳ
ಆಡಿದರು ಇಬ್ಬರೇ । ಆಗ
ಏನೆಂದು ಏಳುತಾನೆ
ಎಲ್ಲಾರ ಒಂದು ಎಣ್ಣಾನು[28] ನೋಡಿ ।

ಲಗ್ನವ ಮಾಡಬೇಕು ಎಂದು
ಏಳುತಾರೆ । ಮಾತಾಡಿಕೊಳುತಾರೆ ।
ಆಗ ಸ್ವಾಮಿ ಕರ್ಣಕ್ಕೆ
ಬಂದಂತೆ ಆಯಿತು ।

ಮಾಯಿಕಾರನಿಗೆ[29] ಸ್ವಾಮಿ
ಏನೇಳುತಾನೆ ಕನಸಿನಲ್ಲಿ ।
ಆಲೆಯಗೌಡನೆ ಬ್ಯಾಡ ಕಣೊ ।
ನಿನಗೆ ಸಾದ್ಯವಾಗೋದೆ ಇಲ್ಲ ।

ನನಿಗೆ ಲಗ್ನ ಮಾಡೋದು ।
ಆಗ ಆಲೆಯಗೌಡನು ಏನೆಂದು ।
ಏಳುತಾನೆ । ನೀನು ವರವನು
ಕೊಟ್ಟರೆ ಇರಲಯ್ಯ ಸ್ವಾಮಿ ।

ನೀನು ವರವನು ಕೊಟ್ಟರೆ ನಾನು ।
ನಾನು ಲಗು[30]ನಾವ ಮಾಡೋದೆ
ನಿಜವಯ್ಯ ಲಗ್ನಾವಾ । ನಾನೊಪ್ಪಿದ
ಕಡೆ ನೀ ತರಬೇಕಯ್ಯ ।

ಆವಾಗ ಕೇಳಯ್ಯ ಆಲೇ
ಗೌಡಾನೆ । ಏಳು ಅಂತಸ್ತಿನ
ಉಪ್ಪರಿಗೆ ಮ್ಯಾಲೆ
ತೂಗೊಮಂಚದ ಮ್ಯಾಲೆ ತಾಯಿ ಸಿನ್ನಮ್ಮ ।

ಅಂತ ಅವ್ಳೆ ಆವ್ಳು ಸತ್ಯ
ವಂತಾಳು । ಅವ್ಳು ಪತಿವ್ರತೆ
ಕಾಣಯ್ಯ ಆಲೇಗೌಡ ।
ಅವಳ್ನ ತಂದರೆ ಆಗುತೀನಯ್ಯ ।

ಇಲ್ಲದಿದ್ರೆ ನಾನು ಆಗೋದಿಲ್ಲ ।
ಈಗ ಆಲೇಗೌಡ ನೀನು ।
ಯಾವ ತರದಲಿ ಓಗುತೀಯೋ ।
ನೀನು ಏಳಿಕೊಟ್ಟರೆ ನಿನ್ನೇಳಿಕೆಯಂತೆ ।
ನಡೀತೀನಿ ಸ್ವಾಮಿ ಕೇಳೋ ।

ಆಗ ಆಲೇಗೌಡನೇ ಕೇಳೋ ।
ದಟ್ಟಿ ಪಂಚೇನೆ ಉಡಲೇಬೇಕು ।
ಸಣ್ಣಂಚಿನ ಪಟ್ಟೆ ಅದಕಿರಬೇಕು ।
ಬಿಳಿಯ ಪಾಗನೆ[31] ಸುತ್ತಾಬೇಕು ।

ಎಗಲಮ್ಯಾಲೆ ಕರಿಯಕಂಬ್ಳಿ
ಆಕಬೇಕು[32] । ನಿನ್ನ ಎಂಡ್ತೀಗೆ
ಬಿಳೆ ಪತ್ಲವ[33] ಉಡಿಸಲೇಬೇಕು ।
ಕಂಚಿನ ಕಡಗ ಆಕಲೇಬೇಕು ।

ತಲೆಮ್ಯಾಲೆ ಮುತ್ತಿನ ಕರಗಾನೇ
ಒತ್ತಿರಬೇಕು । ಆಗ ಪಟ್ಟಣದ
ಮುಂದಕೆ । ಅರಮನೆಯ ಮುಂದಾಕೆ ।
ಓಗಿ ಬಾಕ್ಲಲಲ್ಲಿ[34] ನಿಂತರು ಒಳಿಕೋಗ್ಲಿಲ್ಲ ।

ಯಾರಯ್ಯ ಬಾಕ್ಲಲಲಿ
ನಿಂತಿರೋರು । ಎಂದು ಕೇಳ್ದನು
ದೊಡ್ಡ ಸಿನ್ನೇಗೌಡನೂ ।
ಎಷ್ಟೋ ವತ್ತಿಗೆ ಮಾತಾಡಿದರು ।

ಇಂಥ ಊರು ಸ್ವಾಮಿ ನಮ್ಮದು ।
ಸಾಯಂಕಾಲವಾಯ್ತು
ಬಯಪಟ್ಟು ಬಂದೋ ।
ಒಳಕ್ಕೆ ಕರಕಂಡ್ರು ಸಿನ್ನೇಗೌಡ್ರು ।

ಕರಕಂಡ ಕಾಲದಲ್ಲಿ ಅಡಿ
ಗೇನೆ ಆಯ್ತು । ಅವರಿಗೂ
ನೀರು ಕೊಡಿ ಎಂದಾನು
ದೊಡ್ಡಸಿನ್ನೇಗೌಡನೂ ಎಣ್ತಿಗೇ[35] ।

ಊಟ್ವಾದ ನಂತರ ಸ್ವಾಮಿ
ಜ್ಞಾನವ ಕೊಟ್ಟ । ಸ್ವಾಮಿ
ಮಾತಾನೆ ಅವರಿಗೆ ಕೊಟ್ಟ ।
ಆಗ ಸಿನ್ನೇಗೌಡ ಅವ್ರ ಕೇಳ್ತಾನೆ ।

ಯಾವೂರಿಗೆ ಓಗ್ಬೇಕು
ನೀವು । ಏನು ವಿಸಾರ[36]
ಎಂದು । ದೊಡ್ಡಸಿನ್ನೇಗೌಡ
ಕೇಳ್ದ ಆಲೇಗೌಡ್ನ

ಆಲೇಗೌಡಾನು ಏಳುತಾನೆ
ದೊಡ್ಡಸಿನ್ನೇಗೌಡನ ಕೈಲಿ ।
ಸ್ವಾಮಿ ಒಂದು ಎಣ್ಣು[37]ಬೇಕು
ಯಾರೋ ಅಲ್ಲಿ ಬಾಕೀಲೊಳಗೆ

ನೂಕಿರೋ ತಳ್ಳಿರೊ ಇವ್ನ
ಆಸುಗೆ[38] । ಯಾವ ಊರೋ
ಯಾವ ದೇಸವೋ
ಕುಂತ್ಕಣಾ[39]ಕೆ ತಾವು ಕೊಟ್ರೆ ।

ಇವನಿಗೆ ಜಾಗವ ಕೊಡೋ
ವತ್ತೀಗೆ । ಎಣ್ಣೀಗೆ
ಬಾಯಾಕಿದನೂ ಇವನು । ನಮ್ಮ
ಎದುರಿಗೆ ಮಾತನಾಡ್ದೋರೆ ಇಲ್ಲಾ

ಅಲ್ಲಿ ಕೂತಿದ್ದ ಸಭ್ಯೆಸ್ಥ
ರೆಲ್ಲಾರು । ಆಹಾ ಇರ್ಲಿ ಇರ್ಲಿ
ಎಂದ್ರೊ । ನೀನ್ಯಾಕೆ
ಕೋಪಾನ ಮಾಡ್ತೀಯ ಗೌಡಾ ।

ರುಣಾನುಬಂದ ಇದ್ರೆ
ಯಾರು । ತಪ್ಸಕೆ ಆಗೋ
ದಿಲ್ಲಪ್ಪ । ಆಗ ಏನೆಂದು
ಏಳ್ತಾನೆ ದೊಡಸಿನ್ನೇಗೌಡಾ ।

ಆಗ ತಮ್ಮದೀರ ಕರೆಸು
ತಾನೆ । ಏನ್ರಯ್ಯ ಸಿಕಸಿನ್ನ
ಮರಿಬಿಡ್ದ ಮಕ್ರಿಗಾಲು ಸಿನ್ನಾ ।
ಎಣ್ಣೀಗೆ ಬಂದವ್ರೆ ಏನೇಳ್ತೀರಾ ।

ಸಿನ್ನಮ್ಮನ ಕೇಳುತಾರೆ ಏನೇಳ್ತಿರಾ ।
ನಮ್ಮನ್ನ ಏನಂತ ಕೇಳ್ತೀರಣ್ಣಯ್ಯ ।
ನೀವು ಕೊಟ್ರೆ ಆಗುಬೌದು । ನಮ್ಗೆ
ಸಂತೋಸವು ಎಂದ್ರು ತಮ್ಮದೀರು ।

ಏನಯ್ಯ ಆಲೇಗೌಡನೇ
ಈಗ । ಸಿಕಸಿನ್ನಮ್ನ ಕೊಡು
ತೀನೆಂದು । ಆಗ ಆಲೇಗೌಡನು
ಬಾಳ ಯೋಸನೆ[40] ಮಾಡ್ತಾನೆ ।

ಸ್ವಾಮಿ ಅವ್ನ ಬೆನ್ನಿಂದೆ
ಮಾತಾಡುತಾನೆ । ಆಗ ಸ್ವಾಮಿ
ನೀನು ಬ್ಯದರು[41] ಬ್ಯಾಡವೋ ।
ಬೆಚ್ಚು ಬ್ಯಾಡವೋ ಆಲೇಗೌಡ ।

ಏಳು ಅಂತಸ್ತಿನ ಒಳಗೆ ।
ಇರೋ ಸಿನ್ನಮ್ಮನ ಕೊಟ್ಟರೆ ।
ನಾವು ತಕ್ಕೊಂಡೋಗಿ ಲಗ್ನವ
ಮಾಡ್ಕೋತೀವೆಂದು ಏಳ್ತಾನೆ ।

ಇದು ಸಿಕಮಗ ನಮ್ಮ
ಬದುಕೀಗೆ ತಡೆಯ
ಬಲ್ಲುದೇನು । ಎಂದ
ಆಲೇಗೌಡ ಸಿನ್ನೇಗೌಡ್ಗೆ

ದೊಡಸಿನ್ನೇಗೌಡ್ಗೆ ಕ್ವಾಪವೆ
ಬಂತು । ಕುಂತಿದ್ದ ಜನರು
ಏನೆಂದು ಏಳ್ತಾರೆ । ಅಯ್ಯೋ
ಹುಚ್ಚೋ ಬ್ರಾಂತೋ ಗೌಡ ನಿಂಗೇ

ಅವ್ರೀಗೆ 42 ಬೇಕಾದ್ದು ಎಣ್ಣಾ ಕೊಡೋ
ದೊಡಸಿನ್ನೇಗೌಡನು ಆಗಲಿ
ಎಂದ । ಯಾವಾಗ ಲಗುನವ 43
ಮಾಡ್ಬೇಕು ಆಲೇಗೌಡ ।

ಆಗಲೆ ಏಳುತಾನೆ ಆಲೇಗೌಡ ।
ಒಂದು ವಾರದ ಲಗ್ನವು
ಆಗಬೇಕೆಂದು । ಆಗಲಿ
ಎಂದಾನು ದೊಡ್ಡಸಿನ್ನೇಗೌಡ ।

ಮೊದ್ಲು ಉಟ್ಟಿದ 44 ಮಗುವನ್ನ ।
ನನ್ನ ಮನೆ ಮುಂದೆ
ಲಗ್ನವ ಮಾಡಬೇಕು
ಎಂದೇಳುತಾನೆ ಆಲೇಗೌಡ್ಗೆ ।

ಒಪ್ಪಿಕಂಡನಪ್ಪ ಆಲೇ
ಗೌಡನ ಮಾತಿಗೆ । ಇಂಥಾ
ದಿವ್ಸ 45 ದೊಳಗಾಗಿ ಗಂಡನ್ನೆ
ಕರಕೊಂಡು ಬರಬೇಕು ।

ಆಲೇಗೌಡನು ಯೋಸನೆ 46
ಮಾಡುತಾನೆ । ಆ ಕಾಲದಲ್ಲಿ
ಸತ್ಯ ಪುರುಷನು ಏಳುತಾನೆ
ನಾನೊಬ್ಬ ನೀನು ನಿಮ್ಮೆಂಗ್ಸ್ರು ಮೂವರೇ ।

ಓಗಾನ ನಡಿಯಯ್ಯ
ಎಂದಾನು ಸ್ವಾಮಿ । ಪಟ್ಣವೇ
ಸಾರ್ಸಿದರು । ಕೊಟ್ಣವೇ ಕುಟ್ಟಿಸಿದರು ।
ಚಪ್ಪರ ಆಕಿದರು ಅರಮನೆ ಮುಂದೆ ।

ಗಾಳಿದೇವ್ರು ಬಂದು ದೂಳನ್ನ
ಗುಡಿಸಿದ್ನು । ದೇವೇಂದ್ರ
ಬಂದು ಚಳೇವು [47] ಕೊಟ್ವಾನು ।
ದೇವಿ ಸಿನ್ನಮ್ಮನಿಗೆ ಅರಿಸಿನ ಅಚ್ಚಿದರು ।

ಸಾವ್ರಾರು ಜನ ಬಂದು ಸೇರ
ವರೆ । ದೊಡಸಿನ್ನೇಗೌಡ್ನ
ಮನೆ ಮುಂದೇ । ಆ ಕಾಲದಲ್ಲಿ
ವರಟರು [48] ಗಂಡು ಕರಕಂಡು ಬರಾಕೆ ।

ಆಗ ಆಲೆಯ ಗೌಡನು
ಯೋಸನೆಯ ಮಾಡುತಾನೇ
ನೂರು ಜನ ಅಳತೇನ ಕೊಟ್ಟೆನೋ
ಸಿವ್ನೆ । ಯಾರನ್ನ ಕರಕಂಡು ಓಗಲಯ್ಯ ।

ಸ್ವಾಮಿ ಕೆಂಪನುಮಲ್ಲೇಗೌಡನು
ಏಳುತಾನೇ । ಯಾಕಯ್ಯ
ಆಲೆಗೌಡ ಯೋಸಿಸುತ್ತೀಯಾ ।
ನಾನು ನಿನ್ನ ಬಲಬುಜವಾಗಿದ್ದೀನಯ್ಯಾ ।

ಅರಮನೆಗೋದಾರು ದೊಡ್ಡ
ಸಿನ್ನೇಗೌಡ್ನ ಪಟ್ಟಣಕೆ ।
ಓದಂತ ಕಾಲ್ದಲ್ಲಿ ದೊಡ್ಡ ಸಿನ್ನೇ
ಗೌಡಾನು ಏನೆಂದು ಏಳುತಾನೆ ।

ಆ ಸುದ್ದಿ ಕೇಳಿ ವಾದ್ಯವ
ಮಾಡ್ಸಿಕೊಂಡು । ಓದಾರು ಊರ
ಮುಂದಕ್ಕೆ । ಗಂಡು ಕರಕಂಡು
ಬರುವಂತ ಕಾಲದಲ್ಲಿ ।

ನೋಡಿದರು ನೂರು ಜನಳತೆ
ಕೊಟ್ಟಂತ ಕಾಲದಲ್ಲಿ ।
ಮೂವ್ಹೋರೆ[49] ಬಂದು ಕುಳಿತವ್ರೆ ।
ಆಗ ದೊಡ್ಡಸಿನ್ನೇಗೌಡ ರವರುದ್ರ [50] ನಾದ ।

ಏನೋ ಆಲೇಗೌಡ ನೂರು
ಜನಳತೆ ಕೊಟ್ಟು ಮೂವರೇ
ಕುಂತಿವ್ರಿ । ಎಂದು ಕೋಪ
ಗೊಳ್ಳುತ್ತಾನೆ ದೊಡಸಿನ್ನೇಗೌಡ ।

ಇಂದಕ್ಕೆ ವಾಪಸ್ಸು ವರಟರು ।
ಯಾವ ದೇಸದವನೋ ಇವನು ।
ಎಂತ ಮೋಸವ ಮಾಡಿದನೆಂದು ।
ಇವ್ನ ಮಕ ದರುಸನ ಮಾಡಲ್ಲವೆಂದು ।

ಅವ್ನು ಮಾಡಿದ್ದೇ ಬೇಕಾಯ್ತು
ನಮೀಗೆ । ಜನರ ಅಪವಾದ
ಒತ್ತುಕೊಂಡೆವಲ್ಲಾ । ಆದರೂ
ಆಕೊಳ್ಳಿ ಅವರು ಇಲ್ಲೇ ಇರಲಿ ।

ಬಂದ ಜನಕೆ ಅನ್ನ ಆಕೀರಯ್ಯ ।
ಎಂದಾನು ದೊಡ್ಡಸಿನ್ನೇ
ಗೌಡನು । ಆಲು ಪಂಚಾಮೃತ
ಬೇಕಾದ್ದೇ ಮಾಡ್ಸಿದ್ರು [51]।

ಆಗ ಆಲೇಗೌಡನು ಸಿವ
ಸಿಂತೆ ಮಾಡ್ತಾನೆ । ಕಾಡ್ನಲ್ಲಿ
ಕೂಕಂಡು ಏನೆಂದು
ಬೇಡ್ತಾನೆ ಸ್ವಾಮಿನ ನೆನೆದು ।

ನನಗೆ ದಾರಿ ತೋರಿಸಿ
ಕಾಡುಪಾಲು ಮಾಡಿದ ಎಂದು ।
ಆಲೆಯುಗೌಡಾನೆ ಕೇಳಯ್ಯ
ನೀನು । ಎದರಬ್ಯಾಡ ಬೆಚ್ಚಬ್ಯಾಡ ।

ಅವ್ರು ಮಾಡೋದೆಲ್ಲಾ ಮಾಡಿ
ಕೊಳ್ಳಿ । ದೊಡ್ಡಸಿನ್ನೇಗೌಡನು
ಎಲೆಯ ಆಕಿ ಊಟಿಕ್ಕಿ
ಎಂದು ಆಡ್ರನೆ (ಆಜ್ಞೆ) ಮಾಡವ್ನೆ।

ಅಡಿಗಿ ರೂಮಿಗೆ ಓಗಿ ಕೈ
ಆಕಿದರು ಸ್ವಾಮಿ । ಕೈ
ಆಕ್ದ ಚಣ[52] ಮಾತ್ರದಲ್ಲಿ ಸ್ವಾಮಿ
ನಿಂತ್ಕಂಡ ಅಡ್ಗೋಳ ದೊಡಸಿನ್ನೇಗೌಡ್ಗೆ ।

ಆವಾಗ ದೊಡಸಿನ್ನೇಗೌಡ್ಗೆ ।
ಅವಕಾಸ[53] ಕೊಡ್ದಂಗೆ ಸ್ವಾಮಿ ।
ಅಡ್ಡಗೋಳ ಪ್ರತ್ಯಕ್ಷ[54] ವಾದಾನೋ ।
ಪ್ರತ್ಯಕ್ಸವಾದ ಚಣದಲ್ಲಿ ಆಲೇಗೌಡ್ಗೆ ।

ಏನೆಂದು ಏಳ್ತಾನೆಂದ್ರೇ ।
ಆಲೇಗೌಡ್ನೇ ಕೇಳಯ್ಯ ।
ನಿಂಗೀಗ ಮೂರು ಮಾತೈತೆ ।
ಏಳ್ತೀನಿ ............................... ।

ಆಗ ಸ್ವಾಮಿ ಏಳ್ತಾನೆ ಆಲೆ
ಗೌಡ್ಗೆ ಅವ್ನು ಮಾಡ್ದ ಅಡಿಗೆ
ಊಟದಲ್ಲೋ ನಿನ್ನ ಇಂದೆ
ಮೂವರನ್ನ ಕಳ್ಸಿ ಕೊಡ್ತೀನಿ ।

ಆ ಮೂವರ್ಗೆ ತಣಿಸಿ ಕಳಿಸಲೀ ।
ಅವ್ನು ಮಾಡಿರೋ ಊಟಾನಾ ।
ಆಗ ಏಳಟ್ಟಿ ಸಾಸೇದ ಮಾರಿ[55] ।
ಕರಿಯಮ್ಮ[56] ಎಂಬೋ ತಾಯಿ ।

ಸತ್ಯವಂತೇ ನೀವು । ಪುರುಳಳ್ಳಿ[57]
ಬೂತ ಎಂಬಂತೋನು ।
ಸಾಸವಂತ[58] ಜಗಕ್ಕೆ । ನೀ ಮೂವರೂ
ಓಗಿ ದೊಡಸಿನ್ನೆಗೌಡಾನ ಮನ್ಗೆ ।

ಅಲ್ಲಿ ಮಾಡಿರೊ ಅಡಿಗೂಟ
ಗಳನ್ನು ಬಕ್ಸನೇ[59] ಮಾಡಿ
ಬರಬೇಕಂತ ಏಳಿ
ಅಗಣೇ[60] ಕೊಟ್ಟನು ಸ್ವಾಮಿ ।

ಅದೂ ಅಲ್ಲದೆ ಅವ್ನ ಪಟ್ಣದ
ಗಿರುವ ದಿಣಸು[61]ವನೇ[62]ರೆ
ಗಳನು । ಅವ್ರು ತರ್ಸಿಕಂಡು
ಅಡಿಗೆಯಾ ಮಾಡಿಸಿ ।

ಪುಣಾ[63] ನೀವು ಅಡಿಗೆಯ
ಮಾಡಿಸಿ ಊಟ ಮಾಡಿಬಿಡ
ಬೇಕು । ನಂಗೆ ಅವಮಾನ
ಮಾಡ್ದಂಗೆ ನೀವು ಅವನಿಗೆ ಮಾಡಬೇಕು ।

ಈಗ ಜನರು ಬಂದು ನೋಡೊ
ವಾಗ್ಗೇ । ಅದೇ ನೂರು ಜನ
ಕುಂತವ್ರೆ । ಆವಾಗ ಜನರು
ಏನೆಂದು ಏಳ್ತಾರೆ........

ಅದೇ ನೂರು ಜನ ಕುಂತವ್ರೆ
ಗಂಡಿನ ಜತೆಯಲ್ಲಿ । ಪುಣ್ಯಾ [64]
ಇಂದಾಕೆ ಅದೇ ಕಳ್ಸ ಕನ್ನಡಿ
ತಕ್ಕಂಡು ವಾದ್ಯವ ಮಾಡ್ಸಿಕಂಡು ಬಂದವ್ರೆ ।

ಕರ್ಕಂಡು ಓದಾರು ಪಟ್ಣದ ಮುಂದ್ಕೆ ।
ಗಂಡನ್ನ ಮನೆ ಒಳ್ಗೆ ಕುಂಡ್ರಿಸಿದರು
ಊಟಕ್ಕೆ ನೂರು ಜನ ಕುಂಡ್ರಿಸಿದಾಗ
ಎಲ್ರೂ ಮಾಯ್ವಾಗಿ[65] ಆರು ಜನ ಅವ್ರೆ ।

ಒಂದು ರೂಮಿಗೆ ನೂಕಿಬಿಟ್ಟು ।
ಕೊಡಿ ನೀರ ಎಂದ ದೊಡ್ಡಸಿನ್ನೇ
ಗೌಡ । ನೋಡಿ ಸವಾಮಿ ಏನು
ಮಾಯವ ಮಾಡ್ದ ದೊಡ್ಡಸಿನ್ನೇಗೌಡ್ಗೆ ।

ಮಾಡಿದ ಅಡಿಗೆಯ ಏಳಟ್ಟಿ
ಸಾಸೆದುಮಾರಿ, ಬೇವ್ನಳ್ಳಿ
ಕರಿಯಮ್ಮ ಪುರ್ಲಳ್ಳಿ ಭೂತ
ಸತ್ಯವಂತ ಜಗಕೆ ಮೂವರು ಸೇರಿ ।

ಅವ್ರೂ ಮಾಡ್ಸಿದ ಅಡಿಗೂಟ
ಗಳ್ನ 66 ಸೇವ್ನೆ 67 ಮಾಡಿದರೂ ।
ಬಂದ ಪ್ರಜೆಗಳು ಅಂಗೇ ಕೂತವ್ರೆ ।
ಊಟ ಉಪಚಾರ ಏನೂ ಇಲ್ಲ ।

ಅವ್ನು ಮಾಡ್ಸಿದ ಅಡ್ಗೆ ಅವ್ರ ।
ಮೂವರಿಗೆ ಸಾಲ್ದಾಂಗಾಯ್ತು ।
ಪಟ್ಟಣದೊಳಗಿದ್ದ ದಿನಸಾನೆಲ್ಲಾ ।
ತರ್ಸಿ ಅದನ್ನೆಲ್ಲಾ ಬೇಸಾಕವ್ರೇ ।

ಎಟಕಲಿಲ್ಲವೋ ಸ್ವಾಮಿ ।
ಆ ಮೂವರಿಗೆ । ಆಗ
ಅವರೊಳೊಬ್ಬ ಯಜಮಾನಾನು ।
ಇದೇನು ಸೋಜಿಗವೆಂದೇಳೂತಾನೆ ।

ಬನ್ನಿರಿ ಎಂದು ಅವ್ರು
ಮಾತಾಡಿಕೊಂಡು ಕರಿಯ
ಕಂಬ್ಳಿ ಗದ್ದುಗೆ68 ಮಾಡುತಾರೆ ।
ಕರಿಯ ಕಂಬ್ಳಿ ಗದ್ದುಗೆ ಮಾಡಿ ।

ಮಾ ಮಂ69ಗಳಾರತಿ ಮಾಡಿ ।
ದೀರ್ಗದಂಡ ನಮಸ್ಕಾರ
ಮಾಡಿ । ಆಗ ದೊಡ್ಡಸಿನ್ನೇಗೌಡ್ರು ।
ನಮ್ಮಿಂದ ಸರ್ವ ತಪ್ಪಾಯಿತೆಂದ ।

ನಿನ್ನ ಮಯಿಮೆಯ್ತು 70 ತಿಳಿಯ
ಲಿಲ್ಲ । ನಮ್ಮ ತಪ್ಗಗಳ
ಮನ್ನಿಸಬೇಕು । ನಮ್ಮ ತಪ್ಗಗಳು
ಯಾವುದಿದ್ರೂ ನಿನ್ನೊಟ್ಟೀಗಿಟ್ಕೋ ।

ಎಂತ ಬೇಡಿಕೊಳ್ಳುತಾನೆ ।
ದೊಡಸಿನ್ನೇಗೌಡನು ಆಲೇ
ಗೌಡನ್ನ ನೋಡಿ । ಜನರು
ಕೂತಿದ್ದ ಸ್ಥಾನದಲ್ಲಿ ನೋಡಿ ।

ನೋಡಿ ಸವಾಮಿ ಮಾಯಾ
ಕಾರನ್ನ । ಯಥಾಪ್ರಕಾರದ
ಅಡಿಗೆ ಅದರೊಳಗಾಯಿತು ।
ಬಂದ ಪ್ರಜೆಗಳಿಗೆ ಊಟ ಆಕವ್ರೆ [71] ।

ಆಲು ಪಂಚಾಮೃತ
ಬೇಕಾದ್ದೇ ಮಾಡ್ಸವ್ರೆ । ಆಗ
ಆಲೇಗೌಡನು ಸಿವಸಿಂತೆ
ಮಾಡುತಾನೆ ।......।

ಊಟವಾದ್ಮೇಲೆ ಸಾಸ್ತ್ರ [72]
ಸೂಸ್ರಗಳ [73] ಮಾಡುತಾರೇ ।
ಅದರ ಬೆಳಿಗ್ಗೆ ಮೂರ್ತವ [74]
ಮಾಡಿ ಬಿಡ್ತಾರೆ ।

ನಾಳೆ ಬೆಳಿಗ್ಗೆ ಎಣ್ಣು ಗಂಡು
ಓಗಲೇ ಬೇಕು । ಓಗೋದಕ್ಕೆ
ನೋಡಿ ಸ್ವಾಮಿ । ಅಲ್ಲೇಗೌಡ್ನ
ಮನೆಗೆ ಓಗಬೇಕು । ಎಣ್ಣು ಗಂಡು ।

ಊರೊಳಗೆ ಅವನ ಅರಮನೆ
ಇರೋದು । ಊರ
ಒಳೀಕೆ ಓಗೋಂಗಿಲ್ಲ ।
ಸ್ವಾಮಿ ಆಲೇಗೌಡಾಗೆ ಏಳುತಾನೆ ।

ಊರ ಈಸೆಗಡೆ ಒಂದುಲ್ಲು
ಮನೆ ಕಟ್ಟಿಸಬೇಕು ।
ಕೇಳಯ್ಯ ಆಲೇಗೌಡನೇ
ನೀನು । ಯೋಸನೆ ಮಾಡಬ್ಯಾಡ ।


ಒಂದು ಜಾವದಲ್ಲಿ ನೀನು
ಉಲ್ಲು ತರಿಸಿ ಮನೆ ಮಾಡಿಸಯ್ಯ ।
ಆಲೇಗೌಡ ಎಲ್ಲಾ ಪೂರೈಸ್ದ ।
ನಾಳೆ ಎಣ್ಣು ಗಂಡು ಬಂದ್ರು 75

ಆ ರಾತ್ರಿ ಅಲ್ಲೇ ಜನರು ನಿಂತಾರು ।
ಆಗ ಸಾಸ್ತ್ರ ಸೂಸ್ರವ ಮಾಡೀ ಕಂಡ್ರು ।
ಆ ಬೆಳಿಗ್ಗೆ ಅವರೂರಿಗೆ ಅವರನ್ನ ।
ಕಳಿಸಿಕೊಟ್ಟ ಆಲೇಗೌಡ ।

❑ ❑ ❑

---

1. ಹೆತ್ತಯ್ಯ 2. ಹೆಸರಿಗೆ 3. ದೇಶಕ್ಕೆ 4. ದೇಶ 5. ಮಂಚ 6. ಸತ್ಯವಂತ 7. ಪುರುಷ 8. ದನಗಳು 9. ಚೇಳು 10. ಮನೆಗಾರ 11. ಸಾಹಸ 12. ಹೊನ್ನಹಟ್ಟಿ 13. ಚಿಂತೆ 14. ಯೋಚನೆ 15. ಶಿವ 16. ಹೋದವು 17. ಹೊಟ್ಟೆ 18. ತೆಗೆದುಕೊಂಡು 19. ಹೆದರು 20. ಹೆಚ್ಚಿಸು 21. ವರ್ಷ 22. ಹುಟ್ಟಿದವು 23. ಗುಡ್ಡದ ಹೆಸರು 24. ಹಗಲು 25. ಹೆಂಡತಿ 26. ಹೆಂಡತಿ 27. ಯೋಚನೆ 28. ಹೆಣ್ಣು 29. ಆಲೆಗೌಡನಿಗೆ 30. ಲಗ್ನ 31. ರುಮಾಲು 32. ಹಾಕಬೇಕು 33. ಸೀರೆ 34. ಬಾಗಿಲಲ್ಲಿ 35. ಹೆಂಡತಿ 36. ವಿಚಾರ 37. ಹೆಣ್ಣು 38. ಆಚೆಗೆ 39. ಕುಳಿತುಕೊಳ್ಳುವುದಕ್ಕೆ 40. ಯೋಚನೆ 41. ಬೆದರು 42. ಅವರಿಗೆ 43. ಲಗ್ನ 44. ಹುಟ್ಟಿದ 45. ದಿವಸ 46. ಯೋಚನೆ 47. ಚಿಮುಕಿಸು 48. ಹೊರಟಿರು 49. ಮೂರುಜನ 50. ವಿಪರೀತ ಕೋಪ 51. ಮಾಡಿಸಿದ್ದರು 52. ಕ್ಷಣ 53. ಅವಕಾಶ 54. ಪ್ರತ್ಯಕ್ಷ 55. ಒಬ್ಬ ಕ್ರೂರ ದೇವತೆ 56. ಒಬ್ಬ ಮಾರಿ 57. ಒಂದು ಭೂತ 58. ಸಾಹಸ 59. ಭಕ್ಷಣೆ 60. ಆಜ್ಞೆ 61. ದಿನಸಿ 62. ವಗೈರೆ 63, 64. ಪುನಃ 65. ಮಾಯವಾಗಿ 66. ಅಡಿಗೆ, ಊಟ 67. ಸೇವನೆ 68. ಆಸನ 69. ಮಹಾ 70. ಮಹಿಮೆ 71. ಹಾಕಿದ್ದಾರೆ 72. ಶಾಸ್ತ್ರ 73. ಸೂತ್ರ 74. ಮುಹೂರ್ತ 75. ಬಂದರು



## ೬.೨ ಜುಂಜಪ್ಪನ ಕತೆ

ಆಕಾಸದಗಲ ಹಸಿಯಾನೆ[14] ಬರದು ಲೋಕಾ
ದಗಲ ಚಪ್ಪರನಾಕಿ ಏಕಾದೃಷ್ಟಿ ಮದು
ವೇನೆ ಮಾಡಿಕಂಡು ಹೊನ್ನೆಟ್ಟಾಲೆಗೌಡ
ಕರಕೊಂಡು ಬರುತಾನೋ ।

ಕಂಬೇರ ಚಿನ್ನಮ್ಮ ಹೊನ್ನೆಟ್ಟೇಲೆ ಗೌಡನ ಮನಿಗೆ ಬರುವಾಗ ।
ಅವರ ಗೌರಚಂದುರದ ಗನ[15]ಗರತಿ ಮಾರೆಮ್ಮ ಬಂದು ತಡದು ॥

ಹೋತೀನಿ ಕಣಮ್ಮ ಎಂದೆ ಹೇಳುತಾಳೆ
ಕಂಬೇರ ಚಿನ್ನಮ್ಮ.......
[ಮಕ್ಕಳ ಫಲಾ ಕೊಡೂಂತ ಕೇಳತಾಳೆ]

ಕಂಬೇರ ಚಿನ್ನಮ್ಮಾ ಹೊನ್ನೆಟ್ಟಾಲೆಗೌಡನ ಮನಿಯಾಗೆ
ಹನ್ನೆರಡೊರುಸ[16] ನೀನಿರಬೇಕು । ಬ್ಯಾಡಕಣೇ ಚಿನ್ನಮ್ಮ
ನಿನಗೆ ಮಕ್ಕಳ ಫಲವೂ ।
ಹನ್ನೆರಡೊರುಸ ಹೊನ್ನೆಟ್ಟಾಲೆಗೌಡನ ಮನಿಯಾಗೆ
ನಾನಿದ್ದೇನು । ಕೊಡಬೇಕು ಗೌರ ಚಂದುರದ
ಗನಗರತಿ ಮಕ್ಕಳ ಫಲವ ।

ದ್ಯಾವದಾರೆ ಸೊಪ್ಪ ಮಡಲುಕಟ್ಟಿ ಕುಯಿಬೇಕು ಚಿನ್ನಮ್ಮ
ಬ್ಯಾಡ ಕಣೆ ಚಿನ್ನಮ್ಮ ನಿನಗೆ ಮಕ್ಕಳ ಫಲವು ।

ದ್ಯಾವದಾರೆ ಸೊಪ್ಪ ಮಡುಲ ಕಟ್ಟಿಕೊಂಡೆ ಕುಯ್ದೇ–
ನು ಕೊಡಬೇಕು ಗೌರಚಂದುರದ ಗನಗರತಿ
ಮಕ್ಕಳ ಫಲವ ।

ನಿನ್ನೊಟ್ಟೆ ವಳಗೆ ಜುಂಜಪ್ಪ ನುಟ್ಟುತಾನೆ[17] ।
ಬ್ಯಾಡಕಣೇ ಚಿನ್ನಮ್ಮ ನಿನಗೆ ಮಕ್ಕಳ ಫಲವು ।
ನಾಗರಾವು ಸಿಂಬೆ ಸುತ್ತುಸುತಾನೆ
ಜಲ್ದೇ[18]ಗೆ ನೀರ ವೊರಸು[19]ತಾನೆ

---

ಹಾಡಿದವರು : **ಮಾಸಯ್ಯ**, ಕಾಡುಗೊಲ್ಲರು, ಬುಗಡಿಹಳ್ಳಿ ಗೊಲ್ಲರಹಟ್ಟಿ, ಸರಸೀಪುರ ಅಂಚೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾ. ಜಿಲ್ಲೆ.
ಸಂಗ್ರಹ : **ಸಿದ್ಧಗಂಗಯ್ಯ ಕಂಬಾಳು**
ಕೃತಿ : ಮಾತಾಡು ಮಲ್ಲಿಗೆ
ಪ್ರಕಟಣೆ : ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರ. 1973

ನಾಗರಾವಿನ ಸಿಂಬೆ ಸುತ್ತೇನು ಜಲ್ದೇಗೆ ನೀರನೋತ್ತೇನು ।
ಕೊಡಬೇಕು ಗೌರಚಂದುರದ ಗನಗರತಿ ಮಕ್ಕಳ ಫಲವು ।

ಹೊನ್ನೆಟ್ಟಾಲೆಗೌಡನ ಮನೆಯಾಗೆ ಹನ್ನೆರಡು ವರುಸ
ಸೇರಿದ್ಲು । ಹೊನ್ನೆಟ್ಟೇಲೆ ಗೌಡನವು ಏಳು ಹಸಗಳು
ಈದಿರುವವೋ ।
ಏಳು ಕರಗಳ ಹೊಡಕೊಂಡು ಕೆಂಪನುಮಲ್ಲೇಗೌಡ
ಕಾಡಿಗೋಗೋನು । ಕಾಡಿನಗಾವ[20] ಮೇಸಿಕೊಂಡೇ
ಬರುವೋನು ಕೆಂಪನುಮಲ್ಲೇಗೌಡ[21]

ಚೆನ್ನಮ್ಮ ಹೊನ್ನೆಟ್ಟೇಲೆ ಗೌಡುಗುಳ ಮನಿಯಾಗೆ
ರಾಗಿ–ನೆಲ್ಲ ಮಾಡೋಳು । ಆವಾಗ
ಕೆಂಪನುಮಲ್ಲೇಗೌಡ ಏನಯ್ಯ ಹೊನ್ನೆಟ್ಟೇಲೆಗೌಡ
ಗಂಗೊಡಿ[22] ಕೊಡಿಸಬೇಕು ।

ಕುರುಬsರ ಕೇರಿಗೆ ಕರಕೊಂಡೆ ಹೋಗಿ
ಒಂದು ಗೊಂಗಡಿಯ ಕೊಡಿಸ್ಯಾನಂತೆ
ಹೊನ್ನೆಟ್ಟಾಲೆಗೌಡ

ಮನೆಯಾಗೆ ಬಂದು ಉಂಡು ಬಿಟ್ಟು ಕೆಂಪನುಮಲ್ಲೇಗೌಡ ।
ಏಳಾ ಕರುಗಳ ಹೊಡಕೊಂಡು ಕಾಡಿಗೋಗೋನು ಮೇಸಾಕೆ[23] ।
ಕಾಡಿನಾಗೆ ಕೂಕಂಡು ಏನೊಂದ ಯೋಚಣೆ ಮಾಡುತಾನೆ ।
ಕೆಂಪನುಮಲ್ಲೇಗೌಡ ಆರು ಹೆಣ್ಣು ಕರುಗಳಂತೆ
ಒಂದು ಹೋರಿ ಕರುವಂತೇ ।
ಏಳೇಯ ಕರುಗಳ ವಡಕೊಂಡು ಸಿಂಗುರುಮಲೆ ಪತ್ತ[24]
ಹೊನ್ನೆಟ್ಟಾಲೆಗೌಡನ ಹಸಗೂಳು ಮನೇ ಸುತ್ತ
ಬೋರಾಡುತ್ತಾವಂತೆ[25] ।

ಎಲ್ಲಯ್ಯ ಕರುಗಾಳೆ ಬರಲಿಲ್ಲ ನೋಡಿರಂತಾಳ[26] ಕಳಿಸುತಾನೆ ।

ಕರುಗಳು ಇಲ್ಲ ಗೌಡ ಆವಪ್ಪ[27]ನ ಸುಳುವೇ ಇಲ್ಲೋ ।
ಸಾಯಾನುಕಾಲತ್ತಂಕ[28] ಹುಡುಕುವರಂತೆ ।
ಆವಪ್ಪನೂ ಸಿಕಲಿಲ್ಲವಂತೇ ಕರುಗಳು ಸಿಕುಲಿಲ್ಲಾ ।

ಏಳು ಕರುಗಳಾಗೆ ಏಳು ಸಾವುರ ದನಗಳು ಬೆಳೆದಾವಂತೆ ।
ಸಿಂಗೂರುಮಲೆ ಪತ್ತಿನಾಗೆ ಕೆಂಪನುಮಲ್ಲೇಗೌಡ ।

ವೋರಿ ಮಾರಿದ ಹಣವ ಎತ್ತು ಮಾರಿದ ಹಣವೊ ।
ಜೇನಗರಿಗ[29]ಅನುಮಂತನ ಕರಿಸಿ ದನುಗಳಿಗೆಲ್ಲಾ
ಕೊಂಬನೆರಸಿ । ಏಳು ಸಾವುರ ದನವೀಗೆ
ಬರತಿ[30] ಮಾಡಿದನಂತೆ ಇಕ್ಕೇರಿ ನಾಣ್ಯಾವೋ ।

ಏಳು ಸಾವುರ ದನವೀಗೆ ಬರತಿ ಮಾಡಿಬಿಟ್ಟು ಬರುತಾನೆ
ಹೊನ್ನೆಟ್ಟಾಲೆಗೌಡನ ಮನೀಗೆ ।
ಏನಯ್ಯ ಗೌಡ ನನಿಗೆ ಗಿಡವ ಕಡದುಕೊಡು ನಾನು
ಗೂಡ ತಿರುವಿಕೋಬೇಕು ।

ಹಿಂದೆ ಏಳು ಕರುಗಳ ವೊಡಕೊಂಡು
ನೆಲೆಯಿಲ್ಲದಂತೆ ಹೋದೆ ನಿನ್ನೆಂಡಿರ[31]
ಕರಕೊಂಡು ಹೋಗೋ ।

ಹೊನ್ನೆಟ್ಟೇಲೆಗೌಡನ ಗೆಣೆಕಾರ್ರ ಕೂಟೆ[32]ವೋಗಿ
ಹೇಳುತಾನೆ ಕೆಂಪನುಮಲ್ಲೇಗೌಡ । ನೀವಾದ್ರೂ–
ಹೋಗಿ ಹೊನ್ನೆಟ್ಟಾಲೆಗೌಡನಿಗೆ ಹೇಳ್ರಯ್ಯ–
ಕಳ್ಳೆ ಕಡುಕೊಡಲಿ

ಏನಯ್ಯ ಗೌಡ ನೀನು ಗಿಡವ ಕಡುಕೊಡು ।
ಅವನು ಗೂಡ[33]ತಿರುವಿ[34]ಕೋತಾನಂತೆ ।
ಆವಾಗ ಆಳ[35]ಬಿಟ್ಟು ಹೊನ್ನೆಟ್ಟಾಲೆಗೌಡ
ಕಳ್ಳೆ[36]ಕಡುಕೊಟ್ಟನಂತೆ ।

ಊರ ಮೂಡಲು ದಿಕ್ಕಿನಾಗೆ ಏಳು ಗೂಡ ತಿರುವಿದನಂತೆ
ಕೆಂಪನುಮಲ್ಲೇಗೌಡ ।
ಏಳು ಗೂಡಿನಾಗೆ ಅವನೇ ಕೆಂಪನುಮಲ್ಲೇಗೌಡ ।
ಮೂಡಲು ಗಾಳಿ ಪಡುವಲಕೆ ಬೀಸೋದಂತೆ ।
ಒಂದೇ ಬಗೆಯ ತಂಗುಡಿ[37]ಸವುದೆ[38]ತಂದು
ವೊಗೆ[39]ಹಿಟ್ಟಾಕೋನಂತೆ ಗೂಡಿಗೆ
ಸಿಂಗೂರ ಮಲೆ ಪತ್ತಿನಾಗಿರೋ ಗೂಡಾಗೆ
ವೋಗಿ ಬೀಳಾದಂತೆ ಹೊಗೆ ಇಟ್ಟು[40] ।

ಬೆಳ್ಳನೆ ಬೆಳಕರಿಯೋ ಹೊತ್ತಿಗೆ ಜಮ್ಮನೆ
ಜಮಕಾಯಿಸೋದಂತೆ ದನಗೂಳು

ಆಗ ಕೊಂಬ ತಗುದು ಗುಡ್ಡೆ ಹೊಯ್ದು
ಇಕ್ಕೇರಿ ನಾಣ್ಯವಾಗ ।

ಗೂಡಿನ ಮುಂದೆ ಬೆಟ್ಟ ಬಿದ್ದಂಗೆ ಬೀಳಾದಂತೆ ।
ಹೊನ್ನೆಟ್ಟಾಲೆಗೌಡನ ತಾಕ್ಕೊಂಡದಾಳ[41] ಕಳಿಸಿ

ಹೊನ್ನೆಟ್ಟಾಲೆಗೌಡನ ಒಂದು ಗಾಡಿ ಹೊಡಕಂಡು ಬಂದು
ರಾಮುನ್ನ ಲಚಮನ್ನ–ಕಣಜ ತುಂಬಿಕೊಳಲಿ
ಬರೇಳುದ[42] ।
ಕಣಜ ಕೊಂಡೋಗಿ ಗಾಡ್ಯಾಗೆ[43] ತುಂಬಿ ।
ಆವಾಗ ಬ್ಯಾಗ ಸೌರೀಕರನ್ನ[44]ಕರಿಸಿ ।
ಕೆಂಪನುಮಲ್ಲೇಗೌಡನಿಗೆ ಸೌರ್‍ಯ[45]ಮಾಡಿಸಿ ।
ಆಲಪಂಚಮೃತದಡಿಗೆ ಬ್ಯಾಗ ಮಾಡಿಸಿ
ಹೊನ್ನೆಟ್ಟಾಲೆಗೌಡನು ಕೆಂಪನುಮಲ್ಲೇಗೌಡನು
ಇಬ್ಬರು ಸರಿಬೆರಿಕೆ ಉಂಡು ।
ಸೀರ್‍ಯದ ಸಿಕ್ಕಡಕೆ ದಾರ್‍ಯೇದ ಬಿಳಿಯೆಲೆ ।
ನಾಗಮಂಗಲದ ಕೆನಿಸುಣ್ಣ ಇಬ್ಬರು
ಸರಿಬೆರಕೆ ಮೆಲ್ಲಿ

ಗೂಡೀಗೆ ಹೋತಾನೆ ಕೆಂಪನುಮಲ್ಲೇಗೌಡ ।
ಚಿನ್ನಮ್ಮ ಎಷ್ಟೇ ದಿನವೇ ಇವ್ರ ಮನಿಯಾಗೆ
ರಾಗಿ ನೆಲ್ಲ ಮಾಡಿಕೊಂಡಿರಲಿ ।
ಒಂದು ಬಿಂದೀಗೆ ತಕ್ಕೊಂಡು ಕಲ್ಲ
ಬಾವೀಗೆ ಹೋತಾಳೆ ನೀರ ತರುವೋಕೆ ।
ನಮ್ಮ ತವರುಮನಿ ವೋಯ್ತು ಅವರ
ಗೌರಚಂದುರದ ಗನಗರತಿ ।
ಆವಾಗ ವರವ ಕೊಡುತಾಳಂತೆ
ಕಂಬೇರ ಚಿನ್ನಮ್ಮನಿಗೇ ।

ಆವಾಗ ಬಿಂದಿಗ್ಯಾಗೆ ನೀರಕೊಂಡೋಗಿ
ಹೊನ್ನೆಟ್ಟಾಲೆಗೌಡನ ಮನೆಯಾಗಿಕ್ಕಿ ।
ಅದೇ ರಾಗಿ ನೆಲ್ಲ ಮಾಡೋಳಂತೆ ।
ಕಂಬೇರ ಚಿನ್ನಮ್ಮ ಆವಾಗ ಒಂದು ತಿಂಗಳು
ಎರಡೇ ತಿಂಗಳು ಮೂರನೇ ತಿಂಗಳೀಗೆ ।

ಆಜುಬಾಜು[46]ಹೆಂಗೂಸರುಗಳು ।
ಹೊನ್ನೆಟ್ಟಾಲೆಗೌಡನ ಮನೆಯಾಗೆ ಯಾವೋಳೋ
ಗೊಲ್ಲರೋಳು ಬಂದವಳೆ । ಅವಳು ಬಸುರಾಗ್ಯ
ವಳಂತೆ ।

ಅದು ಹೊನ್ನೆಟ್ಟಾಲೆಗೌಡನ ಕಿವಿಯಾಗೆ ಬಿತ್ತು
ಹೊನ್ನೆಟ್ಟಾಲೆಗೌಡ ಹೋಗಿ ಗೂಡಿನ ತಾಕೆ[47]
ಬಾರಯ್ಯ ಕೆಂಪನುಮಲ್ಲೇಗೌಡ
ನಿನ್ನೆಂಡರುತಾಕೆ[48]ಜನಗೂಳು ಏನೇನೋ
ಹೇಳುತಾರೆ ।
ನಿನ್ನೆಂಡಿರು ಕರಕೊಂಡು ನೀನು ಹೋಗಯ್ಯೋ ।
ಏಳು ಸಾವುರ ದನಗಾಳ ನೋಡಿಕೋಳೋ ।
ಕತ್ತೀಯ ತಕ್ಕಂಡೆ ಬರುತಾನೆ ಕೆಂಪನುಮಲ್ಲೇಗೌಡ
ಹೆಂಡಿರಾನ ಕರಕೊಂಡು ಸಿವಗಂಗಿ[49] ಬೆಟದಂತ
ಬೆಟ್ಟಾಕೆ ಹೋತಾನೆ

ಹನ್ನೆರಡೇ ವರಸ ಊರಾಗೆ ನೀನು ತಂಗಿ ಹ್ವಾದೆ[50]।
ಹನ್ನೆರಡೇ ವರ್ಸ [51] ಗೂಡಿನಾಗೆ ನಾನಿದ್ದೆ ।
ಗಂಡನಿಲ್ಲದ ಬಸುರು ನಿನಗೆಲ್ಲಿ ಬಂತು.... ।
ಎತ್ತಿದ ಕತ್ತಿ ಕಡಿಯಾಕೆ ಕೆಂಪನುಮಲ್ಲೇಗೌಡ ।

ಅವರ ಗೌರಚಂದುರದ ಗನಗರತಿ ಮಾರೆವ್ವ
ಬಂದು । ಕಲ್ಲ ಬಾವೀಗೆ ಬಂದಾಗ ನಾನೇ
ವರವ ಕೊಟ್ಟಿದ್ದೆ । ನಮ್ಮ ತವರುಮನೆಯೇ
ಹೋಯ್ತಂತ[52]ವರವ ಕೊಟ್ಟಿದ್ದೆ ।
ನೀನ್ಯಾಕೋ ಕಡಿಯೋದು ।

ಅಂಗಂದ[53]ಮಾತಿಗೆ ಬಿಟ್ಟು । ಒಂದಾಲದ ಮರದಡಿಗೆ
ಕೂಕಂಡನಂತೇ[54] । ಅದಗಿದನ್ನೊ ವ್ಹೊತ್ತಿಗೆ[55] ಚಿನ್ನಮ್ಮನಿಗೆ
ವಂಬತ್ತು [56] ತಿಂಗಾಳು ತುಂಬೀತಂತೆ ।
ಏನು ಗೌಡುಗಳಿರಾ ನನಗೆ ಸೊಂಟ ವಡೀತಾ[57]ದಂತ
ಹೇಳುತಾಳೆ ಗೌಡನಕೂಟೆ ।

ಕೆಂಪನುಮಲ್ಲೇಗೌಡ ತ್ಯಾಗದೆಲಿಯಾ ತಂದು ।
ಪರದಾನೆ[58] ಕಟ್ಟುತಾನಂತೆ । ಪರದೇ

ಒಳಕ್ಕೇ ಬಿಟ್ಟು ಆಲದ ಮರದಡಿಯೇ
ಕೂಕಂಡನಂತೇ[59] ।

ವೊಟ್ಟೇಗಿರವ ಪಿಂಡನೇ ಮಾತಾಡಿತಂತೆ ।
ಮೂಡಗಡೆಗೆ ಮಕನಾಗಿ[60] ಕೈಮುಕ್ಕೊಂಡು ಕುಕಳಮ್ಮ ।
ಬೆನ್ನಾಗೆ[61] ನಾನು ಒಡಕೊಂಡು ಬರುತೇನಂತ
ಹೇಳತಾದಂತೆ ಪಿಂಡ ।

ಮೂಡಗಡಿಕೆ ಮಕನಾಗಿ ಕೈ ಮುಕ್ಕೊಂಡು[62]
ಕೂಕಂಡಳಂಗೆ । ಬೆನ್ನಾಗೆ ವಡೆದು
ವಸ್ತು[63]ದೂರ ಮಗುವೆ ಕೂಕಂತಂತ[64]।
ಅವಳ ಬಳ್ಳೀಕೆ[65] ಅವಳೆ ತಿಂದು
ಮಗವ ಎತ್ತೀಕಣನಂತ ಹೋದಳಂತೆ ।

ಮುಟ್ಟುಬ್ಯಾಡ ಮುಟ್ಟುಬ್ಯಾಡನ್ನೊದಂತೆ ಮಗವೂ ।
ಏನು ಗೌಡುಗಳಿರಾ ಹೊಟ್ಟೇಗಳ[66] ಪಿಂಡಾನೇ
ಮೂಡುಗಡಿಕೆ ಮಕನಾಗಿ ಕೈಮುಕ್ಕೊಂಡು ಕೂಕ್ಕೋ[67]
ಬೆನ್ನಾಗೆ ಬರ್ತೇನಂತ ಹೇಳೀತು ಮಗುವು ।
ವಸ್ತುದ ಊರ ಕೂಕಂಡದೆ ಎತ್ತಿಕಣನಾಂತ
ವೋದರೆ[68] ಮುಟುಬ್ಯಾಡ ಮುಟುಬ್ಯಾಡಂತಾದೇ ।

ಎಲ್ಲಾನ[69] ಒಂದು ಸಾಸರವ[70] ಕೇಳಿಕಂಡು
ಬರತೇನಂತ ಹೋತಾನೆ ಕೆಂಪನು
ಮಲ್ಲೇಗೌಡ

ಹೆಬ್ಬಾಲದ[71] ಮರದಡಿಯ ಕೊರಮರ ಗಂಗಮ್ಮ
ಎಲ್ಲಿಗಯ್ಯ ಗೌಡ ಹೋತೀಯಂತ ಕೇಳುತಾಳೆ
ಗಂಗಮ್ಮ ।

ನಾನೊಂದು ಸಾಸರವ ಕೇಳಿಕೊಂಡು
ಬರುವಾನಂತ ಹೋತೀನಮ್ಮ ।

ಕೊರಮರ ಗಂಗಮ್ಮ । ನಾನು । ಸಾಸರವೇಳೂತೀನಿ[72]
ಗೌಡ ಮೂರು ದುಡ್ಡಿಕ್ಕಯ್ಯ[73] ಗೌಡ ।

ಕಕ್ಕೇಲೆ[74]ಯಾ ತಂದು ಮೂರು।
ದುಡ್ಡಿಕ್ಕಿದನಂತೆ ।

ಹೇಳುತಾಳೆ ಗಂಗಮ್ಮ ಸಾಸರಗೂಳ ।
ಏನಯ್ಯ ಗೌಡ ನಿನ್ಹೊಟ್ಟೇ ವಳಗೆ ।

ಜುಂಜಪ್ಪನೆಂಬೋ ಮಗುನುಟ್ಟವನೆ[75] ।
ಏಳು ದಿನವೇ ಆಚೆ ನೀನು ಇರುಸಬೇಕು ।
ಏಳು ಸೂತಕವ ಕಳಿಸ[76]ಬೇಕು ನಿನ್ಹೆಂಡರಕೂಟೆ ।
ನಿಮ ವಸವಾತದೆ[77]ಗೌಡ ಮಗುವೊಂದು ।

ಆವಾಗ ಹಿರಿಯಟ್ಟಿ[78]ಗೆ ಕರಕೊಂಡೋಗಿ[79] ನಿಮ್ಮ
ಸಾಸರಕೆ ಸರಿಯಾಗಿ ಜನಿಗೆ ಹಾಕಿ[80] । ನೀನು
ಜುಂಜಪ್ಪನೆಂಬೋ ಹೆಸರ ಕರೆದಾರೆ
[ನಿಮ್ಮ ವಸವಾಗುತದೆ]

ಆವಾಗ ಏನು ಗಂಗಮ್ಮ ನಾವು ಬಂದೋರು ।
ಸಣಮಕ್ಕಳಾಗೇ ।
ಹಿರಿಯಟ್ಟಿಯನ್ನೋದ ನಾವೆಲ್ಲಿ ಕಂಡೀವಿ ।
ಆವಾಗ ಗಂಗಮ್ಮ ।
ಏಳು ದಿನವೇ ಸೂತಕ ಕಳಕೊಂಡು ಬಾವೋಗಣ್ಣ[81] ।
ನಾವೇ ಹಿರಿಯಟ್ಟಿ ತೋರಿಸುತೀವಿ ।

ಹಿರಿಯಟ್ಟಿವಳಗೆ ಏನೋ ರ್‍ವಾಗ[82] ತಗುಲಿ ।
ಮಕ್ಕಳು ಮರಿಯೆಲ್ಲಾ ಸತ್ತೋಗವಂತೆ

ಹಿರಿಯಟ್ಟಿ ಯಜಮಾನರು ಬನ್ನಿರಯ್ಯ ।
ನಾವೊಂದು ಸಾಸರವ ಕೇಳಿಕೊಂಡು ಬರುವೂ
ನಂತಾರೆ !
ಹಿರಿಯಟ್ಟಿ ಯಜಮಾನುಗಳ ಇಪ್ಪತ್ತು
ಜನಗೂಳು ಹೋತಾರೆ ಹೆಬ್ಬಾಲದ ಮರದಡೀಕೆ ।

ಕೊರಮರ ಗಂಗಮ್ಮ ಎಲ್ಲಿಗೋಗುತೀರೋ ಗೌಡುಗಳಂತ
ಕೇಳುತಾಳೆ ।

ನಾವೊಂದು ಸಾಸರವ ಕೇಳಿಕೊಂಡು
ಬರುವೋಕೆ ಹೋತೀವಿ ಗಂಗಮ್ಮ ।

ಮೂರು ದುಡ್ಡೇ ಇಕ್ಕರಯ್ಯ ಗೌಡುಗಳೆ ನಾನೊಂದು
ಸಾಸರವ[83] ಹೇಳುತೀನಿ ।

ಮೂರು ದುಡ್ಡಿಕ್ಕಿ ಸಾಸರವ ಕೇಳುತಾರೆ ।
ನಿಮ್ಮಟ್ಟಿ ವಳಗೆವೊಬ್ಬ  ಹೆಂಗಸರು
ವಬ್ಬ ಗಂಡಸರು ಹೋಗ್ಯವರೇ ।
ಯಾರಯ್ಯ ಗೌಡುಗಳೇ ಎಂದು ಕೇಳುತಾಳೆ ಗಂಗಮ್ಮ

ಯಾರೂ ಓಗಿಲ್ಲೆಂದು[84] ಇಪ್ಪತ್ತು ಯಜಮಾ
ನಗಳು[85] ಏಳುತಾರೆ ।

ಇಲ್ಲಿ ನೋಡಿರಯ್ಯ ಎಂದು ಏಳುತಾಳೆ[86] ಗಂಗಮ್ಮ ।
ಸಾಲಿ ದಟ್ಟೀರೂ[87] ಮಕ್ಕಳೂ ಓದುರೂ[88] ಆಚೆಗೆ ।
ಬರಗಾಲದಾಗೆ ನಮ್ಮ ತಾಯಿ ।
ಎಲ್ಲೋ ಒಂದು ಮಗುವ ತಂದು ತಂಡ್ರಸಿ ಮೆಳೆಯೊಳ
ಗಿಕ್ಕಿದಳಂತೆ ।
ಅದೇನೊ ಕುರಿತುಕೊಂಡು ಕೇಳಿ ಅಂತಾರೆ । ಸಾಲಿ
ದಟ್ಟೇರು ಮಕ್ಕಳು ।
ಕುರುತು ಕಂಡು[89] ಏಳುತಾರೆ ಏಳು[90] ಗಂಗಮ್ಮ ಅಂತ ।
ಅವರೇ ಅಂತ ಏಳುತಾಳೆ ಗಂಗಮ್ಮ ಸಾಸ್ತ್ರವ[91] ।
ಅವಳೊಟ್ಟೆ ಒಳ್ಗೆ ಜುಂಜಪ್ಪನೆಂಬ ಮಗ ಉಟ್ಟೆವ್ನೆ[92] ।
ಅವನ ಕರಕೊಂಡು ಬಂದು ಅವನ ಸಾಸ್ತ್ರಕೆ ಸರಿಯಾಗಿ
ಜನಿಗೇನಾಕಿ[93] । ನೀವು ಜುಂಜಪ್ಪನೆಂಬೋ ಎಸರಾ ।
ಕರೆದಾರೇ ।

ನಿಮ್ಮಟ್ಟಿ ಒಳಗೆ ಸಾಯೋ ಮಕ್ಕಳೂ ಮರಿ ಎಲ್ಲಾ
ಉಳಿತಾವೆ ।

ಎಲ್ಲಿ ಗಂಗಮ್ಮ ಸಣ್ಣ ಉಡುಗುರಾಗೆ[94] ಓದುರು
ಎಲ್ಲಿ ಉಡುಕಾನಿ[95] ನಾವು ।
ಇಲ್ಲೇ ಕೂಕಳಿರಯ್ಯ[96] ಬಂದಾರೇನೋ ನೋಡಾ
ನಂತಾ । ಗಂಗಮ್ಮ ಹೇಳುತಾಳೆ ಗಂಗಮ್ಮ ।

ಕಂಬೇರ ಸಿನ್ನಮ್ಮನೂ ಕೆಂಪಮಲ್ಲೇಗೌಡ ತೊಟ್ಟಿಲ
ಎತ್ತಿಕಂಡೇ ಆಲದಮರದಡಿಕೇ ಬರ್ತಾರೆ ।
ಇವ್ರೇ ಕಣ್ರಯ ಅಂತ ಏಳುತಾಳೆ ಗಂಗಮ್ಮ ।
ಆಗ ಇರಿ[97] ಅಟ್ಟಿ ಯಜಮಾನರು ಕರಕಂಡೇ
ಓತಾರೆ[98] ।
ಅವರ ಸಾಲಿಗೆ ಸರಿಯಾಗಿ ಅಗಸಾಗೆ ಬಟ್ಟೆ
ಆಕ್ಸಿ[99]
ಅವರ ಸಾಲಿಗೆ ಸರಿಯಾಗಿ ಜನಿಗೇನಾಕ್ಸಿ ।
ಜುಂಜಪ್ಪನೆಂಬೋ ಮಗ್ನೆಸ್ರು ಕರೆದವ್ರೆ ।
ಅವ್ವಟ್ಟಿ ಒಳ್ಗೆ ಸಾಯೋ ಮಕ್ಕಳು ಉಳಿಕಂಡೊ ।
ಇರೇ[100]ಅಟ್ಟ ಒಳ್ಗೆ ಬಾಳ್ಕೊಂಡವ್ಳೆ ಸಿನ್ನಮ್ಮ[101] ।
ಕಂಬೇರ ಸಿನ್ನಮ್ಗೆ ಅಗೋ ಇಗೋ ಅನ್ನೊ ಒತ್ತಿಗೆ[102] ।
ಮುಟ್ಟು ನಿಂತೋದೊ ।
ಕಂಬೇರ ಸಿನ್ನಮ್ಗೆ ಒಂಬತ್ತು ತಿಂಗಾಳು ತುಂಬ್ಯೋದೋ ।
ಸಿನ್ನಮ್ಗೆ ಎಡಕೊಬ್ಬ ಬಲಕೊಬ್ಬ ಮಾರಣ್ಣ ಮೈಲಣ್ಣ[103]
ಹುಟ್ಯಾರು ।
ಅವ್ರ ಸಾಲಿಗೆ ಸರಿಯಾಗಿ ಸೂತಕ ಕಳೆದಾರು ।
ಮಾರಣ್ಗೆ ಮೈಲಣ್ಗೆ ಅವರ ಸಾಲಿಗೆ ಸರಿಯಾಗಿ
ಜನಿಗೇನಾಕಿ ।
ಮಾರಣ್ಣ ಮೈಲಣ್ಣೆಂದೆ ಎಸರ ಕರೆದಾರು ।
ಅದಗಿದಗೋ[104] ಅನ್ನೋ ಒತ್ಗೆ ಮುಟ್ಟು ನಿಂತೋಯ್ತು ।
ಆ ವಂಬತ್ತು ತಿಂಗಳೇ ತುಂಬ್ಯೋಯ್ತು ಸಿನ್ನಮ್ಗೆ ।
ಮಾರಕ್ಕನೆಂಬೋ ಮಗ್ಳ ಪಡೆದವ್ಳೇ ।
ಅವರ ಸಾಲಿಗೂ ಸರಿಯಾಗೀ ಸೂತಕ ಕಳೆಕೊಂಡ್ರೂ ।
ಅವರ ಸಾಲಿಗೆ ಸರಿಯಾಗಿ ಜನಿಗೆನಾಕಿ[105] ।
ಮಾರಕ್ಕನೆಂಬೋ ಎಸ್ರೆ[106] ಕರೆದವ್ರೆ ।
ಅದು ಅಷ್ಟಾಗಿ ಇಷ್ಟಾಗಿ ದೊಡ್ಡದಾಯ್ತು ।
ಅವರ ಇರಿ[107]ಯಣ್ಣ ದೊಡ್ಡಸಿನ್ನೆ[108]ಗೌಡ್ನ ಮಗ್ಗೇ[109]
ಕೊಟ್ಟು ಲಗ್ಗನವಾ[110]ಮಾಡುತಾಳೇ ।
ಕೆಂಪ ಮಲ್ಲೇಗೌಡ ತೀರೇ ಓದ ।
ಸಿನ್ನಮ್ಗೆ ಯಾಕೋ ಬಡತನ ಬಂದಂಗೆ ಕಾಣೋದು ।
ದ್ಯಾವದಾರೇ ಸೊಪ್ಪು ಕುಯ್ಕಂಡು ಬಂದು ।

ಮಕ್ಕಳಿಗಿಕ್ಕೇನೆಂದು ಮಡ್ಕ[111] ಕಟ್ಟಿಕೊಂಡು ಸೊಪ್ಪ
ಕುಯ್ತಾಳೆ ।
ಅವ್ರಣ್ಣಗಳು ಓರಿ[112]ಕಾಲಿಗೆ ಗೆಜ್ಜೆನಾಕಿಕೊಂಡು ।
ಸೀರ್‍ಯದ ಸಂತೀಗೆ[113]ಏಳು ಜನ ಓಗ್ಯವ್ರೆ[114] ।
ಓರಿಯ ಮ್ಯಾಲತ್ತುಕೊಂಡೇ ಓಗ್ಯವ್ರೆ ಏಳು ಜನ ।
ಓರಿಯ ಮ್ಯಾಲತ್ತುಕಂಡು ಏಳು ಜನ ಬರುತಾರೇ ।
ದ್ಯಾವದಾರೇ ಸೊಪ್ಪಾ ಕುಯ್ತಿದ್ದೋಳು ಸಿನ್ನಮ್ಮ ।
ನಮ್ಮಣ್ಣಗಳು ಬರುತಾರೇಂದು ದ್ಯಾವದಾರೇ ಗಿಡಕೇ
ಕೂಕಂಡು[115](ಓಗಿ)
ಅಣ್ಣಗಳ ಮುಂದಾಕೆ ಬಿಟ್ಟು ದ್ಯಾವದಾರೇ ಗಿಡದಾಗೇ ।
ಗೋಳಾಡುತಾಳೇ ಸಿನ್ನಮ್ಮ ।
ಸಿಕ್ಕ ಸಿನ್ನೇಗೌಡ "ಏನಣ್ಣ ದ್ಯಾವದಾರೆ ಗಿಡದಾಗೇ ।
ಏನೋ ಸದ್ದಾತದಲ್ಲೊ ಇರಿಯಣ್ಣ" । (ಎಂದಾನೆ)
"ನಮ್ಮ ಸಿಕ ಸಿನ್ನಮ್ಮನ ಸದ್ದಂಗೆ ಕೇಳಸ್ತಲ್ಲೊ"
"ಒಕ್ಕಳವೆ ಆಸಿ[116]ಕೊಂಡು ಒಕ್ಕಳವ ಒದ್ದುಕೊಂಡು ।
ತೂಗೋಮಂಚದ ಮೇಲಿರೋಳು ನಮ್ಮ ಸಿನ್ನಮ್ಮ ।
ಇಲ್ಯಾಕೆ ಬರುತಾಳೆ ನಮ್ಮ ಸಿಕ ಸಿನ್ನಮ್ಮ ।"
ಎಂದುಬಿಟ್ಟ ಅವರಣ್ಣ ದೊಡ್ಡ ಸಿನ್ನೇಗೌಡ
ಓರೀಯ ಮುಂದಾಕೆ
ಇನ್ನಾಗೋಳಾಡಿಕೊಂಡೇ ಅಳುತಾಳೆ ಸಿನ್ನಮ್ಮ ।
ಇಲ್ಯಾಕೆ ಬರುತಾಳೆಂದುಬಿಟ್ಟ ಅವರಣ್ಣ
ದೊಡ್ಡ ಸಿನ್ನೇಗೌಡ ಓರಿಯ ಮುಂದಾಕೆ ।
"ಏನಣ್ಣ ನಮ್ಮ ಸಿನ್ನಮ್ಮೆ ಕಣೋ ದ್ಯಾವ ।
ದಾರೇ ಗಿಡದಗಿರೋಳು" ।
ಓರಿಯ ಇಂದಾಕೆ[117]ತಿರವಿ ದೊಡ್ಡ ಸಿನ್ನೇಗೌಡ ।
ಯಾರಮ್ಮ ದ್ಯಾವದಾರೇ ಗಿಡದಗಿರೋರು
ಅಂತ ಕೇಳುತಾನೇ ।
"ಯಾಕಣ್ಣ ನಾನು" ಎಂದು ಏಳುತಾಳೆ ಸಿಕಸಿನ್ನಮ್ಮ ।
"ಬಾರಮ್ಮ ಇಲ್ಯಾಕೆ ಬಂದೀದ್ದೀಯ" ಅಂತ
ಕರಿತಾನೆ ಸಿನ್ನಣ್ಣ ।
"ಬರುವಾಕೆ ಮಾನವಿಲ್ಲವಲ್ಲೋ ಇರಿಯಣ್ಣ" ।
"ಅನ್ನೆರಡು[118]ಮಳದ ದಟ್ಟಿ ಬಿಚ್ಚಿ ಆಕಿದನೋ

ಇರಿಯಣ್ಣ" ।
ಅನ್ನೆರಡು ಮಳದ ದಟ್ಟಿ ಉಟ್ಕಂಡು ಈಸೆಗೆ
ಬರುತಾಳೆ ಸಿನ್ನಮ್ಮ ।
"ಏನು ಮಾಡಲೋ ಇರಿಯಣ್ಣ ನಿನ್ನ
ಸೋದರಳಿಯಗುಳಿಗೆ
ತಿಂಡಿ ಇರಲಿಲ್ಲ ಕಣಣ್ಣ ದ್ಯಾವದಾರೆ ಸೊಪ್ಪ
ಕೊಂಡೋಗಿ ।[119]
ಬೇಸಿಕೊಡೋನೆಂದು ಬಂದಿವ್ನಿ ।"
ಕರಕಂಡೇ ಓಗಿ ಕಂಬೇರ ಅಟ್ಟಿಗೇ ।
ಆಲು[120]ಪಂಚಾಮೃತದ ಅಡಿಗೇ ಮಾಡೀಸಿ ।
ಏಳೇಳು ಜನಗಳು ಕುಳಿತೂಟವ ಮಾಡ್ಯಾರು ।
ಸೀರ್‍ಯದ ಸಿಕ್ಕಡಿಕೆ ದಾರ್‍ಯದ ಬಿಳಿ ಎಲೆ
ನಾಗಮಂಗಲದ ಕೆನೆಸುಣ್ಣ ಮೆಲ್ಲಿ ।
"ನಮ್ಮ ತಂಗಿ ಕೆಟ್ಟು ಬಂದವ್ಳೆ ಏಳು ದನಗಳೂ
ಏಳು ಕರುಗಳೂ ಕೊಡಬೇಕು ।
ಏಳು ಸೀರೆ ತಂದು ಕೊಡಬೇಕು । ಏಳು ಕರಗ[121]
ವನ್ನೂ[122] ಕೊಡಬೇಕು" ಏಳೂ ಜನರೂ ಮಾತಾಡಿದರೂ ।
ವತ್ನುಂಟೆ[123] ಎದ್ದು ತಾಯಿ ಸಿನ್ನಮ್ಮ ।
"ಏಳು ಕರುಗಳು ಇಲ್ಲೇ ಇರಲಣ್ಣ ।
ಏಳು ದನಗಳು ಇಲ್ಲೇ ಇರಲಣ್ಣ ।
ಏಳು ಕರಗ ಹೊನ್ನು ಇಲ್ಲೇ ಇರಲಣ್ಣ ।
ಏಳು ಸೀರೆ ತಕ್ಕಂಡು[124] ಓತೀನಿ ಇರಿಯಟ್ಟೀಗೆ ।
ನಿಮ್ಮ ಸ್ವಾದರಳಿಗಳ[125] ಕರಕಂಡು ಬತ್ತೀನಣ್ಣ ।
ಏಳು ದನಗಳ ವಡಕಂಡೇ ಓತೀನಿ ಕಣಣ್ಣ ।
ಏಳು ಕರಗಳ ವಡಕಂಡೇ ಓತೀನಿ ಕಣಣ್ಣ ।"
ಓದಾಳೆ ತಾಯಿ ಸಿನ್ನಮ್ಮ ಇರಿಯಟ್ಟಿಗೆ ।
ಮಾರಮ್ಮೈಲಣ್ಣ ಇಂದೆ[126]ಬಾಕಿಲಾಗೆ ಕುಂತವ್ರೆ ।
ದೊಡ್ಡೇನು ಜುಂಜಪ್ಪ ಅವ್ನೊಂದು ಬಾಕ್ಲಾಗೆ
ಕುಂತವ್ನೆ ।
"ತಾಯಿ ಸಿನ್ನಮ್ಮ ಒಳಿಕೋಗೋದ್ಯಾಕೆ ಅಲ್ಲೇ
ನಿಂತಕಳಮ್ಮ ।"
"ತಾಯಿ ಸಿನ್ನಮ್ಮ ನಿನ್ನ ನೆಳ್ಳ ಬಿದ್ರೆ ನಾವೆಲ್ಲ
ಉರಿದೋದೇವು"।

"ಯಾಕೋ ಜುಂಜಪ್ಪ ಇಂತಾ ಮಾತನಾಡುತೀಯ ।
ನಿಮಗಾಗಿ ದ್ಯಾವದಾರೇ ಸೊಪ್ಪ ಕುಯಕೊಂಡು ।
ಬರಕೋಗಿದ್ದೆ ನಿಮ್ಮ ಮಾವುಗಳು[127]ಕಂಡೇ ।
ಕರಕಂಡೇ ಓಗಿ ।
ಏಳು ಕರುಗಳು ಕೊಟ್ಟವ್ರೆ । ಏಳಕರಗೊನ್ನ ಕೊಟ್ಟವ್ರೆ ।
ಏಳು ಸೀರೆಗಳ ಕೊಟ್ಟವ್ರೆ ಜುಂಜಪ್ಪ ।"
"ಇಂಗಾದ್ರೆ[128] ನಾವೊಪ್ಪಲ್ಲ ತಾಯಿ ಸಿನ್ನಮ್ಮ ।
ನಾಗರಸಿಂಬೆ ಮಾಡಬೇಕು ಜಲ್ದೇಲಿ ನೀರ ।
ಒತ್ಕೊಂಡು ಬಂದಾರೆ ನಿನ್ನ ಮಾತಾನೇ ।
ನಾವೊಪ್ಪುತೀವಿ ತಾಯಿ ಸಿನ್ನಮ್ಮ" ।
ಗಂಡನಾಳಿದ ಬೈಲೀಗೇ ಓತಾಳೆ ಸಿನ್ನಮ್ಮ ।
"ಮಾಗುರುವೆ ನಿನಗೆ ಸೆರಗಾಸಿದ್ರೆ ನಿನ್ನ ಕೊಮಾರ[129] ।
ನಾಗರಾವ ಸಿಂಬೆ ಮಾಡ್ಕಂಡು ಜಲ್ದೀಲೇ ನೀರ
ಒತುಕೊಂಡು ಬಾ ಅಂತಾನೆ ।
ನನಗೆ ಅಪ್ಪಣೆಯ ಕೊಡಬೇಕು ಮಾಗುರುವೆ ನಮ್ಮಪ್ಪ" ।
ಉತ್ತಾಕೆ[130]ಓಗಿ ಕೈ ಇಕ್ಕಿದ್ಲು । ನಾಗರಾವ ಸಿಂಬೆ
ಮಾಡಿಕೊಂಡ್ಲು ।
ಜಲ್ದೇಯ ತಕಂಡು ಗಂಗಮ್ಮಂಗೆ ಓಗಿ ।
ಆಸಾಸಿ ಅಡ್ಡಬಿದ್ದು । ಗಂಗಮ್ಮನ ತಕಂಡು ಬರುತಾಳೆ ।
"ತಾಯಿ ಸಿನ್ನಮ್ಮ ಇಂಗಾದ್ರೆ ನಾವು ಒಪ್ಪೊಲ್ಲ ।
ತಾಯಿ ಸಿನ್ನಮ್ಮ ಏಳು ಸೀರೆ ಆಸೆ[131]ನಾವಿರಬೇಕು" ।
ಏಳು ಸೀರೆ ಈಸೆ[132]ನೀನಿರಬೇಕು ।
ನಿನ್ನ ಮೊಲೆ ಆಲು ಬಂದು ನಮಗೆ ಬೀಳಬೇಕು"
ತಿರುಗಿ ಓದಾಳು ಗಂಡನಾಳಿದ ಬೈಲಿಗೆ ।
"ಏಳು ಸೀರೆಯ ಕಟ್ಟಬೇಕಂತೆ ।
ಆಸೆ ನಾನಿರಬೇಕಂತೆ । ಈಸೆ ಅವರಿರಬೇಕಂತೆ ।
ಮೊಲೆವಾಲು ಅವರಿಗೆ ತಗುಲಬೇಕಂತೆ
ಇದಕೆ ಅಪ್ಪಣೆ ಕೊಡಬೇಕು ಮಾ[133]ಗುರುವೆ" ।
ಗಾವುದಕೊಂದು ಸೀರೆ ಕಟ್ಟಿಸವನೇ ಜುಂಜಪ್ಪ ।
ಹದಿನೇಳು ಸೀರೆ ಆಸೆ ಸಿನ್ನಮ್ಮ ಈಸೆ ಜುಂಜಪ್ಪ ।
ನೀನು ಕರ್ದ[134]ಮಲೆಯಾಲೆ[135] ನನ್ನ ಬಾಯಿಗೆ ಬಿದ್ದರೆ ।
ನಿಜವನ್ನೆ ನಾನೊಪ್ತೀನಿ ಸಿನ್ನಮ್ಮ ।

"ಇಂಗಾದ್ರೆ ನಾನೊಪ್ಪಲ್ಲ ಸಿನ್ನಮ್ಮ ।
ನಮ್ತಂದೆ ಕನಸಾಗೊ ಮನಸಾಗೋ ಬಂದು ಏಳದ್ರೆ ।
ನಾನು ನಿನ್ನ ವಳೀಕೆ ಬಿಟ್ಕೋತೀನಿ ಸಿನ್ನಮ್ಮ ।
ಇಲ್ದಿದ್ರೆ ಬಿಟ್ಟಕಣಕಿಲ್ಲ ಸಿನ್ನಮ್ಮ" ।
ಓದಾಳೆ ಗಂಡನಾಳಿದ ಬೈಲಿಗೇ ಸಿನ್ನಮ್ಮ ।
"ನಿನ್ನ ಕೊಮಾರನ ಕನಸಿಗೋ ಮನಸೀಗೊ ಓಗಿ ಹೇಳಿದ್ರೆ ।
ನನ್ ವಳೀಕೆ ಬಿಟ್ಕೊತಾರಂತೆ ಮಾಗುರುವೆ ನಮ್ಮಪ್ಪ ।"
ಸತ್ತೋದ ಕೆಂಪಮಲ್ಲೇಗೌಡ ರಾತಾರೆ ಕನಸೀಗೆ ಬಂದು ।
"ಯಾಕೋ ಜುಂಜಪ್ಪ ಅವಳು ಎತ್ತಲೂ ಓಗಿರಲಿಲ್ಲ ।"
ಎಂದು ಜುಂಜಪ್ಪ ಕನಸೀಗೆ ಬಂದು ಏಳುತಾನೆ ।
"ನಿಮ್ಮ ಮಾವುಗಳ ಮನೆಗೆ ಓಗಿದ್ಲು, ಯತ್ತಲೂ
ಓಗಿರಲಿಲ್ಲ ।
ಬಿಟ್ಟುಕಳೋ ಜುಂಜಪ್ಪ ವಳೀಕೆ ಅವಳ್ನ ।"
ಆವಾಗ ಅವಳ್ನ ವಳೀಕೆ ಬಿಟ್ಕೊಂಡ ಜುಂಜಪ್ಪ ।
ಕೈಕಾಲು ಮಕವ ತೊಳೆಕಂಡೇ (ಅಡಿಗೆ) ಮಾಡಿ
ಕೊಂಡುಂಡವ್ರೆ
"ಜುಂಜಪ್ಪ ನಿಮ್ಮ ಮಾವುಗಳು ಏಳು ಕರಗಳನ್ನೇ ಕೊಟ್ಟವ್ರೆ ।
ಏಳು ಕರಗ ವನ್ನಾನೇ ಕೊಟ್ಟವ್ರೆ ಏಳು ಸೀರೇನೇ ಕೊಟ್ಟವ್ರೆ
ವಡಕಂಡೇ ಬರೋನ ನಡಿರೋ ಮಾರಣ್ಣ ಮೈಲಣ್ಣ
ಜುಂಜಪ್ಪ ।"
ಓತಾಳೆ ಕರಕಂಡು ಮಕ್ಳನ್ನ ಅಣ್ಣನೋರ
ಮನೀಗೆ ।
ಕಂಡು ಮಾವುಗಳು ಬ್ಯಾಗಡಿಗೆ ಮಾಡಿಸಿದ್ರು ।
ಎಲ್ಲರೂ ಊಟಮಾಡಿ ದೊಡಸಿನ್ನ ಸಿಗಸಿನ್ನ ಓದಾರು ।
"ಆರು ಎಣ್ಣು[136] ಕರುಗಳು ಒಂದು ಓರಿ ಕರುವು ।
ಸಿನ್ನಮ್ಮನ ಮಗ್ಗೆ[137] ಜುಂಜಪ್ಗೆ ವಡಕೊಡಿರಯ್ಯ ।
ಏಳೇ ಕರಗವನ್ನೇ ಕೊಡಿರಯ್ಯ" ಎಂದಾರು ಮಾವುಗಳು ।
ಇರೇ ಅಟ್ಟಿಗೆ ಒಡಕೊಂಡೇ ಬರುತಾರೆ ।
ಒತನುಂತೇ ಏಳೋರು ಏಳು ಕರುಗಳಾಚೆಗೆ ಬಿಡೋರು ।
ಮಾರಮೈಲಣ್ಣ ಮುಂದಲ ದನಿನಾಗೆ ।
ದೊಡ್ಡೋನು ಜುಂಜಪ್ಪ ಇಂದಲ ದನಿನಾಗೆ ।
ಅಡ್ಡಗಲ್ಲ ಏಣಾಗೆ ಅಡ್ಗಟ್ಟೋರು ದನಗಳಾ ।

ಮಟಮಟ ಮದ್ಯಾನಕ್ಕೆ ದೊಳಕಟ್ಟೆಗೆ[138]ನೀರಿಗೆ
ಬಗ್ನೋರು[139] ।
ಏಳು ದನಗಳಾಗೆ ಏಳು ಸಾವಿರ ದನಗಳ ಬೆಳಸ್ಯಾನು
ಜುಂಜಪ್ಪ ।
ಅಡ್ಡಗಲ್ಲೇಣ ಅಡ್ಡಗಟ್ಟಿ ಮೇಸುತಾರೆ ।
ಕಂಡರಲ್ಲೊ ಮಾವುಗಳು ಇದನ ಕಣ್ಣಿಂದ ।
"ಏಳು ಕರುಗಳ ಸಿನ್ನಿ ಮಕ್ಕಳಿಗೆ ಕೊಟ್ಟದ್ದು ತಪ್ಪಾತು ।
ಮುಂದ್ಲುಲ್ಲು ಆಕಿ ಮೇಸುತಾರೆ, ಮುಂದ್ಲು ನೀರವರೇ
ಕುಡಿಸುತಾರೇ ।
ಸಿಕಸಿನ್ನ ದೊಡಸಿನ್ನ ಮರಿಸಿನ್ನ ಬನ್ರಾಲಾ ।
ಜುಂಜಪ್ನ ದನವೀಗೆ ಮಾಟವ ಮಾಡಿಸಬೇಕು" ।
ಸಾಣೆ ಕೆರೆಯ[140] ಪುಟ್ಟಣ್ಣ ಬಾಳ[141]ಪಂಡಿತಗಾರ
"ಅವ್ನ ಕಟ್ಟಿಕೊಂಡು ಜುಂಜಪ್ನ ।
ದನವೀಗೇ ಮಾಟನಾ ಸೂನ್ಯನಾ[142] ।
ಮಾಡ್ಸಲೇಬೇಕು" । ಎಂದು
ಓತಾರೆ[143] ಸಾಣೆ ಕೆರೇಗೆ"
"ಏನೇನೋ ಪುಟ್ಟೆಗೌಡ ।
ಜುಂಜಪ್ನ ದನು[144]ವೀಗೇ ।
ಮಾಟ ಸೂನ್ಯವ ಮಾಡಿಕೊಡಬೇಕು" ।
ಎಂದು ಏಳುತಾರೆ ಮಾವುಗಳು ।
"ನನ್ನ ಕರ್ಸಿಗೆ[145] ನೀವು ತಡಿಲಾರಿರಿ ।
ದೊಡ್ಡ ಸಿನ್ನೇಗೌಡ ಅತ್ತು[146]
ಕೊಳಗಕ್ಕಿ ಎಡಿ[147]ಯಾಗಬೇಕು ।
ನೆಲವನ್ನೆ ಚೆನ್ನಾಗಿ ಕೆತ್ತಿಸಬೇಕು ।
ಸೂಸ್ರವ ನಾನು ಬಿಡಲೇಬೇಕು ।
ಬಿಟ್ಟರೆ ಸಿಕ್ಕಿ[148] ಅನ್ನೊ ದೇವತೆ
ಪೂಜಿಸಬೇಕು । ಕರಿಯ ।
ಓತವಾ[149]ಕಡಿಯಲೇಬೇಕು
ನೀರ ಮಂಡಲವ ಕಟ್ಟಲೇಬೇಕು ।
ಬಡಗರವ[150]ಕೆಸರೀಗೆ ಊಣಲೇ[151]ಬೇಕು ।
ಈ ಕರ್ಸಿಗೆ ನೀವು ತಡೆಯಲಾರಿರಿ ।
ದೊಡಸಿನ್ನೇಗೌಡ । ನೀವು ವಂಚಕಂಡು[152] ।

ಬಂದ್ರೆ
ಮಂಗಳವಾರ ಚಂಜೀಗೆ[153]
ಒಂಚ್ಕಂಡು ಬಂದು । ನಿಮ್ಮ
ದನದೂಳಿ ಕಟ್ಯಾಗೆ ತಡಕಂಡು ।
ನನಗೊಂದಾಳ ಬಿಡಿರಯ್ಯ ।”
ಎಂದೇಳಿದ ಸಾಣಿಕೆರೆ ಪುಟ್ಟಣ್ಣ
ಆಗ ದೊಡಸಿನ್ನೇಗೌಡ ।
ಪುಟ್ಟೇಗೌಡ್ಗೆ ಆಳ ಕಳಿಸೀದಾ ।
ಬಂದ ಸಾಣೇಕೆರೆ ಪುಟ್ಟೇಗೌಡಾ ।

ಸಾಣೆಕೆರೆ ಪುಟ್ಟಣ್ಣ ನೆಲವಾನೆ ಕೆತ್ತಿಸೋನು[154] ।
ಸೂಸರವ[155] ಬಿಡಿಸೋನು[156] ಬಿಟ್ರ ಸಿಕ್ಕಮ್ಮ ದೇವತೆ ।
ಪೂಜೋನೂ । ನೂರೊಂದೆ ಎಡೆಯ ಹಾಕೋನು ।
ಕರಿವಾತನ[157]ಬಿಳಿವಾತನ ಕಡಿಯೋನು[158] ।
ನೀರಮಂಡಲವೇ ಕಟ್ಟೋನು[159] । ಕರುವಾನೆ ಕೆಸರಾಗೆ
ಹೂಣೋನು । ಕಂಬೇರ ದನಗಳ ಜಾಡಕಳದು[160]
ಕಂಬೇರ ದನಗಳ ಆಸೀಗೆ[161] ಬಿಡುವೋನು ।

ಏನಯ್ಯಾ ದೊಡಚಿನ್ನೇಗೌಡ ಇದೆಲ್ಲಾ ನಮ್ಮನಿಗೆ ಹೊತುಕೊಂಡು
ಬರಬೇಕು । ಎಲ್ಲ ಹೊತುಕೊಂಡು[162] ಹೋತಾರೆ ಸಾಣೆಕೆರೆಗೆ ।

ಎಲ್ಲ ಕೋಮಬಿಟ್ಟು [163] ಕಂಬೇರಹಟ್ಟೀಗೆ ಹೋತಾರೆ ।
ವತಿನಂತೆ[164] ಎದ್ದು ದೊಡ್ಡೋನು ಜುಂಜಪ್ಪ ।
ಮಾರ–ಮೈಲಣ್ಣ ಮುಂದಲ ದನಿನಾಗೆ ।
ದೊಡ್ಡೋನು ಜುಂಜಪ್ಪ ಹಿಂದಲ ದನಿನಾಗೆ ।
ಮಟಮಟ ಮದ್ಯಾನ[165] ದೂಳಿಕಟ್ಟಿಗೆ
ನೀರಿಗೆ ಬಗುಸೋರು[166]

ಬಿಟ್ರಸಿಕ್ಕಮ್ಮ ದೇವುತಿ[167] ಪೂಜಿರೋದ ನೋಡೀರು[168] ।
ಗುಳಕಾಯ[169]ಗುಂಡು ಮಾಡೀರು[170] । ಅಂಚಿಕಡ್ಡಿ [171] ಬಿಲ್ಲ
ಮಾಡೀರು । ಬಿಟ್ರುಸಿಕ್ಕಿಗೆ[172] ಸೇದಿಬಿಟ್ಟವರೆ ।
ಬಿಟ್ರಚಿಕ್ಕಿ ತಡಿಪಿಡ್ಯಾಗಿ ಹೋದಾಳೂ ।

ಮುನ್ನ ಮುಂದಕೆ ದನಗಳ ಬಿಟ್ಟಾರೆ ।
ಸಲಗೆತ್ತು [173] ನೀರಿಗೆ ಬಿಡದಂಗೆ ದನಗಳ
ಹಿಂದೂಕೆ ತಿರುವಿ ಬಿಡುತು ।

ದನಗಳು ನಿಂತೋಗಿ ಬಿಟ್ಟೋ ।
ದೊಡ್ಡೋನು ಜುಂಜಪ್ಪ ಎಂದೂ ನಿಲ್ಲದೋವು ದನಗಳು ।
ಇಂದು ನಿಂತೋದೋ । ಮಾರ ಮೈಲಣ್ಣ ಮುಂದಲ
ದನಿನಾಗೆ ಕಳಿಸಿದ ।

ಕಟ್ಟಿದ ಮಂಡೇ ವದರಿ ಜಗ್ಗೀಸಿ ನೆಲವ ತುಳಿದೋ ।
ಮುಂದಲ ದನವೀಗೆ ನೆಗೆದ ಜುಂಜಪ್ಪ ।
ಯಾಕೋ ಮಾರ ಮೈಲಣ್ಣ ನೀರಿಗೋಗೋ ದನುಗಾಳು ।
ಹಿಂದಾಕೆ ತಿರುವೀದ ಕಾರಣೇನೋ ।
ಮಾರ ಮೈಲಣ್ಣ ।
ನಾವು ತಿರುವಲಿಲ್ಲ ಜುಂಜಣ್ಣ ಸಲಗೆತ್ತು ತಿರುವೀತು ।
ನೀರಿಗೋಗೋ ದನಗಳ ಹಿಂದಾಕೆ ತಿರುವಿದ ಕಾರಣೇನೋ
ಸಲಗಣ್ಣ । ಈವಾಗ ನನಗೆ ತೋರೀರೆ ಸಮನೋಯ್ತು।

ದುಡ್ಡಿಗೊಂದು ಕಂಡ [174] ಕತ್ತರಿಸಿ
ದೊಡ್ಡೊಳವನಳ್ಳಿ ನಾಯ್ಕರಿಗೆ ಕೊಡಸುತೀನಿ ।

ದೂಳಿಕಟ್ಟೆ ಕೆಸರಿಗೆ ಕೊಂಬ ಊಣಿಸಿ [175]
ಮಾವ ಊಣಿಸಿದ ಕರುವ ತೆಗಿಸಿದರೋ ।

ಬರ್ರಿರಾಲಾ ಮಾರ ಮೈಲಣ್ಣ।
ಮಾವಗಳು ಕರುವ ಕೆಸುರಾಗೆ
ತುಳಿದೋಗಿದ್ರು । ಕರುವ ಮೈತೊಳೆದು
ಮಾವಗಳಿಗೆ ಕೊಟು ಬಾವೋಗ್ರಿ ।

ತಕ್ಕಂಡೆ ಹೋತಾರೆ ಮಾರ ಮೈಲಣ್ಣ ।
ಆದೀಗೆ [176] ಅಡಗೋಳ [177] ಬತ್ತಾರೆ [178] ಮಾವಗಳು ।
ಕೊಳ್ಳಿರಿ ಮಾವ ನಿಮ್ಮ ಕರುಗಳೇ ಕೆಸರಾಗೆ ಊಣಿಕಂಡಿತ್ತು ।
ಅಣ್ಣ ಕಳಿಸೀದ ಕೊಳ್ಳೀರಿ ಮಾವ ಕರುಗಳ ।

ಯಾರುದೋ ಕರುವ ನಮ್ಮ ದನವೀಗೆ
ತತ್ತೀರಲ್ಲೋ । ಉಣಿಸೆ [179] ಬರಲಾಗೆ
ತಕ್ಕೊಂಡು ಬಡದು ಮಾರ ಮೈಲಣ್ಣನ ।

ಎತ್ತಿಕಂಡೇ ಹೋಗ್ರಲೇ ಕರುವೇ ನಮದಲ್ಲ ।
ಅಳತಾನೆ ಬರುತಾರೆ ಎತ್ತಿಕಂಡೆ ಬರುತಾರೆ ।
ಮಾರಣ್ಣ ಮೈಲಣ್ಣ । ಅರ್ದಾನೆ [180] ಹಾದೀಗೆ ಬಂದು ।

ಮಾಯದದ ಮಕ್ಕಳು । ನಮ್ಮ ಮಾವಗಳು ಉಯ್ದರಂತ 181
ಹೇಳಿದರೆ ನಮ್ಮಣ್ಣ ಮಾವಗಳ ಮ್ಯಾಲೆ ಸಿಟ್ಟು
ಮಾಡುತಾನೆ । ಹೇಳಬಾರದೆಂದೇ ಮಾತಾಡಿಕೊಂಡು
ಬರುತಾರೆ ಮಾರಣ್ಣ ಮೈಲಣ್ಣ ।

ಕರುವು ಮಾವಗಳಲ್ಲದಂತೆ ಕಾಣೋ ಜುಂಬಣ್ಣ ।
ನಮ್ಮದಲ್ಲಂತ ಹಿಂದಾಕೆ ಕಳಿಸಿದರಣ್ಣ । ಕರುವ ಮಾವಗಳೂ ।
ನಂಟಸ್ತನದಾಗೆ ಮಾತ ಹೊರವುದು 182 ಬರುತಾದೆ ಮಾರ ಮೈಲಣ್ಣ ।
ನಾನೊಂದೆ ಮಾತ ಕೇಳಿ ಬರುತೀನಿ । [ಕರುವ]
ತಕ್ಕೊಂಡೆ ಹೋತಾನೆ ದೊಡ್ಡೋನು ಜುಂಜಪ್ಪ ।

ಬತ್ತಾನೆ ಕಣಲಾ ಕೆಟ್ಟ ಚಿನ್ನಮ್ಮನ ಮಗ
ಆಂಜುಪ್ಪ ನಮ್ಮನು ಬಿಡುತಾನ ..... ।
ಮಾವಗಳು ಸಿವಗಂಗೆ ಬೆಟ್ಟದಂತಾ ಬೆಟ್ಟಕೆ
ಬೀಳುತಾರೆ ।

ಜುಂಜಪ್ಪಗೆ ಯಾಕೋ ಮದ್ಯಾನ ಬಿಸಿಲಾತು ।
ಆಲಾದ ಮರವೆನ್ನ ಕಿತುಕೊಂಡೆ ನೆಳ್ಳ 183 ಮಾಡಿಕಂಡೆ ಹೋತಾನೆ ।
ಸಿವಗಂಗೆ ಬೆಟ್ಟದಂತಾ ಬೆಟ್ಟದ ವಬ್ಬೆಗೆ 184

ನಿಂತಕೊಂಡ್ರು ಮಾವಗಳ ಕೊಳ್ಳಿರಿ ಮಾವ
ನಿಮ್ಮ ಕುರುವೇ ಕೆಸರಾಗೆ ಊಣಿಕೊಂಡಿತ್ತು ।
ಆ ದೇವ್ರಾಣೆ ನಮ್ಮದಲ್ಲ ಜುಂಜಪ್ಪ ಈ ದೇವ್ರಾಣೆ
ನಮದಲ್ಲ । ಗಂಗಮ್ಮನ ತಕ್ಕೊಂಡು ಬಾಸೆ

ಪರಮಾಣ ಮಾಡುತಾರೆ ಮಾವಗಳು ।
ಕರುವೇ ನಮದಲ್ಲ ಜುಂಜಪ್ಪ ಪರಮಾಣವಾಗಿ

'ನಿಮದಲ್ಲೇನು ಮಾವ ಈ ಕರುವು ।'
'ಈ ಗಂಗಮ್ಮನಾಣೆ ನಮದಲ್ಲ । ಜುಂಜಪ್ಪ ।'

ಹಿಂದಾಕೆ ಎತಿಕೊಂಡು ಬರುತಾನೆ ಜುಂಜಪ್ಪ ।
'ಬನ್ನಿರೋ ಮಾರಮೈಲಣ್ಣ ಮಾವಗಳದಲ್ಲವಂತೆ
ಈ ಕರುವು
ಹನ್ನೆರಡೆ ವರ್ಸಾದ ಗಂಗೆ ಗೌರಿ ಕರದು ।
ಈ ಕರುವಾನೆ ಊಡಾಕ್ರೋ ಮಾರ ಮೈಲಣ್ಣ ।'

ಮಾರ ಮೈಲಣ್ಣ ಕರೆದಾರೆ ।
ಬೋರಾಡಿಕಂಡು[185]ಗಂಗೆಗೌರಿ ಕರುವ ಕುಡಿಸುದುರು ।

ಸಾಲಿಗೆ ಮೂಗಂಡುಗ[186] ಆಗೋದು ।
ಸಾಣಿಕೆರೆಯ ಪುಟ್ಟಣ್ಣನ ಹೊಲದಾಗೆ ।
ಅಂತಂಬೋ ಹೊಲಕೆ ಗಮಲಾ[187] ಬಿದ್ದು ।
ಜುಂಜಪ್ಪನ ದನಗಳು ।
ಸಾಲಿಗೆ ಮೂಗಂಡುಗವರೇಕಾಳಾಗೋದು
ಅಂತಂಬೋ ಹೊಲಕೆ ಹೋತಾವೆ ಜುಂಜಪ್ಪನ
ದನಗಳು ।
ಮಾರ ಮೈಲಣ್ಣ ಜುಂಜಪ್ಪ । ಹಿಂದುಗಾಡೆ
ಹೋತಾರೆ[188] ಮೂರು ಜನಗಳು ।

ಮದ್ಯಾಂದ[189]ವೊತ್ತೀಗೆ ದೂಳಿಪಟ[190]ವಾನೆ ಮಾಡುತಾವೆ
ಅಂತಂಬೋ ಹೊಲವ । ಹೊತ್ತೇನೆ ಮುಳುಗೋತು ।
ಸಾಯಂತ್ರಾಗೋತು[191] । ಸಾಣೆಕೆರೆಯ ಊರ ಮುಂದೆ
ಗೂಡ ತಿರುವಿ । ಗೂಡಿಗೆ ದನಗಳ ಬಗ್ಗೀಸಿ[192] ।
ಅಡುಗೆ ಮಾಡಿಕೊಂಡೇ ಉಂಡುಬಿಟ್ಟು ।
ಮನಿಗವ್ರೆ[193] ಮಾರ ಮೈಲಣ್ಣ ಜುಂಜಪ್ಪ ।

ಹೊತ್ತಿನಂತೆ[194] ಎದ್ದು ಮೂರು ಜನ ।
ನಾಮದ ಸ್ಯಾವೆ[195] ಮಾಡುತಾರೆ ।
ಸಾಣಿಕೆರೆಯಿಂದ ಒಂದೇ ತಾಯಿ ಮಕ್ಕಳು
ಏಳು ಜನ ಹೆಣುಮಕ್ಕಳು ನೀರೀಗೆ
ಬರುತಾರೆ ।

ಇವರು ನಾಮ ಇಕ್ಕಾದು[196] ಕಂಡು ಒಬ್ಬರಿಗೊಬ್ಬರೆ ಕೊಳ್ಳ[197]
ಕಟ್ಟಿಕೊಂಡೇ ಅಳುತಾರೆ ಹೆಣುಮಕ್ಕಳು ।
ಯಾರಕಮ್ಮ ಹೀಂಗಳುತೀರೆಂದೇ ಜುಂಜಪ್ಪ ಕೇಳುತಾನೆ ।

ನೀವು ಯಾವ ಸೀಮೆ ದೊರಿ ಮಕ್ಕಳಪ್ಪಾ ।
ಸಾಣಿಕೆರೆ ಪುಟ್ಟಾ ।
ನಮ್ಮ ಗಂಡುಗಳನೆಲ್ಲ ।
ಮಾಟ ಸೂನ್ನೇವ[198] ಮಾಡಿ ಪ್ರಾಣ ಕಳದು ।

ಒಬ್ಬರೂ ಗಂಡಸರೇ ಇಲ್ಲ ಸಾಣಿಕೆರೆಯಾಗೆ ।
ನಿಮ್ಮಾನೆ[199] ಕಂಡರೆ ಬಿಡತಾನೇನಪ್ಪ ।
ಸಾಣಿಕೆರಿಯ ಪುಟ್ಟಾ ।

ಒಳ್ಳೇದಾತು[200]ಬನ್ನೀರಮ್ಮ ನನ್ನ ತಂಗಿಗಳಿರಾ ।
ಸಾಣಿಕೆರೆಯಾ ಪುಟ್ಟಾಗೆ ನೀವೊಂದೆ ಮಾತಾ ।
ಹೇಳೀರಿ ।
ಯಾವಾನೋ ಗೊಲ್ಲರ ಜುಂಜಪ್ಪನಂತೆ ।
ನಿನ್ಹೆಂಡರು ಗಂಡನಂತೆ ।
ನಿನ್ನೆಂಡರು ಮಿಂಡನಂತೆ ।
ಸಾಲಿಗೆ ಮೂಗಂಡುಗಾಗೋ ವಲದಾಗೆ ।
ಲೆಗ್ಗೇ ಹಾಕಿಕೊಂಡು[201]ದನಗಾಳ ಮೇಸವನೆ ।
ನಿನ್ನ ಬರಯೇಳಿದಾ ಪುಟ್ಟೇಗೌಡಾಂತ ।
ಒಂದಮಾತ ಹೇಳಿರಮ್ಮ ।

ನಾರೇರು ನೀರ ವೊತ್ತುಕೊಂಡು ಅವರವರ ಮನಿಗೋಗಿ ।
ನಾವೇಳ[202]ಬೇಕು । ನಾವೇಳಬೇಕೆಂದೇ ।
ಸಾಣಿಕೆರೆಯ ಪುಟ್ಟನ ಮನೆಯ ಮೆಟ್ಟಲು ಕಲ್ಲತ್ತಿದರೆ[203] ।
ಮೂಗಂಡುಗ ಜ್ವರವೇ ಬರುವುದಂತೆ ।
ಆರೇ ಜನಗಳು ಹೆದ್ರಿಕೊಂಡು ಅವ್ರಮನಿಗವ್ರೇ ಬಿದ್ದವಂತೆ ।
ಹೆಣುಮಕ್ಕಳು ।

ಎಲ್ಲಾಕೂ ಚಿಕ್ಕೋಳು । ನನಪ್ರಾಣುವೇ ಹೋಗುಲೆಂದು
ಸಾಣಿಕೆರೆಯ ಪುಟ್ಟನ ಮೆಟ್ಟಿಲಗಲ್ಲತ್ತಿದಳೂ ।
ನೀನಾರೆಂದೇ ಕೇಳಿದ ಪುಟ್ಟಣ್ಣ ।
ನೀನು ಬಂದ ಕಾರಣೇನೆಂದೆ ಕೇಳುತಾನೇ ।

ಯಾವನೋ ಗೊಲ್ಲರುಡುಗ[204] ಜುಂಜಪ್ಪನಂತೆ
ನಿನ್ನೆಂಡರು[205] ಗಂಡನಂತೆ ।
ನಿನ್ನೆಂಡರು ಮಿಂಡನಂತೆ ।
ನಿನ್ನ ಬರಯೇಳಿದ್ರು ಪುಟ್ಟೇಗೌಡ ।

ಅಂಗಂದಾ ಮಾತಿಗೆ ಮೂಗಂಡುಗ ಜ್ವರವೇ ಬಂದವಂತೇ ।
ಅವಳ ಮನಿಗವಳೇ ಬಿದ್ದವಳಂತೆ ।

ಪುಟ್ಟೇಗೌಡ ನೂರೊಂದ ಪೊಂಪ[206] ।
ಮಾಡುತಾನೆ । ಮಾರ ಮೈಲಣ್ಣ ಗೂಡಿನ
ಬಾಗಾಲಾಗಿದ್ದರಂತೆ । ದೊಡ್ಡೋನು ಜುಂಜಪ್ಪ
ಮುಂದಿನ ಬಾಗಲಾಗಂತೆ ।

ಧೀನಧೀನಂತೇ ಹೋತಾವೆ ಪಂಪುಗಳು ।
ಎಲ್ಲಾ ಹಿಡಕೊಂಡು ನೆಲಕೆ ಸೆಣದ ಜುಂಜಪ್ಪ ।
ಕಾಲಡಿಕೆ ಹಾಕಿಕಂತಾನೆ[207] ಜುಂಜಪ್ಪ ।

ನೂರೊಂದ ಪಂಪುಗಳ ಸೆಣೆದೋ
ಕಾಲಡಿಕೆ ಹಾಕ್ಕಂಡ ಜುಂಜಪ್ಪ ।
ಇನ್ನೇನ ಮಾಡುತಾನೆ ಪುಟ್ಟೇಗೌಡ

ಕರಿಯಾ ನೆಲದ ಎರೆಯಾ ಹೊಲದ ಬಂಡೆಡಿಯಾ[208] ।
ಕರಿಯಾ ನಾಗೇಂದ್ರ ಮನಗಿರುವದಂತೇ ।
ಕರದಾ ಪುಟ್ಟೇಗೌಡ । ಬಿಟ್ಟಾ ಪೊಂಪು ಮಾಡಿ
ಕರಿಯಾ ನಾಗೇಂದ್ರನ್ನ ।

ದಣಿಯುಪ್ಪತಿಂದು ದಣೀಗೆ ಬಗೀಲಾಂತ
ಹೋತಾದೆ ಆಕಾಸಕೂ ಮುಗಿಲೀಗೂ ।

ಏನಲಾ ಕರಿಯ ನಾಗೇಂದ್ರ ನೀನು ಬಂದ್ಯೇನೋ
ನನಮೇಲೆ । ಜುಂಜಪ್ಪನ ಮಕವ[209] ನೋಡಿತು ।
ಪಕ್ಕನೆ ತಲೆಯಾ ನೆಲಕಿಕ್ಕಿಕೊಂಡು ।
ನೀನು ಬಂದುದು ನನಗೆ ಬಾಳ[210] ಉಪಕಾರಾತು[211] ।
ಕರಿಯ ನಾಗೇಂದ್ರ । ನಾನು ಕರದಾಗ ನೀನು
ಬಾವೋಗೋ ।
ಕರಿಯಾ ಹೊಲದ ಎರಿಯಾ ನೆಲದ ಬಂಡೆಡಿಯಾಗೆ
ಮನೀಕೋ[212] ಹೋಗೋ ನಾಗಿಂದ್ರ ।

ಎಲ್ಲಾ ಪಂಪುಗಳು ನಿಂತೋದೋ ಇನ್ನೇನ ಮಾಡುತಾನೆ
ಆಕಡೆ ಬೀದ್ಯಾಗೆ ಮಾರ ಮೈಲಣ್ಣನಂತೆ ।
ಸಾಣಿಕೆರೆಯಾ ಈಕಾಡೆ ಬೀದ್ಯಾಗೆ ಜುಂಜಪ್ಪನಂತೆ ।
ಎಲ್ಲಾ ಪಂಪುಗಳ ತಕ್ಕೊಂಡೋಗಿ ಸಾಣಿಕೆರೆಯಾ
ನಡೂರಾಗೆ[213] ಬೆಂಕೀ ಅಚ್ಚಿ ।
ಎಲ್ಲಾ ಬೆಂಕೀಗಾಕಿ ಸುಡುತಾರೆ ಜುಂಜಪ್ಪ ।

ಇವರ್‍ಯಾಗು ಇಂತಾ ದಕ್ಕಟಗಾರ್‍ರಂತ
ಬರುತಾರೆ ಪುಟ್ಟೇಗೌಡನೆಂಡರುಗಳು[214]

ಬಾರಾಲಾ ಕರಿಯಾ ನೆಲದ ಎರಿಯಾ ಹೊಲದ ಬಂಡೆಯ ।
ಕರಿಯ ನಾಗಣ್ಣ । ಕರದಾ ಜುಂಜಪ್ಪ ।
ಸವೆದು ಸಾಣೆಕಲ್ಲಾಗಿ ಅಂಚಿಕಡ್ಡೀ[215] ದಪ್ಪಾಗಿ ।
ಅವರ ಪಟ್ಟದ್ದೆಂಗಸರನ ಮುಟ್ಟಿ[216] ಬಾವೋಗೋ ।
ನಾಗಿಂದ್ರ । ಅವರಿಬ್ಬರೆಂಗಸರನ ಮುಟ್ಟಿಬಂದಾದೆ ।

ಬಾರುಬಾರೋ ಪುಟ್ಟೇಗೌಡ ನಿನ್ನೆಂಡರ್‍ನ
ಮೋಚಿ ಜುಂಜಪ್ಪ ನಾಗರಾವ ಬಿಟ್ಟೆ ಕಚ್ಚಿಸಿದ
ಎಲ್ಯಾನ[217] ಮದ್ದುಮರವ[218] ಕೊಡ್ಸು[219] ।
ಪುಟ್ಟೇಗೌಡ ಮಂಚಾಬಿಟ್ಟೇ ಇಳಿದೇ ಬಂದ
ಹೋಗಲಾ ನಾಗಿಂದ್ರ ಸವೆದು ಸಾಣೆಕಲಾ
ಅಂಚೀ ಕಡ್ಯಾಗಿ ಪುಟ್ಟೇಗೌಡನ್ನ ಮುಟ್ಟ
ಬಾವೋಗೋ ನಾಗಿಂದ್ರ ।

ಮುಟ್ಟಿ ಬಂದರೆ ಪುಟ್ಟೇಗೌಡನ ಪ್ರಾಣ ಓತು ।[220]
ಇಬ್ಬರೆಂಗಸರುಗುಳು ಬಡಕೊಂತಾರೆ ।
ಹೋಗೋ ನಾಗಿಂದ್ರ ನಿನ್ನಿಸವ[221]ನೀನು
ತಕ್ಕೊಂಡು ಬಾ ಹೆಂಗಸರತ್ತಕ್ಕೋಗಿ ।[222]

ಹಿಂದಿದ್ದ ಜಾಗಕ್ಕೇ ಬರುತಾವೆ ಜುಂಜಪ್ನ
ದನಗಾಳು ।

ಹೊನ್ನೆಟ್ಟೇಲೆ ಗೌಡನ ಮಡದಿ ದೊಡ್ಡಮ್ಮ
ಹನ್ನೆರಡೇ ಕಾಲೇಣಿ ಇಚ್ಚಣಿಗೆ[223] ಆಕ್ಕೊಂಡು[224] ।

ಮಂಚೀಗೆ ಆಕ್ಕೊಂಡು ಅವರೇಯ ಗಿಡವ
ಕಾಯುತಾಳೆ

ಹೊಂಬಣ್ಣ ದುನುಗ ನಂದೀಮಕದ ಸೆಲುವ ।
ಅವರೇಯ ಗಿಡಕೆ ಗಮಲಾ[225] ಬಿದ್ದೇ ಹೋತಾದೆ ।
ಹಿಡಿಗಲ್ಲು ಪಡಿಗಲ್ಲು ತಕ್ಕೊಂಡು ವಡದು[226] ।
ವೋರಿನ ಹಿಮ್ಮೆಡಿಸುತಾಳೆ ದೊಡ್ಡಮ್ಮ ।

ಜುಂಜಪ್ಪನತಾಕೆ ಬಂತು ।
ನಿಂತಕಣಿತು$_{227}$ ಹೋರಿ ।
ಆವಿನ ಗೂಡಾಗೆ$_{228}$ ಆಲಡಿಗೆ ಮಾಡಬೇಕು ।
ಮೂರವರೇ ಕಾಯಾ ಕೊಡು ಕೊಡು ದೊಡ್ಡಮ್ಮ ।
ದಾಸಾಗೆ ಕೊಡಲಿಲ್ಲ ।
ಜಂಗುಮಗೆ ಕೊಡಲಿಲ್ಲ ।
ಗೊಲ್ಲರ ಜುಂಜಪ್ಪಗೆ ನಾನೇ ಕೊಡುತೀನ ।

ಹಿಂದಾಕೆ ತಿರುಗಿಬಂದ ಜುಂಜಪ್ಪ ।
ಹಳದಿ ಪಳದಿ ಸುತ್ತಿಕೊಂಡು ।
ಜಾಗುಟೆ ಬಡಕೊಂಡು ।
ಬವನಾಸಿ ಹೆಗಲೀಗೆ ಹಾಕ್ಕೊಂಡು ।
ಮೂಡಲ ದೇಸದಿಂದ ।
ಮೂವರು ದಾಸಪ್ಪಗೂಳು । ಬಂದಿದ್ದೀವಿ ।
ಮೂರವರೆಕಾಯ ಕೊಡೆ ದೊಡ್ಡಮ್ಮ ।
ಅಡುಗೆ ಮಾಡಿಕೊಂಡುಣಬೇಕು ।

ಗೊಲ್ಲರು ಜುಂಜಪ್ಪಗೆ ಕೊಡಲಿಲ್ಲ ।
ಜಂಗಮಗೆ ಕೊಡಲಿಲ್ಲ
ನಿನಗೆ ಕೊಡತೀನೆನೋ ದಾಸಯ್ಯ
ಹೋಗೆಂದಾಳೋ ।

ತಿರುಗ ಹಿಂದಾಕೇ ತಿರುಗಿ ಬಂದ ।
ಜೋಳಿಗೆ ಆಕಿಕೊಂಡು ಜಂಗಕಾಲಿಗೆ ಕಟ್ಟಿಕೊಂಡ ।
ಜಂಗಮರು ಬಂದೀವಿ ಮೂಡಲದೇಸದಿಂದ ।
ಮೂರವರೇಕಾಯ ಕೊಡು ದೊಡ್ಡಮ್ಮ ।
ಅಡುಗೇ ಮಾಡಿಕೊಂಡುಣಬೇಕು ।

ಜುಂಜಪ್ಪಗೆ ಕೊಡಲಿಲ್ಲ ದಾಸಪ್ಪಗೆ
ಕೊಡಲಿಲ್ಲ । ನಿನೀಗೆ ಕೊಡುತೀನ ।
ಹೋಗಯ್ಯ ಜಂಗಮಯ್ಯ ಎಂದಾಳೊ ।

ತಿರುಗಿ ಬಂದಾನೋ ಜುಂಜಪ್ಪ ಹಿಂದಾಕೆ ।
ನಾಗರಾವ ಕರದು । ಸವೆದು ಸಾಣೆಕಲ್ಲಾಗಿ
ಹನ್ನೆರಡ ಕಾಲ ಇಚ್ಚಣಿಗೆ ಕೊಳವೇಗತ್ತಿ ।
ವೋಗಿ ಮಂಚಿಗೇಗಿರು$_{229}$ವೋಳ ಮುಟ್ಟಿ ಬಾರೋ ನಾಗಿಂದ್ರ ।

ಮುಟ್ಟಿ ಬಂದಾರೆ ದೊಡ್ಡಮ್ಮ ಮಂಚಿಕೇ
ವಳಗೆ ಬಡಕೊಂತಾಳೋ ।
ಮಂಚೀಕೆ ಹಿಂದೆ ವಡ್ಡರ ಅನುಮಯ್ಯ230 ।
ಇಲಿ ಅಗೆಯತಾನೆ231 ।

ಯಾಕೋ ದೊಡ್ಡಮ್ಮ ಹಿಂಗೆ ಬಡಕಂತೀಯಾಂತಾಣೆ
ವಡ್ಡರನುಮಯ್ಯ । ಜುಂಜಪ್ಪನಾಗರಾವ ಬಿಟ್ಟೇ
ಕಡಿಸ್ಯವನೆ । ನಮ್ಮ ಹೊನ್ನಟ್ಟಿ ಅಲೇಗೌಡನಿಗೊಂದು
ಮಾತ ಹೇಳಯ್ಯ ।

ಓಡೋಡಿ ವೋಗಿ ವಡ್ಡರನುಮಯ್ಯ ।
ಏನೋ ಹೊನ್ನಟ್ಟಿ ಆಲೇಗೌಡ ।
ಜುಂಜಪ್ಪ ನಾಗರಾವ ಬಿಟ್ಟೇ ಕಡಿಸ್ಯವನೆ ।
ದೊಡ್ಡಮ್ಮಂಗೆ ।

ಏನೇನೋ ಜುಂಜಪ್ಪ ನಿನ ತಂದೆ ಕುಡುದಾ
ಮಲೆ ಹಾಲೆ ಮಿಗುಲಾಗವೆ ।
ನೀನು ನಾಗರಾವ ಬಿಟ್ಟೆ ಕಡಿಸಬೋದೇನೋ ।

ಬ್ಯಾಡ ಕಣೋ ಮಾವ ಇನ್ನೊಬ್ಲು ಮಡದಿ ತಂದು
ನಿನಗೆ ಮದುವೆ ಮಾಡುಸುತೀನಿ ।
ಬ್ಯಾಡ ಕಣೋ ನಿನಗವಳ ಸುದ್ದಿ ।

ಬ್ಯಾಡಕಣೋ ಜುಂಜಪ್ಪ ಪ್ರಾಣ ಕಳಿ
ಬ್ಯಾಡಂದೋ । ಜುಂಜಪ್ಪನ ಪಾದದ
ಮ್ಯಾಗೆ ಹೊನ್ನಟ್ಟಿ ಆಲೇಗೌಡ ಬಿದ್ದವ್ನೆ ।

ದೊರೆತಾನ ಬಿಟ್ಟೇ ಬರುತಾನೆ ।
ಗುಂಡೀನ ಮ್ಯಾಕೆ ಬಂದು ಮಾರ ಮೈಲಣ್ಣ ।
ಉಗುಣೀ ಪೊದೆಯಿಂದ ಎದ್ದೇ ಬರುತಾವೆ
ಹುಡುಗಾರು ।
ಯಾಕೋ ಮಾರ ಮೈಲಣ್ಣ ಉಗುಣೀ ಗಿಡದಾಗೆ
ಕೂಕಂಡಿದ್ರಿ

ಯಣ್ಣಾ ಸೀರ್ಯಾದ ದಂಡು ಬಂತು ಕಣಣ್ಣಾ ।
ನಾವು ಹೆದ್ರಿಕೊಂಡು ಉಗಣಿ ಗಿಡದಾಗೆ ಕೂಕಂಡೋ ।
ವೋರಿ ದನಗಳೆಲ್ಲ ಗುಡ್ಡೆ ಹಾಕಿ ಮೂರು ಸುತ್ತ ತಿರುಗಿ ।

ದನವೀನ ಮುಂದೆ ನಿಂತುಕೊಂಡೋ । ದಂಡು ಬಂದೋ
ಬಿರುಸೀಗೆ । ಒಂದು ಕುಪ್ಪಳು ಕುಪ್ಪಳಿಸಿ ಅರ್ದದಂಡ
ಸಿಗಿದಾಕಿದ್ವಣ್ಣ ।

ದಂಡೆಲ್ಲ ಮಕ್ಕೆಟ್ಟು[236] ದೊಡ್ಡಳವನಳ್ಳಿ
ಕಡಿಕೆ ಹೋತು ಕಣಣ್ಣ ।
ಏನೋ ಮಾರ ಮೈಲಣ್ಣ ಸಾಲಿಗೆರೆಯೋಟು
ಹಾಲ ಉಯ್ದಿದ್ದೀವಿ ಹೋರೀಗೇ ।

ಸಿವಗಂಗೆ ಬೆಟ್ಟದೋಟ ಬೆಣ್ಣೆ
ತಿನಸಿದ್ದೀವಿ ವೋರಿಗೆ ।
ವೋರಿಯಿದ್ದಂಗೇ ನಮಗೇನೋ
ಭಯ ಮಾರ ಮೈಲಣ್ಣ ।
ವೋತಾನೆ ಸೀರ್‍ಯದ ದೊರೆತಾನ
ಮಾಡೋಕೆ ಜುಂಜಪ್ಪ ।

ಚಿನ್ನಮ್ಮನ ಅಣ್ಣಗೋಳು ತಂಗಿ ಮನಿಗೆ
ಬರುತಾರೆ । ಏನೇ ಚಿನ್ನಮ್ಮ ಮಾರ
ಮೈಲಣ್ಣನ ಹುಯ್ದು ಪಾಪಳಿ[237]
ಗಿಡಕೆ ಕಟ್ಯವ್ರೆ । ದೊಡ್ಡೋಳವನಳ್ಳಿ
ನಾಯ್ಕರ ಮಕ್ಕಳು ।
ಜುಂಜಪ್ಪನ ತಲೆಯೇ ಇಲ್ಲ ಕಾಣೆ ಚಿನ್ನಮ್ಮ ।

ನಿಜವೇನಣ್ಣ ಈ ಮಾತು ನಿಜವೇನಣ್ಣ ।
ಊಕಣಮ್ಮ ಈಗೋಗಿದ್ದೋ ವೋಗಿ ನೋಡಿ ಬಂದ್ವಿ ।

ಸಿರಿಗಂದದ ಸೋದೆ[238] ಕಡಿದು ಗಿಡದಾಗೆ
ಅಟ್ಟ ಇಕ್ಕಿರಿ ವೋಗಿರಣ್ಣ ।
ನೀರಾಕಿಕೊಂಡು[239] ಮಡಿಲಕ್ಕಿ ಕಟಿಕೊಂಡು
ಕೊಂಡಾಕೆ[240] ನಾನೇ ಬರುತೀನಣ್ಣ ।

ಮಾದಿಗರ ಓಬಳಣ್ಣ ಜುಂಜಪ್ಪಗೆ
ಬಾರುಮೆಟ್ಟಿಕೊಂಡೋಗ್ಯವ್ನೆ ।
ಮಾದಿಗರ ಓಬಳಯ್ಯಗೆ ಮಾಡಿ ಉಣ್ಣಾಕಿಕ್ಕಿ ।
ಕೈಗೆ ವೀಳ್ಯವ ಕೊಟ್ಟು । ನಾವು ಬಂದು

ಸ್ಯಾನೆ ದಿನಾತು । ನಮ್ಮ ತಾಯಿ ಹಿರಿ
ಯಟ್ಟಿಯಾಗ್ದಂಗವಳೋ ನೋಡಿಕೊಂಡು
ಬಾವೋಗೋ । ಬತ್ತಾನೆ ಮಾದಿಗರ ಓಬ್ಳಯ್ಯ ।
ಬತ್ತಾನೆ ಮಾದಿಗರ ಓಬಳಯ್ಯ ।
ಕೊಂಡ ಕೆಂಡ ಹಚ್ಯವರೆ ಪ್ರಜೆ
ಪಾಲಕರೆಲ್ಲ ಕೂಡ್ಯವ್ರೆ ।
ತಾಯಿ ಚೆನ್ನಮ್ಮ ನಡೀತಾಳೆ ಕೊಂಡ
ಕೆಂಡಾಕೆ । ಮಾದಿಗರ ಓಬಳಯ್ಯ
ವೋಗಿ ನೋಡಿದ್ರೆ ಯಾರೂ ಜಾಗಬಿಡ್ರು ವೋಗಾಕೆ
ಚಳುಕು[241] ಬಂದೋನಂಗೆ ವೊಟ್ಟೆ
ಮಕಡೇ ಬಿದ್ದು ಎಲ್ಲರ ಕಾಲ
ದೆಸೆ ಬಿದ್ದು ವೋಗಿ ಕೆಂಡ
ಕೊಂಡತ್ತಾವ ನಿಂತುಕಂಡು ।
ಯಾಕಮ್ಮ ಇಲ್ಲಿ ಬಂದಿದ್ದೀಯಾಂತ ।
ಕೇಳುತಾನೆ ಚೆನ್ನಮ್ಮನ್ನ

ಏನೋ ಮಾದಿಗರ ಓಬಳಣ್ಣ ।
ಮಾರ ಮೈಲಣ್ಣನ ಉಯ್ದು
ಪಾಪಡಿ ಗಿಡಕೆ ತಲೆಯ ಕಟ್ಯವರಂತೆ ।
ಜುಂಜಪ್ಪನ ತಲೆಯೇ ಇಲ್ಲವಂತೇ ।
ನಮ್ಮಣ್ಣಗಳು ಬಂದು ಯೇಳಿದ್ರು ಕಾಣೋ
ಓಬಳಯ್ಯ । ಕೊಂಡ ಕೆಂಡ । ಆತೀನೋ ।

ಯಾರಮ್ಮ ಈ ಮಾತ ಹೇಳಿದೋರು ।
ನಾನೋಗಿದ್ದೆ ಜುಂಜಪ್ಪಗೆ ಬಾರುಮೆಟ್ಟ
ತಕ್ಕೊಂಡು ।
ಮಾಡಿ ಉಣ್ಣಾಕಿಕ್ಕಿ ಕೈಗೆ ಈಳ್ಯವ ಕೊಟ್ಟು
ನಮತಾಯಿ ಹೆಂಗವಳೋ ನೋಡಿಕೊಂಡು
ಬಾರೆಂದ ಜುಂಜಪ್ಪ ।

ಅವರಣ್ಣಗಳು ನೀನ್ಯಾರೋ ಎತ್ತಲೋ ಎಂತ ।
ಮಾದಿಗರ ಓಬಳಯ್ಯನ್ನ ವತ್ತಲಿಸ್ತಾರೆ[242] ।

ಏನೆ ತಾಯಿ ಚೆನ್ನಮ್ಮ ನೀನು ನಿಮ್ಮ
ದೇವರು ದಿಂಡರುಗುಳನ ನೆನೆಕೊಂಡು ।

ನನ್ನ ಮಕ್ಕಳೇ ಇದ್ದರೆ ನನಗೇನಾರ
ಅಪ್ಪಣೆ ಕೊಡಲೆಂದು ಎರಡಾ ಕೈ
ಜೋಡಿಸಿಕೊಂಡು ಬೇಡಿಕೋಂತ
ಹೇಳಿದ ಮಾದಿಗರ ಓಬಳಯ್ಯ ।

ನನ್ನ ಮಕ್ಕಳೇ ಇದ್ದಿದ್ರೆ ನನಗೇನಾರ
ಅಪ್ಪಣೆ ಕೊಡಲಿ । ಎರಡೂ ಕೈಯೆತ್ತಿ
ಜೋಡಿಸಿ ಬೇಡಿಕಂತಾಳೆ ತಾಯಿ ಚಿನ್ನಮ್ಮ ।

ಸಿವಸಿವೆಂಬೋ ಸಿಪ್ಪ ಗೊಡಲಿಬಿಟ್ಟ
ಜುಂಜಪ್ಪ ।
ತಾಯಿ ಕೈಗೆ ಬಂದು ಕೂಕಂತು ಕೊಡಲಿ ।
ನನಮಕ್ಕಳವರೆಂದು ಹಿರಿಯಟ್ಟೀಗೆ ನಡೆದಾಳೆ ।

ವೋದಾ ಮಾದಿಗರ ಓಬಳಯ್ಯ ।
ಏನೋ ಮಾದಿಗರ ಓಬಳಯ್ಯ ।
ನಮ ತಾಯಿ ಚನ್ನಾಗವಳೇನೋ ।

ಏನೇಳಲಿ ಜುಂಜಪ್ಪ ಮಾರ ಮೈಲಣ್ಣನ ಉಯ್ದು ।
ಪಾಪಡಿ ಗಡಿಕೆ ತಲೆಯ ಕಟ್ಯವರೆ ।
ಜುಂಜಪ್ಪನ ತಲೆಯೇ ಇಲ್ಲಂತ ವೋಗಿ ಯೇಳಿ ।
ನಿಮ್ಮಾವಗಳು । ಅಂತಾ ಮಕ್ಕಳನ್ನ ಕಳಕೊಂಡು
ನಾನೆಷ್ಟು ದಿನವಿರಬೇಕಂತ ತಾಯಿ ಚಿನ್ನಮ್ಮ ।

ಅವರಣ್ಣಗಳು ಸಿರಿಗಂದದ ಸೋದೆ
ಕಡದು ಅಟ್ಟ ಇಕ್ಕಿ ।

ತಾಯಿ ಚಿನ್ನಮ್ಮ ಕೊಂಡಾಕೆ ನಡೆದಿದ್ದು ।
ಪ್ರಜಪಾಲಕರೆಲ್ಲ ಕೂಡಿದ್ರು । ಜುಂಜಪ್ಪ
ನಾನು ಎಲ್ಲಾರ ಕಾಲದೆಸೆ ಉಳ್ಳಿಕಂಡು
ವೋಗಿ । ಕೆಂಡ ಕೊಂಡಾಗೋತಕ್ಕೋಗಿ ।
ನಿಂತಕಂಡು ಯಾಕಮ್ಮ ಇಲ್ಲಿ ಬಂದೇಂತ ಕೇಳಿದೇ ।

ಮಾರ ಮೈಲಣ್ಣ ನುಯ್ದು ಪಾಪಡಿ ಗಿಡಕೆ
ತಲೆಯ ಕಟ್ಯವರೆ । ಜುಂಜಪ್ಪನ ತಲೆಯೇ

ಇಲ್ಲವಂತೆ । ಅಂತ ಯೇಳಿದ್ರಂತೆ ಜುಂಜಪ್ಪಾ
ನಾನೀಗೋಗಿದ್ದೆ ಬಾರು ಮೆಟ್ಟ ತಕ್ಕೊಂಡು
ಜುಂಜಪ್ಪ ಮಾಡಿ ಉಣ್ಣಾಕಿಕ್ಕಿ ಕೈಗೀಳ್ಯವಟ್ಟು
ನಮ ತಾಯೆಂಗವಳೋ ನೋಡಿಕಂಡೇ

ನೀನು ಎರಡು ಕೈಯೆತ್ತಿ ಜೋಡಿಸಿಕೊಂಡು ।
ನಿನ್ನ ಮಕ್ಕಳನ್ನ ಕೇಳಿಕಳಮ್ಮ । ಸಿವಸಿವೆಂಬೋ
ಸಿಪಕೊಡಲಿ ಕೈಯಾಗೆ ಕೂಕಂತು ।
ಹಿರಿಯಟ್ಟಿಗೋದಾಳು ಜುಂಜಪ್ಪ ನಿನತಾಯಿ ।

ಏನು ಕೇಳಿಕಂತೀಯ ಕೇಳಿಕೋಳೋ
ಮಾದಿಗರ ಓಬಳಯ್ಯ ।
ನೀನು ಕೊಟ್ಟ ಬಾಗ್ಯವೆ ಮಿಗುಲಾಗ್ಯೆತೆ
ಜುಂಜಪ್ಪ । ಕೆರೆಗೆ ವೋದರೆ ಓಬಳಿ
ದೇವರು ಮುಂದೋಗಬೇಕು ।
ನೀನು ಯಿಂದೆ ಬರುಬೇಕು ।
ಅಂಗೇ ಆಗಲಿ ವೋಗಯ್ಯ । ಓಬ್ಳಯ್ಯ

❑ ❑ ❑

14. ಹಸೆಯನ್ನೆ 15. ಗೌರ ಚಂದ್ರದ ಘನ 16. ಹನ್ನೆರಡು ವರುಷ 17. ಹುಟ್ಟುತ್ತಾನೆ 18. ಜರಡಿಯಲ್ಲಿ 19. ನೀರ ಹೊರಿಸು 20. ಕಾಡಿನಲ್ಲಿ ಆವ (ಹಸು) 21. ಹೆಸರು 22. ಕಂಬಳಿ (ತಲೆ ಮೇಲೆ ಕವಿಚಿಕೊಳ್ಳುವ ಗೊರಸು) 23. ಮೇಸುವುದಕ್ಕೆ 24. ಒಂದು ಸ್ಥಳ 25. ಹುಡುಕಾಡು (ಅರಚುತ್ತಾ ಓಡಿಯಾಡು) 26. ನೋಡಿರೆಂತ ಸೇವಕರನ್ನ 27. ಆ ಮನುಷ 28. ಸಾಯಂಕಾಲದವರೆಗೂ 29. ನಿರ್ದಿಷ್ಟ ಜಾತಿಯವನು 30. ಭರ್ತಿ 31. ನಿನ್ನ ಹೆಂಡಿರ 32. ಕೂಡೆ 33. ದೊಡ್ಡಿ 34. ಕಟ್ಟಿಸಿಕೋ 35. ಸೇವಕರನ್ನು 36. ಮುಳ್ಳು ಗಿಡ 37. ತಂಗಡಿ (ಗಿಡ) 38. ಸೌದೆ 39. ಹೊಗೆ 40. ಹೊಗೆ ಪುಡಿ 41. ಗೌಡನ ಹತ್ತಿರಕ್ಕೆ ಒಂದು ಆಳನ್ನ 42. ಬರಹೇಳಂದ 43. ಗಾಡಿಯಲ್ಲಿ 44. ಹಜಾಮರನ್ನ 45. ಕ್ಷೌರ 46. ಅಕ್ಕ ಪಕ್ಕ 47. ಗೂಡಿನ ಬಳಿಗೆ 48. ನಿನ್ನ ಹೆಂಡತಿ ಬಳಿಗೆ 49. ಶಿವಗಂಗೆ (ಬೆಂಗಳೂರು ಜಿಲ್ಲೆಯ ಕ್ಷೇತ್ರ) 50. ಹೋದೆ 51. ವರ್ಷ 52. ಹೋಯಿತೆಂದು 53. ಹಾಗಂದ 54. ಕುಳಿತುಕೊಂಡನಂತೆ 55. ಆಗೋ ಇಗೋ ಅನ್ನುವ ಹೊತ್ತಿಗೆ 56. ಒಂಬತ್ತು 57. ನೋವು 58. ಪರದೆ (ತೆರೆ) 59. ಕುಳಿತುಕೊಂಡನಂತೆ 60. ಮುಖ ಮಾಡಿಕೊಂಡು 61. ಬೆನ್ನಿನಲ್ಲಿ 62. ಕೈ ಮುಗಿದುಕೊಂಡು 63. ಸ್ವಲ್ಪ 64. ಕುಳಿತುಕೊಂಡಿತಂತೆ 65. ಬಳಲಿಕೆ (ನೋವು) 66. ಹೊಟ್ಟೆ ಒಳಗಿನ 67. ಕುಳಿತುಕೋ 68. ಹೋದರೆ 69. ಎಲ್ಲಿಯಾದರೂ 70. ಶಾಸ್ತ್ರ (ಜ್ಯೋತಿಷ್ಯ) 71. ದೊಡ್ಡ ಆಲದ ಮರ 72. ಶಾಸ್ತ್ರ ಹೇಳುತ್ತೀನಿ 73. ನಾಣ್ಯ 74. ಕಕ್ಕೆ ಎಲೆ 75. ಮಗನು ಹುಟ್ಟಿದ್ದಾನೆ. 76. ಕಳೆದುಕೊಳ್ಳಬೇಕು

77. ವಶವಾಗುತ್ತದೆ. 78. ಹಿರಿಹಟ್ಟಿ 79. ಕರೆದುಕೊಂಡು ಹೋಗಿ 80. ಮಕ್ಕಳು ಹುಟ್ಟಿದ ಹನ್ನೊಂದನೆಯ ದಿನಕ್ಕೆ ಒಳಕ್ಕೆ ಕರೆದುಕೊಳ್ಳುವಾಗ ಮಗುವಿನ ಬಾಯಿಗೆ ದೇವರ ಕುರಿಯ ಹಾಲನ್ನು ಬಿಟ್ಟು ಮಾಡುವ ಸಂಸ್ಕಾರ 81. ಬಾಹೋಗಣ್ಣ 82. ರೋಗ 83. ಶಾಸ್ತ್ರ (ಜ್ಯೋತಿಷ್ಯ) 84. ಹೋಗಿಲ್ಲ 85. ಯಜಮಾನರು 86. ಹೇಳು 87. ಹಟ್ಟಿ 88. ಹೋದರು 89. ಕುರಿತುಕೊಂಡು 90. ಹೇಳು 91. ಶಾಸ್ತ್ರ 92. ಹುಟ್ಯವ್ನೆ 93. ಹುಟ್ಟಿದ ಮೇಲೆ ಮಾಡುವ (ಗಂಜಲ ಕುಡಿಸಿ) ಸಂಸ್ಕಾರ 94. ಹುಡುಗರಾಗಿದ್ದಾಗ 95. ಹುಡುಕಾನೀ 96. ಕೂತು ಕೊಳ್ಳಿರಯ್ಯ 97. ಹಿರಿ 98. ಹೋಗ್ತಾರೆ 99. ಹಾಕಿಸಿ 100. ಹಿರೇ 101. ಚಿನ್ನಮ್ಮ 102. ಹೊತ್ತಿಗೆ 103. ಮಕ್ಕಳ ಹೆಸರು 104. ಅಗೋ, ಇಗೋ 105. ಮಗು ಜನಿಸಿದಾಗ ಮಾಡುವ ಒಂದು ಸಂಸ್ಕಾರ 106. ಹೆಸರ 107. ಹಿರಿ 108. ಸಿನ್ನಹೆ–ಚಿನ್ನೇ 109. ಮಗನಿಗೆ 110. ಲಗ್ನ 111. ಮಡಿಲ 112. ಹೋರಿ 113. ಸಂತೆಗೆ 114. ಹೋಗಿದ್ದಾರೆ. 115. ಕುಳಿತುಕೊಂಡು 116. ಹಾಸಿ 117. ಹಿಂದಕ್ಕೆ 118. ಹನ್ನೆರಡು 119. ತೆಗೆದುಕೊಂಡು ಹೋಗಿ 120. ಹಾಲು 121. ಕೊಳಗ (ಅಳತೆಯ ಮಾನ) 122. ಹೊನ್ನು 123. ಹೊತ್ತಿಗೆ ಮುಂದೆ (ಸೂರ್ಯೋದಯಕ್ಕೆ ಮೊದಲು) 124. ತೆಗೆದುಕೊಂಡು 125. ಸೋದರಳಿಯಂದಿರ 126. ಹಿಂದೆ 127. ಮಾವಂದಿರು 128. ಹೀಗಾದರೆ 129. ಕುಮಾರ 130. ಹುತ್ತ 131. ಆಚೆ 132. ಈಚೆ 133. ಮಹಾಗುರುವೇ 134. ಕರೆದ 135. ಮೊಲೆಯ ಹಾಲು 136. ಹೆಣ್ಣು 137. ಮಗನಿಗೆ 138. ಕಟ್ಟೆಯ ಹೆಸರು 139. ತಿರುವವರು 140. ಒಂದು ಊರಿನ ಹೆಸರು 141. ಬಹಳ 142. ಶೂನ್ಯ 143. ಹೋಗ್ತಾರೆ 144. ದನ 145. ಖರ್ಚಿಗೆ 146. ಹತ್ತು 147. ಎಡೆ 148. ಒಂದು ದೇವತೆ 149. ಹೋತ 150. ಬಡ ಕರು 151. ಹೂಣು 152. ಒದಗಿಸಿ 153. ಸಂಜೆ 154. ಕೆತ್ತಿಸುವನು 155. ಸೂತ್ರವನ್ನು 156. ಬಿಡಿಸುವನು 157. ಕರಿಹೋತ 158. ಕತ್ತರಿಸುವನು 159. ಮಂತ್ರ 160. ಜಾಡುತಪ್ಪಿಸಿ 161. ಆಚೆಗೆ 162. ಹೊತ್ತುಕೊಂಡು 163. ಎಲ್ಲ ಪಂಗಡ ಬಿಟ್ಟು 164. ಮುಂಜಾನೆ 165. ಮದ್ಯಾಹ್ನ 166. ತಿರುವಿಹೊಡೆ 167. ಮಂತ್ರದ ಬಿಟ್ಟರ ಚಿಕ್ಕಮ್ಮ (ದೇವತೆ) 168. ನೋಡಿದರು 169. ಒಂದು ಗುಂಡನೆಯ ಕಾಯಿ 170. ಮಾಡಿದರು 171. ಪೊರಕೆ ಕಡ್ಡಿ 172. ಬಿಟ್ಟರೆ ಚಿಕ್ಕಮ್ಮ 173. ಗುಂಪಿನ ಯಜಮಾನನಾದ ಹೋರಿ 174. ಖಂಡ (ಮಾಂಸ) 175. ಹೂಣಿಸಿ 176. ದಾರಿಗೆ (ಹಾದಿಗೆ) 177. ಅಡ್ಡ 178. ಬರುತ್ತಾರೆ 179. ಹುಣಿಸೆ 180. ಅರ್ಧ 181. ಹೊಡೆದರೂಂತ 182. ನಿಷ್ಠೂರದ ಮಾತುಗಳು 183. ನೆರಳು 184. ಬೆಟ್ಟದ ಬುಡ 185. ಹುಡುಕಾಡಿ ಕೂಗಿಕೊಂಡು 186. ಮೂರು ಖಂಡುಗ (ಆಳತೆ ಪ್ರಮಾಣ) 187. ವಾಸನೆ 188. ಹೋಗುತ್ತಾರೆ 189. ಮಧ್ಯಾಹ್ನದ 190. ಧೂಳಿಪಟ (ನಾಶ) 191. ಸಾಯಂಕಾಲ 192. ಕೂಡಿ 193. ಮಲಗಿದ್ದಾರೆ. 194. ಮುಂಜಾನೆ 195. ನಾಮ ಹಾಕಿಕೊಳ್ಳುವ ನಿತ್ಯ ಕರ್ಮ 196. ಇಕ್ಕುವುದನ್ನು ಕಂಡು 197. ಕೊರಲು 198. ಮಾಟ ಶೂನ್ಯ 199. ನಿಮ್ಮನ್ನು 200. ಒಳ್ಳೆಯದಾಯ್ತು 201. ಹಾಕಿಕೊಂಡು 202. ನಾವು ಹೇಳಬೇಕು 203. ಕಲ್ಲ ಹತ್ತಿದರೆ 204. ಗೊಲ್ಲರ ಹುಡುಗ 205. ನಿನ್ನ ಹೆಂಡಿರು 206. ಭೂತಪ್ರಯೋಗ 207. ಹಾಕಿಕೊಳ್ಳುತ್ತಾನೆ. 208. ಬಂಡೆ ಅಡಿಯ 209. ಮುಖವ 210. ಬಹಳ 211. ಉಪಕಾರವಾಯ್ತು 212. ಮಲಗಿಕೋ 213. ನಡು ಊರಿನಲ್ಲಿ 214. ಗೌಡನ ಹೆಂಡಿರುಗಳು 215. ಪೊರಕೆ ಕಡ್ಡಿ 216. ಮದುವೆಯಾದ ಹೆಂಡತಿಯನ್ನ ಕಡಿದು 217. ಎಲ್ಲಿಯಾದರೂ 218. ಔಷಧ (ಮದ್ದು) 219. ಕೊಡಿಸು 220. ಹೋಯಿತು 221. ನಿನ್ನ ವಿಷವ 222. ಹೆಂಗಸರ ಹತ್ತಿರಕ್ಕೆ ಹೋಗಿ 223. ಏಣಿ 224. ಹಾಕಿಕೊಂಡು 225. ವಾಸನೆ 226. ಹೊಡೆದು 227. ನಿಂತುಕೊಂಡಿತು 228. ಹಸುವಿನ ದೊಡ್ಡಿ 229. ಕಾವಲು ಕೂರವ ಎತ್ತರವಾದ ಚಪ್ಪರ 230. ಹನುಮಯ್ಯ 231. ನೆಲದಲ್ಲಿರುವ ಇಲಿಗಳನ್ನು ಅಗೆದು ಹಿಡಿಯುತ್ತಾನೆ. 236. ಮುಖ ಕೆಟ್ಟು 237. ಒಂದು ಜಾತಿಯ ಗಿಡ 238. ಸೌದೆ 239. ಸ್ನಾನ ಮಾಡಿ 240. ಹೆಣ ಸುಡುವ ಕೊಂಡ 241. ಹೊಟ್ಟೆ ಚಳಕು 242. ವತ್ತರಿಸಿ ನೂಕುತ್ತಾರೆ.

❑ ❑ ❑

## ೬.೩ ತಾಳೇದುರುಗಿ ಸಂದು

## (ಆಯ್ದ ಭಾಗ)

– ೧ –

ಮೊದುಲೆ ನೆನುದೇವೋ
ಮದುನಾರಿ ವೀರನ
ಮದುಗುದು ಗುಡ್ಡದ ಕಲಿಬೀರೋ
ಮದುಗುದು ಗುಡ್ಡದ
ಕಲಿಬೀರು ಜುಂಜಪ್ಪನ
ಮೊದುಲೇ ಸಲ್ಲೇತ್ತಿ ನೆನುದೇವೋ ॥

ಅಂತಂಬ ಗಳಿಗೆ ಒಳುಗೆ
ಜುಂಜಪ್ಪ ಮಾರಣ್ಣ ಮೈಲಣ್ಣ
ಹಾವಿನು ಗೂಡಿನು ಮುಂದೆ
ಮನೀಗಿದ್ದರು ಶಂಕರನೆ
ಮುಂಗೋಳಿ ಕೂಗೊದು
ಮೂಡುಲು ಕೆಂಪೇರೋದು
ತ್ವಾಟದಾಗುಳು ಪುಷ್ಪ
ಕಳಕಳುನೆ ನಗುವುದು
ಎದೆಯನೆ ಮ್ಯಾಗುಳು ಲಿಂಗ
ಶಿವಪೂಜೆ ಗೊಂಬ ಹೊತಿನಾಗ
ಎದ್ದಾನೊ ಜುಂಜಪ್ಪ ಗಳಿಗಾಗೋ ॥

ಎದ್ದೇಳುತ್ಲೆ ಶಂಕರನೆ
ಹಾವಿನ ಗದ್ದಿಗೇ
ಭೂಮಿಗಿಳಿಯೊದಣ್ಣ
ಸೇಳಿನ ತಲಿದಿಂಬಯ್ಯ
ಹುತ್ತುಕ್ಕೂ ಸಾಗುದಮ್ಮ

---

ಹಾಡಿದವರು : **ಮಾಡ್ಡಾನಹಳ್ಳಿ ದಾಸಪ್ಪ,** ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.
ಸಂಗ್ರಹ : **ಚಲುವರಾಜು**
ಕೃತಿ : ಜುಂಜಪ್ಪ, ಪ್ರಸಾರಾಂಗ, ಬೆಂಗಳೂರು ವಿ.ವಿ., ವಿದ್ಯಾರಣ್ಯ, ಹಂಪಿ, 1997

ಮಂಡುರುಗಬ್ಬೆ ಹಾಸಿಗೆ
ಭೂಮಿಗಿಳಿಯೋದಯ್ಯೋ ಗಳಿಗಾಗೋ ॥

ಆಗಲೇ ಭಗುವಂತೋ
ದಿನುವೇನೆ ಕಳುದಿತು ಸ್ವಾಮಿ
ಕಾಲವೇ ಮೀರಿತಯ್ಯೋ
ಸ್ವಾಮಿನೇ ಭಗುವಂತ
ಎದ್ದನೇ ಕುಂತುಗಂಡು
ಎದ್ದೇಳಿರೋ ಕಂದಮ್ಮ
ಮಾರಣ್ಣ ಮೈಲಣ್ಣ
ತಿಂಗಳಿಗೆ ಮೂರು ಮಳಿಗಗಾಳೊ ॥

ಅತ್ತದು ಮಳಿಬಂದು
ಸಿತ್ತೆನೆ ಬಿಸಿಲು ಕಾದು
ಮತ್ತೇ ಸ್ವಾತಮುನು
ಜಡಿ ಇಡುದೋ
ಮತ್ತೇ ಸವಾತಿ ಮಳಿಯೇ
ಜಡಿಯಿಡುದು
ಗೋವು ಬಿದ್ಯೆತಣ್ಣ
ಜೀವಾನೆ ನದಿಗಳು
ಕೋಡರುದೆ ಬರುತ್ತಾವೆ
ನೂರಾ ಒಂದು ಕಾವುಲುನ
ಸೋಮಾರ ಹನ್ನೆರಡು
ಗಂಟೆಗೂ ಮೇಸಬಹುದು ॥

ಎದ್ದೇಳಿರೋ ಕಂದಮ್ಮ
ದನಕರುಗಳೂ ಹೊರವಡುದು
ಹಾಲು ಕುಡಿಸಿರಂದು
ತಮ್ಮುಗೊಳಿಗ್ಹೇಳಿದನೂ ಸ್ವಾಮಿ ಶಿವುನೀಗೋ ॥

ಆಗಲೇ
ಮಾರಣ್ಣ ಮೈಲಣ್ಣ
ಎದ್ದೇನೆ ಭಗುವಂತಾ
ದನಕರುಗಳಾ

ಹೊರವಡದು
ಹಾಲುಗುಳೆ ಕುಡಿಸ್ಯೆವುರೆ
ಆಗಲೇ ಕುಡಿಸಿನ್ನ
ಮೂವಾರಣ್ಣ ತಮ್ಮುಗೂಳೊ
ದನಕರುಗೊಳು ನೋಡಿ
ಸಂತೋಷ ಪಡುವುತ್ತಾ
ಮೊಗುತ್ತುದು ಮುಂದೆ
ಮನಿಗೆ ಕುಂತವ್ರೋ ॥

ಕುಂತುಗೊಂಡಿರುವಾಗ
ದೇವುರು ಕೃಪೆಯಿಂದ
ಹೇಳು ಆಗಲೇ ಕೇಳಿರಣ್ಣಾ
ನೂರೊಂದು ಕಾವುಲು
ಮೇಯಿಸ್ಗಂಡು ಬರುಬೇಕು ನಾವು
ಅಂದ್ಹೇಳೆ ಸ್ವಾಮಿಗ್ಹೇಳೆವುರೋ ॥

ನೂರೊಂದು ಕಾವುಲು
ಮೇಯಿಸ್ಗಂಡು ಜುಂಜಪ್ಪ
ದನುಗೂಳು ಕರುಕೊಂಡ್ಹೋಗಿ
ಊರಿಗೂ ಬರುತ್ತಾನಯ್ಯೋ ಗಳಿಗಾಗೋ ॥

ದನಗೊಳು ಮೇಯಿಸಿಗಂಡೊ
ಊರಿಗೂ ಬರುವಾಗಮ್ಮ
ದೇವುರು ಕರುಣದಿಂದ
ಕೇಳಿರೀ ದೇವುತಿಗಳಿರಾ
ಹರಹರನೇ ಶಿವುನೇ ಶಂಕರುನೇ ॥

ಏಳೇನೇ ಜನುವಣ್ಣ
ಸ್ವಾದ್ರುಮಾವುಗುಳಟ್ಟಿ
ದಿನ್ನೇನೆ ಒಳುಗಯ್ಯೋ
ಮಾರಣ್ಣ ಮೈಲಣ್ಣ
ಜುಂಜಪ್ಪ್ನ ದನಗೊಳು
ಕರುಕೊಂಡೆ ಬರುತಾರೋ ॥

ಬರುವಾಗೇಳು ಜನ
ಜುಂಜಪ್ಪನು ಮಾವುಗೊಳು
ಅವುರಟ್ಟಿನೆ ಮುಂದೊಂದು
ಸಣ್ಣಾಲುದು ಮರುದಾನೆ
ಜಗತಿನೆ ಇರುವುದಣ್ಣ ಗಳಿಗಾಗೋ ॥

ಆ ಜಗತಿ ಮ್ಯಾಲಿ
ಕೂಂತ್ಗಂಡು
ಏಳು ಜನ ಮಾವುಗೊಳು
ಜುಂಜಪ್ಪನುದನುಗೊಳೆನೆ ನೋಡಿನ್ನ
ಹೊಟ್ಟಿ ಉರಿ
ಪಡುತ್ತಾರೊ ಗಳಿಗಾಗೋ ॥

ನೋಡಿರಯ್ಯೋ ನಮ್ಮೇಳು
ಜನುದಿಂದ ಹುಟ್ಟಿದಂತ
ನಮ್ಮ ಕಿರಿತಂಗಿ ಚಿನ್ನಮ್ಮುನಿಗೆ
ಏಳು ಬಳುವಳಿ ಕರುಗಳಂದು
ದಾನ ಕೊಟ್ಟೇವು ನಾವು
ಏಳು ಕರುಗೊಳೋಳುಗೆ
ಏಳು ಲಕ್ಷದ ದನುಗಳ
ಆಳಿದುನೋ ಜುಂಜಪ್ಪ ಗಳಿಗಾಗೋ ॥

ಅಂತಂಬ ಗಳಿಗೆ ಒಳುಗೆ
ಎಂಥೆಂಥ ಹೊದ್ದೇಕಾರುರುನೆಲ್ಲ
ನುಂಕೆಂಡನಣ್ಣ ಜುಂಜಪ್ಪ
ಎಂಥೆಂಥ ಸೂನ್ಯಗಾರುರೊನೆಲ್ಲ
ನುಂಗ್ನೀರು ಕುಡಿದಾನಣ್ಣ
ಇವ್ನಾವುಳಿಗೆ ಒಳುಗಯ್ಯೋ
ಹಾಳದುಕಾಗೋದಿಲ್ಲ
ಬಾಳದುಕಾಗೋದಿಲ್ವಯ್ಯೋ ನಾವು ಗಳಿಗಾಗೋ ।\

ಅಂದೆನೇ ಮಾತಾಡುವಾಗ
ಜುಂಜಪ್ಪನು ಹಿರಿಯಮಾವ
ದೊಡ್ಡ ಸಿನ್ನೆಗೌಡ
ಏನೆಂದೇ ಹೇಳುತ್ತಾನೋ ॥

ಕೇಳಿರಲೇ
ಇದಕ್ಕೊಂದು ಉಪಾಯ ಮಾಡಬೇಕು ನಾವು
ಇರುಗೊಂದಿ ಸೀಮೆ ಒಳುಗೆ
ಏಳು ನಾಲಿಗೆ ದುರ್ಗಿ ಅವುಳಂತೆ
ಆ ಏಳು ನಾಲಗೆ ದುರುಗಿಗೆ
ಆರು ತಿಂಗಳು ನಿದ್ರೆಯಂತೆ
ಮೂರು ತಿಂಗಳು ಆವುರುವಂತೆ
ತಾಳೆ ದುರುಗಿಗೆ
ಆರು ತಿಂಗಳು ಮನ್ಗಿಬಿಟ್ರೇ ದುರ್ಗಿ
ಮನ್ಗಿದ್ದ ಪಕ್ಕಿಗೆ
ಗೆದಲಿಕ್ಕಿ ಬಂದ್ರು ದುರ್ಗಿ ಪ್ರಪಂಚಕ್ಕೇಳದಿಲ್ಲವಂತೆ
ಮೂರು ತಿಂಗ್ಳು ಎದ್ದವ್ಳೆ ಎದ್ರೆ
ಸಿಕ್ಕಿದು ಪ್ರಜೆಗಳು ಅಕ್ಕಿಪಕ್ಷಿಗಳೆಲ್ಲ ಎಳೆದು
ಸೀಪಿನುಂಗಿ ಬಿಟ್ತಾಳಂತೆ
ಆರು ತಿಂಗ್ಳು ನಿದ್ರೆ ಮಾಡುಬಿಡ್ತಾಳಂತೆ
ಆ ದುರಿಗಿಗ್ಹೋಗಿ ಮೊರಿ ಬಿದ್ರೇ ಜುಂಜಪ್ಪನ್ನ
ಸುಲ್ದು ಬಾಳೆ ಹಣ್ಣು ನುಂಗಿದಂತೆ ನುಂಗುಬಹುದು ತಾಳೆದುರ್ಗಿ
ನಡಿರಿ ದುರ್ಗಿಗ್ಹೋಗಿ ಮೂರಿ ಬೀಳಣ
ಅಂದು ಜುಂಜಪ್ಪನು ಸ್ವಾದುರುಮಾವುಗೊಳು ಮಾತಾಡಿದ್ರು
ಮಾತಾಡಿ
ಅವತ್ತು ಜುಂಜಪ್ಪ ದನುಗೊಳು ರೊಪ್ಪಕ್ಕೂಡಿ
ಮೂರು ಜನ ಅಣ್ಣ ತಮ್ಗೋಳು ಮಲಗಿದ್ರು
ಮುಂಗೋಳಿ ಕೂಗುವಾಗ ಎದ್ದು ಜುಂಜಪ್ಪ
ಹಾವಿನ ಗೂಡಿನ ಮುಂದೆ ಕುಂತ್ತಿದ್ದ
ಕುಂತ್ತಿರುವಾಗ
ಏಳು ಜನ ಜುಂಜಪ್ಪನ ಸ್ವಾದುರಮಾವುಗೊಳು
ಎತ್ತಿ ಕೆತ್ತಿದ ಗೋಮುಖ ಪಚ್ಚೆ ಗೋಮುಖ
ಏಳು ಗೋಣಿ ಇಕ್ಕೇರಿ ಹೊನ್ನನ
ಏಳು ಹೋರಿಗಳ ಮ್ಯಾಲೆ ಹೇರಿಕೊಂಡು
ಏಳು ಜನ ಜುಂಜಪ್ಪನ ಸ್ವಾದರಮಾವುಗಳು
ಸರಿಬರ್ತಾವ್ರೆ
ಇದಕ್ಕೆ ಇರುಗೊಂದಿ ಸೀಮಿಗಿ ಹೋಗುದಕ್ಕೆ

ಏಳು ನಾಲಿಗೆ ದುರ್ಗಿ ಹತ್ರುಕ್ಕೆ
ಬರ್ತಿರುವಾಗ
ಆ ಜುಂಜಪ್ಪ ಎದ್ದು ಕುಂತ್ತಿದ್ನಲ್ಲ
ಜುಂಜಪ್ಪನ ದನಗೊಳು ರೊಪ್ಪದ ಮುಂದೆ ಹಾಸಿ
ಹೋರಿ ಕೊಳ್ಳಾಗಳ ಗೂಡಿನ ಗಂಟೆ
ಘಲೀಘಲೀರೆಂದು ಶಬ್ದವಾಯಿತು
ತಲೆಯೆತ್ತಿ ನೋಡಿದ ಜುಂಜಪ್ಪ
ಮಾರಣ್ಣ ಮೈಲಣ್ಣ
ನಮ್ಮ ಮಾವುಗಳ್ಹೋಗ್ತಾವರೆ
ಯಾವ ರಾಜ್ಯಕ್ಕೆ ಹೋಗ್ತಾರೊ
ಯಾವ ಸೀಮೆಗೆ ಹೋಗ್ತಾರೊ
ಅವರ್ಗೇನು ಕಷ್ಟ ಬಂದಿದೆಯೋ ಕೇಳಿ ಬಾ ಹೋಗ್ರಿ ಅಂದ
ಜುಂಜಪ್ಪನು ತಮ್ಮುಗೊಳೋಗಿ
ಜುಂಜಪ್ಪನ ಮಾವುಗೋಳೇದ್ರಲ್ಲಿ ನಿಂತು
ಶರಣಾರ್ತಿ ಮಾಮಣ್ಣಾ
ನಮ್ಮ ಅತ್ತೆಯವರು ಕುರಿ ದನ ಮಕ್ಳು ಮರಿ ಎಲ್ಲ
ಚೆನ್ನಾಗವುರೇನು ಮಾಮಣ್ಣಾ
ಅಂತ ಕೇಳಿದ್ರು
ಆ ದೊಡ್ಡೋನ ಜುಂಜಪ್ಪನ ಕರಣೆ ಕಟಾಕ್ಷದಿಂದ
ನಮ್ಮ ವಂಶವೇ ತಣ್ಣಗಾಯ್ತಪ್ಪಾ ಅಂತ ಹೇಳಿದ್ರು
ಮೋಸಗಾರರು
ಕಂಬೇರು ಗೊಲ್ಲುದ್ರು ಹೇಳ್ತಿದಂಗೆ
ಒಳ್ಳೇದು ಮಾಮಣ್ಣಾ
ಈಗೆಲ್ಲಿಗೋಗ್ತುರೀ
ಯಾವು ರಾಜ್ಯಕ್ಕೆ ಹೋಗ್ತುರಿ ?
ಏನು ಕಷ್ಟ ನಿಮಗೆ ಬಂದಿದೆ ಮಾಮಣ್ಣ
ಅಂದು ಮಾರಣ್ಣ ಮೈಲಣ್ಣ ಕೇಳಿದ್ರು
ಎಲ್ಲಿಲ್ಲ ಸ್ವಾದ್ರಳಿಗೊಳೇ
ಹತ್ತುದ ಮಳೆ ಬಂದು ಸಿತ್ತೆ ಬಿಸಿಲು ಕಾದು
ಮತ್ತೆ ಸ್ವಾತಮ್ನು ಜಡಿ ಇಡಿದು
ಗೋವುದನಗಳ್ಹೋದ್ರೆ
ಜಾಡುಲ್ಲು ಬಿದ್ದೈತಿ

ನಮ್ಮ ದೇಶದಲ್ಲಿ ಸಿತ್ತೆ ಜ್ವಾಳಿಲ್ಲ ಬೀಜದ ಜ್ವಾಳ
ಆ ಸಿತ್ತೆ ಜ್ವಾಳ ತರದುಕ್ಕೆ
ಇರುಗೊಂದಿ ಪ್ಯಾಟೆಗೆ ಹೋಗ್ತಿವಿ
ಅಂತ ಸುಳ್ಳು ಹೇಳಿದ್ರು
ಇವುರ್‍ಹೋಗೋದು ಏಳ್ನಾಲಿಗೆ ದುರ್ಗಿಗೆ ಮೊರೆ ಬಿದ್ದು
ಜುಂಜಪ್ಪನ ನುಂಗಂಗ ಮಾಡಬೇಕು ಅಂತ
ಹೇಳಿದ್ದು ಬೀಜದ ಜ್ವಾಳ ತರಕ್ಕೆ
ಇರುಗೊಂದಿ ಪ್ಯಾಟಿಗ್ಹೋಗ್ತಿವಿ
ಸಿತ್ತೇ ಜ್ವಾಳನ ಅಂತ ಸುಳ್ಳು ಹೇಳಿದ್ರು
ಹೇಳ್ತಿದಂಗೆ ಮಾರಣ್ಣ ಮೈಲಣ್ಣ
ಹೋಗ್ರಿ ಮಾಮಣ್ಣ
ಹೋದಂತ ಕಾರ್ಯ ನೆರವೇಲ್ರಿ ಅಂತ
ಇವುರೊಳ್ಳೆ ಆಶೀರ್ವಾದ ಮಾಡಬಿಟ್ರು ಅವ್ರಿಗೆ
ಮಾರಣ್ಣ ಮೈಲಣ್ಣ
ಸರಿ ಈ ಜುಂಜಪ್ಪ ಇರೋ ಸ್ಥಳಕ್ಕೆ ಬಂದು ಇರಿಯಣ್ಣ
ಸಿತ್ತೇ ಜ್ವಾಳ ತರಕ್ಕೆ
ಇರುಗೊಂದಿ ಪ್ಯಾಟಿಗ್ಹೋಗ್ತಾರಂತೆ ನಮ್ಮ ಮಾವುಗೊಳು
ಅಂತ ಅವ್ರ ಅಣ್ಣನ ಕೂಟ ಹೇಳಿದ್ರು
ಸರಿ ಹೋಗ್ಲಿ ಬಿಡ್ರಪ್ಪ ಅಂತ ಜುಂಜಪ್ಪ ಅಂದ
ಹಂಗ ಅಂದು
ಇವ್ರು ಮುಂದ್ಕು ಪ್ರಯಾಣ ಬೆಳಿಸಿದ್ರು
ಎಂಟು ದಿನ ಪ್ರಯಾಣ ಮಾಡಬೇಕು
ಇರುಗೊಂದಿ ಪಟ್ಣಕ್ಕೆ

ತೆಂಕಲು ದೇಶದಲ್ಲಿ
ದುರ್ಗಿ ಇರದು
ಒಳ್ಳೇ ಕರಿಮೆಳೆ
ಮೆಳಿ ಮಂಜರುವಣ್ಣಾ
ಕಾಡು ಕಾಮುರವಯ್ಯ
ಹುಲಿ, ಕರಡಿ
ಡುಬ್ಬಿ, ಸಾರಂಗ
ಇಂತಂಭ ಘೋರಾರಣ್ಯದೊಳುಗೆ
ಏಳ್ಜನ ಜುಂಜಪ್ಪನು ಮಾವುಗೂಳೊ
ಹೋಗೂತರು ಸ್ವಾಮಿ ಗಳಿಗಾಗೋ ॥

ಎಂಟು ದಿನ
ಪ್ರಯಾಣ ಮಾಡಿದುರಣ್ಣಾ
ದುರುಗಿ ಪಟ್ಣಕ್ಕೆ ಗಳಿಗಾಗೋ ॥

ಆ ದುರುಗಿ ಪಟ್ಣದ ಹೆಸರು ಇರುಗೊಂದಿ ಅಂತ
ಇರುಗೊಂದಿ ಊರು ಕೆಂಬಾರೆ ಹತ್ತಿದ್ರು
ಕಂಡಿತು ದುರುಗಿ ಪಟ್ಣಾ
ಇರುಗೊಂದಿ ಪಟ್ಣ
ಊರೊಳಕ್ಕೆ ಹೋಗಿ
ಏನಪ್ಪ
ಇಲ್ಲೇಲ್ಲೊ ತಾಳೆ ದುರ್ಗೆಮ್ಮನ ದೇವಸ್ಥಾನವಿದಿಯಂತೆ
ಎಲ್ಲಿದೆ ಅಂತ ಕೇಳಿದ್ರು
ಊರು ಬಿಟ್ಟು ಮೂಡುಗಡಿಕೆ
ಹಿಪ್ಪೆ ತೋಪಿನಲ್ಲಿದೆಯಪ್ಪ ದುರುಗಿ ದೇವಸ್ಥಾನ
ಆಂತ ಪಟ್ಣದಲ್ಲಿರಾ ಜನ ಹೇಳಿದ್ರು
ಸರಿ ಏಳು ಜನ ಜುಂಜಪ್ಪನ ಸ್ವಾದುರು ಮಾವುಗೊಳು
ಹೋದ್ರು ಈ ಹಿಪ್ಪೆತೋಪಿಗಿ
ಹೋಗಿ ನೋಡಿದರೆ
ದುರುಗೆಮ್ಮನ ದೇವಸ್ಥಾನದೊಳಿಕ ಹೋಗಿ ನೋಡಿದ್ರು
ಆಗಾಧವಾದ ರೂಪು ತಿದ್ದಿ ಬಿಟ್ಟೆಯ್ತಿ ದುರಿಗಿಗೆ
ಸರಿ ಗರ್ಭದ ಗುಡಿಯಲ್ಲಿ ದುರುಗಿ ಮನಿಗಿಬಟ್ಟವ್ಳೇ
ಆರು ತಿಂಗಳು ನಿದ್ರೆ ಮೂರು ತಿಂಗಳು ಆವುರ
ತಾಳೆ ದುರ್ಗಿಗೆಗೆ
ಮನಿಗಿದ್ದ ಮಗ್ಗಿಲಿಗೆ ಗೆದ್ದಲು ಹತ್ತಿಬಂದೈತೆ
ಆರು ತಿಂಗಳು ಆಗಿಬಿಟ್ಟಾಯ್ತೆ ಆ ಬ್ರಷ್ಟ ಮುಂಡೆ
ತಾಳೆ ದುರುಗಿ ಮನಿಗಿ
ಎಚ್ಚರವಿಲ್ಲದೆ ದುರುಗಿ ಮನಿಗಿದ್ದಳು
ಮನಿಗಿರುವಾಗ
ಸ್ವಾದ್ರುಮಾವುಗೊಳು ಜುಂಜಪ್ಪನ ಮಾವುಗೊಳು
ಏಳು ದ್ವಾರ ಬಾಕಲು ದುರುಗಿ ದೇವುಸ್ಥಾನಕ್ಕೆ
ಏಳು ದವಾರ ಬಾಕಲಿಗೂ
ಏಳು ಗೋಣಿ ಹೊನ್ನ ರಾಶಿ ಒಯ್ದು ಬಿಟ್ರು
ಜುಂಜಪ್ಪನ ಮಾವುಗೊಳು

ಏಳು ಗೋಣಿ ಹೊನ್ನ ರಾಶಿ ಒಯ್ದು ಬಿಟ್ರು
ಜುಂಜಪ್ಪನ ಮಾವುಗೊಳು
ಏಳು ಗೋಣಿ ಹೊನ್ನನ ರಾಶಿ ಒಯ್ದು ದುರುಗಿ ದೇವುಸ್ಥಾನಕ್ಕೆ
ಹಾಸಿ ಅಡ್ಡ ಬಿದ್ರು ದುರುಗಿಗೆ
ಏನಮ್ಮ ತಾಯಿ
ಆರು ತಿಂಗಳು ನಿದ್ರೆ ನಿನಗೆ ಮೂರು ತಿಂಗಳು ಹಾವ್ರ
ಎಚ್ಚರವಿಲ್ಲದೆ ಮನಿಗೆದೇನಮ್ಮ ತಾಯಿ
ಎದ್ದು ನಮ್ಮ ಸುಖ ಕಷ್ಟಗೊಳು ಬಂಗ ಬಡತಾನಗೊಳು
ಇಂಗಿಸದಂತೆ ಮನಿಗಿಬಿಟ್ಟೇನು ತಾಯಿ
ಏಳಮ್ಮ
ಎದ್ದೇಳಮ್ಮ ದುರ್ಗಮ್ಮ ಅಂದು
ದುರ್ಗಿನ
ಜುಂಜಪ್ಪನ ಮಾವುಗೊಳು ಬೇಡ್ತ ನಿಂತ್ಕಂಡಿದ್ರು
ನಿಂತ್ಕಂಡಿರುವಾಗ
ಜುಂಜಪ್ಪನ ಹಿರೆ ಮಾವ
ದೊಡ್ಡ ಸಿನ್ನೇಗೌಡ ಹೇಳ್ತಾನೆ
ದುರ್ಗಿಗೆ ಆರು ತಿಂಗಳು ನಿದ್ರೆ ಇಲ್ದೇ
ಹಾವ್ರ ಇಲ್ದೇ ಮನಗಿಬಿಟ್ಟವ್ಳೆ
ಎದ್ದು ಬಿಟ್ರೇ ನಮ್ಮನ್ನ
ಮೂಗಿನ ಹೊಳ್ಳೆ ಒಳಗೆ ಎಳಕ್ಕಂಡು
ನುಂಗ್ಹ್ಯಾಕಿಬಿಡ್ತಾಳೆ ತಾಳೆ ದುರ್ಗಿ
ಅವುಳಿಗೆ ಅವರು ಭಕ್ತರು ಇವುರು ಭಕ್ತರಲ್ಲ ಅಂಬುದು ಗೊತ್ತಿಲ್ಲ
ಆಗಳಿಸಿದರೆ
ಎದ್ದುಕೂಂತ್ಕತ್ತಿದ್ದಂಗೆ ಆಕ್ಳಿಸಿದ್ರೆ ಉಸಿರ್ನೆಲ್ಲ
ಆರು ಸಾವಿರ ಜನ ನುಂಗಿ ಬಿಡೋಳಂತ ತಾಳೆದುರ್ಗಿ
ನಮ್ಮನ್ನು ಎಳ್ದು ನುಂಗಿಬಿಡ್ತಾಳಪ್ಪ
ನಾವು ಬಾಗಿಲುಗಳ್ಹಿಂದೋಗಿ ನಿಂತ್ಕಂಬಿಡೋಣ್ರ
ಅಂತೇಳಿ ಬಿಟ್ಟು
ಏಳು ಜನ ಜುಂಜಪ್ಪನ ಮಾವುಗೂಳು
ಹೋಗಿ ಏಳು ಬಾಗಿಲಿಂದೆ ನಿಂತ್ಕಂಬಿಟ್ರು
ನಿಂತ್ಕಂಡು ಶರಣಾಗತಿಯಾಗಿ
ದುರುಗಿಗೆ ಕೈ ಮುಕ್ಕಂಡು ನಿಂತಿದ್ರು

ಆರು ತಿಂಗಳಾಗೇತಣ್ಣಾ
ಆಳ್ಕುಂಡೆ ದುರ್ಗೆಮ್ಮ ಮನಿಗಿ
ಎಚ್ಚರವಿಲ್ಲದೆ ದುರುಗಿ
ಮನಿಗ್ಯಾವಳೋ ॥

ಅಪ್ಪ
ಮನಿಗಿದು ಪಕ್ಕಿಗೂ
ಗೆದಲತ್ತಿ ಬಂದೈತೆ
ತಾಳೆ ದುರ್ಗಿಗೆ
ಅಷ್ಟೋತ್ತಿಗೆ
ಆರು ತಿಂಗಳು
ತುಂಬುತ ಬಂದಿತಣ್ಣಾ
ಮಂಗಳ್ವಾರ ದಿನ
ಹೊತ್ತುಟ್ಟುವಾಗ ದುರ್ಗಿ
ಮನಿಗಿದ್ಯೇ ॥

ಮಂಗಳ್ವಾರ ಹೊತ್ತುಹುಟ್ಟಿ ಬರೋವಾಗ ತಾಳೆ ದುರ್ಗಿಗೆ
ಆರು ತಿಂಗಳು ತುಂಬುತಾ ಬಂತು
ಆರು ತಿಂಗಳು ತುಂಬುತಾ ಬರ್ತಿದಂಗೆಯೇ
ತಾಳೆ ದುರ್ಗಿಗೆ ಎಚ್ಚರವಾತು
ಎಚ್ಚರವಾಗ್ತಿದಂಗೆಯೇ
ಎಡದಿಂದ ಬಲಕ್ಹೋಳ್ಳಿದ್ಳು
ಅಂಗತಲೆ ಮಲಿಕಂಡ್ಲು ತಾಳೆ ದುರ್ಗಿ
ಅಂಗತಲೆ ಮನಿಕಂಡು
ಎದ್ದು ಅಂಗೈಗೆರೆ ನೋಡಿ ಕಂಡ್ಲು
ಅಂಗೈಗೆರೆ ನೋಡ್ಕಂಡು
ದುರ್ಗಿ ದೇವುಸ್ಥಾನದಲ್ಲಿ ಎದ್ದು ಕುಂತ್ಗಂಡು
ಕಳಗಂಸಗೆ ಸೆಡುವಿನ ಭಯಂಕಾತೀ
ಕೋಟಿ ಪ್ರವಾಸೆ
ಆಗಧೆ ದುರ್ಗಿ
ಚಂಡಿ
ಚಾಮುಂಡಿ
ಕೊಲ್ಲಾಪುರಿ

ಮಹೇಶ್ವರಿ
ಮಹಾಂಕಾಳಿ
ಏಳುನಾಲಿಗೆ ದುರ್ಗಿ
ಎದ್ದು ಗುಡಿಯಲ್ಲಿ ಕುಂತ್ಕಂಡು
ಆಕಳಸಿದುಳು ಶಂಕರನೇ
ಅವಳ ಆಕಳಿಕೆ ಉಸಿರಿನಲ್ಲಿ ಆರು ಸಾವುರ ಜನವನ್ನ
ಎಳೆದು ನುಂಗಿದಳು ದುರ್ಗಿ
ಆವಾಗ ನಿಧಾನವಾತು ದುರ್ಗಿಗೆ
ನಿಧಾನವಾಗುತ್ತಿದಂಗೆಯೇ
ಹೊನ್ನಿನ ರಾಶಿ ಮ್ಯಾಲೆ ದೃಷ್ಟಿ ಹರಿತು
ಬಾಗ್ಲಿಗೇಳು ಹೊನ್ನಿನ ರಾಶಿ
ರಾಶಿ ಮಾಡಿದ್ರು ಜುಂಜಪ್ಪನ ಮಾವುಗೊಳು
ಹೊನ್ನಿನ ರಾಶಿ ಮೇಲೆ ದೃಷ್ಟಿ ಹರಿದು ತಕ್ಷಣ
ಹೋ
ಯಾರೊ ನನ್ನ ಭಕ್ತರಿಗಿ ಏನು ಕಷ್ಟ ಬಂದಿತ್ತೋ
ಏಳು ಬಾಕ್ಲಿಗು
ಏಳು ಗೋಣಿ ಹೊನ್ನು ರಾಶಿ ಮಾಡ್ಹೋಗು ಬಿಟ್ಟವ್ರೇ
ನಾನೇ ಕಂಡಿದ್ರೆ
ಅವ್ರು ಸುಖ–ಕಷ್ಟಗಳ್ನ
ಆರು ಬಂದಿದ್ರೆ ಆಕ್ಕೈಸಿಬಿಟ್ಟಿದ್ದೇ
ಮೂರು ಬಂದಿದ್ರೆ ಮುಕ್ಕೈಸಿ ಬಿಟ್ಟಿದ್ದೆ
ಕಾಣದಂತೆ ನಾನು ಮನಿಗಿದೇ
ಅಂದು ದುರ್ಗಿ
ಒಬ್ಬೆ ಗುಡಿ ಒಳಗೆ ಶಾಂತಿಯಿಂದ ಮಾತಾಡ್ತಿದ್ಲು
ಕೇಳಿಸ್ಕಂಡ್ರು ಕಂಬೇರು ಗೊಲ್ಲುರು
ಆವಾಗ ಓಡಿ ಬಂದು ದುರ್ಗಿ ಎದುರಿಗೆ
ಅಡ್ಡ ಬಿದ್ರು ಜುಂಜಪ್ಪನ ಮಾವುಗೊಳು
ಓಹೋ
ಯಾವುರಯ್ಯ ನಿಮ್ಮದು
ಎಲ್ಲಿಂದ ಬಂದ್ರೀ
ಏನು ನಿಮ್ಮಗೆ ಅಂತ ಕಷ್ಟ
ಹೇಳ್ರಿ ಅಂತ ಕೇಳಿದ್ರು

ಕೇಳ್ತಿದಂಗೆಯೇ
ಸರಿ ಏನಿಲ್ಲ ತಾಯಿ
ಒಂದ್ಮಾತಿದೆಯಮ್ಮ
ಅಂಜಿ ಭಿನ್ನ ಮಾಡೋನೂ ಅಥವಾ ಅಂಜದಾ
ಭಿನ್ನಮಾಡೋನೂ ತಾಯಿ
ಅಂತ ದುರ್ಗಿನ ಕೇಳಿದ್ರು ಜುಂಜಪ್ಪನ ಮಾವುಗೊಳು
ಅಂಜದಾ ಭಿನ್ನ ಮಾಡಬಹುದಯ್ಯ ದೊಡ್ಡ ಸಿನ್ನೇಗೌಡ
ಅಂತ ದುರ್ಗಿ ಹೇಳಿದ್ಳು
ನನ್ನೇಸ್ರು ದೊಡ್ಡ ಸಿನ್ನೇಗೌಡ್ನೇ ತಾಯಿ
ಒಂದಾಗಿ ನಾವು ಕಂಬೇರು ಗೊಲ್ದುರು
ನಮ್ಮ ಏಳು ಜನದಿಂದ ಹುಟ್ಟಿದಂತ
ನಮ್ಮ ಕಿರುತಂಗಿ ಸಿನ್ನಮ್ಮನ ಹೊಟ್ಟೆ ಒಳಗೆ
ಮಾರಣ್ಣ ಮೈಲಣ್ಣ ಜೋಡಿಲಿ ಜುಂಜಪ್ಪ ಅಂತ
ಮೂರು ಜನ ಅಣ್ಣ ತಮ್ಮುಗೊಳು ಉತ್ಪತ್ತಿಯಾಗವುರಮ್ಮ
ನಮ್ಮ ತಂಗಿ ಸಿನ್ನಮ್ಮನಿಗೆ
ಏಳು ಬಳುವಳಿ ಕರುಗೊಳನ್ನ ದಾನ ಕೊಟ್ಟಿವಿ ನಾವು
ಏಳು ಕರುಗಳೊಳಗೆ ಜುಂಜಪ್ಪ
ಏಳು ಲಕ್ಷದ ದನುಗಳಾಳು ಬಿಟ್ಟ
ಮುಂದಲ ಹುಲ್ಲು ಅವನ್ದಾತು
ಮುಂದ್ಲು ನೀರು ಅವನ್ದಾತ್ತು,
ಆಕಾಶವೆದ್ರೆ ಆಯ್ಕಂತನೆ
ಭೂಮಿ ಎದ್ರೆ ತುಣುಕಂಬ್ತನೆ
ಅವುನ ಆವುಳಿಗೆ ಒಳಗೆ ನಾವು
ಆಳದಿಕ್ಕೆ ಬಾಳದಿಕ್ಕೆ ಸಾಧ್ಯವಿಲ್ಲ ತಾಯಿ
ಆವ್ನು ದನಗಳು ಬಿಟ್ಕಂಡು ಮೇಯ್ಸ್ಗಂಡು ಹೊದ್ಮೇಲೆ
ಮುಂದ್ಗಡೆ ಕಾವಲುಗೊಳ್ನಾ
ಹಿಂದ್ಗಡೆ ನಮ್ಮ ದನಗಳು ಬಿಟ್ರೇ ಮೇವುಗೆ
ಮುಂದ್ಲು ದನ ಮೋಟ್ತಿನ್ಬೇಕು
ಹಿಂದ್ಲು ದನ ಸೆಗಣಿ ತಿನ್ಬೇಕು
ತುಂಬಿ ತುಣುಕುಲಾಡಿದ ಕೆರಿಗೆ
ಜುಂಜಪ್ಪ ದನ ನೀರಿಗ ಕರಿತಾನೆ
ಅವ್ನು ದನಗೊಳು ಕುಡ್ದೋದ ಮೇಲೆ

ನಮ್ಮ ದನಗೊಳ್ನಾ ಹುಲ್ಲು ನೀರಿಗೆ ಕರ್ದರೇ
ಮುಂದ್ಲು ದನ ಹೊಂಡು ಕುಡಿಬೇಕು
ಹಿಂದ್ಲುದನ ಗಂಜು ಕುಡಿಬೇಕು
ಅವ್ನು ಆವುಳಿಗೆ ಒಳಗೆ ಆಳದಿಕ್ಕೆ ಬಾಳದಿಕ್ಕೆ ಸಾಧ್ಯವೇ ಇಲ್ಲ ತಾಯಿ
ಎಂಥೆಂಥ ಹೋದ್ಯಾಗಾರ್ರು ಸೂನ್ಯಗಾರ್ನೆಲ್ಲ
ನುಂಗಿಕ್ಯಾಂಡು ನೀರು ಕುಡ್ದು ಬಿಟ್ಟ
ಆವ್ನು ಏನು ಮಾಡಿದ್ರು
ಜುಂಜಪ್ಪನ ವಂಶ ನಾಶೆನವಾಗಲಿಲ್ಲ
ಈಗ ನೀನು ಏನಾದ್ರು ಮಾಡಿ
ಅವುರು ಮೂರು ಜನ ಅಣ್ಣಾ ತಮ್ಮಗೊಳ್ನಾ
ಸುಲ್ದು ಬಾಳೆ ಹಣ್ಣು ನುಂಗಿದಂತೆ ನುಂಗಿ
ನಮ್ಗೆ ರಕ್ಷಣೆ ಕೊಡಬೇಕು ತಾಯಿ ಅಂದು
ದುರ್ಗಿನ ಬೇಡ್ಕಂಡ್ರು ಈ ಕಂಬೇರು ಗೊಲ್ದುರು

ಆಗ ದುರ್ಗಿ ಹೇಳ್ತಳೆ
ಎಲೆ ಮಕ್ಕಳಿರಾ
ಸೋಮಾರ ಹನ್ನೇರಡು ಗಂಟೆಗೆ
ನಿಮ್ಮ ಸ್ವಾದ್ರಳಿಯ ಜುಂಜಪ್ಪನ್ನ
ನನ್ನ ಕಾವುಲಿಗೆ ಕರಿಸ್ಕಂಡು
ನಿಮ್ಮ ಕಣ್ಣೇದುರಿಗ ನಾನು
ಸುಲ್ದು ಬಾಳೆ ಹಣ್ಣು ನುಂಗಿದಂತೆ ನುಂಗಿಬಿಟ್ತನಿ
ಹೆದ್ರಕ್ಕೊಂಬ್ಯಾಡ್ರಿ ಹೋಗ್ರಿ
ನನ್ನ ಗುಡಿ ಒಳಗೆ ಅಕ್ಕಿ ಬ್ಯಾಳೆ ತಕ್ಕಂಡು
ಅಡಿಗೆ ಮಾಡ್ಕಂಡು ಊಟ ಮಾಡ್ರಿ ಅಂತ
ತಾಳೆದುರ್ಗಿ ಹೇಳಿದ್ಲು
ಮಹಾತಾಯಿ
ಬರೀ ಬಾಯಿ ಮಾತಿನಲ್ಹೇಳಿದ್ರೆ ನಾವು ಒಪ್ಪದಿಲ್ಲ ಕಣಮ್ಮ
ಮಹಾದೇವಿ
ಜುಂಜಪ್ಪ ಅಂದ್ರೆ ಅಷ್ಟೊಂದು ಸಾಮಾನ್ಯದವುನಲ್ಲ ತಾಯಿ
ನೀನು ಇಷ್ಟು ಸುಲಭವಾಗಿ ಹೇಳುದ್ರೇ
ನಾ ಒಪ್ಪದಿಲ್ಲ ಕಣಮ್ಮ
ಸಾಣಿಕೆರೆ ಪುಟ್ಟಣ್ಣ ಅಂದ್ರೆ
ಘನ ಪಂಡಿತ ಆಚಾರಿ

ಅವ್ನ ಕಾವುಲು ಮೇಯಿಸಿ
ತಂದೆ ಮಗನ್ನಾ ಸಾಲು ಸಮಾಧಿ ಮಾಡಿಸಿ ಬಂದ ಕಣಮ್ಮ ಜುಂಜಪ್ಪ
ಬರೀ ಬಾಯಿ ಮಾತಿನಲಿ ಹೇಳಿದ್ರೆ
ನಾ  ಒಪ್ಪದಿಲ್ಲ ತಾಯಿ
ನೀನು ಏನಾದ್ರು ಮಾಡಿ
ಬಲಗೈ ಬಾಷೆ ಕೊಡಬೇಕು
ಜುಂಜಪ್ಪನ ನುಂಗ್ತುನಿ ಅಂತ ನಮಗೆ
ಎಡಗೈ ನಂಬಿಕೆ ಕೊಟ್ರೆ
ಜುಂಜಪ್ಪನ ನುಂಗ್ತಳೆ ಎಂಬ ನೆಂಬಿಕೆ ನಮ್ಗ ಇರ್ತಾಯ್ತಮ್ಮಾ
ಅಂದು ಕಂಬೇರು ಗೊಲ್ದುರು
ಜುಂಜಪ್ಪನ ಮಾವುಗೊಳು ದುರ್ಗಿಗೆ ಹೇಳಿದ್ರು
ಆಗ ದುರ್ಗಿಗೆ ಸಿಟ್ಟ ಬಂತು
ಎಲೆ ಮಕ್ಕಳಿರಾ
ಸೋಮಾರ ಹನ್ನೆರಡು ಗಂಟ್ಗೆ
ನಿಮ್ಮನ್ನ ಸ್ವಾದ್ರಳಿಯ ಜುಂಜಪ್ಪ್ನ
ನನ್ನ ಕಾವುಲಿಗೆ ಕರಿಸ್ಕಂಡು
ನಿಮ್ಮ ಕಣ್ಣೇದುರಿಗೆ ನಾನು
ಸುಲ್ದು ಬಾಳೆ ಹಣ್ಣು ನುಂಗಿದಂತೆ ನುಂಗದಿದ್ರೇ
ಚಂಡಿ
ಚಾಮುಂಡಿ
ಕೊಲ್ಲಾಪುರಿ
ಮಹೇಶ್ವರಿ
ಮಹಾಂಕಾಳಿ
ಏಳು ನಾಲಿಗೆ ದುರ್ಗೀಯೆಂಬ ಹೆಸರಲ್ಲ

ತಕ್ಕಳಿರೋ ಭಾಸೆ
ಅಂದು ತಾಳೆ ದುರ್ಗಿ
ಬಲಗೈ ಭಾಷೆ ಕೊಟ್ಟಳಣ್ಣಾ
ಜುಂಜಪ್ನು ಮಾವುಗೊಳಿಗೆ ದುರ್ಗಿ
ಎಡಗೈ ನಂಬಿಕೆ
ಕೊಟ್ಟಳಯ್ಯೋ ಗಳಿಗಾಗೋ ॥

ಭಾಷೆ ಪ್ರಮಾಣ ಮಾಡ್ತಿದಂಗೆಯೇ
ಕಂಬೇರು ಗೊಲ್ದುರಿಗೆ
ಒಂದು ಭುಜ ಹದಿನಾರು ಭುಜವಾಯ್ತು
ನುಂಗಿ ಬಿಟ್ತಾಳೆ
ಭಾಷೆ ಕೊಟ್ಟುಬಿಟ್ಳು ತಾಳೆದುರ್ಗಿ
ರಾಕ್ಷಸಿ ಮುಂಡೆ ಇವ್ಳು ಅಂತ ಹೇಳ್ಬಿಟ್ಟು
ಆ ದುರ್ಗೀಗೆ ಆವಾಗ ಇಲ್ಲದ ಆಸೆ ಇಕ್ತಾರೆ
ಮಹಾತಾಯಿ
ಜಗದ್ ಜನನಿ
ಆದಿಶಕ್ತಿ
ನಮ್ಮ ಸ್ವಾದ್ರಳಿಯ ಜುಂಜಪ್ಪನ ನೀನು ನುಂಗಿದ್ರೆ
ನಿನಗೆ ವರುಷ್ಕೊಂದು ಸಾರಿ
ಕುರಿ ಕೋಣಗಳ್ನಾ ಕಡುದು
ಅದ್ದೂರಿಯಿಂದ ನಿನ್ನ ಪರುಸೆ ಮಾಡಿ
ಅದ್ದೂರಿಯಾಗಿ ಧೂಪ ದೀಪಗಳ ಹಾಕಿ
ಮೆರ್ಸಿಬಿಡ್ತಿವಿ ತಾಯಿ ನಿನ್ನ
ಅಂತ ಆಸೆ ಇಕ್ಕುದ್ರು ದುರ್ಗಿಗೆ
ಆಗಲಿ
ಹೋಗ್ರಿ ನನ್ನ ಗುಡಿ ಒಳಗೆ
ಅಕ್ಕಿ ಬ್ಯಾಳೆ ತಕ್ಕಂಡು
ಅಡಿಗೆ ಮಾಡುಕ್ಯಾಂಡು ಊಟ ಮಾಡ್ರೀ
ನಿಮ್ಮ ಸ್ವಾದ್ರಳಿಯ ಜುಂಜಪ್ಪ
ನಿಮ್ಮ ಕಣ್ಣೆದ್ರುಗೆ ಇಲ್ಗೇ ಬರುವಂತೆ ಮಾಡ್ಕಾಂತ್ತಿನಿ
ಅಂದು ತಾಳೆದುರ್ಗಿ
ಜುಂಜಪ್ಪನಿಗೆ ಓಲೆ ಬರಿತಾ ಕುಂತಿದ್ಲು
ಏನಂದು ಬರಿತಾವ್ಳೆ

ಸ್ವಾಮಿ
ಪಡುವುಲು ದೇಶದಲ್ಲಿ ಗೋಕುಲದಲ್ಹುಟ್ಟಿ
ಗೋವಿನಲ್ಲಿ ಉತ್ಪತ್ತಿಯಾಗೀ
ಕಡುಗದು ಕೈಯೋಳೆ ಕಡು ಚೆಲುವೆ ಸಿನ್ನಮ್ಮನ ಹೊಟ್ಟೇ ಒಳಗೆ
ಮಾರಣ್ಣ ಮೈಲಣ್ಣ ಜೋಡಿಲಿ ಜುಂಜಪ್ಪ
ಮೂರು ಜನ ಅಣ್ಣ ತಮ್ಮುಗಳು

ಉತ್ಪತ್ತಿಯಾಗಿದ್ದೀರಂತೆ ಸ್ವಾಮಿ
ನೀವು ಏಳು ಲಕ್ಷದ ದನಗಳು ಆಳಿದ್ದಿರಂತೆ
ನಮ್ಮ ದೇಶದಲ್ಲಿ ಇರುಗೊಂದಿ ದೇಶ ನಮ್ಮದು
ಇರುಗೊಂದಿ ದೇಶದಲ್ಲಿ ಜೀವು ದನುಗಳಿಲ್ಲ
ನಾನುಟ್ಟಿದಾಗಿಂಟಲೂ
ಜೀವದನಗಳ ಮಕ ನೋಡ್ದಾವಳೇ ಅಲ್ಲ
ನನ್ನ ಗುಡಿ ಸುತ್ತಾ
ನೂರಾ ಆರುವತ್ತೆಂಟು ಎಕರೇ ಹುಲ್ಲುಗಾವುಲಾಯ್ತೆ
ನಮ್ಮ ತಂದೆ ತಾಯಿ ಕಟ್ಟಿಸಿದಂತ ಹುಲ್ಲುಗಾವಲು
ಆ ಕಾವುಲೊಳಗೆ
ಮುಗುಲ್ಹುಲ್ಲೇಂಬುದು ಮುಗುಲ್ಲುದ್ದುಕ್ಕೆ ಬೆಳೆದೈಯ್ತೆ
ಚಿಪ್ಪುಗರಿಕೆ ಹುಲ್ಲು ತೆಪ್ಪನೇ ಮಲಗಾಯ್ತೆ
ಕಪ್ಪೆ ಕಲುಕದಂತ ನೀರು ಮಡುಗಿನಲೈಯ್ತೆ
ನಿನ್ನ ದನಗೊಳ್ನಾ ಇಲ್ಲಿಗೆ ಒಡ್ಕಂಬಂದು
ನನ್ನ ಕಾವುಲಲ್ಲಿ ಹುಲ್ಲು ನೀರು ಮೇಯಿಸಿ
ನಿನ್ನ ದನುಗೂಳು ಮಕವನ್ನು ನನಗೆ ನೋಡಿಸಿ
ಮುಕ್ತಿಫಲ ಸತ್ತರೆ ಸ್ವರ್ಗ ಕೊಟ್ಹೋಗಬಹುದು ಸ್ವಾಮಿ
ಅಂತ ಕೆಳಗಡೆ ಬರುದ್ಲು
ಮ್ಯಾಲಗಡೆ ಏನಂದು ಬರಿತ್ತಾಳೆ
ಎಲವೋ ಕಾಡುಗೊಲ್ಲ
ನೀನು ತಂದೆ ಇದ್ದಂತೆ ಹುಟ್ಟಿದ್ರೆ
ಬಂದು ನನ್ನ ಕಾವುಲು ಮೇಯಿಸಬಹುದು
ತಂದೆ ಸತ್ತು ಹನ್ನೇರಡು ವರುಷಕ್ಕೆ ಹುಟ್ಟಿದ್ರೆ
ಉಡುದಾರವಿಲ್ಲದ ಮುರುದಾರು ಮುಂಡೆಗೆ ಹೆದರಿ
ಪಡುವುಲು ದೇಶದಲ್ಲಿ ಇರಬಹುದು ಕಣೊ ಜುಂಜಪ್ಪ

ಅಂತ ಓಲೇ ಬರುದಾಳಣ್ಣಾ
ತಾಳೆದುರ್ಗಿ ಗಳಿಗಾಗೋ ॥

ಓಲೆ ಬರ್ದು ತಾಳೇ ದುರ್ಗಿ
ಆವಾಗ ಬಿಳಿಕಾಗೆಯನ್ನ ಕರ್ದು
ಬಿಳಿ ಕಾಗೆಗೆ
ಹಾಲು ಅನ್ನ ಕಲಿಸಿ ಊಟಕ್ಕಿಟ್ಟು

ಕಾಗೆಗೆ ಬುದ್ದಿ ಹೇಳ್ತಾಳೆ
ಕಾಗೇಮ್ಮ
ನೀನು ಪಡುವಲು ದೇಶಕ್ಕೆ ಹೋಗಬೇಕು
ಪಡುವಲು ದೇಶದಲ್ಲಿ ಜುಂಜಪ್ಪ
ಗೋಕುಲದಲ್ಲಿ ಹುಟ್ಟಿ
ಗೋವಿನಲ್ಲಿ ಉತ್ಪತ್ತಿಯಾಗಿ
ಕಡುಗದ ಕೈಯೋಳೆ
ಕಡು ಚೆಲುವೆ
ಸಿನ್ನಮ್ಮನ ಹೊಟ್ಟೆ ಒಳಗೆ
ಸ್ವಾಮಿ ಉತ್ಪತ್ತಿಯಾಗವನೆ
ಮೂಗುತ್ತದ ಮುಂದಗಡೆ ಕುಂತ್ತಿರ್ತನೇ
ಬೆಳಿಗೇ ಎದ್ದು
ಜೋಡಿ ಸೂರ್ಯ ಮೂಡಿದಂತೆ
ಅವುನಿಗೆ ಉರಿಗಣ್ಣಾಯ್ತು
ಉರಿ ಅಸ್ತ್ರವೈತಿ
ಈ ಸೀಟಿ ತಕ್ಕಂಡ್ಹೋಗಿ
ಜುಂಜಪ್ಪನ ಬಲಗಡೆ
ಮಂಡೆ ಮ್ಯಾಲ್ಕೆ ಬಿಟ್ಟು ಬಿಡಬೇಕು
ನೀನು ಕೊಕ್ಕಿನಲ್ಲಿ ಕಚ್ಗಂಡು ಹೋಗಿ
ಬಿಟ್ಟು ಜಾಗ್ರತೆ ಕಾರ್ ಕಾರ್‌ಯೆಂದು
ತೆಂಕಣ ದೇಶಕ್ಕೆ ಬಂದುಬಿಡಬೇಕು
ಆಕಸ್ಮಾತು ಏನಾದ್ರು
ಜುಂಜಪ್ಪ ಮ್ಯಾಲ್ಕೆ ನೋಡ್ದಾ ಅಂದ್ರೆ
ಸುಟ್ಟು ಬೂದಿಯಾಗುಬಿಡ್ತಿ ನೀ
ಎಚ್ಚರದಿಂದ ಬರಬೇಕು ಅಂತ
ಕಾಕಿಗೆ ಬುದ್ಧಿಯನ್ಹೇಳಿ ತಾಳೆ ದುರ್ಗಿ
ಕಾಕಿ ಕಾಲಿಗೆ ಪುಸ್ತಕವನ್ನ ಕಟ್ಟಿ
ಆಯ್ತುವಾರದ ರಾತ್ರಿ
ಹನ್ನೇರಡು ಗಂಟೆ ಒಳಗೆ ದುರ್ಗಿ
ಕಾಗೆನ ಹಾರಿಬಿಟ್ಲು

ಕಾರೋ ಕಾರೇಂದು ಕಾಗೀ
ಹಾರೇನೆ ಹೋಗೋದಣ್ಣ
ಪಡುವಲು ದೇಶದ ಮಕುಗನಾಗೋ ॥

ಹಾರಿ ಹೋಗ್ತಾ ಹೋಗ್ತಾ
ಸೋಮಾರ ಸೂರ್ಯ ಪ್ರಕಾಶನಾಗವಷ್ಟೋತ್ತಗೆ
ಜುಂಜಪ್ಪ ಮೂಗುತ್ತದೆ ಮುಂದೇ ಎದ್ದು
ಜೋಡಿ ಸೂರ್ಯ ಮೂಡಿದಂತೆ ಕುಂತಿದ್ದ ಸ್ವಾಮಿ
ಸೂರ್ಯನೊಂದು ಭಾಗವಾದ್ರೇ
ಸ್ವಾಮಿ ಒಂದು ಭಾಗವಾಗಿ ಕುಂತಿದ್ದ ಪರಮಾತ್ಮ
ಕುಂತಿದ್ದಂತ ಕಾಲದಲ್ಲಿ
ಈ ಕಾಗಿ
ಏಳೇಳು ಹದಿನಾಲ್ಕು ಯೇಜಣದ ಮೇಲುಗಡೆ ಹೋಗಿ
ಜುಂಜಪ್ಪನ ರೂಪನ್ನ ನೋಡಿ
ಹರಾಹರಾ ಶಂಕರಾ
ಈ ಸ್ವಾಮಿ ಮಂಡೇ ಮೇಲೆ
ಈ ಚೀಟಿನ ನಾನ್ಯಂಗಪ್ಪಾ ಉದುರುಸಲೀ
ಕಣ್ಣು ಬಿಟ್ಟು ಬಿಟ್ರೇ ನಿಂದುರುದು ಹೋಗುಬಿಟ್ತಿನೀ
ಸೂರ್ಯ ಒಂದು ಭಾಗವಾದರೆ
ಅವನೊಂದು ಭಾಗವಾಗುವನಲ್ಲ ಅಂದ್ಹೇಳಿ
ಸರಿ ಚಿಂತೆ ಮಾಡ್ತಿತ್ತು ಕಾಗಿ
ಸ್ವಾಮಿ
ನಾನು ಹೋಗೂದಿಲ್ಲ ಈ ಚೀಟಿ ತಕ್ಕಂಡು
ಅಂತ ದುರ್ಗಿ ಕೂಟ ಅಂದಿದ್ರೆ
ನನ್ನ ಎರ್ಡ ರೆಕ್ಕೇನು ಮುರ್ದು
ಪ್ರಾಣ ಕಳ್ದಾಕುಬಿಟ್ತಿದ್ಲು ತಾಳೆದುರ್ಗಿ
ಅವ್ಳ ಕೈನಲ್ಲಿ ಪ್ರಾಣ ಹೋದ್ರೆ
ನಾನು ಮುಕ್ತಿ ಸೇರ್ತಿರಲಿಲ್ಲ ಸ್ವರ್ಗನು ಸೇರ್ತಿರಲಿಲ್ಲ
ಆ ಪಾಪಿ ಮುಂಡೆ ಅವುಳು
ನೀನು ಕಣ್ಣು ಬಿಟ್ಟು ನಾನು ಸುಟ್ಹೋಗು ಬಿಟ್ರೇ
ಪರಮಾತ್ಮ ಮುಕ್ತಿ ಹೊಂದಿದೆ ನಾನು
ಸ್ವರ್ಗ ಸೇರಿದೆ
ಈ ಜನ್ಮ ಪವಿತ್ರವಾಗ್ತತ್ತೈತಿ
ನಿನ್ನ ಕೈನಲ್ಲಿ ಪ್ರಾಣ ಹೋದ್ರೆ ಏನು ತಪ್ಪಿಲ್ಲ
ದುರ್ಗಿ ಕೈನಲ್ಲಿ ಮಾತ್ರ ಪ್ರಾಣ ಹೋಗಬಾರ್ದು
ಲತ್ತುಮುಂಡೆ ಅವುಳು

ಒಳ್ಳೆ ಕೆಲಸವಾಯ್ತು
ನನ್ನ ಜೀವುನ ಪಾವನವಾಯ್ತು
ಅಂದ್ಕಂಡು ಆ ಕಾಗಿ
ಸರಿ ಕಾಲಿನಲ್ಲಿ ಇದ್ದಂತಹ ಪುಸ್ತಕವನ್ನ
ಕೊಕ್ಕಿನಲ್ಲಿ ಕಿತ್ತು
ಜುಂಜಪ್ಪನ ಬಲಗಡೆ ಮಂಡೇ ಮಾಲ್ಕೆ ಸೀಟಿ ಬಿಟ್ಟು
ಕಾರ್ ಕಾರ್ ಎಂದು
ತೆಂಕಣ ದೇಶದ ಮಖನಾಗಿ ಹಾರಿ ಹೋರಟೋಗ್ತಾಯಿತ್ತು
ಈ ಸೀಟಿ ಬಲಗಡೆ ಮಂಡೆ ಮ್ಯಾಲಿಂದ
ಜುಂಜಪ್ಪನ ತೊಡೆ ಮ್ಯಾಲಕ್ಕೆ ಬಿತ್ತು ಸೀಟಿ
ಆಗ ಇದೇನು ಕೌಮಾರ್ಗ ದೇವುತಿಗಳಿರಾ
ನಾನು ಹುಟ್ಟಿ ಇಲ್ಲಿಗೇ ಬೇಕಾದಷ್ಟು ಬಹುದಿನಗಳಾತ್ತು
ಇಷ್ಟು ದಿನಗಳಿಗಿಂತಲ್ಲು ನನಗೆ ಓಲೆ ಬರೆದವರು
ಇಂತವರ್ಗು ಯಾರೂ ಇರಲಿಲ್ಲವಲ್ಲ
ಸರಿ ಇವತ್ತು ಓಲೆ ಬರಬೇಕಾಗಿದ್ರೇ
ಇದರಲ್ಲಿ ಏನೀರಬಹುದು ಕಾರಣ
ಅಂದು ಕೈನಲ್ಲಿ ತಕ್ಕಂಡು
ಆ ವಾಲೆಇಡ್ಕಂಡು ಓದ್ತಾ ಅವನೇ ಸ್ವಾಮಿ
ಏನಂದು ಬರ್ದಯ್ತೆ
ಸ್ವಾಮಿ
ನಮ್ಮ ದೇಶದಲ್ಲಿ ಜೀವು ದನಗೂಳಿಲ್ಲ
ಇರುಗೊಂದಿ ದೇಶ ನಮ್ಮದು
ನನ್ನ ಗುಡಿ ಸುತ್ತ
ನೂರ ಆರುವತೆಂಟು ಎಕರೆ ಹುಲ್ಲುಗಾವುಲು ಕಟ್ಟೆ
ನಮ್ಮ ತಾಯಿ ತಂದೆ ತಡಿಸಿದಂತ್ತ ಕಾವುಲು
ಮುಗುಲ್ಹುಲ್ಲುಯೆಂಬೂದು ಮುಗುಲುದ್ದಕ್ಕೆ ಬೆಳೆದೈಯ್ತೆ
ಚಿಪ್ಪುಗರಿಕೆ ಹುಲ್ಲು ತೆಪ್ಪನೆ ಮಲಗ್ಯೆಯ್ತೆ
ಕಪ್ಪೆ ಕಲಕದಂತ ನೀರಾಯ್ತೆ
ಮಾರವಳ್ಳಿ ಹುಲ್ಲು ವಾಲಿ ಬೆಳೆದೈಯ್ತೆ ಸ್ವಾಮಿ
ಸರಿ ಜೀವುದನಗೊಳಿಲ್ಲ
ನಾನು ಹುಟ್ಟಿದ ಗಂಟ್ಲು ನೋಡಿಲ್ಲ
ಜೀವು ದನಗೊಳ ಮೊಕಾನಾ

ನೀನು ಪಡುವಲು ದೇಶದಲ್ಲಿ
ಗೋಕುಲದಲ್ಲಿ ಹುಟ್ಟಿ
ಗೋವಿನಲ್ಲಿ ಉತ್ಪತ್ತಿಯಾಗಿ
ಕಡುಗುದು ಕೈಯೋಳೆ
ಕಡು ಚೆಲುವೆ ಸಿನ್ನಮ್ಮನ ಹೊಟ್ಟೆ ಒಳಗೆ
ಮಾರಣ್ಣ ಮೈಲಣ್ಣ ಜೋಡಿಲಿ ಜುಂಜಪ್ಪ
ಮೂರು ಜನ ಅಣ್ಣ ತಮ್ಮುಗೊಳು
ಉದ್ಭವ ಆಗಿದ್ದರಂತೆ ಸ್ವಾಮಿ
ಏಳು ಲಕ್ಷದ ದನುಗೊಳು ಆಳಿದೀರಂತೆ
ಬಂದು ನನ್ನ ಕಾವುಲು ಮೇಯಿಸಪ್ಪ
ನಿನ್ನ ದನಗೊಳು ಮುಖವನ್ನು ನನಗೆ ನೋಡಿಸಿ
ಮುಕ್ತಿಫಲ ಸತ್ತುಸ್ವರ್ಗ ಕೊಟ್ಟು ಹೋಗು ಸ್ವಾಮಿ
ಅಮತ ದುರ್ಗಿ ವಾಲೆ ಬರುದವುಳೇ
ಅದಕ್ಕಿಂತ ಮೇಲ್ಗಡೆ ಏನಂದು ಬರ್‍ದಾವುಗಳೇ

ಎಲ್ಲವೋ ಕಾಡುಗೊಲ್ಲ
ನೀನು ತಂದೆ ಇದ್ದಂತೆ ಹುಟ್ಟಿದ್ರೇ
ಬಂದು ನನ್ನ ಕಾವುಲು ಮೇಯಿಸಬಹುದು
ತಂದೆ ಸತ್ತ ಹನ್ನೇರಡು ವರ್ಷಕ್ಕೆ ಹುಟ್ಟಿದ್ರೇ
ಉಡುದಾರವಿಲ್ಲದ ಮುರುದಾರು ಮುಂಡೆಗೆ ಹೆದರಿ
ಪಡುವಲು ದೇಶದಲ್ಲಿ ಇರಬಹುದು
ಅಂತ ದುರ್ಗಿ ಬರ್‍ದಿದ್ಲು
ಆ ಸೀಟಿ ನೋಡ್ತಿದ್ದ ತಕ್ಷಣ ಜುಂಜಪ್ಪನಿಗೆ
ಅಂಗಾಲಾಗಲೀ ಕಿಚ್ಚು ನಡೆನೆತ್ತೀಗೇರಿತ್ತು
ಕರಿಕರ್‌ನೇ ಹಲ್ಲು ಕಡದು ಉರಿಗಣ್ಣು ಬಿಟ್ಟ ಸ್ವಾಮಿ
ಅವುನು ಕಣ್ಣೊಳುಗಿಂಟ ಒಂದೊಂದು ಆನೆ ಗಾತ್ರ ಬೆಂಕಿ
ಆಕಾಶಕ್ಕೂ ಮುಗಿಲಿಗೂ ಏಕವಾಗಿ ಸುರುದುಬಿಡ್ತೂ
ಸಿಟ್ಟಾಗಿ ಕಣ್ಣ್ ಬಿಟ್ಟಿದಂಗೆಯೇ
ಆಗ ಮಾರಣ್ಣ ಮೈಲಣ್ಣ ಓಡಿ ಬಂದು
ಹಿರಿಯಣ್ಣ
ಪ್ರಪಂಚದಲ್ಲಿ ಸರಿ ದನಕರ ಮೇಯಿಸೋ ಮಕ್ಕಳು ಅರಣ್ಯದಲ್ಲಿರ್‍ತರೇ
ಈ ಆನೇ ಗಾತ್ರ ಬೆಂಕಿ ಹೋಗಿ ಅವುರ ಮೇಲೆ ಬಿದ್ದರೇ
ಸುಟ್ಟೋಗುಬಿಡ್ತವೇ ಹಿರಿಯಣ್ಣ

ಯಾತಕ್ಕಾಗೀ ಉರಿಗಣ್ಣು ಬಿಟ್ಟೇ ನೀನು
ಅಂದು ಮಾರಣ್ಣ ಮೈಲಣ್ಣ ಹೇಳಿದ್ರು
ಆಗ ಜುಂಜಪ್ಪ ಭೂಲೋಕ ನೋಡಿದ
ಆ ದೃಷ್ಟಿಯಲ್ಲಿ ಭೂಮಿಗೆ ಇಳಿದೊಯ್ತು
ಆಗ ಜುಂಜಪ್ಪ
ಏಳು ವರ್ಷದ ಮಗನಾಗಿ ನಿಂತ
ಆವಾಗ
ಮಾರಣ್ಣ ಮೈಲಣ್ಣ
ತಾಳೆದುರ್ಗಿ
ತಂದೆ ಇದ್ದಂತೆ ಹುಟ್ಟಿದ್ರೇ
ಬಂದು ನನ್ನ ಕಾವುಲು ಮೇಯಿಸಬಹುದು
ತಂದೆ ಸತ್ತು ಹನ್ನೇರಡು ವರ್ಷಕ್ಕೆ ಹುಟ್ಟಿದ್ದರೆ
ಉಡುದಾರವಿಲ್ಲದ ಮುರುದಾರು ಮುಂಡೆಗೆ ಹೆದರಿ
ಪಡುವಲು ದೇಶದಲ್ಲಿ ಇರಬಹುದು ಅಂತ ಬರ್ದಾವಳೆ
ಹೋಗಲೂ ಬ್ಯಾಡವೊ ದುರ್ಗಿ ಕಾವುಲಿಗೆ ಅಂದ ಜುಂಜಪ್ಪ
ಮಾರಣ್ಣ ಮೈಲ್ಲಣ್ಣ ಹೇಳ್ತಾರೆ
ಹಿರಿಯಣ್ಣ
ಆ ಕಾಮುಜೇನು ಕಲ್ಪವೃಕ್ಷ ಎಂಬ ಕಾವುಲಲ್ಲಿ
ನಮ್ಮ ಮೂರು ಜನ ಅಣ್ಣ ತಮ್ಮುಗೊಳು ತಲೆಗೊಳೋ
ಚೆಂಡಾಡೋದ್ರು ಚಿಂತೆಯಿಲ್ಲ
ಕರಿವಿರಿಯಣ್ಣ ಹೋಗ್ಲಿ ದುರ್ಗಿ ಕಾವುಲಿಗೆ
ಅಂದ್ರು ಮಾರಣ್ಣ ಮೈಲ್ಲಣ್ಣ
ಜುಂಜಪ್ಪನಿಗೆ ಒಂದು ಭುಜ ಹದಿನಾರು ಭುಜವಾಯ್ತು
ಮಾರಣ್ಣ ಮೈಲ್ಲಣ್ಣ
ನೀವೇನಾದ್ರು ಬೆದರಿ
ಬೆಂಡಿ ಬಿಸುಲ್ಲಾಗೋಗುದು ಬ್ಯಾಡ ಅಂದ್ದಿಂದ್ರೆ
ನಿಮ್ಮನ್ನ ಸಿಂಗಾಡಿ ಸೇದಿ ಮಿಡಿಬಿಲ್ಲೇತ್ತಿ
ನಿಮ್ಮ ನಡಿನೆತ್ತೀ ಒಳಗೆ ನಾಲಿಗೆ ಇರ್ದಾಕುಬಿಡ್ತಿದ್ದಿ
ಕರೀರಿ ಹೋಗ್ಲಿ ದುರ್ಗಿ ಕಾವುಲಿಗೆ ಅಂದ್ರು

ರನ್ನುದು ಪಿಳಿಗೋಣಿ
ಚಿನ್ನುದು ಪಿಳಿಗೋಣಿ ತಕ್ಕಂಡು
ದನುಗೊಳು ಕರ್ಕಂಡು

ಮಾರಣ್ಣ ಮೈಲ್ಲಣ್ಣ
ಜುಂಜಪ್ಪ ಹೋಗುತಾರಣ್ಣ
ದುರ್ಗಿ ಕಾವುಲಿಗೆ ಹೋಗದುಕ್ಕೇ ॥
ದನುಗೊಳು ಕರ್ಕುಂಡು
ಅವುರಾನೇ ತಂದೇ
ಕೂಡಗನೆಮಾನ್ಯದ
ಎರಿಯ ಹೊಲದೊಳುಗಾಸಿ
ಆಲರಿಕೀ ಕಟ್ಟಿ
ಮುಡುಲು ಬಾರೀ
ಹೊಳುಗಾಸಿ
ಪುರ್ಲ್ಲಳ್ಳಿ ಬೂತಪ್ಪನು
ಗುಡಿಯನೆ ನಿಧಿಯಗಾಸಿ
ತಾವರುಗರೆ ಅಡ್ಡೇಣಿನೊಳಗಾಸಿ
ಗುಡ್ಡುದು ರಂಪ್ಪನು
ಗುಡಿಯಾನೆ ಗುಡ್ಡಾದಾ
ಅಡ್ಡೀಣಿನೊಳಗಾಸೆಯಮ್ಮ
ದೊಡ್ಡ ಮದುಗುದ ಕಾವುಲಿಗೆ
ಜುಂಜಪ್ಪ ದನಗೊಳು ಕರುದವನೋ ॥

ದೊಡ್ಡ ಮದುಗುದು ಕಾವುಲಲ್ಲಿ ಸಣ್ಣಾಲದು ಗಿಡದಡಿಗೆ
ಜುಂಜಪ್ಪ ಮಾರಣ್ಣ ಮೈಲಣ್ಣ
ದನ ಕರ್ಕಂಡು ದುರ್ಗಿ ಕಾವುಲುಗೋಗೂ ದಾರಿ ಒಳಗೆ
ದೊಡ್ಡ ಮದುಗುದು ಕಾವುಲಲ್ಲಿ
ಜುಂಜಪ್ಪನಿಗೆ ಮೂರು ಮೂರು ಸಾರಿ ಎಡಗಣ್ಣು ಹಾರಿಸಿ ಬಿಡ್ತು
ಎಡಗಣ್ಣು ಹಾರಿಸ್ತಿದಂಗೆಯ
ಜುಂಜಪ್ಪ ಭೂಮಿಗಿಳಿದು ಬಿಟ್ಟ
ಇದೇನು ಕಾರುಣ ಭಗುವಂತ
ಎಡಗಣ್ಣು ಹಾರಸ್ತಾಯ್ತಲ್ಲ
ನಾನು ನಮ್ಮ ತಾಯಿಗೆ ಸಹ ಹೇಳ್ದಂತೆ
ಬಂದು ಬಿಟ್ಟೇನಿ
ಈ ಓಲೆ ನೋಡ್ತಿದಂಗೆಯೇನೆ
ಇಲ್ಲ ಅರ್ಧ ದಾರಿ ಒಳಗೆ ಎಡಗಣ್ಣು ಆರಿಸ್ತಾಯ್ತೇ

ಬ್ರಷ್ಟ ಮುಂಡೆ ತಾಳೆ ದುರ್ಗಿ
ನಾನು ಹೋಗುತ್ತಿದಂಗೆಯೇ
ಒಳಸೂತಕದಿಂದ ಎದ್ದು ಬರ್ತಳೊ ತಾಳೆದುರ್ಗಿ
ಕಣ್ಣು ಬಿಟ್ಟು ಬಿಟ್ರೇ
ಉರಿಗಣ್ಣಾಯ್ತೆ ನಿಂದು ಉರುದು ಹೋಗ್ತಾಳೆ
ಸ್ತ್ರೀಯಳನ್ನ ಕೊಂದ್ರೆ
ನಾನು ಸ್ತ್ರೀಯತ್ಯ
ಶಿಶು ಹತ್ಯ
ಗೋಹತ್ಯ ನಾನು ಒಳಗಾಗಂಗಿಲ್ಲ
ಸ್ತ್ರೀಯಳನ್ನು ಕೊಂದ್ರೆ
ನಾನು ಏಳು ಜನ್ಮದಲ್ಲಿ ಹುಟ್ಟಬೇಕು
ಏಳು ಜನ್ಮದಲ್ಲಿ ಸಾಯಿಬೇಕು
ಸ್ತ್ರೀಯತ್ಯಕ್ಕೆ ಒಳಗಾಗುಬಿಡ್ತಿನಿ ಸಾಧ್ಯವಿಲ್ಲ
ಇದಕ್ಕೊಂದು ಉಪಾಯಮಾಡಬೇಕು ನಾನು
ಮೂರೇಳು ಮಂದಿ ದೇವುಗಾಣಿಕೆಯನ್ನು ಕರಿಸಿ
ಮುನ್ನೂರು ಅರವತ್ತು ಕೋಟಿ ಲಿಂಗಪ್ಪುಗೂಳಿಗೋ
ಒಂಬತ್ತು ಜನ ರಂಗಪ್ಪುಗೊಳಿಗೋ ಎಡೆಯನ್ನ ಮಾಡಿಸಿ
ಆ ಮುನ್ನೂರು ಅರವತ್ತು ಕೋಟಿ ಲಿಂಗನ್ನು
ಒಂಬತ್ತು ಜನ ರಂಗಪ್ಪಗಳನ್ನೂ
ನನ್ನ ಬೆನ್ನು ಸಹಾಯಕ್ಕೆ ಕಟ್ಗಂಡೋಗಿ
ಆ ದೇವುತ್ರು ಕೂಟೇ ಭ್ರಷ್ಟ ಮುಂಡೆ ತಾಳಿ ದುರ್ಗಿನ
ಭೂಮಿಗೆ ತುಳಿಸಿ ಬಿಡುಬೇಕು
ಅಂದ್ಕಂಡು ಜುಂಜಪ್ಪ ಮನದಲ್ಲಿ
ವೀರಣ್ಣೆಂಬ ಪಾಸ್ಪತ ಬಾಣಕ್ಕೆ ವಾಲೆಯನ್ನ ಬರದು
ಕೈಲಾಸಕ್ಕೆ ಪರಮೇಶ್ವರನ ಅರಮನೆಗೆ ಗುರಿಯಿಟ್ಟು

ಸೇರಿಸಿ ಬಾಣ
ಹೊಡುದನಣ್ಣ ಗಳಿಗಾಗೋ
ಪಾರ್ವತಿ ಪರಮೇಶ್ವರರು
ಕೈಲಾಸದಲ್ಲಿ
ಕುಂತ್ತಿದ್ದರು ಕಲ್ಲುಮನಿ ಒಳುಗೋ ।

ಪರಮೇಶ್ವರ ಅರಮನೆ ಒಳಗು ಹೋಗಿ
ಕಲ್ಲು ಕಂಬಕ್ಕೆ ಮುಂಗಾರು ಸಿಡಿಲು ಹೊಡೆದಂತೆ ಹೊಡೆದು
ಜುಂಜಪ್ಪನ ಬಾಣ ಈಶ್ವರನ ಮುಂದೆ ಬಿತ್ತು
ಯಾರೀರುಬಹುದಪ್ಪಾ
ಅರಮನೆ ಒಳಕೆ ಬಾಣ ಹೂಡುದು ಬಿಟ್ರು
ಅಂದ ಪರಮೇಶ್ವರ ಬಾಣ ತಕ್ಕಂಡು ನೋಡಿವಾಗ
ಈಸ್ವರನು ಹಿರಿ ಮಗ ವೀರಭದ್ರನು ಬಾಣು ಇದು
ಓಹೋ
ದೇವಿ ನಿನ್ನ ಹಿರೆ ಮಗ ವೀರಭದ್ರ
ಜುಂಜಪ್ಪನ ಅವುತಾರವೆತ್ತವುನಲ್ಲ ಹಿರ್ರೈ ಜುಂಜಪ್ಪ
ಆ ಬಾಣ ಹೊಡುದು ಬಿಟ್ಟವುನೇ ಕಣೆ
ಯಾಕೊ ನಮ್ಮ ಅರಮನೆಗೆ ಅಂದ ಪರಮೇಶ್ವರ
ನೋಡಿ ಅದೇನು ನೋಡಿ ಸ್ವಾಮಿ ಅಂದ್ಲು
ಪಾರ್ವತಾ ದೇವಿ
ಓದಿದ
ಏನೂ ಇಲ್ಲ
ಏಳು ನಾಲಿಗೆ ದುರ್ಗಿ ಕಾವುಲುಗೆ ಹೋಗ್ತಾನಂತೆ
ನಿನ್ನ ಮಗ
ಅದಕ್ಕಾಗಿ ದೇವುಗಾನಿಕೇಯರು
ಸಹಾಯಬೇಕಂತೆ ಅಡಿಗೆ ಮಾಡಸದಕ್ಕೆ
ಮುನ್ನೂರು ಅರವತ್ತು ಕೋಟಿ ಲಿಂಗಗಳಿಗೊ
ಒಂಬತ್ತು ಜನ ರಂಗಪ್ಪುಗೊಳಿಗೆ
ದೇವುಗಾನಿಕೆಯನ್ನ ಕಳಿಸಿಕೊಂಡಬೇಕಂತೆ
ಅಂಗಂತ ಬರದೈತೆ ವಾಲೇಲಿ
ಕಳುಸಿಕೊಂಡ್ರಿ ಅಂದ್ಲು ಪಾರ್ವತಿ ದೇವಿ
ಆಗ ಪರಮೇಶ್ವರ
ಧಡದಡನೆ ಬಾಲೆ ವನಕೆ ಓಡೋದ
ಮೂರೇಳು ಮಂದಿ ದೇವುಗಾಣಿಕೆಯರು
ಕೈಲಾಸದಲ್ಲಿ ಬಾಳೆ ವನದಲ್ಲಿ ಮನಿಗಿದ್ರು
ಮೂಡಾಪಡುವ ಮೂರೇಟು ಬೆತ್ತದಲ್ಲಿ ಹೊಡೆದು ಎಬ್ಬಿರಿಸಿದ

– ೨ –

ಆ ದೇವುಗಾನಿಕೆಯರು ಮಾಡಿದ ಅಡಿಗೆ
ನರಲೋಕ ಸುರಲೋಕ ದೇವು ಲೋಕವೆಲ್ಲ
ಘಮಘಮ ಅಂತ ಘಮಗುಟ್ಟೋಗ್ತಾಯ್ತೆ
ಆ ದೇವುಗಾನಿಕೆಯರು ಮಾಡಿದ ಆಡಿಗೆ ಘಮಗುಟ್ತಾ ಶಬ್ದಕ್ಕೆ
ಈ ಮೂನ್ನೂರು ಆರವತ್ತು ಕೋಟಿ ಜನ ಲಿಂಗಪ್ಪುಗಳು
ಒಂಬತ್ತು ಜನ ರಂಗಪ್ಪುಗಳು
ಮೂರೇಳು ಮಂದಿ ಮಾರಮ್ಮುಗಳು
ಬಾಯಿ ಬಾಯಿ ಬಿಡ್ತ ನಿಂತ್ಕಬಿಟ್ಟವುರೇ ದೇವುತ್ರೇಲ್ಲ
ಎಷ್ಟೋತ್ತಗೆ ಜುಂಜಪ್ಪ ಕರದನಪ್ಪಾ
ನಾವು ಹೋಗಿ ಊಟ ಮಾಡವಪ್ಪಾ
ಇಂಥ ಅಡಿಗೆ ಯಾರು ಮಾಡಿಸಿಲ್ಲ ಅಂದು
ದೇವುತ್ರೆಲ್ಲ ಬಾಯಿ ಬಿಡ್ತ ನಿಂತ್ತಿದ್ರು
ಪುರುಳಳ್ಳಿ ಭೂತಪ್ಪ ಆಗ ಸ್ವಾಮಿ
ದೊಡ್ಡ ಮದುಗದು ಮೇಲೆ ನಿಂತ್ಗಂಡು ಮಹದೇವ
ದೊಡ್ಡಕೆರೆ ಬಂಡೆ ಮ್ಯಾಲೆ ನಿಂತ್ಗಂಡು ಪುರುಳಳ್ಳಿ ಭೂತ
ಸರಿ ದೊಣೆ ಒಳಗೆ ಕೈಕಾಲು ಮೊಕವನ್ನು ತೊಳೆದು
ಪಟೇಪಟೇ ನಾಮಗಳನ್ನ ಧರಿಸಿ
ಇಟ್ಟಿಗಿರಿಸೇ ಅಗಲ ಜಾಗಟೇ
ತೂಪ್ಪು ಗಾತ್ರ ಭವನಾಸಿ
ಮೂಡೆಗಾತ್ರ ಶಂಕು
ಬಲಮುರಿ ದೊಣ್ಣೆ ಹೆಗಲ ಮೇಲೆ
ಗರುಡುಗಂಭ ಕೈನಲ್ಲಿ ಶಂಕು ಇಡ್ಕಂಡು

ಹಿರಿಯಣ್ಣ
ದೇವುಗಾನಿಕೆಯರು ಮಾಡಿದ ಅಡಿಗೆ
ಪುರುಳಳ್ಳಿ ಭೂತ ಬಾ ಅಂತ್ತಿದಂಗೇ
ಹಾರಿಬಂದು ಬಿಡ್ತಿನಿ ಹಿರಿಯಣ್ಣ ಊಟಕ್ಕೆ
ಅಂತ ಭೂತಪ್ಪ ನಿಂತ್ತಿದ್ದ
ಭೂತಪ್ಪ ನಿಂತಿರುವಾಗ
ಕಾವಲುಮ್ಮ ಹೇಳ್ತಾಳೆ
ಹಿರಿಯಣ್ಣ

ದೇವಾನ ದೇವುತ್ರೆನೆಲ್ಲ ಊಟಕ್ಕೆ ಕರದುಬಿಡು
ಸರಿ ಅಡಿಗೆ ಆತು ಅಂತ ಕಾವಲಮ್ಮ ಹೇಳಿದ್ಲು
ಹೇಳುತ್ತಿದ್ದಂಗೆ ಆವಾಗ ಜುಂಜಪ್ಪ
ಕರಿಕಂಬಳೇ ಗದ್ದುಗೆ ಹಾಕಿ ಗಂಧಾದೂಪ್ಪನ್ನ ಹಾಕಿ
ದೇವತ್ರೆನ್ನೆಲ್ಲ ಊಟಕ್ಕೆ ಕರಿತ್ತಾನೆ ಸ್ವಾಮಿ

ಕಲ್ಲೇ ಲಿಂಗ
ಮಲ್ಲೇ ಲಿಂಗ
ಮೈಲಾರುದು ಲಿಂಗ
ಚನ್ನಬಸವ
ಕೂಡುಗಲ್ಲು ಬಸುವ
ಕುಡುಗೋಲೀರುಭದ್ರು ಸ್ವಾಮಿ
ಭೂದಳಿವಿರೋಭದ್ರು ಸ್ವಾಮಿ
ಕಲ್ಲುಕುಂಟೇ ಶಿವಸಿತ್ತುರು ಲಿಂಗ
ಮಹಾಲಿಂಗ
ಮುನ್ನೂರು ಅರವತ್ತು ಕೋಟಿ ಲಿಂಗ
ಬರಬೇಕಂದನು ಜುಂಜಪ್ಪ ಶಿವುನಿಗೋ ॥

ಶೆರಣೆಮ್ಮ ಶಿವನಿಗೆ
ಶೆರೆಣೆಮ್ಮ ಗುರುವಿಗೆ
ಶೆರಣೆ ಸಿನ್ನಮುನ್ನ ಮಗುನಿಗೋ
ಶೆರಣೆ ಸಿನ್ನಮ್ಮುನ ಮಗನೆ ಜುಂಜಪ್ಪಗೆ
ಶಿರಣೆಂದೆ ಕೈಯ ಮುಗುದೇವೋ ॥
ಆಗಲೇ ವೀರಾದಿವೀರುನಮ್ಮ
ವೀರುಭದ್ರು
ಸಮದಲ್ಲಿ ಹುಟ್ಟಿದನುಸ್ವಾಮಿ ॥

ಮುನ್ನೂರು ಅರವತ್ತು ಕೋಟಿ ಲಿಂಗ ಇಳಿದ್ರು
ಜುಂಜಪ್ಪ ಇರೋ ಸ್ಥಳಕ್ಕೆ
ದೊಡ್ಡ ಮದುಗುದು ಕಾವಲಿಗೆ
ಸಣ್ಣ ಆಲುದು ಗಿಡದಡಿಕೆ
ಆವಾಗು ಭಗುವಂತ ಒಂಬತ್ತು ಜನ ರಂಗಪ್ಪಗಳ್ನ ಕರಿತ್ತಾನೆ
ಜುಂಜಪ್ಪ ಆಗ

ಆಗಲೇ ಸೀರೆದು ರಂಗಪ್ಪ
ನಂದಿಹಳ್ಳ ರಂಗಪ್ಪ
ಮರಡೀಗುಡ್ಡುದು ರಂಗಪ್ಪ
ತಾವುರುಗೆರೆ ರಂಗಪ್ಪ
ಉಳಗೆರೆ ವೀರಣ್ಣ
ತಾರೇಹಳ್ಳಿ ಹನುಮಪ್ಪ
ಅಂಬಲುಗೆರೆ ರಂಗಪ್ಪ
ಗಿಡುಗ್ನಳ್ಳಿ ರಂಗಧಾಮ
ಮಾಗೂಡು ರಂಗಪ್ಪ
ಹಟ್ಟಿ ರಂಗಪ್ಪ
ಸಿನುಗುದ ರಂಗಪ್ಪ
ಮಾಗೊಡು ರಂಗಪ್ಪ
ಹಟ್ಟಿ ರಂಗಪ್ಪ
ಯೇಣಿಕಲ್ಲು ಗುಡ್ಡುದು ರಂಗ
ಸಕ್ರದು ವೀರಣ್ಣ
ಕಾರೇಹಳ್ಳಿ ಹನುಮಪ್ಪ
ಮಲ್ಲೇ ರಂಗಪ್ಪ
ಸಿನುಗುದು ರಂಗಪ್ಪ
ಒಂಬತ್ತು ಜನ ದೇವುತುರೆ
ಬರಬೇಕು ಅಂದಾನು ಸ್ವಾಮಿ ಗಳಿಗಾಗೋ ॥
ಒಂಬತ್ತು ಜನ ರಂಗಪ್ಪುಗುಳು ಇಳಿದರಣ್ಣಾ ಗಳಿಗಾಗೋ ॥

ಮಾರಿರ್‍ನಾ ಕರಿತಾನೆ ಸ್ವಾಮಿ ಊಟಕ್ಕೆ

ಕರ್‍ತಂಬಳೆ ಮಾರೀ
ಕರೇಬೇವಿನ ಹಳ್ಳಿ ಮಾರಿ
ಗೌರುಸಂದ್ರಮ್ಮ
ಸಿರೆದು ಸಿರುವಂತಿ
ಹಾವಿನ ಗೂಡಿನಾಗೆ
ಹುಟ್ಟಿದೊಳೇ
ಸ್ವಾರೆಕುಂಟೇ ಕರಿಯಮ್ಮ
ಬೇವಿನಹಳ್ಳಿ ಕರಿಯಮ್ಮ
ಹಾಗಲುವಾಡಿ ಕರಿಯಮ್ಮ

ದಂಡಿನು ಮಾರಮ್ಮ
ಮನಿದೇವುತಿ ಗೌರುಸಂದುರುದಮ್ಮ
ಏಳಟ್ಟಿ ಸುಟ್ಟಂತ
ಹಟ್ಟಿ ಮಾರಮ್ಮ
ಚಿಕ್ಕನಹಳ್ಳಿ ಕರಿಯಮ್ಮ
ಶೆಟ್ಟಿಹಳ್ಳಿ ಮಾರಮ್ಮ
ಮೂರೇಳು ಮಂದಿ ಮಾರಮ್ಮುಗೊಳೇ
ಬರಬೇಕಂದನು ಸ್ವಾಮಿ ಶಿವುನಿಗೋ ॥

ಮೂರೇಳು ಮಂದಿ ಮಾರೀರು
ತಲೆ ಕೆದರಿಕೊಂಡು
ಅರಿಶಿಣ್ಣ ಕುಂಕುಮಗಳಿಟ್ಗಂಡು
ಬಿಳೇ ಪತ್ತಲುಗಳು ಹುಟ್ಗಂಡು
ಮಲ್ಲಿಗೆ ಹೂವಿನ ಪುಷ್ಪದಂತೆ
ಮಾರೇರಿಳಿದ್ರು ಜುಂಜಪ್ಪ ಇರೋ ಸ್ಥಳಕ್ಕೆ
ದೇವತ್ರು ಬಂದರೇನು ಪಿರಿಯಣ್ಣ ಎಲ್ಲಾರ್ರೂ
ಅಂತ ಕಾವಲಮ್ಮ ಕೇಳಿದ್ಲು
ಊನಮ್ಮ ಎಲ್ಲ ದೇವತ್ರುನು ಊಟಕ್ಕೆ ಕರದೆ
ಹಿರಿಯಣ್ಣ ಮುಂದೆ ಕಷ್ಟಗಾಲಕ್ಕೆ ಗುರಿಯಾಗಬೇಡ
ಗುಂಡುನಾಗೆ ಗುಡ್ಡಗೆ
ತಗ್ಗನೇಗೆ ದಿಬ್ಬದಾಗೇ
ಇದ್ದಬದ್ದಂತ ದೇವತ್ರೆಲ್ಲ ಬರಬಹುದು
ಅಂತ ಕರಿಯಪ್ಪಾ ಅಂದ್ಲು ಕಾವಲಮ್ಮ
ಗುಂಡುನಾಗೆ ಗುಡ್ಡದಾಗೇ
ತಗ್ಗುನಾಗೇ ದಿಬ್ಬದಾಗೇ
ಇರ್ತಕ್ಕಂತ
ದೇವುತ್ರೆಲ್ಲ ಬರಬಹುದು ಅಂದ ಜುಂಜಪ್ಪ
ಅಂಗದ್ರೆ ಅರ್ಥ
ಕಾವಲಮ್ಮ ಹೇಳಿದ್ದು
ಭೂತಪ್ಪನ ಕರಿಯಪ್ಪ ಅಂತ ಅರ್ಥ
ಗುಂಡುನಾಗೇ ಗುಟ್ಟಾಗಿ ಇರೋನು ಅಂದ್ರೆ
ಜುಂಜಪ್ಪ ಬೆಟ್ಟ ಗುಡ್ಡದ ಒಳಗೆ
ಭೂತಪ್ಪ ಜಾಸ್ತಿ ನೆಲಗೊಂಬದು

ಅಂಗಬ್ತ ಕರಿ ಅಂಬ್ತ ಹೇಳಿದ್ರೇ
ಈಯಪ್ಪ ಅದನ್ನ ಅರ್ಥ ಮಾಡ್ಕಂಬರಲಿಲ್ಲ
ಆಯಮ್ಮ ಹೇಳಕ್ಕೊಟ್ಟಂಗೇ ಕರುದುಬಿಟ್ಟ
ಭೂತಪ್ಪನ ಹೆಸರು ಇಡಿದು ಕರಿಲಿಲ್ಲ ಜುಂಜಪ್ಪ
ಇದ್ದೂರು ಬದ್ದೋರೆಲ್ಲ ದೇವುತ್ರೆಲ್ಲ ಇಳ್ದುಬಿಟ್ರು
ಭೂತಪ್ಪನ ಹೆಸರು ಇಡಿದು ಕರಿಲಿಲ್ಲ ಅವುನು ಬರ್ಲಿಲ್ಲ
ದೊಡ್ಡಕೆರೆ ಬಂಡೆಮೇಲೆ ಅಲ್ಲೇ ಸೇರಿಬಿಟ್ಟ ಭೂತಪ್ಪ
ಆವಾಗ ದೇವುನ್ನ ದೇವತ್ರೆಲ್ಲ ಕೈಕಾಲು ಮುಖಗಳು ತೊಳದು
ಲಿಂಗಧಾರಣೆಗಳು ಶಿವುಪೂಜೆಗಳು ಮಾಡಿಕ್ಕಂಡ್ರು
ಮುನ್ನೂರು ಅರವತ್ತು ಕೋಟಿ ಜನ ಲಿಂಗಪ್ಪುಗೊಳು
ಒಂಬತ್ತು ಜನ ರಂಗಪ್ಪುಗೊಳು
ಕೈಕಾಲು ಮುಖಾತೊಳೆದು
ನಾಮುದ ಸ್ಯಾವೆ ಮಾಡಕ್ಕಂಡ್ರು
ಮೂರೇಳು ಮಂದಿ ಮಾರಮ್ಮಗೊಳು
ಕೈಕಾಲು ಮೊಖವನ್ನ ತೊಳೆದು
ಅರಿಶಿಣ ಕುಂಕುಮ ಇಟ್ಗಂಡು ಹೂವಾ ಮುಡ್ಕಂಡು
ಕೂತ್ಕಂಡ್ರು ಎಲ್ಲಾ ಊಟಕ್ಕೆ
ಈ ಮಲ್ಲಿಗುಡ್ಡದ ರಂಗಪ್ಪ ಅಂಬೊನು
ಅತೀ ಪ್ರೇಮುದು ಜೊತೆಗಾರ ಜುಂಜಪ್ಪನಿಗೆ
ಮಲ್ಲಿಗುಡ್ಡದ ರಂಗಪ್ಪ ಪ್ರೇಮುದು ಜೊತಿಗಾರನಾದ್ರೆ
ಮೊದಲು ಅಗ್ರದ ಎಲೆ
ಮಲ್ಡಿ ಗುಡ್ಡದ ರಂಗಪ್ಪುಗೆ ಹಾಕುಬಿಟ್ಟು ಜುಂಜಪ್ಪ
ಮೂರು ದುಡ್ಡು ಕಾಣಿಕೆ
ಅಡಿಕೆ ವಿಳೇದೆಲೆ
ಮಲ್ಡಿ ಗುಡ್ಡದ ರಂಗಪ್ಪಕ್ಕೆ ಇಕ್ಕು ಬಿಟ್ಟ
ಭೂತಪ್ಪನ ಕಾಣಕೇನೆ
ಮಲ್ಡಿಗುಡ್ಡದ ರಂಗಪ್ಪನಿಗೆ ಹಾಕುಬಿಟ್ಟ ಜುಂಜಪ್ಪ
ಮೊದಲು ಮೂರಿಡಿ ಅಡಿಗೆ
ಇಕ್ಕಿಬಿಟ್ಟ ಮಲ್ಡಿಗುಡ್ಡದ ರಂಗಪ್ಪಗೆ
ಭೂತಪ್ಪನ ಕಾಣಿಕೆನು ಭೂತಪ್ಪನ ಎಡೆ ತಕ್ಕಂಡೋಗಿ
ಮಲ್ಡಿಗುಡ್ಡದ ರಂಗಪ್ಪಗೆ ಹಾಕುಬಿಟ್ಟ ಜುಂಜಪ್ಪ
ಭೂತುನು ಕಾಣಿಕೆಯನು ಎಡೆಯನ್ನು ತಕ್ಕಂಡೋಗು ಬಿಟ್ಟು

ಮಲ್ದಿ ಗುಡ್ಡುದು ರಂಗಪ್ಪನಗೆ ಹಾಕಿ ಜುಂಜಪ್ಪ
ದೇವಾನು ದೇವುತೆಗಳಗೆಲ್ಲ ಅಗ್ರದೆಲೆಗಳು ಕೊಟ್ಟು ಎಡೆಗಿಟ್ಟ
ಪಂಕ್ತಿ ಕಲ್ತು ಬಿಟ್ತು
ಗೋವಿಂದ ಅನ್ನಯ್ಯ ಮಲ್ದಿಗುಡ್ಡದ ರಂಗಪ್ಪ
ಪಂಕ್ತಿಯೆಲ್ಲ ಕಲಿತು ಅಂದ ಆವಾಗ
ಮಲ್ದಿಗುಡ್ಡುದ ರಂಗಪ್ಪ ಗೋವಿಂದನ ಇಡ್ಕುತಾನೆ

ಶ್ರೀಮದ್ ರಮಾರಮಣಾ ಗೋವಿಂದ ಗೋವಿಂದಾ ॥

ಆವಾಗ ದೇವನ್ನ ದೇವತುರೆಲ್ಲಾ
ಗೋವಿಂದ ಗೋವಿಂದ
ಅಂದರು ಸ್ವಾಮಿ
ಗೋವಿಂದ ಅಂದ ಸೊಲ್ಲು
ದೇವುರು ಕರುಣದಿಂದ ॥

ಪುರ್ರಹಳ್ಳಿ ಭೂತಪ್ಪ
ದೊಡ್ಡ ಕೆರೆ ಬಂಡೆ ಮೇಲಿದ್ದವನಿಗೆ ಕೇಳಿಸುಬಿಟ್ತು
ಇವುರು ಗೋವಿಂದನ್ನ ಇಕ್ಕಿದ್ದು
ದಪ್ಪನೆ ಬಿದ್ದುಬಿಟ್ಟ ನಮ್ಮಪ್ಪ ಪುರ್ರಹಳ್ಳಿ ಭೂತ
ದೊಡ್ಡ ಕೆರೆ ಬಂಡೆ ಮೇಲೆ
ವಿರಿಯಣ್ಣ
ಯಾರು ಉಣಬಾರ್ದು ಊಟ ನಾನೊಬ್ಬನನೆ ಉಣ್ತಿದ್ನೇನಪ್ಪಾ
ಹೊಳ್ಳು ಮೇಲೆ ಕುಟ್ಟುದಂತೆ ಬೆಂಕಿ ಮೇಲೆ ಬೇಯಿಸದ್ದಂತೆ
ಅಡಿಗೆ ಮಾಡಿಸಿದ್ದೆ ದೇವುಗಾನಿಕೆಯರ್ನ ಕರಿಸಿ
ದೇವಾನ್ನ ದೇವುತ್ರೆನ್ನೆಲ್ಲಾ ಕರೆದು ಎಡೆಗಿಕ್ಕಿದ್ದಿಯಾ
ನನ್ನನ್ನ ಕರಿದಂತೆ ದೇವತ್ರೆಗೆಲ್ಲ ಊಟಕ್ಕೆ ಇಡ್ತೀದಿಯೇನಪ್ಪಾ
ವಿರಿಯಣ್ಣಾ
ಯಾರು ಉಣಬಾರ್ದು ಊಟಾ ನಾನೊಬ್ಬನೆ ಉಣ್ತಿದ್ನಪ್ಪಾ ಅಂತಾ
ದೊಡ್ಡ ಕರಿಬಂಡೆ ಮೇಲೆಲ್ಲಾ ಬಿದ್ದು ಬಿದ್ದು ಉಳ್ಳಡ್ತಾನೆ ಭೂತಪ್ಪ
ಉಳ್ಳಾಡಿ ಉಳ್ಳಾಡಿ ತೆಪ್ಪುರಿಸ್ಕಂಡು
ಎದ್ದು ಕೂತ್ಕಂಡ ಭೂತಪ್ಪ
ದೇವನ್ನ ದೇವುತ್ರೇಲ್ಲ ಊಟ ಮಾಡಿದ್ರು
ಊಟ ಮಾಡಿ ತಾಂಬೂಲ ಕೊಟ್ರು
ಸೀರೆದ ಸಿಗುಳಡಿಕೆ

ದ್ವಾರಾಳ್ದಾ ಅಗ್ಗುರುದ ಬಿಳಿ ಎಲೆ
ಸೋಸಿದು ಕೆನೆ ಸುಣ್ಣ
ತಾವುರುಗೆರೆ ಕೆನಸುಣ್ಣ
ಸರಿ ತಾಂಬೂಲ ಕೊಟ್ರು
ತಾಂಬೂಲ ಹಾಕ್ಕೊಂಡು ಸರಿ ದೇವನ್ನ ದೇವುತ್ರೆಲ್ಲ
ಆ ದೊಡ್ಡ ಮದುಗುದು ಕಾವುಲ್ನಲ್ಲಿ ಜುಂಜಪ್ಪನೊಡನೆ
ಸಣ್ಣಾ ಆಲದ ಗಿಡದಡಿಗೆ ಕುಂತ್ತಿದ್ರು
ಕುಂತ್ತಿರುವಾಗ ಸರಿ ಜುಂಜಪ್ಪ ಎದ್ದು
ಮೂನ್ನೂರು ಅರವತ್ತು ಕೋಟಿ ಲಿಂಗನಿಗೂ
ಒಂಬತ್ತು ಜನ ರಂಗಪ್ಪಗಳಿಗೂ
ಶರಣಾರ್ತಿ ದೇವುತೆಗಳಿರಾ
ತಾಳೆದುರ್ಗಿ
ತಂದೆ ಇದ್ದಂತೆ ಹುಟ್ಟಿದ್ರೆ ಬಂದು
ನನ್ನ ಕಾವುಲು ಮೇಯಿಸಬಹುದು
ತಂದೆ ಸತ್ತು ಹನ್ನೆರಡು ವರ್ಷಕ್ಕೆ ಹುಟ್ಟಿದ್ರೆ
ಉಡುದಾರವಿಲ್ಲದ ಮುರುದಾರು ಮುಂಡೆಗೆ ಹೆದರಿ
ಪಡುವುಲುದೇಶದಲ್ಲೆ ಇರಬಹುದು ಅಂತ
ದುರ್ಗಿ ವಾಲೆ ಬರಿದಿದ್ಲು
ಆ ವಾಲೆ ನೋಡ್ತಿದಂಗೆ ನಮ್ಮ ತಾಯಿಗೂ ಸಹ ಹೇಳ್ದಂತೆ
ಬಂದುಬಿಟ್ಟೇ ನಾನು ಈ ಸಣ್ಣಾಲದ ಗಿಡದಡಿಕೆ
ದುರಿಗಿ ಕಾವುಲಿಗೆ ಹೋಗಾಕೆ
ಇಲ್ಲಿಗೆ ಬರ್ತಿದ್ದಂಗೆ ಮೂರು ಮೂರು ಸಾರಿ
ನನಗೆ ಎಡಗಣ್ಣು ಹಾರಿಸಿಬಿಡ್ತು
ಆದ್ದರಿಂದ
ನಾನು ಹೋಗುತ್ತಿದ್ದಂಗೆಯೇ ಬ್ರಷ್ಟಮುಂಡೆ ತಾಳಿ ದುರುಗಿ
ಏಳು ಹಳೆ ಸಾಲಿಗಳ ಸೂತುಕುದು ಸ್ಯಾಲೆಗಳನ್ನ
ಹೆಗಲ ಮೇಲೆ ಇಕ್ಕಂಡು
ಆಕಾಶಕ್ಕು ಮುಗುಲ್ಗು ಏಕವಾಗಿ ಬೆಳದು ಬಂದು ಬಿಡ್ತಾಳೆ
ನನ್ನ ಮುಟ್ಟಿಬಿಟ್ರೆ
ಸೂತುಕಕ್ಕೆ ಒಳಗಾಗು ಬಿಟ್ತಿನಿ ನಾನು
ತಾಯಿ ಹೊಟ್ಟೆ ಒಳಗೆ ಹುಟ್ಟುದ್ರೆ
ಸೂತುಕ ಬೇರೆಕಿಯಾಗ್ತೈಕೆ

ಬಾಯನ್ನಲ್ಲಿ ಒಡೆದ್ರೆ ಎಂಜಲು ಬೇರಕೆಯಾಗ್ತೈಯ್ತೆ
ಅಂತ ನಮ್ಮ ಅಮ್ಮ ಸಿನ್ನಮ್ಮನಿಗೆ
ಬಲಗಡೆ ಭುಜದಲ್ಲಿ ಬಂಗಾರದ ಹಲ್ಲಿಯಾಗಿ ಒಡದೆ
ಜುಂಜಪ್ನ ಅವುತಾರ ಎತ್ತುವಾಗ
ವೀರಭದ್ರನ ಅವುತಾರ ಎತ್ತಿದಾಗ
ಪಾರ್ವತಿದೇವಿ ಹೊಟ್ಟೆ ಒಳಗೆ ಹುಟ್ಟುದ್ರು
ಸೂತುಕವೇ ಬೆರಿಕೆಯಾಗ್ತೈತೆ ಅಂತ ಹೇಳುಬಿಟ್ಟು
ವೀರಭದ್ರ ಈಶ್ವರ ಯಾಗ ಮಾಡುವಾಗ
ಹೋಮುದು ಗುಂಡಿ ಒಳಗೆ
ಪರಮೇಶ್ವರನು ಜಡೆ ಒಳಗೆ
ವೀರಭದ್ರನಾಗಿ ಒಡದು ಬಂದೆ
ಸೂತುಕ್ದಲ್ಲಿ ನಾನು ಎಲ್ಲಿಯೂ ಬೆರಿಕೆಯಾಗಿಲ್ಲ
ಈಗ ಭ್ರಷ್ಟ ಮುಂಡೆ ತಾಳೆ ದುರುಗಿ
ನಾನು ಹೋಗುತ್ತಿದಂಗೆನೆ
ಹೊಲಿ ಸೂತಕದಿಂದ ಎದ್ದು ಬಂದುಬಿಡ್ತಾಳೆ
ಸರಿ ಸೂತುಕುದು ಬಟ್ಟೆಗೊಳೆಲ್ಲ
ಕೊರಳಿಗೆ ರುಂಡಮಾಲೆ ಹಾಕ್ಕಂಡು
ಬಂದುಬಿಡ್ತಾಳೆ ಹೊಲಿ ಸ್ಯಾಲೆಗೊಳ್ನ
ಅವುಳು ಮುಟ್ಕಂಡ ಬಿಟ್ರೇ
ನನಗೆ ಇಲ್ಲದ ಅಂಟು ಮುಂಟಾಗುಬಿಟ್ತಾಯ್ತೆ
ಬತಗೆಡಿಸಾಕಿ ಬಿಡ್ತಾಳೆ
ಆ ಕಣ್ಣು ಬಿಟ್ರೇ ಸುರ್ದು ಬೂದಿಯಾಗ್ತಾಳೆ
ಉರಿಗಣ್ಣು ಅಯ್ತೆ ನನಗೆ ಅದಕ್ಕೆ
ಆದ್ರೆ ನಮ್ಮ ತಂದೆ ಹುಟ್ಟುವಾಗ ಶಾಪ ಇಕ್ಕೆವನೆ
ಒಬ್ಬ ಸ್ತ್ರೀಯಳನು ಕೊಂದ್ರೇ
ನೀನು ಏಳು ಜಲ್ಮದಲ್ಲಿ ಹುಟ್ಟಬೇಕು
ಏಳು ಜಲ್ಮದಲ್ಲಿ ಸಾಯಿಬೇಕು ನರಾವುತಾರ ಎತ್ತಿ
ಆ ಸ್ತ್ರೀಯಳ ಕರ್ಮ ನಿನಗೆ ತಗಲಿದ ಮೇಲೆ
ನೀನು ದೇವುರಾಗಕೆ ಅವುಕಾಶವೇ ಇಲ್ಲ ಅಂತ
ನಮ್ಮ ತಂದೆ ಪರಮೇಶ್ವರ ಶಾಪ ಇಕ್ಕಿ ಬಿಟ್ಟವುನೆ
ನಮ್ಮ ತಂದೆ ತಾಯಿ ಶಾಪಕ್ಕೆ
ಶಾಪಗ್ರಸ್ತರಾಗಬಾರದು
ನಾವು ಎಷ್ಟೇ ಕಷ್ಟ ಬಂದಾಗಿಯೂ

ಆದ್ದರಿಂದ ನಿಮ್ಮನ್ನೆಲ್ಲ ಕರಿಸಿದ್ದು
ಈಗ ನೀವೆಲ್ಲ ಸೇರಿ
ನಾವೆಲ್ಲ ಬಂದು ಆ ತಾಳೆದುರ್ಗಿ ಹೊಡದು
ಭೂಮಿಗೆ ತುಳುದು ಹಾಕುತ್ತಿವಿ ಹೊಗಪ್ಪ ಅಂತ ಹೇಳಿದರೆ
ದುರಿಗಿ ಕಾವುಲಿಗೆ ಹೋಗ್ತಿನಿ
ಇಲ್ಲದಿದ್ದರೆ ನಾನು ಹೆದರಿಕ್ಕಂಡ ಅಂತ ಅವುಳು ತಿಳ್ಕಂಡ್ರು ಚಿಂತಿಲ್ಲ
ನನಗೆ ಹೆದರಿಕ್ಕಂಬಿಟ್ಟ ಜುಂಜಪ್ಪ ಅಂತನಾ
ಹಿಂದಕ್ಕೆ ನಮ್ಮೂರಿಗೆ ನಾನು ಹೊರಟೋಗ್ತುನಿ
ಹೆಂಗೇ ಹೇಳ್ರಪ್ಪ ಅಂತ ಹೇಳುಬಿಟ್ಟು
ಮುನ್ನೂರು ಅರವತ್ತು ಕೋಟಿ ಜನ
ಲಿಂಗಪ್ಪುಗೊಳ್ನ ಜುಂಜಪ್ಪ ಕೇಳಿದ
ಮುನ್ನೂರು ಅರವತ್ತು ಕೋಟಿ ಲಿಂಗಗಳು ಎನ್ಹೇಳ್ತಾರೆ
ಹಿರಿಯಣ್ಣ
ಅಂದ್ರು ಜುಂಜಪ್ಪನ್ನ
ಅವರೆಲ್ಲರಿಗಿಂತ ಮುನ್ನೂರು ಅರವತ್ತು ಕೋಟಿ ಲಿಂಗಕ್ಕಿಂತ್ತ
ದೊಡ್ಡೋನು ಜುಂಜಪ್ಪ
ಈಶ್ವರನ ಮಗ
ಮುನ್ನೂರು ಅರವತ್ತು ಕೋಟಿ ಲಿಂಗಗಳು
ಹಿರಿಯಣ್ಣ ಅಂದ್ರು ಜುಂಜಪ್ಪನ
ಏನುಪ್ಪ ಅಂದ
ನೀನು ತಾಳೇ ದುರಿಗಿ ಕಾವುಲಿಗೆ ಹೋಗು
ತಾಳೆ ದುರಗಿ ಗರ್ಭಗುಡಿ ಬಿಟ್ಟು ಈಚೆಗೆ
ವಿಪರೀತ ಅಗಾಧವಾದ ರೂಪುತಾಳಿ
ಈಚೆಗೆ ಬರುವಾಗಲೇ ಬಂದು
ಭೂಮಿಗೆ ಹತಮಾಡಿಬಿಡ್ತಿವಿ ದುರ್ಗಿನ
ಹೆದ್ರುಕ್ಕೋಬ್ಯಾಡ ನಾವು ಬಂದು ಒಡೆತೀವಿ ದುರಿಗಿನ
ಅಂದ್ರು ಮುನ್ನೂರು ಅರವತ್ತು ಕೋಟಿ ಲಿಂಗಪ್ಪುಗೊಳು
ಸರಿ ನಿಮ್ಮದಾಯ್ತು
ಒಂಬತ್ತು ಜನ ರಂಗಪ್ಪುಗೊಳೆ ನೀವೇಳ್ರಪ್ಪಾ ಅಂದ
ಒಂಬತ್ತು ಜನ ರಂಗಪ್ಪುಗೊಳು
ಹಿರಿಯಣ್ಣ
ತಾಳೆದುರಿಗಿ ಗರ್ಭಗುಡಿ ಬಿಟ್ಟು ಈಚೆಗೆ ಬರುವಾಗ ಬಂದು
ಭೂಮಿಗೆ ಹತಮಾಡಿ ತುಳುದು ಹಾಕಿಬಿಡ್ತೀವಿ

ನಾವಿದ್ದೀವಿ
ಹೆದುರಬ್ಯಾಡ
ಹೋಗು ದುರಗಿ ಕಾವುಲಿಗೆ ಅಂತ
ಒಂಬತ್ತು ಜನ ರಂಗಪ್ಪುಗಳು ಹೇಳಿದ್ರು
ಮಲ್ಡಿಗುಡ್ಡದ ರಂಗಪ್ಪ ನೀನು ಹೇಳಯ್ಯ
ನಿನಗೆ ಏಳುಕೋಟಿ ಅಲ್ವೆನರು ನಡ್ಕಂನ್ತರಯ್ಯ
ಮಲ್ಡಿಗುಡ್ಡದ ರಂಗಪ್ಪ
ಬಹಳ ಸತ್ಯವಂತ ನೀನು ಮಲ್ಡಿಗುಡ್ಡದ ರಂಗಪ್ಪ
ನೀನು ಹೇಳು ಅಂದ
ಅಂಗನ್ತಿದ್ದಂಗೆಯೆ ಮಲ್ಡಿ ಗುಡ್ಡುದು ರಂಗಪ್ಪ ಹೇಳ್ತನೇ
ಹಿರಿಯಣ್ಣ
ಗರ್ಭಗುಡಿಯಲ್ಲಿ ತಾಳೆ ದುರಗಿ
ವಿಷರೂಪ ತಾಳಿಕಂಡು ನಿಂತ್ತಿದ್ದಾಗಲೆ ಬಂದು
ಭೂಮಿಗೆ ಹತಮಾಡಿಬಿಡ್ತಿನಿ ಆ ತಾಳೆ ದುರುಗಿನ
ಹೋಗು ದುರುಗಿ ಕಾವುಲಿಗೆ ಹೆದರಿಕೊಬ್ಯಾಡ
ನಾನು ಬಂದು ಹೊಡಿತಿನೀ ಅಂದ ಮಲ್ಡಿಗುಡ್ಡದ ರಂಗಪ್ಪ
ಅಂಗಂದ್ದು ಸ್ವಲ್ಪ ಪುರ್ಲಹಳ್ಳಿ ಭೂತಪ್ಪನಿಗೆ ಕಿವಿಯ ಕರ್ಣಕ್ಕೆ ಕೇಳಿಸ್ತು
ದೊಡ್ಡ ಕೆರೆ ಬಂಡೆಮೇಲೆ ಭೂತಪ್ಪ ಇದ್ದನಲ್ಲ
ಇವುರು ಆಡಿದ ಮಾತೆಲ್ಲ
ಭೂತಪ್ಪನ ಕಿವಿಯ ಕರ್ಣಕ್ಕೆ ಕೇಳಿಸ್ತು
ಆಗ ಹೇಳ್ತನೆ ಭೂತಪ್ಪ ಜುಂಜಪ್ಪುಗೆ
ವಿರಿಯಣ್ಣ ಎಂಬೂದು ಜುಂಜಪ್ಪನ್ದೇ
ಎಲ್ಲಾರಿಗೂ ದೊಡ್ಡೋನು ಜುಂಜಪ್ಪ
ಸರಿ ಆದರಿಂದ ವಿರಿಯಣ್ಣ ಅಂತರೆ ಜುಂಜಪ್ಪನ
ಆಗ ಪುರ್ರಹಳ್ಳಿ ಭೂತಪ್ಪ ಹೇಳ್ತನೇ
ಎಲೋ ವಿರಿಯಣ್ಣಾ
ಆ ಮೂನ್ನೂರು ಅರವತ್ತು ಕೋಟಿ ಜನ ಲಿಂಗಪ್ಪುಗೊಳು ಬಂದು
ಹೋಡಿತ್ತಾರೆ ದುರಗಿನ ಅಂತ ತಿಳಕ್ಕಂಡಿದ್ದಿಯೋ
ಅವುರವುರ ಗುಡಿ ಒಳಗೆ
ಎತ್ತೆತ್ತ ಮುಖನಾಗಿ ಕುಂತವುರು
ಅತ್ತ ಮುಖನಾಗಿ ತಾಳೆ ದುರಿಗಿ ಪಾದಕ್ಕೆ
ಹಾಸಾಸಿ ಅಡ್ಡುಬಿಳ್ತಾ ಇರ್ತಾರೆ
ತಾಯಿ

ನಮ್ಮ ಗುಡಿಕಡಿಕೆ ತಿರುಗಿನೋಡ ಬೇಡಕಣಮ್ಮ
ನಿನ್ನ ನೋಡಿದ್ರೆ ನಮಗೆ ಭಯವಾಗ್ತಾಯ್ತೆ ಅಂತನ
ಈ ಸೀಸಾರ್ನೋರು ಬಂದು ನಿನಗೆ
ದುರಿಗಿ ಹೊಡಿತಾರೇನೊ ಹಿರಿಯಣ್ಣ
ಮೂನ್ನೂರು ಅರುವತ್ತು ಕೋಟಿ ಜನ ಲಿಂಗಪ್ಪಗೊಳು
ನೋಡ್ತೀನಿ ನಿನಗೆ
ಏನೇನು ಮಾಡ್ತಿನಿಯೆಂಬುದು ನೋಡೀವಂತೆ

ಪಡವಿ ಕುಂಕುಮ
ಹೋಡಿಯೋ
ನರಸಿಂಗನು ಬಾಣ
ಕಾಡಿದಾಗ್ಯ ಹಿರಿಯಣ್ಣ ನಿನ್ನ ॥

ನಿಜವಾಗಿ ಕಾಡದಿದ್ರೇ ನಾನು ಭಂಟಾಗಿನ ಭಂಟ
ಹೆಚ್ಚಿನ ಭಂಟ ಏಳುನಾಮುದೊಡಿಯ
ಪುರ್ರಹಳ್ಳಿ ಭೂತಯೆಂಬ ಹೆಸರಲ್ಲ ಹಿರಿಯಣ್ಣಾ,
ಏನು ತಿಳಕ್ಕಬಿಟ್ಟದ್ದೀಯ ನನ್ನ ?
ಇನ್ನು ನಿನ್ನ ಮುನ್ನೂರು ಅರುವತ್ತು ಕೋಟಿ ಜನ ಲಿಂಗಗಳು
ಒಂಬತ್ತು ಜನ ರಂಗಪ್ಪುಗಳೂ
ಮಲ್ಡಿ ಗುಡ್ಡದು ರಂಗಪ್ಪ
ಭಾಷೆ ಕೊಟ್ಟವನೆ ಮಲ್ಡಿಗುಡ್ಡುದು ರಂಗಪ್ಪ
ಬಲಗೈ ಭಾಷೆ ಎಡಗೈ ನಂಬಿಕೆ ಕೊಟ್ಟವನೆ
ತಾಳೆ ದುರಿಗಿ ಹೋಡಿತಿನಿ ಅಂತ
ಸರಿ ಇವುರು ಎಲ್ಲಾನ
ತಾಳೆ ದುರ್ಗಿ ಗುಡಿ ಬಿಟ್ಟು ಈಚೆಗೆ ಬತ್ತಿದಂಗೆಯೇ
ಅವುರವ್ರ ಗುಡಿಯೊಳಗೆ ಅವುರೆ ಮಕಾಡೆ ಮನಿಕೊಂಡಿರ್ತಾರೆ
ತಾಳೇ ದುರಿಗಿ ಪಾದಕ್ಕೆ ಸರ್ವ ನಮಸ್ಕಾರ ಮಾಡಿಕ್ಕಂಡು
ತಾಯಿ
ನಮ್ಮ ನಿಜ ಸ್ಥಾನಗಳನ್ನು ಒಪ್ಪಬೇಡಮ್ಮ
ನಿನ್ನ ನೋಡಿದ್ರೆ ಭಯವಾಗತಾಯ್ತಮ್ಮ ಅಂತ
ದುರ್ಗಿಗೆ ಹಾಸಾಸಿ ಅಡ್ಡು ಬಿಳ್ತಾರೇ ಇವರೆಲ್ಲಾನ
ಕೊನೆ ಗಳಿಗ್ಯಾ ನಿನ್ನ ಪರಿಸ್ಥಿತಿ
ದುರಿಗಿ ನುಂಗಾಕ್ಕೂ ಪರಿಸ್ಥಿತಿ ಬರ್ತೈಯ್ತೆ
ಇರ್ಲಿ

ಅಂದ್ಕಂಡು ಪುರಲಳ್ಳಿ ಭೂತ
ಈ ದೇವಾನುದೇವುತುರುಗೆಲ್ಲ ನೀನು ಊಟಕ್ಕೆ ಹಾಕಿದ್ದಿಯೆ
ನನ್ನಗೆ ಊಟಕ್ಕೆ ಹಾಕಿಲ್ಲ
ದೇವುಗಾನಿಕೆಯರು ಮಾಡಿದ ಅಡಿಗೆನೆ
ಆದ್ದರಿಂದ ನಿನ್ನ
ಏಳಾಳುದ್ದ ಹುತ್ತವನ್ನ ಬೆಳಸಿ ನಿನ್ನ ಮೇಲೆ
ಹುತ್ತಾಬಿಟ್ಟು ನೀನೆದ್ದಂತ ಕಾಲದಲ್ಲಿ
ತಾಳೆ ದುರಿಗಿ ಕೈಗೆ ಸಿಕ್ಕಿಸಿ
ಹರಿಹೆಬ್ಬಾಲದ ಮರವನ್ನು ಹತ್ತಿಸಿ
ಇದುವಾಗಿ ಕಾಡುಬಿಡ್ತಿನಿ ನಿನ್ನ ಏರಿಯಣ್ಣ
ನಿನ್ನ ತಮ್ಮುಗೊಳ್ನ ಆರಗಿನ ಮನೆ ಒಳಗೆ
ಮೆಣಸಿನಕಾಯಿ ಮನೆ ಒಳಗೆ ಬೆಂಕಿ ಇಕ್ಕುಬಿಡ್ಲಿ
ದುರಿಗಿ ಕಾವುಲೊಳಗೆ
ನಿಮ್ಮ ಮಾವುಗೊಳು
ನಿನ್ನ ಬಸುವುವ್ನ ಮದ್ದು ಗುಂಡಿನಿಂದ ಬಡ್ದು ಬಿಡ್ಲಿ
ಅಂದು ಪುರ್ಲಹಳ್ಳಿ ಭೂತ ಶಾಪ ಇಕ್ಕುಬಿಟ್ಟ

ಹುಟ್ಟಿತು ಸ್ವಾಮಿ
ಒಳ್ಳೇರಿಗಾವು ಬುದ್ದಿಗಳಿಗಾಗೋ
ಅಂತೆಂಬ ಗಳಿಗೆ ಒಳುಗೆ ॥

ಜುಂಜಪ್ಪ ಕೇಳ್ತಾನೆ ಮಲ್ಡಿ ಗುಡ್ಡದು ರಂಗಪ್ಪಾ
ಬರೀ ಬಾಯಿ ಮಾತಿನಲ್ಲಿ ಹೇಳಿದ್ರೆ
ನಿನ್ನ ಒಪ್ಪುದಿಲ್ಲ ಕಣಯ್ಯ ನೀನು
ನೀನು ಏಳು ಕೋಟಿ ಅಲ್ಪನರು ನಡ್ಕನ್ತರೆ
ಸತ್ಯವಂತ ಕಣಯ್ಯ ನೀನು
ಬಲಗೈ ಭಾಷೆ ಕೊಡಬೇಕು ಎಡಗೈ ನಂಬಿಕೆ ಕೊಡಬೇಕು
ನಾನು ಬಂದು ದುರಿಗಿನ ಹೊಡಿತೀನಿ ಅಂತ
ಭಾಷೆ ಕೊಡು ಅಂತ ಕೇಳಿದ
ಮಲ್ಡಿ ಗುಡ್ಡದ ರಂಗಪ್ಪ
ನಾನು ಬಂದು ಹೊಡಿತ್ತೀನಿ ಏರಿಯಣ್ಣ ದುರಿಗಿನ ಅಂತ
ಬಲಗೈ ಭಾಷೆ ಕೊಟ್ಟು
ಎಡಗೈ ನಂಬಿಕೆ ಕೊಟ್ಟುಬಿಟ್ಟ

ಅಲ್ಲಿಗೆ ನಂಬಿಕೆಯ್ತಾಲ್ಲ
ಬಂದು ಹೋಡಿತ್ತಾನೇ ಎಂಬ ಧೈರ್ಯ
ಆವಾಗ
ದೇವಾನು ದೇವುತ್ರೆಲ್ಲ ತಾಂಬೂಲ ಹಾಕ್ಯಾಂಡು ಕುಂತಿದ್ರು
ಮಾರೇರು ದೇವುಗಾನಿಕೆಯರೆಲ್ಲ ತಾಂಬುಲ ಹಾಕ್ಕೆಂಡು
ಅರಿಸಿಣ ಕುಂಕುಮ ಇಟ್ಗಂಡು ಎಲ್ಲ ಕುಂತ್ತಿದ್ರು
ದೇವುಗಾನಿಕೆಯರು ಮಾರಮ್ಮಗೊಳೆಲ್ಲ
ಬೇಕಾದಷ್ಟು ಇಷ್ಟೊಂದು ಜನ ದೇವುತ್ರು ಉಂಡವರೆ
ಒಂದು ಮೂಲೆಯಾಗಳ ಅಡಿಗೆ ಮುಗಿಸಿಲ್ಲ
ಬೇಕಾದಷ್ಟು ಅಡಿಗೆ
ಅದು ಅಕ್ಷಯದ ಪಾತ್ರೆಗಳುದು
ಮುಗಸಕ್ಕೆ ಇವುರು ಕೈಲಿ ಸಾಕೆ
ಆಗ ಹಿರಿಯಣ್ಣ ಬೇಕಾದಷ್ಟು ಅಡಿಗೆ ಮಿಕ್ಕಿ ಬಿಟ್ಟೈಯ್ತೆ
ನರಲೋಕದಲ್ಲಿ ಮಾಡಿದ ಅಡಿಗೆ
ದೇವುಲೋಕಕ್ಕೆ ನಾವು ತಕ್ಕಂಡು ಹೋಗಬಾರದು
ಆ ಪುರಸ್ಸಕ್ಕನ ಕೆರೆ ಒಳಕೆ ಎಲ್ಲ
ಗಂಗೇ ಕೂಡಿ ಬಂದುಬಿಡ್ತಿವಿ ಅಂತ ಹೇಳುಬಿಟ್ಟು
ದೇವುಗಾನಿಕೆಯರು ಅಕ್ಷಯದ ಪಾತ್ರೆ ಒತ್ಕಂಡು
ಚಿಕ್ಕಮ್ಮ,
ದೊಡ್ಡಮ್ಮ,
ಬುಕ್ಕಪಟ್ಟಣದಮ್ಮ
ಚನ್ನಪಟ್ಟಣದಮ್ಮ
ನೆಗುಲುಹೊಲದಮ್ಮ
ಬಲಿಕುಂಡಮ್ಮ
ಪೂಜಾರಹಳ್ಳಿಯಮ್ಮ
ಸರಿಗೊಲ್ಲಹಳ್ಳಮ್ಮ
ಅಂತ ಏಳು ಜನ ದೇವುಗಾನಿಕೆಯರು
ಅವುರು ಅಕ್ಕತಂಗೆಯರು ಅವ್ರು ಈಶ್ವರನ ಮಕ್ಕಳು
ಇದ್ದಂತ ಅಡಿಗೆನೆಲ್ಲ ಗಂಗೆಕೂಡುದಕ್ಕೆ ಹೋದ್ರು
ಗಂಗೆ ಕೂಡುದಕ್ಕೆ ಈ ಕಡೆ ತಗ್ಗಿನಲ್ಲಿ ದೊಡ್ಡ ಮದುಗದ ತಗ್ಗಿನಲ್ಲಿ
ಜುಂಜಪ್ಪ ದೇವುತ್ರು ಕುಂತ್ತಿದ್ರು
ಆ ಕಡೆಗೆ ತಗ್ಗಿಗೆ ಇಳಿದ್ರು

ದೇವುಗಾನಿಕೆಯರು ಕಂಡ್ಕಂಡ ಭೂತಪ್ಪ
ಓಹೋ
ಇದ್ದುದ್ದು ಬದ್ದುದೆಲ್ಲ ಗಂಗೇ ಕೂಡು ಬಿಡ್ತಾರಪ್ಪ ಇವ್ರು
ನನಗೆ ಇಲ್ದಂಗೆ ಆಗಿ ಬಿಟ್ಟಯ್ತೋ
ಇನ್ನು ದೇವುಗಾನಿಕೆಯರು ಬೆಂಕಿ ಮೇಲೆ ಬೇಸ್ದಂಗೆ
ಹೊಳ್ಳಿನ ಮೇಲೆ ಕುಟ್ಟುದಂಗೆ
ಅಡಿಗೆ ಮಾಡಕ್ಕೆ ಯಾರಕೈಲೀ ಆಗತ್ತೈಯ್ತೆ
ಇಂತ ಅಡಿಗೆ ಇನ್ನೆಲ್ಲಿ ಸಿಕ್ಕಬೇಕು ಅಂತ ಹೇಳುಬಿಟ್ಟು
ಮಹಾದೇವ ಹಾರಿದ ದೊಡ್ಡುಮದಗದಿಂದ ಭೂತಪ್ಪ
ಹಾರಿ ಈ ಕಡೆ ತಗ್ಗಿಗೆ ಬರುವಾಗ ಅವುರಿಗೆ ಎದಿರಿಗೆ
ಕುಂಟುಭೂತನಾಗಿ ಪುರ್ಲಹಳ್ಳಿ ಭೂತ
ಹೊಟ್ಟೆ ವಡ್ರು ಗುಡುಸಲು ಮಾಡ್ಕಂಡು
ಗೇಣುದ್ದ ಕೋರೆಹಲ್ಲುಗಳು
ಸೊಂಟ ಒಂದು ಕಡಿಕೆ
ಹೊಟ್ಟೆ ಒಂದು ಕಡಿಕೆ
ಹೇರಿಬರಿಗೆ ರೂಪುತಾಳಿ
ಅವುನು ಶ್ರೀ ವಿಷ್ಣು
ಭೂತಪ್ಪನ ಅವತಾರ ಎತ್ತಿರೊನು
ಈ ರಾಕ್ಷಸಿ ದುರಿಗಿ ಕೊಲ್ಲದಕ್ಕಾಗಿನೇ
ಅವುನು ಭೂತನ ಅವುತಾರ ಎತ್ತಿರೂದು ವಿಷ್ಣುನು
ಆವಾಗ
ಹೊಟ್ಟೆ ಒಂದು ಕಡಿಕೆ
ಸೊಂಟ ಒಂದು ಕಡಿಕೆ
ಕಣ್ಣು ಗುಡ್ಡೆ ಇಷ್ಟಿಷ್ಟು ಗಾತ್ರ ಒಂದೊಂದು ಕಡಿಕೆ ಬಿಟ್ಗಂಡು
ಕುಂಟು ಭೂತನಾಗಿ ಪುರ್ಲಳ್ಳಿ ಭೂತ
ಸೊಂಟ ಎಳ್ಕಂಡು ಬಲಮುರಿ ದೊಣ್ಣೆ
ಜಾಗಟೆ
ಗರುಡುಗಂಭ
ಶಂಕು
ಭವನಾಸಿ ಇವ್ನೆಲ್ಲಾ ಹೊತ್ಕಂಬಿಟ್ಟು
ಗೋವಿಂದ ಗೋವಿಂದ ಅಂತಾ

ದಾರಿಗುಟ್ಟ ಬರ್ತಾವುನೆ ಪುರ್ಲಳ್ಳಿ ಭೂತಾ
ಬರುವಾಗ ಕಾವಲಮ್ಮ ನೋಡಿ ಕೈಸನ್ನೆ ಮಾಡಿ ಕರದ್ಲು
ಅಕ್ಕಯ್ಯ
ಗಂಗೇ ಕೂಡಿದರೆ ಫಲವೇನಮ್ಮ
ಯಾರೋ ದಾಸಯ್ಯ
ಮಾರ್ಗದು ಗುಂಟ ಬರ್ತಾವನೆ
ಆ ದಾಸಯ್ಯನಿಗೆ ಊಟಕ್ಕೆ ಇಡ್ರಮ್ಮ
ನನಗೆ ಅಡಿಗೆ ಮಾಡಿ ಸೊಂಟ ಸಿಟ್ಟುಗುಡುತೈತಮ್ಮ
ನಾನು ಈ ಸುರುಹೊನ್ನೆ ಮರದಡಿಕ್ಕೆ ಮನಿಕಂಬಿಡ್ತಿನಿ
ಊಟಕ್ಕೆ ಇಕ್ಕರಮ್ಮ ದಾಸಪ್ಪಗೆ ಅಂತ ಹೇಳಿ
ಕಾವಲಮ್ಮ ಪೀತಾಂಬುರುದು ಸೀರೆ ಸೆರಗಾಸ್ಕಂಡು
ಸುರುಹೊನ್ನೆ ಮರದಡಿಲೀ ಮಲೀಕಂಡ್ಲು

ಮೊದಲೇ ನೆನೆದೇವು
ಮದುನಾರಿ ವೀರನ
ಮದುಗುದು ಗುಡ್ಡದ ಕಲೀಬೀರೊ
ಮದುಗುದು ಗುಡ್ಡದ
ಕಲಿಬೀರೂ ಜುಂಜಪ್ಪನ
ಮೊದುಲೆ ಸೊಲ್ಲಾಗಿ ನೆನುದೇವೋ ॥

ಆಗಲೇ ಕಾವಲಮ್ಮ
ಪೀತಾಂಬ್ರುದುಸೀರೆ
ಸೆರಗಾಸಿಗಂಡು
ಮನುಗೂಳು ಶಂಕರನೆ
ಮಲುಗುತ್ತಿದ್ದಂಗೆ
ಪುರ್ಲಳ್ಳಿ ಭೂತ ಏನಂದು ಕಂಡು ಬರುತ್ತಾನೆ
ಏನಮ್ಮ ಕಾವಲಮ್ಮ
ಮುನ್ನೂರು ಅರವತ್ತು
ಕೋಟಿ ಲಿಂಗನಿಗೂ
ಒಂಬತ್ತು ಜನರಂಗಪ್ಪುಗಳಿಗೊ
ಊಟಕ್ಕಾಕುವಾಗ ನಿನಗೆ
ಸೊಂಟ ನೋಯ್ತಿರಲಿಲ್ಲ

ನನ್ನನೊಬ್ಬನಿಗೆ
ಊಟಕ್ಕೆ ಹಾಕುವಾಗ
ಸೊಂಟ ನೋವತ್ತಿ
ಗೊಂಡಿತ್ತೆನಮ್ಮ ॥

ಆಗಲೇ ನಿನ್ನ ಹೆಬ್ಬರಿಸಿ
ಒಂದು ತುತ್ತಾದರು
ನಿನ್ನ ಕೈ ಒಳಗೀಕ್ಕಸಿಗಂಡು
ಉಂಬುದಿದ್ದಾರೇ
ನಾನು ಪುರ್ಲಹಳ್ಳಿ ಭೂತನೆಂಬ ಹೆಸರಲ್ಲ
ಅಂದೇನೆ ಪುರ್ಲಳ್ಳಿ ಭೂತ
ಮನದೊಳಗಂದು ಕೊಂಡು
ಬರುತ್ತಾನಣ್ಣ ಶಿವುನಿಗೋ ॥

ಆಗಲೆ ಬರುವಾಗ
ದೇವುಗಾನಿಕೆಯರು
ಅಗ್ಗುರುದೆಲೆಯದು
ಕೊಟ್ಟಾರು
ಕೈ ಬಾಯಿಗೂ
ನೀರನ್ನು ಕೊಟ್ಟಾರು
ಪುರ್ಲಳ್ಳಿ ಭೂತನಿಗೆ
ಊಟಕ್ಕು ಕೂಂತನಮ್ಮ
ಆಗಲೇ ಭವುನಾಸಿಗು
ಗರುಡು ಗಂಬಕ್ಕು
ಎಡೆ ಹಾಕಿ
ಒಂದು ಕಾಯಿ
ಒಡುದುರು ಶಂಕರನೆ
ಕಾಯೊಡದು ಪೂಜೆ ಮಾಡಿದರು
ಪುರ್ಲಳ್ಳಿ ಭೂತನಿಗೇ
ಅಗ್ಗುರುದೆಲೆಯನ್ನು ಕೊಟ್ಟು
ಊಟಾಕಿಟ್ಟಾರು
ಮೂರಿಡಿ ಎಡೆಗೆ
ಇಟ್ಟರು ಭೂತಪ್ಪನಿಗೆ ॥

– ೩ –

ದೊಡ್ಡ ಕರೆ ಬಂಡೆಗೆ
ಹಾರಿದುನೂ
ಪುರ್ಲಳ್ಳಿ ಭೂತಪ್ಪ ಶಿವುನಿಗೋ ॥

ಆಗಲೇ ಶಂಕರನೇ
ದಿನವನೆ ಕಳೆದಿತು ಸ್ವಾಮಿ
ಗಳಿಗೇವೆ ಮುಗಿದಿತ್ತೊ
ದೇವರು ಕೃಪೆಯಿಂದ ಗಳಿಗಾಗೋ ॥

ಮಾರಣ್ಣ ಮೈಲಣ್ಣ
ಹಿಂದಲು ದನುಗಳೊಳಗೆ
ಜುಂಜಪ್ಪ ಬರುತ್ತಾನೆಂದು
ಮುಂದುಗಡೆ
ದನುಗೂಳು ಕರುಕೊಂಡು
ಹೋಗೊರು ಸ್ವಾಮಿ ಶಿವುನಿಗೋ ॥

ಹೋಗುತಾ ಹೋಗುತಾ ಒಳ್ಳೆ
ಕರಿ ಮೇಳಿ
ಮಂಜರೂವಣ್ಣಾ
ಕಾಡನೇ ಕಮುರವಯ್ಯೋ
ಹುಲಿ ಕರಡಿ
ಡುಬ್ಬಿ ಸಾರಂಗ
ಇಂತೆಂಬ ಗೋರರಣ್ಯದೊಳಗೆ
ಹೋಗುತ್ತಾರೂ ಸ್ವಾಮಿ ಗಳಿಗಾಗೋ ॥

ಹೋಗುತಾ ಹೋಗುತಾ
ಆ ದೇವುರು
ಕೃಪೆಯಿಂದ ಸ್ವಾಮಿ
ಹೋಗೂರೆಲ್ಲಮ್ಮ
ಆಗಲೇ
ತಾಳೆ ದುರ್ಗಿ ದೇವುಸ್ಥಾನ
ಕಾವುಲು ಮಗ್ಗುಲಿಗೋಗಿ
ದನಗೂಳು ನಿಲಿಸವುರಯ್ಯ ಗಳಿಗಾಗೋ ॥

ಆಗಲೆ ಮಾರಣ್ಣ ಮೈಲಣ್ಣ
ತಾಳೆ ದುರುಗಿ
ಕಾವಲ್ಹತ್ತುರುಕೋಗಿ
ದನಗೊಳು ನಿಲ್ಲಿಸಿ
ಹಿಂದಲು ದನಗೊಳು
ಮುಂದಲು ದನಗಳೊಂದಾಗುಲಿ
ಹಿಂದಲು ದನಗೊಳೊಳಗೆ
ನಮ್ಮ ಹಿರಿಯಣ್ಣ
ನಮ್ಮ ಜುಂಜಪ್ಪ
ಬರುತ್ತಿನಂಧ್ಹೇಳಿದ್ದ
ಬರುಲೆಂದು ದನಗೂಳು
ತಡೆಹಾಕಿ
ನಿಲ್ಲಿಸವುರೆ ಶಂಕರನೆ
ಹಿಂದಲು ದನಗೊಳು
ಮುಂದಲು ದನುಗೊಳೆಲ್ಲ
ಒಂದಾದುರೂ ಜುಂಜಪ್ಪ
ಬರೋಲಿಲ್ಲವಯ್ಯೋ ಗಳಿಗಾಗೋ ॥

ಕಾರಣವೇನಿರಬಹುದು
ನಮ್ಮ ಹಿರಿಯಣ್ಣ ಬರ್ಲಿಲ್ಲವಲ್ಲಾ
ಹಿಂದ್ಲು ದಗೊಳೂಳಗೆ ಬರ್ತಿನಿ
ಮುಂದ್ಲು ದನಗೊಳೊಳಗೆ ನೀವು ನಡಿರಿ
ಅಂತ ಹೇಳಿ ಕಳಿಸಿದ
ಹಿಂದ್ಲು ದನಗೂಳು ಮುಂದ್ಲು ದನಗೊಳೆಲ್ಲಾ ಒಂದಾದ್ರು
ಜುಂಜಪ್ಪ ಬರ್ಲಿಲ್ಲವಲ್ಲ
ಏನು ಕೌಮಾರ್ಗ
ತಾಳೇ ದುರಿಗಿ
ಏನಾದ್ರು ನಡು ದಾರಿ ಒಳಗೆ ಬರುವಾಗ
ವಿಷರೂಪತಾಳಿ
ಹೋಗಿ ನುಂಗೆ ಬಿಟ್ಲೋ ಏನೋ ಜುಂಜಪ್ಪನ್ನ
ಇಲ್ಲಾ ಮೇಳಿ ಮಂಜುರದಲ್ಲ ಬರುವಾಗ
ದಾರಿ ಮಾರ್ಗನೇ ತಪ್ಪೊಗುಬಿಟ್ಟನೆನೋ
ನಮ್ಮ ಪಿರಿಯಣ್ಣ

ಏನು ಮಾಡಬೇಕು ಶಂಕರಾ
ಈಗ ನಾವು ಏಳು ವರ್ಷದ ಹುಡುಗುರು
ದುರಿಗಿ ಕಾವುಲಿಗೆ ನಾವು ಕರುದು ಬಿಟ್ರೆ
ನಿಮ್ಮನ್ನ ಮೂಗಿನ ಹೊಳ್ಳೆವಳಗೆ ನೊಸೆ ಎರಿಸ್ದಾಂಗೆ
ಎಳಕಂಡು ನುಂಗ್ಬಾಕಿಬಿಡ್ತಾಳೆ
ತಾಳೇ ದುರಿಗಿ ನಮ್ಮನ್ನ
ಏನು ಗತಿ ಮಾಡಬೇಕು ನಾವೀಗ
ಹಿಂದಕ್ಕೆ ಊರಿಗೆ ದನಾ ಕರ್ಕಂಡು ಹೋಗು ಬಿಟ್ರೆ
ಜುಂಜಪ್ಪ ತಾಳೆ ದುರುಗಿ ಕಾವುಲ್ಹತ್ರಕ್ಕೆ ಬಂದು
ದುರುಗಿಗೆ ಹೆದಿಗೆರ್ಕಂಬಿಟ್ಟು
ದನ ಹಿಂದಕ್ಕೆ ಕರ್ಕಂಡು ಹೋಗುಬಿಟ್ಟವನೇ ಅಂದ್ರೆ
ನಮ್ಮ ಹಿರಿಯಣ್ಣನಿಗೆ ಸತ್ಯ ಇರದಿಲ್ಲ
ಸರಿ ಮುಂದಕ್ಕೆ ಕರದರೇ ನಮ್ಮನ ನುಂಗಿಬಿಡ್ತಾಳೇ ದುರಿಗಿ
ಇದಕ್ಕೆ ಏನು ಗತಿ ಮಾಡಬೇಕು ಅಂತ ಹೇಳಿಬಿಟ್ಟು
ಮಾರಣ್ಣ ಮೈಲ್ಲಣ್ಣ ಸಿಂತೆಮಾಡ್ತಾವ್ರೆ
ಸಿಂತೆ ಮಾಡಿ
ಸರಿ ನಮ್ಮ ಅದೃಷ್ಟದ ಫಲ ಇದ್ದಂತೆ ಆಗಲಿ
ಹಿಂದುಕ್ಕು ಮಾತ್ರ ಹೋಗುಬಾರ್ದು ನಾವು ಅಂದ್ಹೇಳಿ
ಜುಂಜಪ್ಪನ ಬಸುವುಗೆ ಹೇಳ್ತಾರೆ
ಬಡಮೈಲಾ
ನಾವು ಹಿಂದುಕ್ಕ ಹೋಗಬಾರ್ದು
ನಮ್ಮ ಅದೃಷ್ಟದ ಫಲ ಇದ್ದಂತೆ ಆಗಲಿ
ಪತ್ತೇವಿಲ್ಲದಂತೆ ದುರಿಗಿ ಕಾವುಲಿಗೆ ದನ ಕರದರೇ
ಕಳ್ಳತನದಿಂದ ಜುಂಜಪ್ಪ ಕಾವುಲಿಗೆ ದನಕರದವನೇ ಅಂದ್ರೆ
ನಮ್ಮ ಸತ್ಯ ಇರೋದಿಲ್ಲ
ಕಾಲುಕೆರದು ಉಡ್ರುಕೆ ಹೊಡದೇಟಿಗೆ
ನರ್‌ಲೋಕ
ಸುರಲೋಕ
ದೇವುಲೋಕ ಅಳ್ಳಾಡೋಗಿರಬೇಕು
ಸರಿ ದುರಿಗಿ ಕಾವುಲು ಸುತ್ತ
ಗಾಜಿನ ಗೋಡೆ ತಿರುವೈಯ್ತೆ
ಕೊಂಬು ತೂರಿಸಿ ಎತ್ತಿಕುಕ್ಕು ಬಡದೆಟ್ಟಿಗೆ

ಅವಳು ಗಾಜಿನ ಗೋಡೆಲ್ಲಾ ಪುಡಿಪುಡಿಯಾಗಿರಬೇಕು
ನುಗ್ಗು ಕಾವುಲೊಳಕ ಅಂದು
ಬಸುವುನಿಗೆ ಹೇಳಿ ಕೊಟ್ರು ಮಾರಣ್ಣ ಮೈಲ್ಲಣ್ಣ
ಆಗ ಜುಂಜಪ್ಪನ ಬಸವು
ಮೂಡುಗಡೆ ಮುಖನಾಗಿ ನಿಂತ್ಗಂಡು
ಜುಂಜಪ್ಪನ ಪಾದವನ್ನ ನೆನೆಸಿ
ಕಾಲ್ ಕೆರೆದು ಉಡ್ರುಕೆ ಹೊಡೆದೇಟಿಗೆ
ನರಲೋಕ
ಸುರಲೋಕ
ದೇವು ಲೋಕವೆಲ್ಲ ಅಳ್ಳಾಡೊಯ್ತು
ಕೊಂಬು ತೂರಿಸಿ ಎತ್ತಿ ಕುಕ್ಕು ಬಡದೇಟಿಗೆ
ಗಾಜಿನ ಗೋಡೆ ಪುಡುಪುಡಿಯಾತು
ದುರಿಗಿ ಗುಡಿಯೊಳಗಿದ್ದವುಳು
ಬಸುವನ ಹುಡ್ರಿಕ್ಕೆ ಸದ್ದು ಕೇಳಿ
ಮೂರು ಮೊಳ ಮೇಲಕ್ಕೇಗರಿ ನೆಲಕ್ಕೆ ಬಿದ್ದು
ಬೆಪ್ಪಾಗಿ ಮನಿಗಿದ್ಲು
ಜುಂಜಪ್ಪನ ಬಸುವ ನುಗ್ಗಿದ ಕಾವುಲೊಳಕೆ
ಮಾರಣ್ಣ ಮೈಲ್ಲಣ್ಣ
ತೊಡೆತಟ್ಟಿ ಕೇಕೆ ಹೊಡೆದು
ಕಾಮಜೇನು ಕಲ್ಪವೃಕ್ಷ ಎಂಬ ಕಾವುಲಿಗೆ ದನ ಕರುದುರು
ದುರಿಗಿ ಕಾವುಲೊಳಗೆ ಜುಂಜಪ್ಪನ ದನುಗೂಳು
ಮಳ್ಳೆಸ್ತರೆ ಮಳ್ಳಿಳಿದಂತೆ ಬೆಳ್ಳಸುರುಗೆಯ್ಕಂಡು
ಮೇಯ್ತಾ ಇದ್ದವು ಜುಂಜಪ್ಪನ ದನ
ಸರಿ ನೆಡಿದ ದನುಗೊಳೂಳುಗೆ
ಮಾರಣ್ಣ ಮೈಲ್ಲಣ್ಣ ಗೋಲಿಗೆಜ್ಜುಗ ತಗುದು
ಗೋಲಿಗೆಜ್ಜುಗಗಳು ಅಡ್ಕಂಡು ಕುಂತ್ತಿರುವಂತಾ ಕಾಲದಲ್ಲಿ
ಇವುರು ಏಳುಜನ ಜುಂಜಪ್ಪನು ಸ್ವಾದರುಮಾವುಗಳು
ಬಸುವ ಉಡ್ರಿಕ್ಕೆ ಹೊಡದ ಸದ್ದು ಕೇಳಿ
ಲೇ ಬಸುವ ಉಡ್ರಿಕ್ಕೆ ಹೊಡಿತು
ಜುಂಜಪ್ಪನ ದನ ಬಂದಿರಬಹುದು ಕಾವುಲಿಗೆ
ದುರಿಗೆ ಕಾವುಲಿಗೆ ದೇವುಸ್ಥಾನದ ಮ್ಯಾಲಕ್ಹತ್ತಿ ನೋಡ್ರಿ
ಜುಂಜಪ್ಪ ಬಂದವುನೇನೋ ಕಾವುಲೊಳಗೆ ಅಂತ ಹೇಳಿ

ಏಳು ಜನನು ಜುಂಜಪ್ಪನ ಮಾವುಗೊಳು
ದುರಿಗ ದೇವುಸ್ಥಾನದ ಮೇಲಕ್ಕತ್ತಿ
ನೋಡ್ತಾವುರೇ ದನುಗೊಳ್ನಾ
ಎಡದಿಂದ ಬಲಕ್ಕೆ ಬಲದಿಂದ ಎಡಕ್ಕೆ
ಎತ್ತಾ ನೋಡಿದರೂ ಜುಂಜಪ್ಪ ಕಾಣಿಸ್ತಾಯಿಲ್ಲಾ

ಸರಿ ಏನು ಕೌಮಾರ್ಗ
ಈ ಕಾವುಲಿಗೆ ಮಾರಣ್ಣ ಮೈಲ್ಲಣ್ಣನ ಇಬ್ಬರ್ನೆ ಕಳಿಸಿ
ಜುಂಜಪ್ಪ ಬರ್ದ್ದಂಗೇ ಇರಕಿಲ್ಲ
ಜುಂಜಪ್ಪ ಬಂದಿಲ್ಲವಲ್ಲಾ
ಮಾರಣ್ಣ ಮೈಲಣ್ಣ ಇಬ್ಬರು ಮಾತ್ರ
ಗೋಲಿಗಜ್ಜಣ ಆಡ್ತಾ ಕುಂತವುರೇ
ಜುಂಜಪ್ಪನ ತಮ್ಮುಗೊಳು
ಏನು ಕೌಮಾರ್ಗಾ
ತಾಳೇ ದುರುಗಿ ನಡಿ ದಾರಿಯೊಳಗೆಲ್ಲೋ ಬರುವಾಗ ಹೋಗಿಬಿಟ್ಟು
ವಿಷ ರೂಪಿನಿಂದ ಜುಂಜಪ್ಪನ್ನ ನುಂಗಾಕಿ ಬಿಟ್ಟವುಳೆ
ಈ ಮಾರಣ್ಣ ಮೈಲ್ಲಣ್ಣ ಇಬ್ಬರು
ನಡಿ ದನುಗೊಳೊಳಕೆ ಓಡೋಗಿಬಿಟ್ಟವರೆ
ದುರುಗಿ ಕೈಗೆ ಸಿಕ್ಕಿಲ್ಲ
ಆದ್ದರಿಂದ ಮಾರಣ್ಣ ಮೈಲ್ಲಣ್ಣ ಇಬ್ಬುರು ಇಲ್ಲಿಗೆ ಬಂದವುರೆ
ಲೇ
ಇವುರಿಂದ ಜುಂಜಪ್ಪನಿಗೆ ಒಂದು ಬಲಭುಜ ಇತ್ತು
ಸರಿ ಮಾರಣ್ಣ ಮೈಲ್ಲಣ್ಣನಿಗೊಂದಿಗೆ ಕೆಲಸ ಮಾಡಬೇಕು
ಇರುಗೊಂದಿಪೇಟೆಗೆ ಹೋಗಿ
ಇರುಗೊಂದಿ ಪೇಟೆ ಒಳಗೆ
ಏಳೇಳು ಹದಿನಾಲ್ಕು ಗಾಡಿ ಅರಗು
ಏಳೇಳು ಹದಿನಾಲ್ಕು ಗಾಡಿ ಮೆಣಸಿನಕಾಯಿ ತಕ್ಕಬಂದು
ಅರಗಿನ ಮನೆ ಒಳುಗೆ ಮೆಣಸಿನ ಕಾಯಿ ಮನೆ ಒಳುಗೆ
ಮಾರಣ್ಣ ಮೈಲ್ಲಣ್ಣನ ಬೆಂಕಿ ಇಕ್ಕಿ ಬಿಡಬೇಕು

ಅಂದು ಮಾತಾಡಿಕೊಂಡು
ಏಳೂ ಜನುವಣ್ಣಾ
ಜುಂಜಪ್ಪನು ಮಾವುಗೊಳು

ಹೋಗುತ್ತಾರೋ
ಇರುಗೊಂದಿಪೇಟೆಗೆ ಗಳಿಗಾಗೋ ॥

ಕಾವಮಿಟಗೂ ಶೆಟ್ಟಿಗೆ
ಏಳಿಡಿ ಇಕ್ಕೇರಿ
ವರವನ್ನ ಕೊಡುವೋರಣ್ಣಾ
ಏಳೇಳ ಹದಿನಾಲ್ಕು ಗಾಡಿ
ಮೆಣಸಿನಕಾಯಿ
ಏಳೇಳು ಹದಿನಾಲ್ಕು ಗಾಡಿ
ಅರಗನ್ನ ತಂದವುರಣ್ಣಾ
ಅರಗಿನ ಮನಿಗಯ್ಯೋ
ಅರಗನ್ನ ತುಂಬ್ಯವುರೇ
ಮೆಣಸಿನುಕಾಯಿ ಮನಿಗೆ
ಮೆಣಸಿನುಕಾಯಿ ತುಂಬ್ಯವುರೇ
ಹುಡುಗರನು ಹಿಡ್ಕಂಡ್ಹೋಗಿ
ಅರಗು ಮೆಣಸಿನ ಕಾಯಿ
ಮನೆಯೊಳುಗೆ ಬೆಂಕಿ ಇಕ್ಕದುಕೆ
ಸರಾವರುಗಳು ಬಿದ್ದು ಒಳ್ಳೆ
ಹಗ್ಗದು ಕೊರುಸುರು
ಬಂದಂತೆ ಬರುತ್ತಾರಣ್ಣ
ಜುಂಜಪ್ಪುನು ಮಾವುಗೊಳು
ಕಂಬೇರು ಗೊಲ್ದುರು ಶಿವುನಿಗೋ ॥

ಬಂದು ಸರಿ
ದೊಡ್ಡ ಸಿನ್ನೇಗೌಡ ಹಳ್ಳಾ ಬಿಟ್ಟು ದಡ ಹತ್ತಿದ
ಮಾರಣ್ಣ ಮೈಲ್ಲಣ್ಣ
ಯಾಕೊ ಹಿಂದುರುಗಿ ನೋಡಿದ್ರು
ಹಿರೆಮಾವ ಕಂಡ
ಅಪ್ಪಾ
ಕಾಣುದ ದೇಶದಲ್ಲಿ
ತಾಯಿ ಬಂದಂತೆ ಬಂದು ಬಿಟ್ರು ನಮ್ಮ ಮಾವುಗಳು
ಇದು ಇರುಗೊಂದಿ ಸೀಮೆ
ಸರಿ ಜನುವೇ ಇತ್ತಡೆ ಇಲ್ಲ

ಸರಿ ನಮ್ಮ ಮಾವುಗಳು ಬಂದು ಬಿಟ್ರಲ್ಲ ಇಲ್ಲಿ
ಅಂದು ಬಿಟ್ಟು ಆಸೆ ಮಾಡಿ
ಜುಂಜಪ್ಪನ ತಮ್ಮುಗೊಳು ಮಾರಣ್ಣ ಮೈಲ್ಲಣ್ಣ
ಬಡಬಡನೆ ಓಡ್ಹೋಗಿ
ಮಾವುಗೊಳ್ನಾ ತಬ್ಬೊಳಗಾಗಿ ತಬ್ಕುಂಡು

ಮಾಮಣ್ಣಾ
ಕಾಣುದು ದೇಶದಲ್ಲಿ
ತಾಯಿ ಬಂದಂತೆ
ಬಂದಿರೀ ಮಾಮಣ್ಣ ನೀವೀಗೋ ॥

ಅಂದು ಗೋಳಾಡಿದುರು
ಯಾಕಪ್ಪ
ಇಲ್ಲಿತನಕ ನೀವು ಯಾತಕ್ಕ ಬಂದಿರಿ ಅಂತ
ಸರಿ ಮಾಮಣ್ಣಾ
ತಾಳೆ ದುರಿಗಿ
ತಂದೆ ಇದ್ದಂತೆ ಹುಟ್ಟಿದ್ರೆ
ಬಂದು ನಮ್ಮ ಕಾವುಲು ಮೇಯಿಸಬಹುದು
ತಂದೆ ಸತ್ತು ಹನ್ನೆರಡು ವರ್ಷಕ್ಕೆ ಹುಟ್ಟಿದ್ರೆ
ಉಡುದಾರವಿಲ್ಲದ ಮುರುದಾರು ಮುಂಡೇಗೆ ಹೆದರಿ
ಪಡುಲು ದೇಶದಲ್ಲಿ ಇರಬಹುದು ಜುಂಜಪ್ಪಾ
ಎಂದು ವಾಲೇ ಬರ್ದಿದ್ಲು
ಆ ಓಲೆ ನೋಡಿದು ತಕ್ಷಣ
ನಮ್ಮಣ್ಣ ದನಾಕರ್ಕಂಡು ಬಂದ
ದೊಡ್ಡ ಮದುಗುದು ಕಾವುಲಿಗೆ ಬರುವಾಗ ನಮ್ಮಣ್ಣನಿಗೆ
ಸಣ್ಣಾಲುದು ಗಿಡದಡಿಗೆ
ಮೂರು ಮೂರು ಸಾರಿ ಎಡಗಣ್ಣು ನಮ್ಮಣ್ಣನಿಗೆ
ತಾಳೇ ದುರಿಗಿ ಹೊಲಿ ಸೂತ್ಕದಿಂದ
ಏಳು ಹೊಲೆ ಸಾಲೆಗಳ ಹೆಗಲ ಮೇಲೆ ಏರಾಕ್ಕಂಡು
ಬಂದುಬಿಟ್ಟು ಮುಟ್ಟಿಬಿಟ್ಟು ನನ್ನ ಬತಾ ಕೆಡಿಸಿಬಿಡ್ತಾಳೆ
ಕಣ್ಣು ಬಿಟ್ಟು ಬಿಟ್ರೆ ನಿಂದು ಉರುದೊಗ್ತಾಳೆ
ಸ್ತ್ರೀ ಹತ್ಯೆ ಶಿಶು ಹತ್ಯೆ ನಾನು ಮಾಡಂಗಿಲ್ಲ
ಈಶ್ವರನ ಶಾಪ ಅಂತ ಹೇಳು ಬಿಟ್ಟು

ನಮ್ಮ ಅಣ್ಣ
ದೇವುಗಾನಿಕೆಯರನ್ನ ಕರಿಸಿ
ಒಳ್ಳು ಮೇಲೆ ಕುಟ್ಟುದಂತೆ
ಒಲೆ ಮೇಲೆ ಬೇಯಿಸದಂತೆ
ಪಾಲು ಪಂಚಣದ ಅಡಿಗೆ
ಸಕ್ಕರೇ ಭೋಜುನುದಡಿಗೆ
ಹಾಲು ಪಾಯಸದ ಅಡಿಗೆ
ಮೂರು ಬಗೆ ಅಡಿಗೆ ಮಾಡಿಸಿ
ಮುನ್ನೂರು ಆರುವತ್ತು ಕೋಟಿ ಲಿಂಗನಿಗೂ
ಒಂಬತ್ತು ಜನ ದೇವುತೆರ್ಗು ಎಡೆಮಾಡಿಸಿ
ಅವರ್ನೆಲ್ಲ ಬೆನ್ನಸಾಯ್ಕಿಟ್ಗಂಡು
ನಾವು ಬಂದು ದುರ್ಗಿ ಹೊಡಿತ್ತಿವಿ
ಹೋಗು ಜುಂಜಪ್ಪ ದುರ್ಗಿ ಕಾವುಲಿಗೆ ಅಂತ ಹೇಳಿ
ಅವುರವುರು ನಿಜ ಸ್ಥಾನಕ್ಕೆ ಅವುರು ಹೊರಟೋದ್ರು
ಮಲ್ದಿಗುಡ್ಡುದು ರಂಗಪ್ಪ
ಬಲಗೈ ಭಾಷೆ ಕೊಟ್ಟೋದ
ನಾನು ಬಂದು ದುರ್ಗಿ ಹೋಡಿತ್ತಿನೀ ಹಿರಿಯಣ್ಣ
ಅಂತ ಹೇಳಿ ಬಿಟ್ಟು
ಹೋಗುತ್ತಿದಂಗೆಯೇ
ನಮ್ಮ ಅಣ್ಣ ಮುಂದ್ಲು ದನಗೊಳು ಹೋಗಿ ನೀವು ನಡಿರಪ್ಪ
ಹಿಂದ್ಲು ದನಗಳಲ್ಲಿ ನಾನು ಬರ್ತಿನೀ ಅಂತ ಹೇಳಿದ
ಮುಂದ್ಗಡೆ ನಾವು ದನ ಕರ್ಕಂಡು
ಗೊಡ್ಡುಗಾಳಿ
ಬಡಮ್ಯೆಲ
ನಾವು ಬಂದುಬಿಟ್ವಿ
ಮುಂದ್ಗಡೆ ಬರುವಾಗ
ಹಿಂದ್ಲಿಂದ ನಮ್ಮಣ್ಣ ಬರ್ತಿರುವಾಗ
ಸರಿ ದಾರಿನೆ ತಪ್ಪೋದನೊ
ಅಥವಾ ಏಳ್ನಾಲಿಗೆ ದುರ್ಗಿ ಏನಾದ್ರು
ವಿಷರೂಪಿನಿಂದ ಬಂದು ನುಂಗಿ ಹೋದ್ಲೋ
ಅದು ಗೊತ್ತಿಲ್ಲ ಅಂತ ಇವುರು ಹೇಳುಬಿಟ್ರು
ರೋಗಿ ಬಯಸಿದ್ದು ಹಾಲು ಅನ್ನ

ಪಂಡಿತರು ಹೇಳಿದ್ದು ಹಾಲು ಅನ್ನ
ಅಂಬಂಗೆ ಆಗುಬಿಡ್ತು ಆ ಕಂಬೇರು ಗೊಲ್ಲರಿಗೆ
ಅವರು ಅಂದ್ಕಂಡು ಬಂದಿದ್ದು ಅದೇ
ತಾಳೇ ದುರ್ಗಿ ನುಂಗಿರಬಹುದು
ನೆಡುದಾರಿ ಒಳಗೆ ಬರುವಾಗ ಅಂತ ಜುಂಜಪ್ಪ
ಇವುರು ಹೇಳಿದ್ದು ಅದೇ ಇದೇ ಸತ್ಯ
ಅನ್ನುವಂಗೆ ಅಗುಬಿಡ್ತು ಕಂಬೇರು ಗೊಲ್ದರಿಗೆ
ಅವಾಗ ದೊಡ್ಡ ಸಿನ್ನೇಗೌಡ ಜುಂಜಪ್ಪನ ಹಿರಿ ಮಾವ
ಏನೆಂದು ಹೇಳ್ತನೆ

ಲೇ ತಕ್ಕಳಿರೋ
ತೂತ್ತೀನು ಮುಂಡೇತ್ತ
ಮಕ್ಕಳು ಮುಖಾವೇನು
ನೋಡುತ್ತಿರೀ ಅಂದನಣ್ಣ
ಮೋಸುಗಾರು ನನ್ನು ಮಗ
ದೊಡ್ಡು ಸಿನ್ನೇಗೌಡ ಆ ಶಿವುನಿಗಾ ॥

ಅಂಗದು ಹೇಳುತ್ತಿದಂಗೇ
ಮಾರಣ್ಣನ
ನಾಲ್ವರುತಂಬೂಳುಗಾಗಿತ್ತು
ತಬ್ಬಿಕ್ಕಂಡರುಣ್ಣಾ...........
ಮೈಲ್ಲಣ್ಣನ ಮೂವರು
ತಬ್ಬೊಳುಗಾಗಿ ತಬ್ಬಿಕ್ಕಂಡು
ಹೊತ್ತುಗಂಡು ಹೋಗುತ್ತಾರಯ್ಯೋ ಶಿವುನಿಗಾ

ಮಕ್ಕಳು ಮಾರಣ್ಣ ಮೈಲ್ಲಣ್ಣ ಲಭಲಭನೆ ಬಾಯಬ್ಕಂಡ್ರು
ಮಾಮಣ್ಣ
ಕಾಣುದು ದೇಶದಲ್ಲಿ ನಮ್ಮನ್ನ
ಎಲ್ಲಿಗೆ ಒತ್ಗಂಡು ಹೋಗ್ತಾಯಿದ್ದಿರೀ ಮಾಮಣ್ಣ
ಬಿಡ್ರಿ ಮಾಮಣ್ಣ ಅಂತ ಬಾಯಿ ಬಡ್ಕಂಡ್ರು
ದಗಡಿ ಮಕ್ಕಳ್ರಾ
ಮಾಮಣ್ಣ ಅಂಬ ಸೊಲ್ಲು ಇಲ್ಲಿಗೆ ಮರಿರೀ
ನಿಮ್ಮ ವಂಶ ನಿರ್ಮೂಲ ಮಾಡಾಕುಬಿಡ್ತಿವಿ
ಅಂದು ಒತ್ಗಂಡು ಹೋಗುತ್ತಿರುವಾಗ

ಮಾರಣ್ಣ ಮೈಲ್ಲಣ್ಣ ಬಾಯಿಬಡ್ಕಂಬ ಸದ್ದು
ಬಸುವುನ ಕಿವಿಯ ಕರ್ಣಕ್ಕೆ ಕೇಳಿತು
ಜುಂಜಪ್ಪನ ಬಸುವ ತಲೆ ಎತ್ತಿ ನೋಡಿತ್ತು
ಎಲಾ ದಗಡಿ ಮಕ್ಕಳಾ
ಇಲ್ಲಿಗೂ ಬಂದುಬಿಟ್ಟವುರಲ್ಲ ಕಂಬೇರು ಗೊಲ್ದರು
ಸರಿ ಮಾರಣ್ಣ ಮೈಲ್ಲಣ್ಣನ ಎಲ್ಲುಗೊ
ಒತ್ಗಂಡು ಹೋಯ್ತಾವುರಲ್ಲ ಅಂತ ಹೇಳುಬಿಟ್ಟು
ಬಸುವ ಬಡಬಡನೆ ಓಡಿಬಂದು
ಕಂಬೇರುಗೋಲ್ದರ ಎದುರಲ್ಲಿ ನಿಂತು
ಕಾಲು ಕೆರ್ದು ಉಡ್ರಿಕೆ ಹೊಡ್ದೇಟಿಗೆ
ನರಲೋಕ ಸುರುಲೋಕ ದೇವಲೋಕವೆಲ್ಲ ಅಲ್ಲಾಡೋತು
ಕಂಬೇರು ಗೊಲ್ಲರು ಮೂರು ಮೊಳ ಮೇಲೆಕ್ಕೆ ಎಗರಿ
ಕೇಳಕ್ಕೆ ಬಿದ್ದು ಬೆಪ್ಪಾಗಿ ಮನಿಗಿದ್ರು
ಮಾರಣ್ಣ ಮೈಲ್ಲಣ್ಣನ ಕೇಳಿತು ಬಸುವ
ಮಾರಾಣ್ಣ ಮೈಲ್ಲಣ್ಣ
ನಿಮ್ಮ ಅಪ್ಪಣೆಯಿಲ್ಲದ್ದು
ನಾನು ಒಬ್ಬರ ಮೇಲೆ ಕೈಮಾಡಿದರೆ
ತನ್ನ ತಲೆ ಸಾಸ್ತ್ರ ಹೂಳು ಆಗಲಿ ಅಂತ
ಹಿಂದೆ ನಮ್ಮ ಹಿರಿಯಣ್ಣನ ಪಾದ ಬಡಿದ್ದಿದ್ದೇ
ಜುಂಜಪ್ಪನ ಪಾದನ
ಅವುನ ಅಣ್ಗೆ ಇಲ್ಲದ್ದು
ನಾನು ಒಬ್ಬುರು ಮೇಲೆ ಕೈಮಾಡಂಗಿ ಇಲ್ಲ
ಈಗ ನೀವು ಅಪ್ಪಣೆ ಕೊಡ್ರಿ
ಇವ್ರು ವಂಶ ಕಲ್ಲಿಗೊಂದು ಖಂಡ
ಮುಳ್ಳಿಗೊಂದು ಖಂಡ ಮಾಡಿ
ಆ ದುರ್ಗಿ ದೇವಸ್ಥಾನ ಭೂಮಿಗೆ ಬೆರಿಸಾಗಿ
ಎತ್ತಿ ತಳತಳಕ್ಕಾಗಿ ಬಿಸಾಡಿ ಬರ್ತಿನಿ
ಅಪ್ಪಣೆ ಕೊಡ್ರಿ ಮಾರಣ್ಣ ಮೈಲ್ಲಣ್ಣ
ಅಂದು ಜುಂಜಪ್ಪನ ಬಸುವ ಕೇಳಿದ
ಕೇಳುತ್ತಿದ್ದಂಗೇ ಆಗ ಮಾರಣ್ಣ ಮೈಲ್ಲಣ್ಣ ಹೇಳ್ತರೆ
ಬಡಮೈಲ
ಬಾಯಿಗ ರುಚಿಯಾದ ಪದಾರ್ಥವೆಲ್ಲ

ದೇವರ ನೈವೇಧ್ಯಕ್ಕೆ ಏರುದಿಲ್ಲ ಕಣಾಪ್ಪ
ನಾವು ಎಷ್ಟೇ ಕಷ್ಟ ಬಂದಾಗ್ಯೂ
ಶಾಪಗ್ರಸ್ತರಾಗ ಬಾರುದು
ನಾವು ಅಪ್ಪಣೆ ಕೊಡುದುಕ್ಕೆ ಶಕ್ತಿಯಿಲ್ಲ
ನಮ್ಮ ಅಣ್ಣನಿಂದ ನಿನಗೆ ಅಪ್ಪಣೆಯಾಗಬೇಕು
ನಮ್ಮ ಅಣ್ಣ ಯಾವು ದೇಶದಲ್ಲವನೋ
ಎಲ್ಲವುನೋ ಗೊತ್ತಿಲ್ಲ
ನಮ್ಮ ಆಗ್ನೇ ಪಡದು
ಇವುರು ಮೇಲೆ ಬಿದ್ದು
ನೀನು ತಲೆ ಸಾಸಿರ ಹೊಳು ಆದ್ರೆ
ಎಷ್ಟು ಕರಮಂತ್ರ ನಮಗೆ ಬರುತ್ತೆ ಬಡಮೈಲ
ಬೇಕಿಲ್ಲ
ನಮ್ಮ ಅದೃಷ್ಟದ ಫಲ ಇದ್ದಂತೆ ಆಗಲೀ
ಹೊರಟೋಗಪ್ಪ ಹಿಂದಿರುಗಿ ದನುಗೊಳೊಳಕೆ ಅಂತ
ಮಾರಣ್ಣ ಮೈಲ್ಲಣ್ಣ ಹೇಳಿದರು

ಸತ್ಯವಂತುರು ಮಕ್ಕಳು ಸ್ವಾಮಿ
ಶಾಶ್ವಂತುರು ಮಕ್ಕಾಳು
ಹಿಂಗೇ ಹೇಳಿದುರಯ್ಯೋ ಗಳಿಗಾಗೋ ॥

ಮತ್ತೆ ಬೇರೆಯಾರಾದ್ರು ಆಗಿದ್ದರೇ
ಆ ಕೆಲಸ ಮಾಡೆಬಡು ಅಂತ ಬಸುವ್ನುಗೆ ಹೇಳಿಬಿಡ್ತಿದ್ರು
ಅವುರು ಧರ್ಮಿಷ್ಟ ಮಕ್ಕಳಾಗಿದ್ದುಕ್ಕೆ
ಬೇಡಪ್ಪ
ನಮ್ಮಿಂದ ನಿನ್ನ ತಲೆ ಸಾಸಿರ ಹೊಳು ಆಗಬಾರದು
ಹೊರಟೋಗು ಹಿಂದಿರುಗಿ ಅಂತ ಹೇಳಿದರು
ಆಗ ಬಡಮೈಲ ಜುಂಜಪ್ಪನ ಬಸುವ
ಕಣ್ಣಲ್ಲಿ
ಸ್ವಾನೇ ಮಳೆ ಸುರಿಸಿದಂತೆ ನೀರು ಸುರಿಸ್ಗಂಡು
ದನಗೊಳೂಳಕೆ ಹೊರಟೊತ್ತು
ಇವುರು ಮಾರಣ್ಣ ಮೈಲ್ಲಣ್ಣನ ತಕ್ಕಡೊಂಗಿ
ಅರಗಿನ ಮನೆಯೊಳಗೆ ಮಾರಣ್ಣನ ಕಟ್ಟಿದರು
ಮೆಣಸಿನಕಾಯಿ ಮನೆಯೊಳಕ್ಕೆ ಮೈಲ್ಲಣ್ಣನ ಕಟ್ಟಿದುರು
ಈಚೆಗೆ ಬಂದು ಬಾಗಲು ಮುಚ್ಚಿ ಬೀಗಜಡುದು

ಗವಾಕ್ಷಿ ಮೇಲತ್ತಿ
ಚಕ್ಕುಮುಕ್ತಿ ಹೊಯ್ದು
ಬೆಂಕಿ ಇಕ್ಕುತ್ತಾರಣ್ಣಗಳಿಗಾಗೋ ॥

ಚಕ್ಕುಮುಕ್ಕಿ ಅಂದ್ರೆ
ಹಿಂದ್ಲು ಕಾಲಕ್ಕೆ ಬೆಂಕಿ ಕಡ್ಡಿ ಇರಲಿಲ್ಲ
ಗೀಚೀ ಬೆಂಕಿ ಅಚ್ಚುದುಕ್ಕೆ
ಚಕ್ಕುಮುಕ್ಕೆ ಅಂದ್ರೆ
ಬೆಣಚಗಲ್ಲು ಕಬ್ಬುಣುದು ಚೂರು ಸರಿ
ದೂದಿ ಅತ್ತಿ ಇದ್ದಂಗೆ ಇರ್ತಾಯ್ತೆ ಜಾದಿ ಅದನ್ನ ಇಕ್ಕಿಇಂಗೆ
ಒಡಿದ್ರೆ ಬೆಂಕಿ ಅತ್ತಗ್ನಾತ್ತಿತ್ತು
ಅದರಲ್ಲೆ ದೀಪಗಳ ಅಚ್ಚುತ್ತಿದ್ದು ಹಿಂದಿನ ಕಾಲಕ್ಕೆ

ಆ ಚುಕ್ಕಮುಕ್ಕೆ ಹೋಯ್ದು
ಬೆಂಕಿ ಇರ್ಕುದರಣ್ಣ
ಕಂಬೇರು ಗೊಲ್ಡುರು ಶಿವುನಿಗಾ ॥

ಆಗಲೇ ಭಗುವಂತ
ಸ್ವಾಮಿ
ಹರಿಗಿನು ಮನಿಯಣ್ಣ
ಮೆಣಸಿನು ಕಾಯಿ
ಮನಿಯಣ್ಣ
ದಗುದಗುನೇ
ಉರಿತಾಯ್ತೆಯ್ಯೋ ಗಳಿಗಾಗೋ ॥

ಏಳುವರ್ಷದು
ಕಂದುಗುಳು
ಮಾರಣ್ಣ ಮೈಲ್ಲಣ್ಣ
ಬಾಯಿ ಬಡುಕುನ್ತಾರೋ ಗಳಿಗಾಗೋ ॥

ಬಿಡಿರೋ ಮಾಮಣ್ಣೋ
ಪ್ರಾಣಾವೇ ಹೋಗುತ್ತೈತೆ
ಏನಂತ ಅನ್ಯಾಯ
ನಿಮ್ಮಿಗೂ ಮಾಡಿದುವೂ
ಮಾಮಣ್ಣೊ ॥

ತಾಯಿ ಸತ್ತೂರು
ಸ್ವಾದುರು ಮಾವುಗೊಳಿರುಬೇಕಂದು
ಗುರುವು ಹಿರಿಯೊರು ಹೇಳುದು
ಇದಕ್ಕೆ ಏನೇಳಿರೋ ಮಾಮಣ್ಣೋ ॥

ನಿಮ್ಮ ಕಂಚೀಗೆ ಕೈಯೂರೀ
ಇಲ್ಲಿಗೇ ಹನ್ನೇರುಡು ವರ್ಷ
ಏನು ಅನ್ಯಾಯ ನಿಮ್ಮಿಗೆ
ಮಾಡಿದುವೂ ಮಾಮಣ್ಣ
ಪ್ರಾಣವೇ ಹೋಗುತ್ತೈತ್ತಿ ಬಿಡಿರಯ್ಯೋ ॥

ಅಂದು ಮಾರಣ್ಣ ಮೈಲ್ಲಣ್ಣ
ಹಾಡಾಡೀ ಅಳುತ್ತಾರೆ
ತೋಡಿ ತೋಡಿ ಅಳುತ್ತಾರೆ
ಓಲ್ವೆಲೇ ಬೇಯಿಸ್ತಾವೆ
ಕುದ್ದು ಕುದ್ದು ಬೇಯಿತ್ತಾವೆ
ಅರಗಿನ ಮನಿಯೊಳುಗೆ
ಮೆಣಸಿನುಕಾಯಿ
ಮನಿಯೊಳುಗೆ
ಲಬು ಲಬುನೆ
ಬಾಯಿಬುಡುಕಮುತವು ಸ್ವಾಮಿ
ಏಳು ವರ್ಷದು ಕಂದುಗಳಯ್ಯೋ ಶಿವುನಿಗೋ ॥

ತೊಡೆ ತಟ್ಟುತ್ತಾರೆ ಕೇಕೆ ಹೊಡಿತ್ತಾರೆ
ಜುಂಜಪ್ಪನು ವಂಶ ಇಲ್ಲಿಗೇ ನಿರ್ಮೂಲ
ಮುಂದ್ಲುಲ್ಲು ನಮ್ಮದಾತ್ತು
ಮುಂದ್ಲು ನೀರು ನಮ್ಮದಾತ್ತು
ಜುಂಜಪ್ಪನ ವಜ್ರ ವೈಡುರ್ಯಗಳೇ ನಮ್ಮಗಾದುವು
ಜುಂಜಪ್ಪನ ವಂಶ ಇಲ್ಲಿಗೆ ನಿರ್ಮೂಲವಾತು ಅಂದು
ತೊಡೆ ತಟ್ಟಿ ಕೇಕ ಹೊಡಿತ್ತಾರೆ ಕಂಬೇರು ಗೊಲ್ದುರು

ಅಷ್ಟೋತ್ತಿಗೆ ಗೋಳಾಡಿ ಗೋಳಾಡಿ
ಸರಿ ಅವರಮ್ಮನ ನೆನಿಸ್ಗಂಡು ಮಾರಣ್ಣ ಮೈಲ್ಲಣ್ಣ
ತಾಯಿ ಸಿನ್ನಮ್ಮ

ಮಕ್ಕಳಿಲ್ಲವಂದು ಅಡವಿ ಅರಣ್ಯವನ್ನು ತಿರುಗಿ
ಬಂಜೆ ಎಂಬ ಸೊಲ್ಲು ನಾನು ಇಂಗಿಸ್ಕಬೇಕು ಅಂತ ಹೇಳಿ
ನೀನು ಅಡಿವಿ ಅರಣ್ಯವನ್ನ ತಿರುಗಿ
ಸರಿ ಪರಮೇಶ್ವರನಿಂದ ವರಪಡೆದು ಅರಣ್ಯದಲ್ಲಿ ನಮ್ಮನ ಪಡೆದೆ
ಇವತ್ತು ಹರಗು ಮೆಣಸಿನಕಾಯಿ ಮನೆಯೊಳಗೆ
ಬೆಂಕಿ ಇಕ್ಕುಬಿಟ್ಟಿವುರಮ್ಮ ನಿಮ್ಮ ಅಣ್ಣುಗೊಳು
ನಾವು ಸತ್ತೋಗುಬಿಡ್ತಿವಿ
ಈ ಮನೆಯೊಳಗೆ
ಉರುದು ಸತ್ತೋದಾಗ ನನ್ನ ಮಕ್ಕಳು ಬರ್ಲಿಲ್ಲ ಅಂತ
ಯಾರು ಮನೆ ಪಜ್ಜೆ ಬಾಗಲೀಗೆ ಹೋಗ್ತಿಯ ತಾಯಿ

ಅಂದು
ಅವುರು ಅಮ್ಮುನು
ನೆನಿಸಿಗಂಡು
ಹಾಡಾಡಿ ಅಳುತ್ತಾವೆ
ಮಾಯಿದು
ಮಕ್ಕುಳು ಸ್ವಾಮಿ
ತೋಡಿ ತೋಡಿ
ಅಳುತ್ತಾರಯ್ಯೋ ಶಿವುನಿಗೋ ॥

ಮಹಾ ಪತುರತೆ ಎತ್ತ
ಮಕ್ಕಳವುರಣ್ಣ
ಸಾಶುವಂತ
ಜುಂಜಪ್ಪನು ತಮ್ಮುಗುಳಯ್ಯೋ ॥

ಗೋಳಾಡಿ ಗೋಳಾಡಿ
ಮೈಲ್ಲಣ್ಣನ ನಾಲಿಗೆ ಮತ್ತುಬಂದು ಸದ್ದು ಅಡಗಿತ್ತು
ಮಾರಣ್ಣ ಒಬ್ಬನೇ ಬಡ್ಕಂಬತಾವ್ನೆ
ಮೈಲ್ಲಣ್ಣ
ಹಗೆಯರ ಕೈಗೆ ಪ್ರಾಣಕೊಟ್ಟೇನಪ್ಪಾ
ಅಂತ ಅವನೊಬ್ಬನೇ ಬಡ್ಕಂಡು ಬಡ್ಕಂಡು
ಇಬ್ಬರು ನಾಲಿಗೇನು ಮತ್ತುಬಂದು ಸದ್ದು ಅಡಗಿತು
ಕಂಬೇರು ಗೊಲ್ದುರು
ಮಾರಣ್ಣ ಮೈಲ್ಲಣ್ಣ ಸತ್ತೋಗುಬಿಟ್ರು ಅಂತ

ಹೇಳುಬಿಟ್ಟು ಕೇಕೆ ಹೊಡಿತ್ತಾ ಇದ್ರು
ಅಷ್ಟೋತ್ತಿಗೆ ಪುರ್ಲಹಳ್ಳಿ ಭೂತಪ್ಪ
ದೊಡ್ಡ ಕೆರೆ ಬಂಡೆ ಮ್ಯಾಗ ನಿಂತ್ಗಂಡು ನೋಡ್ದ
ಶಂಕರ
ಮಾರಣ್ಣ ಮೈಲ್ಲಣ್ಣನ ನನ್ನ ಶಾಪದಿಂದ
ಹರಗು ಮೆಣಸಿನ ಕಾಯಿ ಮನಿ ಒಳಗೆ ಬೆಂಕಿ ಇಕ್ಕುಬಿಟ್ರಲ್ಲ
ಬೆನ್ನಾಳ ಜುಂಜಪ್ಪ ಅಂದುಬಿಟ್ರೆ
ನಮ್ಮ ವಿರಿಯಣ್ಣ
ಪ್ರಪಂಚುದು ಮೇಲೆ ಪ್ರಾಣ ಹೊರ್ಕಂಡು ಇರೂದಿಲ್ಲ
ಏನು ಗತಿಮಾಡ್ಲಿ
ಈಗಲೇ ಹೋದ್ರೆ ಆ ತಾಳೆ ದುರ್ಗೀನ
ನಾನು ಭೂಮಿಗೆ ತುಳುದು ಹಾಕಿಬಿಡ್ತಿನಿ
ನಾನು ಇವಾಗ ಹೋಗಕಿಲ್ಲ
ಸರಿ ಅಂದೇಳಿ
ಬೆಟ್ಟಗುಡ್ಡೆ ದಿಕ್ಕು ಕಟ್ಟಿ ತಿರುಗುಬಿಟ್ಟ ಭೂತಪ್ಪ
ಯಾರು ದಿಕ್ಕಿಲ್ಲ
ಅಲ್ಲ ಕಾವಲ್ಲುಮ್ಮ ರಥ ಇಳಿಸುಬಿಟ್ಟು
ದೊಡ್ಡುಮದುಗುದು ಕಾವುಲಲ್ಲಿ
ಹರನಿದ್ರೆ ಮಾಡ್ತ ಮನಗಿದ್ಲು
ಓಡುಬಂದ ರಥದ ಹತ್ರುಕ್ಕೆ
ಓಡಿ ಬಂದು ಕಾವಲ್ಲುಮ್ಮುನ ರಥದು ಸುತ್ತ ಓಡಾಡ್ದಾ
ಕಾವಲ್ಲುಮ್ಮನಗೆ ಎಚ್ಚರವಾಗಲಿಲ್ಲ
ಅಯಮ್ಮನ ಹೊಟ್ಟೆ ಮೇಲೆ ನಾಗೇಂದ್ರ
ಸಿಂಬೆ ಹೊಡ್ಕಂಡು
ಆ ಯಮ್ಮನಿಗೆ ಸೆಖೆ ಬಿಸ್ತಾಯಿದ್ದ
ಆ ನಾಗೇಂದ್ರನಿಗೆ ಮಾರಣ್ಣ ಮೈಲ್ಲಣ್ಣನ ಬೆಂಕಿ ಇಕ್ಕಿರದು
ಕನಸು ಬೀಳುವಂತೆ ಮಾಡಿದ ಪುರ್ಲಹಳ್ಳಿ ಭೂತಪ್ಪ
ನಾಗೇಂದ್ರನಿಗೆ ಮಕ್ಕಳನ ಬೆಂಕಿ ಇಕ್ಕಿರದು ಕನಸು ಬಿತ್ತು
ಕನಸು ಬಿದ್ದ ತಕ್ಷಣ ನಾಗೇಂದ್ರ
ಕಾವಲ್ಲಮ್ಮನ ಹೊಟ್ಟೆ ಮೇಲೆಲ್ಲ ಬೋರಾಡಿದ
ಕಾವಲ್ಲಮ್ಮನಿಗೆ ಎಚ್ಚರವಾಗಲಿಲ್ಲ
ಹೆಡೆ ಎತ್ತಿ

ಕೆನ್ನೆಗೆ ಹೆಡೆ ಒಳಗೆ ಜಗ್ಗಿಸಿ ಒಂದೇಟು ಒಡೆದ ನಾಗೇಂದ್ರ
ಒಡಿತ್ತಿದ್ದಂಗೇ ಕಾವಲಮ್ಮ ಸಿಟ್ಟಾಗಿ ಎದ್ಲು
ಲೇ ದುಷ್ಟ ಜಂತೆ
ನಿನಗೆ ಹಾಲಿನ ಅಹಂಕಾರವೋ ನೀರಿನ ಅಹಂಕಾರವೋ
ಕಟಬಾಯಿ ಇಡಿದು ಸೀಳುಬಿಡ್ತಿನಿ
ಅಂತ ಎದ್ಲು ಕಾವಲಮ್ಮ
ತಾಯಿ
ಈ ದೃಷ್ಟ ಜಂತು ಇಲ್ಲಿದ್ರೆ ಫಲವೇನು ತಾಯಿ
ಅಲ್ಲಿ ನೋಡಮ್ಮ
ಮಾರಣ್ಣ ಮೈಲ್ಲಣ್ಣನ ಹರಗಿನ ಮನೆಯೊಳಗೆ
ಮೆಣಸಿನ ಕಾಯಿ ಮನೆ ಒಳಗೆ
ಬೆಂಕಿ ಇಕ್ಕು ಬಿಟ್ಟವುರೆ ತಾಯಿ
ಅಂದು ನಾಗೇಂದ್ರ ಕಾವಲಮ್ಮನಿಗೆ ಹೇಳಿದ
ಆಗಲೇ ರಥ ಗುಡಿಮುಂದುಕ್ಕೆ ತುಳುದುಬಿಟ್ಲು ಕಾವಲ್ಲುಮ್ಮ
ಒಬ್ಬುರು ಕಣ್ಣಿಗೆ ಕಾಣದಂತೆ
ಸರಿ ಬಲಗಡೆ ಗುಡಿಗೆ ನಾಗೇಂದ್ರ ಹೋಗಿ
ಮಾರಣ್ಣನಿಗೆ ಕಾಲ್ತಕ್ಕ ಬೈತಕ್ಕ ಸುತ್ತಾಕಂಡು ಸೆಖೆ ಒಡಿತ್ತಿದ್ದ
ಎಡಗಡೆ ಗುಡಿಗೆ ಕಾವಲಮ್ಮ ಹೋಗಿ
ಎಡಗಾಲುಂಗುಟದಿಂದ ಜಾಡಿಸಿ ಓದ್ಲು
ಬಾಗಲು ಮೂರು ತುಂಡಾಗಿ ಬಿತ್ತು
ಮೈಲ್ಲಣ್ಣನ ಬಿಚ್ಚಗಂಡು ಬಂದು
ರಥದಲ್ಲಿ ಇಟ್ಲು ಕಾವಲಮ್ಮ
ಬಲಗಡೆ ಗುಡಿಗೋಗಿ
ಬಲಗಾಲುಂಗಟದಿಂದ ಜಾಡಿಸಿ ಒದ್ಲು
ಬಾಗಲು ನಾಲ್ಕು ತುಂಡಾಗಿ ಬಿತ್ತು
ಮಾರಣ್ಣನು ನಾಗೇಂದ್ರನು ಬಿಚ್ಗಂಡು ಬಂದು
ರಥದಲ್ಲಿ ಇಟ್ಟು
ತಾಳಿ ದುರ್ಗಿಗೆ ಹೇಳ್ತಳೇ ಕಾವಲಮ್ಮ
ಚಂಡಿ
ಚಾಮುಂಡಿ
ಕೊಲ್ಲಾಪುರಿ
ಮಹೇಶ್ವರಿ

ಏಳ್ನಾಲಿಗೆ ದುರ್ಗಿ
ಸಾಡಿ ಮಾತನ್ನ ಕೇಳಿ ಭ್ರಷ್ಟ ಮುಂಡೆ
ಮಕ್ಕಳ್ನ ಹರಗು ಮೆಣಸಿನಕಾಯಿ ಮನೆನಲ್ಲಿ
ಬೆಂಕಿ ಇಕ್ಕುಸಿದ್ದಿಯ,
ಇನ್ನು ಮೂರು ದಿನ ಮಧ್ಯಾಹ್ನದ ಒಳಗಾಗಿ
ಪುರ್ಲಹಳ್ಳಿ ಭೂತನಿಂದ ನೀನು
ಈ ಭೂಮಿಗ ಹತವಾಗುದ ಮೇಲೆ
ನಾವು ದೇವುಗಾನಿಕೆಯರು ಅಂಬ ಹೆಸರಲ್ಲ
ಅಂದು ಶಾಪವನಿಕ್ಕಿ
ಕಾವಲ್ಲುಮ್ಮ ಕೈಲಾಸಕ್ಕೆ ರಥ ತುಳುದ್ಲು

– ೪ –

ದೊಡ್ಡದೊಂದು ಊರುಸಿಕ್ಕಿತು
ಹಾ ಊರುಗಳ ಜನರೆಲ್ಲಾ ನುಂಗಕೋದ್ಲು
ದನಕರುಗಳು ಜನಗಳ್ನ
ಊರುಗಳ ಜನಗಳ್ನ ನುಂಗದಕೆ ಹೋಗುತಿದ್ದಂಗೆ
ಜುಂಜಪ್ಪ
ಅಲ್ಲೊಂದು ಗುಂಪಾದ್ದು ದೊಡ್ಡದೊಂದು ಆಲದಮರ ಇತ್ತು
ಭಡಭಡನೆ ಅವುಳಿಗೆ ಕಾಣಸ್ದಂತೆ ಕುಂತ್ಕಬುಡುಬೇಕು
ಆಲದ ಮರ ಗುಂಪಾಗ್ಯೆತೆ ಅಂತೇಳಿಬುಟ್ಟು
ಓಡೋಗಿ
ಆಲದ ಮರದ ಕೊನೆ ಒಳಗೆ ಕುಂತ್ಕಬುಟ್ಟು ಸ್ವಾಮಿ
ನೆತ್ತಿಕೊನಿಗೋಗಿ ಕುದಿರಿಗಾಲಾಕಿ ಕೊನೆ ಒಳಗೆ ಕುಂತ್ಕಂಡ
ಓಡಿ ಓಡಿ ಸ್ವಾಮಿಗೆ ಶರಿರವೆಲ್ಲ ನಡುಗು ಬಂದಿತ್ತು
ಉಟ್ಟಿದ್ದಂತ ಪಟ್ಟೆದಟ್ಟಿ ಬಿಚ್ಚಿ
ಕೊನಿಗು ಅವುನಿಗೂ ಹತ್ತಂಡವಾಗಿ ಕಟ್ಟಿಗಂಡು ಕುಂತಿದ್ದ
ಜುಂಜಪ್ಪ ಆಲದ ಮರದ ಕೊನೆಯೊಳಗೆ
ಆ ಕುಂತಿರುವಾಗ ತಾಳೆ ದುರುಗಿ
ಊರೊಳಗಿದ್ದ ದನಕರುಗಳನ್ನೆಲ್ಲ
ಮನುಸುರು ಮಾನ್ಯರನ್ನೆಲ್ಲ ನುಂಗಿ ಬಿಟ್ಳು
ಹಿಂದಿರುಗಿ ನೋಡಿ ಬಿಟ್ಳು
ಆಲದಮರದಲಿ ಕುಂತಿದ್ದ ಜುಂಜಪ್ಪ ಕಾಣಿಸಿಬಿಟ್ಟ

ಆಕಾಸಕು ಮುಗುಲಿಗೂ ಏಕವಾಗಿ ಬೆಳದಿದ್ದಲ್ಲ
ಕಂಡು ಬಿಟ್ಟ ಜುಂಜಪ್ಪ
ನೋಡಿದ್ಲು ತಾಳೆ ದುರಿಗಿ
ಎಲ್ಲೈ ಕಾಡುಗೊಲ್ಲ
ಈ ಭೂಲೋಕದೊಳಗಡಗಿದರೂ ನಿನ್ನ ಬಿಡದಿಲ್ಲ
ನಿನ್ನೊಬ್ಬನ್ನೆ ತಿಂದ್ರೆ ನನಗೆ ಹಾವ್ರಸಾಲ್ದು
ಈ ಆಲದ ಕೊನಿಗಳು
ಇಪ್ಪತ್ತುನಾಲ್ಕು ಕೊನಿಗಳು ಒಡುದವೆ
ಆ ಆಲುದು ಕೊನಿಗಳನ್ನೆಲ್ಲ ಕಬ್ಬುಸೀಪಿದಂತೆ ಸೀಪಿ
ಅನಂತ್ರಕೆ ನಿನ್ನ
ಆಲದು ಮರದ ಕುಬುಟುಬೇರೊಳಗಾಕಿ ಕಿತ್ತು
ನಿನ್ನ ಅದುರು ಜೊತೆ ಒಳಗೆ ಅಗುದು
ಸೀಪಿ ಉಗುದು ಬಿಡ್ತಿನಲೆ ಕಾಡುಗೊಲ್ಲ

ಅಂದಾಳನ್ನ
ವಿಷ ರೂಪ
ತಾಳಿದ್ದವಳು ಸ್ವಲ್ಪ
ತಗ್ಗಿಗೆ ಬಂದು ದುರುಗಿ
ಸ್ವಲ್ಪ ತುಂಡುಕುವಾಗಿ
ಮರದಡಿಕೆ ಬಂದಳು ದುರುಗಿ ಶಿವುನಿಗೋ ॥

ಮರದಡಿಕೆ ಬಂದು ದುರುಗಿ
ಆಲುದು ಕೊನೆಗಳಿಗೆ
ಏಳುನಾಲಿಗೆ ಸುತುತಾಳೆ
ಆಲದು ರೆಂಬಿಗ್ನ
ನರಿನರಿ ನೆಳುದು ಮುರುದು
ಕಬ್ಬು ಸೀಪಿದಂತೆ ಸೀಪಿ
ಜುಂಜಪ್ಪನು ಮುಂದುಕೆ
ತುಬುಕ್ಕನೆ ಉಗುಳುತಾಳಾಳುದ್ದು ಸಿಪ್ಪೆನೆ ಶಿವುನಿಗೋ ॥

ಜುಂಜಪ್ಪ ಗೊಳಾಡ್ತನೆ
ಹರ ಹರ ಶಂಕರಾ
ಎಂತಹಾ ರಾಕ್ಷಿಸಿ ಮುಂಡೆ ಇವುಳು
ನನ್ನ ಕೈ ಬಿಟ್ರೇನಪ್ಪ ಮುನ್ನೂರು ಅರವತ್ತುಕೋಟಿಲಿಂಗ

ನಿಮಗೆಲ್ಲ ಅಡಿಗೆ ಮಾಡಿಸಿ
ನೀವೆಲ್ಲ ಬಂದು ದುರ್ಗಿ ಒಡಿತಿನೆಂದು ಭಾಷೆ ಕೊಟ್ರಿ
ಎತ್ತೋದ್ರಪ್ಪ ಅಂದ
ಎಲವೊ ಜುಂಜಪ್ಪ
ನಿನ್ನ ಮೂನ್ನೂರು ಅರವತ್ತು ಕೋಟಿಲಿಂಗ
ಅವುರವುರ ಗುಡಿಯೊಳಗೆ ಎತ್ತೆತ್ತ ಮಕನಾಗಿ ಕುಂತವುರೋ
ಅತ್ತುಮಕನಾಗಿ ನನ್ನ ಪಾದಕೆ ಅಡಡ್ಡ ಬೀಳುತವುರೆ
ಯಾಕವರ ಪಾದಗಳ ನೆನುಸ್ತಿಯೋ ಕಾಡುಗೊಲ್ಲ
ನೆನ್ಸೊ ನನ್ನ ಪಾದ ಮೂರುಗಳಿಗೆ
ಬಿಡ್ತಿನಿ ನಿನ್ನ ಪ್ರಾಣನಾ ಅಂದ್ಲು ತಾಳೆ ದುರುಗಿ
ಒಂಬತ್ತು ಜನ ರಂಗಪ್ಪುಗಳೇ
ಬಿಟ್ರೇನಪ್ಪ ಕೈಯ್ಯ ಅಂದಾ
ನಿನ್ನೊಂಬತ್ತು ಜನರಂಗಪ್ಪುಗಳವುರವುರ ಗುಡಿಯೊಳಗೆ
ಎತ್ತೆತ್ತ ಮಕನಾಗಿ ಕುಂತವುರೋ
ಅತ್ತು ಮಕನಾಗಿ ನನ್ನ ಪಾದಕೆ ಅಡ್ಡ ಬಿದ್ದವುರೆ
ಯಾಕವುರ ಪಾದಗಳನೆಲ್ಲ ನೆನುಸ್ತಿಯೋ ಕಾಡುಗೊಲ್ಲ
ನೆನ್ಸು ನನ್ನ ಪಾದ ಮೂರು ಗಳಿಗೆ ಬಿಡ್ತಿನಿ ಅಂದ್ಲು
ಮರ್ಡಿಗುಡ್ಡದ ರಂಗಪ್ಪ
ಅತಿ ಪ್ರೇಮದ ಜೊತೆಗಾರ ನೀನು ನನಗೆ
ಏಳು ಕೋಟಿ ಅಲ್ಪಿನೋರು ನೆಡುಕಂತರೆ ಎಂದು
ಸತ್ಯವಂತ ನೀನೆಂದು
ಭಾಷೆ ಪ್ರಮಾಣ ಮಾಡ್ದೇಲಪ್ಪ ದುರಿಗಿ ಹೊಡಿತಿನಿ ಅಂತಾ
ನಿನೆಲ್ಲೋದೆ ಮರ್ಡಿಗುಡ್ಡದ ರಂಗಾ
ಅಂದ ಜುಂಜಪ್ಪ
ಎಲವೋ ಕಾಡುಗೊಲ್ಲ
ನಿನ್ನ ಮರ್ಡಿ ಗುಡ್ಡದ ರಂಗ
ಗುಡ್ಡದ ಮೇಲಗಡೆ ದೇವಸ್ಥಾನದಲಿ
ಎತ್ತಮಕ್ಕನಾಗಿ ಕುಂತವುನೋ
ಅತ್ತಮಕನಾಗಿ ನನ್ನ ಪಾದಕೆ ಅಡ್ಡಬಿದ್ದವುನೇ
ಸರ್ವ ನಮುಸ್ಕಾರ ಮಾಡ್ತವುನೆ
ನನ್ನ ಗುಡ್ಡದ ಕಡಿಕೆ ತಿರಿಗಿ ನೋಡಬ್ಯಾಡ ತಾಯಿ ಅಂತನಾ
ಯಾಕವುರ ಪಾದಗಳೆಲ್ಲ ನೆನಿಸ್ತಿಲಾ ಕಾಡುಗೊಲ್ಲ

ನೆನ್ಸು ನನ್ನ ಪಾದ ಮೂರುಗಳಿಗೆ
ಬಿಡ್ತಿನಿ ನಿನ್ನ ಪ್ರಾಣನಾ ಅಂದ್ಲು ತಾಳೆ ದುರುಗಿ
ಭ್ರಷ್ಟ ಮುಂಡೆ
ಅಂಗೋಗ ಪ್ರಾಣ ಯಿಂಗೆ ಹೋದ್ರುತಾನೆ
ನಾನು ನಿನ್ನ ಪಾದ ನೆನ್ಸದುಂಟೆ
ನಾನೆಲ್ಲಿಗೆ ನೀನೆಲ್ಲಿಗೆ
ನೀನು ರಾಕ್ಷಸಿ
ನಾನು ದೇವುರು
ನಾನು
ನಿನ್ನ ಪಾದ ನೆನ್ಸಿ ಭತ ಕೇಡಿಸ್ಕಿಳ್ಳಲೇ
ಅಂಗೋಗ ಪ್ರಾಣ ಇಂಗೆ ಹೋದ್ರು
ತಿರಗ ಪರಮೇಶ್ವರನಲ್ಲಿ ಸತ್ಯೆವು ಪಡಕಂಡು
ತಿರ್ಗ ನರಲೋಕಕ್ಕೆ ಬತ್ತಿನಿ ನಾನು
ನಿನ್ನ ಕೈಲೇನಾದತ್ತು ರಾಕ್ಸಸಿ ಮುಂಡೆ
ನಾನು ಉರಿಗಣ್ಣೈತೆ ಉರಿ ಅಸ್ತ್ರವೈತೆ
ಅರಕ್ಷಣದಲಿ ಕಣ್ಣು ಬಿಟ್ರೆ
ನೀನು ಸುಟ್ಟು ಬೂದಿಯಾಗ್ತಿಯಾ
ಆದರೆ ನಮ್ಮ ತಂದೆ ಪರಮೇಶ್ವರ
ನಾನು ಹುಟ್ಟುವಾಗ
ಒಬ್ಬ ಸ್ತ್ರಿಯಳನ್ನು ಕೊಂದ್ರೆ
ಏಳು ಜಲ್ಮದಲ್ಲಿ ಹುಟ್ಟಬೇಕು
ಏಳು ಜನ್ಮದಲ್ಲಿ ಸಾಯಬೇಕು ಅಂತಾ
ನಮ್ಮ ತಂದೆ ಪರಮೇಶ್ವರನು ಹೇಳವುನೆ
ನೀನು ಸ್ತ್ರಿಯಳೇ ತಾನೆ
ನಿನ್ನ ಕೊಂದು ಬಿಟ್ರೆ
ನಾನು ಕರ್ಮಾಂತ್ರಕ್ಕೆ ಒಳಗಾಗಿ ಬಿಡ್ತಿನಲ್ಲ ಅಂತಾ
ಉರಿಗಣ್ಣು ಮುಚ್ಚಿಗಂಡು
ಸುಮ್ಮನೆ ಕುಂತಿದ್ದಿನಿ ಅಂದ ಜುಂಜಪ್ಪ
ಆಗ ತಾಳೆ ದುರ್ಗಿ

ಮರಿಯಲೆ ಕಾಡಗೊಲ್ಲ
ನಿಮ್ಮ ನರಲೋಕದಾಡಳಿತೆ
ಇಲ್ಲಿಗೂ ಮರಿಯೋ
ನುಂಗಿ ಬಿಡುತ್ತಿನಂದಳು ದುರುಗಿ ಶಿವುನಿಗೋ ॥

ಅವುರಮ್ಮನ್ನ ನೆನ್ಸಿಗಂಡು ಜುಂಜಪ್ಪ
ಅಮ್ಮ ಸಿನ್ನಮ್ಮ
ನಿನ್ನೊಟ್ಟೆ ಒಳಗೆ ಹುಟ್ಟಿದ್ರೆ ಸೂತುಕ ಬೆರಿಕೆ ಆಯ್ತತೆ
ಬಾಯನಲ್ಲಿ ಒಡುದ್ರೆ ಯಂಜಲು ಬೆರಕಿ ಆಯ್ತುತೆ ಅಂತಾ
ಬಲಗಡೆ ಭುಜದಲಿ
ಬಂಗಾರದ ಹಲ್ಲಿಯಾಗಿ ಒಡದು ಬಂದಿವ್ನಿ ತಾಯಿ
ಇವತ್ತು ಹಾಳುಮುಂಡೆ ದುರಿಗಿಕೈಗೆ ಸಿಕ್ಕಿ
ಸೂತ್ಕುದು ಶ್ಯಾಲಿಗಳ
ಹೆಗಲ ಮೇಲೆ ಹಾಕ್ಯಂಡು ಬಂದವುಳೆ
ಸೂತ್ಕುಕ್ಕೂ ಒಳಗೊಂಬಿಡ್ತಿನಿ
ಎಂಜಲು ಮೈಲಿಗೆನೂ ಆಗಿ ಬಿಡ್ತಿನಿ

ನನ್ನ ಭತುವೆ
ಕೆಟ್ಟೋಗುತ್ಯತಮ್ಮ ಸಿನ್ನಮ್ಮ
ಏನು ಮಾಡಲಿ ತಾಯಿ ನಾನೀಗೋ
ಅಂದವುರಮ್ಮನು
ನೆನಸಿಗಂಡು ಜುಂಜಪ್ಪ
ಶಿವುಶೋಕ ಮಾಡುತಾನಾ
ಆಲೂದು ಮರುದಳೊಗೋ ॥

ಎಲ್ಲವೋ ಕಾಡುಗೊಲ್ಲ

ಇಲ್ಲಿಗು ಮರಿಯಲಿ ನಿಮುತಂದೆ
ತಾಯಂಬುನು ನಾ ಕಾಡಗೊಲ್ಲ
ಅಂದಳು ತಾಳೆ ದುರಿಗಿ
ಆಲದು ಮರುದ ಕೊನಿಗಳುನೆಲ್ಲ
ಎಳದು ಸೀಪ್ಯಾಕವುಳಣ್ಣ
ಬುಡದಿಂದ ಜುಂಜಪ್ಪ ಇರುವೋದೊಂದು
ಕೊನೆಯನ ಬಿಟ್ಟವುಳೆ
ದಗ್ಗಲು ಮಂಡಿ ವಡದಾಳಣ್ಣ
ನೆಲಕೆ ಈರುಮಂಡಿ ಒಡೆದು ದುರುಗಿ
ಅರಿಯಬ್ಬಾಲುದು ಮರದ ಬುಡುಕೆ
ನಾಲಿಗೆ ಸತ್ಯವುಳೋ
ದುರಿಗಿ ಶಿವುನಿಗೋ ॥

ನಾಲಿಗೆ ಸುತ್ತ್ಯಾವುಳಣ್ಣ
ದುರಿಗ್ಯಾಮ್ಮ
ಕುಬುಟ ಬೇರೊಳಗಾಗಿ
ಆಲುದು ಮರವನು ಮುರುದು
ನಿನ್ನದರ ಜತಿಯೊಳಗೆ
ಅಗುದು ಸೀಪಿ ಬಿಡುತೀನೆಂದು
ಆಲುದು ಮರಕೆ ನಾಲಿಗೆ ಸುತ್ತಿ
ಮರವನು ಅಳ್ಳಾಡುಸುತಾಳೆ
ಜುಂಜಪ್ಪನ ನುಂಗದುಕೆ
ಇನ್ನಾಯಿತು ನನ ಕೆಲಸ
ಇನ್ನೇನು ಮಾಡುಲಿ ಶಿವುನೆ ಅಂದು
ಜುಂಜಪ್ಪ ಗೋಳಾಡುತಾನಣ್ಣ
ಆಲುದು ಮರದೊಳುಗೆ ಶಿವುನಿಗೋ ॥

ಅಷ್ಟು ಹೊತ್ತಿಗೆ ಭಂಟಾಗಿನಿ ಭಂಟಾ
ಎಚ್ಚಿನ ಭಂಟಾ
ಏಳು ನಾಮುದೊಡೆಯ ಪುರುಲಳ್ಳಿಯ ಭೂತಾ
ದೊಡ್ಡ ಕೆರೆ ಬಂಡೆ ಮ್ಯಾಲೆ
ನುಂಗಿ ಬುಡ್ತಾಳೆ ನಮ್ಮ ಹಿರಿಯಣ್ಣ ಜುಂಜಪ್ಪನ್ನ ಅಂದು
ಪುರಲಳ್ಳಿ ಭೂತಪ್ಪ
ಸರಿ ದೊಣೆ ಒಳಗೆ
ಕೈ ಕಾಲು ಮುಕವನ್ನ ತೊಳ್ದು
ಪಟಿ ಪಟಿ ನಾಮುಗಳನ್ನ ಧರಿಸಿ
ಇಟ್ಟಿಗೇರಿ ಜಯಗಳ ಜಾಗುಟೆ
ತುಬುಗಾತ್ರ ಭವನಾಸಿ
ಮೂಡೆಗಾತ್ರ ಶಂಕು
ಬಲಿಮುರಿ ದೊಣ್ಣೆ ಹೆಗಲ ಮೇಲೆ
ಕೈನಲ್ಲಿ ಗರುಡುಗಂಬ ಇಡಕಂಡು ಪುರಲಳ್ಳಿ ಭೂತಾ
ಆಕುರ್ಚ್ಯುಸುತಾನೆ ದೊಡ್ಡ ಕೆರೆ ಬಂಡೆಮ್ಯಾಲಿ ನಿಂತ್ಕಂಡು
ಹಿರಿಯಣ್ಣ
ಈಗಲಾದ್ರು ಕರಿಯೋ
ಕರದೆ ಏಟಿಗೆ ಬಂದವುಳ್ನ
ಭೂಮಿಗೆ ತುಣ್ದು ಬಿಡ್ತಿನಿ ಎಂದು ಪುರ್ಲಳ್ಳಿ ಭೂತ

ಭಂಟಾಗಿನ ಭಂಟ ಎಚ್ಚಿನ ಭಂಟಾ
ಏಳ್ನಾಮುದು ಒಡೆಯ ಪುರ್ಲಳ್ಳಿ ಭೂತ ಧೀರಾ
ನಿಂತ್ಕಂಡ್ ಆಕರ್ಸತಾನೆ ಪುರ್ಲಳ್ಳಿ ಭೂತಾ
ಕೊಂಕಿಜರ್ಮಲೆ ಸೀಮೆ ಒಳಗೆ
ಅವುನು ಅಕರ್ಸದ ಅರ್ಭಟ
ಜುಂಜಪ್ಪ ಆಲದ ಮರದಲಿ ಕುಂತಿದ್ದವುನ ಕಿವಿ ಕರ್ಣಕೆ ಕೇಳಿತು
ಆಗ ಕೈಸನ್ನೆ ಮಾಡಿ ಕರ್ದು
ಭಂಟಾಗಿನ ಭಂಟಾ
ಹೆಚ್ಚಿನ ಭಂಟಾ
ಏಳ್ನಾಮುದು ಒಡೆಯ ಪುರ್ಲಳ್ಳಿ ಭೂತಾ
ಬಿಟ್ಟೇನಪ್ಪ ನನ್ನ ಕೈಯಾ ಅಂದ ಜುಂಜಪ್ಪ
ಅಂಗಂದು ಕೂಡಲೇ
ಹಾರಿದ ದೊಡ್ಡ ಮದಗದಿಂದ ಪುರ್ಲಳ್ಳಿ ಭೂತಾ
ಹಾರಿ ಬಂದು
ಇನ್ನೊಂದು ಸ್ವಲ್ಪ ದೂರದಲಿ
ತಾಳೆ ದುರಿಗಿ ಅವುಳೆ ಎಂಬುವಾಗ
ಭೂಮಿ ಮೇಲೆ ಇಳ್ದು
ಅಲ್ಲಿ ವಿಷರೂಪ ತಾಳಿದ
ಹೊಟ್ಟೆ ವಡ್ರು ಗುಡುಸ್ಲು ಮಾಡಿಕಂಡು
ಹಲ್ಲೊಂದು ಕಡಿಕೆ
ಕಣ್ಣೊಂದು ಕಡಿಕೆ
ಕುಂಟು ಭೂತನಂತೆ
ಹೊಟ್ಟೆ ವುಡುಗನಾಗಿ
ಜಾಗಟೆ ಭವನಾಸೆಗಳನ್ನ ಹೊತ್ತುಗಂಡು
ತಾಳೆ ದುರುಗಿ
ಇನ್ನೇನು ಜುಂಜಪ್ಪನ ನುಂಗಬೇಕು ಎಂಬಷ್ಟೊತ್ತಿಗೆ
ಶ್ರೀ ವಿಷ್ಣು ಭೂತಪ್ಪನ ಅವುತಾರವನೆತ್ತಿ
ಇಂದುಗಡೆ ಬಂದು ದುರ್ಗಿ ಬೆನ್ನಿಂದೆ
ಜಾಗುಟೆ ಬಡುದು ಶಂಕೂದಿ
ಗೋವಿಂದ ಗೋವಿಂದಾ ಗೋವಿಂದಾ
ಎಂದಾ ಪುರ್ಲಳ್ಳಿ ಭೂತಾ
ಗೋವಿಂದಾ ಎಂದ ಸೊಲ್ಲನ್ನ ಕೇಳಿ

ದುರ್ಗಿ ಹೊಟ್ಟೆಗಳ ದೊಮ್ಮೆ ಗಡಗಡನೆ ನಡುಗಿತು
ಆಲುದ ಮರವನು ಎಳಿತಿದ್ದವುಳು ಬಿಟ್ಟು ಬಿಟ್ಲು
ಹಿಂದಿರುಗಿ ನೋಡ್ತಾಳೆ
ಇಷ್ಟೆ ಇಷ್ಟೆತ್ರ ಹೊಟ್ಟೆ ವುಡುಗ ಇದ್ದಾಂಗವುನೆ
ಎಲಾ ಗೊಣ್ಣೇಸುರ್ಕ
ಇವುನು ಇಷ್ಟು ದಪ್ಪ ಗೋವಿಂದ್ನ ಇಕ್ಕಿ
ನನ್ನ ಎದಿರ್‍ಸಿಬಿಟ್ನಲ್ಲ ಅಂದು
ಏ ಬಡದಾಸ
ನಾನು ಎದ್ದ ಕಾಲದಲ್ಲಿ
ನೀನ್ಯಾರಿಲ್ಲಿ ಬಂದು ಗೋವಿಂದಾ ಅಂಬುದಕೆ
ಮೊದಲು ನಿನ್ನನ್ನು ನುಂಗಿ
ಅಮೇಲೆ ಜುಂಜಪ್ಪನ ನುಂಗ್ತಿನಿ ಅಂತಾ ಹೋದ್ಲು
ತಾಯಿ
ಈ ಊರಿಗೆ ನಾನು ದಾಸಯ್ಯನಾಗಿ ಹೋಗಿದ್ನಮ್ಮ
ನೀನು ಎದ್ದಂತ ಕಾಲದಲ್ಲಿ
ಸೂರ್ಯಬೇರೆ ಕತ್ಲುಗಾದೋಗವುನೆ ಕತ್ಲುಮಕ
ಗರುಡುಗಂಬುದ ಬೆಳಕಿನೊಳಗೆ ನಾನು
ಬರಕ ಭಯವಾಗುತ್ತಿತ್ತು ದಾರ್‍ಯಾಗೆ ಕತ್ಲಗೆ
ಆದಕ್ಕೆ ಗೋವಿಂದ ಗೋವಿಂದ ಅಂದ್ಕಂಡು ಬತ್ತಿದ್ದೆ ಕಣಮ್ಮ
ನೀನು ಇಲ್ಲವುಳೆ ಎಂಬುದು ನನಗೇನು ಗುರ್ತು ತಾಯಿ
ಗೊತ್ತಿರ್‍ಲಿಲ್ಲ ಕಣಮ್ಮ
ಹೋಗ್ತಿನಮ್ಮ
ನನ್ನ ಮೇಲೆಕೆ ಕಣ್ಣು ಬಿಡ್ತಿಯಮ್ಮ ಬಡ್ದಾಸ್ನ ಮೇಲೆ
ಅಂದು ಪುರ್ಲಳ್ಳಿ ಭೂತಪ್ಪ
ಇಂದಕ ತಿರಕ್ಯಂಡು ಮುಂದಕೆ
ಮುಂದಕೆ ಮೂರ್‍ಹೆಜ್ಜೆ ಇಕ್ಕಿದ ಮುಂದಕ್ಕೆ ಮೂರ್‍ಹೆಜ್ಜೆ ಇಕ್ಕಿ
ತಿರ್‍ಗಿ ಇಂದಕ್ಕೆ ತಿರಿಕಂಡು
ಏನ್ ತಾಯಿ
ನೀನು ಗುಡಿಬಿಟ್ಟು ಈಚೆಗೆ ಬರ್‍ತಿರ್‌ಲಿಲ್ಲಾ
ಆರುತಿಂಗಳು ನಿದ್ರೆ
ಮೂರ್‌ತಿಂಗಳು ಹಾವ್ರವನ್ನ ತಕಂಡು
ಮಲಗಿ ಬುಡ್ತುತ್ತಿದ್ದೆ ಆರು ತಿಂಗಳುವರಿಗೂ ಇಚೆಗೆ ಬರ್‍ತಿರುನಿಲ್ಲ

ಇವತ್ತು ಗುಡಿಬಿಟ್ಟು ಇಲ್ಲಿ ತನ್ನ ದಯಮಾಡ್ಸಿದ್ದಿಯಲ್ಲ
ಕಾರಣುವೇನು ತಾಯಿ ಅಂದ ಪುರ್ಲಳ್ಳಿ ಭೂತ
ಎಲ್ಲವೋ ಬಡ್ಡಾಸ

ಇವುನು
ಅಗಲು ಅಜ್ಜರಗಂಡನಂತೆ
ಇಳ್ಳು ಜಾವುದರ ಮಿಂಡನಂತೆ
ನಾಗರ ಹಾವಿನ ಗಂಡನಂತೆ
ನಾಲಕು ಲೋಕಕ್ಕು ಉದ್ದಂಡನಂತೆ
ಕಾಲು ಕದಲೆ ಕಂಬ
ತೋಳು ಬಾಳೆದಿಂಡು
ಕೆಂಗಿರಿಗಣ್ಣಿನಂತೆ
ಕೆದರಿದ ಮಂಡೆನಂತೆ
ಬೂದಿ ಮುಚ್ಚಿದ ಕೆಂಡ
ಭೂಲೋಕುಕುದ್ದಂಡ
ನರಲೋಕದಲಿ ಅಂತ
ಹೋದ್ದಕಾರ್‍ಯರಿಗೆಲ್ಲ ಗಂಡನಂತೆ
ಶೂನ್ಯಗಾರರಿಗೆಲ್ಲ ಮಿಂಡನಂತೆ
ಕೈಲಿ ಕತ್ರ ಬಾಳೆ
ತಲೆಯಲ್ಲಿ ನೆತ್ರಬಾಳೆ
ಸುರ್‍ಯನಾರಾಣನೆಂಬ
ಮರಿ ಬಿಲ್ಲು ಬಾಣ ಧರಿಸಿ
ಉಗ್ರುದು ಗಡಿಗೆನಂತೆ....
ಉಲಿಮಕದನಂತೆ

ಗೊಲ್ಲು ಜುಂಜಪ್ಪ
ಉಡುದಾರವಿಲ್ಲದ ಮುಡುದಾರ ಮುಂಡಿಗೆ
ತಾಳೆ ದುರಿಗಿಗೆದುರಿ ಹರಿಯಬ್ಬಾಲದ ಮರವನ್ನತ್ತ್ಯವನೆ
ಇವನನ್ನುಂಗಲು ನಾನಿಲ್ಲಿಗೆನ ವೊಡಿಸಿಗಂಡು ಬಂದೆ
ಅಂದ್ಲು ತಾಳೆದುರಿಗಿ
ಓಹೋ.....
ಗೊಲ್ದರ ಜುಂಜಪ್ಪನೇನಮ್ಮ
ಅವುನ್ನಾದ್ರೆ ನುಂಗು ಬೇಕಾದ್ದೆ ಕಣತಾಯಿ

ಪಂತಿ ಒಳಗೆ
ಪರವಂಚನೆ ಮಾಡಿದವ್ನಮ್ಮ ಗೊಲ್ರ ಜುಂಜಪ್ಪ
ಮೂರೇಳು ಮಂದಿ ದೇವುಗಾನಿಕೆಯವರನ್ನ ಕರೆಸಿ
ಮುನ್ನೂರು ಅರವತ್ತು ಕೋಟಿಲಿಂಗ ಒಂಬತ್ತು ಜನ
ದೇವುತೆರಿಗೆ ಎಡೆ ಮಾಡಿಸಿದ್ದ
ನನ್ನನ್ನ ಕರಿದಂತೆ
ದೇವುತೆರಿಗೆಲ್ಲ ಊಟಕ್ಕೆ ಹಾಕಿಸಿ ಬಿಟ್ಟ ಜುಂಜಪ್ಪ
ಅವುನ್ನಾದ್ರೆ ನುಂಗಬೇಕಾದ್ದೆ ಕಣಮ್ಮ
ನಾನು ನಿನಗೆ ಸಹಾಯವಾಗಿ ಬರ್‍ತಿನಿ ತಾಯಿ
ನನ್ನ ಒಕ್ಕಲು
ನನ್ನ ಗರಡುಗಂಭಕ್ಕೆ ಒಂದು ಕಾಯಿ ಒಡೆದಿದ್ರು
ಕಾಯೊಪ್ಪೈತೆ ಕುಟ್ಟಿ ಮಣೆವುವಿಕ್ತಿನಿ
ಮಣೇವು ಆಡ್ತಾ ಆಡ್ತಾ
ಆನಂದವಾಗಿ ಜುಂಜಪ್ಪನ ನುಂಗಿಬುಡು
ನಾನು ನಿನ್ನ ಬಾಯೊಳಿಕೆ ತಳ್ಳಿಕೊಟ್ಟು ಬುಡ್ತಿನಿ ಜುಂಜಪ್ಪನ್ನ
ಅಂದಾ ಭೂತಪ್ಪ
ಓಹೋ
ಒಳ್ಳೆ ಕೆಲಸ
ಜುಂಜಪ್ಪ
ನೋಡ್ದೇನೋ
ನನ್ನಂತಹ ಧರ್ಮಿಷ್ಠ ಯಾರೂ ಇಲ್ಲ ಅಂತಾ ಹೇಳ್ಕಂತ್ತಿದ್ದೆ
ಯಾರೂ ನಿನಗೆ ಸಹಾಯವಾಗಿ ಬರ್‍ಲಿಲ್ಲ ಧರ್ಮಿಷ್ಟಗೆ
ಯಾರೋ ದಾರಿಗುಂಟ ಹೋಗ್ತಿದ್ದ ದಾಸಯ್ಯ
ನನಗೆ ಮಣೇವು ಇಕ್ತಿನಿ
ಮಣೇವು ಆಡ್ತಾ ಆಡ್ತಾ
ಆನಂದವಾಗಿ ನುಂಗಿಬಿಡಮ್ಮ ಅಂತಾ ಹೇಳ್ತಾ ಅವುನೇ
ಎಲ್ಲೋತೋ ಜುಂಜಪ್ಪ ನಿನ್ನ ಧರ್ಮ
ಅಂದ್ಲು ತಾಳೆ ದುರ್ಗಿ
ಪುರ್‍ಲಳ್ಳಿ ಭೂತಪ್ಪ
ಕಾಯೊಪ್ಪುಕುಟ್ಟಿ ಮಣೇವು ಇಕ್ಕಿದಾ
ಕಾಯೊಪ್ಪಕುಟ್ಟಿ ಮಣೇವು ಇಕ್ಕಿ
ತಾಯಿ

ಎದುರು ಮಣೇವು ಆಡಬೇಡವ್ವ ತಾಯಿ
ಅಡ್ಡಗಾವು ತಿರಿಕೊಂಡು
ಎದುರು ಮಣೇವು ಆಡಬೇಡವ್ವ
ನಿನ್ನ ನೋಡಿದ್ರೆ ನನಗೆ ಭಯವಾಗ್ತಯಿತೆ
ಮುಂದುಗಡೆ ನೀನು ನಡಿ ಮಣೇವು ಆಡಕೆ
ಹಿಂದ್ಲಿಂದ ನಾನು ಬತ್ತಿನಿ
ಅಡ್ಡಮಣೇವು ಆಡಬ್ಯಾಡಮ್ಮ
ನಿನ್ನ ನೋಡಿದ್ರೆ ನನಗೆ ಭಯವಾಗ್ತಾಯಿತೆ
ಅಂದಾ ಪುರ್ಲಳ್ಳಿಭೂತ
ಆಗ್ಲಿ ಬಾರಯ್ಯ ಅಂದ್ಲು
ಮುಂದುಗಡೆ ತಾಳೆ ದುರುಗಿ
ಹಿಂದ್ಗುಡೆ ಪುರ್ಲಳ್ಳಿ ಭೂತಪ್ಪ
ಎಡದಿಂದ ಬಲಕ್ಕೆ ಮಣೇವು ತಿರಿಕ್ಯಂಡು ಬರೋವಾಗ
ಭೂತಪ್ಪ ಏನು ಮಾಡ್ದಾ
ಪರಾಕು ಪರಾಕು ಅಂದಾ ಪುರ್ಲಳ್ಳಿ ಭೂತಾ
ಪರಾಕು ಅಂದ ಸೊಲ್ಲು ಕೇಳಿ ದುರ್ಗಿ ಹೊಟ್ಟೆ
ದೊಮ್ಮೆ ಗಡಗಡನೆ ನಡುಗಿದುವು
ಲೇ ಬಡದಾಸ
ನೀನಿರದು ನೋಡಿದ್ರೆ ಇಷ್ಟಿದ್ದಿ
ನೀನು ಪರಾಕು ಅಂದೇಟಿಗೆ ನನ್ನೊಟ್ಟೆಗಳ ದೊಮ್ಮೆ
ಗಡಗಡನೆ ನಡುಗಿದವು
ಮೊದಲು ನಿನ್ನನ್ನ ನುಂಗಿ
ಅನಂತರುಕೆ ಜುಂಜಪ್ಪನ ನುಂಗುತ್ತಿನಿ ಅಂತಾ ಹೋದ್ಲು
ತಾಯಿ
ಊರು ಊರ್‍ನೊಳಗೆ ಭಕ್ತರು ಮಣೇವು ಕಟ್ತಾರೆ
ಮಣೇವು ಕಟ್ಟುವಾಗ
ಪರಾಕು ಪರಾಕು ಅಂತಾ ಅದೆ ರೂಢಿಯಾಗಿತ್ತು
ಈಗಲು ಅಂಗೆ ತಿಳ್ಕಂಬುಟ್ಟು
ನೀನು ಅವುಳೆ ಎಂಬ ಗೀಲು ಮರ್ತುಬುಟ್ಟು
ಪರಾಕು ಪರಾಕು ಅಂದುಬುಟ್ಟೆ ಕಣಮ್ಮ
ತಪ್ಪಾತು
ಇನ್ನಂಗಾಂಬದಿಲ್ಲ ತಾಯಿ

ಇನ್ನೊಮ್ಮೆ ಪರಾಕು ಅಂತಾ ಅಂಬಾದಿಲ್ಲ
ನಡಿತಾಯಿ
ಮಣೇವು ಅಡ್ಡಬ್ಯಾಡಕಣಮ್ಮ
ಮುಂದುಗಡೆ ನೀನು ನಡಿ ಹಿಂದ್ಲಿಂದ ನಾನು ಬರ್ತಿನಿ
ಅಂದಾ ಪುರ್ಲಳ್ಳಿ ಭೂತಾ
ತಾಳೆ ದುರಿಗಿ ಮಣೆವು ತಿರುಗುತಿದ್ಲು
ಮಣೆವು ಆಡ್ತಾ ಆಡ್ತಾ ಆಡ್ತಾ
ತಾಳೆ ದುರ್ಗಿ ವಿಪ್ರೀತವಾಗಿ ಆಘಾತವಾಗಿ
ಜುಂಜಪ್ಪನ್ನ ನೋಡ್ತ ಅವುಳೆ ತಾಳೆ ದುರಿಗಿ
ನುಂಗದಿಕೆ
ಆಘಾದ ವಿಷರೂಪವಾಗಿ
ಜುಂಜಪ್ಪನ್ನ ದುರ್ಗಿ ನೋಡುವಾಗ
ಪುರ್ಲಳ್ಳಿ ಭೂತ ಏನು ಮಾಡ್ದಾ
ಈ ಭ್ರಷ್ಟ ಮುಂಡೆ
ನಮ್ಮ ಹಿರಿಯಣ್ಣನ್ನ ನುಂಗಿ ಬಿಡ್ತಾಳೆ
ಇಪಿರಿತಾ ಆಘಾದವಾಗಿ ನೋಡ್ತಾಳೆ
ಅಂದು ಪುರ್ಲಳ್ಳಿ ಭೂತಾ
ತಾಳೆ ದುರ್ಗಾಮ್ಮನ ಮೇಲೆ
ಏಳು ದೊಂಬುರ ಗಣೆ ಉದ್ದ
ಬೆಳೆದುಬಿಟ್ಟು ಪುರ್ಲಳ್ಳಿ ಭೂತಾ
ಆಲದ ಮರದ ಮೇಲಿದ್ದವುನ್ನ ಜುಂಜಪ್ಪನ್ನ
ಬೆನ್ನಿಂದುಕೆ ಬಿಟ್ಟುಗಂಡು
ದುರುಗಿ ಮೇಲೆ ಏಳು ದಂಬೊರುಗಣೆ ಉದ್ದ
ಆಕಾಸಕೂ ಮುಗುಲಿಗೂ ಬೆಳ್ದುಬುಟ್ಟ ಭೂತಪ್ಪ
ಕಣಕಾಲುತವುಳಿಂದ ಮಣಕಾಲು ತಕ್ಕ
ತಲೆ ಬಯಿತಲೆವರಿಗೆ ನೊಡಿದ್ರು ಬರೆ ಕಣ್ಣು ಗುಡ್ಡೆ
ಕ್ವಾರೆ ಹಲ್ಲು
ಬಿಳೇನಾಮ
ವಿಪರೀತ ವಿಕಾರಿ ರೂಪಿನಿಂದ ನಿಂತಿದ್ದ ಭೂತಾ
ಆಕ್ಕರ್ಸಿ ಆರ್ಭಟ ಮಾಡ್ತ ದುರ್ಗಿ ಬಂದ್ಲು
ಆಕರ್ಸಿ ಅರ್ಭಟ ಮಾಡ್ಕಂಡು ದುರ್ಗಿ ಬತ್ತಿದಂಗೆ ನೋಡಿದ್ರೆ
ಎಲ್ಲಿಂದೆಲ್ಲಿಗೆ ನೋಡಿದ್ರು

ಪುರ್ಲಳ್ಳಿ ಭೂತನೆ ನಿಂತುಬಿಟ್ಟವುನೆ
ನೋಡಿ
ದುರ್ಗಿ ಭಯಂಕರವಾಯ್ತು ದುರ್ಗಿಗೆ
ಭಯಂಕರವಾದ ತಕ್ಷಣ
ಆಗ ಜುಂಜಪ್ಪನಿಗೆ ಹೇಳ್ತಾಳೆ ತಾಳೆ ದುರ್ಗಿ
ಹಿರಿಯಣ್ಣ
ನಿಮ್ಮ ಮಾವುಗಳು ಮಾತುಕೇಳಿ
ನಿನ್ನ ಮೇಲೆ ಯುದ್ಧಕ್ಕೆ ಬಂದುದ್ದು ಬಹಳ ತಪ್ಪಾತು
ಕರಕಳಪ್ಪ ನಿನ್ನ ಭಂಟುನ್ನ
ಹೆಣ್ಣು ಮಗುವಿನ ಮೇಲೆ
ಕಾರ್‍ಯಮಾಡುಸುಬ್ಯಾಡ ಅಂದ್ಲು ತಾಳೆ ದುರ್ಗಿ
ಆವಾಗ ಪುರ್ಲಳ್ಳಿ ಭೂತ ಹೇಳ್ತನೆ
ಯೇ ಭ್ರಷ್ಟ ಮುಂಡೆ,
ಈ ನರಲೋಕದಲ್ಲಿ ನಿನ್ನ ಮಿಂಡವನೆಂಬುದು ಗುರ್ತಿಲ್ಲದೆ
ಈರೇಳು ಲೋಕುಕೆ ದೈವುನ್ನ
ಹರಿಯಪ್ಪಾಲದ ಮರವನ್ನತ್ತಿಸಿ
ಇದುವಾಗಿ ಕಾಡ್ತ ಇದ್ದಿಯೇನೇ

ಅಲ್ಲೆನು ಮಾತಾಡುತಿ
ತಿರುಗೆ ಭ್ರಷ್ಟ ಮುಂಡೆ
ಮೋಣೇವಂದು
ತಾಳೆ ದುರುಗಿ
ಪುರಲ್ಲಳ್ಳಿ ಭೂತಾ
ಅಡ್ಡು ಮಣೆವು ತಿರುಗವುರಣ್ಣ
ಅಡ್ಡು ಮಣೇವು
ಅಡಲಾ ಭ್ರಷ್ಟಮುಂಡೆ
ಅಲ್ಲೇನು ಮಾತಾಡುತೀಯಾ
ಈ ನರುಲೋಕದಲ್ಲಿ
ನಿನ್ನ ಮಿಂಡನವನಂದು ಗುರುತಿಲ್ಲದೆ
ಈರೇಳು ಲೋಕುದು ದೈವನ್ನ
ಅರಿಯಪ್ಪಾಲುದು ಮರವನ್ನತ್ತಿಸಿ
ಇದುವಾಗಿ ಕಾಡುತಿಯೇನೆ
ಭ್ರಷ್ಟಮುಂಡೆ

ತಿರುಗೆ ಮಣೇವಂದು
ತಾಳೆ ದುರ್ಗಿ ಪುರಲಳ್ಳಿ ಭೂತಾ
ಅಡ್ಡು ಮಣೇವು ತಿರುಗವುರಮ್ಮ
ಈ ನರುಲೋಕದೊಳಗೆ ನಿನ್ನ
ಯಾವ ದೇವನ ದೇವತೆರೋ
ಕಾಪಾಡುತ್ತಾರೆ ನೋಡುತಿನಿ
ಭ್ರಷ್ಟಮುಂಡೆ ಅಂದು
ತಾಳೆ ದುರುಗಿ
ಪುರಲಳ್ಳಿ ಭೂತಾ
ಅಡ್ಡು ಮಣೇವು ತಿರುಗೋವುರಮ್ಮ
ಮಣೇವಾಡುತಾ
ಆಡುತ ಪುರುಲಳ್ಳಿ ಭೂತಾ
ಬಲಮುರಿ ದೊಣ್ಣೆ ತಕ್ಕಂಡು
ಆಗಲೇ
ದುರ್ಗಿ ಸೊಂಟುಕು ಸ್ವಾಮಿ
ಅಕುರಿಸಿ ಅರ್ಭಟ ಮಾಡವರಣ್ಣ
ಕೇಳೆ ಭ್ರಷ್ಟ ಮುಂಡೆ
ಈ ನರಲೋಕದೊಳುಗೆ
ಆಆಹಾಹಾಹಾ

ತಾಳೆದುರುಗಿ
ಪುರಲಳ್ಳಿ ಭೂತಾ
ಆಕರ್‍ಸಿ ಆರ್ಭಟ ಮಾಡುತಾನೆ
ಕೇಳೆ ಭ್ರಷ್ಟ ಮುಂಡೆ
ಈ ನರುಲೋಕದೊಳುಗೆ
ನಿನ್ನ ಯಾವಾ ದೇವನ್ನ ದೇವತೆರು
ಕಾಪಡುತಾರೆ ನೋಡ್ತಿನಿ
ಭ್ರಷ್ಟ ಮುಂಡೆ
ತಿರುಗೆ ಮಣೇವಂದು
ತಾಳೆದುರುಗಿ
ಪುರುಲಳ್ಳಿ ಭೂತಾ
ಮಣೆವಾಡುತಾ ಆಡುತಾ
ಅಕ್ಕರ್‍ಸಿ ಹಾ....... ಎಂದು ॥



ಭೂತಪ್ಪನಿಂದ ತಾಳೆದುರ್ಗಿಯ ಮರ್ದನ

ಪುರ್ಲಳ್ಳಿ ಭೂತಾ
ಬಲೆಮುರಿ ದೊಣ್ಣೆಯಿಂದಾ
ಜಗ್ಗಿಸಿ ದುರುಗಿನೊಂದೇಟು
ಭೂಮಿಗೊಡೆದಾ
ಆಗ ದುರುಗಿ
ಮೂರುತುಂಡಾಗಿ ಬಿದ್ದೋದ್ಲು ತಾಳೆ ದುರುಗಿ
ಒಂದು ತುಂಡನ್ನ ಎತ್ತಿ ಮಲ್ನಾಡು ದೇಶಕ್ಕೆ ಎಸ್ದು
ಭ್ರಷ್ಟಮುಂಡೆ
ಮಲ್ನಾಡು ಚೌಡಿಯಾಗಿರು ನೀನು ಎಂದ
ಇನ್ನೊಂದು ತುಂಡನ್ನ ಭೂಮಿಗೆ ತುಣುದು
ಕೂದ್ಲಿಡುದು ಮೇಲೆತ್ತಿ
ನಿನ್ನ ಕೂದ್ಲು ಪ್ರಪಂಚದ ಮೇಲೆಲ್ಲ
ನೊಸೆಗೆಂಟೆಯಾಗಿ ಬೆಳೆಯಲಿ ಎಂದಾ

ಇನ್ನೊಂದು ತುಂಡಾ
ಸುಟ್ಟು ಬೂದಿ ಮಾಡಿ
ಗಂಗೆ ಕೂಡಿ ಸದ್ಗತಿ ಹೊಂದಿಸಿ,
ಬಂದಾನಣ್ಣ ಪುರಲಳ್ಳಿ ಭೂತಾ ಶಿವುನಿಗೋ ॥

ಮೊದಲೆ ನೆನುದೇವೋ
ಮದುನಾರಿ ವೀರನಾ
ಮದುಗುದು ಗುಡ್ಡದಕಲಿಬೀರೋ
ಮದುಗುದು ಗುಡ್ಡದ
ಕಲಿಬೀರು ಜುಂಜಪ್ಪನ
ಮೊದಲೇ ಸಲ್ಲಾಗಿ ನೆನುದೇವೋ ॥

❑ ❑ ❑

## ೬.೪ ಜುಂಜಪ್ಪನ ಸಾವು

ಇನ್ನೊಂದು ಎಂಟು ದಿನ ಬಿಟ್ಟು ಅಣ್ಣಗಳು
ವೋತಾರೆ ತಂಗಿ ಮನೆಗೆ ।
ಏನಮ್ಮ ಚಿನ್ನಮ್ಮ ನಿನ್ನ ಮಕ್ಕಳುಗಳನ್ನ
ನೋಡಾಕಾಗಾದಿಲ್ಲ । ಕೈಗೊಂದಾಳು ಮೈಗೊಂದಾಳು
ತಾಯಿ ಚಿನ್ನಮ್ಮ । ಕರಕಂಡೇ ಬಂದು
ನೀರಾನ ಉಯ್ಯಾಕಿಲ್ವ ।
ಆಳು ಬಿಟ್ಟು ಜುಂಜಪ್ಪನ್ನ ಕರಸಿಕಂತೀನಿ ಹೋಗ್ರಣ್ಣ

ಆಳು ಕಳಿಸಿ ಚಿನ್ನಮ್ಮ ಜುಂಜಪ್ಪಗೇ ।
ಯಾಕೋ ಮಾರ ಮೈಲಣ್ಣ ತಾಯಿ ।
ಆಳ ಕಳಿಸವಳೇ । ರಾತುರಿ ಕನಸು
ಬಿತ್ತು ನನಿಗೇ

ತಂಗಡೀ ಗಿಡವೇ ಕಿತುಕೊಂಡೆ ಬರುವೋದು ।
ಕೆಂಗಾಳಿ ಬರವು ಬಂದಂಗೆ ಕಾಣೋದು ।
ಜ್ವಾಕೆ ಕಣೋ ಮಾರ ಮೈಲಣ್ಣ ।
ದನವೀನತಾವ ।
ನಾನು ಹಿರಿಯಟ್ಟಿಗೋಗಿ ಬರುತೀನಿ ।
ವೋತಾನೆ ಜುಂಜಪ್ಪ ಹಿರಿಯಟ್ಟಿಗೇ ।
ಹಾದಿಗಡ್ಡಗೋಳ ವೋಗಿ ಮಾವಗಳು ।
ಜುಂಜಪ್ಪನ ಮುಂದಕ್ಕೆ ಬಿಟ್ಟುಕೊಂಡು
ಮಾವಗಳು ಬತ್ತಾರೆ ದನವೀನತಕ್ಕೇ ।

ಮಾರ ಮೈಲಣ್ಣ ನಾವು ಎತ್ತಿನ
ಗೂಡಾಗೆ ದ್ಯಾವ್ರಡುಗೆ ಮಾಡಬೇಕು ।
ನಮ್ಮೋರಿ ವೋತಾದೆ ಸೀರ್‍ಯದ ಸಂತೆಗೇ ।
ನಮ್ಮೋರಿ ಒಡಕೊಂಡು ವೋಗೆಂದ ಜುಂಜಪ್ಪ ।

---

ಹಾಡಿದವರು : **ಮಾಸಯ್ಯ** (ಕಾಡುಗೊಲ್ಲರು)
ಸಂಪಾದನೆ : **ಸಿದ್ಧಗಂಗಯ್ಯ ಕಂಬಾಳು**
ಪ್ರಕಟಣೆ : ಮಾತಾಡು ಮಲ್ಲಿಗೆ, ಬೆಂಗಳೂರು ವಿ.ವಿ., 1973

ನಿಜವೇನು ಮಾವಗಳಿರಾ ಈ ಮಾತು ।
ಈಗೀಗೋದ ಹಿರಿಯಟ್ಟಿಗೆ ಒಡಕೊಂಡೋಗಂತ
ಯೇಳಿದ ।

ತತ್ತರ್ರಿ[243] ಮಾವಗುಳ ಹಗ್ಗಾವ ।
ಏಳು ಜನ ಏಳು ನೂಲಗ್ಗ ಕೊಟ್ಟರು ।
ಏಳು ನೂಲಗ್ಗ ವೋರಿಗಾಕಿದ್ರು
ಮಾರ ಮೈಲಣ್ಣ ।
ಮುಂದೆ ಬಂದ್ರೆ ಆಯಬೇಡ
ಯಿಂದೆ ಬಂದ್ರೆ ವದೀಬ್ಯಾಡ ।
ವೋಗಿಬಾರಪ್ಪ ಮಾವಗಳ ಮನೇತಂಕಾ[244] ।

ವೋರಿ ಕೈಗೆ ಹಿಡಕೊಂಡು
ಮಾರ ಮೈಲಣ್ಣನ ಕಾದಮಳ್ಳಾಗೆ ಕಾಲು ಕಟ್ಯಾಕಿ ।

ವೋರಿ ವಡೀತಾರೆ ಚೇಳೂರಕ್ವಾಟಿಗೆ ।
ಕಬ್ಬುಣದ ಸರಪಣಿನ್ಹಾಕಿ ।
ಕಲ್ಲು ಕಂಬಾಕ್ಹಾಕಿ । ಬಿಗೀತಾರೆ ।
ನೂರೊಂದು ಬಂದೂಕ್ಕೆ[245] ಗುಂಡಾಕಿ ।
ವೊಡಿರಲಾ ನಾಯ್ಕ ಮಕ್ಕಳಿರಾ
ವೋರಿ ಪ್ರಾಣ ಕಳಿರೋ ।
ಪ್ರಾಣ ಕಳದು ಬ್ಯಾಗ ತಿನ್ನಿರಾಲಾ ।

ಚಿನ್ನದ ಬಟ್ಟಲದಾಗೆ ಎಳ್ಳಿನ
ಸೀಗೇಕಾಯಿ । ಉಗುರೆಣ್ಣೆ
ಒತ್ತುತಾರೆ ಜುಂಜಪ್ಪಗೇ ।
ಬೆಳ್ಳಿ ಬಟ್ಟಲದಾಗೆ ಅಳ್ಳೆಣ್ಣೆ[246]
ಸೀಗೆಕಾಯಿ ಉಗುರೆಣ್ಣೆ
ವತ್ತುತಾರೆ ಜುಂಜಪ್ಪಗೇ ।

ಚಿನ್ನದ ಬಟ್ಟಲದಾಗೆ
ವಳವೆಲ್ಲ ವೋರಿ ।
ಬೆಳ್ಳಿ ಬಟ್ಟಲದಾಗೆ
ವಳವೆಲ್ಲ ವೋರಿ ।

ಕಾದ ನೀರ ಕಾಲಾಗೆ ವದ್ದು ಜುಂಜಪ್ಪ ।
ಪಿಳ್ಳುಗೋವಿ ತಕ್ಕೊಂಡು ಸೂಜಿಗಲ್ಲ

ಬೆಟ್ಟದ ಮ್ಯಾಕೆ[247]
ಒಂದೇ ಸುಗುಲ ತಿರುವೂತಾನೆ ।
ಚೇಳೂರ ಕ್ವಾಟೇಗೆ ವೋರಿ
ವುಟರೀಕೆ ಹಾಕುತಾದೆ ।
ಏನ್ರಲಾ ನಾಯ್ಕ ಮಕ್ಕಳೀರ ।
ವೋರಿ ವುಟ್ರುಕೆ ಹಾಕತಾದೆ ।
ಇನ್ನೊಂದ್ಯೆವತ್ತು ಬಂದೂಕ್ಕೆ ।
ಗುಂಡಾಕಿ । ಗಡಾನೆ ವಡದು ।
ವೋರಿ ಪ್ರಾಣ ಕಳದು ।
ತಿನ್ನಿರಲ ನಾಯ್ಕ ಮಕ್ಕಳೀರ ಬ್ಯಾಗಾನ ।

ಇನ್ನೊಂದೆ ಸುಗುಲ ತಿರುವಿದರೆ ಜುಂಜಪ್ಪ ।
ಕಲುಕಂಬ ಮುರದು ಕಬ್ಬುಣದ ಸರಪಣಿ ಮುರದು ।
ಚೇಳೂರ ಕ್ವಾಟೆ ತೆನೆ ಮುರಿದು । ಸಣಬನಳ್ಳಿ
ಊರ ಬಂಡೆ ಮ್ಯಾಕ್ಕೆ ನೆಗೀಬೇಕು ।

ಬಂಡೆಮ್ಯಾಕೆ ನೆಗೆದಾರೆ ವೋರಿ ।
ಯಾರ ಮಾತ ಕೇಳಿ ಊರಿಗೆ ನೀನೋದೆ ।
ಏಳು ಮಡುಗಾನೆ[248] ಮುಣುಗಿ ।
ಏಳು ಮಡುನಾಗೆದ್ದು ಬಾರೋ ।
ನಿನ್ನ ಏಕಸಮುದ ಮಾತಾಡುತೀನಿ ।

ಆಕಡೆ ವೋಗಿ ಸವರಿದರೆ ಮಯ್ಯ ।
ವೋರಿ ಮೈಗೆ ವಡದ ಗುಂಡು ।
ಒಂದು ಬಾಂದಗ ಬಿದ್ದಂಗೆ ಬೀಳೋದು ।
ಈಕಡೆ ಬಂದು ಮೈ ಸವರಿದರೆ ।
ಒಂದು ಬಾಂದಗ[249] ಬಿದ್ದಂಗೆ ಬೀಳೋದು ಗುಂಡು ।

ವೋರಿಕರ ಕೊಂಡು ಬರುತಾನೆ
ದನವೀನ ತಾಕ್ಕೆ[250]
ಕಾದ ಮಳ್ಳಾಗೆ ಕಾಲು ಕಟ್ಯಾಕವ್ರೆ
ಕಟ್ಟು ಸುರಗಿ ತಕ್ಕೊಂಡು ಕಟ್ಟೈದ
ಉಯ್ದು ।

ನನ್ನ ಬೆನ್ನಿಂದೆ ಹುಟ್ಟಿದೋರೇನೋ
ಮಾರ ಮೈಲಣ್ಣ ನೀವು ।

ಮೋಸಮಾಡಿ ವಡೆದರು ಮಾವಗಳು ಅಣ್ಣಯ್ಯ ।
ದನವಾನೆ ಕರಕೊಂಡು ಹಿಂದಿದ್ದ ಜಾಗಾಕೆ ಬರುತಾರೆ ।

ಇನ್ನದಿನ್ನೈದು ದಿನವೇ ಬಿಟ್ಟು ಮಾವಗಳೇ
ಬರುತಾರೆ । ಏನೇ ಚಿನ್ನಮ್ಮ
ಎತ್ತಿನ ಗೂಡಾಗೆ ದ್ಯಾವ್ರಡಿಗೆ ಮಾಡಬೇಕು ।
ಸೋದ್ರಳಿಯರ ಬಿಟ್ಟು ದೇವ್ರ
ಮಾಡಿದರಂದ್ರೆ । ಜನಗಳು ನಗತಾರೆ ।
ನಿನ್ನ ಮಕ್ಕಳನ್ನ ಕಳಿಸಿ ಕೊಡಬೇಕು

ಕಳಿಸಿಕೊಡತೀನಿ ಹೋಗಿರಣ್ಣಯ್ಯ
ಅಂಗೇ ಬರುವುದಿಲ್ಲಮ್ಮ ಮಕ್ಕಳು ।
ಬಲಗೈಗೆ ಬಾಸೆ ಕೊಡಮ್ಮ ಕಳಸಿಕೊಡತೀನಂದು ।

ಬಲಗೈಯ ಬಾಸೆ ಕೊಟ್ಟಾಳೆ ತಾಯಿ ಚಿನ್ನಮ್ಮ ।
ವೋತಾರೆ ಅಣ್ಣಗಳು ವೋತಾರೆ ।
ಹತ್ತೂಸಾವರ ಹೊನ್ನ ದಟ್ಟಿಗುಯ್ಸಿಕಂಡು ।
ಹತ್ಯಾರೆ ಚಿನ್ನಣ್ಣ ದುರುಗಾವ ।
ದುರುಗದ ಕುಂಬಾರ್ರೀಗೆ ಸಿಕ್ಕ
ಸೋರ್ಯಾಗೆ[251] ಏಳಪದರ ಮಾಡಿಸ್ತಾರೆ ।
ಆರು ಸಾವಿರ ಹೊನ್ನ ದಟ್ಟೀಗುಯ್ಯಕೊಂಡು ।
ಏರ್ಯಾನೆ ಚಿನ್ನಣ್ಣ ದುರುಗಾವ ।
ದುರುಗಾದ ಹೊಲೆಯರಿಗೆ ಚಿಕ್ಕಚ್ಚಡ[252]
ಪಾಗಿನಾಗೆ[253] ಏಳಪದರ ಮಾಡಿಸ್ತಾರೆ ।
ಬಂದೂ ಎತ್ತಿನ ಗೂಡಾಗೆ ಅಡಿಗೆ ಮಾಡುತಾರೆ

ಅಡಿಗೇನೆಲ್ಲ ಮಾಡಿ ಪ್ರಜಪಾಲಕರೆಲ್ಲ ಕೂಡವ್ರೆ ।
ಬಾರೋ ಜುಂಜಪ್ಪ ನಿಮ ಮಾವಗಳು ।
ಎತ್ತಿನ ಗೂಡಾಗೆ ದೇವ್ರಡಿಗೆ ಮಾಡವ್ರಂತೆ ।
ವೋಗಿ ಬನ್ರೊ ಜುಂಜಪ್ಪ ।

ವಳ್ಳೇದಾತೇಳಮ್ಮ ನಾವಿರೋತಾವೆಲ್ಲ
ನೀನೇ ಇರೋವಂತೆ ।
ಯಾಕೋ ಜುಂಜಪ್ಪ ಇಂತ ಬ್ಯಾಸರ
ಮಾತಾಡುತೀಯ ।

ಇನ್ನೇನ ಮಾಡಾಲೆ ತಾಯಿ ಸಿಕ್ಕಲ
ಸ್ವಾರ್‍ಯಾಗೆ[254] ಹಾಳ ದತ್ತೂರಿ ಮದ್ದು
ಉಕ್ಕುಕ್ಕಿ ಬೇಯುತಾದೆ ।

ವೋಗಬ್ಯಾಡಿ ಜುಂಜಪ್ಪ ವೋಗಬ್ಯಾಡಿ ।
ಬಾಸೆಗೆ ತಪ್ಪಿದೋರು ಏಸು ದಿನ ಇರತೇವಮ್ಮ ।
ವೋತೀವೆಂದೆ ವೋತಾರೆ ಮೂರು ಜನರೂ ।

ಯಿಂದೆ ಜೂಲು ನಾಯಿ ವೋತಾದೆ ।
ಸ್ವಾದರಳಿಯರು ಬರಲಿಲ್ಲೆಂದಾಯ

ನೋಡುತಾರೆ ಮಾವಗಳು ।
ಕಣ್ಣಿಂದ ಕಂಡರು ಮಾವಗಳು ।
ಕರಕೊಂಡೋಗಿ ನಡುಪಂತ್ಯಾಗೆ ಕುಂಡರಿಸಿ ।

ಎಲ್ಲಕೂ ಊಟ ನೀಡಿಕೊಂಡು ಬರುತಾರೆ ।
ಇವರು ಮೂರು ಜನತ್ತಾಕೆ ಬರುವೊತ್ತಿಗೆ ।
ಬೇರೆ ಒಬ್ಬ ಬಂದು ನೀಡುತಾನೆ ಅನ್ನಾನ ।
ಆಚೆಗೆ ವೋಗಿ ಕೈ ತೊಳಕಂತಾನೆ ।
ಪ್ರಜಪಾಲಕರಿಗೆಲ್ಲಾ ಒಬ್ಬ ನೀಡಿಕೊಂಡು ವೋತಾನೆ ।
ಸಾರುಬಿಟ್ಟುಕೊಂಡೇ ಬರುತಾರೆ ।

ಇವರು ಮೂರು ಜನತ್ತಾಕೆ ಬರುವಾಗ್ಗೆ
ಒಬ್ಬ ಬೇರೆ ಸಟುಗ ತಂದು
ಇಸದೆಸರಿಗೆ ಸೌಟಿಕ್ಕಿ ಸಾರಬಿಟ್ಟು
ಆಚೆಗೋಗಿ ಕೈ ತೊಳಕಂತಾನೆ ।

ಪ್ರಜಾಪಾಲಕರಿಗೆಲ್ಲ ಒಬ್ಬರೆ ನೀಡುತಾರೆ ।
ಪಂತಿ ಕೂಡಿತು ಬಿಡಿರಪ್ಪ ಕೈಗಳ ।
ಮೂರು ತುತ್ತ ಮಿದ್ದು ಜೂಲು ನಾಯಿಗೆ
ಹಾಕಿದ ಜುಂಜಪ್ಪ ।
ಮ್ಯಾಕ್ಕಾರಿ ಬಿದ್ದು ಪ್ರಾಣ ಬಿಡತು
ಜೂಲುನಾಯಿ ।

ನೋಡಪ್ಪ ಮಾವಗಳು ಮಾಡಿರುವ ಮಾಟಗಾನ ।
ಪ್ರಜಪಾಲಗರಿಗೆಲ್ಲ ಉಣಬ್ಯಾಡೀಂತ ಹೇಳಿದ್ರೆ ।

ನಮ್ಮ ಮೂರು ಜನಕೆ ಕಾಣಪ್ಪ ಈ ಅಡುಗೆ ।
ಎರಡು ಕೈ ಎರಡು ತೋಳಿನಾಗೆ ಮಾರ ಮೈಲಣ್ಣನ
ತಬ್ಬಿಕೊಂಡು । ಮೂವರ ಮುಂದಲೆಡೆಯ
ಎಳಕೊಂಡು ಜುಂಜಪ್ಪ ।
ದಗ್ಗಾಲಮಂಡಿ ಹಾಕ್ಕೊಂಡು । ಸಲುಸ್ತಾನೆ ಜುಂಜಪ್ಪ ।

ಎಲ್ಲ ಆತೂನು[255] ಆಚಿಗೆ ಎಲೆ ತಗುದಾಕಿ
ಮಾರ ಮೈಲಣ್ಣನ ಬಿಟ್ಟು ಕೈತೊಳ
ಕಣಕ್ಕೋತಾನೆ ಜುಂಜಪ್ಪ ।

ಹುಡುಗಾರು ವೋಗಿ ಉಂಡೆಲೆಯ ನಾಕುತಾವೆ ।
ಕೈತೊಳಕಂಡು ಈಚಿಗೆ ಬಂದಾರೆ ಜುಂಜಪ್ಪ ।
ಉರುದು ಬೆಂಕಿ ಬೀಳುತಲ್ಲಣ್ಣ ಹೊಟ್ಟೆ ।

ಯಾಕೋ ಮಾರ ಮೈಲಣ್ಣಾಂತ ಕೇಳುತಾನೆ ಜುಂಜಪ್ಪ ।
ನೀನು ಬಿಸಾಕಿದ ಎಲೆಯ ವೋಗಿ ನಾಕಿದೋ ಕಾಣಣ್ಣ ।
ಒಳ್ಳೆ ಮೋಸ ಮಾಡಿದರಲ್ಲೋ ಮಾರ ಮೈಲಣ್ಣ ।
ಹೊನ್ನಟ್ಟಿ ಆಲಗೌಡನ ಹಾರಕದ ಬಣವೆ ।
ಹನ್ನೆರಡು ಮಾರು ಇರುವೋದಂತೆ ।
ಹಾರಕದ ಬಣವೇ ಗೋಗಿ ಮೂವರು ಕೂಕಂಡರಂತೇ ।


ಮಾರ ಮೈಲಣ್ಣನ ಹೊಟ್ಟೊಡೆದು ಬೇಯತಾದೆ ।
ಹಾರಕದ ಬಣವೆ ।
ವೊತ್ತಿಮುಂತೆ[256] ಎದ್ದು ಹೊನ್ನಟ್ಟಿ ಆಲಗೌಡ ಬರುತಾನೆ ।
ತಾಯಿ ಚಿನ್ನಮ್ಮನೂ ಬರುತಾಳೆ ।
ಮೂರು ಜನ ಹಾರಕದ ಬಣವ್ಯಾಗೆ ಬೆಂದು
ಕಮರೆದ್ದುಹೋಗ್ಯವರೆ ।
ತಾಯಿ ಚಿನ್ನಮ್ಮನು ಹೊನ್ನೆಟ್ಟೇಲೆ ಗೌಡ ।
ಬೂದೀನ ತಕ್ಕೊಂಡೋಗಿ ಗಂಗಮ್ಮಗೆ ಬಿಟ್ಟು ।
ಅವರಮನೆಗವರೇ ವೋತಾರೆ ।

ಸತ್ತೇಳದಿನಕೆ ವುಟ್ಟುತಾರೆ ವೋತಾರೆ ಮಾವಗಳ ಮನೆತಾಕೆ ।
ಬಿಡಿರೋ ಮಾರ ಮೈಲಣ್ಣ ಬೆಂಕಿ ಬಾಣಾನ ।
ಮಾವಗಳ ಮನೆಯೆಲ್ಲ ಬೆಂದು ಕಮರೆದ್ದು ಹೋದ್ದೋ ।
ತಾಯಿ ಮಾರಕ್ಕ ಅರೆಯ ಬಂಡೆ ಮ್ಯಾಗೆ ನೆಲ್ಲಕುಟ್ಟುತಾಳೆ ।

ತುಂಬಿದ ಬಸುರಿ ಮಾರಕ್ಕ ।
ಎದ್ದುನೋಡೆ ಚಿನ್ನಕ್ಕ ನಿನ್ನ ದೆಸೆಯೋರ ।
ಒದ್ದಾಡಿ ತಿಂತಾವೆ ರಣದ್ದು ।
ಇದ್ಯಾರೋ ಎಲ್ಲಾ ಬೆಂದು ಕಮ್ರೆದ್ದು ವೋಗ್ಯವರೆ ।
ನಮ್ಮ ಮ್ಯಾಲೆ ಪದವ ಹೇಳುತಾರೆ ಮಾರ ಮೈಲಣ್ಣ ।
ಅರೆಯಬಂಡೆ ಮ್ಯಾಕೆ ವೋಗಿ ನೋಡಿದರೆ ತಂಗಿ ಮಾರಕ್ಕ ।
ನಮ್ಮ ಪೀಳಿಗೆ ಇರುವೊತ್ತಿಗೆ ನಮ್ಮನ್ನ ಕೊಂಡಾಡುತಾಳೆ ।
ನಮ್ಮ ಪೀಳಿಗಕ್ಕಿಂತ । ನಿನ್ನೊಂದೆ ಪೀಳಿಗೆ ಹೆಚ್ಚಾಗಲಮ್ಮ ।
ಹಸ್ತನಿಕ್ಕೇ ಬರುತಾನೆ ತಂಗಿ ಮಾರೆಕ್ಕಗೇ ಜುಂಜಪ್ಪ ।

❑ ❑ ❑

243. ತನ್ನಿರಿ 244. ಮನೆತನಕ 245. ಬಂದೂಕಕ್ಕೆ 246. ಹರಳೆಣ್ಣೆ 247. ಮೇಲಕ್ಕೆ 248. ಮಡು 249. ಗುಡ್ಡೆ 250. ಹತ್ತಿರಕ್ಕೆ 251. ಮಡಕೆಯಲ್ಲಿ 252. ದುಪ್ಪಟ 253. ಪೇಟ 254. ಮಡಕೆಯಲ್ಲಿ 255. ಆದಮೇಲೆ 256. ಮುಂಜಾನೆ.



**ಸಹೋದರರೊಂದಿಗೆ ಜುಂಜಪ್ಪನ ಸಾವು**

## ೬.೫ ಜಾಂಡೇವ ಎತ್ತಿಸಿರೋ

ನಿನ್ನೇಳು ಅಟ್ಟೇರು[1] ಕೊಟ್ಟಂತ
ಜಂಡೇವ[2] ಎತ್ತಿರಿಸೊ ।
ನಿನ್ನಟ್ಟಿ ಮ್ಯಾಲೊಂದು ಆಡೊ ।
ಅದ್ದಿಗೆ ಕೋಳಿಪಿಳ್ಳೆ ಕೊಡೋದಿಲ್ಲ ।

ಇರಿಯಟ್ಟಿ[3] ಜುಂಜಪ್ಪನ ಕೂಟೆ ।
ಬುಟ್ಟ[4] ಸಿತ್ತೈಯ್ಯ ಮಾತಾ ।
ಏನೇ ಸಿತ್ತವ್ವ ನಿಮ್ಮಣಗೊಂದ
ಮಾತ ಏಳಿ ಬಾರವ್ವೋ ।

ಏಳಟ್ಟೇರು ಕೊಟ್ಟ ಜಂಡವ
ಎತ್ತಿರಿಸೆಂದಾ । ಬ್ಯಾಡಕಣೋ
ಇರಿಯಟ್ಟಿ ಮಾಗುರುವೆ ಜುಂಜಪ್ಪ ।
ನಿನ ಮಾತ ಕೇಳದೋನು ನನ ಮಾತ ಕೇಳುತಾನ ।

ಪಾವು ರಕುತ ಪಾಲುಮಾಡಿ
ಕೊಂಡು ಬಂದಿದ್ದೀ । ನಿಮ್ಮಣ್ಣ
ನಿನ ಮಾತ ಕೇಳುತಾನೋ ।

.................................

ಏನಣ್ಣ ಏಳಟ್ಟೇರು ಕೊಟ್ಟಂತ
ಜಂಡೆವ ಎತ್ತಿರಿಸಬೇಕಂತೆ ।
ನೂರುಂದು ಪುಷ್ಪವ ಕುಯ್ಕಂಡು ಬಂದೆ ।
ದೇವರ ತಲೆಮ್ಯಾಲೆ ಇಕ್ಕೇನು ನಾನು ।

ನಾನು ಹೇಳುವುದು ದೇವರೆ
ನಿನಕೂಟೆ । ಹೇಳುತೀನಿ
ಸಿತ್ತಿ ಈ ಕಲ್ಲು ಕಂಬಕ್ಕೆ
ಕಟ್ಟಿದಾ ಕಲ್ಲಯ್ಯ ।

---

ಹಾಡಿದವರು : **ಮಾಸಯ್ಯ**
ಸಂಪಾದನೆ : **ಸಿದ್ಧಗಂಗಯ್ಯ ಕಂಬಾಳು**
ಪ್ರಕಟಣೆ : ಮಾತಾಡು ಮಲ್ಲಿಗೆ, ಬೆಂಗಳೂರು ವಿ.ವಿ., 1973

ನಮ್ಮ ಗುರುತನಕೆ ಅವಮಾನ
ತಂದಾಳು । ಅಣಗುಳು ಸಿತ್ತೈವ್ವನ
ಕಲು ಕಂಬಕೆ ಕಟ್ಟವ್ರೆ ಸಿತ್ತಾನ ।
ಎಂಟೆಂಟು ದಿನಕೆ ಬರ್ತಾನೆ[5] ।

ಬರುತಾನೆ ತುಪ್ಪದ ಮಲ್ಲ
ಶೆಟ್ಟಿ । ಸಿತ್ತವ್ವನ ಮನೆ
ತುಪ್ಪಕೇ । "ಎಲ್ಲಿಗೋತಿಯೋ"
ಎಂತ ಕೇಳುತಾನೆ ।

ದೇವರು (ಜುಂಜಪ್ಪ) ಮಲ್ಲ ಶೆಟ್ಟಿನಾ ।
ಇಂದಕ್ಕೆ ತಿರುಗಿ ನೋಡಿದ ।
ತುಪ್ಪದ ಮಲ್ಲಶೆಟ್ಟಿ । ಮನೆ
ದೇವರಾಗಲಿ ಪರದೇವರಾಗಲಿ ।

ನನ ಕೂಟೆ ಮಾತಾಡ
ಬೇಕಂತ ಕೇಳುತಾನೆ ।
ಇರಿಯಟ್ಟಿ ಜುಂಜಪ್ಪ
ಎಲ್ಲಿಗೋತಿಯೋ ಮಲಶೆಟ್ಟಿ ।

ಸಿತ್ತವ್ವನ ಮನೆಗೆ ತುಪ್ಪಕೆ
ಓಗುತೀನಿ ಮಾಗುರುವೆ ಜುಂಜಪ್ಪ ।
ಅವರಣ್ಣಗುಳು ಕಲು[6] ಕಂಬಕ್ಕೆ
ಕಟ್ಟವ್ರೆ ಸಿತ್ತವ್ವನ ನೀನೋಗಿ ನೋಡೋ ।

ನೀನೋಗಿ ನೋಡಿ ಕಟ್ಟಿ
ರಿಯ[7] ಒಯ್ದು[8] । ಸಿತ್ತವ್ವನ
ಎಂಗೆ ಅರಿದೀಯಾ । ನಮ್ಮ
ಸಿತ್ತವ್ವನ ಕಟ್ಟಿ ಮೂರೆ ದಿನಗಳು

ಮೂರು ದಿನದ ಮುಕ್ಕಾಲುಗಳಿಗೇಗೆ ।
ತುರುಕರ ದಂಡು ಬಂದು ನಿನ ಮುಂದೆ
ಬೀಳುತಾದೇ ಒಡ್ಡರದಂಡು ಬಂದು
ನಿನ್ನಟ್ಟಿಗೆ ಬೀಳುತಾದೋ ।

ಕಾಕಿ[9] ದಂಡು ಬಂದು ಕಾಕಿ ಕೆರೆಗೆ
ಬೀಳ್ತಾದೆ । ದಂಡು ಬರದಿದ್ರೆ
ನನಗೇನ ಕೊಡುತೀಯ
ಎಂದ ತುಪ್ಪದ ಮಲಶೆಟ್ಟಿ ।

ದಂಡು ಬರದಿದ್ದರೆ ನಿಮ್ಮೆಂಡ್ರು
ಮಕ್ಕಳಿಗೆ ಕಸನೀರ ಆಕುತೀನಿ ।
ದಂಡು ಬಂದ್ರೆ ನನಗೇನ
ಕೋಡುತೀಯೋ ಸಿತ್ತಯ್ಯೋ ।

ಮುಂದಾಲ ಜನಿಗೆಯ ಕೊಡ
ಬೇಕು ದಂಡು ಬರದಿದ್ರೆ ।
ದಂಡು ಬಂದಾರೆ ಕೊಡುತೀನಿ
ಜುಂಜಪ್ಪ ಎಂದ ಮಲಸೆಟ್ಟಿಗೆ ।

ಇದಕೆ ಕಟ್ಟಡಕ[10] ಕರಾರು
ಆಗಬೇಕು ಮಲಶೆಟ್ಟಿ
ಕಸ್ತೂರಿ ರಂಗಪ್ಪ ದೊರೆಯ
ಕರಸಿದ್ರು ಮುರೋಡಿ[11]
ಸಿಕ್ಕಣ್ಣನ ಕರಸಿದರು ।

ಕಟ್ಟಡಕ ಕರಾರು ಬರಿತಾವ್ರೆ
ತುಪ್ಪದ ಮಲಶೆಟ್ಟಿ ಕಟ್ಟಕ
ಬರೆದು ಸಿತ್ತೈಗೆ ಕೊಡುತಾನೆ
ಹನ್ನೆರಡು ಗಂಟೆಗೆ ದಂಡು ಬರ್ತಾದೆ ।

ಕುದುರೆಗೂಟ ಕೆತ್ತಿಸಾಕೆ
ಸಿತ್ತೈಗೆ ಉಕ್ಕುಂ[12] ಬಂತು ।
ಅಣ್ಣನಾ ಅರಮನೆಯಾಗೆ
ತುಪ್ಪನ್ನ[13] ಉಂಡಿರುವುದಕ್ಕಿಂತ

ಕಂದುಗೆರೆಯ ಬೂದಾಳ
ಸೀಮೆಗೆ ಓತಾಳೆ ಸಿಕ್ಕವ್ವ
ಮಕ್ಕಳು ಮರಿಗಳ ಎತ್ತಿಕಂಡೇ
ಅವ್ವ ಕುರಿ ದನಗಳ ವಡಕಂಡೇ

ತಟ್ಟೆಡಗೆ[14] ತಲಿಮಾಲೆ ಇಟ್ಟು
ಕೊಂಡೇ ಓತಾಳೆ ಕಂದು
ಗೆರೆಯ ಬೂದಾಳ ಸೀಮೆಗೆ

ಸಿತ್ತಯ್ಯ ಏನಣ್ಣ ಸಿತ್ತವ್ವ
ತಲೆಯ ಮ್ಯಾಲೆ ತಟ್ಟೆಡೆಗೆ
ಒತ್ಕೊಂಡು ಓತಾಳೆ ಕಂದು
ಗೆರೆಯ ಬೂತಾಳ ಸೀಮೆಗೆ ।

ಓಗ್ರೋ ಕರೆದು ತನ್ನಿ ಇಂದಾಕೆ[15]
ಎಂದು ಹೇಳಿ ಕಳಿಸ್ತಾನೆ
ಸಿತ್ತಪ್ಪ । ಕಲ್ಲಯ್ಯ ಮಲ್ಲಯ್ಯ
ಬಾರಮ್ಮ ಎಂದು ಇಂದಾಕೆ ಕರಿತಾರೆ

ಇಲ್ಲ ಕಣೋ ಅಣ್ಣ ನಾನು
ಮುಂದಕ್ಕಿಟ್ಟ ಎಜ್ಜೆ[16] ನಾನು
ಇಂದಾಕೆ ತೆಗೆಯೋದಿಲ್ಲ
ಎಂದು ಏಳುತಾಳೆ ಸಿತ್ತವ್ವ ।

ಕೈ ಕಿತ್ತಾಕಿ ಸಿತ್ತವ್ವ ಮುಂದಕೆ
ನಡೀತಾಳೆ । ಆಲಿನಂತ
ಮಕವ ಬಟ್ಟಿನೋಟ[17] ಮಾಡಿ
ಕೊಂಡು ಇಂದಾಕೆ ಬರುತಾರೆ । (ಅಣ್ಣಗೂಳು)

ಏನಣ್ಣ ಬರುಲಿಲ್ಲ ಸಿತ್ತವ್ವ
ತಾನೇ ಒರುಟಾ[18] ಸಿತ್ತಪ್ಪ
ಕರಿಯಾಕೆ । ಮುಂದಕ್ಕಿಕ್ಕಿದ
ಎಜ್ಜೆ ಇಂದಕ್ಕಿಕ್ಕಲ್ಲ ಕಣಣ್ಣ ।

ಕೈ ಇಡಕೊಂಡು ಕರಿತಾನೆ
ಅಣ್ಣ । ಕೈಕಿತ್ತಾಕಿ ಮುಂದಾಕೆ
ನಡಿತಾಳೆ ಸಿತ್ತವ್ವ । ಅಣ್ಣ
ಇಂದಾಕೆ ತಿರುಗಿ ಬರುತಾನೆ ।

ಮಾತಿಗೆ ಮರಡಿ ರಂಗನ
ಗುಡ್ಡದಾಗೆ ಅವ್ನೆ । ಮಾತಿಗೆ
ರಂಗನ ಗುಡ್ಡದಾಗೆ ಮಾತಾಡುತಾನೆ
ಇರಿಯಟ್ಟಿ ಜುಂಜಪ್ಪೋ ।

ಇದು ಏನೋ ಮರಡಿ
ರಂಗಣ್ಣ । ನಮ್ಮ ಸಿತ್ತವ್ವ
ಕುರಿ ದನಗಳ ಒಡಕಂಡು
ಬರುತಾಳೆ । ದಾರಿ ಅಡಗೋಳ ಬಂದ ।

ಇರಿಯಟ್ಟಿ ಜುಂಜಪ್ಪ ।
ಏನೇನೆ ಸಿತ್ತವ್ವ ಇದು
ನಾಚಿಕೆ ಕೇಡು ಇಂದಾಕೆ
ಬರುವೇಯೋ ಇಲ್ಲಾವೊ ?

ಏನೇನೆ ಸಿತ್ತವ್ವ ನಿಮ್ಮ
ಅಣ್ಣನ ಬಿನ್ನಾಣದ ಮಾತ
ನಾನೇ ಕೇಳಬೌದೂss[19]
ನೀನು ಕೇಳಾಕಾಗಕಿಲ್ವಾ ।

ಇಲ್ಲಕಣಪ್ಪೋ ನಾನು
ಇಂದಾಕೋಗಕಿಲ್ಲೊ ।
ನನ್ನ ತಡಿಬ್ಯಾಡ ಹಿರಿ
ಯಟ್ಟಿ ಜುಂಜ್ಜಪ್ಪೋ ।

ಮಾತಿಗೆ ಮರಡಿ ರಂಗನ ।
ಗುಡ್ಡಕ್ಕೆ ಓಗುತಾನೆ
ಓತಾಳೆ ಸಿತ್ತವ್ವ ಕಂದಿ
ಗೆರೆಯ ಬೂತಾಳ ಸೀಮೆಗೆ

ತಟ್ಟೆಡಗೆ ಇಳಿಸವ್ಳೆ
ಸಿತ್ತವ್ವ । ಬ್ಯಾಗ ಬಡಗಿಯ
ಕರಸಿದ್ಲು ಸಿತ್ತವ್ವ ಅನ್ನೆರಡು
ಅಂಕುಳದ ಮನೆ ಬ್ಯಾಗನೇ ಕಟ್ಟಿಸವ್ಳೆ

ಕಂದಿಗೆರೆಯ ಬೂತಾಳ
ಸೀಮೇನ ಅರ್ಧ ಇವಳ
ಕುರಿದನ ಮೇಯಾಕೆ
ಜಾಗಿರನ್ನ ಆಕಿಸವ್ಳೆ

ಮನೆಯ ಮ್ಯಾಲೆ ಏಳು
ಕಳಸ[20] ತಿರುಗೂಡಿಸವ್ಳೆ[21] ।
ಸಿನ್ನದ[22] ಕಳಸಾನ ತಿರು
ಗೂಡಿಸವ್ಳೆ ಸಿತ್ತವ್ವ ।

ಬಾರೋ ಬಾರೋ ಮರಡಿ
ರಂಗಣ್ಣ । ನನ ಎಣ್ಣು
ಮಗಳೊಬ್ಳನ್ನ । ಬಾರೋ
ಗುಡ್ಡ ಅತ್ತಿ ನೋಡು ಬಾರೋ

ಏನಾಗ್ಯವ್ಳೆ ಎಂದು
ಗುಡ್ಡ ಅತ್ತಿ[23] ನೋಡುತಾರೆ
ರವರವನೆ[24] ಉರಿತಾವೆ
ಸಿನ್ನದ ಕಳಸ ಅರಮನೆ ಮ್ಯಾಲೇ

ಅಕಮಾರಿ ಸಿಕಮಾರೀನ ।
ಬ್ಯಾಗ ಕರಸೀದ ಜುಂಜಪ್ಪ ।
ಬಗ್ಯವ್ರೆ ಅಕಮಾರಿ ಸಿಕಮಾರಿ
ಗೌರಸಂದ್ರದ ಗನಗರುತಿ ।

ಸಿತ್ತವ್ವನ ಕುರಿ ರೊಪ್ಪಕೆ
ಓಗಿ ಕುರೀನ ಮುರಿಬೇಕು
ದನೀನ ಕೊಟಗಿಗತ್ತಿ
ದನಾನ ಮುರಿಬೇಕು ಕಂಡ್ರೆ

ಸಿತ್ತವ್ವನ ಮಕ್ಕಳನ್ನೆಲ್ಲಾ
ಮುರಿಬೇಕು ಕಣೆ ಗನ
ಗರುತಿ । ಕುರಿನೆಲ್ಲ ಮುರಿದಾರು ।
ಅಕಮಾರಿ ಸಿಕಮಾರಿ ರೊಪ್ಪದಾಗೆ ।

ದನೀನ ರೊಪ್ಪಕೋಗಿ
ದನವನು ಮುರಿದರು ।
ಸಿತ್ತವ್ವನ ಇರ ಮಗ್ಗೆ ಬಾಳ
ಜ್ವರ ಉರಿ ಜ್ವರ ಬತ್ತಾವೆ ।

ಚಂಜೇ[25] ವತ್ತಿಗೆ[26] ಸಿತ್ತವ್ವನ
ಮಗ ಮಡಿದೋದ
ಮೈಗುದ ಗೌಡನು ಸಿತ್ತವ್ವನ
ಸತ್ತ ಮಗ ಒತ್ತು[27] ಕೊಂಡೋದ ।

ಕುಂಬ್ರಳ್ಳಕೋಗಿ ಮರೆ
ಮಾಡಿ ಬರುತಾರೇ[28] ಅದೊ[29]
ಇದೊ ಅನ್ನೊ ವತ್ತಿಗೆ
ಸಿದ್ದವ್ವನ ಇರಿ ಮಗ್ಗೆ ಪ್ರಾಣೋಯ್ತು

ಮೈಗೂದ ಗೌಡನೂ ಸಿತ್ತವ್ವ
ಕ್ಯಂಬ್ರೆ ಅಳ್ಳಕೊತುಕೊಂಡು
ಓಗಿ । ಮರೆ ಮಾಡಿ ಮಗನ
ಮನೆಗೆ ಬರುತಾರೆ ।

ಸಿತ್ತವ್ವನ ಗಂಡ ಮೈದುಲ
ಗೌಡನ ಪ್ರಾಣ ಓದೋ
ಸಿತ್ತವ್ವ ಒಬ್ಬಳೇ ಕೊಂಡೋಗಿ[30]
ಮರಿ ಮಾಡಿ ಮನೆಗೆ ಬರುತಾಳೇ ।

ಸಿತ್ತವ್ವ ನಮ್ಮ ಸಾಸ್ತ್ರಕ್ಕೆ[31]
ಸರಿಯಾಗಿ ಸೂತುಕ ಕಳೆ[32]
ಕೊಳ್ಳಾನ ಎಂದಾರೆ ನೆಲ್ಲು
ರಾಗಿ ದಿನಸೆಲ್ಲ ಬೂದಿಯಾಗ್ಯವೆ ।

ತಾವೂರೆಕೆರೆಯು ತಳ
ಮನೆ[33]ಯು । ಸಂತೆಗೆ
ಓಗಿ ಏನಾನ ತರುವೆ
ನೆಂದಾರೆ ಸಿತ್ತವ್ವಗೆ
ಉಡುವಾಕೆ ಸೀರೆನೆ ಇಲ್ಲೊ ।

ಎಲ್ಲಾನ ಆಳಾಗಿ ಓಗಾಲಿ
ಎಂದಾಳು । ಮಗ್ಲೂರಿ ಮಲಗು
ತಾಳೆ ಸಿತ್ತವ್ವ ಅವಳ
ಎಣ್ಣು ಮಗ ಗಂಡು ಮಗನ ಕೂಟೇ[34]

ಕಬ್ಬುನದ[35] ಕಾಗ್ಯಾಗಿ ಕೀಳು
ತವೇ । ಏನು ಇರಿಯಟ್ಟಿ
ಜುಂಜಪ್ಪೋ ನನಗಿಂತ
ಕಷ್ಟಕಾಲ ಕೊಟ್ಟೇನೊ ಮಾಗುರುವೇ ।

ಸಿತ್ತವ್ವನ ಮನೀಗೆ ಇರಿ
ಯಟ್ಟಿ ಜುಂಜಪ್ಪ ಇಳಿದಾ ।
ನಿನ್ನ ಗಂಡು ಮಕ್ಕು ಎಲ್ಲಿ
ಅವರೀಗೆ ನೀನೆಲ್ಲಿ ನೆಂಟು ಮಾಡಿದ್ದೀ

ನೋಡಿ ಬರುವನ ನಡಿಯೆ
ಸಿತ್ತವ್ವ ನೀನೆಲ್ಲಿ ನಂಟು
ಮಾಡಿದ್ದೀ । ಇಂದೆ ಓಗಬ್ಯಾಡ
ಮುಂದೆ ಕರಬೇಡ ಮಾಗುರುವೆ ।

ನಿಮ್ಮಣ್ಣನೋರ ಮನೆಗೆ
ಕೊಂಡೋಗಿ[36] ಬಿಡುತೀನಿ ।
ಈಗಲಾದ್ರು ಬತ್ತಿಯೇನೆ
ಸಿತ್ತವ್ವ ನಿಮ್ಮಣ್ಣನ ಮನೀಗೆ

ಬರ್ತೀನಿ ಮಾಗುರುವೆ
ನಮ್ಮಪ್ಪ । ತಟ್ಟೆಡೆಗೆ ತಲೆ
ಮ್ಯಾಲೆ ಇಟ್ಕೊಂಡು
ಬರ್‍ತಾ ಅವ್ಳೆ ಸಿತ್ತವ್ವ ।

ಒಂದು ಎಣ್ಣು ಮಗ ಒಂದು
ಗಂಡು ಮಗು ಕರಕಂಡು
ಮರಡಿ ರಂಗನ ಗುಡ್ಡ
ದಡಿಗೆ ಬರುತಾಳೆ ಸಿತ್ತವ್ವ

ಮಾತು ಮರಡಿರಂಗಾನ
ನೆನೆತಾನೆ ಇರಿಯಟ್ಟಿ ಜುಂಜಪ್ಪ ।
ಅಂಗಾಲಾಗೆ ಮುರಿದ ಮುಳ್ಳು ।
ಮ್ಯಾಗಾಲಾಗೆ ಬರ‍್ತಾವೆ ಸಿತ್ತವ್ವಗೆ ।

ಏನೋ ಇರಿಯಟ್ಟಿ ನಮ್ಮಪ್ಪ ।
ಈವತ್ತು[37] ಕೊಟ್ಟೆಲ್ಲೋ । ನಡಿ
ನಡಿಯೆ ಸಿತ್ತವ್ವ ಓಗಾನ ಮುಂದಕೆ ।
ಎಂದು ಬರುತಾನೆ ಇರಿಯಟ್ಟಿ ಜುಂಜಪ್ಪ ।

ಅಟಿ ಮುಂದಕೆ ತಂದು ಬಿಟ್ಟು
ಇಂದಾಕೆ ಒರಟಾನೋ[38] ಇರಿ
ಯಟ್ಟಿ ಜುಂಜಪ್ಪ । ಇರಿಯಟ್ಟಿ
ಗೋಗಾಕೆ ಮಾನವಿಲ್ದೆ ಸಿತ್ತವ್ವಗೆ ।

ಒಂದು ಆಲದ ಮರದಡಿ
ತಟ್ಟೆಡೆಗೆ ಇಟ್ಟುಕೊಂಡು ।
ಮಕ್ಕುನಾ ಆಕಿಕೊಂಡು ಕೂತವ್ಳೆ
ಸಿತ್ತವ್ವ । ಆಲದ ಮರಡೀಲಿ ।


ಸಿತ್ತಪ್ಪ ಕಂಡು ಯಾರೋ
ಮರದಡಿಯ ಬುಡದೊಳಗೆ
ಕೂತವ್ರೆ । ಹಿರಿಯ ಮಗಳ
ಕರೆದು ಇಟ್ಟು ಕೊಟ್ಟು ಬಾರಮ್ಮ ।

ಇರಿಯ ಮಗಳು ಇಟ್ಟು ಕೊಟ್ಟು
ಬಂದು । ಏನಲಾ ಅಪ್ಪ ನಮ್ಮತ್ತೆ
ಅಲ್ಲವೇನೋ ಸಿತ್ತಪ್ಪ ಆರ
ಅಣ್ಣ ತಮ್ಮುಗೂಳ ಆಗಲೇ ಕರೆಸ್ದ ।

ಕಳಸ ಕನ್ನಡಿ ಇಡಕೊಂಡು
ಓತಾರೆ ಕರಕಂಡು ಬುರುವೋಕೆ ।
ಕರಕಂಡು ಬಂದು ಸಿತ್ತವ್ವನ
ಇರಿಯಟ್ಟಿ ಒಳಗೆ ಮಾಡಿ ಉಂಡವ್ರೆ ।

ಸಿತ್ತವ್ವನ ಮಗಳನ್ನ ಸಿತ್ತಪ್ಪನ
ಮಗಾಗೆ[39] ಮದುವೆ ಮಾಡಿಕಂಡು ।
ಸಿತ್ತಪ್ಪನ ಮಗಳನ್ನ ಸಿತ್ತವ್ವನ
ಮಗಾಗೆ ಮದುವೆಯ ಮಾಡಿ
ಸುಖವಾಗಿ ಬಾಳ್ತಾವ್ರೆ ಇರಿಯಟ್ಟಿಯೊಳಗೆ ।

❑ ❑ ❑



ಕುರಿ ಸಾಕಾಣಿಕೆಯಲ್ಲಿ ನಿರತನಾದ ಪಶುಪಾಲಕ

---

1. ಹಟ್ಟಿಯವರು 2. ಝುಂಡ (ಬಾವುಟ) 3. ಹಿರಿಯಟ್ಟಿ 4. ಬಿಟ್ಟ 5. ಬರುತ್ತಾನೆ 6. ಕಲ್ಲು ಕಂಬ 7. ಬಿಚ್ಚು 8. ಕತ್ತರಿಸಿ 9. ಪರಕೀಯರ 10. ಕಟ್ಟಿಡಕ ಕರಾರು ಎರಡು ಒಂದೇ 11. ಒಂದು ಊರು 12. ಹುಕ್ಕುಂ 13. ತುಪ್ಪ ಮತ್ತು ಅನ್ನ 14. ತಟ್ಟೆಯಂತೆ ಇರುವ ಗೂಡೆ 15. ಹಿಂದಕ್ಕೆ 16. ಹೆಜ್ಜೆ 17. ಚಿಕ್ಕದು 18. ಹೊರಟಾ 19. ಬಹುದು 20. ದೇವರ ಹೆಸರು 21. ತಿರುವಿ 22. ಚಿನ್ನದ 23. ಹತ್ತಿ 24. ಪ್ರಕಾಶಮಾನವಾಗಿ 25. ಸಂಜೆ 26. ಹೊತ್ತಿಗೆ 27. ಹೊತ್ತು 28. ಒಂದು ಹಳ್ಳದ ಹೆಸರು 29. ಆಗೋ ಇಗೋ 30. ತೆಗೆದುಕೊಂಡೋಗಿ 31. ಶಾಸ್ತ್ರಕ್ಕೆ 32. ಸೂತಕ 33. ಮೂಲಮನೆ 34. ಕೊಡೆ 35. ಕಬ್ಬಿಣದ 36. ತೆಗೆದುಕೊಂಡು ಹೋಗಿ 37. ಹೊತ್ತು 38. ಹೊರಟ 39. ಮಗನಿಗೆ

## ೭. ಮಾಗೋಡು ಕಂಬದ ರಂಗನಾಥಸ್ವಾಮಿ ಕತೆ

### ಕರುಣಿ ಕಂಬದ ರಂಗನ ನೆನೆದೇನು

ಮೊದಲಾನೆ ನನೆದೇನು ಮೊದಲ ಸುವಾಲಿ
ಮದಗದಿಂದಾಚೆ ಮನೆಯೋಳು । ಮದಗದಿಂದಾಚೆ
ಮನೆಯಳು ಕಾವಲಮ್ಮ । ಮೊದಲ ಸೊಲ್ಲಿಗೆ ನೆನೆದೇನು ॥
ಇದ್ದನೆ ಸಾಲಾಗೆ ರುದ್ರಳ್ಳು ನೆನೆದೇನು । ಇದ್ದೂದ್ರು ಗ್ರಾಮದ
ಗರತಿಯೋ । ಇದ್ದೂದ್ರು ಗ್ರಾಮದ ಗರತಿನೆ ರಾಮವ್ವನ
ನಿದ್ರೆ ಬಂದಲ್ಲಿ ನೆನೆದೇನು । ಯಾವನೆ ಸೊಲ್ಲಾಗೆ ದೇವುರ ನೆನೆದೇನು
ಈ ಊರು ಗ್ರಾಮದ ಗರತಿಯೋ । ಈ ಊರು ಗ್ರಾಮದ ಗರತಿನೆ
ರಾಮವ್ವನ ಜ್ಞಾನ ಬಂದಲ್ಲಿ ನೆನೆದೇನು ॥
ಅಕ್ಕ ನಿಮ್ಮ ಮನೆಯಾಡ ಎತ್ತೇನು ಮೊದಲಿಂದ
ಚಿಕ್ಕರಸಿ ಕೆರೆಯ ಮಠದಾಗೋ ॥ ಮಠದಾಗೋದದಂತ
ಹೊತ್ತಿಗೆ ನೀಡೆ ಮದನಾರೆ ।
ಯಾವಾಗ ನೆನೆದೇನಮ್ಮ ಗಾನದಾಗಿರುವೋಳೆ
ನಾಗಬೋಜುನ ಧ್ವನಿಯೋಳು । ನಾಗನು ಬೂಸುರನ
ಧ್ವನಿಯೊಳು ಕಾವೇರಮ್ಮ ನಾಲಿಗೆ ತೊಡರ ಬಿಡಿಸಮ್ಮ
ದುಗ್ಗುಳವನಾಕಿ ದೊಡ್ಡಾಳ ನೆನೆದೇನು ಸಿದ್ದ ಬೀದ್ಯಾಗೆ ಇರುವಳು
ಸಿದ್ದನ ಬೀದ್ಯಾಗೆ ಇರುವಳು ಕಾವೇರಮ್ಮ ನಿದ್ರೆ ಬಂದಲ್ಲಿ ನೆನೆದೇನು
ಎದ್ದುನೇ ನೆನೆದೇನು ಮುದ್ದು ಮೂಡಲಗಿರಿಯ
ಮುದ್ರೆ ನಾಮದ ಒಡೆಯಾನು । ಮುದ್ರೆನಾಮದ ಒಡೆಯನು
ಗೋವಿಂದನಾ ನಿದ್ರೆ ಸೊಲ್ಲಾಗೆ ನೆನೆದೇನು ।
ಸೊಲ್ಲೆತ್ತಿದ ಮುನ್ನ ಎಲ್ಲಾ ದೇವರು ನೆನೆದೆ
ಕಲ್ಲತ್ತಿನೇವೊಳಗೆ ಕರುಣಿನೆ ಕಂಬದ ರಂಗ
ಸೊಲ್ಲೆತ್ತುವ ಮುನ್ನ ನೆನದೇನು ॥

---

ಹಾಡಿದವರು : **ಜೋಗೀರಣ್ಣ**, ಕಾಡುಗೊಲ್ಲರು, ಮಾಗೋಡು, ಶಿರಾ ತಾಲ್ಲೂಕು.
ಸಂಗ್ರಹ : **ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**
ಕೃತಿ : ಮಾಗೋಡು ರಂಗನಾಥಸ್ವಾಮಿ ಕತೆ, ಗಡಿನಾಡು ಜಾನಪದ ಸಂಪರ್ಕ ಕೇಂದ್ರ, ಕಾಳಿದಾಸ ನಗರ, ಶಿರಾ, 2002.

## ಕಂಬದ ರಂಗ ಉಕ್ಕಿನ ಪಾಳಾಗಿ ಭೂಮಿ ಸೇರಿದ

ಬಬ್ಬೂರು ಮೂಡುಗಡೆಯ ಕಣ್ಣಾನೆ ಕಾಣುವರೆಗೆ
ಎರಿಯನೆ ಬಯಲು ನೋಡೋ ।
ಟೆಂಕಾನೆ ಬಡಗು ಕಟ್ಟೆಯ ಎರಿಯ ಮೇಲೆ
ಕೆರೆಯಾನೆ ಸಿಟಾಲದ ಮರದ ಒಳಗೆ
ಹನ್ನೆರಡು ವರ್ಷ ಕರಿಯ ಕಾಗೆ ಗೂಡಕಟ್ಟಿ ತಪಸ್ಸು ಮಾಡಿ ಕೂತಿರುವುದಣ್ಣ ।
ಮುಂಗಾರು ಸಿಡಿಲು ಬಡಿದು ।
ಉಕ್ಕಿನ ಪಾಳಾಗಿ ಎರೆಯ ಬಯಲು ಸೇರುವುದು ॥
ಬಬ್ಬೂರ ಗೌಡ ಮನೆಯೊಳಗೆ ಬಾರನೆ ಸಂಸಾರ
ಬಾರೀನೆ ಗುಂಪು ನೋಡೋ ।
ಏಳು ಮಂದಿ ಅಣ್ಣ ತಮ್ಮಂದಿರು ಏಳು ಜೋಡಿ ದನ ಕರುಗಳುಂಟು
ಇಕ್ಕೇರಿ ಬಾದ್ರಪದ । ಒಂದನೇ ರಾಮಕಳಸ
ನಾಲ್ಕು ಮೂಲೆಯೊಳಗೂ ಲಕ್ಷ್ಮಿ ನಾಟ್ಯವಾಡುತಾಳೆ
ಗೌಡನ ಮನೆಯ ಒಳಹೊರಗೂ ಬಾಗಿಲಾಗೂ
ಸಾಳಿಕಾರ ದೊಡ್ಡಣ್ಣ । ವಾಲದ ಪಿಪ್ಪಣ್ಣ ಬರ್ಜರೆ ವಾರದವರು
ಆ ಹೊತ್ತಿನ ದಿವಸದಲ್ಲಿ ಏಳು ಮಂದಿ ತಮ್ಮಗಳು
ಏಳು ವರ್ಜಿ ಎತ್ತು ಹೂಡಿಕೊಂಡು ಎರೆಯ ಬಯಲಿಗೆ ಹೋದ್ರು ।
ಎರೆ ಬಯಲಿಗೆ ರಥವ ನಡೆಸುವರಣ್ಣ
ಅಂತೆಂಬಾ ವೇಳೆಗೆ ಅರಮನೆಯಿಂದ ಬುತ್ತಿನೇ ಬರಲೇ ಇಲ್ಲ
ಕೈಕಾಲು ಮುಖ ತೊಳೆಯಲಿಲ್ಲ । ಅನ್ನನೇ ಊಟ ಮಾಡಲಿಲ್ಲ
ಯಂಗ್ರಪ್ಪಾ ಮಡಿಕೆ ನಡೆಸಬೇಕು ನಾವು ।
ಅರಮನೆಯಿಂದ ಬುತ್ತಿನೇ ಬರಲಿಲ್ಲ, ಏನು
ಗ್ರಹಚಾರ ಬಂತಪ್ಪ ನಮಗೆ । ಎನು ಕಷ್ಟ ಬಂತಪ್ಪ ನಮಗೆ
ಏಳು ಜನ ಅಣ್ಣ ತಮ್ಮಂದಿರು ಮುಖಕ್ಕೆ ಸೆರಗಿಕ್ಕಿಕೊಂಡು ಗೋಳಾಡುತ್ತಾರೋ

ಹಿರಿಯಣ್ಣ ಗೌಡನು ಹಿರಿಯೂರು ಪೇಟೆಯೊಳಗೆ
ಸೂಳೆಯ ಮನೆಯವೊಳಗೆ । ಪಗಡೆಯ ಆಡೊನಲ್ಲೊ ।
ಪಗಡನೆ ಬೀಳೋದಿಲ್ಲ । ಆಟನೆ ಸರಿಬರಲಿಲ್ಲ
ಬಬ್ಬೂರ ಗೌಡನಾಗ ಸೂಳೆಗೆ ಸಮಾಧಾನ ಮಾಡುತಾನೋ
ಪಗಡೆಯ ಮುಚ್ಚಿ ಇಡುತಾನೋ । ಪಲ್ಲಕ್ಕಿ ಇಳಿಯುತಾನೋ ।
ವಲ್ಲಿಯ ಮುಸುಗು ಹಾಕಿ । ತುದಿಗಾಲ ಹೆಜ್ಜೆ ಹಾಕಿ

ಬಬ್ಬೂರ ಬಯಲಿಗೆ ಬಂದನಾಗ ।
ಏಳು ಜನ ತಮ್ಮಗಳ ಮುಖವ ನೋಡುತಾನೆ
ಯಾಕ್ರಪ್ಪ ತಮ್ಮಗಳ ಹನ್ನೆರಡು ಗಂಟೆ ಒಡೆದಾವು
ಕೈಕಾಲು ಮುಖ ತೊಳೆದಿಲ್ಲ । ವಿಭೂತಿ ಧರಿಸಿಲ್ಲ
ನಾವೇನು ಮಾಡಬೇಕು ಹಿರಿಯಣ್ಣ ।
ಅರಮನೆಯಿಂದ ಬುತ್ತಿನೇ ಬರಲಿಲ್ಲ । ಕೈಕಾಲು
ಮುಖ ತೊಳೆದಿಲ್ಲ । ಈಭೂತಿ ಧರಿಸಿಲ್ಲ । ಊಟವೇ ಮಾಡಿಲ್ಲ ನಾವು ।

ಕೇಳ್ರಪ್ಪ ತಮ್ಮಗಳಿರಾ ಅರಮನೆಯಿಂದ ಬುತ್ತಿನೇ ಬರಲಿಲ್ಲ
ಅಂತೆಂಬ ಕೋಪದಲಿ ಒಡೆದಿರಾ ಬಡಿದಿರಾ । ಆರನ್ನಡವೀಲಿ
ಗೋರಣ್ಯ ದಿಬ್ಬದಲ್ಲಿ ಕಂಡಾರ ಹೆಣ್ಣುಮಕ್ಕಳು ಹೆದರ್‍ಯಾವು
ಬೆದರ್‍ಯಾವು ಎಂದು ಏಳು ಜನ ತಮ್ಮಂದಿರಿಗೆ ಬುದ್ಧಿಯಾ
ಹೇಳುತಾನೆ ಗೌಡನು ನೋಡ । ಏಳು ಜನ ತಮ್ಮಂದಿರಿಗೆ
ಬುದ್ಧಿ ಮಾತೇಳಿ । ಅರಮನೆಗೆ ಹೋಗಿ ಕಳುಹಿಸುತ್ತೇನೆಂದು
ಬಬ್ಬೂರ ಗೌಡ ವಲ್ಲಿ ಮುಸುಗಾಕಿಕೊಂಡು । ಕಣ್ಣಾಗೆ ನೀರು
ಹಾಕಿಕೊಂಡು ಅರಮನೆಗೆ ಬಂದಾನು ಗೌಡ ।

ಎನ್ರಮ್ಮ ಹೆಣ್ಣು ಮುಂಡೇರ ಎನ್ರಲಾ ತುಂಡು ಮುಂಡೇರ
ಎರೆ ಹೊಲದಾಗಿರೋ ತಮ್ಮಗಳಿಗೆ ಊಟವ ಕಳಿಸಲ್ಲವೆ ?
ಬುತ್ತಿಯ ಕೊಡಲ್ಲವೆ ? ಎಂದು ಏಳು ಜನ ಗರತಿಯರಿಗೂ ಬೈದಾನು
ಅಂತೆಂಬ ಗಳಿಗೆಯೊಳಗೆ ಏಳು ಜನ ಗರತಿಯರಾಗ ಬುತ್ತಿಯ ಮಾಡಿಕೊಂಡು
ಕಳಿಯಡಕೆ । ಬಿಳಿ ಎಲೆ ಮಡಿಚಿಕೊಂಡು ಬುತ್ತಿ ಹೊತ್ತುಕೊಂಡು
ಹೊರಟರಾಗ । ಎರೆಯ ಹೊಲಕಾಗ ಓಡೋಡಿ ಬರುತಾರಣ್ಣ ।
ಬುತ್ತಿಯ ಇಳಿಸುತಾ ಕುಂತರಾಗ ।

ಏಳು ಜನ ತಮ್ಮ ರಾಗ ಕಟ್ಟಿದ ರಥವ ನಿಲ್ಲಿಸುತಾರೆ
ಬುತ್ತಿ ಗೂಡೆ ತವಕೆ ಬಂದು ಕೈಕಾಲು ಮುಖ ತೊಳೆದು
ವಿಭೂತಿ ಧರಿಸಿಕೊಂಡು । ಏಳು ಜನ ಅಣ್ಣ ತಮ್ಮಂದಿರು
ಒಂದೇ ತಣಿಗ್ಯಾಗೆ ಊಟಕ್ಕೆ ಕುಂತಾರಣ್ಣ ।
ಅನ್ನನೇ ಊಟ ಮಾಡುತಾರೆ । ಅಂತೆಂಬ ವೇಳೆದಾಗೆ ।
ಕರಿಯಾನೆ ಸಿಟ್ರಾಲದ ಮರದಾಗೆ ಹನ್ನೆರಡು ವರ್ಷ
ತಪಸ್ಸು ಮಾಡಿಕೊಂಡಿದ್ದ ಕರಿಯ ಕಾಗೆಯೊಂದು

ಕಾರ್ ಕಾರ್ ಎಂದು ಅನ್ನನೇ ಮುಟ್ಟೋದಂತೋ ।
ಕಾಗೆ ತಣಿಗ್ಯಾಗೆ ಮುತ್ತದಲ್ಲೋ । ಅಣ್ಣ ತಮ್ಮಂದಿರು
ಅನ್ನ ಬಿಟ್ಟು ಯೋಚನೆ ಮಾಡುತಾರೆ । ದುಃಖನೇ ಮಾಡುತಾರೆ ।
ಏನು ಗ್ರಹಚಾರ ಬಂತಪ್ಪ ನಮಗೆ । ಸತ್ತವರಿಗೆ ಕಾಗೆ
ಮುಟ್ಟುವುದೇ ಕಷ್ಟ । ಜೀವದಾಗಿರುವ ನಮ್ಮ ತಟ್ಟೆಗೆ
ಕಾಗೆ ಮುಟ್ಟಿತಲ್ಲೋ । ಯಂಗಪ್ಪ ಊಟ ಮಾಡಬೇಕು ನಾವು ।
ಯಾರನ್ನ ಕಿತ್ತುಕೊಂಡು ಬಂದಿದ್ದೀವಿ ನಾವು । ಈ ವೊತ್ತಿನ
ಕಾಲದಲ್ಲಿ ದೇವರು ನಮ್ಮ ಅನ್ನನೇ ಕಿತ್ತುಕೊಂಡಿತ್ತೆಂದು
ಏಳು ಜನ ಅಣ್ಣ ತಮ್ಮಂದಿರು ಶೋಕಾನೆ ಮಾಡುತಾರೆ ।
ಊಟ ಬಿಟ್ಟು ಕೈತೊಳೆದು ವಾರಿಗೆ ಕೂತು ಎಲೆ ಅಡಿಕೆ ಹಾಕಿ
ಯಾರಪ್ಪ ನಮಗೆ ಗಂಡನಾಗಿ ಹುಟ್ಟಿಕೊಂಡಿರೋರು ।
ಎಂದು ಗೋಳಾಡುತಾರಾಗ । ತಿರುಗಿ ಮಡಿಕೆಯ ಹೂಡುತಾರೆ.

ಏಳನೇ ಬಾರಿ ಕೋಲು ಏಳು ಜನ ತಮ್ಮಂದಿರು ರಥವನ್ನು
ಹೂಡಿಕೊಂಡು ಹೊಲವಾನೆ ಉಳುತಾರೆ
ಆ ವೊತ್ತಿಗೆ ದೊಡ್ಡವನ ಕರುಣದಿಂದ
ಕೈಯಲ್ಲ ಬೊಬ್ಬೆಡೆದು ಕೀವು ನೆತ್ತರ ಸುರಿಯುತಾವೆ
ಕರಿಕೆ ನೆಲದೊಳಗೆ ಮಡಿಕೆ ಹೂತುಕೊಂಡು ಎತ್ತು ಎಳೆಯಲಾರದೆ
ರತ ಎಳೆಯುತಾವೆ । ದಗ್ಗಾಲು ಮಂಡಿ ಹೂರಿಕೊಂಡು ಕೀಳುತಾವೆ
ಒಂದಿಂಚು ರಥ ಮುಂದೆ ಸಾಗೋದಿಲ್ಲ ನೋಡು
ಚಿಕ್ಕಬೆಳ್ಳಿ ದೊಡ್ಡಬೆಳ್ಳಿ ಎಂಬೆರಡು ಹೋರಿಗಳು ಇದಾವೆ ನೋಡು
ಬಾಯಿ ತುಂಬಾ ಲೊದ್ದಲೆ ಸುರಿಸುತ್ತವೆ । ಕಣ್ಣಾಗೆ
ರಟ್ಟೆದಪ್ಪ ನೀರನ್ನು ಸುರಿಸುತಾವೆ । ದಗ್ಗಾಲು ಮಂಡಿ
ಹೂರಿ ಎಳೆದರೂ ಮಡಿಕೆ ಮುಂದೆ ಹೋಗೋದಿಲ್ಲ
ಯಂಗಪ್ಪ ಹಿರಿಯವನೆ ಮಡಿಕೆ ನಡೆಸೋದು ನಾವು
ಅವರು ಕಂಡ ಸಾಹಸನೆಲ್ಲಾ ಖರ್ಚು ಮಾಡುತಾರಣ್ಣ
ಏನು ಮಾಡಿದರೂ ರಥ ಮುಂದೆ ಹರಿಯುವುದಿಲ್ಲ
ಯಾರಿಗೆ ಏನು ವಂಚನೆ ಮಾಡಿದೇವಪ್ಪ । ಯಾರು ನಮಗೆ
ಗಂಡನಾಗಿ ಹುಟ್ಟಿಕೊಂಡವರಪ್ಪ ಹೇಳ್ರಿ ನೀವು ।

ಆಗ ನೋಡ ಭಗವಂತ ದೊಡ್ಡವನ ದೂರದೃಷ್ಟಿಯಿಂದ
ಏಳು ಜನ ಅಣ್ಣ ತಮ್ಮಂದಿರು ಯಂಗೆ ನಿಂತಿದ್ದರೋ

ಹಂಗೇನೆ ಪ್ರಾಣನೇ ಬಿಡುತಾರಣ್ಣ । ರಯಿತನೇ ಕಾರುತಾರಣ್ಣ
ಅರಮನೆವೊಳಗೆ ಹಿರಿಯಣ್ಣನ ಹೆಂಡರು ಬಸುರಿ ನೋಡ
ಮಂಚದ ಮೇಗಡೆ ಮಕಾಡೆ ಮಲಗಿಕೊಂಡು ರಯಿತಾನೆ ಕಾರಿಕಂಡು
ಪ್ರಾಣಾನೆ ಬಿಡುತಾಳೆ ವೊಳಗೆ ।
ಅರಮನೆ ವೊಳಗೆ ಕ್ವಾಣೆ ಬಾಗಿಲಾಗೆ । ಸ್ಥಾನಿಕರ ದೊಡ್ಡಣ್ಣ
ಓಲಗದ ತಿಪ್ಪಣ್ಣ ಪರಿವಾರದವರಿಗೆ ಅನ್ನನೇ ಕೊಡಾರಿಲ್ಲ
ಎಂಗಪ್ಪ ಕಾಲಹರಣ ಮಾಡಬೇಕು ಬಾಳನೇ ಸಂಸಾರಿ
ಬಾರಿನೇ ವಜಾನುದಾರ.

ಹಿಕ್ಕೇರಿ ಭಾದ್ರಪದ ಒಂದನೇ ರಾಮಕಳಸ
ನಾಲ್ಕು ಮೂಲೇಗೂ ಗೌಡನ ಮನೇಯ ಒಳಗೆ
ಲಕ್ಷ್ಮಿ ನಾಟ್ಯ ಮಾಡುತಾಳೆ । ಇಷ್ಟೊಂದು ದರಬಾರವೆಲ್ಲ ಯಾರ ಪಾಲು
ಯಾರಿಗೆ ಇಡುಮಾಡಿ ಹೋಗಬೇಕು । ಎಂದು ಮನೆ ಬಾಗಿಲಾಗೆ
ಇಬ್ಬರು ಮಾತಾಡುತಾರೆ ನೋಡು ।
ನಡಿಯಣ್ಣ ಹಿರಿಯೂರು ಪೇಟೆಗೆ ಹೋಗಿ ।
ಹಿರಿಯೂರು ಪೇಟೆವೊಳಗಿರುವ ಸೂಳೆಮನೆಯೊಳಗಿರುವ
ಬಬ್ಬೂರು ಗೌಡನಿಗೆ ವರ್ತಮಾನ ಕೊಟ್ಟು ಜಾಗ್ರತೆ ಕರಕೊಂಡು
ಬರೋನೋ ನಡಿಯಿರಪ್ಪಾ ।

ಓಲಗದ ತಿಪ್ಪಣ್ಣ ಸ್ಥಾನಿಕರ ದೊಡ್ಡಣ್ಣ ಮುಂಗೈ ಮುರಿಗೆ
ಸುತ್ತಿಕೊಂಡು ಬಾಯಲ್ಲಿ ಲೊದ್ದೆಲೆ ಸುರಿಸುತ್ತಾರೆ ।
ಹಿರಿಯೂರು ಪೇಟೆಗೆ ಓಡೋಡಿ ಬರುತಾರಣ್ಣ ।
ಪೇಟೆ ಪೇಟೆಗೆ ಹುಡುಕಿ ಹುಡುಕಿ ನೋಡುತ್ತಾರೆ.
ಸೂಳೆಯ ಮನೆ ಮುಂದಕ್ಕೆ ಹೋಗಿ ನಿಂತರಣ್ಣ
ಬಬ್ಬೂರ ಗೌಡನಾಗ ತಲೆ ಎತ್ತಿನಿಂತು ನೋಡುತ್ತಾನೆ
ಯಾಕ್ರಯ್ಯ ಓಲಗದವರೆ ಯಾಕ್ರಪ್ಪ ಅರಮನೆಯ ಬಿಟ್ಟು
ಬಂದ್ರಿ ನೀವು । ಎಂದಾನೆ ಗೌಡ ಕೇಳುತಾನೆ ।
ಬಾರಪ್ಪ ಹಿರಿಯಣ್ಣ ಮೂರು ದಿನದ ಹೊತ್ತಾದರೂ
ಅನ್ನ ಹಾಕೋರಿಲ್ಲ । ಅಡಿಕೆ ಕೊಡೋರಿಲ್ಲ । ಮಾತಾಡೋ ಮಾನ್ಯರಿಲ್ಲ ।
ಗೌಡ ಸೂಳೆ ಮನೆಗೆ ಹೋಗೇನೆಂದು ನಿಮ್ಮೆಂಡತಿ ಸಿಟ್ಟಿನಮ್ಯಾಲೆ । ಮಲಗವಳೆ ।
ನಡಿರಪ್ಪ ಅರಮನೆಗೆ ಹೋಗೋನ । ಅಂತೆಂದು
ಬಬ್ಬೂರ ಗೌಡನ ಕರಕೊಂಡು ಅರಮನೆಗೆ ಬಂದರಾಗ ।

ಅರಮನೆ ಬಾಗಿಲಾಗೆ ನಿಂತು ಗೌಡ ಬಂದಾನೆಂದು ಮೂರು
ಸೊಲ್ಲು ಕೂಗಿರಣ್ಣ । ಗೌಡಶ್ಯಾನಿ ಎದ್ದು ಬಾಗಿಲು ತೆರೆಯುತ್ತಾಳೆ.
ಅಂತೆಂದು ಹೇಳುತ್ತಾನೆ । ಗೌಡ ಬಂದವನೆ ತಾಯೆ । ಎದ್ದು ಬಂದು
ಬಾಗಿಲು ತೆಗೆಯಮ್ಮ ನೀನು । ಮೂರು ಸೊಲ್ಲು ಕೂಗಿದರೂ
ಎದ್ದು ಬಂದು ಬಾಗಿಲು ತೆಗೆಯೋದಿಲ್ಲ । ಆಗ ಬಬ್ಬೂರು ಗೌಡ
ಅರಮನೆ ಬಾಗಿಲು ಬಿಟ್ಟು ಕಂಚಿನ ಬಾಗಿಲು ಆರೊಡೆದು
ಉಪ್ಪರಿಗೆ ಮೇಲಕ್ಕೆ ಹೋಗಿ ನೋಡುತಾನೆ । ಗೌಡನೆಂಡತಿ
ರಕ್ತನೆ ಕಾರಿ ಬಿದ್ದಿದ್ದಾಳೆ. ಗೌಡನ ಕಣ್ಣಗೆ ನೀರು
ಶವದ ಮೇಲೆ ಬಿದ್ದು ಗೋಳಾಡುತ್ತನೆ । ಆಳು ಮುಂಡೆ
ಕಣ್ಣ ನೋಡರಿ । ಯಂತಪ್ಪ ಇವಳ ಮೇಲೆ ಮಣ್ಣ ಎಳೆಯಾದು ನಾವು
ತಲೆಮೇಲೆ ಮುಸುಗಾಕಿಕೊಂಡು ಅಳುತಾನೆ ಗೌಡ
ಭಾಗ್ಯದ ಲಕ್ಷ್ಮಿಯಪ್ಪ । ನಗು ನಗುತ ಒಂದು ದಿನವೂ ಇರಲಿಲ್ಲ ನಾವು
ಭಾಗ್ಯದ ಲಕ್ಷ್ಮಿ ಮದುವೆಯಾದಂದಿನಿಂದ ನಾಲ್ಕು ಮೂಲೆಗೂ
ಲಕ್ಷ್ಮಿ ನಾಟ್ಯವಾಡಿದಳಪ್ಪ । ಈ ವೊತ್ತು ಲಕ್ಷ್ಮಿ ಕೈಬಿಟ್ಟು ಹೋದಳು
ಇಂಥ ಭಾಗ್ಯದ ಲಕ್ಷ್ಮಿನೆ ಹೋದ ಮೇಲೆ ಹಾಳು ಜನ್ಮ ಯಂಗಪ್ಪ
ಹೊರೆಯಬೇಕು ನಾವು । ಭೂಮಿ ಮೇಲೆ ಯಂಗಪ್ಪ ಬದುಕು
ಬೇಕು ನಾವು । ಅಂತೆಂದು ಗೌಡ ಬಡಿದುಕೊಳ್ಳುತ್ತಾನೆ.

ಅಗ ನೋಡಾ ಭಗವಂತ । ಹೋಗರಪ್ಪ ಓಲಗದವರೆ
ಹಿರಿಯೂರ ಪೇಟೆವೊಳಗೆ ಏಳು ಜನ ದೊರೆಗಳಿದ್ದಾರೆ
ಬಬ್ಬೂರ ಗೌಡನ ಹೆಂಡತಿ ತೀರಿಕೊಂಡಾಳೆಂದು ವರ್ತಮಾನ ಕೊಟ್ಟು
ಜಾಗ್ರತೆ ಕರಕೊಂಡು ಬನ್ನಿ ನೀವು ।
ಓಡೋಡಿ ಬರುತಾರೆ । ಹಿರಿಯೂರ ಪೇಟೆ ಬೀದಿ ಬೀದಿ
ಹುಡುಕುತಾರೆ । ಭಾಗ್ಯದ ಜಾಗವೊಂದುಂಟು । ಆಗಲ್ಲಿ
ಏಳು ಮಂದಿ ದೊರೆಗಳು ತಲೆ ಎತ್ತಿ ನೋಡುತಾರೆ । ಯಾಕ್ರಪ್ಪ ಬಂದ್ರಿ ನೀವು ।
ಕೇಳ್ರಣ್ಣ ದೊರೆಗಳೆ ನೀವು । ಅಂಜಾದೆ ಹೇಳುತೇವೆ । ಮರೆಮಾಚದೆ
ಹೇಳುತೀವಿ । ಬಬ್ಬೂರ ಗೌಡನ ಹೆಂಡತಿ ತೀರಿಕೊಂಡವಳೆ
ಎಂದು ವರ್ತಮಾನ ಕೊಡುತ್ತಾರಲ್ಲಣ್ಣ ಅವರು
ಏಳು ಜನ ದೊರೆಗಳು ಅವರ ದರ್ಬಾರ ಬಿಟ್ಟು । ಮಂದಿ ಮಾರ್ಬಲ ಬಿಟ್ಟು
ಓಡೋಡಿ ಬರುತಾರಾಗ । ಯಾಕಣ್ಣ ಬಬ್ಬೂರ ಗೌಡ
ಹುಚ್ಚೇನು ಭ್ರಾಂತೇನು ನಿನಗೆ । ಸೊಸೆ ಸತ್ತರ ಸೋಬಾನ

ಮಗ ಸತ್ತರೆ ಮನೆ ಹಾಳು । ಸತ್ತ ಆರು ದಿನದೊಳಗೆ
ಹುಡುಗಿ ತಂದು ಲಗ್ನ ಮಾಡುತೀವಿ ನಿನಗೆ । ಯೋಚನೆ ಬೇಡಪ್ಪ
ನಿನಗೆ ಬಬ್ಬೂರ ಗೌಡ ದುಃಖ ಬೇಡಪ್ಪ ನಿನಗೆ ।
ಏನು ಮಾಡುತೀರಪ್ಪ ಹುಚ್ಚ ದೊರೆಗಳಿರಾ । ಹೆಡ್ಡ ದೊರೆಗಳಿರಾ
ಇದ್ದೊಂದು ಜೀವ ಹೋದಳಂತ ಶವದ ಮೇಲೆ ಬಿದ್ದರಂತೋ
ಈಕೆನ ಮದುವೆಯಾದ ಕಾಲದಿಂದ ನನ್ನ ಮನೆಯೊಳಗೆ
ನಾಲ್ಕು ಮೂಲೆಗೂ ಲಕ್ಷ್ಮಿ ನಾಟ್ಯವಾಡುತ್ತಿದ್ದಳು । ಇಂಥ ಪ್ರಾಣ
ಕಳಕೊಂಡು ಯಂಗ್ರಣ್ಣ ಬದುಕಾದು ನಾನು ।
ನಾವು ಬಂದು ಬಾಳ ಹೊತ್ತಾಯಿತು । ನಾವು ದರ್ಬಾರಿಗೆ ಹೋಗಬೇಕು ।
ನಮ್ಮ ದಬ್ಬಾಳಿಕೆಗೆ ಹೋಗಬೇಕು । ಗೌಡಶಾನಿಗೆ ಧಪನ್ ಮಾಡಬೇಕು
ಹೋಗ್ರಣ್ಣ ಓಲಗದವರೆ ಎರೆ ಹೊಲದ ಬಯಲಾಗೆ
ಏಳು ಮಂದಿ ತಮ್ಮಂದಿರು ಏಳು ಜನ ಎತ್ತು ಹೂಡಿ
ಹೊಲ ಉತ್ತುತ್ತಿದ್ದಾರೆ । ಅವರಿಗೆಲ್ಲಾ ವರ್ತಮಾನ ಕೊಟ್ಟು ಬನ್ನಿ
ಎರೆ ಹೊಲಕೆ ಹೋಗುತಾರೆ । ಅವರೆಲ್ಲಾ ಸತ್ತು ಬಿದ್ದವರೆ
ಹೆದರಿ ಓಡೋಡಿ ಬರುತಾರಂತೋ । ಬಂದು ಗೌಡಾಗೆ
ಸುದ್ಧಿಯ ಮುಟ್ಟಿಸುತ್ತಾರೋ ।
ಏಳು ಜನ ತಮ್ಮಂದಿರ ಪ್ರಾಣ ಹೋಯಿತೋ ।
ಚಿಕ್ಕಬೆಳ್ಳಿ ದೊಡ್ಡಬೆಳ್ಳಿ ಎತ್ತುಗಳೂ ಹೋದವಣ್ಣ
ಏನು ಗ್ರಹಚಾರ ಬಂತಪ್ಪ ನನಗೆ । ಯಂಗ್ರಪ್ಪ ಪ್ರಾಣ ಹೊರೆಯೋದು ।
ಏನು ಭಂಗ ಬಂತಪ್ಪ ಗುರುವೆ । ಯಾರಿಗೇನು ಅನ್ಯಾಯ ಮಾಡಿದ್ದೆವಪ್ಪ
ಏನು ಕಷ್ಟ ಬಂತಪ್ಪ ಗುರುವೆ । ಬಡಿದುಕೊಳ್ಳುತಾನೆ ಗೌಡ ।
ಮುಂಗೋಳಿ ಸಲ್ಲು ಕೇಳಿ ಕೈಕಾಲು ಮುಖ ತೊಳೆದು । ವಿಭೂತಿ
ಧರಿಸಿಕೊಂಡು ನನ್ನ ಪಾದಕ್ಕೆ ಅಡ್ಡಬಿದ್ದು ಹೋಗುತ್ತಿದ್ದ ತಮ್ಮಗಳ
ಕಳೆದುಕೊಂಡು ಯಾರ ಬಾಗಿಲಿಗೆ ಹೋಗಲಿ ।
ಯಾರಿಗೆ ಏನು ಅನ್ಯಾಯ ಮಾಡಿದ್ದೆ ನಾನು । ಯಾರಿಗೆ ಏನು
ಅಪರಾಧ ಮಾಡಿದ್ದೆ ನಾನು । ಯಾರಪ್ಪ ನಮಗೆ ಗಂಡನಾಗಿ ಹುಟ್ಟಿಕೊಂಡವರು
ನನ್ನ ಮನೆಸ್ವಾಮಿ ಕಾಯಲಿಲ್ಲ । ನನ್ನ ಕುಲಸ್ವಾಮಿ ಕಾಯಲಿಲ್ಲ
ದೇವಾನು ದೇವತೆಗಳೆಲ್ಲ ಕೈಬಿಟ್ಟು ಹೋಗೋ ಕಾಲ ಬಂತಪ್ಪೋ
ಆಗ ಬಂದಂತ ದೊರೆ ರಾಜರೆಲ್ಲ ಗೌಡಾಳಿಕೆಯಲ್ಲ । ಏನಪ್ಪ
ಬಬ್ಬೂರ ಗೌಡ ಹೊರಲಾರದ ಹೊರೆನೆಲ್ಲಾ ಒಂದು ಘಳಿಗೆ ಹೊತ್ತೇವು
ಮಾಡಲಾರದ ಬದುಕನ್ನೆಲ್ಲಾ ಒಂದು ಘಳಿಗೆ ಮಾಡಿಕೊಟ್ಟೇವು ।

ಗೌಡ ಧಪನ್ನ ಮಾಡಿಸಣ್ಣ । ನಮ್ಮ ದರಬಾರಿಗೆ ಹೋಗಬೇಕು
ನಮ್ಮ ದಂಡಿಗೆ ನಾವು ನಿಲ್ಲಬೇಕು ಅಂಬೋರಂತೋ ।
ಬಬ್ಬೂರಗೌಡ ವಲ್ಲಿ ಮುಸುಗು ಹಾಕಿಕೊಂಡಾನು
ಮುಸುಕು ತೆಗೆಯದೆ ಕಣ್ಣಾಗೆ ನೀರು ತುಂಬಿಕೊಂಡು
ದುಃಖನೇ ಮಾಡುತಾನಂತೋ ।
ಬಂದಂತ ದೊರೆ ಗೌಡಾಳಿಕೆಲ್ಲ ಸೇರಿ ಊರಿಗೆ ಮೀರಿರುವ
ಹನ್ನೆರಡು ಜನ ಗಂಡು ಮಕ್ಕಳನ್ನು ಹಿಡಿದು ಗುದ್ದಲಿ ಸಲಿಕೆ ಕೊಟ್ಟು
ಸುಡುಗಾಡು ಬಯಲಿಗೆ ಸಮಾಧಿ ಗುದ್ದರ ಹೊಯ್ಸಕೆ ಕಳಿಸುತ್ತಾರೋ ।
ಗುದ್ದಲಿ ಸಲಿಕೆ ತಕ್ಕೊಂಡು ಹನ್ನೆರಡು ಜನನ ನೋಡೋ ।
ಸುಡುಗಾಡು ಬಯಲಿಗೆ ಹೋಗಿ ಒಂದನೇ ಗುದ್ದರ ತೆಗೆಯಾಕೆ
ಗುದ್ದಲಿ ಪಿಕಾಸಿ ಹಾಕುತಾರೋ ।
ದೇವರು ಕರುಣೆಯಿಂದ ಹಾಕಿದ ಗುದ್ದಲಿ ಹಾಕಿದಂಗೆ
ಗುದ್ದಲಿ ನೆಲ ನಾಟಲಿಲ್ಲ । ಕಂಡ ಬುದ್ಧಿ ಖರ್ಚು ಮಾಡಿದರೂ
ಸುಡುಗಾಡು ಭೂಮಿಲಿ ಮೂರು ಕಾಸಿನ ಮಣ್ಣು ಅರಿಯಲಿಲ್ಲ
ಸಮಾಧಿ ಗುದ್ದರ ಇಳಿಯಲಿಲ್ಲ ।
ಹನ್ನೆರಡು ಜನ ಮಾತಾಡಿಕೊಂಡರು ಹಾರೆ ಗುದ್ದಲಿ ಸುಡುಗಾಡು
ಬಯಲಾಗೆ ಬೀಸಾಕಿ । ಅರಮನೆಗೆ ಹೋಗಿ ವರ್ತಮಾನ ಕೊಟ್ಟು
ನಮ್ಮ ನಮ್ಮ ಮನೆಗೆ ಹೋಗಾನೆಂದು ಅರಮನೆ ಬಾಗಿಲಾಗಿ ನಿಂತರು
ಆಗ ಬಂದಂತ ದೊರೆ ಗೌಡಾಳಿಕೆಲ್ಲಾ ಏನ್ರಪ್ಪ ಸಮಾಧಿ ಗುದ್ದರ
ಹೊಯೋಕೆ ಹೋದಾರ ಊರೊಳಗೆ ಬರಬಹುದೆ । ನ್ಯಾಯವೆ ।
ನಾವೇನು ಮಾಡಲಿ ಸ್ವಾಮಿ ಹಾಕಿದ ಗುದ್ದಲಿ
ಹಾಕಿದಂಗೆ ಬರುತ್ತೆ । ಕೈಯಲ್ಲ ಅಪ್ಪೆ ಬಂತು ಸ್ವಾಮಿ
ರಕ್ತನೇ ಸುರಿತಾದೆ. ಮೂರು ದಿನ ವಾಯಿದೆ ಮಾಡಿದರೂ
ಮೂರು ಕಾಸಿನಷ್ಟು ಭೂಮಿ ಮೇಲೆ ಮಣ್ಣು ಹರಿಯಲ್ಲ
ಇದೇನು ಅವಮಾನ । ಇದೇನು ಕೇಡ್ರಪ್ಪ ಅಂದರಂತೆ
ಏಳು ಜನ ದೊರೆಗಳಾಗ ಕುದುರೆ ಹಾಕಿಕೊಂಡು । ಸುಡುಗಾಡು
ಬಯಲಿಗೆ ಹೋದಾರಣ್ಣ । ಸುಡುಗಾಡಿಗೆ ಬಂದು ಕುದುರೆ
ಮೇಲೆ ಕುಂತು ಸಮಾಧಿ ಗುದ್ದರ ಹೊಡೆಸಕೆ ಮಾತು ಆಡುತಾರಣ್ಣ
ಅಂತೆಂಬ ಹೊತ್ತಿಗೆ ಆಗ ನೋಡು ಭಗವಂತ । ದೊಡ್ಡಾನು ದೃಷ್ಟಿಯಿಂದ
ಕುದುರೆಗಳೆಲ್ಲಾ ಗರಗರನೆ ತಿರುಗುತಾವಣ್ಣ । ನಾಲಿಗೆ ಕಡಿದು
ಕೊಳ್ಳುತಾವೆ । ಸುಡುಗಾಡು ಬಯಲಾಗೆ ಪ್ರಾಣನೆ ಕಳೆದುಕೊಳ್ಳುತಾವಣ್ಣ

ಏನಣ್ಣ ಬಬ್ಬೂರ ಗೌಡ ನೀನು ಕೆಟ್ಟೆ ಅಂದು ಬಂದರೆ
ನಾವು ನಿನ್ನಂತೆ ಆದೆವಲ್ಲಪ್ಪ । ಹತ್ತು ಕುದುರೆ ಹೋದರೂ ಒಂದೆ
ಕೂಡಿದ ಮಾನ ಹೋದರೂ ಒಂದೇ । ಯಂಗಪ್ಪ ನಮ್ಮ ವ್ಯವಹಾರಕ್ಕೆ
ಹೋಗಲಿ ಮುಖ ತೋರಿಸಲಿ ನಾವು । ಎಂದು ಮರುಗುತ್ತಾ
ಯಾಕಪ್ಪ ಸುಡುಗಾಡಿಗೆ ಬಂದೆವು ನಾವು । ಅಂದಂತಾ
ಗೌಡನ ದುಃಖಕ್ಕಿಂತ ಬಂದಂತ ದೊರೆಗಳ ದುಃಖ ಘನವಾಯಿತಣ್ಣ ।
ಕೇಳಣ್ಣ ಬಬ್ಬೂರಗೌಡ ನಾವೊಂದು ಮಾತು ಹೇಳುತೀನಿ.
ನಡಿಯಣ್ಣ ಬಬ್ಬೂರ ಅರಮನೆಗೆ ಮೂರು ಹಿಡಿ ಹೊನ್ನ ತಕ್ಕೊಂಡು
ಮಡಿಲಾಗೆ ಕಟ್ಟಿಕೊಂಡು । ಹಿರಿಯೂರು ಪೇಟೆ ಬೀದಿಗೆ
ಹೊತ್ತಿಗೆ ಹೇಳಾರು ಅವರೆ । ಕಣಿ ಹೇಳಾರು ಅವರೆ
ನಡಿಯಪ್ಪ ಕಣಿ ಕೇಳಾಕೆ ಹೋಗಾನ ನಾವು ।
ಏನು ಮಾತಾಡುತೀರ ಹುಚ್ಚು ದೊರೆಗಳಿರಾ । ಯಾತರದು
ಮಾತಾಡುತೀರ ನೀವು । ಸತ್ತ ಪ್ರಾಣ ಎದ್ದು ಬಂದದ್ದು
ತಲೆ ತಲಾಂತರಗಳಿಂದ ಉಂಟೇನಣ್ಣ । ಏನು ಮಾತು ಆಡುತೀರಪ್ಪ ನೀವು ।
ಹಾಗೆಲ್ಲ ಬೇಡ ಗೌಡ ನಿನ್ನ ಅದೃಷ್ಟ ಹೇಗೈತೋ ಪರಿಶೀಲಿಸಿ ನೋಡಬೇಕಣ್ಣ
ನಡಿಯಪ್ಪ ಹಿರಿಯೂರು ಪೇಟೆಯೊಳಗೆ ಕಣಿ ಕೇಳಬೇಕು ನಾವು ।
ಅರಮನೆಗೆ ಬಂದ ಗೌಡ ಮೂರು ಹಿಡಿ ಮಣ್ಣು ತೆಗೆದು
ಮಡಿಲಾಗೆ ಕಟ್ಟಿಕೊಂಡು । ವಲ್ಲಿನೆ ಮುಸುಕಾಸಿಕೊಂಡು
ಕಣ್ಣಾಗೆ ನೀರು ತುಂಬಿಕೊಂಡು ಹಿರಿಯೂರು ಪೇಟೆಗೆ ಹೋದನೋ ।
ಆಗ ನೋಡೋ ಭಗವಂತ ಬಬ್ಬೂರ ಊರ ಮುಂದೆ
ಮಣ್ಣು ಹಾಕಿದರೆ ಮಣ್ಣು ಇಳಿದಂಗೆ ಜನವಾದು ಜನ ನೋಡ
ಜಮಾಕಾಸಿ ಹಿರಿಯೂರು ಪೇಟೆಗೆ ಹೊರಟರು ನೋಡೋ ।
ಮುಂದಲ ದಂಡಿನಾಗೆ ಸಾನಿಕರ ದೊಡ್ಡಣ್ಣ । ಹಿಂದಲ ದಂಡಿನಾಗೆ ಓಲಗದ ತಿಪ್ಪಣ್ಣ
ಸಾಗಿ ಬಂದರಾಗ ಹಿರಿಯೂರು ಪ್ಯಾಟೆಗಾಗ ಹೊತ್ತಿಗೆ ಕೇಳ್ಯಾರು ।
ಕೇರಿ ಕೇರಿಗೆ ತಿರುಗಾರು । ತೆರೆದ ಬಾಗಿಲು ತೆರೆದಂಗೆ
ಹಾರೊಡೆದ ಬಾಗಿಲು ಹಾರೊಡದಂಗೆ ಇರುವುದು ನೋಡೋ ।
ಹೊತ್ತಿಗೆ ಹೇಳೋರ ಸುಳಿವು ಮೊದಲೇ ಇಲ್ಲವಣ್ಣ
ಕಣಿ ಹೇಳೋರ ಕೇರಿಗೆ ತಿರುಗಿಕೊಂಡು ಬಂದರಣ್ಣ
ಕಣಿ ಹೇಳಾರು ಸುಳಿವೇನಾದರೂ ಸಿಗದಣ್ಣ
ಎಲ್ಲಪ್ಪ ಹುಚ್ಚು ದೊರೆಗಳಿರಾ । ನನ್ನ ಚಿಂತನೆ ನೋಡು
ನನ್ನ ಪ್ರಾಣ ನನ್ನದು ನೋಡೋ । ನಿಮ್ಮ ಮನಸ್ಸಿಗೆ

ಖುಷಿನೇನಪ್ಪ ಭಾರಿ ಸಂತೋಷ ಆಗೇದೇನ್ರಣ್ಣ
ಅಲ್ಲಿಂದ ಇಲ್ಲಿಗೆ ಕಣ್ಣಾಗೆ ನೀರು ಹಾಕಿಸುತಾ ಯಾಕ್ರಪ್ಪಾ
ತಿರುಗಾಡಿಸಿದರೆಂದು ಬಬ್ಬೂರ ಗೌಡ ಕಣ್ಣಾಗೆ ನೀರು ಹಾಕುತಾನಂತೋ
ನಾವೇ ಮಾಡಬೇಕೋ ಗೌಡ ಯಾವುದರಲ್ಲಿಯೂ
ನಿನ್ನ ಅದೃಷ್ಟನೇ ಇಲ್ಲ ಕಣ್ಣಪ್ಪ । ನಿನ್ನ ಪ್ರಾಚೀನ ಕರ್ಮ ಕಾಣಪ್ಪ ।
ಒಳ್ಳೆಯ ಮಾತು ಹೇಳಿದರೆ ಯಾಕಪ್ಪ ಅಳುತೀಯ
ಅಂತೆಂಬಾ ವ್ಯಾಳ್ಯದಲ್ಲಿ ಬಂದಂತ ಜನರೆಲ್ಲಾ ಬಬ್ಬೂರಿಗೆ ಹೊರಟಿತು ।
ಮುಂದಾಲ ಹಿರಿಯೂರು ದಂಡೆ ಬೈಲಾಗೆ ಸಾಲಗಟ್ಟಿ
ಹಿಂದಾಲ ದಂಡಿನಾಗೆ ಒಲಗದ ತಿಪ್ಪಣ್ಣ
ಕೈಕಾಲು ಮುಖ ತೊಳೆಯುತ್ತಾ ನಿಂತಾನೆ । ತೊರೆಯ ಬಯಲಾಗೆ
ಕೈಕಾಲು ಮುಖ ತೋಳೆಯುವಾಗ್ಲೆ । ಆಕಾಶದಿಂದ ಆಲದ ಜಂಜು
ಇಳಿದಂಗೆ ಇಳಿದು ಬಿಟ್ಟಳಪ್ಪ ಕೊರವಂಜಿ

**ರಂಗನಾಥ ಕೊರವಂಜಿ ಸೃಷ್ಟಿಸಿದ ಪ್ರಸಂಗ**

ಯಾರನೆ ನರಮಾನವರೆ ನಮ್ಮನೇ ಬೇಡಿಕೋ
ನಮ್ಮನೆ ಕೊರಮರು ಈ ರಸ್ತೆ ಮಾರ್ಗದೊಳಗೆ ಕಾಣಲಿಲ್ಲ
ನಿಮ್ಮ ಹೊರಮನೆಗೆ ಕಾಣಲಿಲ್ಲ ।
ಯಾಕಲೇ ನರಮಾನವರೆ ಈ ಪಾಟಿ ದಂಡು ದಾಳು
ನಮ್ಮೂರ ಪ್ಯಾಟೆಗೋದುದು ಹೇಳಬೇಕಣ್ಣ
ನಿನ್ನಲೇ ಕೇಳಿದರೆ ನಿನ್ನಿಂದ ಆಗದೇನು ।
ಹೋಗಮ್ಮ ರಸ್ತೆ ಹಿಡಕೊಂಡು ಸುಮ್ಮನೆ ಹೋಗಮ್ಮ
ಕೇಳಲೇ ನರಮಾನವರೆ । ಈ ಭೂಮಿ ಹುಟ್ಟುದಾಗ ಹುಟ್ಟಿದವಳೆ ನಾನು
ಕೊರವಂಜಿ ಅಂದಾನೆ ಕರೆದವರೆ । ಇದ್ದದ್ದು ಇದ್ದಂಗೆ । ಹಾಗದು ಆವರಿಗೆ
ಹೇಳಬಲ್ಲೆ ನಾನು । ಹೇಳ್ರಪ್ಪ ದೊರೆಗಳೆ ಏನಾಗಬೇಕು
ನೀನು ಕೇಳಿದರೆ ಹೇಳುವುದಿಲ್ಲಪ್ಪ । ನಿಮ್ಮ ಪೂರ್ವದ
ಯಜಮಾನ್ರು ಬಂದ್ರೆ ಹೇಳಿಕೊಟ್ಟೇನಪ್ಪ ನಾನು ।
ನೀನು ಇರುವ ಸ್ಥಳವ ಹೇಳಮ್ಮ । ಜಾಗವ ಹೇಳಮ್ಮ ನಮಗೆ
ಹೋಗಪ್ಪ ತೊರೆ ಬಯಲಾಗೆ ಕೆಟ್ಟ ಬಯಲಾಗೆ
ಮಂಡಗಳ್ಳಿ ಮರದ ನೆರಳಾಗೆ ಇರುತೀನಿ
ಹೋಗಣ್ಣ ಕರಕೊಂಡು ಬರೋಗು ನೀನು ।

ಸುಳ್ಳು ಹೇಳಬೇಡಮ್ಮ ಮರೆಮಾಚಬೇಡಮ್ಮ ತಾಯಿ ।
ನ್ಯಾಯವಾಗಿ ಹೇಳಬೇಕೆಂದು ಕೈ ಮುಗಿಯುತ್ತಾನೆ
ಓಲಗದ ತಿಪ್ಪಣ್ಣ ಮುಂಗೈ ನರಿಗೆ ಸುತ್ತಿಕೊಂಡು ಬಾಯಾಗೆ ಲೊದ್ಲೆ ಸುರಿಸಿಕೊಂಡು
ಓಡೋಡಿ ಬರುತಾನಲ್ಲೋ । ಬಬ್ಬೂರ ಊರ ಮುಂದೆ
ದಂಡನ್ನ ತಡೆದಾನು । ಬಂದ್ರಮ್ಮ ದೊರೆ ದಾತು ಕರೆ
ನಿಜವಾದ ಕೊರವಂಜಿಯ ನಾನೀಗ ತೋರಿಸುತ್ತೀನಿ
ಹೋಗಲೇ ಓಲಗದವನೆ । ದೆವ್ವವನ್ನು ಕಂಡಿಯೋ । ಪೀಡೆ
ಪಿಚಾಚಿಯನ್ನ ಕಂಡೆಯೋ । ಖಚಿತವಾಗಿಯೂ ಬರೋದಿಲ್ಲ ನಾವು ।
ದೆವ್ವವಲ್ಲ ಪಿಚಾಚಿಯಲ್ಲ ನಿಜವಾದ ಕೊರವಂಜಿಯನ್ನ
ಖಂಡಿತವಾಗಿಯೂ ತೋರಿಸುತೀನಿ ನಾನು ।
ಹೇಳಲೇ ಒಲಗದ ಮಗನೆ ಅವಳ ರೂಪವನ್ನು ಹೇಳಬೇಕು ನಮಗೆ
ಕೇಳ್ರಮ್ಮ ದೊರೆ ರಾಜ ಗೌಡಾಳಿಕೆಯಲ್ಲ । ಕೇಳ್ರಪ್ಪ ನೀವು ಪ್ರಜೆ
ಪಾಲಕರೆಲ್ಲ ।
ಹಣ್ಣು ಹಣ್ಣಜ್ಜಿ ಗೊಣ್ಣೆಸುರುಕಿ ಜೂಲುದೆಲೆ ಅಜ್ಜಿ
ಬೆಂಕಿಗಾಕಿದರೆ ಬೇಯದಂತಹ ಸೀರೆ ಹುಟ್ಟುವಳೆ
ಜರಡಿಯಂಗೆ ತಲೆನೆಲ್ಲಾ ಕೆದರಿಕೊಂಡವಳ
ಮೈಯಲ್ಲ ಕಣ್ಣಿ ಕಂಠದಲ್ಲಿ ಕೊರವಂಜಿ ಕವಡೆ
ಕೈಯಲ್ಲಿ ನಾಗರ ಬೆತ್ತ
ಅಂಗಂದ ಮಾತಿಗೆ ಜನವಾದ ಜನವಲ್ಲ ಹಿಂದಕ್ಕೆ ತಿರುಗಿಕೊಂಡು ಬರುತಾರೆ
ತೊರೆಯ ಗಡ್ಡೆ ಬಯಲಿಗೆ ಹೋಗಿ ನೋಡುತಾರಣ್ಣ
ಮಾಯಕಾತಿ ಕೊರವಂಜಿ ಮಾಯವಾಗಿ ಹೋದಳಣ್ಣ
ನಿಜವಾದ ಕೊರವಂಜಿ ನಿಜವಾಗಿ ಹೋದಳಣ್ಣ
ಏಲೆಲ ಒಲಗದ ಮಗನೆ । ಬಾರಪ್ಪ ಕೊರವಂಜಿ ತೋರಿಸು
ಬಾರೆಂದು ಬಬ್ಬೂರ ಗೌಡ ವಲ್ಲಿ ಸೆರಗು ಮುಖದಲ್ಲಿ ಮುಚ್ಚಿ
ಕಣ್ಣೀರು ಹಾಕಿಕೊಂಡು ನಿಂತು ಬಿಟ್ಟನಣ್ಣೋ ।
ನಾವೇನು ಮಾಡಬೇಕು ಹಿರಿಯಣ್ಣ
ನಿನ್ನ ಪಾಪದ ಕರ್ಮ ಕಾಣಪ್ಪ । ಅಂದ ಕೂಡಲೇ ಗೌಡ
ವಲ್ಲಿ ಸೆರಗಾಕಿಕೊಂಡು ಮುಖ ಮುಚ್ಚಿಕೊಂಡು
ಹಿಂತಿರುಗಿ ಹೋಗಿಬಿಟ್ಟನಂತೋ । ಜನವಾದ ಜನವಲ್ಲ
ಹಿಂದಿರುಗಿ ಹೊರಟಿತಣ್ಣ ।
ಜನವಾದ ಜನವೆಲ್ಲ ಹೋಗುವಾಗ ಹಿಂತಿರುಗಿ ನೋಡುತಾರೆ

ಮಾಯಕಾತಿ ನಿಂತವಳೆ । ಮರದ ನೆರಳಾಗೆ ॥
ಆಗಲೇ ಜನವಾದ ಜನವೆಲ್ಲಾ ಮಂಡಗಳ್ಳಿ ಮರದಾಗೆ
ಮಳ್ಳು ಹಾಕಿದರೆ ಮಳ್ಳು ಇಳಿದಂಗೆ ಜಮಕಾಸಿ ಕುಂತುಬಿಟ್ಟರಣ್ಣ
ಬೊಬ್ಬೂರ ಗೌಡ ಹೇಳಮ್ಮ ಕೊರಮಿ ಏನೇನು ಆಗಬೇಕು
ನಾಗ ದೂಪಾವಾಗಬೇಕು । ಮೂಗುಳ ಬೆಂಕಿ ಕೆಂಡಾಗಬೇಕು ।
ಮೂಗು ಕರುವಿನ ಸಗಣಿ ಆಗಬೇಕು । ಅಡವಿಯೊಳಗಣ
ಬೇವಿನ ಪತ್ರೆ ಆಗಬೇಕು । ಮೂಗು ಕರುವಿನ ಗೋವಾಗಬೇಕು
ಇಷ್ಟು ತಂದು ಕೊಟ್ಟರೆ ಮುಂದಲ ಮಾತ ಅರಿವೇನು ನಾನು ।
ಬಬ್ಬೂರ ಗೌಡನಿಗೆ ಬಡತನವೇನಮ್ಮ
ಕಾಲು ಗಂಟೆಯೊಳಗೆ ಒದಗಿಸಿಕೊಂಡು
ಕೊರವಂಜಿ ಕೈಯ್ಯಿಗೆ ಕೊಟ್ಟು ಬಿಟ್ರನಣ್ಣ
ಆಗಲೇ ಮಹಾತಾಯಿ ಮಂಡಗಳ್ಳಿ ಮರದಡಿಯಲ್ಲಿ
ನಾಲ್ಕು ಮೂಲೆಗೆ ಸಾರಿಸಿ ಬಿಟ್ಟು । ಕೊರವಂಜಿ ಹೂಡಿಕೊಂಡು
ಕುಂತವಳೆ ನೋಡೋ ।
ಬಬ್ಬೂರ ಗೌಡ ಮೂರು ಹಿಡಿ ಹೊನ್ನು ತಕ್ಕೊಂಡು ಹೋಗಿ
ಕೊರವಂಜಿಗಿಟ್ಟು ಗೌಡ ಕುಂತನಣ್ಣ ।
ಆಗ ಕೊರವಂಜಿ ಉತ್ತರದ ದೇವತೆರನ್ನೆಲ್ಲಾ ಶೋಸ್ತಾನೆ ಮಾಡುತಾಳೆ
ಒಂದು ದೇವರಾದರೂ ಬರಾಗಿಲ್ಲ । ಕಡಿಗನ್ನಲಿಲ್ಲ ನೋಡೋ ।

ಕಲ್ಲೇಲಿಂಗ ಮಲ್ಲೇಲಿಂಗ ಕೋಡುಗಲ್ಲು ಬಸವಣ್ಣ
ಕಳೇ ವೀರಭದ್ರಸ್ವಾಮಿ । ಮುನ್ನೂರು ಕೋಟಿ
ದೇವರುಗಳನ್ನ ಸ್ಮರಿಸಿ ಮೂಡುತಾಳೆ ಕೊರಮಿ

ಮೂಡಲಗಿರಿಯೋನೆ । ಮುನ್ನೂರು ಗಾವುದಯ್ಯ
ಪಡುವಲಗಿರಿಯವನೆ ಅಂಗಾವುದಣ್ಣ ಬನ್ನಿರಯ್ಯ
ಗೌಡನ ಕಷ್ಟ ಕಾಲಕ್ಕೆ ಬನ್ನಿರಪ್ಪ ನೀವುಗಳು
ಒಂದೂ ದೇವತರಾದರೂ ಬರಲಿಲ್ಲ ಕಡೆಗನ್ನಲಿಲ್ಲ
ಯಂಗಪ್ಪ ಕಣಿ ಹೇಳೂದು ನಾನು ।
ಪಾಪಿಗಳೆನ್ನಬೇಕಣ್ಣ । ಪರದೇಶಿಗಳಿಗೇಳಬೇಕಲ್ಲ
ನನ್ನಂಥ ಪಡಿವಂತರ ಕೂಡಿಕೊಂಡು ಹೋಗೋ ಗೌಡ ನಾನು.

ಕೇಳಣ್ಣ ಬಬ್ಬೂರ ಗೌಡ ನಿನ್ನ ಮೂರು ಹಿಡಿ ಹೊನ್ನು
ನನ್ನ ಭಿಕ್ಷದ ಮೂರು ಹಿಡಿ ಮುಗ್ಗಲು ಜೋಳ ಕಣಪ್ಪ

ಈಗ ಮೂರು ಹಿಡಿ ಹೊನ್ನು ತಕ್ಕೊಂಡು ನನ್ನ ನೂರು ಕಾಸು
ಇಡಪ್ಪ ಮೂರು ಮಾತು ಹೇಳಿ ಕೊಟ್ಟೇನು ನಾನು

ಆಗ ನೋಡ ಭಗವಂತ ಬಬ್ಬೂರಗೌಡ
ಮೂರು ಹಿಡಿ ಹೊನ್ನ ತಕ್ಕೊಂಡು ಅಲ್ಲಿನ ಪ್ರಜೆಗಳನ್ನು
ಅಂಗಲಾಚುತಾನೆ ನೋಡೋ । ಸೆರಗೊಡ್ಡಿ ಬೇಡುತಾನಲ್ಲೋ

ಭಾರಿ ಭಾರಿ ವಸ್ತ್ರದವರನ್ನು ಕೇಳುತಾನೆ ಗೌಡ
ಭಾರಿ ಭಾರಿ ಗೌಡಾಳಿಕೆಯವರನ್ನೆಲ್ಲಾ ಕೇಳುತಾನೆ
ಬಂದಂತ ದೊರೆ ಅರಸರನ್ನೆಲ್ಲಾ ಕೇಳುತಾನೆ
ಮೂರು ಹಿಡಿ ಹೊನ್ನ ತಕ್ಕೊಂಡು ಮೂರು
ಕಾಸು ಕೊಡೋ ದೊರೆ ಮಾನ್ಯರು ಇಲ್ಲ ನೋಡೋ ।
ಭಾರಿನೇ ಸಂಸಾರಿ । ಭಾರಿನೇ ಗೌಡಾಳಿಕೆ ಕಾಣಣ್ಣ
ಭಾರಿನೇ ವಜವಂತ । ಭಾರಿನೇ ವಕ್ಕಲತನ ಕಾಣೋ
ಅಂಥ ಗೌಡಗೆ ಆ ಹೊತ್ತಿನ ಕಾಲದಲ್ಲಿ ಮೂರು ಹಿಡಿ
ಹೊನ್ನ ತಕ್ಕೊಂಡು ಮೂರು ಕಾಸು ಕೋಡೋರು ಇಲ್ಲವಲ್ಲೋ
ನನ್ನ ಹಣೇಬರಹಕ್ಕೆ ಮೂರು ಕಾಸು ಹುಟ್ಟುಲಿಲ್ಲವಲ್ಲೋ ।
ಏನು ಗ್ರಹಚರ ಬಂತಪ್ಪ ।
ನನ್ನ ಮನೆಸ್ವಾಮಿ ಕಾಯಲಿಲ್ಲ । ಕುಲಸ್ವಾಮಿ ಕಾಯಲಿಲ್ಲ
ದೇವಾದಿ ದೇವುತರೆಲ್ಲಾ ಕೈಬಿಟ್ಟು ಹೋದರೆಲ್ಲಾ
ಆಳು ವಿಧಿ ಮುಂಡೆ ನನ್ನ ಹಣೇಲಿ ಏನಂತ ಬರೆದೆ ನೀನು
ಮದ್ದಿನ ಕಡ್ಡಿಯಂಗೆ ಯಾಕಾರ ಬಿಟ್ಟೋದೆ ನನ್ನೊಬ್ಬನನ್ನೆ ।
ನನ್ನನ್ನು ಕರಕೊಂಡು ಹೋಗಬಾರದಾಗಿತ್ತೇನಪ್ಪ
ಬಡುಕೋತಾನೆ ಗೌಡ
ಅಷ್ಟಾರ ಪ್ರಜೆಯೊಳಗೆ ಭಾರಿ ಗೌಡ ಕಾಣನಮ್ಮ
ಆಳುದ್ದ ಹೊಟ್ಟೆ ಗೇಣುದ್ದ ಮಾಡಿ । ವಲ್ಲಿ ಮುಸುಕಾಕಿಕೊಂಡು
ಕಣ್ಣಾಗೆ ನೀರು ಹಾಕಿಕೊಂಡು ನಿಂತ ಗೌಡ ।
ಯಾರು ಮೂರು ಕಾಸು ಕೊಡೋದಿಲ್ಲ ।

ಮೂರು ಹಿಡಿ ಹೊನ್ನ ಬಗಲಿಗೆ ಕಟ್ಟಿಕೊಂಡು
ಹಿರಿಯೂರು ಪೇಟೆಗೆ ಓಡೋಡಿ ಬರುತಾನೆ ಗೌಡ
ಹಿರಿಯೂರು ಪೇಟೆಗೆ ಕೇರಿ ಕೇರಿಗೆ ತಿರುಗುತಾನೆ
ಬೀದಿ ಬೀದಿ ಅಲೆಯುತ್ತಾನೆ ಗೌಡ । ಮೂರು ಹಿಡಿ

ಹೊನ್ನ ತಕ್ಕೊಂಡು ಮೂರು ಕಾಸು ಕೊಡಿರೆಂದು
ಬೀದಿ ಬೀದಿ ತಿರುಗುತಾನೆ. ಮೂರು ಕಾಸು ಹುಟ್ಟಲಿಲ್ಲ
ಪೇಟೆನೆಲ್ಲಾ ತಿರುಗಿಸಿದ ಸೇವೆ ರೋಸಿ ಹೋಗಿ
ಹಿರಿಯೂರು ಕಡೆ ಪೇಟೆಯೊಳಗಿನ ಕರಿಯಾನೆ ಕ್ವಾಂಟಿಗ ಶೆಟ್ಟಿ
ಆ ಶೆಟ್ಟಿ ಮನೆಯೊಳಗೆ ಬಬ್ಬೂರು ಗೌಡ ವಲ್ಲಲ್ಲಿ ಮುಸುಕು ಹಾಕಿ
ಕಣ್ಣಾಗೆ ನೀರಾಕಿಕೊಂಡು ಅಳುತಾನೆ ನೋಡೋ ।
ಆಗ ಶೆಟ್ಟಿಗಾರ ಬಂದನಣ್ಣ ಯಾಕಪ್ಪ ಬಾರಿ ಗೌಡ ನೀನು
ಭಾರಿ ಸಂಸಾರಿ ಕಾಣಪ್ಪ । ಇಷ್ಟು ಹೊತ್ತಿಗಾಗಲೇ ಬಂದೋ ।
ನಮ್ಮ ಪೇಟೆಯೊಳಗೆ ಕಣ್ಣಾಗೆ ನೀರಾಕದೇಕೋ ।
ಏನಾದರೂ ಆಗಲಿ ಹೇಳ್ರಪ್ಪ ಬಂದ ಕಾರ್ಯವೇನಪ್ಪ
ಏನೆಂತ ಹೇಳಲಪ್ಪ ಶೆಟ್ರಪ್ಪ ನನ್ನ ಬಂದಾನ ಕಳೆಯಪ್ಪ
ಎಂದನು ಬಬ್ಬೂರು ಗೌಡನಾಗ ।
ಕೇಳ್ರಪ್ಪ ಗೌಡ ಕೊಡಾದಾದ್ರೆ ಕೊಡುತೀನಿ ಇಲ್ಲವಾದರೆ
ಇಲ್ಲ ಅಂತೀನಿ ನ್ಯಾಯವಾಗಿ ಹೇಳಪ್ಪ ಅಂಬಾನೆಂತೋ ।
ಮೂರು ಹಿಡಿ ಹೊನ್ನ ತಕ್ಕೊಂಡು ಮೂರು ಕಾಸು ಕೊಡಪ್ಪ ನೀನು
ಮುಂದಲ ಮಾತು ಹೇಳುತೀನಿ ನಾನು
ಆಗ ನೋಡೋ ಭಗವಂತ ಶೆಟ್ರ ಬುದ್ಧಿ ಸುಟ್ಟರೂ ಹೋಗಲ್ಲ
ಅಂಬಂಗೆ ಕೇಳಮ್ಮ ಬಬ್ಬೂರ ಗೌಡ ಇಲ್ಲಿಗೆ ಬಂದ ಸಂಪತ್ತು ಏನಪ್ಪ
ಅಂತೇಳಿ ಮನೆಗೆ ಕರೆದುಕೊಂಡು ಹೋಗಿ ಏನೆಂದು ಹೇಳುತಾನಪ್ಪ
ಕೇಳಣ್ಣ ಬಬ್ಬೂರ ಗೌಡ ಹಿಂಗಾದರೆ ಕೊಡೋದಿಲ್ಲ ನಾನು
ಈಗ ಹನ್ನೆರಡು ಜನ ಕೈವಾಡದವರ ಕರಕೊಂಡು ಬಂದರೆ ನೀನು
ಮೂರು ಹಿಡಿ ಹೊನ್ನಿಗೂ ಮೂರು ಕಾಸಿಗೂ ದಕ್ತು ಅಂಥ ರುಜು ಹಾಕಿ
ಇಲ್ಲಂದ್ರೆ ಕೊಡೋದಿಲ್ಲ ನಾನು ಅಂದನಲ್ಲೋ ।

ಆಗಲೇ ಬಬ್ಬೂರ ಗೌಡ ಹನ್ನೆರಡು ಜನ ಕೈವಾಡದವರೊಂದಿಗೆ
ಮೂರು ಹಿಡಿ ಹೊನ್ನು ಮೂರು ಕಾಸಿಗೆ ದಕ್ತು ಅಂಥ ರುಜು ಹಾಕಿ
ಶೆಟ್ಟಿಗಾರ ಮೂರು ಹಿಡಿ ಹೊನ್ನು ತಕ್ಕೊಂಡು ಮೂರು ಕಾಸು
ಕೊಡುತ್ತಿದ್ದಂಗೆ ಗೌಡ ಮೂರು ಕಾಸು ತಕ್ಕೊಂಡು ವಲ್ಲಿಗೆ
ಕಟ್ಟಿಕೊಂಡು ಮುಸುಕಾಗಿಕೊಂಡು ಓಡೋಡಿ ಬಂದನಣ್ಣಾ ।

ಮೂರು ಕಾಸು ತಕ್ಕೊಂಡು ಬರುವಾಗ್ಗೆ ಆಳುಮುಂಡೆ
ಮನೆಯಾಳು ರಂಡೆ ಕೊರುವಂಜಿ ಮನುಷ್ಯ ಮಾನ್ಯರು
ಹತ್ತಿರ ಹೋಗೋ ಹಾಗಿಲ್ಲದಂಗೆ ವಿಕಾರ ರೂಪಾಗಿ ಕುಂತಳಪ್ಪ

ಬಂದಂತ ಪ್ರಜೆಪಾದಿ ಗೌಡಾಳಿರೆಲ್ಲ ಕೈಗಲ್ಲು ಎಸೋಯೊ ದೂರ
ವಲ್ಲಿಗೆ ಮುಖ ಮುಚ್ಚಿಕೊಂಡು ಕುಂತರೆಲ್ಲೋ
ಮೂರು ರೆಟ್ಟ ಗಾತ್ರ ಗೊಣ್ಣೆ ಸುರುಸಿಕೊಂಡಾವಳೇ
ಒಂದು ಖಂಡುಗ ನೊಣ ಮುತ್ತಿಕೊಂಡಾವೆ
ಎಡರು ಹೊಡೆಯುತ್ತಾ । ದುರ್ವಾಸನೆ ಬಡಿಯುತ್ತಾಳೆ ।
ಮನುಷ್ಯರು ಮಾನ್ಯರು ಹತ್ತಿರ ನಿಲ್ಲಕಾಗುವುದಿಲ್ಲ

ಆಗ ನೋಡ ಭಗವಂತ ಬಬ್ಬೂರ ಗೌಡ ಹೋಗಿ
ಕಷ್ಟ ಕಾಲದಲ್ಲಿ ಕಾಯಮ್ಮ ತಾಯಿ । ಮೂರು ಏಟು
ಜಡ್ದು ಹೇಳಮ್ಮ ತಾಯಿ ನೀನು ಅಂದನಂತೋ ।
ಯಾಕಪ್ಪ ನರಮಾನವನೆ ಈಪಾಟಿ ಅವಸರ
ನನ್ನ ಗಂಡಗೆ ಮೂವರು ಸವತಿಯರು ಆದಾರೋ
ಕಾಲಕ್ಕೆ ಸರಿಯಾಗಿ ಬೀಡಿಗೆ ಹೋದರೆ ಸರಿಯಾಯ್ತು
ಇಲ್ಲದಿದ್ದರೆ ನನ್ನ ಗಂಡನಿಗೆ ಚಾಡಿ ಹೇಳಿಬಿಟ್ಟು
ಇರುಳೆಲ್ಲಾ ನನ್ನ ಕತ್ತೆ ಗೂಟಕ್ಕೆ ಕಟ್ಟಿಸುತ್ತಾರೋ ।
ಬಾಯನೇ ಬಿಡೋದಿಲ್ಲವಲ್ಲ ಕೊರವಂಜಿ ಸೊಲ್ಲಾನೆ ತೆಗೆಯೊದಿಲ್ಲ
ಬಂದಂತ ದೊರೆ ಗೌಡಾಳಿಕೆಲ್ಲಾ ಬೇಸರ ಬೀಳುತ್ತಾರಲ್ಲಾ
ಈ ಮುಂಡೆ ಹೇಳೋದೇನಪ್ಪ । ನಾವು ಕೇಳೋದೇನು ।
ನ್ಯಾಯವಾಗಿ ಹೇಳಿದರೆ ಸಮವಾಯಿತು ಹೇಳದಿದ್ದರೆ
ಈ ಮುಂಡೆ ಪ್ರಾಣ ಭೂಮಿ ಮೇಲೆ ಬಿಡಬಾರದಪ್ಪ
ಜೋಡು ಗುಂಡು ಹಾಕಬೇಕು ಈಗ । ಜೋಡು ಗುಂಡಿನಿಂದ
ಹೊಡೆದು ಹೋಗಬೇಕಪ್ಪ ಈಗ ।
ಜೋಡಿ ಗುಂಡು ಎಂತದ್ದಂಗೆ ದೊಡ್ಡಾನು ದಿವ್ಯ ದೃಷ್ಟಿಯಿಂದ
ದೇವರು ಕರುಣೆಯಿಂದ ಆಳುಮುಂಡೆ ಕೊರವಂಜಿ
ಆಕಾಶ ಭೂಮಿಗೆ ಏಕವಾಗಿ ಬೆಳೆದು ನಿಂತಳಲ್ಲೋ ।
ಪಿರಿ ಪಿರಿದು ರುಂಡ ಮುರಿಯುತ್ತಾಳೆ । ಕೊರವಿ
ರುದ್ರಾವತಾರ ತಾಳುತಾಳೆ । ಕರ ಕರ ಹಲ್ಲು ಕಡಿದು
ಕಣ್ಣ ನಿಂಬೆಹಣ್ಣಿನಂಗೆ ಹೊರಳಿಸುತ್ತಿದ್ದಂಗೆ
ಜನಾದಿ ಜನವೆಲ್ಲಾ ಬೆದರಿ ಬೆಂಡೆ ಬಿಸಿಲಾಗಿ
ಒಂದು ಕೈಗಲ್ಲು ಎಸೆಯೋ ದೂರಕ್ಕೆ ಹೋದರಂತೋ ।
ಒಂದು ಕೈಗಲ್ಲು ಎಸೆಯೋ ದೂರಕ್ಕೆ ಹೋಗುತ್ತಿದ್ದಂಗೆ
ಭೂಮಿ ಮುಚ್ಚಿದ ಕೆಂಡ ಭೂಮಿ ಉದ್ದಂಡೆ

ನಾಗರಹಾವಿನ ಗಂಡ ನಾಲ್ಕು ಲೋಕಕೂ ಮಿಂಡ
ನೂರೊಂದು ದೈವಕೂ ಗಂಡ
ಎರೆಯ ಹೊಲದಿಂದ ಬಂದ ಘನ ಗುರುವು
ಎಷ್ಟು ಗುಂಡು ಹಾಕಿದರೂ ಅವರ ಗುಂಡಿಗೆ
ಎದೆ ಕೊಟ್ಟು ನಿಲ್ಲು ತಂಗಿ ಅಂತೆಂದು ಹೇಳೋನಲ್ಲೋ ।
ಅವರ ಗುಂಡು ಸೋಲುತಾವೋ । ನೀನು ಸೋಲು
ತೀಯೋ ನೋಡಾನ ಅಂತೆಂದು ಹೇಳುತಾನೆ ।
ಬನ್ನಿರಲೇ ನರಮಾನವರೆ ಎಷ್ಟು ಗುಂಡು ಹಾಕುತೀರ
ಎಷ್ಟು ಗುಂಡು ಸಂಪಾದನೆ ಮಾಡಿದ್ದೀರ
ಹೊಡಿ ಬನ್ನಿರೆಂದು ಕೂಗುತಾಳಣ್ಣ ।
ಹತ್ತಿರ ಬರೋ ಮಾನವರು ಒಬ್ಬರಿಲ್ಲ
ಒಂದು ಕೈಗಲ್ಲು ಎಸೆಯೋ ದೂರದಿಂದ ಆಚೆಗೆ,
ಆಗ ಬಬ್ಬೂರ ಗೌಡ ಧೈರ್ಯ ಮಾಡಿಕೊಂಡು
ಕೊರವಂಜಿ ಮುಂದೆ ಮಂಡಿ ಹೂರಿಕೊಂಡು
ನಿನ್ನ ಮರ್ಮ ತಿಳಿಲಿಲ್ಲ । ನಿನ್ನ ಗುಟ್ಟು ಅರಿಲಿಲ್ಲ
ನನ್ನಿಂದಾ ಸರ್ವದಾ ತಪ್ಪಾಯಿತು । ಹೆತ್ತವ್ವನ ಹಾಗೆ
ಹೊಟ್ಟೆವೊಳಗೆ ಹಾಕಿಕೊಂಡು ಒಂದು ಸೊಲ್ಲು ಹೇಳವ್ವ
ಕೇಳಲೇ ನರಮಾನವರೆ ಸತ್ತ ಪ್ರಾಣಿ ಎತ್ತವರು
ನರಮಾನವರೆಂದು ಕಣಿ ಕೇಳಾಕೆ ಯಾಕೆ ಬಂದೆ
ಹೋಗಯ್ಯ ಹೋಗೋ ನೀನು ।

**ಗರುಡಗಂಬದ ರೂಪ**

ನನಗೆ ತಿಳಿಲಿಲ್ಲ ಗುರ್ತಾಗಲಿಲ್ಲ ತಾಯಿ
ನನ್ನಿಂದ ಘನವಾದ ತಪ್ಪಾಯಿತು ಒಂದು ಸೊಲ್ಲು
ಬಾಯಿಬಿಟ್ಟು ಹೇಳಮ್ಮ ನೀನು ।
ಕೇಳಲೇ ಬಬ್ಬೂರ ಗೌಡ
ಮುಂಗಾರು ಸಿಡಿಲು ಬಡಿದು ಇಂದಿಗಾರು ತಿಂಗಳಾಗೈತೆ ।
ಉಕ್ಕಿನಾ ಪಾಳು ಎರೆಯನೆ ಹೊಲದ ಬಯಲು ಸೇರಿ
ಈ ಹೊತ್ತಿನ ಕಾಲದಲ್ಲಿ ನಿನ್ನ ಹಿರಿಯನ ಮಡಿಕೆ ಉಕ್ಕಿ
ಬಯಲಾಗೆ ಬಿದ್ದೈತೆ । ಅದನ್ನ ತಕ್ಕೊಂಡು ಹೋಗಿ
ಮಂಡವಾಳದಲ್ಲಿ ದಾಸರ ಚನ್ನಪ್ಪ ಅವನೆ

ದಾಸರ ಚನ್ನಪ್ಪನ ಕೈಗೆ ಕೊಟ್ಟು ಈ ಉಕ್ಕಿನ ಪಾಳಿನಿಂದ
ಈ ಹೊತ್ತಿಗೆ ಎಂಟು ದಿವಸಕ್ಕೆ ಗುರುಡಗಂಬ ತಯಾರು
ಮಾಡಿಸಪ್ಪ ನನಗೆ । ನಿನ್ನ ಪವಾಡ ಎತ್ತುತೀನಣ್ಣ
ಇಲ್ಲದಿದ್ದರೆ ಬ್ಯಾರೆ ಎತ್ತೋದಿಲ್ಲೋ ನಾನು ।
ಅಂಗಂಬಾ ಮಾತಿಗೆ ಬಬ್ಬೂರ ಗೌಡ
ಉಕ್ಕಿನ ಪಾಳು ಬೇಡಮ್ಮ ತಾಯಿ ನನ್ನ ಮನೆಯೊಳಗೆ
ಬಂಗಾರದ ಪಾಳು ಅದಾವಮ್ಮ । ಆ ಪಾಳನ್ನೇ
ಮುರಿಸಿ ಬಂಗಾರದ ಗರುಡಗಂಬ ಮಾಡಿಸುತೀನಿ ನಾನು ।
ನಿನ್ನ ಬಂಗಾರ ಎಂಬೋದು ನನ್ನ ಕುಕ್ಕೆಗಳ ಕಗ್ಗಲು ಜೋಳವಪ್ಪ
ಖಂಡಿತವಾಗಿ ಬೇಕಿಲ್ಲ ಗೌಡ ನೋಡೋ ।
ಬೆಳ್ಳಿ ಘಟ್ಟಿ ಮುರಿಸಿ ಬೆಳ್ಳಿ ಗರುಡಗಂಬ ಮಾಡಿಸುವೆ ನಾನು ।
ನಿನ್ನ ಬೆಳ್ಳಿ ಬಂಗಾರಂಬೋದು ನನ್ನ ಕಬ್ಬಿಣದ ಸಮಾನ ಕಾಣೋ
ಖಂಡಿತವಾಗಿಯೂ ಬೇಕಿಲ್ಲಪ್ಪ ಗೌಡ ನೋಡೋ
ಕೇಳಪ್ಪ ಬಬ್ಬೂರ ಗೌಡ ಈ ಸೀಮೆಯಿಂದ ಇನ್ನೊಂದು
ಬಬ್ಬೂರ ಕಂಬದ ರಂಗ ಎಂಬ ಹೆಸರುವಾಸಿ
ಬರಬೇಕು ಇಲ್ಲ ಹೇಳಪ್ಪ ಗೌಡ ನೀನು ।

ಆಗಲಮ್ಮ ತಾಯಿ ಖಂಡಿತವಾಗಿಯೂ ಮಾಡಿಸುತೀನಿ
ಮರೆಮಾಚ ಬೇಡಪ್ಪ ಸುಳ್ಳು ಹೇಳಬೇಡಪ್ಪ ನೀನು
ಖಂಡಿತವಾಗಿಯೂ ಮರೆಮಾಚುವುದಿಲ್ಲ ತಾಯಿ ನಾನು ।
ಈ ಹೊತ್ತಿಗೆ ಎಂಟು ದಿವಸಕ್ಕೆ ನಾನೆಲ್ಲಾ ತಯಾರು ಮಾಡಿಸುವೆ ತಾಯಿ
ಹೋಗಣ್ಣ ಬಬ್ಬೂರ ಗೌಡ ಊರು ಮುಂದಾಕೆ ಹೋಗುವಾಗ್ಗೆ
ಎಲ್ಲಾರು ಎದ್ದು ಬರುತಾರೋ ।
ಅಂಗಂದ ಮಾತಿಗೆ ಗೌಡ ಕೊರವಂಜಿಗೆ ದೀರ್ಘದಂಡ
ನಮಸ್ಕಾರ ಮಾಡುತ್ತಾನೋ ।
ದೀರ್ಘದಂಡ ನಮಸ್ಕಾರ ಬಬ್ಬೂರ ಗೌಡ ಮುಸುಕಾಕಿಕೊಂಡು
ಬಂದನಲ್ಲೋ । ಅಂತೆಂಬಾ ಹೊತ್ತಿಗೆ
ಮಾಯಕಾತಿ ಕೊರವಂಜಿ ಮಾಯವಾಗುತಾಳಪ್ಪ
ನಿಜವಾದ ಕೊರವಂಜಿ ನಿಜವಾಗಿ ಹೋದಳಪ್ಪ
ಮುಂದಲ ದಂಡಿನಾಗೆ ಬಬ್ಬೂರ ಗೌಡ ಓಡೋಡಿ ಬರುವನಣ್ಣ
ಜನವಾದ ಜನವೆಲ್ಲ ಮುಳ್ಳು ಹಾಕಿದರೆ ಮುಳ್ಳು ಇಳಿದಂಗೆ ಸೇರವರೆ
ಅಂತೆಂಬ ವ್ಯಾಳೆಯಾಗೆ ಊರು ಮುಂದಕ್ಕೆ ಬರುತ್ತಿದ್ದಂಗೆ

ಏಳು ಮಂದಿ ದೊರೆ ಗೌಡಾಳಿಕೆಯ ಕುದುರೆಗಳೆಲ್ಲಾ
ತಿಪ್ಪೆಗುಂಡಿಯೊಳಗೆ ಹುಲ್ಲುಕಡ್ಡಿ ಆದುಕೊಂಡು
ತಿನ್ನುತಾವಂತೋ । ಕುದುರೆಗಳು ಹೂಕರಿಸುತ್ತಾ ನಿಂತಾವೆ ನೋಡೋ
ಊರ ಬಾಗಿಲಾಗೆ ಹೋಗುತಾನೆ ಗೌಡ । ಗೌಡನ ಹೆಂಡತಿ
ಏಳು ತಿಂಗಳ ಬಸುರಿ । ಕಂಕಳಾಗೆ ಕೊಡಪಾನ ಹಿಡಕೊಂಡು
ಕಳಿ ಅಡಕೆ ಕಡಿಯುತ್ತಾ । ಕಳಿ ಎಲೆ ಮಡಚುತ್ತಾ
ಊರು ಬಾಗಿಲಿಗೆ ಎದುರು ಬಂದಳು ನೋಡೋ ।
ಆಗ ನೊಡ ಭಗವಂತ । ಬಬ್ಬೂರ ಗೌಡ ವಲ್ಲಿ ಮುಸುಕಾಕಿ
ಕೊಂಡು ಹುಸಿನಗೆ ನಗುತಾನಂತೋ । ಅರಮನೆಗೆ ಹೋಗುತಾನಂತೋ
ಎರೆ ಹೊಲದಾಗೆ ಏಳು ಮಂದಿ ತಮ್ಮಗಳು
ಏಳು ವರ್ಜಿ ಎತ್ತು ಹೂಡಿಕೊಂಡು । ಏಳು ಮಂದಿ
ಗರತಿಯರು ಬುತ್ತಿ ಗೂಡೆ ಹೊತ್ತುಕೊಂಡು
ಎಲ್ಲರೂ ಊರು ಮುಂದಾಕೆ ಜಮಕಾಸಿದರಂತೋ ।
ಅರಮನೆವೊಳಗೆ ಬಬ್ಬೂರ ಗೌಡ ಬಂದಂತ
ದೊರೆ ಗೌಡಾಳಿಕೆಗೆಲ್ಲಾ ಬೇಕು ಬೇಕಾದ
ದೇವಣಿಕೆ ಕೊಟ್ಟು ಅವರೆಲ್ಲರನ್ನು ಸಾಗಾಕಿದ ನೋಡೋ ।

ಬಬ್ಬೂರ ಗೌಡ ನೋಡ ಅರಮನೆ ಒಳಗೆ
ದೇವರ ಜ್ಞಾಪದಿಂದ ಮರೆತು ಮಲಗಿದನಲ್ಲೋ
ಸ್ವಾಮಿನೇ ಮರೆತು ಬಿಟ್ಟನಲ್ಲೋ ।
ಸಕ್ಕಟೆ ಸರವತ್ತು ರಾತ್ರಿಯಲ್ಲಿ ಮಾಯಕಾರ ನಮ್ಮಪ್ಪ
ಗೌಡನ ಅರಮನೆಗೆ ಹೊರಟೋದನಲ್ಲೋ
ಗೌಡನ ಅರಮನೆಗೆ ಹೊರಟು ಹೋಗುತ್ತಿದ್ದಂಗೆ
ಮನೆಯಾದ ಮನೆಯಲ್ಲ ದೀಪ ಹಚ್ಚಿದಂಗೈತೆ
ಗಂಡ ಹೆಂಡರು ಎಚ್ಚರವಿದ್ದಾರೆ । ಅರಮನೆಯೊಳಗೆ
ಯಾರೂ ಎಚ್ಚರವಿಲ್ಲದಂಗೆ ಮಲಗವರೋ ।
ಆಗ ನೋಡೋ ಭಗವಂತ ದೇವರು ನಮ್ಮಪ್ಪ
ಗೌಡನ ಕೆನ್ನೆಗೆ ಹೊಡೆದಂಗೆ ಆಗೈತೋ ।
ಮುಂಗಾರು ಸಿಡಿಲು ಬಡದಂಗೈತೋ ।
ಮುಂಗಾರು ಸಿಡಿಲು ಬಡಿದಂಗಾಗುತ್ತಿದ್ದಂಗೆ
ಗಪ್ಪನೆ ಎದ್ದು ನೋಡುತಾನೆ ಗೌಡ । ಮನೆಯಲ್ಲ
ದೀಪ ಹಚ್ಚಿದಂಗೆ ಹಾಗೈತೆ । ಇದೇನು ಸುಡುಗಾಡು ಮನೆಯಪ್ಪ

ಇದೇನು ಸೋಜಿಗವೋ । ಕಷ್ಟ ಕಾಲದಲ್ಲಿ ದೇವರು ಜ್ಞಾಪಕ್ಕೆ
ಬರುತ್ತೈತೆ । ಕಷ್ಟ ತೀರಿದ ಮೇಲೆ ದೇವರ ಮೇಲೆ
ಮರೆವು ಬಂದು ಬಿಡುತ್ತೈತೆ ಸ್ವಾಮಿ ಅಂಬಾನಂತೋ
ನನ್ನ ಬಾಳಿಗೆ ಬಂದು ಕಾಣಪ್ಪ । ನನ್ನಿಂದ ಸರ್ವತ್ರ ತಪ್ಪಾತು
ಈಗ ಮುಂದೇನಾಗಬೇಕು ಜಾಗ್ರತೆಯಾಗಿ ಹೇಳಪ್ಪ ನೀನು
ನಡಿಯಪ್ಪ ತಣ್ಣೀರು ತಡಿಬಟ್ಟೆಯೊಳಗೆ
ಮೂರು ಹಿಡಿ ಒಣ ಮಣ್ಣ ತಕ್ಕೊಂಡು
ಮಡಿಲಾಗೆ ಕಟ್ಟಿಕೊಂಡು ಹೊರಡಪ್ಪ ಜಾಗ್ರತೆ
ಎಂದು ಹೇಳುತಾನೆ ಸ್ವಾಮಿ ನೋಡೋ ।
ಆಗಲೇ ಬಬ್ಬೂರ ಗೌಡ ತಣ್ಣೀರು ತಡಿಬಟ್ಟೆಯೊಳಗೆ
ಮೂರು ಹಿಡಿ ಮಣ್ಣ ತಕ್ಕೊಂಡು ಮಡಿಲಾಗೆ ಕಟ್ಟಿಕೊಂಡು
ಹೊರಟು ಬಿಟ್ಟನಣ್ಣೋ
ಕಾರೆಂಬ ಕತ್ತಲೆಯೊಳಗೆ ಹೊರಟು ಹೋಗುತಾನಣ್ಣ
ಅರ್ಧನೆ ದಾರಿಗೆ ಹೋಗುವಾಗ್ಗೆ ದೆಸೆವಂತ
ಮಾತಾಡುತಾನಲ್ಲಪ್ಪ । ನಾನಿರುವ ಜಾಗ ನಿನಗೆ
ಗೊತ್ತೈತಣ್ಣ ಎಲ್ಲಿಗೋ ಹೋಗಬೇಕಣ್ಣ
ಯಾವ ಸ್ಥಳಕ್ಕೆ ಹೋಗುತೀಯ ಹೇಳೋ ಗೌಡ ನೀನು ।

ಖಂಡಿತವಾಗಿಯೂ ನನಗೇನೂ ಗೊತ್ತಿಲ್ಲ ಸ್ವಾಮಿ
ನೀನು ಹೇಳಿದ ಜಾಗಕ್ಕೆ ಹೋಗುತೀನಿ ಸ್ವಾಮಿ
ಅಂತೆಂದು ಹೇಳುತಾನೆ ಗೌಡ ನೋಡು ।
ನಡಿಯಣ್ಣ ನಿನ್ನ ಎರೆ ಹೊಲದಲ್ಲಿರುವ ಹಿರಯನಾ ಮಡಿಕೆ
ತಾ ಕೋಗಿ । ದಗ್ಗಾಲು ಮಂಡಿ ಹೂರಿಕೊಂಡು ಮಡಲೊಡ್ಡಿಕೊಂಡು
ಕೂಡಬೇಕು ನಡಿಯಣ್ಣ ನೀನು ।
ಆಗ ಇಬ್ಬರೂ ಮಾತಾಡಿಕೊಂಡು ಎರೆ ಬೈಲಿಗೆ ಹೋದರಣ್ಣ
ಎರೆಯಾನೆ ಬೈಲಿಗೆ ಹೋಗಿ ಹಿರಿಯಾನ ಮಡಿಕೆ ತಾವ
ದೊಗ್ಗಾಲು ಮಂಡಿವೂರಿಕೊಂಡು ಮಡಿಲೊಡ್ಡಿ ಕುಂತಾನಂತೋ ।
ಮಡಿಲೊಡ್ಡಿಕೊಂಡು ಕುಂತಿರುವಾಗ ಹೇಳುತಾನಂತೋ ।
ಭೂಮಿಯೊಳಗೆ ಉಕ್ಕಿನ ಪಾಳು ಮಾತಾಡುತ್ತೈತೋ ।
ಕೇಳಣ್ಣ ಬಬ್ಬೂರ ಗೌಡ ಈಗ ನಾನು ಭೂಮಿ ಬಿಟ್ಟು
ಹೊರಕ್ಕೆ ಬರುವಾಗ್ಗೆ ಭೂಮಿಯೆಲ್ಲ ಪಟ ಪಟ ಹೊಡಿತ್ತೈತೆ
ಮುಂಗಾರು ಸಿಡಿಲು ಬಡಿದಂಗೈತೆ ಹೆದರಿಯಾ ಬೆದರಿಯಾ ಗೌಡ ನೀನು

ನಿನ್ನ ದಿಷ್ಟನೇ ಇರುವರೆಗೂ ಖಂಡಿತವಾಗಿ ಹೆದರುವುದಿಲ್ಲ
ಬೆದರುವುದಿಲ್ಲ ಗುರುವೆ ।
ಆಗ ನೋಡೋ ಭಗವಂತ ಉಕ್ಕಿನ ಪಾದ ಭೂಮಿ ಬಿಟ್ಟು
ಮೇಲಕ್ಕೆ ಬರುವಾಗ್ಗೆ ಭೂಮಿಯಲ್ಲೆ ಪಟ ಪಟನೆ ಎರಡು
ಭಾಗಕ್ಕೆ ಮುಂಗಾರು ಸಿಡಿಲು ಬಡಿದಂಗೆ । ಗೌಡನ ಕಣ್ಣಿಗೆ
ಹಸಿರು ನೀರು ಚೆಲ್ಲಿದಂಗಾಗುತ್ತದಲ್ಲೋ
ಮಾಹಿಕಾರ ಉಕ್ಕಿನ ಪಾಳು ಬಂದು ಗೌಡನ ಮಡಿಲು ಸೇರಿತೋ ।

ಉಕ್ಕಿನ ಪಾಳು ಆಗ ಎಲ್ಲಿ ಗಹನ ಕಟ್ಟೋತೋ
ಮೂರು ಹಿಡಿ ಮಣ್ಣಾಗ ಮಡಿಲಾಗೆ ಕಟ್ಟೋತೋ
ಕಾರಂಬ ಕತ್ತಲಾಗಿ ಯಾವನೋ ರಸ್ತೆ ನೋಡು
ಅಂದನೆ ಕೇಳುತಾನೆ ಬಬ್ಬೂರ ಗೌಡನಾಗ ಹೇಳಮ್ಮ ತಾಯಿ ಅಂದು
ನಡಿಯಾಲೆ ಬಬ್ಬೂರ ಗೌಡ ನಾವು ಮಂಡವಾಳ ಹೋಗೋನ
ಇಬ್ಬರೂ ಮಾತಾಡಿಕೊಂಡು ಮಂಡವಾಳಕೆ ಹೊರಟವರೆ
ಮಂಡಳವಾಳ ರಸ್ತೆಯೊಳಗೆ ಅರ್ಧನೆ ದಾರಿಗಾಗಿ
ಗೌಡಾಗೆ ಹೇಳುತಾಳೋ । ಮಂಡವಾಳದೊಳಗೆ
ವಾದುರ ಚನ್ನಪ್ಪ ಅವನೆ । ಭಾರಿನೆ ಸಂಸಾರಿ ನೋಡೋ
ಸುತ್ತ ಮೂರು ಗಾವುದಕ್ಕೆ ಗಂಡಾಳಿಕೆಲ್ಲ ಅವನೇ ಗಂಡಣ್ಣ
ಅವನ ಅರಮನೆಯೊಳಗೆ ಎಂಗಾನೆ ಹೋಗಾದು ನಾವು
ಸ್ವಾಮಿ ಅಂತೆಂದು ಹೇಳುತಾನಲ್ಲೋ ।
ಕೇಳಪ್ಪ ಗನಗುರುವೆ । ನಿನ್ನ ಸತ್ಯವೊಂದಿದ್ದರೆ ಹೋಗುತೀವಣ್ಣ
ಆಗ ನೋಡೋ ನಮ್ಮಪ್ಪ ಇಬ್ಬರೂ ಮಾತಾಡಿಕೊಂಡು
ವಾದುರ ಚನ್ನಪ್ಪನ ಅರಮನೆ ಮುಂದಕ್ಕೆ ಹೋಗಿ ನಿಂತರಂತೋ ।
ಬಬ್ಬೂರ ಗೌಡ ಒಂಬತ್ತು ಜನ ಮಾತ್ರದವರನ್ನು
ಕರೆದು ಕೇಳೋನಲ್ಲೋ । ಏನ್ರಪ್ಪ ಮಾತ್ರದವರೆ ಈಗ
ವಾದುರ ಚನ್ನಪ್ಪನ ಅರಮನೆಯೊಳಗೆ ಬಿಡಬೇಕಪ್ಪ ನೀವು
ವಾದರ ಚನ್ನಪ್ಪ ಹುಕುಂ ಎಂದ್ರೆ ಬಿಡುತೀವಣ್ಣ
ಇಲ್ಲದಿದ್ದರೆ ಬಿಡೋದಿಲ್ಲ ಎಂದು ಹೇಳುತ್ತಿದ್ದಂಗೆ
ಆಗಲೇ ಬಬ್ಬೂರ ಗೌಡ ಪಡಶಾಲೆ ಒಳಕೆ ಹೋಗಿ
ನಿಂತುಕೊಂಡು ವಾದುರ ಚನ್ನಪ್ಪನವರೆ । ವಾದರ ಚನ್ನಪ್ಪನವರೆ
ವಾದರ ಚನ್ನಪ್ಪನವರೆ ಎಂದು ಮೂರು ಸೊಲ್ಲು ಕೂಗುತಾನಂತೋ
ಮೂರು ಸೊಲ್ಲು ಕೂಗುತ್ತಿದ್ದಂಗೆ ಉಪ್ಪರಿಗೆ ಮೇಲೆ ಪಟ್ಟೆ

ಮಂಚದ ಮೇಲೆ ಚನ್ನಪ್ಪ ಚನ್ನಪ್ಪನ ಹೆಂಡ್ರು ಸುಕನಿದ್ರೆ
ಮಾಡುತಾರಾಗ । ಯಾರಲೇ ಕಳ್ಳ ಸೂಳೆ ಮಗನೆ ಸಕ್ಕನೆ
ಸರಹೊತ್ತು ಅಕ್ಕಳ ರಾತ್ರಿ ಹೊತ್ತಿನಾಗೆ ಕೂಗೋನು ಯಾರೋ ನೀನು ।
ನಾನು ಕಣಯ್ಯ ಬಬ್ಬೂರ ಗೌಡ ಮೂರು ಹಿಡಿ ಮಣ್ಣು ತಂದಿದ್ದೀನಿ
ಉಕ್ಕಿನ ಪಾಲು ತಂದಿದ್ದೀನಿ । ಈ ಹೊತ್ತಿಗೆ ಎಂಟು ದಿವಸಕ್ಕೆ
ಗರುಡಗಂಬ ಮಾಡಿಕೊಡಬೇಕಯ್ಯ ನೀನು ।
ಬೆಳ್ಳಿ ಬಂಗಾರ ಕಣ್ಣಾಗೆ ನೋಡೋರಲ್ಲ ನಾವು
ಸತ್ತ ಕಬ್ಬಿಣ ಬಡಿಯೋರ್‍ಯಾರೋ ಕಳ್ಳ ಸೂಳೆ ಮಗನೆ
ಎಂದು ಒಂಭತ್ತು ಜನ ಒಲಗದವರನ್ನ ಕರಸಿ
ಒಂಬತ್ತು ಬಾಗಿಲಾಚೆಯಿಂದ ಕತ್ತ್ಹಿಡಿದು ಹಿಂದಕ್ಕೆ ತಳ್ಳಿಸಿದನಂತೋ
ಹೇಳಪ್ಪ ಗನಗುರುವೆ ತಂದೆ ಬಬ್ಬೂರ ಗೌಡ ಕಾಣಪ್ಪ
ಭಾರಿನೆ ಗೌಡ । ಭಾರಿನೇ ಸಂಸಾರಿ ಕಾಣಪ್ಪ ಅಂಥಾದ್ರಾಗೆ
ಆಳುಗಳಿಂದ ಕತ್ತ್ಹಿಡಿದು ತಳ್ಳಾಂಗಾತು ಎಂದು ಮುಖ
ಸಪ್ಪಗೆ ಮಾಡುತಾನಂತೋ । ಆಗ ಗನಗುರುವೆ ಮಾತಾಡುತಾನೋ
ಕೇಳಪ್ಪ ಬಬ್ಬೂರ ಗೌಡ ಮುಂದಲ ಬಾಗಿಲಾಗೆ ಏನೈತೆ
ತೋರಿಸುತೀನಿ । ಅರ್ಧ ದಾರಿಯಿಂದ ಹೊರಟು ಬಿಟ್ಟನಣ್ಣ
ವಾದರ ಚನ್ನಪ್ಪನ ಮಗ ಬಡಗಿ । ಸೂಳೆಯ ಮನೆಯಾಗೆ
ಪಗಡೆ ಆಡುತ್ತಾನಲ್ಲೋ । ಪಗಡೆ ಸರಿ ಬೀಳಲ್ಲ
ಗಾಬರಿಯಿಂದ ಎದ್ದು ಓಡೋಡಿ ಬರುತ್ತಾನಲ್ಲೋ ।
ಅರ್ಧನೆ ದಾರಿಯೊಳಗೆ ಬಡಗಿ ಎದುರಾದನಲ್ಲೋ ।
ಏನಪ್ಪ ಗೌಡ ಇಷ್ಟು ಹೊತ್ತಿಗಾಗಲೇ ಪೇಟೆಗೆ ಹೋಗಾದು
ಏನು ಹೇಳಲಿ ಬಡಗಿ । ನಿಮ್ಮ ಅಪ್ಪ ಮಾಡಿದ ಅವಮಾನ ಸಾಕಪ್ಪ
ಏನು ಅವಮಾನ ಮಾಡಿದ ಗೌಡ । ಏನು ಅಪರಾಧವಾಯಿತಪ್ಪ
ಪಡಸಾಲೆಯೊಳಗೆ ನಿಂತುಕೊಂಡು ವಾಲಗದ ಚನ್ನಪ್ಪನೋರೆ
ವಾಲಗದ ಚನ್ನಪ್ಪನೋರೆ ಎಂದು ಮೂರು ಸಾರಿ ಕೂಗಿದೆ ।
ಯಾರಲೇ ಕಳ್ಳ ಸೂಳೆಮಗನೆ । ಸಕ್ಕಟ್ಟೆ ಸರಹೊತ್ತಿನಲ್ಲಿ ಕೂಗಾಡನು
ನಾವು ಕಾಣಪ್ಪ ಬಬ್ಬೂರ ಗೌಡ । ಮೂರು ಹಿಡಿ ಹೊನ್ನು ತಂದಿದ್ದೀನಿ
ಉಕ್ಕಿ ಪಾಳು ಮಾಡಿ ಕೊಡಬೇಕಪ್ಪ ಅಂಬೋ ಮಾತಿಗೆ
ಬೆಳ್ಳಿ ಬಂಗಾರನೇ ಕಣ್ಣಾಗೆ ನೋಡೋಲ್ಲ । ಅಂಥಾದರಲ್ಲಿ ಯಾರಲೇ
ಸತ್ತ ಕಬ್ಬಿಣ ಬಡಿಯೋರು । ಹೋಗಲೇ ಕಳ್ಳ ಸೂಳೆ ಮಗನೆ ಅಂತೇಳಿ
ಒಂಭತ್ತು ಕಾವಲುಗಾರರನ್ನು ಕರೆಸಿ । ಒಂಭತ್ತು ಬಾಗಿಲಿಂದಾಚೆ

ನೂಕಿಸಿದನಣ್ಣ । ಅಂದಾನೋ ಗೋಳಾಡುತಾನೋ
ತತ್ತಾರಣ್ಣ ಬಬ್ಬೂರ ಗೌಡ ಪಂಚಗಾರ ಹೊಟ್ಟೆಯಲ್ಲಿ ಹುಟ್ಟಿ
ಕಂಚು ಮಾಡಲ್ಲ ಅಂಬೋಂತಿಲ್ಲ । ನಾವೆಲ್ಲ ತಯಾರು ಕೊಟ್ಟೇನು ।
ಅಂದ ಮಾತಿಗೆ ಗೌಡನು ಬಡಗಿ ಬಡಗಿ ಸುಳ್ಳು ಹೇಳಬೇಡ
ನ್ಯಾಯವಾಗಿ ಹೇಳಪ್ಪ ನೀನು ಅಂಬೋನಂತೋ

## ಗರುಡುಗಂಬ ಉಚ್ಚೆ ಬಚ್ಚಲು ಸೇರಿದ ಪ್ರಸಂಗ

ಖಂಡಿತವಾಗಿ ಸುಳ್ಳು ಹೇಳೋದಿಲ್ಲ । ಈ ವೊತ್ತಿಗೆ ಎಂಟು ದಿವಸಕ್ಕೆ
ಬರೋಗಪ್ಪ ನಾವೆಲ್ಲಾ ತಯಾರು ಮಾಡಿ ಕೊಟ್ಟೇನು
ಆಗ ನೋಡೋ ಭಗವಂತ ಬಡಗಿ ಹನುಮಂತ
ಮೂರು ಹಿಡಿ ಹೊನ್ನು ತಕ್ಕೊಂಡು ಮನೆ ಹತ್ತಿರ ಹಾಕ್ಕೊಂಡು
ಉಕ್ಕಿನ ಪಾಳು ತಕ್ಕೊಂಡು ಅದರ ಮೇಲೆ ಕೂತುಕೊಂಡು
ಅಂಗಾರ ಕಾಸಿಬಿಟ್ಟು ಎಡಗೈಲಿ ಇಕ್ಕಳದಲ್ಲಿಟ್ಟುಕೊಂಡು
ಬಲಗೈಗೆ ಸುತ್ತಿಗೆ ತಕ್ಕೊಂಡು ಅಡಿಗಲ್ಲಿನ ಮೇಲಿಟ್ಟು ಮೂರು ಏಟು ಬಿಟ್ಟು
ನೀರು ಹೀರಿಕೊಳ್ಳಲೆಂದು ಉಚ್ಚೆ ಪಾತ್ರೆಗೆ ಹಾಕಿಬಿಟ್ಟನಲ್ಲೋ
ಕಂಬಂದ ರಂಗನ ಹುಚ್ಚೆ ಪಾತ್ರೆಗೆ ಹಾಕಿದನಲ್ಲೋ । ಗನಗುರುವೆ
ಕರುಣಿ ಕಂಬದ ರಂಗ ಉಚ್ಚೇನೆ ಪಾತ್ರೆ ಸೇರಿದನಲ್ಲೋ
ಉಚ್ಚೆ ಪಾತ್ರೆ ಸೇರಿ ಏಳು ದಿನಗಳಾದವಣ್ಣ
ಬಬ್ಬೂರ ಗೌಡ ಬಡಗಿ ಹನುಮಂತನ ಮನೆಗೆ ಓಡೋಡಿ ಬರುತಾನಂತೋ
ಕೊಡಪ್ಪ ಬಡಗಿ ನನ್ನ ಮನೆ ಸ್ವಾಮಿಯ । ತೋರಿಸಪ್ಪ ಬಡಗಿ ನನ್
ಕುಲಸ್ವಾಮಿಯ । ನಮ್ಮಪ್ಪನ ಮುಖ ತೋರಿಸ ಬಾರೋ ಬಡಗಿ
ಹೋಗಯ್ಯ ಬಬ್ಬೂರ ಗೌಡ ನನಗೆ ಪುರುಸೊತ್ತಿಲ್ಲ ತಿಂಗಳಿಗೆ ಬಾ
ಮಾಡಿಕೊಟ್ಟೇನು ಅಂಬೋನಂತೋ ।
ಅರಮನೆಗೆ ಹೋಗಿ ತಿಂಗಳು ತುಂಬುವುದೋ । ತಿಂಗಳು ವಾಯಿದೆ
ತುಂಬುತ್ತಿದ್ದಂಗೆ ಗೌಡ ಬಡಗಿ ಹನುಮಂತನ ಮನೆಗೆ ಓಡೋಡಿ ಬಂದನಣ್ಣ
ಏನಪ್ಪ ಬಡಗಿ ಭಗವಂತನ ಮುಖ ತೋರಿಸಪ್ಪ । ನನ್ನ ಭಾಗ್ಯದ
ಸಿರಿಯನ್ನು ತೋರಿಸಪ್ಪ ನೀನು ।
ಹೋಗಯ್ಯ ಬಬ್ಬೂರ ಗೌಡ ಈ ವೊತ್ತಿಗೆ ತಿಂಗಳಾಗೆ ಬಾರಯ್ಯ ನೀನು ।
ಬಡಗಿ ಹಿಂಗೆ ವಾಯಿದೆ ಹೇಳುತ್ತಾನೆ ।
ಪ್ರಪಂಚದ ಮೇಲೆ ಯಾರೂ ಅಕ್ಕಸಾಲಿಗರು ಸಿಕ್ಕದಿಲ್ಲವೇನಪ್ಪ
ಎಂಥ ಕೆಟ್ಟ ಜನರ ಕೈಗೆ ಸಿಕ್ಕಿದೆನಪ್ಪ। ಏನು ಭಂಗ ತಂದೆ

ಏನು ಕಷ್ಟ ತಂದೆ ಸ್ವಾಮಿ ಅಂತಂದು ಗೌಡ ಅಳುತಾನಲ್ಲೋ ।
ಎರಡು ತಿಂಗಳು ಸ್ವಾಮಿ ಉಚ್ಚೆ ಬಚ್ಚಲಾಗಿ ಇದ್ದು ಗೇಣುದ್ದ
ಅವಚೆ ಕಟ್ಟುತ್ತೈತೋ । ಬಡಗಿ ವಂಶವೆಲ್ಲಾ ನೀರು ಹಾಕಿಕೊಳ್ಳುವಾಗ
ಬಚ್ಚಲು ನೀರೆಲ್ಲಾ ಬದರು ಮಾಡುತಾನೆ । ಕಪ್ಪೆ ಅರಚುವಂಗೆ ಅರಚುತಾನೆ ।
ಬಡಗಿ ಹನುಮಂತ ಕಣ್ಣು ಕಾಣಿಸದಂಗೆ । ಕಿವಿ ಕೇಳಿಸದಂಗೆ ಇರುತಾನೆ
ಎರಡು ತಿಂಗಳು ತುಂಬಿ ಮೂರಕ್ಕೆ ಬಾಳುತ್ತಣ್ಣ
ಏಳು ಕೋಟಿ ದೆವ್ವಗಳೆಲ್ಲಾ ಕೇಳುತಾವಲ್ಲೋ ಸ್ವಾಮಿ
ಏನಮ್ಮ ನಿಮ್ಮ ಜೀಮಾನ ಇರುವರೆಗೂ ನಿಮಗೆ ಅನ್ನನೇ ಕೊಟ್ಟೇವು
ಈ ಬಚ್ಚಲು ಮನೆ ಬಿಟ್ಟು ಹೊರಕ್ಕೆ ಕಳಿಸಪ್ಪ ನೀನು
ನಿನ್ನ ಮಾತು ಕೇಳಲ್ಲ ನಾನು । ನರಮನುಷ್ಯನ ಮಾತು ಕೇಳಿ
ನರಮನುಷ್ಯನಿಗೆ ಹೆದರಿದೇವೇನಮ್ಮ ಅಂಬೋನಂತೋ
ನಾವೇನು ಮಾಡಬೇಕು ಸ್ವಾಮಿ । ಸುತ್ತ ಮೂರು ಗಾವುದದೊಳಗೆ
ಸತ್ತ ಪ್ರಾಣಿ ಸಮಾಧಿ ಮಾಡಿ ಬಂದ್ರೆ । ಸಕ್ಕಟ್ಟೆ ಸರವೊತ್ತು
ಕಟ್ಟಂ ರಾತ್ರಿಯಲ್ಲಿ ಒಂದು ಬೇತಾಳ ಮಂತ್ರಿಸಿದೇಟಿಗೆ
ಏಳು ಕೋಟಿ ದೆವ್ವ ಗಾಳಿಗಳು ಎದ್ದು ಬಂದವಮ್ಮ
ನಿನಗೆ ಕಸ ನೀರು ಹಾಕುತೇವಣ್ಣ ಅಂತೆಂದು ಕೇಳುತಾರೆ
ಸತ್ತ ಮೂರು ಗಾವೆಲ್ಲ ಗಂಡರಾಗೆವರೆ
ಮಾತಾಡೋ ಮಾನ್ಯರು ಯಾರೂ ಇಲ್ಲ ನೋಡೋ
ಎರಡು ತಿಂಗಳು ತುಂಬಿ ಮೂರಕ್ಕೆ ಬಿದ್ದೈತೆ ।
ದೆಸೆವಂತ ಹುಟ್ಟೋ ಕಾಲ ಬಂದೈತೆ ।
ಗಂಡಾಂತರವೆಲ್ಲಾ ಹರಿಯೋ ಕಾಲ ಬಂದೈತೆ
ಆಯಿತವಾರ ಅಮಾಸೆ ಮೂರು ಮುಕ್ಕಾಲು ಗಳಿಗೆಯೊಳಗೆ
ದೆಸೆವಂತ ಏಳು ಕೋಟಿ ದೇವತುರುಗಳನ್ನೆಲ್ಲಾ ಜುಟ್ಟಿಡಿದು ಎಳೆದು
ಬಾಗಿಲಿಗೆ ಕಟ್ಟೆವನೆ ದೆವ್ವದ ಉಸಿರು ತಗುಲಿ
ಬಡಗಿ ವಂಶವೆಲ್ಲಾ ನಾಶವಾಗುವುದಲ್ಲೋ । ಸಾಲುಗುಡ್ಡೆ ಸರ್ವ ಮಾಡಿದಂಗೈತೆ
ಒಬ್ಬರಾದರೂ ಮಾತಾಡೋ ಮಾನ್ಯರಿಲ್ಲ ಒಂದು ಮಗುವಾದರೂ ಮಾತಾಡಲ್ಲ
ಬಡಗಿ ಹೆಂಡರಾಗ ಗುಡ್ಡದಂತ ಬಸುರೆಂಗಸರು
ಪಟ್ಟದ ಸಾಲಿನ ಮೇಲೆ ಉಪ್ಪರಿಗೆ ಮಂಚದ ಮೇಲೆ
ಮಲಗಿಕೊಂಡು ರೈತಾನೆ ಕಾರಿಕೊಂಡು ಪ್ರಾಣಾನೆ ಬಿಟ್ಟನಂತಳಲ್ಲೋ
ಒಂಭತ್ತು ಜನ ಆಳು ಮಾತ್ರದವರು ಹನ್ನೆರಡು ಗಂಟೆ ತನಕ ನೋಡುತಾರೆ
ಅವರವರೆ ಮಾತಾಡುತ್ತಾರೆ ಅಕ್ಕಸಾಲಿಗರು ಸತ್ತು ಮೂರು ಗಾವುದಕ್ಕೆ

ಗಂಡರಾಗಿದ್ದವರಣ್ಣ । ಈವೊತ್ತು ಯಾರೋ ಅವರ ಮನೆಗೆ ಬೆಂಕಿ ಇಟ್ಟವರೆ
ನಮಗೆ ಹಾಲು ಅನ್ನ ಇಕ್ಕೋರಿಲ್ಲ । ಬಡಗಿ ಹನುಮಂತ ಸೂಳೆ ಮನೆಗೆ
ಹೋಗೇವನೆ ಅವನಿಗೆ ವರ್ತಮಾನ ಕೊಟ್ಟು ನಮ್ಮ ಮನೆಗೆ ನಾವು ಹೋಗುವ
ಅಂತೆಂದು ಒಂಭತ್ತು ಬಾಗಿಲು ತೆಗೆದು ಆರೊಡೆದು
ಹಿರಿಯೂರು ಪೇಟೆಗಿರುವ ಬಡಗಿ ಹನುಮಂತನ
ಸೂಳೆ ಮನೆಗೆ ಬಂದವರಣ್ಣ ।
ಸೂಳೆ ಮನೆಗೆ ಬಂದವರು ಬಾಗಿಲಾಗೆ ನಿಂತವರಣ್ಣ
ಬಡಗಿ ಹನುಮಂತ ತಲೆ ಎತ್ತಿ ನೋಡುತಾನೆ
ಏಕ್ರಲೇ ಕಳ್ಳ ಸೂಳೆ ಮಕ್ಕಳಿರಾ ಅರಮನೆ ಬಿಟ್ಟು
ದರಬಾರ ಬಿಟ್ಟು ಯಾಕರಲೇ ಬಂದಿರೆಂದು ಕೇಳುತಾನೆ
ಬಾರಪ್ಪ ಬಡಗಿ ಹನ್ನೆರಡು ಗಂಟೆ ಹೊತ್ತಾದರೂ ಅನ್ನ ಹಾಕೋರಿಲ್ಲ
ಎಲೆ ಅಡಿಕೆ ಕೊಡೋರಿಲ್ಲ ಮಾತಾಡಿಸೋ ಮಾನ್ಯರು ಮೊದಲೇ ಇಲ್ಲ
ಬಾರಪ್ಪ ಅರಮನೆಗೆ ಹೋಗೋಣ ನಾವು । ಬಡಗಿ ಹನುಮಂತನ್ನ
ಕರಕೊಂಡು ಅರಮನೆಗೆ ಬಂದು ಬಿಟ್ಟರಣ್ಣ
ಅರಮನೆಗೆ ಬಂದು ಪಡಸಾಲೆಯಲ್ಲಿ ನಿಂತು ನೋಡುತಾನೆ
ಇದ್ದಬದ್ದ ಸಂಪತ್ತೆಲ್ಲಾ ಒಂದೇ ಒಂದು ಮಂತ್ರದಾಗೆ
ಎಬ್ಬಿಸುತೀನಿ ನೋಡಿರಪ್ಪ ನೀವು ।
ಆಗಲೇ ಬಡಗಿ ಅಡಿಗೆ ಮನೆಗೆ ಹೋದನಣ್ಣ
ಒಂದು ಮರದ ತುಂಬಾ ಬೆಂಕಿನೇ ತಂದುಬಿಟ್ಟನಣ್ಣ
ಚಿಕ್ಕ ಮನೆಗೆ ಹೋಗಿ ಬಡಗಿ ಚಿಕ್ಕ ಚಿಕ್ಕ ವೈಗಂಡನೇ ತಂದು
ನಡುಮನೆಯೊಳಗೆ ಬ್ಯಾತಾಳ ಮಾಡಿ ನಿಲ್ಲಿಸಿ ಬಿಟ್ಟನಣ್ಣ
ಬೇತಾಳ ಮಾಡಿ ನಿಲ್ಲಿಸಿ ಅವರ ತಂದೆ ತಾಯಿ ಕಲಿಸಿದ
ವಿದ್ಯೆನೆಲ್ಲಾ ಖರ್ಚು ಮಾಡುತಾನಣ್ಣ
ಏನು ಮಾಡಿದರೂ ಬದುಕೋದಿಲ್ಲ । ಒಂದು ಮಗುವಾದರೂ ಮಾತಾಡಲ್ಲ
ಆಗಲೇ ಕರೇಮುಖ ಬಿದ್ದವನೆ । ಕಣ್ಣಾಗೆ ನೀರು ತೊಟ್ಟಿಕ್ಕಿ ಹರಿದಾವೆ ।
ಉಪ್ಪರಿಗೆ ಮೇಲೆ ಹೋಗುತಾನೆ । ಮಕಾಡೆ ಮಲಗಿ ಅಳುತಾನೆ
ಆಳು ಮುಂಡೆ ಕಣ್ಣು ನೋಡಿ ಯಂಗಪ್ಪ ಮಣ್ಣು ಎಳೆಯೋದು
ಹಿಂದಿಲ್ಲ ಮುಂದಿಲ್ಲ ಇಷ್ಟೊಂದು ದರ್ಬಾರನೆಲ್ಲಾ ಯಾರಿಗೆ ಕೋಡೋದು ।
ಆನೆ ಸಾಲು ನೋಡುತಾನೆ । ಬಾಳೆ ಸಾಲು ನೋಡುತಾನೆ
ಅಣ್ಣಗಳಿಲ್ಲಾ । ತಮ್ಮಗಳಿಲ್ಲಾ ಯಾರಿಗಾನ ಕೊಡಲಪ್ಪ ನಾನು
ಕುದುರೆ ಸಾಲು ನೊಡುತಾನಣ್ಣ । ಹೆಂಡರಿಲ್ಲ ಮಕ್ಕಳಿಲ್ಲ

ಯಾರ ಪಾಲು ನೋಡುತಾನಣ್ಣ । ಹೆಂಡರಿಲ್ಲ ಮಕ್ಕಳಿಲ್ಲ
ಯಾರ ಪಾಲು ಮಾಡಲಪ್ಪ । ಹೆಣ್ಣಿನ ಹೊನ್ನ ನೋಡೋ
ನೆಂಟರಿಲ್ಲ ಇಷ್ಟರಿಲ್ಲ ಯಾರಿಗೆ ಕೊಡಲಪ್ಪ ನಾನು
ಸುತ್ತ ಮೂರು ಗಾವುದಕ್ಕೆಲ್ಲ ಗಂಡರಾಗಿದ್ದೆವು
ಇಂತ ಕೆಟ್ಟ ಜನ್ಮಭೂಮಿ ಮೇಲೆ ಯಾಕಪ್ಪ ಹೊರಿಯಬೇಕು
ಅರಣ್ಯಕ್ಕೆ ಹೋಗಬೇಕು, ಪ್ರಾಣಾನೆ ಕಳಕೊಳ್ಳಬೇಕಲ್ಲ
ಮನಸ್ಸು ಮಾಡೆವನೆ ಬಡಗಿ ಹನುಮಂತ ನೋಡೋ ।
ಒಂಭತ್ತು ಬಾಗಿಲು ತರತರನೆ ತೆಗೆದುಬಿಟ್ಟನಾಗ ।
ಎದುರಿಗೆ ಬರುತಾವೆ ಹುಲಿ ಕರಡಿಗಳು
ಇವಾರ ಇಂದು ಹೋಗಲೆಂದು ಎದುರಿಗೆ ನುಗ್ಗುತ್ತಾನೆ
ಹುಲಿ ಕರಡಿಗಳೂ ಕಳ್ಳನ ನೆರಳು ಬೀಳಬಾರದೆಂದು
ನೆಗೆದು ನೆಗೆದು ದೂರ ದೂರದ ಓಡೋಡಿ ಹೋಗುತಾವೆ
ಇನ್ನೆಲ್ಲಿಗೆ ಹೋಗಬೇಕು ಇನ್ಯಾವ ಕೊರಕಲಾಗೆ ಬಿದ್ದು ಪ್ರಾಣ ಕಳಕೋಬೇಕು
ಬಡಗಿ ಹನುಮಂತ ಕೊರಕಲಾಗಿ ನುಗ್ಗುತಾನೆ । ದಪ್ಪ ಸಾಧನ ಅಡ್ಡಬರುತ್ತದೆ
ಏನು ಕರ್ಮ ಮಾಡಿದನಪ್ಪ ಯಾರಿಗೆ ಅನ್ಯಾಯ ಮಾಡಿದೆ
ಕಾಡು ಮೃಗ ಕೂಡ ಹೆದರಿ ಓಡಿದ ಮೇಲೆ
ಗಿಡಗೆಂಟೆಗೆ ತಲೆಕೊಟ್ಟು ಪ್ರಾಣ ಕಳಕೊಳ್ಳಬೇಕೆಂದು
ಬಡಗಿ ಹನುಮಂತ ಬೆಟ್ಟ ಹತ್ತೋಕೆ ಹೋಗುತಾನಲ್ಲೋ

ಮಾಯಕಾತಿ ನಮ್ಮಮ್ಮ ಸೊಪ್ಪು ಬೇವಿನ ಮರದಡಿ
ನಿಂತಳೋ ನೋಡೋ ।
ಯಾರಲೇ ನರಮಾನವರೆ ನಮ್ಮನೆ ಬೇಡಿಕೋ
ನಮ್ಮನೆ ತಾಂಡವಕ್ಕೆ ಹೋಗಿ ಈ ರಾತ್ರಿ ಕಳೆಯಲೋಸುಗ
ನಿಮ್ಮ ಸಂಘ ಕಾಣಲ್ಲ । ತಾಂಡ ಕಾಣಲ್ಲ । ನಿಮ್ಮನೆ ಕೊರಮರು ಕಾಣಲ್ಲ
ಹೋಗಮ್ಮ ರಸ್ತೆ ಕೂಡ ಸುಮ್ಮನೆ ಹೋಗಮ್ಮ
ಯಾಕಲೆ ನರಮಾನವನೆ ಈ ಪಾಟಿ ಕೋಪ
ಒಂದು ಸೊಲ್ಲು ಬಾಯಿ ಬಿಡಣ್ಣ ನೀನು ಅಂದಾಳಂತೋ ।
ಕೇಳಲೇ ನರಮಾನವನೆ ಭೂಮಿ ಹುಟ್ಟುವುದಕ್ಕೂಡಲೇ
ಹುಟ್ಟಿದ ಕೊರವಂಜಿ ನಾನು । ಉಂಡ ಊಟ ಉಂಡಂಗೆ
ಕಂಡ ಕನಸು ಕಂಡಂಗೆ ಹೇಳೋದು ಬಲ್ಲೆ ಅಂಬಾಳಲ್ಲೋ
ಹೇಳಮ್ಮ ತಾಯೆ ಹೇಳು ಏನೇನಾಗಬೇಕು ಜಾಗ್ರತೆ ಹೇಳು
ಒಂದಳ್ಳು ಧೂಪಾಗಬೇಕು । ಒಂದು ಕಿಡಿ ಬೆಂಕ್ಯಾಗಬೇಕು

ಮೂಗು ಕರುವಿನ ಸಗಣ್ಯಾಗಬೇಕು । ಮೂರು ಹಿಡಿ ಬೇವಿನ
ಸೊಪ್ಪಾಗಬೇಕು । ಮೂಗು ಕರುವಿನ ಗೋಗಂಜಾಗಬೇಕಣ್ಣ
ಇಷ್ಟು ತಂದ ಕೊಟ್ಟರೆ ಮುಂದಲ ಮಾತು ಹೇಳುತೀನಿ ನಾನು
ಆಗ ಬಡಗಿ ನಾಲ್ಕು ಗಂಟೆಯೊಳಗೆ ಒದಗಿಸಿಕೊಂಡು ಹೋಗಿ
ಕೊರವಂಜಿ ಕೈಗೆ ಕೊಡುತ್ತಿದ್ದಂಗೆ । ಮಾಯಕಾತಿ ಕೊರವಿ
ಬೇವಿನಸೊಪ್ಪಿನ ಮರದಡಿಯೆ ನಾಲ್ಕು ಮೂಲೆಗೂ
ಗೋವಾಕಿ ಸಾರಿಸಿ ಬಿಟ್ಟು ಕೊರವಂಜಿ ಹೂಡಿಕೊಂಡು ನಿಂತಳು ।
ಅಯ್ಯ ನರಮಾನವನೆ ನೀನು ನಿಮ್ಮ ಮನೆ ದೇವರು
ಕುಲದೇವರ ನೆನೆದು ಧೂಪ ಹಾಕೋಗಯ್ಯ ನೀನು
ಆಗ ಬಡಗಿ ಎದ್ದು ಸುತ್ತ ದೇವರ ನೆನೆದು ಕೊರವಂಜಿ
ದೇವರಿಗೆ ಧೂಪನಾ ಹಾಕುತಾನಲ್ಲೋ ।
ಕೊರವಂಜಿ ಧೂಪ ಹಾಕುತ್ತಿದ್ದಂಗೆ ಒಂದೊಂದು ಕೋಣೆ ಗಾತ್ರದ
ಕೆಂಡಾಗಿ ಬಡಗಿ ಹನುಮಂತನ ಮೇಲೆ ಸಿಡಿದು ಹೋಗುತಾವಲ್ಲೋ ।

ನೀನು ಹೇಳಪ್ಪ ನರಮಾನವನೆ । ಕಾಲ ಕಳೆಯಬೇಡ
ಜಾಗ್ರತೆ ಹೇಳಯ್ಯ ನೀನು । ಏನಂಥ ಹೇಳಲಯ್ಯ
ಖಂಡಿತವಾಗಿ ತಿಳಿಯಲಿಲ್ಲ । ಗುರುತಾಗಲಿಲ್ಲ
ಒಂದು ಸೊಲ್ಲು ಬಾಯಿಬಿಟ್ಟು ಹೇಳಮ್ಮ ನೀನು ।
ಕೇಳಲೇ ಕಳ್ಳ ಸೂಳೆಮಗನೆ ಅಕ್ಕ ತಂಗಿಯರ
ಒಡವೆಯೊಳಗೂ ಕತ್ತರಿಸೋ ಜಾತಿ ಕಣಲೇ ನಿಮ್ಮದು
ನ್ಯಾಯವಾಗಿ ಹೇಳುತೀಯೋ ಇಲ್ಲವೊ ಅಂಬೋಳಂತೋ
ನನ್ನನ್ನು ಇಷ್ಟ್ಯಾಕೆ ನಿರ್ಬಂಧ ಮಾಡುತೀಯಮ್ಮ
ನನಗೆ ಗುರುತಿಲ್ಲದೆ ಏನೆಂದು ಹೇಳಲಿ ನಾನು
ಬಡಗಿ ನಿನ್ನ ಅಹಂಕಾರ ಮುರಿತೀನಿ । ಗರ್ವ ತೀರುಸುತೀನಿ
ನ್ಯಾಯವಾಗಿ ಹೇಳೋದಿದ್ರೆ ಹೇಳು ಇಲ್ಲದಿದ್ದರೆ
ನಿನ್ನ ಪ್ರಾಣ ಕಳೆಯುತೀನಿ ಅಂಬೋಳಂತೋ ।
ಕಾನನದ ಕಣಿಯಮ್ಮ ಜೀವನೆ ತೆಗೆಯಮ್ಮ
ಪ್ರಾಣನೇ ತೆಗೆಯಮ್ಮ ಏನಂತ ಹೇಳಲಮ್ಮ ಅಂತೆಂದು
ಬಡಗಿ ಹನುಮಂತ ಕಣ್ಣಾಗೆ ನೀರು ಹಾಕೋನಂತೋ ।
ಬಡಗಿ ಬಡಗಿ ಮರೆಮಾಚಬೇಡ । ಸುಳ್ಳು ಹೇಳಬೇಡ
ಕಂಡವರ ಸೊತ್ತು ಬಂದು ನಿನ್ನ ಮನೆ ಬಾಗಿಲಾಗೆ ಬಿದ್ದೈತೆ
ನ್ಯಾಯವಾಗಿ ಹೇಳುತೀಯ ಇಲ್ಲವಪ್ಪ ಬಡಗಿ ನೀನು ।

ಯಾವ ಸ್ವತ್ತನ್ನೂ ತಿಂದಿಲ್ಲ । ಮನೆಗಿಲ್ಲ ನಿರ್ಬಂಧ ಬೇಡ ತಾಯಿ
ಕೇಳಲೇ ಕರಕಾಲ ಸೂಳೆ ಮಗನೆ ಎಷ್ಟು ಹೇಳಿದರೂ
ನಿನ್ನ ಗರ್ವ ಹೋಗಿಲ್ಲ । ಸೊಕ್ಕು ಅಡಗಿಲ್ಲ
ಇಲ್ಲಿಗೆ ಮೂರು ತಿಂಗಳು ಒಳಗೆ ಇಲ್ಲಿಗೆ ಯಾರು ಬಂದಿದ್ದರು ಹೇಳೋ ।
ಅವನು ಏನು ಕೊಟ್ಟಿದ್ದ ಹೇಳೋ ಕಳ್ಳ ಸೂಳೆ ಮಗನೇ
ಮೂರು ಹಿಡಿ ಹೊನ್ನ ಕೊಟ್ಟಿದ್ದ । ನನ್ನ ಕಣಜಕ್ಕೆ ಹಾಕಿಕೊಂಡೆ
ಉಕ್ಕಿನ ಪಾಳು ಕೊಟ್ಟಿದ್ದ ತಾಯೆ । ಅಂಗಡಿ ಮೇಲೆ ಕುಂತು
ಅರಗಿನಿಂದ ಕಾಸಿ ಬಲಗೈಗೆ ಇಕ್ಕಳದಾಗಿ ಹಿಡಕೊಂಡು ಅಡಿಗಲ್ಲು
ಮೇಲಿಟ್ಟುಕೊಂಡು ಸುತ್ತಿಗೆ ತಕ್ಕೊಂಡು
ಮೂರು ಏಟು ಬಿಟ್ಟು ಬಿಟ್ಟೆ ತಾಯಿ ।
ನಾನು ನನ್ನ ಸಂಸಾರೆಲ್ಲಾ ನೀರು ಎರೆಕೊಳ್ಳುವ
ಉಚ್ಚೆ ಬಚ್ಚಲಾಗೆ ಹಾಕಿಸಿ ಬಿಟ್ಟೆ ತಾಯಿ ನಾನು ।

**ಬಡಗಿಗೆ ರೌರವ ಹಿಂಸೆ**

ಕೇಳಲೇ ಬಡಗಿ ಲೋಕದ ಮೇಲೆ । ಪ್ರಪಂಚದ ಮೇಲೆ
ನಿನ್ನಂತ ಅಕ್ಕಸಾಲಿಗರು ಯಾರೂ ಇರೋಲ್ಲವೇನೋ ।
ಇಲ್ಲಿಗೆ ಹನ್ನೆರಡು ವರ್ಷ ತಪ್ಸು ಮಾಡಿ ಕಾದಿದ್ದೆ ಬಡಗಿ
ಈ ಹೊತ್ತಿನ ತನಕ ತಪಸ್ಸು ಮಾಡಿ ಕಾದಿದ್ದೆ ಬಡಗಿ
ಈ ಹೊತ್ತಿನ ಗಳಿಗೆಯೊಳಗೆ ನಿನ್ನ ಕೈಯಾಗೆ ಹುಟ್ಟಬೇಕೆಂದಿತ್ತು
ಕಾಲ ಕಳೆಯಬೇಡ । ಗಳಿಗೆ ಮೀರಿ ಹೋಗುತ್ತದಣ್ಣಾ
ನೀನು ಮಾಡಿದ್ದಕ್ಕೂ ಸಾರ್ಥಕ ಇಲ್ಲದಂಗೆ ಆಗುತ್ತದೆ
ಜಾಗ್ರತೆ ತಯಾರು ಮಾಡುತೀಯೋ ಇಲ್ಲವೋ ।
ಆಗಲಮ್ಮ ನಿನ್ನ ಮಾತು ಮೀರುವುದಿಲ್ಲ ತಾಯಿ ।
ಕೇಳಲೇ ಬಡಗಿ ಜಾಗ್ರತೆ ಅರಮನೆಗೆ ಹೋಗಿಬಿಟ್ಟು
ಒಂದೊತ್ತು ಉಪವಾಸದಿಂದ ಬಾರಲೇ ಮಗನೆ
ಒಲಗದೊರನ್ನ ಕರಕೊಂಡು ಬಡಿಯೋರನ್ನ ಕರಕೊಂಡು
ಅಂಗಡಿ ಸಾಮಾನು ತಕ್ಕೊಂಡು ಆರೆಂಬ ಅಡವಿಗೆ ಹೋಗಬೇಕು
ಘೋರಾರಣ್ಯ ದಿಬ್ಬದಲ್ಲಿ ಸುತ್ತಲು ಬೆರಗಾಕಿಕೊಂಡು
ಬೆರಗಿನೊಳಗೆ ಗುಡಾರ ಹಾಕಿಕೊಂಡು । ಗುಡಾರದೊಳಗೆ
ಅಂಗಡಿ ಹೂಡಿಕೊಂಡು । ಒಂದು ಸಂಗತಿ ಮಾಡಬೇಕಣ್ಣ
ಒಂದು ಚಂದದ ಇದ್ದಲು ಹಾಕಿಕೊಂಡು ಮಾಡಬೇಕಣ್ಣ

ಆಗಲಮ್ಮ ತಾಯಿ । ನಿನ್ನ ಮಾತು ಮೀರೋದಿಲ್ಲವಮ್ಮ
ಖಂಡಿತವಾಗಿಯೂ ತಯಾರು ಮಾಡುತೀನಮ್ಮ
ಕೇಳಲೇ ಬಡಗಿ ಹಿಂಗಾದರೆ ನಂಬೋದಿಲ್ಲ ಕಾಣೋ ನಾನು
ನನಗೂ ನಿನಗೂ ಆಣೆ ಪ್ರಮಾಣವಾಗಬೇಕು । ಅಂಬೋಳಂತೋ
ಆಗಲೇ ಕೊರವಂಜಿಗೂ ಬಡಗಿ ಹನುಮಂತಗೂ
ಭಾಷೆ ಪ್ರಮಾಣ ಆಗುತಾವೆ ನೋಡೋ
ಹೋಗಮ್ಮ ತಾಯಿ ನಾನೆಲ್ಲ ತಯಾರು ಮಾಡುವೆನೆಂದು
ಬಡಗಿ ಭಾಷೆ ಪ್ರಮಾಣ ಕೊಟ್ಟನಂತೋ
ಬಡಗಿ ಹನುಮಂತ ಬರುತಾನಂತೋ ।
ಒಂದು ಕೈಗಲ್ಲು ಎಸೆಯೋ ದೂರನೇ ಹೋಗುವಾಗ್ಗೆ
ಮಾಯಕಾತಿ ಕೊರವಂಜಿ ಮಾಯವಾಗಿ ಬರುತಾಳಮ್ಮ
ನಿಜವಾದ ಕೊರವಂಜಿ ನಿಜವಾಗಿ ಹೊರಟಳಲ್ಲೋ
ಬಡಗಿ ಹನುಮಂತ ಮುಸುಗಾಕಿಕೊಂಡು ಅರಮನೆ ಸೇರುತಾನೆ
ಅರಮನೆಗೆ ಬಂದವನು ಒಂದ್ಹೊತ್ತು
ಉಪವಾಸದಿಂದ ಬಾಯಿಬೀಗದಿಂದ ಒಲಗದವರನ್ನು
ಕರಕೊಂಡು । ಬಡಿಯೋರನ್ನ ಕರಕೊಂಡು । ಅಂಗಡಿನೇ
ಸಾಮಾನು ಗಂಟನೇ ಕಟ್ಟಿಕೊಂಡು ಹೊರಟನು ।
ಆಗ ಬಡಗಿ ಬಚ್ಚಲು ಮನೆಗೆ ಹೋಗಿ ವಲ್ಲಿ ಮುಸುಗಾಕಿ
ಕೊಂಡು ಕಣ್ಣಾಗೆ ನೀರು ಹಾಕಿಕೊಂಡು ನಿಂತಾನೆ ನೋಡೋ ।
ಏನು ಕರ್ಮ ಮಾಡಿದೇನಪ್ಪ । ಏನು ಅನ್ಯಾಯ ಮಾಡಿದೇನಪ್ಪ
ಆಳುದ್ದ ಉಚ್ಚೆ ಬಚ್ಚಲು ಗುಂಡಿಗೆ ಕೈಯಿಕ್ಕಿ ಯಂಗಪ್ಪ ತಕ್ಕೊಳ್ಳದು
ಈ ಕರ್ಮವ ಎಲ್ಲಿಗೆ ಹೋಗಿ ಕಳಕೊಳ್ಳಬೇಕು ।
ಈ ಕರ್ಮವ ಯಾವ ನದಿಗೆ ಹೋಗಿ ತೊಳಕೊಳ್ಳಬೇಕು ಸ್ವಾಮಿ
ಬಡಗಿ ಹನುಮಂತನಾಗ ಕಣ್ಣಾಗೆ ನೀರು ಹಾಕುತಾನಲ್ಲೋ ।
ಬಡಗಿ ಹನುಮಂತ ಹಾಕಿದ ಕಣ್ಣು ನೀರು ಬಚ್ಚಲು ಮನೆಗೆ ಹರಿವಾಗ್ಗೆ
ಉಕ್ಕಿನ ಕಂಬದೋನು ಉರಿ ಬಾಣದೋನು ಯಾಲಕ್ಕಿ ಮುಡಿಸಿದೋನು
ಶನಿವಾರದಯ್ಯ ಸಹಸ್ರ ನಾಮದವನು ದೆಸೆವಂತ ಮಾತಾಡುತಾನೋ

ಕೇಳಲೇ ಬಡಗಿ ಇಲ್ಲಿಗೆ ಹನ್ನೆರಡು ವರ್ಷದಿಂದ
ತಪಸ್ಸು ಮಾಡಿಕೊಂಡಿದ್ದೆ ಕಣೋ । ನೀನು ಮಾಡಿದ್ದೆಲ್ಲಾ
ಎದೆಯ ಆತ್ಮದೊಳಗೆ ಇಕ್ಕಿದ್ದೀನಿ ।
ಹೊತ್ತು ಹೋಗುತ್ತೈತೆ ಸಮಯ ಮೇಲುರುತ್ತೈತೆ

ಜಾಗ್ರತೆ ತಕ್ಕೊಂಡ್ರೆ ಸಮನಾಯ್ತು । ತಕ್ಕಳ್ಳದಿದ್ರೆ
ಈ ಬಚ್ಚಲೊಳಗೆ ನಿನ್ನ ಪ್ರಾಣ ತೆಗೆದು ಬಿಡುತೀನಿ
ಅಂತೆಂಬಾ ಮಾತಿಗೆ ಬಡಗಿ ಹನುಮಂತ
ಕಣ್ಣಾಗೆ ನೀರು ಹೊರೆಸಿಕೊಂಡು । ಉಕ್ಕಿನ ಪಾಳ ತಕ್ಕೊಂಡು
ಎದೆಗಾವಿಸಿಕೊಂಡು ಹೊರಟಾನಣ್ಣ । ಆರೆನ್ನಡವೀಗೆ ಹೊರಟನಣ್ಣ
ಗೋರಾಣ್ಯದಲ್ಲಿ ಸುತ್ತ ಗೊರಗಾಕಿಕೊಂಡು
ಆ ಗೊರಗಿನೊಳಗೆ ಗುಡಾರ ಹೊಯ್ಕೊಂಡು । ಆ
ಗುಡಾರದಲ್ಲಿ ಅಂಡೆನೇ ಹೂರಿಕೊಂಡು ಅಂಡೆಮೇಲೆ ಕೂರಿಕೊಂಡು
ತಿದಿಯನು ಊದುಸುತಾನೆ ನೋಡೋ
ಕೊಲುಮೆ ಒಳಗೆ ಮಾತಾಡುತಾನೆ ತಂದೆ
ಕೇಳಲೇ ಬಡಗಿ ಮೂರು ದಿನ ವಾಯಿದೆ ಮಾಡಿದರೂ
ಮೂರು ಕಾಸಿನೋಟು ಬೇಯೋದಿಲ್ಲ ಅಂತೆಂಬಾ ಮಾತಿಗೆ
ಏನು ತಪ್ಪು ಮಾಡಿದೇನಪ್ಪ ಏನು ಅಪರಾಧ ಮಾಡಿದೆವಪ್ಪ
ಅಲ್ಲ ಕಣಲೇ ಬಡಗಿ ಒಂದು ಸೆದ್ಲು ಇದ್ದಲಾಕಿ ಮಾಡದೆ
ಎರಡು ಸೆದ್ಲು ಇದ್ದಲಾಗಿ ಮಾಡುತೀಯಲ್ಲ
ಖಂಡಿತವಾಗಿ ತಿಳಿಯಲ್ಲ ಗುರುತಾಗಲಿಲ್ಲ ನನ್ನಿಂದ
ಸರ್ವತ್ರ ತಪ್ಪಾಯಿತು । ಈಗ ನನ್ನಿಂದ ಮುಂದೇನಾಗಬೇಕು
ಹೇಳಪ್ಪ ಗನಗುರುವೇ ನೀನು ।
ಕೇಳಮ್ಮ ಬಡಗಿ ಜಾಗ್ರತೆ ಬ್ಯಾಟೆ ಮರವ ಕಡಿಯಬೇಕು
ಬ್ಯಾಟೆ ಇದ್ದಿಲ ಸುಡಬೇಕು ನೀನು । ಈ ಕುಲುಮೆ ಕಿತ್ತು
ಬದಲಿ ಕುಲುಮೆ ಹೂಡಬೇಕಣ್ಣ ನೀನು ।
ಆಗಲೇ ಬಡಗಿ ಹನುಮಂತ ಬ್ಯಾಟೆ ಗಿಡವ ಕಡಿಸಿದನು
ಬ್ಯಾಟೆ ಇದ್ದಿಲ ಸುಡಿಸಿದನು । ಕುಲುಮೆ ಕಿತ್ತು ಮತ್ತೊಂದು
ಕಡೆ ತಿದಿಯನ್ನು ಊರುತಾನಣ್ಣ । ಅಂಡೆ ಮೇಲೆ ಕುಳಿತು
ತಿದಿಯನ್ನು ಊದುತಾನಲ್ಲೋ ।

ಅಸುಮಗು ಕಂಬದ ರಂಗ ಕುಟುಂ ಕುಂಟಂ ಅಂಬೋ
ಕುಲುಮೆಯೊಳಗೆ ಸ್ವಾಮಿ ಬಗ್ಗುಟ್ಟಿಕೊಂಡು ಉರಿದಾನಣ್ಣ
ಬಡಗಿ ಬಡಗಿ ತಡಿಲಾರನಪ್ಪ ನಾನು । ಬೆಂಕಿ ಅಬೆಯಾಗೆ ಬೆಯ್ಯಲಾರೆ
ಎಷ್ಟೊತ್ತು ಬೆಂಕಿ ಅಬೆಗೆ ಬೆಯ್ಯಾದು । ಉರಿ ಹೊರಟೋಗುತ್ತೈತೆ ।
ಉರಿ ತಟ್ಟಿಗೊಳ್ಳಕಾಗುವುದಿಲ್ಲ । ಜಾಗ್ರತೆ ತಕ್ಕಳಪ್ಪ ಮೈಯಲ್ಲ
ಅಪ್ಪೆಪ್ಪೆಯಾಗುತಾನೆ । ಉದುರ ಕವುಕೊಂಡೈತೆ ತಡಿಯಾಕಗಲ್ಲ

ತಕ್ಕಳಪ್ಪ ಬೇಗ ಬಡಗಿ ಅಂತಾನಂತೋ ।
ಬಡಗಿ ಹನುಮಂತ ಆಗ ಬಲಗೈಯಲಿ ಸುತ್ತಿಗೆ ತಕ್ಕೊಂಡು
ಅಡಿಗಲ್ಲು ಮೇಲಿಟ್ಟುಕೊಂಡು ಬಡಿವಾಗ
ಯಾಕಪ್ಪ ಬಡಗಿ ಯಾಕಿಂಗೆ ಮಾಡುತೀಯ
ಏನು ಮಾಡಲಪ್ಪ ಗನುಗುರುವೆ । ಬದುಕು ಯಂಗಪ್ಪ ಮುಂದೆ
ಅಂತೆಂಬ ಮಾತಿಗೆ
ಕೇಳಲೇ ಕಳ್ಳ ಸೂಳೆ ಮಗನೆ । ಸುತ್ತು ಮೂರು ಗಾವುದ
ದೊಳಗಾಗಿ ಸತ್ತ ಪ್ರಾಣಿ ಸಮಾಧಿ ಮಾಡಿ ಬಂದ್ರೆ
ಸಕ್ಕಟ್ಟೆ ಸರ್ವತ್ತು ಸಕ್ಕಂದೆ ರಾತ್ರಿಯಲ್ಲಿ ಒಂದು
ಬೇತಾಳ ಮಂತ್ರ ಬಿಟ್ಟು ಏಳು ಕೋಟಿ ದೆವ್ವಗಳು
ಎಬ್ಬಿಸಿಕೊಂಡು ಬರುವ ಮಂತ್ರ ಮಾಡೋ
ಕಳ್ಳ ಸೂಳೆಮಗ ಬಡಗಿ ಹನುಮಂತ ನೀನು
ಸತ್ತ ಕಬ್ಬಿಣ ಸಾಗಿಸೋದು ಕಲಿಯಲಿಲ್ಲವೇನೋ ।
ಕರೆಮುಖ ಬಿದ್ದವಣ್ಣ ಬಡಗಿ ಮುಖ ನೋಡಕಾಗಕಿಲ್ಲ
ಕರೆಗೆ ಕಪ್ಪಿಡಿದು ನಿಂತಾವೆ । ಯಂಗಪ್ಪ ಬಡಗಿ ಬಾಳೋದು
ಕೇಳಲೇ ಕರಕಾಲ ಸೂಳೆಮಗನೆ ಜಾಗ್ರತೆ ಸರಿ ಮಾಡಿದರೆ
ಸರಿಹೋಯಿತು । ಇಲ್ಲದಿದ್ದರೆ ಖಂಡಿತವಾಗಿ ನಿನ್ನ ಪ್ರಾಣ ಬಿಡೋದಿಲ್ಲ
ಇಲ್ಲಿಗೆ ಹನ್ನೆರಡು ವರ್ಷ ತಪ್ಪಸ್ಸು ಮಾಡಿ ಕಾದಿದ್ದೆ ಇನ್ನೂ ಹನ್ನೆರಡು
ಗಂಟೆ ಹೊತ್ತು ಹುಟ್ಟುವುದರ ವೊಳಗೆ ನಯವಾಗಿ ತಯಾರು ಮಾಡು
ಆಗಲ್ಲ ತಂದೆ ನನ್ನಿಂದ ಆಗಲ್ಲ ಎಂದು ಬಡಗಿ ಕಣ್ಣಿಂದ ನೀರು
ಕಾಲುವೆಯಂಗೆ ಹರಿದು ಹೋಗುತಾವಣ್ಣ ।
ಕೇಳಲೇ ಬಡಗಿ ಇಲ್ಲಿಗೆ ಹನ್ನೆರಡು ವರ್ಷ ತಪ್ಪಸ್ಸು ಮಾಡಿ ಕಾದಿದ್ದೆ ।
ಇನ್ನು ಮುಂದೆ ಇದೆ ನಿನಗೆ ಜಾಗ್ರತೆ ತಯಾರು ಮಾಡೋ
ಇಲ್ಲದಿದ್ರೆ ಖಂಡಿತ ನಿನ್ನ ಬ್ರಾಣ ಬಿಟ್ಟು ಹೋಗೋದಿಲ್ಲ ನಾನು ।
ಪ್ರಾಣನೇ ಉಳಿಸಪ್ಪ ಜೀವನೆ ಕಳಿಯೋ ತಂದೆ ಉಳಿದು
ಮುಂದೆ ನನ್ನಿಂದ ಬದುಕು ಸವೆಸೋದು ಆಗೋದಿಲ್ಲ ಗುರುವೆ.

ಬಡಗಿ ಮೂರು ಏಟು ತಾಗಿಸಣ್ಣ ಮೂರು ಮೊಳ ಬೆಳತೀನಿ ನಾನು
ನಾಲ್ಕು ಏಟು ಹಾಕಪ್ಪ ಆಳು ಪ್ರಾಮಾಣ ಸರಿಯಾಗಿ ನಿಲ್ಲುತ್ತೇನೆ
ಎಂಟು ಏಣಿ ಕೆತ್ತನೇ ಮಾಡಪ್ಪ । ಪಟ್ಟೆಗಳೇ ಹೊಡೆಸಪ್ಪ ನೀನು
ಕೆಳಗೆ ಮೇಲೆ ಗಳಿರೆಂದು ತಿದ್ದಬೇಕೆಂದು ಹೇಳುತಾನಲ್ಲಪ್ಪ
ಗನಗುರುವು । ಆಗ ಬಡಗಿ ಕಣ್ಣಗಳಲ್ಲಿ ನೀರು ಹರಿಸಿಕೊಂಡು

ಸ್ವಾಮಿ ಮೂರು ಏಟು ಹಾಕುತ್ತಿದ್ದಂಗೆ ಮೂರು ಮಾರು ಬೆಳೆದನಲ್ಲೋ
ನಾಲ್ಕು ಏಟು ಹಾಕುತ್ತಿದ್ದಂಗೆ ಆಳು ಪ್ರಮಾಣ ಸರಿಯಾಗಿ ನಿಂತು ಬಿಟ್ಟನಣ್ಣ
ಎಂಟು ಏಣಿ ಕೆತ್ತನೆ ಮಾಡುತಾನೆ । ಪಟ್ಟನೆ ಮಾಡುತಾನೆ
ಕೆಳಗೆ ಮೇಲೆ ಗುರುಡಗಂಬ ರೂಪ ತಿದ್ದುತಾನೆ ನೋಡೂ
ತಪ್ಪಿದರೆ ಏಳು ಜವಳಿ ಉಕ್ಕಿನ ಉರಿಬಾಣ । ಪಕ್ಕದಂತಜ್ಞ
ಕಟ್ಟು ಸೂರಿ ಗುಂಟೆ ಹನುಮಂತ ನಾಳೆ ನೀನು ಒಪ್ಪಿಸಬೇಕು
ತಪ್ಪಿನ ಏಳು ಜವಳಿ ಉಕ್ಕಿನ ಉರಿಬಾಣ ಪಚ್ಚೆ ಧರಿಸುತಾನಣ್ಣ
ಕಟ್ಟು ಸೂರಿ ಗಂಟೆ ಹನುಮ ತಾಳಿ ಒಪ್ಪಿಸುತಾನಂತೆ
ಬಡಗಿ ಜಾಗ್ರತೆ ಅರಮನೆಗೆ ಕರಕೊಂಡು ಹೋಗಿ
ನಿಮ್ಮ ತಂದೆ ತಾಯಿ ಕಲಿಸಿದ ವೈದ್ಯದ ಹೊತ್ತಿಗೆ ಪುಸ್ತಕ ತಕ್ಕೊಂಡು
ಪರಕಂಕನೇ ತಕ್ಕೊಂಡು ಜಾಗ್ರತೆ ಬರಬೇಕಣ್ಣ ನೀನು ।
ಆಗ ನೋಡೋ ಬಡಗಿ ಹನುಮಂತ ಮುಂಗೈ ಮುರಿಗೆ
ಸುತ್ತಿಕೊಂಡು ಬಾಯಲ್ಲಿ ಲೊದಲೆ ಸುರಿಸಿಕೊಂಡು
ಓಡೋಡಿ ಬರುವನಲ್ಲೋ । ಅವರ ತಂದೆ ಕಲಿಸಿದ
ವೈದ್ಯದ ಪುಸ್ತಕ ತಕ್ಕೊಂಡು ಬರವಂತನೆ ತಕ್ಕೊಂಡು
ಬಾರಪ್ಪ ಸ್ವಾಮಿ ಕುಲುಮೆಯೊಳಗೆ ಮಲಗಿಸಿಕೊಂಡು
ನಮ್ಮ ತಂದೆ ತಾಯಿ ಕಲಿಸಿದ ಒಂದು ವಿದ್ಯನೂ
ಮರೆಮಾಚದಂಗೆ ಬರೆಯುತ್ತೇನೆ ಸ್ವಾಮಿ ।
ಸ್ವಾಮಿ ಮೇಲೆ ಬರೆದ ಆ ತಪ್ಪಿನ ಗನಗುರುವೆ
ಇನ್ನು ಮುಂದೆ ಏನು ಆಗಬೇಕಪ್ಪ ಹೇಳಪ್ಪ ಸ್ವಾಮಿ ।
ಬಡಗಿ ಸುಳ್ಳು ಹೇಳಬೇಡ । ಮರೆಮಾಚಬೇಡ
ಒಂದು ನುಡಿಯೂ ಸುಳ್ಳಾಗದಂತೆ ಎಲ್ಲ ಬರೆಯಬೇಕು
ಬರೆದಿದ್ದೀನಿ ಸ್ವಾಮಿ ಅಂತೆಂಬ ಮಾತಿಗೆ
ಕೇಳಲೇ ಬಡಗಿ ಅಕ್ಕ ತಂಗಿ ಒಡವೆಗೂ ಆರು ತೂಕ
ಕತ್ತರಿಸೋ ಜಾತಿ ನಿನ್ನದು ಕಡೆ ಹಾಳೆ ತೆಗೆಯೋ ಏನೈತೆ ನೋಡುತೀನಿ
ಆಗ ಕಡೆ ಹಾಳೆ ತೆಗೆದು ನೋಡುತಾನೆ ಗನಗುರುವು
ಗಂಡು ಬೇತಾಳ ಹೆಣ್ಣು ಬೇತಾಳ ಎಂಬ ಎರಡು ಮಂತ್ರನೇ
ಮಡಗಿಕೊಂಡನಣ್ಣ । ಆಗ ಅವರನ್ನು ನೋಡಿ ಬರೆಸಿಕೊಂಡು
ಮುಂಗಾರೆ ಮುಳ್ಳು ತರಿಸಿ ಮಡೆ ಉಳಿಸಿಬಿಟ್ಟು
ವೈದ್ಯದ ಪುಸ್ತಕನೆಲ್ಲಾ ಸುಟ್ಟು ಬೂದಿನೆ ಮಾಡಿಸಿದನಣ್ಣೋ
ಬಡಗಿ ಕಕ್ಕನೇ ಬಿಕ್ಕೆ ಸೊಪ್ಪು ತಂದು ನನಗೆ ಮೈತುಂಬಾ

ಕಟ್ಟಿಸಪ್ಪ ಅಂತೆಂಬ ಪ್ರಾರ್ಥನೆಗೆ ಹಾಗೆ ಮಾಡೆನಂತೋ
ಕೀಳಪ್ಪ ಗುಡಾರನ ಮುಂದಕೆ ಹೋಗೋನ ನಾವು
ಗುಡಾರ ಕಿತ್ತುಕೊಂಡು ಸ್ವಾಮಿನೇ ತಕ್ಕೊಂಡು
ಹೆಗಲ ಮೇಲೆ ಇಟ್ಟುಕೊಂಡು ಹೊರಟವನೆ ಬಡಗಿ
ಹೇಳಪ್ಪ ಗನಗುರುವೆ ಎಲ್ಲಿಗೆ ಹೋಗಬೇಕು ನೀನು
ಯಾವ ಸ್ಥಳಕ್ಕೆ ರಾವಬೇಕು ಎಂದಾನೆ ಕೇಳೋನಲ್ಲೋ
ಅಂತೆಂಬಾ ಮಾತಿಗೆ ಸ್ವಾಮಿನೇ ಹೇಳುತಾನೆ ನಡಿಯಪ್ಪ
ಬೋಚಿಕೆರೆ ಬಯಲಿಗೆ ಗುಡಾರ ಹೊಡಕೊಂಡು
ವಾಸನೆ ಮಾಡಿಬೇಕು ಇಬ್ರರೂ ಮಾತಾಡಿಕೊಂಡು
ಓಡೋಡಿ ಬಂದರಾಗ । ಬೋಚಿ ಕೆರೆ ಮುಂದಕೆ
ಗುಡಾರ ಹೊಡೆದರಣ್ಣ । ಗದ್ದಿನೆ ಮಾಡಿದರಣ್ಣ
ಸ್ವಾಮಿನೆ ನಿಂತಾನೆ ಬೋಚಿಕೆರೆ ಬೈಯಲಾಗೋ
ಕೇಳಲೇ ಬಡಗಿ ಜಾಗ್ರತೆ ತಳವಾರ ದಾಸಣ್ಣನ
ಮನೆಗೆ ಹೋಗಬೇಕು । ತಳವಾರ ದಾಸಣ್ಣನ ಮನೆಗೆ ಹೋಗಿ
ಬಬ್ಬೂರ ಕಂಬದ ರಂಗ ಹುಟ್ಟಿವನೆ । ಬೋಚಿಕೆರೆಗವನೆ
ನೂರೊಂದು ನಾಮದ ಹುಂಡೆ ತಕ್ಕೊಂಡು ನೂರೊಂದು
ಜಾಗಟೆ ತಕ್ಕೊಂಡು ಅಲ್ಲಿ ಹಿಡಿದ ರಾಮಗಹಳೆ
ಅಲ್ಲಿ ಹಿಡಿದ ಜಾಗಟೆ । ಬೋಚಿಕೆರೆಯ ತಲುಪಿ
ಜಾಗ್ರತೆ ಪೂಜೆಗೆ ಬರಬೇಕಂತೆಂದು ವರ್ತಮಾನ ಕೊಟ್ಟು ಬರಬೇಕಣ್ಣ ನೀನು ।
ಬಡಗಿ ಹನುಮಂತನ ಮನೆ ವರ್ತಮಾನ ಮುಟ್ಟುತ್ತಿದ್ದಂಗೆ
ಈ ಕಾರೆಂಬ ಕತ್ತಲೆಯೊಳಗೆ ಬಂದು ನಿನ್ನ ದೇವರಿಗೆ ನಾನು
ಒಲಗ ಮಾಡಿದರೆ ಏನಯ್ಯ ನಗನಾಣ್ಯ ಕೊಡೋದು ನೀನು
ಖಂಡಿತವಾಗಿಯೂ ಬರೋದಿಲ್ಲ ಹೋಗು । ಎಂದು ಹೇಳುತಾನೆ ದಾಸಣ್ಣ
ಆಗ ನೋಡೋ ಭಗವಂತ ತಳದಾಸಣ್ಣನ ಹಿರಿನೇ ಮಗನಿಗೆ
ಹೊರಕೆ ಹೋಗಿ ಒಳಗೆ ಬರುವಷ್ಟರಲ್ಲಿ ಎಡಗಣ್ಣ ಕಾಣದಂಗೆ
ಆದುವು । ಆಗ ತಳದ ದಾಸಣ್ಣ ಸ್ವಾಮಿ ನೆನೆದು
ನೂರೊಂದು ರಾಮ ಕಳಸ ತಕ್ಕೊಂಡು ನೂರೊಂದು ಜಾಗಟೆ
ತಕ್ಕೊಂಡು ಅಲ್ಲಿಡಿದ ಜಾಗಟೆ । ಅಲ್ಲಿಂದ ಬೋಚಿಕೆರೆ
ತಲುಪೋವರೆಗೂ ಓಡೋಡಿ ಬರುತಾನಲ್ಲೋ
ಕೇಳಪ್ಪ ಬಡಗಿ ಪಂಚಾಂಗದ ಶಾಮಣ್ಣನೋರ ಮನೆಗೆ ಹೋಗಿ
ಬಬ್ಬೂರ ಕಂಬದ ರಂಗ ಹುಟ್ಟಿವನೆ । ಬೋಚಿಕೆರೆಗೆ ಅವನೆ

ಮೂರು ಚೆಂಬು ತಕ್ಕೊಂಡು ಮಾವಿನ ಪತ್ರೆ ತಕ್ಕೊಂಡು
ವೈಗಂಡನೇ ತಕ್ಕೊಂಡು ಜಾಗ್ರತೆ ಪೂಜೆಗೆ ಬರುವಂತೆ
ವರ್ತಮಾನ ಕೊಡಬೇಕಪ್ಪ ನೀನು ।
ಪಂಚಾಂಗದ ಶಾಮಣ್ಣನ ಮನೆಗೆ ಹೋಗಿ ಏನಪ್ಪ ಶಾಮಣ್ಣನವರೆ
ಬಬ್ಬೂರ ಕಂಬದ ರಂಗ ಹುಟ್ಟಿವನೆ ಬೋಚಿಕೆರೆಗೆ ಅವನೆ
ಮೂರು ಚೆಂಬು ತಕ್ಕೊಂಡು ಮಾವಿನ ಪತ್ರೆ ತಕ್ಕೊಂಡು
ವೈಗಂಡನೇ ತಕ್ಕೊಂಡು ಜಾಗ್ರತೆ ಪೂಜೆಗೆ ಬರಬೇಕು ನೀನು
ಹೋಗಲೇ ಬಡಗಿ ಈ ಕಾರೆಂಬ ಕತ್ತಲೆವೊಳಗೆ ಬಂದು
ನಿನ್ನ ದೇವರಿಗೆ ಪುಣ್ಯವದನೆ ಮಾಡಿದರೆ ಏನಪ್ಪ
ಆಗ ಮಾನ್ಯ ಕೊಡೋದು ನೀವು ಬಿಲ್ಲುಕುಲ್ ಬರೋದಿಲ್ಲ
ಅಂತೆಂದು ಹೇಳೋನಲ್ಲೋ
ಆಗ ಶಾಮಣ್ಣನ ಹೆಂಡ್ರು ಏಳು ತಿಂಗಳು ಬಸುರಿ
ಪಡಸಾಲೆಯೊಳಗೆ ದಿಂಡುಳ್ಳು ಸೇವೆ ಮಾಡೊಳಲ್ಲೋ ।
ಹೊಟ್ಟೆ ಶೂಲೆ ಬಂದ್ಯೆತೆಂದು ಬಡಕೋತಾಳಲ್ಲೋ ।

ಆಗ ನೋಡು ಭಗವಂತ ಪಂಚಾಂಗದ ಶಾಮಣ್ಣ ಪೂಜೆ
ಪತ್ರ ತಕ್ಕೊಂಡು ವೈಗಂಡನೆ ಹಿಡಕೊಂಡು
ಎಡಗೈ ಕಂಕ್ಲಾಗೆ ಇಟ್ಟುಕೊಂಡು ಹೊಸಲು ಕಲ್ಲು ಇಳಿತಿದ್ದಂಗೆ
ಪಂಚಾಂಗದ ಶಾಮನ ಹೆಂಡರು ಎದ್ದು ಕುಳಿತು ದೇವರು ಧ್ಯಾನ
ಮಾಡುತಾಳಣ್ಣ । ಹೊಟ್ಟೆಬೇನೆ ಇಲ್ಲವಾಯಿತಣ್ಣ
ಕೇಳಲೇ ಬಡಗಿ ಚಿಕ್ಕೀರಯ್ಯನ ಅರಮನೆಗೆ ಹೋಗಬೇಕು ।
ಬಬ್ಬೂರ ಗೌಡ ಹುಟ್ಟಿ ಬೋಚಿಕೆರೆಗವನೆ ಹನುಮ ತಾಳಿ
ಗರುಡಗಂಬ ತಕ್ಕೊಂಡು ಜಾಗ್ರತೆ ಪೂಜೆಗೆ ಬರಬೇಕಂತೆ
ಅಂತೆಂದು ವರ್ತಮಾನ ಕೊಟ್ಟು ಬರಬೇಕು ನೀನು ।
ಬಡಗಿ ಹನುಮಂತ ಚಿಪ್ಪಿಗರ ಅರಮನೆಗೆ ಹೋಗಿ
ಏನಣ್ಣ ಚಿಪ್ಪೀರಣ್ಣ ಬಬ್ಬೂರ ಕಂಬದ ರಂಗ ಹುಟ್ಟೆವನೆ
ಬೋಚಿಕೆರೆಗೆ ಅವನೆ ನೀನೀಗ ಹನುಮ ತಾಳಿ ಗರುಡಗಂಬ
ತಕ್ಕೊಂಡು ಜಾಗ್ರತೆ ಪೂಜೆಗೆ ಬರಬೇಕೆಂದು ಸ್ವಾಮಿ ಹೇಳಿದನಣ್ಣ
ಸಕ್ಕಟೆ ಸರಹೊತ್ತಿನಾಗೆ ಬಂದು ನಿನ್ನ ದೇವರಿಗೆ ಪೂಜೆ ಮಾಡಿದರೆ
ಏನಯ್ಯ ಅಗಮಾನ್ಯ ಕೊಡೋದು ನೀವು । ಖಂಡಿತ ಬರೋದಿಲ್ಲ
ಅಂಗಂತಿದ್ದೆ ತಡ ಚಿಪ್ಪಿಗರ ಚಿಕ್ಕೀರಯ್ಯನ ಮಗನಿಗೆ ಹೊರಗೆ

ಹೋಗಿ ಒಳಕೆ ಬರುತ್ತಿದ್ದಂಗೆ ಎರಡು ಕಣ್ಣು ಕಾಣಿಸದಂಗಾದವು
ಆಗ ನೋಡೋ ಭಗವಂತ ಚಿಪ್ಪಿಗರವನು ನಾಲ್ಕು ಮೂಲೆಗೆ ನಾಲ್ಕು
ಗೋಡೆ ಹಾಕಿ, ಕಂಬಳಿ ಹಾಕಿ ಹನುಮ ತಾಳಿ, ಗರುಡಗಂಬ
ಹಿಡಕೊಂಡು ಬೋಚಿಕೆರೆಗೆ ಹೋದನಂತೋ ।
ಆಗ ದೇವರು ಕೇಳಲೇ ಬಡಗಿ ಜಾಗ್ರತೆ ಮಡಿವಾಳಪ್ಪನ ಮನೆಗೆ
ಹೋಗಿ ಮಾಳಪ್ಪನಿಗೆ ಬಬ್ಬೂರ ಕಂಬದ ರಂಗ ಹುಟ್ಟಿವನೆ
ಬೋಚಿಕೆರೆ ಅವನೆ ನೂರೊಂದು ನಡೆಮುಡಿ ತಕ್ಕೊಂಡಿ
ನೂರೊಂದು ಪತ್ತು ಹಿಡಕೊಂಡು ಜಾಗ್ರತೆ ಪೂಜೆಗೆ ಬರುವಂತೆ
ವರ್ತಮಾನ ಕೊಟ್ಟು ಬರಬೇಕಣ್ಣ ನೀನು ।
ಆಗಲೇ ಬಡಗಿ ಮಡಿವಾಳಿ ಮಾಳಪ್ಪ ಭಾರಿನೇ ಸಂಸಾರಿ
ಭಾರಿನೇ ಗುಂಪಣ್ಣ ಅವನ ಅರಮನೆಗೆ ಹೋಗೋದು
ಅರಮನೆ ಬಾಗಿಲಾಗೆ ಇಬ್ಬರು ಆಳು ಮಾತ್ರದವರು ಅದಾರೆ
ಯಾರನೆ ಮಾಡಿಕೊಂಡು ಹೋಗುತಾನೆ ಬಡಗಿ ಹನುಮಂತ ನೋಡೋ
ಆಗ ಬಡಗಿ ಮಡಿವಾಳಿ ಮಾರಪ್ಪನ ಮನೆಗೆ ಹೋಗಿ । ಏನಪ್ಪ
ಆಳು ಮಾತ್ರದವನೆ ಮಾಳಪ್ಪನ ಅರಮನೆಗೆ ಬಿಡಬೇಕಪ್ಪ ನೀನು
ಮಾಳಪ್ಪನ ಅಪ್ಪಣೆ ತಕ್ಕೊಂಡು ಬಂದ್ರೆ ಬಿಡುತೇವಣ್ಣ
ಇಲ್ಲದಿದ್ದರೆ ಬಿಡೋದಿಲ್ಲ ಅಂಬೋನಂತೋ ।
ಆಗ ಬಡಗಿ ಅರಮನೆ ಕಿಟಕಿಗೆ ಹೋಗಿ ಮಾಳಪ್ಪನವರೆ ಮಾಳಪ್ಪನವರೆ
ಅಂದು ಮೂರು ಬಾರಿ ಕೂಗುತ್ತಾನೆ ।
ತಟ್ಟನೆ ಪಟ್ಟೆಸಾಲು ಉಪ್ಪರಿಗೆ ಮಂಚದ ಮೇಲೆ
ಮಾಳಪ್ಪ ಮಾಳಪ್ಪನ ಹೆಂಡತಿ ಸಕನಿದ್ರೆ ಮಾಡುತ್ತಾರಲ್ಲೋ
ಯಾರಲೇ ಕಳ್ಳಸೂಳೆ ಮಗನೆ ಸಕ್ಕಟೆ ಸರಹೊತ್ತಿನಲ್ಲಿ
ಬಂದೆನ್ನ ನಿದ್ದೆ ಗೆಡಿಸಿದವನು ಯಾವನಲೇ
ನಾನಪ್ಪ ಬಡಗಿ ಹನುಮಂತ । ಬಬ್ಬೂರ ಕಂಬದ ರಂಗ ಹುಟ್ಟಿವನೆ
ಬೋಚಿಕೆರೆಯೊಳಗವನೆ ನೂರು ಪತ್ತು ಹಿಡಿದು ನಡೆಮುಡಿ ಹಾಕಿ
ಪಂಜು ಹಿಡಿದರೆ ಸ್ವಾಮಿ ಪೂಜೆಗೆ ಬರಬೇಕಂತೆ
ಹೋಗಲೇ ಈ ಸಕ್ಕಟೆ ಸರಿಹೊತ್ತಿನಲ್ಲಿ ನಾನು ಖಂಡಿತ ಬರುವುದಿಲ್ಲ
ಆಗ ಮಾಳಪ್ಪ ನೂರು ಸಾಲು ಕತ್ತೆ ಕಟ್ಟುವನು । ಈಗ ದೊಡ್ಡವನ
ದೃಷ್ಟಿಯಿಂದ ಎಲ್ಲ ಕತ್ತೆನೂ ಕಣ್ಣಿಗೆ ಕಾಣದಂಗೆ ಹೋದವಲ್ಲೋ
ಆಳು ಮಾತ್ರದವರು ಏನು ಹೇಳುತಾರೆ ಮಾಳಪ್ಪನವರೆ
ಕಟ್ಟಿದ ಕತ್ತಲೆಯೊಳಗೆ ಒಂದೂ ಇಲ್ಲ । ಕುಂಟು ಕತ್ತೆವೊಂದೇ

ದಾರಿಯೊಳಗೆ ನಿಂತಿತೆಂದು ಹೇಳುತಾನಲ್ಲೋ । ಆಗ ಮಡಿವಾಳಿ
ಮಾಳಪ್ಪ ನೂರು ನಡೆಮುಡಿ ತಕ್ಕೊಂಡು ದಂಡು ಕಟ್ಟಿಕೊಂಡು
ಒಂದು ನೂರ ಪಂಜು ತಕ್ಕೊಂಡು ಮನೆ ವಸಲು ಇಳಿತಿದ್ದಂಗೆ
ರಂಗಾ ರಂಗಾ ಎಂದು ಬೋಚಿಕೆರೆ ಬೀಳವರೆಗೂ ಓಡೋಡಿ ಬಂದನಣ್ಣಾ ।
ಕೇಳಪ್ಪ ಬಡಗಿ ನೀನು ಬಬ್ಬೂರಿಗೆ ಹೋಗಬೇಕೆಂದು ನೀನು
ಬಬ್ಬೂರಿಗೆ ಹೋಗಿ ಗೌಡನಿಗೆ ವರ್ತಮಾನ ಕೊಡಬೇಕಮ್ಮ
ಏನಂತ ಹೇಳಲಿ ಗಾನ ಗುರುವೆ ನೀನು । ಕೇಳಮ್ಮ ಗಾನಂದ
ಕಸ್ತೂರಿ ಜೇನುತುಪ್ಪ ಗಂಡು ಸಿಗೇಕಾಯಿ ಸರಸಗನೇ ತಕ್ಕೊಂಡು
ಗೋವು ಬೇವು ದೃಷ್ಟನೇ ತಕ್ಕೊಂಡು ಜಾಗ್ರತೆ ಪೂಜೆಗೆ ಬರಬೇಕೆಂದು
ವರ್ತಮಾನ ಕೊಡಬೇಕು ನೀನು ।
ಆಗ ಬಡಗಿ ಹನುಮ ಮುಂಗೈ ಮುರಿಗೆ ಸುತ್ತಿಕೊಂಡು
ಅರ್ಧ ದಾರಿಗೆ ಹೋಗುವಷ್ಟರಲ್ಲಿ ಗೌಡಗೆ ಅರ್ಧ ದಾರಿವೊಳಗೆ
ಮುಂಗನಸು ಹೊಡೆದಂಗಾದವಣ್ಣ । ಮುಂಗನಸು ಒಡೆದಂಗಾದಂಗೆ
ಬಬ್ಬೂರ ಗೌಡ ಎದ್ದು ಓಡೋಡಿ ಬಂದನಣ್ಣ
ಅರ್ಧನೆ ದಾರಿಗೆ ಹನುಮಂತ ಹೋಗುತ್ತಿದ್ದಂಗೆ
ಬಡಗಿ ನನ್ನ ಭಾಗದ ದೇವರು ಹುಟ್ಟಿವನೇನಪ್ಪ
ನನ್ನ ಕುಲಸ್ವಾಮಿ ಹುಟ್ಟಿವನೇನೋ ।
ನನ್ನ ಭಾಗದ ದೇವರು ಹುಟ್ಟಿವನೆ ಏನಪ್ಪ ಬಡಗಿ
ಎಷ್ಟು ಹೊತ್ತಿಗೆ ನೋಡೇನು ನಾನು । ನಮ್ಮಪ್ಪ ಎಂಥ
ವರ್ತಮಾನ ಕೊಟ್ಟವನೆ ಜಾಗ್ರತೆ ಹೇಳಪ್ಪ ಬಡಗಿ ಹನುಮಂತ ನೀನು
ಕೇಳಮ್ಮ ಗೌಡ ತಾನೊಂದು ತೋಟಕ್ಕೋಗಿ ಕಾಯೊಂದು ಹೊಂಬಾಳೆ
ತಕ್ಕೊಂಡು ಕಮ್ಮನೆ ಕಸ್ತೂರಿ ಎಳ್ಳೆಣ್ಣೆ ಜೇನುತುಪ್ಪ ಗಂಡು ಸೀಗೇಕಾಯಿ
ಗಂಡುಸೀನೆ ತಕ್ಕೊಂಡು ಗೋವು ತಕ್ಕೊಂಡು ದೃಷ್ಟಿನೇ ಕರುವೆ
ತಕ್ಕೊಂಡು ಜಾಗ್ರತೆ ಪೂಜೆಗೆ ಬರಹೇಳಿದ ನಿನ್ನ
ದೊರೆತಾನ ಬಡತನ ಎನಗಮ್ಮ ಗೌಡಗೆ ಏನಮ್ಮ ಗೌಡಗೆ
ಆಗಲೇ ಅರಮನೆಗೆ ಹೋಗಿಬಿಟ್ಟ ಜೋಗಂಡ ಹೂಡ ಗಂಡ ಹಾಗಿ
ಬೋಚಿಕೆರೆ ಗುಡಾರದ ಮುಂದೆ ಸುತ್ತ ಮೂರು ಗಾವುದ
ಜನವಾದ ಜನವೆಲ್ಲ ಜಮಕಾಸಿ ಬಂದು ಬಿಟ್ಟವಲ್ಲೋ ।
ಹೇಳುತಾನಲ್ಲೋ ಗನಗುರುವು । ಕೇಳಮ್ಮ ಬಡಗಿ ಜಾಗ್ರತೆ
ನಿನ್ನ ಅರಮನೆಗೆ ಆಳು ಬಿಡಪ್ಪ ಇಷ್ಟು ಹೊತ್ತಿಗಾಗಲೇ
ನಿನ್ನ ತಂದೆ ತಾಯಿ ಹೆಂಡರು ಮಕ್ಕಳು ಅಣ್ಣ ತಮ್ಮಂದಿರು

ನಿನ್ನ ಆಳುಗಳೆಲ್ಲಾ ಎದ್ದವರೆ ಅರಮನೆ ಬಿಟ್ಟು ಕರೆಸಣ್ಣ ನೀನು
ಬಡಗಿ ಹನುಮಂತನ ಗುಂಪು ಜೋರಾಗಿ ನೆರೆದೈತಂತೋ ।
ಬಡಗಿ ಹನುಮಂತನ ಆಳುಗಳೆಲ್ಲ ಬೀಡು ಬಿಟ್ಟವರೆ
ಬೋಚಿಕೆರೆ ಒಳಗೆ ಆಗ
ಮುಂಗೋಳಿ ಕೂಗದ ಮೂಡು ಜಂಪರಿಯದ ಪಪ್ಪಿ ಕಳಗುಂದದಣ್ಣ
ಎದೆಯ ಮೇಗಳ ಲಿಂಗ ಶಿವ ಪೂಜೆಗೊಂಬುದು
ಹೆಸರು ಬಾಳ ಚಿತ್ರಬಾಳೆ ಸಿಂಗಾರ ಬಾಳೆ ದೊರೆ ಕಾಣದೊತ್ತು ಕಾಣೆ
ಬಾರಪ್ಪ ಹೊತ್ತು ಹೋಗುತೈತೆ ಗಳಿಗೆ ಮೀರಿ ಹೋಗುತೈತೆ
ಬಾರಣ್ಣ ಬೋಚಿಕೆರೆಗೆ ಜಲದಿಗೆ ಹೋಗಬೇಕೆಂದು ।
ಆಗ ಬಡಗಿ ಹನುಮಂತ ಗುಡಾರದೊಳಗಿನ ಸ್ವಾಮಿನೆ ತಕ್ಕೊಂಡು
ತಲೆಮೇಲಿಟ್ಟುಕೊಂಡು ಬರುತ್ತಿದ್ದಂಗೆ ಮಡಿವಾಳಿ ಮಾಳಪ್ಪ
ನೂರೊಂದು ನಡೆಮುಡಿ ಹಾಕುತ್ತಾನೆ ।
ನಡೆಮುಡಿ ಮೇಲೆ ಬಂದು ನಿಂತಾನೋ ಸ್ವಾಮಿ
ಆ ಕಡೆ ಈ ಕಡೆ ಮಧ್ಯದಲ್ಲಿ ನಡೆಮುಡಿ ಮೇಲೆ ಹೋಗುತಾನೆ
ಜನವಾದಿ ಜನವೆಲ್ಲಾ ಮಳ್ಳಾಕಿದರೆ ಮಳ್ಳು ಇಡಿದಂಗೆ
ಬೋಚಿಕೆರೆ ಬೈಯಲಾಗೆ ಸೇರವರೆ ನೋಡೋ ।
ಬಡಗಿ ಹನುಮಂತ ಸ್ವಾಮಿ ತಕ್ಕೊಂಡು ಬೋಚಿಕೆರೆ ಒಳಕೆ ಹೋದನು
ಒಂದುರವನ್ನ ಅಕ್ಕಿ ಬೆಯ್ಯೋ ಹೊತ್ತಾದರೂ ಬಡಗಿ ಕಾಣೋದಿಲ್ಲ
ನೀರೊಳಗೆ ಸ್ವಾಮಿನೆ ಕಾಣೋದಿಲ್ಲ ।
ಬಡಗಿ ಹನುಮಂತನ ಹೆಂಡರಾಗ ಗುಡ್ಡದಂತ ಬಸುರಿ
ಬೋಚಿಕೆರೆವೊಳಗೆ ಹೋದಂತ ಗಂಡ ಬರಲಿಲ್ಲಂತ
ಕೆರೆಯ ಬೈಲಾಗೆ ನೆಲವಾಯು ರಾಸುತಾಳೋ
ನನ್ನ ಗಂಡನ ಬಲಿ ಕೊಟ್ಟರೇನೋ । ಬೋಚಿಕೆರೆವೊಳಗೆ
ಯಾರ ಬಾಗಿಲಾಗೆ ಹೋಗಲಪ್ಪ । ಯಾರ ಪಂಕ್ತಿಗೆ ಹೋಗಲಪ್ಪ
ಬಡಗಿ ಹೆಂಡರಾಗ ಬಡಕೋತಾಳೆ ಕಣ್ಣಿಂದ ನೋಡಾಲಾಗುತ್ತಿಲ್ಲ
ಬಡಗಿ ನಿನ್ನ ಹೆಂಡತಿ ದುಃಖ ನೋಡಾಕಾಗಲ್ಲ । ನಡಿಯಪ್ಪ
ಕಡೆ ನೀರಿಗೆ ಬಂದು ಮುಖ ತೋರಿಸು । ಇಬ್ಬರೂ ಮಾತಾಡಿಕೊಂಡು
ಕಡೆ ನೀರಿಗೆ ಬಂದು ಮುಖ ತೋರಿಸುತಿದ್ದಂಗೆ
ಜನವಾದಿ ಜನವೆಲ್ಲಾ ಚಪ್ಪಾಳೆ ಹೊಡೆದು ಬುಟ್ಟರಣ್ಣಾ
ಬಾರಪ್ಪ ನಿನ್ನ ಒಂದು ಸಾರಿ ನೋಡಬೇಕೆಂದು ।
ಬೋಚಿಕೆರೆಗೆ ಹೋದನಂತೋ । ಇಬ್ಬರೂ ಹೋಗಿ ಮಾಯಕಾರ

ನಮ್ಮಪ್ಪ ಒಬ್ಬರ ಕಣ್ಣಿಗೆ ಕಾಸಿದಂತನಾದ ।
ಬಡಗಿ ಹನುಮಂತನ ಹೆಂಡತಿಯಾಗ
ನಾನು ನೋಡಿದರೆ ಗುಡ್ಡದಂತ ಬಸುರಿ । ನನ್ನ ಮಕ್ಕಳು ನೋಡಿದರೆ ಅಸುಮಕ್ಕಳು
ನಾನು ಯಾರ ಮನೆಗೆ ಕಳಿಸಲಪ್ಪ । ಯಾರ ಬಾಗಿಲಿಗೆ ಕಳಿಸಲಪ್ಪ
ಅಂತೆಂದು ಮುಕಕ್ಕೆ ಸೆರಗಿಡಿದ । ಬಡಕೋತಾಳೆ ಆಗ
ಹೇಳುತಾನಲ್ಲಪ್ಪ ಗನಗುರುವು ನಿನ್ನ ಹೆಂಡತಿ ದುಃಖ ಜಾಸ್ತಿ
ಯಾಗಿದೆ. ನಡಿಯಪ್ಪ ಏರಿ ಕಲ್ಲ ಮೇಲೆ ನೀನು ಮುಖ ತೋರಿಸು
ಅಂತೆಂಬ ಮಾತಿಗೆ ಬಡಗಿ ಏರಿ ಕಲ್ಲು ಮೇಲೆ ಹೋಗಿ ಮುಖ ತೋರಿಸುತಾರೆ
ಜನವಾದಿ ಜನವೆಲ್ಲ ಚಪ್ಪಾಳೆ ಹೊಡೆದು ಬಿಟ್ಟರಾಗ
ಸ್ವಾಮಿ ಕಡೇ ನೀರಿಗೆ ಬರುವಾಗ್ಗೆ ನಮ್ಮಪ್ಪ ನಡೆಮುಡಿಗೆ ಹೋಗಿ ನಿಂತನಪ್ಪ
ನಡೆಮುಡಿ ಮೇಲೆ ನಿಂತು ಬಾರಣ್ಣ ಬಬ್ಬೂರ ಗೌಡ
ಜಲದಿ ಅಭಿಷೇಕವನ್ನೆಲ್ಲಾ ಬಡಗಿ ಹನುಮಂತನ ಕೈಗೆ ಕೊಡುಬಾರಪ್ಪ
ಆಗ ಬಬ್ಬೂರ ಗೌಡ ಸ್ವಾಮಿ ಅಭಿಷೇಕದ ಸಾಮಾನುಗಳನೆಲ್ಲಾ
ಬಡಗಿ ಹನುಮಂತನ ಕೈಗೆ ಕೊಡುತ್ತಿದ್ದಂತೆ ಬಡಗಿ ಸುತ್ತ ತೆರೆ ಹಾಕಿ
ಸ್ವಾಮಿಗೆ ಜಲ್ದಿ ಅಭಿಷೇಕ ಮಾಡುತಾನಣ್ಣ ।
ಹೊಳೆ ಪೂಜೆ ಮಾಡುತಾನಣ್ಣ । ಹೊಳೆ ಪೂಜೆ ಪೂರೈಸುತ್ತಿದ್ದಂಗೆ
ಹೇಳುತೀನಪ್ಪ ಗನಗುರುವು ಕೇಳಲೇ ಬಡಗಿ
ನನ್ನ ಬಬ್ಬೂರ ಗೌಡ ಕೈಗೆ ಕೊಟ್ಟು ಹೊರಿಸಬೇಕು ದೂರ ಇರಿಸಬೇಕು ನೀನು
ಏನು ಅನ್ಯಾಯ ಮಾಡಿದೆನಪ್ಪ । ಏನು ಅಪರಾಧ ಮಾಡಿದೆ ತಂದೆ
ದೂರ ನಿಲ್ಲು ಹನುಮಂತ ನೀನು । ಬಾರಣ್ಣ ಬಬ್ಬೂರ ಗೌಡ
ಗೋವು ಬೇವು ತಕ್ಕೊಂಡು ಹತ್ತಿರಕ್ಕೆ ಬಾರಣ್ಣ ನೀನು
ಬಡಗಿ ಹನುಮಂತ ಸೆರಗೊಡ್ಡಿ ಬೇಡುತಾನೆ ।
ದೀರ್ಘದಂಡ ನಮಸ್ಕಾರ ಮಾಡುತಾನೆ
ನಾನು ಕೇಳಿದ್ದು ಕೊಟ್ಟೋನು ಬಾರಿ ತಪ್ಪ ಸಾಲ ಕೊಟ್ಟೋನು
ಅಂದೆಂದು ಗೊಳಾ ಅಂತ ಅಳುತಾನಲ್ಲೊ
ದೂರ ನಿಲ್ಲಪ್ಪ ನಿನ್ನ ನೆರಳು ಬಿದ್ದಾತು ಬಡಗಿ
ಆಗಲೇ ಬಬ್ಬೂರ ಗೌಡ ಬಂದು ಬೇವಿನ ಗೋವಿನ ಸಹಿತ
ಸ್ವಾಮಿನೆ ಎತ್ತಿಕೊಂಡು ಹೆಗಲ ಮೇಲಿಟ್ಟುಕೊಂಡು
ಆ ಕಡೆ ಈ ಕಡೆ ನೂರೊಂದು ಕಳಸ ನಡುಮಧ್ಯ ಸ್ವಾಮಿ
ನಡೆಮುಡಿ ಮೇಲೆ ಹೋಗುತಾನೆ ನೋಡೋ ।
ಆಗ ಬಬ್ಬೂರ ಗೌಡ ಕೇಳುತಾನೆ । ಹೇಳಪ್ಪ ಸ್ವಾಮಿ

ಎಲ್ಲಿಗೆ ಹೋಗಬೇಕು । ಎಲ್ಲಿ ಯಾವೂರಾಗೆ ರಾವಲು ಬೇಕು
ಅಂತೆಂಬ ಮಾತಿಗೆ ನಡಿಯಪ್ಪ ಗೌಡ ನಾವು ಮೂಡಲಕ್ಕೋಗಬೇಕು
ಇಬ್ಬರೂ ಮಾತಾಡಿಕೊಂಡು ಹೊರಟು ಬರುತ್ತಾರಣ್ಣ
ಅರ್ಧನೆ ದಾರಿಯೊಳಗೆ ಸ್ವಾಮಿನೆ ಹೇಳುತಾನೆ ಕೇಳಪ್ಪ ಗೌಡ
ಕೂಡಲ ಜಗಲಿನ ಮೇಲೆ ಗದ್ದಿಗೆ ಮಾಡೋ ನೀನು
ಆಗಲೇ ಬಬ್ಬೂರ ಗೌಡ ಎರಡನೇ ಮರಳ ದಗ್ಗಲುಮಂಡಿ
ವೂರಿಕೊಂಡು ಹೊರಟನೆ ಹೋಗುತಾನಣ್ಣ । ಜಗಲಿನೇ
ಮಾಡುತಾನಾಗ । ಸ್ವಾಮಿನೇ ನಿಂತಾನಾಗ ಗೂಡಾರದೊಳಗೆ ॥

ಆತಪ್ಪ ಇನ್ನು ಮುಂದೆ ಏನಾಗಬೇಕು ಗನಗುರುವೆ
ಕೇಳಪ್ಪ ಬಬ್ಬೂರ ಗೌಡ ಪಂಚಾಂಗದ ಶಾಮಣ್ಣನ ಕರೆ
ಗುಡಾರದೊಳಗೆ ಪುಣ್ಯವದನೆ ಮಾಡಿಸಬೇಕು ।
ದುಷ್ಟಿನೆ ಕಟ್ಟಿಸಬೇಕು । ದೃಷ್ಟಿ ಮಂಗಳಾರತಿ ಆಗಬೇಕು
ಆಗ ಗೌಡ ಪಂಚಾಂಗದ ಶಾಮಣ್ಣನ ಕರೆಸಿ ಪುಣ್ಯನೆ
ಮಾಡಿಸುತ್ತಾನೆ । ಅಚ್ಚನೆ ಬಿಳಿಯ ಕರುವ ತಕ್ಕೊಂಡೋಗಿ
ಗುಡಾರದೊಳಗೆ ದಿಷ್ಟಿಸಿ ಕಟ್ಟುತ್ತಾನೆ । ದಿಷ್ಟಿ ಮಂಗಳಾರತಿ ಮಾಡುತಾರಮ್ಮ
ಆಯಿತಪ್ಪ ಸ್ವಾಮಿ ಮುಂದೆ ಏನು ಆಗಬೇಕು ಹೇಳಪ್ಪ ಗನಗುರುವೆ
ಅಂತೆಂದು ಬಬ್ಬೂರ ಗೌಡ ಕೇಳುತಾನೋ ।
ಬಬ್ಬೂರ ಗೌಡ ಒಂಭತ್ತು ಸೇರು ಅಕ್ಕಿ ತಳೀಗೇನೆ ಮಾಡಬೇಕು
ನೂರೊಂದು ಹೂವು ಇಕ್ಕಲು ಬೇಕು ।
ನೂರೊಂದು ಮಂಗಳಾರತಿ ಮಾಡಲೇಬೇಕು ।

### ಬಡಗಿ ಹನುಮಂತನ ಆಹುತಿ

ಆಗ ಬಬ್ಬೂರ ಗೌಡ ಒಂಭತ್ತು ಸೇರು ಅಕ್ಕಿ ತಳಿಗೆ ಮಾಡುತಾನೆ
ಸ್ವಾಮಿ ನೂರೊಂದು ಹೂವಿಕ್ಕುತ್ತಾನೆ । ಸ್ವಾಮಿಗೆ ತಳಿಗೆನೆ ಮಾಡುತಾನೆ
ಜಲ್ದಿ ಪ್ರಸಾದವನ್ನು ಹನ್ನೆರಡು ಕೈವಾಡಕ್ಕೆ ಹಂಚಲು ಬೇಕು
ನೂರೊಂದು ಮಂಗಳಾರತಿ ಪ್ರಜೆಗಳಿಗೆಲ್ಲಾ ಕೊಡಲು ಬೇಕು
ಹನುಮಂತ ಬಡಿಗೆ ಎದ್ದು ಕೈ ತೋರಿಸಿಕೊಂಡು ನಿಲ್ಲಲು ಬೇಕು
ಅಂತೆಂಬ ಮಾತಿಗೆ ಏನು ತಪ್ಪು ಅಪರಾಧ ಮಾಡಿದ್ದೆ ಗನಗುರುವೆ

ಬಡಗಿ ಇಲ್ಲಿಗೆ ಹನ್ನೆರಡು ವರ್ಷ ತಪಸ್ಸು ಮಾಡಿ ಕಾದಿದ್ದೆ ನಾನು ।
ಈವೊತ್ತಿಗೆ ನೀನು ಪ್ರಾಣ ಬಿಟ್ಟು ಹೋದರೆ ನಾನು ಹುಟ್ಟಿದ್ದಕ್ಕೂ

ಸಾರ್ಥಕ ಆಗಬೇಕು । ಪ್ರಪಂಚದ ಮೇಲೆ ದೇಶದ ಮೇಲೆ
ಏಕೆ ಹುಟ್ಟಬೇಕು ನಾವು ।
ನನ್ನಂಥ ಕಂಬದ ರಂಗನನ್ನು ಎಷ್ಟು ಕಡೆದು ನಿಲ್ಲಿಸಬೇಕು
ನನ್ನ ಸತ್ಯವೇ ಉಳಿಯೋದಿಲ್ಲ । ಸಾಹಸವೇ ಉಳಿಯೋದಿಲ್ಲ ।
ಖಂಡಿತವಾಗಿಯೂ ನಿನ್ನ ಪ್ರಾಣ ಬಿಡೋದಿಲ್ಲ
ನಿನ್ನ ಕೈಜೋಡಿಸಿಕೊಂಡು ಈಗ ಉದ್ದು ನಿಲ್ಲಬೇಕು ಬಡಗಿ

ಉಕ್ಕಿನ ಉರಿಬಾಣ ಎತ್ತು ತಾನಲ್ಲಪ್ಪ ಗನಗುರುವು
ಬಿಡಾರದೊಳಗೆ ಕಿಡಿ ಕಿಡಿನೇ ಎದುರಿಸುತಾನೆ ಬಡಗಿ
ನೀನು ಮಾಡಿದ ಮಾಯೆ ಎದ್ದು ಬಂದು ನಿಂತೈತೆ
ಕೈಜೋಡಿಸಿಕೊಂಡು ನಿಲ್ಲು ಬಾ ಬಡಗಿ
ಏನು ಊಟ ಮಾಡುತೀಯ ಅದೆಲ್ಲಾ ತರಿಸಬೇಕು
ಎರಡು ಅಸ್ತ್ರದೆಲೆ ತರಿಸಿ ಗುಡಾರದೊಳಗೆ ಅಗ್ರದೆಲೆ ಹಾಕಿ
ಹೆಂಡತಿ–ಗಂಡ ಎದುರು ಬದರಾಗಿ ಕುಂತು ಊಟ ಮಾಡಬೇಕು
ಗೋಳಾಡುತಾನೆ ಬಡಗಿ । ಗಂಡ ಹೆಂಡರು ಕೈತೊಳೆದು ಗುಡಾರದ
ಹೊರಗೆ ತೊಡೆ ಮೇಲೆ ತೊಡೆ ಹಾಕಿಕೊಂಡು ಕುಳಿತುಕೊಂಡು
ಕೊಡಮ್ಮ ನಿನ್ನ ಕೈಯಿಂದ ಎಲೆ ಅಡಿಕೆ ನಿನ್ನ ಗಂಡನಿಗೆ
ಆತನಿಂದ ನೀನು ತಕ್ಕೊಂಡು ಸಂತೋಷವಾಗಿ ಎಲೆ ಅಡಿಕೆ ಹಾಕಿಕೊಳ್ಳಬೇಕು
ನೀನು ।
ಎಲೆ ಅಡಿಕೆ ಹಾಕಿಕೊಳ್ಳುತ್ತಿದ್ದಂಗೆ ಏಳಲೇ ಬಡಗಿ
ಎದ್ದು ನಿಂತುಕೋ ನಿನ್ನ ತಂದೆ ತಾಯಿ ಮಕ್ಕಳು ಮರಿಯೆಲ್ಲಾ
ನಿನ್ನ ಕಣ್ಣ ತುಂಬಾ ನೋಡಲಿ । ಇನ್ನೊಂದು ಐದು ನಿಮಿಷದಲ್ಲಿ
ಹುಟ್ಟಿದ ಉರಿಬಿಸಿಲು ನಟ್ಟದು ಬ್ಯಾಸಿಗೆ ಕಾಲೆಲ್ಲಾ ಅಬ್ಬೆ
ಬಂದಾವೆ ಮುಂದೆ ಹೋಗಬೇಕು । ಜಾಗ್ರತೆ ಜಾಗ್ರತೆ ನೋಡಿಕೊಂಡು ಬಾ
ಬಡಗಿ ಬಡಗಿ ಹೆಂಡತಿ ಒಬ್ಬರಿಗೊಬ್ಬರು ತಬ್ಬಿಕೊಂಡು
ಕೊರಳು ಕೊರಳು ಕಟ್ಟಿಕೊಂಡು ಗೋಳಾಡುತಾರೆ ನೋಡೋ
ಅಣ್ಣ ತಮ್ಮಂದಿರು ಅಕ್ಕ ತಂಗೀರು ಕಣ್ಣೀರು ಸುರಿಸುತಾ
ಗೋಳಾಡ ಚಿತ್ರವ ಕಣ್ಣಾಗೆ ನೋಡಾಕೆ ಆಗೋದಿಲ್ಲ ಸ್ವಾಮಿ
ಗುಡಾರದೊಳಗೆ ಸ್ವಾಮಿ ಉಕ್ಕಿನ ಉರಿಬಾಣ ಜೋಡಿಸುತಾನೆ
ಅಷ್ಟು ಸಾವಿರ ಪ್ರಜೆಯೊಳಗೆ ಮಾಯಕಾರ ದೆಸೆವಂತ
ಉಕ್ಕಿನ ಉರುಬಾಣ ಎತ್ತುತಾನೆ ಕಿಡಿ ಕಿಡಿನೆ ಎಗರಸುತಾನೆ

ಬಾರಪ್ಪ ಖಂಡಿತವಾಗಿ ನಿನ್ನ ಬಿಡೋದಿಲ್ಲ ಬಾರೋ
ಸುತ್ತ ಮೂರು ದಿಕ್ಕಿಗೆಲ್ಲಾ ಗಂಡನಾಗಿದ್ದೆ ನೀನು । ಬಾರಪ್ಪ
ನಿನ್ನ ಪಂಡಿತತನವ ನನ್ನ ಮುಂದೆ ತೋರಿಸು । ಎಂದಾಗ
ಆಗ ಬಡಗಿ ಹನುಮಂತ ಗುಡಾರದೊಳಗೆ ಕೈ ಜೋಡಿಸುತ್ತಿದ್ದಂಗೆ
ಬೋಚಿಕೆರೆವೊಳಗೆ ಗುಡಾರದ ಮುಂದೆ ಅರೆ ವಾಲಗ
ಉರಿ ಎದ್ದು ಹನುಮಂತ ಚಿಟ್ ಚಿಟ್ ಅಂಥ ಬೆಂದು ಹೋಯ್ತಾನಮ್ಮ ।
ಆಗ ಸ್ವಾಮಿ ಕೈನಾದ ಕೊಟ್ಟು ಹೇಳುತಾನೆ । ಗನಗುರುವು
ಬಾರಣ್ಣ ಬಬ್ಬೂರ ಗೌಡ ಎಂಭತ್ತು ದೊರೆಗಳಾದರೆ
ಕುಂತುಂಬರಾದವರೆ ನಿಂತುಂಬರಾದವರೆ
ಬಸಿರೇರು ಬಾಣಂತಿಯರು ಅದಾರೆ ಹಿಂತಿರುಗಿ ನೋಡದಂಗೆ
ನನ್ನೆತ್ತಿಕೊಂಡು ಗುಡಾರ ಕಿತ್ತುಕೊಂಡು ನಡಿಯಪ್ಪ
ತಡಾದು ಆಚೆಗೆ ಹೋಗಾಣ ನಾವು.

ಆಗ ಬಬ್ಬೂರ ಗೌಡ ಗುಡಾರ ಕಿತ್ತುಕೊಂಡು ಸ್ವಾಮಿನೆ ಹೆಗಲ
ಇಟ್ಟುಕೊಂಡು ಮುಂದಕೆ ಹೊರಟು ಹೋಗುವಾಗ
ಬಡಗಿ ಹೆಂಡತಿ ನೆಲದ ಧೂಳು ತೆಗೆದು ಬಂಡಾರಗಾವು ತಾಳಮ್ಮ
ಎಸು ಮನೆ ಮುರಿದು ಬಂದೆ ನನ್ನ ಗಂಡನ ಕೈಗೆ ಸಿಕ್ಕಿದೆ
ಮನೆಯಾಳು ದೇವರೆ । ನನ್ನ ಗಂಡನ್ನ ಬೋಚಿಕೆರೆಗೆ ಬಲಿಕೊಟ್ಟೆ
ನಿನ್ನೆ ಅಕ್ಕರ ತೋರಿಸಿಲ್ಲ ಮನೆಯಾಳ ದೇವರು
ಯಾರ ಮನೆಗೆ ಹೋಗಲಿ ಯಾರನ್ನ ಬೇಡಲಿ
ಮನೆಯಾಳು ದೇವತೆ ಅಂತೆಂದು ಪರಿಯ ಬಡೋಕೋತಾಳೋ

## ಕಂಬದ ರಂಗನ ಬಬ್ಬೂರ ವಾಸ

ಆಗ ಬಬ್ಬೂರ ಗೌಡ ಹೇಳಪ್ಪ ಗನಗುರುವೆ
ಯಾವ ಮಾರ್ಗದ ಗುಂಟೆ ಯಾವ ಸ್ಥಳ ಹೋಗಬೇಕು
ಯಾವ ಸ್ಥಳ ತಲುಪಬೇಕು । ಸ್ವಾಮಿನೆ ಹೇಳುತಾನೆ
ನಡಿಯಪ್ಪ ಗೌಡ ಬಬ್ಬೂರ ರಾತ್ರಿ ಕೂಡ ನಿನ್ನಯ
ಊರಲ್ಲಿರುವ ರಂಗಧಾಮನ ಗುಡಿಗೆ ಹೋಗಬೇಕು
ಎಂದಾನೆ ಹೇಳುತಾನಲ್ಲೋ ।
ಇಬ್ಬರೂ ಮಾತಾಡಿಕೊಂಡು ಬಬ್ಬೂರ ಬರುತಾರೆ
ಇನ್ನು ಕೈಗಲ್ಲು ದೂರ ಬರುವಾಗ್ಗೆ ಬಬ್ಬೂರ ರಂಗಧಾಮ

ಕಿಡಿಗಣ್ಣಿನವನು ಕಂಬದ ರಂಗ ಬಾರಿ ಅಸಾಧ್ಯದವನೆಂದು
ಕೆಳಗಂಡಿ ಕಿತ್ತುಕೊಂಡು ಹಿಂಗಡೆ ಬಿದ್ದು ಓಡಿ ಹೋಗುತಾನಂತೋ
ಏನಪ್ಪ ಬಬ್ಬೂರ ಗೌಡ ನಾನು ಹೋಗೋ ರಭಸಕ್ಕೆ ನಿನ್ನ ದೇವರು
ಕೆಳಗಂಡಿ ಕಿತ್ತುಕೊಂಡು ಗಿಡಗಂಟೆ ಪಾಲಾದನಲ್ಲೋ ।
ಖಂಡಿತವಾಗಿಯೂ ಆ ದೇವಸ್ಥಾನಕ್ಕೆ ಹೋಗೋದಿಲ್ಲ ನಾನು
ಆ ಗುಡಿಯೇ ಬೇಕಾಗಿಲ್ಲ ನನಗೆ ಎಂಬಾನಂತೋ ।

ಬಬ್ಬೂರ ಗೌಡನಾಗ ತನ್ನ ಮನೆಯೊಳಗೆ ಗದ್ದಿಗೆ ಮಾಡುತಾನೆ
ಮಂಗಳಾರತಿ ಮಾಡುತಾನೆ । ಸ್ವಾಮಿನೆ ವಾಸನ ಮಾಡುತಾನೆ
ಮೂರು ತಿಂಗಳು ತುಂಬೈತೆ ಆಗ ಗನಗುರುವು ಹೇಳುತಾನೆ
ಬಾರಪ್ಪ ಬಬ್ಬೂರ ಗೌಡ ಊರುಮನೆ ನನಗಾಗುವುದಿಲ್ಲ
ನಾನಿಲ್ಲಿ ಇರಲಾರೆನಪ್ಪ । ಗಂಡುಸೂತಕ ಆಗುತ್ತೈತೆ ।
ಅಪಶಕುನ ಆಗುತ್ತೈತೆ ಯಂಗಪ್ಪ ಕಾಲಹರಣ ಮಾಡಾದು ನಾನು
ತಗುಣೆ ಕಾಟ ಬಲು ಕಾಟ ನನಗೆ ಉದುರುಕೆ ಕವುಕೊಂಡೈತೆ
ಜಾಗ್ರತೆ ತಕ್ಕೋ ಬಾರಪ್ಪ ನೀನು ।
ನನ್ನ ಕೈಬಿಟ್ಟು ಎಲ್ಲಿಗೆ ಹೋಗುತೀಯ ತಂದೆ
ಯಾವ ಸ್ಥಳಕ್ಕೆ ಹೋಗುತೀಯಪ್ಪ ನೀನು
ನಿನ್ನ ಕೈ ಬಿಟ್ಟು ಹೆಂಗಪ್ಪ ಬದುಕೋದು ನಾನು ।
ಎಲ್ಲಿಗೂ ಹೋಗೋದಿಲ್ಲ ನಾನು । ನಿನ್ನ ಕಟ್ಟೆನೆ ಏರಿ ಮೇಲೆ
ಜಲಗುಪ್ಪಿ ಮರಕ್ಕೆ ಹೋಗುತೀನಿ ನಾನು ಅಲ್ಲಿ ವಾಸನ ಮಾಡುತೀನಿ
ಕೇಳಮ್ಮ ಗೌಡ ಈಗ ಸೂತಕ ಬೆರಕೆ ಆಗೈತೆ
ನನ್ನಿಂದ ಆಗೋದಿಲ್ಲ । ಬಾರಪ್ಪ ಜಾಗ್ರತೆ ತಕ್ಕೋ ಬಾರಣ್ಣ ನನ್ನ
ಆಗ ಬಬ್ಬೂರ ಗೌಡ ಗದ್ದಿಗೆ ತಕ್ಕೊಂಡು ಸ್ವಾಮಿ ಹೆಗಲಮೇಲೆ ಇಟ್ಟುಕೊಂಡು
ಹೊರಟು ಬಿಟ್ಟನಂತೋ । ಕಟ್ಟೆ ಏರಿಯ ಜಲಗುಪ್ಪಿ ಮರದ
ಮೂಡುಗಡಿಕೆ ಗದ್ದಿಗೆ ಮಾಡುತಾನಪ್ಪ ।

ಕೇಳಪ್ಪ ಬಬ್ಬೂರ ಗೌಡ ಮರವಾದ ಮರವೆಲ್ಲಾ ಪಟಪಟನೆ
ಎರಡು ಭಾಗವಾಗುತ್ತದೆ । ಮುಂಗಾರು ಸಿಡಿಲು ಬಡಿದಂಗಾಯ್ತುದೆ
ಹೆದರಿಯಾ ಬೆದರಿಯಾ ಅನ್ನುತಾನೆ ಗನಗುರುವು ।
ಆಗ ಮರವಾದ ಮರವೆಲ್ಲ ಪಟಪಟನೆ ಸಿಡಿದು
ಎರಡು ಭಾಗವಾಗಿ ಮುಂಗಾರು ಸಿಡಿಲು ಬಡಿದಂಗಾಯಿತು
ಮಾಯಕಾರ ನಮ್ಮಪ್ಪ ಮರದ ಟೊಳ್ಳೊಳಗೆ ಹೋಗಿ ಸೇರಿ ಬಿಟ್ಟನಪ್ಪ

ಮರದ ಟೊಳ್ಳಿಗೆ ಸೇರುತಿದ್ದಂಗೆ ಮರವೆಲ್ಲಾ ಬೋರ್ಗ್‌ರಿಯುತ್ತಾ
ಮಾಮೂಲು ಸ್ಥಿತಿಗೆ ಬಂದಂಗಾಯ್ತು ನೋಡೋ ।
ಬಬ್ಬೂರ ಗೌಡನಾಗ ದೀರ್ಘದಂಡ ನಮಸ್ಕಾರ ಮಾಡಿ
ಅರಮನೆ ಸೇರಿತಾನು ಗನಗುರುವೆ

## ದಾಸರ ಚನ್ನಪ್ಪ ಕಂಬದ ರಾಯನ ಗೆಳೆಯನಾದದ್ದು

ಮೂರು ತಿಂಗಳು ಮರದಲ್ಲಿ ವಾಸ ಮಾಡುತಾನೆ ಗನಗುರುವು
ಮೂರು ತಿಂಗಳು ತುಂಬುತ್ತಿದ್ದಂಗೆ ಕರಡೆಯರ ಗೊಲ್ಲರು
ಏಳು ಜನ ಅಣ್ಣ ತಮ್ಮಂದಿರು ಪಡುಗಡೆಯಿಂದ ಮೂಡುಗಡಿಕೆ
ಮೂಡುಗಡಿಕೆ ಬಂದವರು ಅಲ್ಲಿನೆ ತಂಗುತಾರೆ
ಆಗ ಭಗವಂತ ದೊಡ್ಡಾನು ದೃಷ್ಟಿಯಿಂದ ಏಳು ಜನ ಅಣ್ಣ
ತಮ್ಮಗಳಿಗೆ ಭಾರಿ ಜಗಳಾನೆ ಆಗುತ್ಯೆತೆ । ಭಾರಿ ರಗಳೇನೇ ನಡೆಯುತ್ಯೆತೆ
ಮೂರು ಎಂದರೂ ತಿಳಿಯದಲ್ಲ । ಮುವ್ವತ್ತು ಅಂದರೂ ಬಿಡೋಲ್ಲ ।
ಹಿರಿಯಾನು ದಾಸರ ಚನ್ನಪ್ಪ ಖಂಡಿತವಾಗಿಯೂ ಜಾಗನೆ ಬಿಡುತೀನಿ
ಬೇಡಪ್ಪ ಹಿರಿಯಣ್ಣ । ದಂಡಿನ ಮುಂದೆ ಹಿರಿತಲೆ ಮನುಷ
ನಡೆಯಬೇಕಪ್ಪ । ಬಿಲ್ಲುಕುಲ್ಲು ಹೋಗಬೇಡ ನೀನು
ಇಷ್ಟು ಮಾತ್ರ ಖಂಡಿತವಾಗಿ ಹೇಳುತೀನಿ । ನಾನಂತೂ ಇರೋದಿಲ್ಲ
ಆರು ಜನ ತಮ್ಮಗಳ ಬಿಟ್ಟು ಹೋಗುತಾನೆ ನೋಡೋ ।
ಕಂಬಳಿ ಕೋರಿ ಕಂಬಳಿ ದೊಪ್ಪೆನೆ ಹಾಕಿಕೊಂಡು ।
ಬಲಗ್ಯೆಲಿ ಜಾಗಟೆನೆ ಹಿಡಕೊಂಡು । ಆರು ಜನ ತಮ್ಮಂದಿರ
ಬಿಟ್ಟು ದಾಸರ ಚನ್ನಪ್ಪ ಹೊರಟು ಹೋಗುತಾನೋ ।
ಸೀಳಾದಿ ಹಿಡಿದು ಹೊರಟು ಹೋಗುತಾನೆ ದಾಸಣ್ಣ
ಬಾರಪ್ಪ ದಾಸಣ್ಣ ಬಾರಪ್ಪ ಬಾರಪ್ಪ ದಂಡಿನ ಮುಂದೆ
ಬಿಲ್ಲು ಗೋರಂಟಿ ಖಂಡಪೂಜೆ ಮಾಡಿಕೊಟ್ಟು ಹೋಗಿ ಬಾರಪ್ಪ
ಅಂತೆಂದು ತಮ್ಮಂದಿರು ಸಾರಿ ಕೂಗುತಾರೋ ।
ದಾಸಣ್ಣ ಹಿಂದೆ ನೋಡದಂಗೆ ಬಬ್ಬೂರ ರಸ್ತೆಗೆ ಬಂದು ಬಿಟ್ಟನಣ್ಣ ।
ರಸ್ತೆನೆ ವೊಳಗೆ ಅರ್ಧ ದಾರಿಗೆ ಬಂದಾನು ದಾಸಣ್ಣ
ಆಗ ನೋಡ ಭಗವಂತ ದೊಡ್ಡನು ದೃಷ್ಟಿಯಿಂದ ರಸ್ತೆನೆ ಬಿಟ್ಟು
ಸೀಳಾದಿ ಹಿಡಿದುಕೊಂಡು ನೆಟ್ಟಗೆ ಏರಿ ಮೇಲೆ ಹೋಗುತಾನೆ
ಏರಿಯ ಮೇಲೆ ನಡೆದು ಮುಂದೆ ಏರಿನೆ ಕೆಳಗಿಳಿದು
ಮುಂದೆ ಮೂರು ಹೆಜ್ಜೆ ಇಟ್ಟಾಗ

ಯಾರಪ್ಪ ನರಮಾನವ ಮುಂದೆ ಹೋಗಬೇಡಪ್ಪ ನೀನು ।
ಖಂಡಿತವಾಗಿಯೂ ಮುಂದೊಂದು ಹೆಜ್ಜೆ ಇಡಬೇಡಪ್ಪ
ಹಿಂದಕ್ಕೆ ಬಾರಪ್ಪ ನೀನು । ಹಿಂದಕ್ಕೆ ಬಾ ಎಂದು ಕೂಗುತಾನೆ
ಆಗ ದಾಸಪ್ಪ ಹಿಂದಕೆ ತಿರುಗಿ ಕಟ್ಟೆ ಹತ್ತಿ ನೋಡುತಾನೆ
ಒಬ್ಬರು ನರಮಾನವರ ಸುಳಿವೇ ಇಲ್ಲ ಗಾಬರಿ
ನನ್ನ ಗ್ರಾಚಾರ ಅಂತೆಂದು ಮೈನೀರು ಹೊಯ್ಕೊಳ್ಳುತ್ತಾನೆ
ಧೈರ್ಯ ತಕ್ಕೊಂಡು ಕಟ್ಟೆ ಏರಿಯಿಂದ ಕೆಳಗಿಳಿದು
ಒಂದು ಕೈಗಲ್ಲು ಎಸೆಯೋ ದೂರಕ್ಕೆ ಹೋಗುತ್ತಾನೆ
ಖಂಡಿತವಾಗಿಯೂ ಮುಂದೆ ಹೆಜ್ಜೆ ಇಡಬೇಡ ದಾಸಣ್ಣ
ಬಾರಪ್ಪ ದಾಸಣ್ಣ ನನ್ನ ಮಾತು ಕೇಳಿ ತಿರುಗಿ ಬಾರೆಂದು
ಕೂಗುತಾನಲ್ಲೋ ಗನಗುರುವು ।
ದಿಬ್ಬನೇ ಹತ್ತುತಾನೆ ಸುತ್ತಲೂ ನೋಡುತಾನಲ್ಲೋ
ದಂಡಿಲ್ಲ ದಾಳಿಲ್ಲ ನರಮಾನವರ ಸುಳಿವಿಲ್ಲ
ದೆವ್ವ ಗಾಳಿ ಪೀಡೆ ಪಿಚಾಚಿ ಪಾಲಾದೆ ನಾನು
ಎಲ್ಲೆಲ್ಲೋ ತಮ್ಮಗಳ ಬಿಟ್ಟು ಬಂದೆ ಅಂದು ದಾಸಣ್ಣ ನಡುಗುತಾನೆ
ಬಾರಪ್ಪ ದಾಸಣ್ಣ ಖಂಡಿತವಾಗಿಯೂ ದೆವ್ವ ಅಲ್ಲ ಗಾಳಿ ಅಲ್ಲ
ಯಾರಪ್ಪ ನನ್ನ ಎದುರಿಗೆ ಬಂದು ಮುಖ ತೋರಿಸಿದರೆ
ಬರುತೇನಪ್ಪ ಇಲ್ಲದಿದ್ದರೆ ಬರೋದಿಲ್ಲ ಎಂದು ಹೇಳುತಾನೆ
ಒಳ್ಳೆ ಮಾತು ದಾಸಣ್ಣ ನಿನ್ನ ಹೆಗಲ ಮೇಲಿರೋ ರತ್ನ ಕಂಬಳಿ ತಂದು
ಮರದ ಬುಡಕೆ ಜಾಡಿ ಹಾಸು ಬಾರೋ ಬೇಗ
ದಾಸರ ಚನ್ನಪ್ಪ ಕಂಬಳಿ ಕೋರಿ ತಕ್ಕೊಂಡು ಮೂಡುಮುಖವಾಗಿ
ಜಾಡಿ ಹಾಕಿದನಣ್ಣ । ಕೇಳಮ್ಮ ದಾಸಣ್ಣ ನಾನು ಮರ ಬಿಟ್ಟು
ಬರುವಾಗ್ಗೆ ಮರವಾದ ಮರವೆಲ್ಲ ಪಟಪಟ ಅಂಥ ಸಿಡಿದು
ಎರಡು ಭಾಗವಾಗುತ್ತದೆ ಮುಂಗಾರು ಸಿಡಿಲು ಬಡಿದಂಗಾಗುತ್ತೆ
ಹೆದರಿಯಾ ಬೆದರಿಯಾ ದಾಸಣ್ಣ ನೀನು ।
ಹಾಗೆ ಅನ್ನುತ್ತಿದ್ದಂಗೆ ದಾಸರ ಚನ್ನಪ್ಪ ಓಡೋಡಿ ಒಂದು ಕಲ್ಲು
ಆಚೆಗೆ ನಿಂತು ಬಿಟ್ಟನಲ್ಲೋ । ಒಂದು ಕೈಗಲ್ಲು ದೂರ ಆಚೆಗೆ ನಿಂತು
ಆಗ ಮರವೆಲ್ಲ ಸೀಳಿಕೊಂಡು ಮುಂಗಾರು ಸಿಡಿಲು ಬಡಿದಂಗಾಗಿ
ದೆಸೆವಂತ ಬಂದು ಕಂಬಳಿ ಗದ್ದಿಗೆ ಮ್ಯಾಲೆ ನಿಂತುಬಿಟ್ಟನಲ್ಲೋ
ಬಾರಪ್ಪ ಈಗಲಾದರೂ ಗುರುತಾಯಿತಾ ಬಾರೋ ದಾಸಣ್ಣ
ದಾಸರ ಚನ್ನಪ್ಪ ಬಂದು ಹೇಳಪ್ಪ ನನ್ನಿಂದ ಏನು ಆಗಬೇಕು

ದಾಸಣ್ಣ ದಾಸಣ್ಣ ನೀ ಎಲ್ಲಿಯೂ ಹೋಗಬೇಡಪ್ಪ । ನನ್ನ ಮಾತು ಕೇಳಿಕೊಂಡು
ನನಗೆ ಊಲಿಕ್ಕಿಕೊಂಡು ಇದ್ದುಬಿಡು ಎಂದು ಗನಗುರುವು ಹೇಳಿದ
ಮಾತಿಗೆ ದಾಸಣ್ಣ ಒಳ್ಳೆ ಮಾತು ಹೇಳುತೀಯಲ್ಲ ಗನಗುರುವೆ
ಖಂಡಿತವಾಗಿ ನಾನಿರೋದಿಲ್ಲ । ಲೋಕದ ಮೇಲೆ ಹೊರಟೋಗುತೀನಿ
ಯಾವ ದೇಶವಪ್ಪ ದಾಸಣ್ಣ ಯಾವ ಸೀಮೆಗೆ ಹೊಗುತೀಯಪ್ಪ
ತಿರುದುಂಬ ದಾಸಯ್ಯ ಸ್ವಾಮಿ ಕೊಕ್ಕರೆಗೊಂದು ಕೆರೆಯಲ್ಲ
ದಾಸಯ್ಯನಿಗೆ ಒಂದು ಊರಲ್ಲ ಸ್ವಾಮಿ । ಲೋಕದ ಮೇಲೆ ಹೋಗುತೀನಿ
ನನ್ನ ಸುದ್ದಿ ಬೇಡ ಗನಗುರುವೆ ।
ನನ್ನ ಮಾತು ಕೇಳಿಕೊಂಡು ಈ ಮರದ ಮೇಲೆ ಇರು ನೀನು
ಈ ಆರನ್ನ ಅಡವಿಯೊಳಗೆ ಯಾರಪ್ಪ ನನಗೆ ಕವಳ ಕೊಡಾರು
ಕವಳದ ಸುದ್ದಿ ನಿನಗೇಕೋ ದಾಸಣ್ಣ ನನ್ನ ಮಾತು ಕೇಳಬಾರದೆ
ಕೇಳಪ್ಪ ಗನಗುರುವೆ ಇಂಗಾದರೆ ಇರಲಾರೆ । ನಿನ್ನ ಜೀವನ
ಇರೋವರೆಗೂ ನನ್ನ ಕೈಬಿಡಲಾರೆ ಅಂದರೆ । ಬಲಗೈ ಭಾಷೆ ಕೊಟ್ಟರೆ ಇರುತೀನಿ
ಸ್ವಾಮಿ ಇಲ್ಲದಿದ್ದರೆ ಇರೋದಿಲ್ಲ ಅಂತ ಹೇಳೋನಲ್ಲೋ ।
ಆಗಲಪ್ಪ ದಾಸಣ್ಣ ನನ್ನ ಜೀವಮಾನ ಇರೋವರೆಗೂ ನಿನ್ನ ಕೈಬಿಡೋ
ದಿಲ್ಲ ಅಂದು ಭಾಷೆನೆ ಕೊಟ್ಟನಲ್ಲೋ । ಸ್ವಾಮಿ ಆಣೆನೆ ಮಾಡುತಾನೊ ।
ಕೇಳಪ್ಪ ದಾಸಣ್ಣ ನೀನು ಕರಕರಕೆ ದೊಡ್ಡಾನು
ಹೊತ್ತಿಗೆ ಮುಂಚೆ ಏಳಬೇಕು । ಮೂರು ಮನೆ ಅಲೆಯಬೇಕು
ಮೂರು ಸಾವಿರ ಗೋವಿಂದ ಗೋವಿಂದಂದು ಮೂರು ಮನೆ ಕವಳ
ತರಬೇಕು । ತಂದಂತ ಕವಳವ ನನಗೆ ಎಡೆಮಾಡಿ ನೀನು
ಊಟ ಮಾಡಬೇಕು । ಮರದ ನೆರಳಲ್ಲಿ ಸೊಂಪಾಗಿ ಮಲಗಬೇಕು

## ಹಿರಿಯೂರು ಶೆಟ್ಟಿ ಮನೆಗೆ ದೇವರು ನುಗ್ಗಿದ್ದು

ದಾಸರ ಚನ್ನಪ್ಪ ಹೊತ್ತಿಗೆ ಸರಿಯಾಗಿ ಏಳುತಾನೋ । ಕಂಬಳಿ ತಕ್ಕೊಂಡು
ಹೆಗಲಿಗೆ ಹಾಕಿಕೊಂಡು । ದೊಣ್ಣೆ ಹಿಡಕೊಂಡು ಹೆಗಲಮೇಲೆ ಚೀಲ
ಬಲಗೈಲಿ ಜಾಗಟೆ ಗೋವಿಂದ ಅಂದು ಮೂರು ಮನೆ ಕವಳ ತಂದು
ಸ್ವಾಮಿಗೆ ಎಡೆ ಮಾಡುವನು । ಗಳ್ಡಗಂಬದ ಬಳಿ ಊಟ ಮಾಡುವನು
ಮರದ ನೆರಳಲ್ಲಿ ಸೈಪಾಗಿ ಮಲಗುವನು ।
ಮೂರು ತಿಂಗಳು ತುಂಬೈತಲ್ಲೋ । ದಾಸಣ್ಣಗೆ ಗನಗುರು ಹೇಳುತಾನೆ
ಅಲ್ಲ ಕಣೋ ದಾಸಣ್ಣ ಕತ್ತಲ ಮನೆಯೊಳಗೆ ಕೂಡಿಕೊಂಡುದ್ದೀಯ
ಧೂಪ ದೀಪ ಬೇಡವೆ । ಒಂದು ಹಣ್ಣುಕಾಯಿ ಬೇಡವೇನಪ್ಪ

ಎಲ್ಲಿಂದ ತರಲಿ ಸ್ವಾಮಿ ನನ್ನತ್ರ ಹಣವಿಲ್ಲ । ಯಾರ ಮನೆಗೆ ಕಳ್ಳತನಕ್ಕೆ
ಹೋಗಲಿ ನಾನು । ಯಾರ ಮನೆ ನುಗ್ಗಿ ತರಲೋ
ಯಾರ ಮನೆಗೂ ಕಳ್ಳತನಕೂ ಹೋಗಬೇಡ ನೀನು
ಹಿರಿಯೂರು ಕಡೆ ಪ್ಯಾಟೆಯೊಳಗೆ ಕರಿಯಾನೆ ಕ್ವಾಮಟಿ ಶೆಟ್ಟಿ
ಅಂಚಿನ ಮನೆಯಾತ । ಶೆಟ್ಟಿ ಪಂಚೆ ಹಿಂಡಾಕೆ ಹೋಗವನೆ
ಅವನ ಹೆಂಡತಿ ಚಿನಕುರಳಿ ಹುರಿಯುತ್ತಾ ಕುಂತವಳೆ
ಅವಳ ಉಜಾರತ್ತಿಲ್ಲದೆ ಹೋಗಿ ಒಂದು ದುಡ್ಡಿನ ಸಾಂಬ್ರಾಣಿ
ಒಂದು ದುಡ್ಡಿನ ಊದುಬತ್ತಿ ಒಂದು ದುಡ್ಡಿನ ಕೆಂಪುನಾಮ
ಒಂದು ದುಡ್ಡಿನ ಬಿಳಿನಾಮ ಒಂದು ದುಡ್ಡಿನ ಹಣ್ಣು
ತಕ್ಕೊಂಡು ಬವನಾಸಿ ತುಂಬಿಕೊಂಡು ಬರಬೇಕು ನೀನು.
ಆಗ ನೋಡೋ ಗನಗುರುವೆ । ಒಳ್ಳೆ ಮಾತು ಹೇಳಿದೆ ಮನೆಹಾಳು ದೇವರೆ
ಶೆಟ್ಟಿ ಹಿಡಕೊಂಡು ಹೋಗಿ ಸರ್ಕಾರದವರ ಪಾಲು ಮಾಡಿದರೆ
ಯಾರಪ್ಪ ಬಿಡಿಸೋರು । ಅದರ ತಂಟೆ ನನಗೆ ಬೇಡಣ್ಣ
ಕರಕರ ಹೊತ್ತು ದಾಸರ ಚನ್ನಯ್ಯ ಬವನಾಶಿ ಬ್ಯಾಗು ಹೆಗಲಿಗಾಕಿ
ಬಲಗೈಲಿ ಜಾಗಟೆ ಹಿಡಿದು ಹಿರಿಯೂರು ಪೇಟೆಗೆ ಹೋಗುತಾನೆ
ಹಿರಿಯೂರು ಕಡೆಯ ಕರಿಯಾನೆ ಕ್ವಾಮಟಿಗ ಶೆಟ್ಟಿ ಮನೆ
ಅಷ್ಟೊತ್ತಿಗೆ ಶೆಟ್ಟಿ ಪಂಚೆ ಹಿಂಡಾಕೆ ಹೋಗವನೆ
ಅವನೆಂಡತಿ ಹೆಂಚಿಟ್ಟು ಹುರುಳಿ ಹುರಿಯುತ್ತಾ ಕುಂತವಳೆ
ದಾಸಣ್ಣ ಭಗವಂತ ನುಗ್ಗಿದ ಏಟಿಗೆ ನುಗ್ಗಿ
ಒಂದು ದುಡ್ಡಿನ ಕೆಂಪುನಾಮ ಬಿಳಿನಾಮ । ಹಣ್ಣು
ತಕ್ಕೊಂಡು ಭವನಾಶಿ ತುಂಬಿಕೊಂಡು ಹಿಂದೆ ತಿರುಗಿಕೊಂಡು
ಬರುವಾಗ್ಗೆ ಶೆಟ್ಟಿಯ ಹೆಂಡತಿ ಪರಕೆ ತಕ್ಕೊಂಡು ತಲೆಬಾಗಿಲಾಗೆ
ನಿಂತುಕೊಂಡು ಬಿಟ್ಟಳಣ್ಣ । ದಾಸಣ್ಣ ತಲೆಬಾಗಿಲು ಬಿಟ್ಟು
ಈಚೆಗೆ ಬರುತ್ತಿದ್ದಂಗೆ ಏನಪ್ಪ ದಾಸಣ್ಣ ನನ್ನ ಉಜಾರತ್ತಿಲ್ಲದೆ
ಒಳಗೆ ನುಗ್ಗಿ ಹಿಂಗೆ ಮಾಡಿದ್ದೀಯ । ದುಡ್ಡು ಕೊಟ್ಟು ಹೋಗಪ್ಪ
ಕಂಬಳಿ ಸೆರಗಿಡಿದುಕೊಂಡು ಕೇಳುತಾಳಲ್ಲಪ್ಪ
ಪುಣ್ಯಾತಿಗಿತ್ತಿ ನನ್ನತ್ತಿರ ದುಡ್ಡಿಲ್ಲ ಕಾಸಿಲ್ಲ ಎಂದು ಕಂಬಳಿ
ಸೆರೆಗಿಡಿದು ಎಳೆದು ಬರುತಾನೆ ದಾಸಣ್ಣ । ಆಗ ಶೆಟ್ಟಿ ಹೆಂಡತಿ
ಸಿಟ್ಟು ಬಂದು ಚಿನಕುರುಳಿ ಪೊರಕೆಯಿಂದ ಮೂರು ಏಟು ಕೊಟ್ಟಳು
ಆಗ ದಾಸಣ್ಣ ಕರಕರನೆ ಹಲ್ಲು ಕಡಿದು । ಕರೆಗುಂಡು ತಕ್ಕೊಂಡು
ಇಂಥ ದೇವರು ಮಾತು ಕೇಳಿದ್ದಕಲ್ಲವೆ ಮೂರುಕಾಸಿನ ಹೆಂಗಸಿನ

ಕೈಲಿ ಪೊರಕೆ ಏಟು ತಿಂದದ್ದು । ದೇವರ ಮೇಲೆ ಕಲ್ಲೆತ್ತಾಕಿ
ಬಿಡುತೀನಿ ಅಂತೆಂದು ರೌದ್ರನಾಗಿ ಬರುತಾನೆ ನೋಡೋ ।

ಅರ್ಧನೆ ದಾರಿಯಲ್ಲಿ ಯಾರಾನೆ ಮಾತಾಡಿಸಿದಂಗಾಯ್ತು
ಯಾಕಪ್ಪ ದಾಸರ ಚನ್ನೋಜಿ ಹಿಂಗೆ ರೌದ್ರನಾಗಿ ಹೆಗಲಮ್ಯಾಲೆ
ಕಲ್ಲು ಹೊತ್ತುಕೊಂಡು ಬರುತೀಯ ಏನಪ್ಪ ಹುಚ್ಚು ಕೆಲಸ
ಏನಪ್ಪ ಹಿರಿಯೂರು ಪೇಟೆ ಹಿಂಗಾಗೈತೆ ಕಲ್ಲೆ ಕೆಳಗೆ ಹಾಕಿ
ನೋಡೋ ದಾಸೋಜಿ ಅಂತೆಂಬ ಮಾತಿಗೆ ದಾಸಣ್ಣ ಹಿಂತಿರುಗಿ
ನೋಡುತ್ತಾನೆ ಹಿರಿಯೂರು ಪೇಟಾದು ಪೇಟೆನಲ್ಲಾ
ಕಂಡು ಶೆಟ್ಟಿಮನೆ ಹತ್ತಿಕೊಂಡು ಉರಿದೋಗುತ್ತೈತಲ್ಲೊ ।
ಜನವಾದಿ ಜನವೆಲ್ಲಾ ಬಂದು ಕೈಗಲ್ಲು ದೂರಕೆ ನಿಂತವರೆ
ಅಬೆ ಬಡಿದು ಹೋಗುತ್ತೈತೆ । ಹತ್ತಿರ ಹೋಗಾಕಾಗುವುದಿಲ್ಲ
ಶೆಟ್ಟಿಗಾರ ಹೆಂಡರಾಗ ಬಾಯಿ ಬಾಯಿ ಬಡಿದುಕೊಂಡು
ಹೊಳೆ ಕಡಿಕೆ ಓಡೋಡಿ ಹೋಗುತಾಳಣ್ಣ ।
ಹೊಳೆಗೆ ಓಡೋಡಿ ಬಂದ ಶೆಟ್ಟಿ ಹೆಂಡರು ಸಾಹುಕಾರರೆ ಸಾಹುಕಾರರೆ
ನಮ್ಮ ಹೆಂಚಿನ ಮನೆ ಹತ್ತಿ ಉರುದೋಗುತ್ತೈತೆ ಬನ್ನಿ ಎಂದು
ಏನು ಮಾತು ಆಡುತೀಯ ಹುಚ್ಚು ಮುಂಡೆ । ಯಾತರದ ಆಡುತೀಯ
ಮನೆಯಾಳು ಮುಂಡೆ । ಖಂಡಿತವಾಗಿಯೂ ಹಾಗಾಗಿಲ್ಲ ಎಂದು
ಶೆಟ್ಟಿ ನುಡಿತಾನೆ । ಆಗ ಶೆಟ್ಟಿ ಹೆಂಡತಿ ಖಂಡಿತವಾಗಿಯೂ ಸುಳ್ಳಲ್ಲ ಸ್ವಾಮಿ
ಎದ್ದು ಬಂದು ನೋಡಿರಿ ಸ್ವಾಮಿ ನೀವು ।
ಶೆಟ್ಟಿಗಾರ ಬಂದು ನೋಡುತಾನಣ್ಣ ಹತ್ತಿರಕ್ಕೆ ಹೋಗಾಕಾಗೋದಿಲ್ಲ ।
ಏನು ಸೋಜಿಗವಪ್ಪ । ಯಾರಿಗೆ ಏನು ಅನ್ಯಾಯ ಮಾಡಿದ್ದೆನಪ್ಪ
ಯಾರಪ್ಪ ನಮ್ಮ ಮನೆಗೆ ಬೆಂಕಿ ಇಟ್ಟಾರು । ಹೇಳಲೇ ಮನೆಯಾಳು ಮುಂಡೆ
ನಮ್ಮ ಮನೆಗೆ ಯಾರು ಬಂದಿದ್ದರು ಅಂತಂದು ಗೋಳಾಡುತಾನೆ ।

ಅಣ್ಣಣ್ಣಿ ಅಜ್ಜ ಗೊಣ್ಣೆನೆ ಸುರುಸ ಕೂದಲ್ಲು ಈಟುದ್ದ । ನನ್ನ ಉಜರತ್ತಿಲ್ಲದೆ
ಅಂಗಡಿ ಮನೆಗೆ ನುಗ್ಗಿ ಇಷ್ಟೊಂದು ಸಾಮಾನು ತಕ್ಕೊಂಡು ಹೋಗುತ್ತಿದ್ದ
ದುಡ್ಡು ಕೊಟ್ಟು ಹೋಗಲೇ ಎಂದು ಕಂಬಳಿ ಸೆರಗಿಡುಕೊಂಡೆ ।
ದುಡ್ಡಿಲ್ಲ ಕಾಸಿಲ್ಲ ಹೋಗಲೇ ಪುಣ್ಯಾತಗಿತ್ತಿ ಎಂದು ಗುಂಜಿಕೊಂಡು
ಹೋದನಪ್ಪ । ಚಿನಕುರಳಿ ಪೊರಕೆ ತಕ್ಕೊಂಡು ಮೂರು ಏಟು
ಹಾಕಿಬಿಟ್ಟೆ ನಾನು । ಅಂತೆಂದು ಗೋಳಾಡುತಾಳೋ ।
ತೋರಿಸು ಬಾರೆ ಮನೆಯಾಳು ಮುಂಡೆ ಯಾವ ಮಾರ್ಗದಲಿ ಹೋದ

ಯಾವ ರಸ್ತೆಗುಂಟ ಹೋದ ಅಂತೆಂಬ ಮಾತಿಗೆ ಶೆಟ್ಟಿಗಾರ್ತಿ
ಬಬ್ಬೂರು ರಸ್ತೆಗುಂಟಾ ಹೋದನು ಎಂದು ಹೇಳುತ್ತಿದ್ದಂಗೆ
ಶೆಟ್ಟಿಗಾರ ಎದೆ ಬಡಿದುಕೊಂಡು ಓಡೋಡಿ ಬಂದು ಬಬ್ಬೂರ ತಲುಪಿ
ಯಾಕಯ್ಯ ದಾಸಣ್ಣ ನಮ್ಮ ಅರಮನೆಗೆ ಬೆಂಕಿ ಇಟ್ಟೆ
ಅಂತೆಂದು ಕೇಳುತ್ತಿದ್ದಂಗೆ । ಹೋಗಯ್ಯ ಶೆಟ್ಟಿಗಾರ ನಿಮ್ಮ ಮನೆಗೆ
ಬೆಂಕಿ ಇಡಲು ನನಗೇನು ತೀಟೆಯ ಅಂತೆಂದನಂತೋ ।
ಯಾಕಪ್ಪ ಶೆಟ್ಟಿ ಇಷ್ಟೊಂದು ಗಾಸಿಯಾಗಿದ್ದೀಯ
ಕೇಳಪ್ಪ ಗನಗುರುವೆ ದಾಸಣ್ಣ ಬಂದು ನಮ್ಮರಮನೆಗೆ ಬೆಂಕಿ
ಹಚ್ಚಿದ್ದು ಸರಿಯೆ ಸ್ವಾಮಿ । ಸುಳ್ಳು ಹೇಳಬೇಡ ನ್ಯಾಯವಾಗಿ
ಹೇಳಪ್ಪ ದಾಸಣ್ಣ ನಿನ್ನ ಮನೆಗೆ ಬೆಂಕಿ ಇಟ್ಟವನು
ದಾಸಣ್ಣನು ಬಿಟ್ಟು ಇನ್ಯಾರು ಬಂದಿರಲಿಲ್ಲ ಸ್ವಾಮಿ ।
ಕೇಳಣ್ಣ ಶೆಟ್ಟಿಗಾರು ನನ್ನ ಹರಕೆ ಇರೋದಕ್ಕಲ್ಲವೆ ನನ್ನ ಮಗನ್ನ
ನಿನ್ನ ಮನೆಗೆ ಕಳಿಸಿದ್ದು । ಯಾವುದಪ್ಪ ನಿನ್ನರಕೆ ಇರುವುದು
ಕೇಳಪ್ಪ ಶೆಟ್ಟಿಗಾರ ಹಿಂದುಗಡೆ ಬಬ್ಬೂರ ಗೌಡ ಏನು ಕೊಟ್ಟಿದ್ದ
ನೀನು ಏನು ಕೊಡಬೇಕು ಬೇಗ ಹೇಳಬೇಕೆಂದನಾಗ
ಮೂರು ಹಿಡಿ ಹೊನ್ನು ಕೊಟ್ಟಿದ್ದ ಸ್ವಾಮಿ । ನಾನು ಮೂರು ಹಿಡಿ ಮಣ್ಣು ಕೊಟ್ಟಿದ್ದೆ
ಮೂರು ಹಿಡಿ ಹೊನ್ನೆಂಬುದು ಯಾರ ಸ್ವತ್ತಪ್ಪ । ನನ್ನ ಸ್ವತ್ತಿನ ಹೊತ್ತಿಗಲ್ಲವೆ
ನನ್ನ ಮಗನನ್ನು ನಿನ್ನ ಮನೆಗೆ ಕಳಿಸಿದ್ದು ।
ನನಗೆ ತಿಳಿಲಿಲ್ಲ ಗುರುತಾಗಲಿಲ್ಲ ಗನಗುರುವೆ ಈಗ ಮುಂದೇನು
ಮಾಡಬೇಕಪ್ಪ ನಾನು ಗುರುವೆ ।
ಕೇಳಮ್ಮ ಶೆಟ್ಟಿಗಾರ ಶನಿವಾರ ಹೊತ್ತು ಹುಟ್ಟಿ ಬರುವಾಗ್ಗೆ ಗಂಡ ಹೆಂಡರು
ಒಂದೊತ್ತು ಉಪವಾಸದಿಂದ । ವಾಮ ನೇಮದಿಂದ ಬಾಯಿಬೀಗದಿಂದ
ನೆಲ ಒಲೆ ಸಾರಿಸಿಕೊಂಡು । ನೂರೊಂದು ದಾಸರ ಕೂಡಿಕೊಂಡು
ಸಾಲು ಬಂಡಿ ತುಂಬಿಸಬೇಕು ।
ದಾಸಣ್ಣ ತಲೆಬಾಗಿಲು ಬಿಟ್ಟು ಈಚೆಗೆ ಬರುತ್ತಿದ್ದಂಗೆ
ನಿನ್ನ ಉದಾಸಲು ಇಳಿಯುತ್ತಿದ್ದಂಗೆ ಹೆಜ್ಜೆಗೊಂದು ಮಣೆವು
ಹಾಕಿಕೊಂಡು । ಹೆಜ್ಜೆಗೊಂದು ಇಡುಗಾಯಿ ಹಾಕಿಕೊಂಡು
ನನ್ನ ಗದ್ದಿಗೆ ತನಕ ಬಂದರೆ ಪವಾಡ ಎತ್ತುತ್ತೀನಪ್ಪ ನಾನು ।
ಇಲ್ಲದಿದ್ದರೆ ಎತ್ತೋದಿಲ್ಲ ನಾನು । ಅಂಗಂದ ಮಾತಿಗೆ ಶೆಟ್ಟಿ
ಆಗಲಪ್ಪ ಖಂಡಿತವಾಗಿಯೂ ತಯಾರು ಮಾಡುತೀನೆಂದ ।
ಶೆಟ್ಟಿ ಕರಾರು ಮಾಡುತಾನಲ್ಲೋ । ಆಗ ಸ್ವಾಮಿ

ಹೋಗಯ್ಯ ಶೆಟ್ಟಿಗಾರೆ ಅಂಚಿನ ಅರಮನೆ ಮುಂದೆ ಹೋಗಿ ನೋಡಣ್ಣ
ಅಂಚಿನ ಅರಮನೆಯೊಳಗೆ ನಾಲ್ಕು ಮೂಲೆಗೇನಾದರೂ ಒಂದು ಚೂರು
ಕಪ್ಪಾಗಿದ್ದರೂ ಖಂಡಿತವಾಗಿಯೂ ನಂಬಬೇಡ ಹೋಗು ನೀನು
ಶೆಟ್ಟಿಗಾರ ಹಿಂದಕ್ಕೆ ಹೋಗಿ ಮನೆ ನೋಡುತಾನೆ ।
ಯಂಗಿತ್ತೋ ಹಂಗೇ ಆಯಿತಲ್ಲೋ । ಗಂಡ ಹೆಂಡರು ಮಾತಾಡಿಕೊಂಡು
ಶನಿವಾರ ಹೊತ್ತು ಹುಟ್ಟುವಾಗ್ಗೆ ಒಂದೊತ್ತು ಉಪವಾಸದಿಂದ
ವಾಮ ನೇಮದಿಂದ । ಬಾಯಿ ಬೀಗದಿಂದ । ನೆಲ ಒಲೆ ಸಾರಿಸಿಕೊಂಡು
ನೂರೊಂದು ದಾಸರ ಕೂಡಿಕೊಂಡು ಸಾಲು ಬಂಡಿ ತುಂಬಿಸಿಕೊಂಡು
ಅವರ ಮನೆ ಉದಾಸಲು ಇಳಿಯುತ್ತಿದ್ದಂಗೆ ಹೆಜ್ಜೆಗೊಂದು ಇಡುಗಾಯಿ
ಹೆಜ್ಜೆಗೊಂದು ಮಣೆವು ಹಾಕಿಕೊಂಡು ದೃಷ್ಟಿ ಮರದ ತನಕ ಬಂದರು ।
ಒಪ್ಪಿದೆ ಗನಗುರುವೆ । ಒಪ್ಪಿದೆ ಗನುಗುರುವೆ ।
ಈ ರೀತಿ ಶೆಟ್ಟಿಗಾರ ಗಂಡ ಹೆಂಡತಿಯರಾಗ ಹಣ್ಣುಕಾಯಿ ಒಪ್ಪಿಸಿಕೊಂಡು
ಮಂಗಳಾರತಿ ಮಾಡಿಸಿಕೊಂಡು ನನ್ನ ಅರಮನೆ ಮೂರು ಸುತ್ತಿ
ಪ್ರದಕ್ಷಣೆ ಮಾಡಿಸಿಕೊಂಡು ಹಣ್ಣುಕಾಯಿ ತಕ್ಕೊಂಡು ಹಿಂದಕ್ಕೆ
ಹೋಗಬೇಕು ಎಂಬ ಕಾಲಕ್ಕೆ ದಾಸರ ಚನ್ನಪ್ಪ ಕೈಕಾಲು ಮುಖ
ತೊಳೆದನಲ್ಲೋ । ಪಟ್ಟೆಪಟ್ಟೆ ಮೂರು ನಾಮ
ಮುಖದ ಮೇಲೆ ಹಾಕಿ ಬಿಟ್ಟ । ಉದ್ದದ ಗಂಧ ತೇದು
ರಟ್ಟೆಮೇಲೆ ಉದ್ದ ತೆಗೆದವನೆ ಕಂಬಳಿ ಕೋರಿ
ಬೆಕ್ಕೆ ದೊಣೆ ಹೆಗಲಮೇಲೆ ಹಾಕಿಕೊಂಡು । ಬಲಗೈಲಿ ಜಾಗಟೆ
ಹಿಡಕೊಂಡು ದಾಸಣ್ಣ ಮೂರು ಮನೆಗೆ ಹೋದವನೆ
ಮೂರು ಸೊಲ್ಲು ಗೋವಿಂದ ಗೋವಿಂದ ಗೋವಿಂದ ಅಂದು
ಮೂರು ಮನೆ ದಾಸನ ಮಾಡಿ ತಂದು । ಅಡಿಗೆ ಮಾಡಿ ಉಂಡು
ಮರದ ನೆರಳಾಗೆ ಸುಖವಾಗಿ ಮಲಗುತಾನಣ್ಣಾ ।
ಆರು ತಿಂಗಳು ತುಂಬುತಿದ್ದಂಗೆ ಏನಮ್ಮ ದಾಸಣ್ಣ
ಭಕ್ತರ ಮನೆ ಊಟ ದಾಸರ ಮನೆ ನಿದ್ದೆ ಆಯಿತೆಲ್ಲೋ ।
ಒಂದು ಚಿಂತೆ ಇಲ್ಲ । ಒಂದರ ಯೋಚನೆ ಇಲ್ಲ ।
ಅಂಗೆಂಬಾ ಮಾತಿಗೆ ಏನು ಮಾಡಲಪ್ಪ ಗನಗುರುವೆ
ನನ್ನಿಂದ ಏನು ಆಗುತೈತೆ । ಹೇಳಬೇಕಪ್ಪ ಸ್ವಾಮಿ ನೀನು ।
ನಿನ್ನ ಜೀವಮಾನ ಇರುವವರೆಗೂ ನನಗೆ ಉಪಕಾರ । ನೀನು
ಸತ್ತು ಕೆಟ್ಟು ಹೋದ ಮೇಲೆ ನನಗೆ ಯಾರಪ್ಪ ಸಹಕಾರಿ ।
ನಾನು ಏನು ಮಾಡಲಿ ಸ್ವಾಮಿ ಎಲ್ಲಾದಕೊಂದು ಮನೆಕೊಂಡ ಮನೆ

ಕಾಡಗ ಮಾಡಬೇಕಪ್ಪ ನೀನು । ಅಂಗಂದರೇನು ತಿಳಿಯಲಿಲ್ಲವಪ್ಪ
ಕೊಂಡ ಮನೆ ಕಾಡಗ ಅಂದರೇನು ಗೊತ್ತಾಗಲ್ಲಪ್ಪ ಗುರುವೆ
ಅಂಗಂದರೆ ಅಲ್ಲಿಂದ ಒಂದು ಹೆಣ್ಣು ಗೊತ್ತು ಮಾಡಿಕೊಂಡು ಬಂದು
ಲಗ್ನವಾಗೋದು ಅಂಥ ಅರ್ಥವಪ್ಪ । ನಿನ್ನಿಂದ ವಂಶ ಬೆಳೆಯಬೇಕಪ್ಪ
ಕೇಳಪ್ಪ ಗಾನಗುರುವೆ । ನೀನು ಇಂಥವನೆಲ್ಲಾ ಹೇಳುವಂತಿದ್ದರೆ
ನಿನ್ನತ್ರ ನಾನಿರುವುದಿಲ್ಲೋಪ್ಪ । ಜಾಗನೇ ಬಿಡುತೀವಪ್ಪ ಗನಗುರುವೆ ।
ಅಲ್ಲ ಕಣೋ ದಾಸಣ್ಣ ಪಟ್ಟಾಗೆ ಉಂಡುಕೊಂಡು । ಮೀಸೆ ತೀಡಿಕೊಂಡು
ಹೊಟ್ಟೆ ನೀವಿಕೊಂಡು ಮರದ ನೆರಳಾಗೆ ಸೊಂಪಾಗಿ ಮಲಗುತೀಯ ನೀನು ।

## ದಾಸರ ಚನ್ನಪ್ಪನ ಮದುವೆ ಪ್ರಸಂಗ

ನಾನು ನೋಡಿದರೆ ಸದ್ವಿಕಾರ ರೂಪುವಾಗಿದ್ದೀನಿ । ನನ್ನತ್ರ ಕಾಸಿಲ್ಲ
ಖಡ ನಂಬೋರಿಲ್ಲ । ಯಾತಕಪ್ಪ ನನಗೆ ಮದುವೆ ಸುದ್ದಿ ಗುರುವೆ ।
ನನಗೇ ಕವಳ ಹೊಂದಿಸಿಕೋದೇ ಕಷ್ಟ ಅಂತಾದರಲ್ಲಿ ಮದುವೆ
ಯಾಕೋ । ಯಾರಪ್ಪ ಹೆಣ್ಣು ಕೊಟ್ಟಾರು ನನಗೆ ಗುರುವೆ ।
ಮದುವೆ ಸುದ್ದಿ ಬ್ಯಾಡ ಅಂಬುತಾನೆ ದಾಸಣ್ಣ ನೋಡೋ ।
ಕೇಳೋ ದಾಸಣ್ಣ ಹೆಣ್ಣು ನೋಡುವುದು ನನಗಿರಲಿ
ಮದುವೆ ಆಗುತೀಯೇನಪ್ಪ ಹೇಳಪ್ಪ ನೀನು । ಅಂಬುತಾನೆ ಗನಗುರುವು
ಹೆಣ್ಣು ಮಾಡಿಕೊಂಡು ಬಂದರೆ ಆಗುತೀನಿ ಸ್ವಾಮಿ ।
ಕೇಳಪ್ಪ ದಾಸಣ್ಣ ಬಬ್ಬೂರ ಪಡುಗಡೆ ನೆಂಟ್ರಟ್ಟಿ ಅಯಿತಣ್ಣಾ
ಅಲ್ಲಿಗೆ ಹೋಗಿ ಮೂರು ದಿನ ಕವಳ ತರಬೇಕು ನೀನು
ನೆಂಟ್ರಟ್ಟಿ ಒಳಗೆ ಹೊನ್ನಾರು ಗೊಲ್ಲರು ಪಾತಣ್ಣ ಅಂದರೆ
ಭಾರಿನೇ ಸಂಸಾರಿ ಭಾರಿನೇ ಕುಳ ನೋಡ ।
ಏಳು ಜನ ಹೆಣ್ಣು ಏಳು ಜನ ಗಂಡು ಪಾತಣ್ಣನಿಗೆ ಏಳು ಸೊಸೆಯರು
ಏಳು ಸೊಲಿಗೆ ಕುರಿಗಳು ಏಳು ಗೂಡಿನ ದನಗಳು ಅವರಿಗೆ
ಏಳು ಜನ ಹೆಣ್ಣು ಮಕ್ಕಳೊಳಗೆ ಆರು ಜನ ಕೊಟ್ಟು ಲಗ್ನ ಮಾಡೈತೆ
ಕಡೆಹುಟ್ಟು ಹುಟ್ಟು ಕುರುಡು ತೊಡೆ ಮೇಗಳ ಹೆಳವ ।
ಎತ್ತಬೇಕು ಇಳಿಸಬೇಕು 'ಗೋರ ಪಾತು' ಎಂಬ ಹೆಣ್ಣು
ಗೋರ ಪಾತಣ್ಣನ ಮೇಲೆ ದೆಸೆವಂತ ದೃಷ್ಟಿನೇ ಇಟ್ಟನಣ್ಣ
ಆವತ್ತಿನ ಕಾಲದಿಂದ ಏಳು ಬಾಗಿಲಿನ ಅರಮನೆಗೆ ಬಂದನಣ್ಣ
ಏಳು ಸೊಸೆಯರು ರಾತ್ರಿ ಕಸ ಮುಸರೆ ತೆಗೆದು ಹಾಲಿಗೆ ಹೆಪ್ಪಾಕಿ
ಎಲ್ಲರೂ ಮಾತಾಡಿಕೊಂಡು ಮಲಗುತಾರಣ್ಣ ।

ಏಳೇಳು ಹದಿನಾಲ್ಕು ಜನ ತಲೆಕೊಟ್ಟು ಮಲಗಿರುವಾಗ
ಕಾರೆಂಬ ಕತ್ತಲೆಯೊಳಗೆ ದೃಷ್ಟಿಸಿ ಮರದಿಂದ ಸ್ವಾಮಿ ಹೋದನಣ್ಣ
ಹೋದಂತ ಸ್ವಾಮಿ ಮೊಸರೆಲ್ಲಾ ಕುಡಿದು ಮಾಯಕಾರ ನಮ್ಮಪ್ಪ
ತಿರುಗಿ ಬಂದು ಬ್ಯಾಟೆ ಮರವ ಸೇರಿದನಲ್ಲೋ ಗನಗುರುವು
ಮುಂಗೋಳಿ ಶಬ್ದ ಕೇಳಿ ಏಳು ಜನ ಸೊಸೆಯರು
ಕೈಕಾಲು ಮುಖ ತೊಳಕೊಂಡು । ವಿಭೂತಿ ಧರಿಸಿಕೊಂಡು
ಕಡೆಗೋಲು ತಕ್ಕೊಂಡು ಮೊಸರು ಬಾನಿ ತನಕ ಹೋದರೆ
ಮೊಸರು ಬಾನಿಯೊಳಗೆ ಒಂದಕ್ಕಿ ಪಿಳ್ಳೆ ಕುಡಿಯೋಕೂ ಒಂದು ಹನಿ
ಮೊಸರಿಲ್ಲ । ಅತ್ತೆ ಮಾವರಿಗೆ ಏನೆಂದು ಹೇಳಲಿ ಏನು
ಗ್ರಹಚಾರ ಬಂದಿತಮ್ಮ ನಮಗೆ ಅಂಬಾರಲ್ಲೋ ಗನಗುರುವೆ ।
ಮಾವ ಅತ್ತೆಮ್ಮನವರೆ ಏಳು ಮೊಸರು ಬಾನಿಯೊಳಗೂ ಒಂದು
ಹನಿ ಮೊಸರಿಲ್ಲ । ಅಂಬಾ ಮಾತಿಗೆ ಹೇಳ್ರಲೇ ಕಳ್ಳ ಮುಂಡೇರಾ
ತುಂಡು ಮುಂಡೇರಾ । ಗೊಬ್ಬು ಮುಂಡೇರಾ ।
ಇಳ್ಳೆಲ್ಲಾ ಗಂಡ ಹೆಂಡರು ಮಾತಾಡಿಕೊಂಡು ಮೊಸರು ಮಾರಿ
ದುಡ್ಡು ಕಟ್ಟಿಕೊಂಡರೇಂದ್ರೆ ತುಂಟು ಮುಂಡೇರ ನೀವು ।
ದಾಸಯ್ಯ ಮಾವ ಖಂಡಿತವಾಗಿಯೂ ನಮ್ಮನ್ನ ಕಳ್ಳರ
ಮಾಡಬೇಡಿ । ಖಂಡಿತವಾಗಿಯೂ ಮೊಸರು ಮಾರಿ ದುಡ್ಡು
ಕಟ್ಟಿಕೊಂಡಿಲ್ಲ ಕಣಪ್ಪ ಅಂಬಾರೆಲ್ಲೋಪ್ಪ ಗನಗುರುವೆ ।
ತಿರುಗಿ ಎರಡನೇ ರಾತ್ರಿಯೂ ಅದೇ ರೀತಿ ಮೊಸರು ಹೋಗುತ್ತೈತೆ
ಮೂರನೇ ರಾತ್ರಿಯೊಳಗೆ ಹಟ್ಟಿ ಹೊರಗಿನಿಂದ ಸರಿ ರಾತ್ರಿಗೆ
ದಾಸಪ್ಪ ಬಂದು ಮೊಸರು ಕುಡಿದು ಹೋಗುತಾನೆ । ನಾಳೆ
ರಾತ್ರಿಗೆ ಏಳು ಜನ ಗಂಡು ಮಕ್ಕಳು ಕೈಕಾಲು ಎಡೆಮುರಿ ಕಟ್ಟಿ
ಹಟ್ಟಿ ಹಿಂದಲ ಹುಣಸೇಮರಕೆ ಕಟ್ಟಬೇಕು ನೀವು ।
ಕರಕನೆ ಹೊತ್ತು ಹುಟ್ಟುವಾಗ್ಗೆ ದಾಸಣ್ಣ ಮೂರು ಸಲ ಜಾಗಟೆನೆ
ಬಡಿದು । ಗೋವಿಂದ ಗೋವಿಂದ ಗೋವಿಂದ ಅನ್ನುತ್ತಿದ್ದಂಗೆ
ಏಳು ಜನ ಅಣ್ಣ ತಮ್ಮಂದಿರು ಹೋಗಿ ಹಟ್ಟಿ ಹಿಂದಲ ಹುಣಸೆಮರಕ್ಕೆ
ಜಡಾಯಿಸಿ ಬಿಗಿದುಬಿಟ್ಟರಣ್ಣ । ಆಗ ದಾಸರ ಚನ್ನಪ್ಪ
ನೆಂಟ್ರಟ್ಟಿಲಿ ಮೋಟು ಹುಣಸೆಮರದಾಗೆ ಕೈಕಾಲು ಬಿಗಿಸಿಕೊಂಡು
ಎಂಥ ಮನೆಹಾಳು ದೇವರೋ । ಎಂಥ ಕಾಟ ಕೊಟ್ಟೆಪ್ಪ ನನಗೆ
ಮಾನ ಕಳೆದು ಹೋಗುತ್ತೈತೆ । ಮರ್ಯಾದೆ ಉಳಿಲಿಲ್ಲ ನನಗೆ
ಆಗ ಏಳು ಜನ ಅಣ್ಣ ತಮ್ಮಂದಿರು ಅರಮನೆಗೆ ಬರುತ್ತಿದ್ದಂಗೆ

ಅಡಿಗೆ ಮಾಡಿ ಊಟ ಮಾಡಿದ ಏಳು ಸೊಸೆಯರು ಅತ್ತೆಮಾವರಿಗೆ
ಹಾಸಿಗೆ ತಲೆದಿಂಬು ಹಾಕಿ ಏಳು ಸೊಸೆಯರೂ ಅವರವರ
ಗಂಡಂದಿರನ್ನ ಕರಕೊಂಡು ಕಂಡವರ ಮನೆಗೆ ಮಲಗೋಕೆ ಹೋಗುತಾರೆ
ಕಂಡವರ ಮನೆಗೆ ಮಗಿಲೇನರೆ ಕಾರೆಂಬ ಕತ್ತಲೆ ಸೆಟ್ಟನೆ ಸರವತ್ತು
ಉಕ್ಕಿನ ಉರಿಬಾಣವಾಗಿ । ಮುಂಗಾರ ಮಿಂಚಿನಂತೆ ಹೋಗಿಬಿಟ್ಟ ಸ್ವಾಮಿ
ಮುಂಗಾರು ಮಿಂಚಿನಂತೆ ಪಾತಣ್ಣನ ಅರಮನೆಗೆ ಹೋಗಿ
ಮನೆಯಲ್ಲಿ ದೀಪ ಹತ್ತುತ್ತಿದ್ದಂತೆ । ಪಾತಣ್ಣ ಪಾತಣ್ಣನ ಹೆಂಡರು
ಎಚ್ಚರವಿಲ್ಲದೆ ಗೊರಕೆ ಹೊಡೆಕೊಂಡು ಮಲಗೇವರಣ್ಣ ।
ಏಳು ಬಾನಿ ಮೊಸರೆಲ್ಲಾ ಕುಡಿದ ಭಗವಂತ ಆ ಬಾನಿ ತಕ್ಕೊಂಡು
ಈ ಬಾನಿಗೆ ಈ ಬಾನಿ ತಕ್ಕೊಂಡು ಆ ಬಾನಿಗೆ ಕುಟ್ಟುತ್ತಾನೆ ।
ಪಾತಣ್ಣನಿಗೆ ಎಚ್ಚರವಾಗಿ ಉಸ್ ಉಸ್ ಎಂದು ಬೆಕ್ಕು ಹೊಡೆಯುತ್ತಾನೆ.

## ಕಂಬದ ರಂಗ ಹೆಣ್ಣು ಕೇಳಿದ್ದು

ಪಾತಯ್ಯ ಮಾವ ಪಾತಯ್ಯ ಮಾವ ನಿನ್ನ ಮನೆಗೆ ಬಂದಿರೋದು ಬೆಕ್ಕಲ್ಲ
ನಾನು ಕಣಪ್ಪ । ದಿವ್ಯ ದೃಷ್ಟಿಯಿಂದ ನೋಡಬೇಕಪ್ಪ ನೀವು ।
ಗಪ್ಪನೆ ಎದ್ದು ನೋಡುವಾಗ್ಗೆ ಮನೆಯಾದ ಮನೆಯಲ್ಲಾ ದೀಪ ಹಚ್ಚಿದಂಗಾತೈತೆ
ನರಮನುಷ್ಯರ ಸುಳಿವೇ ಇಲ್ಲವಲ್ಲ ಇದೇನು ಗ್ರಹಚಾರವಪ್ಪ ।
ಹಿಂದಕ್ಕೆ ತಿರುಗಿ ನೋಡು ಹಿಂದಕ್ಕೆ ತಿರುಗಿ ನೋಡೆಂದು ಹೇಳುತ್ತಿದ್ದಂಗೆ
ದೆಸೆವಂತ ತಲೆ ದಿಂಬಲ್ಲಿ ನಿಂತಿದ್ದಾನೆ । ಏನಪ್ಪ ನನ್ನಿಂದ ತಪ್ಪಾತು
ಪಾತಯ್ಯ ನಿನ್ನ ಮನೆ ಮೊಸರೆಲ್ಲಾ ಕುಡಿದು ಹೋಗುತ್ತಿದ್ದ ದಾಸಯ್ಯನ
ಮೋಟುಹುಣಸೆ ಮರದಲ್ಲಿ ಕಟ್ಟಿದ್ದಾರೆ ಅವನ ಬಿಟ್ಟರೆ ಮುಂದಿನ
ಕತೆಯನ್ನೆಲ್ಲಾ ಹೇಳುತೀನಿ ನಾನು । ಆಗ ಪಾತಣ್ಣ ಗಂಡುಮಕ್ಕಳನ್ನ
ಕರೆಸಿ ಹೋಗರಪ್ಪ ದಾಸಣ್ಣನ ಬಿಟ್ಟು ಬನ್ನಿರೆಂದು ಹೇಳುತಾನೆ
ದಾಸಯ್ಯನ ಬಿಡುತಾರೆ । ಆಗ ಪಾತಣ್ಣ ಗನಗುರುವೆ ನೀನು
ಬಂದ ಕಾರಣವೇನೆಂದು ಕೇಳಲಾಗಿ
ಕೇಳಯ್ಯ ಪಾತಯ್ಯ ನೀನು । ನನ್ನಿಂದ ನಿನ್ನ ವಂಶ ಬೆಳೆದೈತೆ
ಈಗ ನಿನ್ನಿಂದ ನನ್ನ ವಂಶ ಬೆಳೆಸಬೇಕಪ್ಪ ನೀನು
ಬೇಡಪ್ಪ ಖಂಡಿತವಾಗಿ ನನ್ನ ಮಾನ ಕಳೆಯಬೇಡ
ಎಲ್ಲಾದರೂ ಕುಲದ ಮನೆಯೊಳಗೆ ನೋಡಿಕೊ ಗಾನಗುರುವೆ ನೀನು ।
ಪಾತಯ್ಯ ಮಾವ ನಮ್ಮ ಮಗಳ ಕೊಡಬೇಕು ನೀನು
ಮೊದಲೇ ಕೇಳಿದ್ದರೆ ಮುತ್ತಿನಂಥ ಹೆಣ್ಣು ಮಕ್ಕಳನ್ನೇ ಕೊಟ್ಟು

ಮದುವೆ ಮಾಡುತ್ತಿದ್ದೆ ನಾನು । ಈಗ ನನ್ನ ಮಾನ ಕಳಿಬೇಡ
ಇರೋದೊಂದು ಹೆಣ್ಣು ಹುಟ್ಟು ಘೋರ ಹೆಳವೆ ಎತ್ತಬೇಕು
ಇಳಿಸಬೇಕು । ಹೆಂಗಪ್ಪ ಇಂಥ ಅಜ್ಜನಿಗೆ ಮಗಳ ಕೊಡಾದು ನಾನು ।
ಹೆಳವಾಗಲಿ । ಕುರುಡಾಗಲಿ ನಿನ್ನ ಮನೆಯೊಳಗೆ ಒಂದು ಬೆಕ್ಕಿನ
ಮರಿಯನ್ನಾದರೂ ಕೊಡಬೇಕು ಪಾತಯ್ಯ ನೀನು ।
ನಾನೇನು ಮಾತು ಕೊಟ್ಟೇನು ಸ್ವಾಮಿ । ನನ್ನ ಮಗಳನೊಂದು ಮಾತು ಕೇಳಬೇಕು
ಹುಟ್ಟಿದ ಮನೆಸ್ಥಾನ ಗುರುತಿಡಿಯಿಟ್ಟು । ಪಾತಯ್ಯ ಮಾವ
ಮನಸ್ಸು ಕೊಟ್ಟವರೆ ನೀನುವೊಂದು ಮಾತು ಕೊಡಬೇಕು ಎಂದು
ಮಗಳನ್ನ ಕೇಳುತಾನಲ್ಲ ಗನಗುರುವು ।
ಗಂಡ ಕೊಟ್ಟರು ಒಂದೇ ನಾನು ಕೊಟ್ಟರೂ ಒಂದೆ ಸಂತೋಷವಪ್ಪ ।
ಕೇಳಪ್ಪ ಪಾತಯ್ಯ ಮಾವ ಮುಂಗೋಳಿ ಶಬ್ದ ಕೇಳಿ ಏಳಬೇಕು
ಏಳುಗೂಡಿನ ಗೋವುಗಳಲ್ಲಿ ಒಂದು ಮೊಣಕನಾ ಹುಲಿಯೊಂದು
ಕಡಿದುಹಾಕಿ ಹೋಗಿರುತ್ತದೆ । ಆಗಲೇ ಹುಟ್ಟು ಹೊಲೇರನ್ನ ಕರೆಸಿ
ಒಂದೊತ್ತು ಉಪವಾಸದಿಂದ । ವಾಮನೇ ನೇಮದಿಂದ
ಬಾಯಿಬೀಗದಿಂದ ಸೆರ್ಮಾನೆ ಸುಲಿಸಿ ನಗಾರಿನೇ ಮಾಡಿಸಬೇಕು ।
ನಗಾರಿ ಕುಂದು ಕಟ್ಟಿಸಿಕೊಂಡು । ತಾಳದವರು । ಮೇಳದವರು
ಕೂಗಿಕ್ಕಿಕೊಂಡು ಶನಿವಾರ ಹೊತ್ತು ಹುಟ್ಟು ಬರುವಾಗ್ಗೆ
ದೃಷ್ಟಿ ಮರದಿಂದ ವಿಜೃಂಭಣೆಯಿಂದ ನಿನ್ನ ಹಟ್ಟಿಯೊಳಕೆ ನನ್ನ ಕರೆಸಬೇಕು

ಆಗ ಪಾತಣ್ಣ ಮುಂಗಾರ ಶಬ್ದ ಕೇಳುತ್ತಿದ್ದಂಗೆ ಪಾತಣ್ಣ ಏಳುತಾನೆ ।
ಏಳು ಗೂಡಿನ ದನಗಳ ಗೂಡಿಗೆ ಹೋಗಿ ನೋಡುತಾನೆ । ಏಳು ಗೂಡಿನ
ಗೋವುಗಳೊಳಗೆ ಮೀರಿದ ದೊಣ್ಣೆ ಮಣಕನ ಹುಲಿ ಕಡಿದೋಗೈತೆ
ಸ್ವಾಮಿ ಹೇಳಿಕೆಯಂತೆ ನೇಮದಿಂದ ಹೊಲೆಯರನ್ನ ಕರೆಸಿ
ನಗಾರಿ ಮಾಡಿಸಿ । ಕಳಸ ಕನ್ನಡಿ ಸೋಬಾನದವರನ್ನ ಕೂಡಿಕೊಂಡು
ಶನಿವಾರ ದಿವಸ ಹೊತ್ತು ಹುಟ್ಟಿತ್ತಿದ್ದಂಗೆ ಪಾತಣ್ಣ
ದೃಷ್ಟಿ ಮರದತಾಕೆ ಹೋಗುತಾನಲ್ಲೋ ಗನಗುರುವು ।
ಕೇಳಪ್ಪ ದಾಸರ ಚನ್ನೋಜಿ ಗುಡಾರ ಕೀಳಪ್ಪ ತಕ್ಕೊಳಪ್ಪ ನನ್ನ
ಮುಂದಕೆ ಹೊರಟು ಹೋಗಬೇಕಪ್ಪ ನಾವು ಅಂತಾನಲ್ಲೋ ಗನಗುರುವು
ಆಗ ದಾಸಣ್ಣ ಗುಡಾರ ಕಿತ್ತುಕೊಂಡು ಸ್ವಾಮಿನೆ ತಕ್ಕೊಂಡು
ಹೆಗಲ ಮೇಲಿಟ್ಟುಕೊಂಡು ದಾಸರ ಮೇಳದವರು ಸೋದರರೆಲ್ಲಾ
ನಗಾರಿ ಬಡಿದುಕೊಂಡು ದೊಡ್ಡಾನು ಕರಕೊಂಡು ವೈಭವದಿಂದ
ನೆಂಟ್ರಹಟ್ಟಿಗೆ ಬರುತಾರಲ್ಲೋ । ನಂಟ್ರಟ್ಟಿಗೆ ಬಂದಾಗ ದಾಸಣ್ಣ

ಹೇಳಪ್ಪ ತಂದೆ ಎಲ್ಲಿಗೆ ಹೋಗಬೇಕು ಮುಂದೆ ।
ನಡಿಯಪ್ಪ ನೆಂಟ್ರಹಟ್ಟಿಯೊಳಗೆ ಗೂಡಾರ ಹೊಯ್ಕೊಂಡು ವಾಸೆ ಮಾಡಬೇಕು
ಆಗ ದಾಸರ ಚನ್ನಪ್ಪ ನೆಂಟ್ರಹಟ್ಟಿ ಮಧ್ಯೆ ಗುಡಾರ ಹೊಡೆದು
ಸ್ವಾಮಿ ಗದ್ದಿಗೆ ಮಾಡಿಕೊಂಡು ಮೂರು ದಿವಸ ವಾಸನೆ ಮಾಡುತಾರೆ
ಅಂತೆಂಬಾ ಹೊತ್ತಿಗೆ ಸ್ವಾಮಿನೆ ಹೇಳುತಾನೆ ನಡಿಯಪ್ಪ ದಾಸಣ್ಣ
ನಾವು ನೆಂಟ್ರಹಟ್ಟಿಲಿ ಇರೋದು ಬೇಡ ಮುಂದೆ ಹೋಗೋನ
ದಾಸರ ಗುಂಡಿ ಸುತ್ತ ಕಳ್ಳಿನೆ ಹಾಕಪ್ಪ ಬೆರಗಾನೆ ಹಾಕಿಕೊಂಡು
ವಾಸನೆ ಮಾಡಬೇಕಪ್ಪ । ಗುಡಾರ ಹೊಯ್ಯಪ್ಪ ನೀನು
ಸ್ವಾಮಿನೆ ತಕ್ಕೊಂಡು ಹೆಗಲ ಮೇಲಿಕ್ಕಿಕೊಂಡು ದಾಸರಗುಂಡಿಗೆ
ಬಂದನು ದಾಸಣ್ಣ ಕಳ್ಳಿ ಕಡಿದು ಬೇಲಿ ಹಾಕಿದ ಬೆರಗು ಹಾಕಿದ
ಗುಡಾರ ಹೊಡೆದು ಸ್ವಾಮಿಗೆ ಗದ್ದಿಗೆ ಮಾಡಿದ ದಾಸಣ್ಣ
ಏನಪ್ಪ ದಾಸರ ಚನ್ನೋಜಿ ಹೆಣ್ಣೇನೋ ಮಾಡಿಕೊಂಡು ಬಂದುದಾಯ್ತು
ಕಣ ಬಟ್ಟೆ ಬರೆ ಒದಗಿಸಬೇಕು ನೀನು । ನನ್ನಿಂದ ಆಗೋದಿಲ್ಲ ಸ್ವಾಮಿ
ಎಂತ ಮಾತಾಡುತೀಯ ದಾಸೋಜಿ । ಮಾಡಿಕೊಂಡು ಬಂದಿರೋ ಹೆಣ್ಣು
ನೀನೇ ಮದುವೆ ಮಾಡಿಕೋ ದೇವರೆ ಎಂದು ಹೇಳುತಾನೆ ।
ಏನು ಮಾತಾಡುತೀಯಪ್ಪ ದಾಸರ ಚನ್ನೋಜಿ । ದೇವರು ನರಮನುಷ್ಯರನ್ನ
ಮದುವೆ ಮಾಡಿಕೊಳ್ಳುತಾನೇನಪ್ಪ । ನನ್ನತ್ರ ಕಾಸಿಲ್ಲ ಮನೆಯಾಳು ದೇವರೆ
ಅಂಗಂದ ಮಾತಿಗೆ ಸ್ವಾಮಿನೆ ಹೇಳುತಾನೆ ಗನಗುರುವು ।
ಬೋಚಿಕೆರೆ ಹಿಂದೆ ಗದ್ದೆ ಕೊಯ್ದು ಕಣದಾಗೆ ಬತ್ತನೆ ಬಡಿದು
ರಾಸಿನೆ ಹಾಕವರೆ । ಸುತ್ತಜೆಮಾನರು ಜಮಕಾಸೆವರೆ
ರಾಶಿನೇ ಮಾಡಿದವರೆ ಯಾರ ಉಜಾರಿಲ್ಲದೆ ಹೋಗಿ ಎಡಗಾಲ
ಮುದ್ರನೆ ಕೆಡಿಸಿ ಮೂರು ಮೂರು ಬವನಾಸಿ ತಕ್ಕೊಂಡು ಬಾರೋ ನೀನು ।
ಸ್ವಾಮಿ ಮಾತಿನಂತೆ ದಾಸಣ್ಣ ಕೋಳಿ ಕೂಗೋ ಮುಂಚೆ ಎದ್ದವನೆ
ಮುಖ ತೊಳೆದು ಪಟ್ಟೆನಾಮ ಧರಿಸಿ ಬಿಟ್ಟು ಎದೆ ಮೇಲೆ
ಜೀರುಗಂಬ ರಟ್ಟೆಮೇಲೆ ಮೂರು ನಾಮ ತೆಗೆದು ಬಿಟ್ಟು
ಕಂಬಳಿ ಕೋರಿ । ರಟ್ಟೆ ದೊಣ್ಣೆ ಹೆಗಲ ಮೇಲೆ ಹಾಕಿಕೊಂಡು
ಶಂಖ ಭವನಾಶಿ ಬಗಲಾಗೆ ಹಾಕಿಕೊಂಡು । ಬಲಗೈಲಿ ಜಾಗಟೆ ಬಡಕೊಂಡು
ದಾಸಣ್ಣ ಬೋಚಿಕೆರೆ ಹಿಂದಕ್ಕೆ ಹೊರಟು ಹೋಗುತಾನಲ್ಲೋ ।
ಬೋಚಿಕೆರೆ ಹಿಂದೆ ಬತ್ತ ಬಡಿದು ರಾಶಿನೆ ಮಾಡೆವರೆ
ಸುತ್ತ ಜವಾನರು ಜಮಕಾಯಿಸೆವರಣ್ಣ । ಆಗ ನೋಡ
ಭಗವಂತನ ದೃಷ್ಟಿಯಿಂದ ನುಗ್ಗಿದ ಪಟ್ಟಿಗೆ ನುಗ್ಗಿ

ಎಡಗಾಲಿನಿಂದ ರಾಶಿ ಮುದ್ರೆ ಒದ್ದು। ಮೂರು ರಾಶಿಗೂ
ಮೂರು ಮೂರು ಭವನಾಶಿ ತುಂಬಿ ಆಚೆಗೆ ಹೊಯ್ದನಣ್ಣ
ಮೂರು ಮೂರು ಒಂಭತ್ತು ಭವನಾಸಿ ತೆಗೆದು ಈಚೆಗೆ ಹಾಕುತ್ತಿದ್ದಂತೆ
ಆಗ ನೋಡ ಭಗವಂತ ಮೂರು ರಾಶಿಗೂ ಹಕ್ಕಿಪಕ್ಷಿ ತಿಂಬಾಕೂ
ಒಂದು ಕಾಳು ಇಲ್ಲವಣ್ಣ। ದಾಸರ ಚನ್ನಪ್ಪನ ರಾಶಿಯೊಂದೇ ಕಣದ
ತುಂಬಾ ಬಿದ್ದೈತೆ। ಆಗ ನೋಡ ಗನಗುರುವೆ। ಜವಾನರು ಎದ್ದು
ದಾಸರ ಚನ್ನಪ್ಪನನ್ನ ಎಡೆಮುರಿ ಕಟ್ಟಿ ಕಚೇರಿಗೆ ತಗೊಂದು ಹೋಗುತಾರಲ್ಲೋ।
ಎಂದೂ ಖಾಕಿಬಟ್ಟೆ ನೋಡಿದ ಪಾಪಿಯಲ್ಲ ದಾಸಣ್ಣ ತಲೆಮೇಗಳ
ಪೇಟ ನೋಡುತ್ತಿದ್ದಂಗೆ ಗಡ ಗಡ ನಡುಗುತಾನಲ್ಲೋ।
ಮಧ್ಯಾಹ್ನ ಹನ್ನೆರಡು ಗಂಟೆ ಹೊತ್ತಿಗೆ ದೇವರೇ ದಾಸಣ್ಣನ ವಿಚಾರಣೆ
ಸುರುವಾಯಿತಲ್ಲೋ।

## ನ್ಯಾಯಸ್ಥಾನದಲ್ಲಿ ದಾಸಣ್ಣ

ಬತ್ತ ಕದ್ದ ಆರೋಪ ಬಂತಲ್ಲಪ್ಪ ಗನಗುರುವೇ ದಾಸಣ್ಣ।
ಗನಗುರುವು ನೋಡುತಾನೆ। ಬ್ಯಾಟೆ ಎಲೆ ತಕ್ಕೊಂಡು ಬರೆದು
ಆಕಾಶ ಮಾರ್ಗವಾಗಿ ಸ್ವಾಮಿ ನಮ್ಮಪ್ಪ ಬ್ಯಾಟ್ ಎಲೆ ಬಿಟ್ಟು ಬಿಟ್ಟನಲ್ಲಪ್ಪ
ಬ್ಯಾಟೆ ಎಲೆ ಹೋಗಿ ಎಳು ಜನ ದೊರೆಗಳ ಮಧ್ಯದಲ್ಲಿ ಬೀಳುತ್ತದೆ
ಏಳು ಮಂದಿ ದೊರೆಗಳು ಬ್ಯಾಟೆ ಎಲೆ ತಕ್ಕೊಂಡು ಎರಡು ಕಣ್ಣಿಗೂ
ಹೊತ್ತಿಕೊಂಡು ಜವಾನರನ್ನ ಕರೆದು ಹೋಗರಪ್ಪ ಎತ್ತು ಕತ್ತೆಗಳನ್ನ
ಹೂಡಿಕೊಂಡು ಹೋಗಿ ದಾಸಣ್ಣನ ರಾಶಿಯನ್ನೆಲ್ಲಾ ಸಾಗಾಕಿ ಬರೋಗಿ
ಎಂದು ಆರ್ಡರ್ ಮಾಡೋನಲ್ಲೋ। ಆಗ ಮುಂದುಗಡೆ ಜವಾನರು
ಹಿಂದುಗಡೆ ದಿವಾನರು ಮಧ್ಯ ದಾಸಣ್ಣ ತೇರಿನಂಗೆ ಹೋಗುತಾನೆ ನೋಡೋ।
ತಟ್ಟನೆ ನೆಂಟರು ಮನೆಗೆ ಹೋಗುತಾನೆ ದಾಸಣ್ಣ। ನೆಂಟರು ಮನೆ ಮುಂದೆ
ಬಂದು ನೆಂಟರೆ ಯಾವ ಕಣಜ ತುಂಬ ಬೇಕು ಅನ್ನುವಾಗ್ಗೆ
ಆಗ ಹಟ್ಟಿಗೌಡ ಭಾರಿ ವಜಾನುಭಾವ। ಭಾರಿ ವಕ್ಕಲುತನ ದಾಸಣ್ಣಗೆ
ಭಾರಿ ಮರ್ಯಾದೆವಂತ। ಅಂಬ್ತಾ ಓಡೋಗಿ ಮಾಳಿಗೆ ಮೇಲೆ
ಅಡಗಿ ಕೂತನಣ್ಣ। ಪಾತಣ್ಣ ಹೀಗೆ ಮಾಡುತ್ತಿದ್ದಂಗೆ ಜವಾನರು ಬಂದು
ಹಟ್ಟಿ ಮುಂದಲ ಮೋಟು ಪರಕೆ ತಕ್ಕೊಂಡು ಕಸವನ್ನೆಲ್ಲಾ ಹೊಡೆದು
ಬತ್ತವನ್ನೆಲ್ಲಾ ಸುರಿದು ರಾಶಿನೇ ಮಾಡಿ। ದಾಸರ ಚನ್ನಪ್ಪ ಪಾದಕ್ಕೆ
ನಮಸ್ಕರಿಸಿ ಬಂದಂತ ಜನವಾದಿ ಜನವೆಲ್ಲಾ ಹಿಂದಕ್ಕೆ ಹೋಗುತಾರಣ್ಣ

ಜವಾನರೆಲ್ಲಾ ಹಿಂದಕ್ಕೆ ಹೋಗುತ್ತಿದ್ದಂಗೆ ಪಾತಣ್ಣ ಸೌದೆ ಮೂಲೆಯಿಂದ
ಬಂದು ಏಳು ಸೊಸೆಯರಿಗೆ ಆಡ್ರರ್ ಮಾಡುತಾನಲ್ಲೋ ।
ನೀರು ಕಾಯಿಸರಮ್ಮ । ಕಮ್ಮನೆ ಕಸ್ತೂರಿ ಹರಿಯಿರಪ್ಪ ನೀವು
ಪಾತಣ್ಣ ಪಾತಣ್ಣ ಹೆಂಡರು ಇಬ್ಬರೂ ಮಂಚದ ಮೇಲೆ ಕೂತು
ತೋಳು ತೋಳು ತಬ್ಬಿಕೊಂಡು ಗೋಳಾಡುತ್ತಾರಲ್ಲೋ ।
ಇಂಥ ನಂಟುಸ್ತಾನ ಮೊದಲೇ ಬಂದಿದ್ರೆ ಒಳ್ಳೆ ಹೆಣ್ಣು ಕೊಟ್ಟು
ಲಗ್ನನೇ ಮಾಡುತ್ತಿದ್ದೆವು । ಯಾರ ಊರು ಮೇಲೆ ಹೋಗಿದ್ದೆ ದಾಸಣ್ಣ
ಯಾವ ದೇಶದ ಮೇಲೆ ಹೋಗಿದ್ದೀರಿ ಅಂದು ಕೇಳುತಾರೆ
ಬೇಗ ಬೇಗ ನೀರು ಕಾಸವರೆ । ಕಮ್ಮನೆ ಕಸ್ತೂರಿ ಹರಿದವರೆ
ಆಗಲೇ ದಾಸಣ್ಣ ಸ್ನಾನಕ್ಕೆ ಬಂದುಬಿಟ್ಟನಪ್ಪ । ಆಗ ದೊಡ್ಡಾನು
ಹೇಳುತಾನೆ ಏನೋ ದಾಸಣ್ಣ ಆಗಲೇ ಶಾಸ್ತ್ರದ ನೀರು ಬೇಕಾತ
ಕಮ್ಮನೆ ಕಸ್ತೂರಿ ಬೇಕಾ ನಿನಗೆ । ತಟ್ಟೆ ಮಂಚ ಬೇಕಾ ನಿನಗೆ
ತಕ್ಕಳಪ್ಪ ಕಂಬಳಿ ಜಾಗಟೆ ಭವನಾಶಿ ತಕ್ಕೊಂಡು ನಡಿಯಪ್ಪ
ಬೆರಗಿಗೆ ಹೋಗೋನ ನಾವು ।
ಆಗ ನೋಡಪ್ಪ ಗನಗುರುವೆ ದಾಸರ ಚನ್ನಪ್ಪ ಜಾಗಟೆ ಭವನಾಸಿ ತಕ್ಕೊಂಡು
ಬೆರಗು ಬೀಳೋಗಂಟಾ ಎದ್ದೋಡು ತಾನಲ್ಲೋ ।
ದಾಸಣ್ಣ ಶನಿವಾರ ಹೊತ್ತುಹುಟ್ಟು ಮೇಲಕ್ಕೆ ಬರುವಾಗ್ಗೆ ಬಬ್ಬೂರ ಗೌಡ
ಈರುಳ್ಳಿ ಮಂಡಿ ತಕ್ಕೊಂಡು ಹಿರಿಯೂರಿಗೆ ಬರುತಾನೆ
ನೀನು ಶಂಖಿಡಿದು ಜಾಗಟೆ ಬಡಿದು ಗೋವಿಂದ ಗೋವಿಂದ ಅಂಬುತ್ತಿದ್ದಂಗೆ
ಮೂರು ಹಿಡಿ ತೆಗೆದು ಭವನಾಸಿಯೊಳಗೆ ಹಾಕುತಾನೆ ।
ಸ್ವಾಮಿ ಗನಗುರುವೆ ಹೇಳಿದಂಗೆ ದಾಸಣ್ಣ ಹಿರಿಯೂರು ಸಂಜೆಗೆ
ಬರುತಾನೆ ಶಂಖಿಡಿದು ಜಾಗಟೆ ಬಡಿಯುತ್ತಿದ್ದಂಗೆ ಬಬ್ಬೂರ ಗೌಡ
ಮೂರು ಹಿಡಿ ತೆಗೆದು ಭವನಾಸಿಗೆ ಹಾಕುತ್ತಿದ್ದಂಗೆ ಭವನಾಸಿ ತುಂಬಿ
ಹೋಗುತ್ತದೆ. ಗುಡಾರಕ್ಕೆ ಬಂದಂತ ದಾಸಣ್ಣ ಸ್ವಾಮಿಗೆ ಕೇಳುತಾನೆ ।

**ದಾಸಣ್ಣನ ಮದುವೆ**

ಕೇಳಣ್ಣ ದಾಸಣ್ಣ ನೀನು ನೆಂಟರ ಮನೆಗೆ ಬತ್ತನೆ ತಗೊಂಡೋಗಿ ಒಣಗಿಸಬೇಕು
ಬತ್ತನೆ ಕುಟ್ಟಬೇಕು । ನಿಮ್ಮ ಹೆಣ್ಣಿಗೆ ಒಡವೆನೆ ತರಬೇಕು ।
ಆಗತಕ್ಕ ಸಾಮಾನುಗಳೆಲ್ಲಾ ತರಬೇಕೆಂದು ಪಾತಣ್ಣನಿಗೆ ಹೇಳಬೇಕು ನೀನು ।
ಆಗ ನೋಡ ಭಗವಂತ ಪಾತಣ್ಣ ಬತ್ತನೆ ಕುಟ್ಟಿಸುತಾನೆ ।
ಅವರೆಣ್ಣಿಗೆ ಒಡವೆನೆ ತರುತಾರೆ । ಜವಳಿನೆ ತರುತಾರೆ ।

ಆಗತಕ್ಕ ವಸ್ತುವನೆಲ್ಲಾ ತರುತಾರೆ । ನೆಂಟರಷ್ಟರಿಗೆಲ್ಲಾ ಹೇಳುತಾರೆ
ಕೇಳಪ್ಪ ದಾಸಣ್ಣ ಹೊತ್ತು ಹುಟ್ಟುತ್ತಿದ್ದಂಗೆ ಒಂದೊತ್ತು ಉಪವಾಸವಿದ್ದು
ನೆಲಮನೆ ಸಾರಿಸಿಬಿಟ್ಟು ಎದ್ದು ಪೂಜೆ ಪೂರೈಸಿ ಬಬ್ಬೂರಿಗೆ ಹೋಗಬೇಕು ।
ಶನಿವಾರ ಹೊತ್ತು ಹುಟ್ಟುತ್ತಿದ್ದಂಗೆ ಒಂದೊತ್ತು ಉಪವಾಸವಿದ್ದು
ನೆಲಮನೆ ಸಾರಿಸಿಬಿಟ್ಟು ಎದ್ದು ಪೂರೈಸಿ ಬಬ್ಬೂರಿಗೆ ಹೋಗಬೇಕು ನೀವು ।
ಹನ್ನೆರಡು ಗಂಟೆ ಹೊತ್ತು ಉಪವಾಸವಿದ್ದು ಗೋವು ಹಾಕಿ
ಹನ್ನೆರಡು ಗಂಟೆ ಹೊತ್ತು ಹುಟ್ಟುತ್ತಿದ್ದಂಗೆ ಪಾತಣ್ಣ ಕುರಿಮಂದೆಗೆ
ಬಂದು ದಾರಿ ದಾರಿ ನೋಡುತಾನೆ ।
ದಾಸಣ್ಣ ಬರಲಿಲ್ಲ । ಶಾಸ್ತ್ರದ ನೀರು ತರಲಿಲ್ಲ ।
ಶಾಸ್ತ್ರದ ನೀರು ಕಾಸ್ಯೆತೆ । ಕಸ್ತೂರಿಗೆ ಹರೆದ್ಯೆತೆ
ಅಜಾಮರು ಬಂದು ಮನೆ ಮುಂದೆ ಕುಂತವರೆ
ಅಷ್ಟೊತ್ತಿಗೆ ದಾಸಣ್ಣ ಹೊರಟು ಬರುತಾನೆ ನೋಡೋ
ತಲೆಗೆ ಕ್ಷೌರ ಮಾಡಿಸುತಾರೋ । ಕಮ್ಮ ಕಸ್ತೂರಿ ಸವರವರೆ
ಶಾಸ್ತ್ರದ ನೀರು ಉಯ್ಯುತ್ತಾನೆ ಗೌಡನಾಗ ।
ಕಮ್ಮಣ್ಣ ಕಸ್ತೂರಿ ಒತ್ತುತ್ತಾನೆ । ಉಂಗುರ ಉಡಿದಾರ ತೋಡಿಸುತ್ತಾರೋ
ಮದಲಿಂಗನ ಮಾಡಿ ನಿಲ್ಲಿಸುತಾರೋ
ಮದಲಿಂಗನ ಮಾಡಿಬಿಟ್ಟು ಅರಮನೆಗೆ ಬಂದಂತೆ
ಕುರಿ ಮಂದೆಯರಿಗೆ ಬಂದಂತಹ ಬಂದು ಬಳಗವೆಲ್ಲಾ
ದಾಸಣ್ಣನ ಕಾಲಿಗೆ ನಮಸ್ಕಾರ ಮಾಡಿಬಿಟ್ಟರು ।
ಶನಿವಾರ ಸಾಯಂಕಾಲ ಸ್ವಾಮಿಗೆ ತಳಿಗೆ ಆಗುತ್ಯೆತೆ
ಸ್ವಾಮಿಗೆ ಎಡೆಮಾಡಿ ಮಂಗಳಾರತಿ ಪೂರೈಸುತ್ತಿದ್ದಂಗೆ
ಐದು ಜನ ಮುತ್ತೈದೆಯರು ಐದು ಜನ ಗಂಡಸರನ್ನ
ಕರೆಸಿಬಿಟ್ಟು ಕರಿ ಕಂಬಳಿ ಜಾಡಿ ಹಾಕಿ ತಲೆಮೇಲೆ
ಹಾಲು ಒತ್ತಿಸಿಕೊಂಡು ಭಾನುವಾರ ದಿನ ಹೊತ್ತು ಹುಟ್ಟುವಾಗ್ಗೆ
ಹುತ್ತದ ಪೂಜೆಗೆ ಹೊರಟವರಣ್ಣ
ದಾಸಣ್ಣನ ಹುತ್ತದ ಪೂಜೆ ಪೂರೈಸುತ್ತಿದ್ದಂಗೆ
ಪಾತಮ್ಮನಿಗೆ ಹೆಗಲ ಮೇಲೆ ಕೂರಿಸಿಕೊಂಡು
ತಲೆಮೇಲೆ ಹಾಲು ಒತ್ತಾಕೆ ಹೋಗುತಾರೆಲ್ಲೋ ।
ಸೋಮವಾರ ಹೊತ್ತು ಹುಟ್ಟುವಾಗ ದಾಸರ ಚನ್ನಪ್ಪನಿಗೂ
ಪಾತಮ್ಮನಿಗೂ ಧಾರೆ ಮುಹೂರ್ತ ನಡೆದು ಹೋಯಿತು ಗನಗುರುವೆ ।
ಆಗ ನೋಡ ಭಗವಂತ ಪಾತಣ್ಣ ಪಾತಮ್ಮನ ಹೆಲಗಮೇಲೆ ಕೂರಿಸಿಕೊಂಡು

ದಾಸರ ಚನ್ನಪ್ಪನಿಗೆ ಧಾರೆ ಮುಹೂರ್ತ ಮಾಡಿಕೊಟ್ಟಾಗ
ಶಾಸ್ತ್ರನೆ ತೀರಿಸಿಕೊಂಡು, ಮದುವೆ ಕಾರ್ಯನೆ ಮುಗಿಸಿಕೊಂಡು
ದಾಸಪ್ಪ ತಿರಿಗಿ ಬಂದು ಬೆರಗಿಗೆ ಬಂದು ಸೇರುತಾನೆ ನೋಡೋ ।
ಬೆರಗಿಗೆ ಬಂದು ಮೂರು ತಿಂಗಳು ವಾಸನೆ ಮಾಡುತಾನಣ್ಣ
ಮೂರು ತಿಂಗಳು ವಾಸನೆ ಮಾಡುವಾಗ್ಗೆ ।

ಅಂತೆಂಬಾ ಹೊತ್ತಿಗೆ ಗನಗುರುವು ಹೇಳುತಾನೆ
ದಾಸಣ್ಣ ಹೋಗಪ್ಪ ನಿಮ್ಮ ನೆಂಟರು ಮನೆಗೆ ಹೋಗಿ
ಸ್ವಾಮಿ ಇರೋದಿಲ್ಲ ಮೂಡಲಸೀಮೆಗೆ ಹೋಗುತಾನೆ
ನನ್ನ ಹೆಂಡತಿನ ಕಳುಹಿಸಿಕೊಡಿ ಅಂತೆಂದು ಕೇಳೆಂದು ಹೇಳುತಾನೆ ।
ದಾಸರ ಚನ್ನಪ್ಪ ನೆಂಟ್ರಟ್ಟಿಗೆ ಬಂದು ಪಾತಯ್ಯ ಮಾವ
ಅತ್ತೆಮ್ಮನವರ ಸ್ವಾಮಿ ಮೂಡಲಸೀಮೆಗೆ ಹೋಗುತಾನೆ
ಬೇಗ ನನ್ನ ಹೆಂಡತಿ ಕಳಿಸಿ ಕೊಡಬೇಕು ನೀವು ।
ಅಂತೆಂಬಾ ಮಾತಿಗೆ ಎಲ್ಲಿಂದ ಬಂದಿರೆ ಕಳ್ಳಸೂಳೆ ಮಕ್ಕಳೆ
ಕೋಳಿ ಪಿಳ್ಳೆಯ ಹದ್ದು ಹಾರಿಸಿಕೊಂಡು ಹೋದಂಗೆ
ಕಾಯ್ದುಕೊಂಡಿದ್ದರೆ । ಇಲ್ಲೆ ಇರುತಾರೆಂದು ಕೊಟ್ಟು
ಲಗ್ನ ಮಾಡಿದರೆ । ಯಾವ ಕೊರಕಲಾಗೆ ಇರುತೀರ ನೀವು
ಯಾವ ಮೆಳೆಯೊಳಗೆ ಇರುತೀರ ನೀವು । ಅಂಬುತನಲ್ಲೋ ।
ಅಂತೆಂಬಾ ಮಾತನ್ನು ದಾಸಪ್ಪ ಸ್ವಾಮಿಗೆ ವರ್ತಮಾನ ಕೊಟ್ಟನಲ್ಲೋ ।
ಅಂತೆಂಬಾ ಮಾತು ಕೇಳಿ ಸ್ವಾಮಿ ಹೇಳುತಾನೆ । ಹೋಗಪ್ಪ ದಾಸಪ್ಪ
ಹಿಂತಿರುಗಿ ನ್ಯಾಯವಾಗಿ ಸ್ವಾಮಿಗೆ ವರ್ತಮಾನ ಕೊಟ್ಟವನೆ
ನ್ಯಾಯವಾಗಿ ಕೇಳು ಕೆಟ್ಟದು ಬಿಡಾದು ನಮ್ಮ ನಮಗೆ ಬೇಕು
ಈಗ ಪಾತಮ್ಮನನ್ನು ಕಳುಹಿಸಿದರೆ ಸರಿ ಇಲ್ಲದಿದ್ದರೆ ಜಿಟ್ಟು
ಹಿಡಿದು ಎಳಕೊಂಡು ಹೋಗುತೀನೆಂದು ಕೇಳಪ್ಪ ನೀನು ।
ಪಾತಯ್ಯ ಮಾವ ಖಂಡಿತವಾಗಿಯೂ ಕಳಿಸಬೇಕಂತೆ
ಅಂಬುತ್ತಿದ್ದಂಗೆ ಒಂದು ಸಾರಿ ಹೇಳಿದರೆ ಕೇಳಲಿಲ್ಲವೇನೊ ದಾಸಿ
ನ್ಯಾಯವಾಗಿ ಕೇಳುತ್ತಿದ್ದೇನಿ ನನ್ನ ಹೆಂಡತಿ ಕಳುಹಿಸಿದರೆ ಸಮ
ಇಲ್ಲದಿದ್ದರೆ ಮುಂದಲೆ ಜಿಟ್ಟು ಹಿಡಿದುಕೊಂಡು ಎಳಕೊಂಡು ಹೋಗುತೀನಿ
ಅಂಗಂನುತ್ತಿದ್ದಂಗೆ ಪಾತಣ್ಣ ಶಾಸ್ತ್ರದ ನೀರು ಕಾಯಿಸಿಬಿಟ್ಟನಣ್ಣ
ಕಮ್ಮನೆ ಕಸ್ತೂರಿ ಹಿರಿಯರೆಂದು ಸೊಸೆಯರಿಗೆ ಹೇಳಿದನಣ್ಣ
ಜವಳಿ ಅಂಗಡಿಗೆ ಹೋಗಿ ಕರಿಸೀರೆ ತಂದು ಪಾತಮ್ಮನಿಗೆ
ಶಾಸ್ತ್ರದ ನೀರು ಹಾಕುತಾರೆ । ಕರಿಯಾನೆ ಸೀರೆ ಉಡಿಸುತಾರೆ

ಕಸ್ತೂರಿ ಅಚ್ಚುತಾರೆ । ಪಾತಮ್ಮನಿಗೆ ಅಂಗಾರ ತುಂಬುತಾರೆ
ಪಟ್ಟೆಸೀರೆ ಎಲೆ ಅಡಿಕೆ ಮಡಿಲಿಗೆ ತುಂಬುತಾರೆ
ಏಳು ಸೇರು ಮಡಿಲಕ್ಕಿ ಕಟ್ಟಿ ಪಾತಮ್ಮನಿಗೆ ಸುತ್ತಮುತ್ತಲ
ಜನವಾದ ಜನವೆಲ್ಲಾ ಮರಳಾಕಿದರೆ ಮರಳಿಯ
ದಂಗೆ ಜಮಾಯಿಸಿ ಘೋರ ಪಾತಮ್ಮನನ್ನು ಕಳುಹಿಸುತಾರಲ್ಲೋ ।
ಕೇಳಪ್ಪ ಗುಡಾರ ತಗೊಂಡು ಮುಂದೆ ಹೋಗೋನ ನಾವು
ದಾಸರ ಚನ್ನಪ್ಪ ಗುಡಾರ ಕಿತ್ತು ಸ್ವಾಮಿನ ಹೆಗಲ ಮೇಲಿಕ್ಕಿಕೊಂಡು
ಹೊರಟು ಬಿಟ್ಟನಣ್ಣ ।
ಎಲ್ಲಿಗೆ ಹೋಗಬೇಕು ತಂದೆ । ಯಾವ ಸ್ಥಳಕ್ಕೆ ಹೋಗಬೇಕು ತಂದೆ ।
ನಡಿಯಪ್ಪ ನೆಂಟ್ರಟ್ಟಿ ಉದಿಗೆ ಹೋಗಿ ನಿಲ್ಲಬೇಕು ನಾವು ।
ಇಬ್ಬರೂ ಮಾತಾಡಿಕೊಂಡು ನೆಂಟ್ರಟ್ಟಿ ಉದಿಗೆ ಬರುತ್ತಿದ್ದಂಗೆ
ನಂಟ್ರಟ್ಟಿಯೊಳಗೆ ಕಣ್ಣಿಂದ ನೋಡಾಕಾಗುವುದಿಲ್ಲ
ಕಿವಿಯಾರ ಕೇಳಕಾಗುವುದಿಲ್ಲ । ಅಣ್ಣ ತಮ್ಮ ಅಕ್ಕ ತಂಗಿ
ನಾದಿನಿಯರೆಲ್ಲರೂ ತಬ್ಬಿಕೊಂಡು ಕೊರಳು ಕಟ್ಟಿ ಅಳುತಾರೆಲ್ಲೋ ।
ಪಾತಣ್ಣ ಮುಖಕ್ಕೆ ಸೆರಗಿಟ್ಟು ಪಾತಮ್ಮನ ಹೆಗಲಮೇಲೆ
ಕೂರಿಸಿಕೊಂಡು ಹಟ್ಟಿ ಉದಿಗೆ ಬರುತಾನೆ ನೋಡೋ ।
ಹಟ್ಟಿ ಉದಿಗೆ ಬರುತ್ತಿದ್ದಂಗೆ ಹೇಳುತಾನೆ ಗನಗುರುವು
ಪಾತಯ್ಯ ಮಾವ ಖಂಡಿತವಾಗಿ ಪಾತಮ್ಮನ ಹೆಗಲ ಕೂರಿಸಿಕೋಬೇಡ
ಕೆಳಗಿಳಿಸಪ್ಪ । ಕೆಳಗಿಳಿಸಿ ಅತ್ತಕಡೆಯೊಬ್ಬರು ಇತ್ತಕಡೆಯೊಬ್ಬರು
ರಟ್ಟೆನ ಹಿಡಿದು ನಡೆಸಿಕೋ ಬಂದಿರಪ್ಪ ನೀವು ।

## ಹೆಳವಿ ಪಾತಮ್ಮನಿಗೆ ಕಾಲು ಬಂದದ್ದು

ಆಗ ನೋಡಪ್ಪ ಭಗವಂತ ಉಕ್ಕಿನ ಉರಿಬಾಣ ಧರಿಸಿಬಿಟ್ಟ
ಉಕ್ಕಿನ ಉರಿಬಾಣ ಧರಿಸಿ ಮಾಯಕಾರ ನಮ್ಮಪ್ಪ
ದೆಸೆವಂತನ ದಿವ್ಯ ದೃಷ್ಟಿಯಿಂದ ಹುಟ್ಟು ಬೇರಿನ ಗಿಡ
ಬೇರೆ ಬಂದಂಗೆ । ಹುಟ್ಟು ಹೂವಿನ ಶೀರ ಹಟ್ಟಿ ಉದಿಯಾಗೆ
ನೆಗೆದು ಬೀಳುತ್ತಿದ್ದಂಗೆ ಕೋಣನ ಕೊಳ್ಳು ಕಡಿದಂಗೆ
ನೆಂಟ್ರಟ್ಟಿ ಉದಿಯಾಗೆ ನೆತ್ತರದ ಕೋಡಿ ಹರಿದು ಹೋಗುತೈತೆ ।
ಕೇಳುತಾನಲ್ಲೋ ದೆಸೆವಂತ । ಹೇಳುತಾನಲ್ಲೋ ನೋಡೋ ।
ದಾಸರ ಚನ್ನಪ್ಪ ಎಂಬತ್ತು ತರದವರು ಅವರೆ
ಕುಂತು ಉಂಬಾರವರೆ । ನಿಂತು ಉಂಬಾರವರೆ । ಹಾಡು ಮಕ್ಕಳು

ಬಸಿರು ಬಾಣಂತಿಯ ಅದಾರೆ ।
ಹೆಂಡತಿ ಎಂಬ ಪ್ರೀತಿಗೆ ಖಂಡಿತವಾಗಿ ಹಿಂತಿರುಗಿ ನೋಡಬ್ಯಾಡ
ಇಷ್ಟು ಗಾತ್ರದ ಪ್ರಜೆಯಲ್ಲಿ ಹುಟ್ಟು ಉರಿದು ಹೋಗುತ್ತೈತೋ ।
ನೆಂಟ್ರಟ್ಟನೆಲ್ಲಾ ಉರಿದು ಹೋಗುತ್ತೈತೋ । ನನ್ನ ಮಾತು ಕೇಳಪ್ಪ ।
ಹಿಂತಿರುಗಿ ನೋಡದೆ ನಡೆಯಪ್ಪ ನೆಂಟ್ರಟ್ಟಿ ತಡಾದು ಹೋಗುವ
ಆಗ ನೋಡ ಭಗವಂತ ಸ್ವಾಮಿನ ಹೆಗಲಮೇಲೆ ಇಟ್ಟುಕೊಂಡು
ಹಿಂತಿರುಗಿ ನೋಡದೆ ಹೋರಟು ಹೋಗುತಾನಂತಾನಣ್ಣ
ದಾಸರ ಚನ್ನಪ್ಪ ಮುಂದಕ್ಕೆ ಹೋಗುತ್ತಿದಕ್ಕೆ ಹೊರಟು ಹೋಗುತ್ತಿದ್ದಂಗೆ
ಪಾತಮ್ಮ ತಲೆಮೇಲೆ ಸೆರಗು ಹಾಕಿಕೊಂಡು ಮುಂದುಗಡೆ
ದಾಸಣ್ಣ । ಹಿಂದುಗಡೆ ಪಾತಮ್ಮ ಇಬ್ಬರೂ ಹಾದಿ ಬೀದೆಗೆ ಹೋಗುತಾರಂತೋ ।
ಅಕ್ಕ ತಂಗಿಯರೆಲ್ಲ ಅತ್ತಿಗೆ ನಾದಿನಿಯರೆಲ್ಲಾ ಹಟ್ಟಿಬಿಟ್ಟು
ಒಂದು ಕೈಗಲ್ಲು ಎಸೆಯೋ ದೂರಕ್ಕೆ ಬಂದರಂತೋ ।
ಪಾತಮ್ಮ ತಲೆಮೇಗಳ ಸೆರಗು ತೆಗೆಯಲಿಲ್ಲ । ಹಿಂತಿರುಗಿ ನೋಡಲಿಲ್ಲ
ಗಂಡನ ಹೆಜ್ಜೆ ತುಳಿದುಕೊಂಡು ಹೋಗುತಾಳಣ್ಣ
ಹೆತ್ರಂತ ತಾಯಿ ಹುಟ್ಟಿಸಿದಂತ ತಂದೆ ಒಂದು ಹರಿದಾರಿ ಬರುತಾರೆ
ಪಾತಮ್ಮ ಪಾತಮ್ಮ ಅದೇನು ಅನ್ಯಾಯ ಮಾಡಿದೆಮ್ಮ
ಮುಖ ತೋರಿಸಿ ಹೋಗಮ್ಮ ನೀನು ಅಂಬ್ತಾರಲ್ಲೋ
ಹಿಂತಿರುಗಿ ಹೋಗುತೀವಪ್ಪ ನಾವು । ಹೊಟ್ಟೆ ನೋಡಿ ಇಟ್ಟು ಇಕ್ಕಲಿಲ್ಲವೆ ।
ಮೈ ನೋಡಿ ಬಟ್ಟೆ ಕೊಟ್ಟಿಲ್ಲವೆ । ಏನು ತಾಯಿ ಮಾತಾಡಿಸು
ಮುಖ ತೋರಿಸು ಅಂಬ್ತಾರಲ್ಲೋ ।
ಪಾತಮ್ಮ ಹಿಂತಿರುಗಿ ನೋಡಾದಂಗೆ ಹೋಗುತ್ತಿದ್ದಂಗೆ
ಪಾತಮ್ಮ ಇನ್ನು ಎಮ್ಮ ಭಾಗಕ್ಕಿಲ್ಲ ಹಿಂದಕ್ಕೆ ಹೋಗಾನೆಂದು
ಗಂಡ ಹೆಂಡತಿ ಮಾತಾಡಿಕೊಂಡು ಹಿಂದಕೆ ಬರುತಾರಲ್ಲೋ

ಆಗ ನೋಡೋ ಭಗವಂತ ಹೇಳುತಾನಲ್ಲೋ ಗನಗುರುವು
ಏನಪ್ಪ ದಾಸಣ್ಣ ಹೆಂಡತಿ ಎಂಬ ಪ್ರೀತಿ ಒಂದಿಷ್ಟು ಇಲ್ಲವಣ್ಣ
ಕಲ್ಲು ಅಂಬಾಕಿಲ್ಲ ಮುಳ್ಳು ಅಂಬಾಕಿಲ್ಲ । ಉರಿ ಬಿಸಿಲಾಗೆ
ಹೆಂಡತಿ ಕರಕೊಂಡು ಹೋಗೋದು ತರವೇನಯ್ಯ ನೀನು ।
ಅಂತೆಂಬಾ ಮಾತಿಗೆ ಮುಂದಲ ಆಲದ ಮರದ ಬಳಿಗೆ ಹೋಗಿ
ಮೂಡಲಮುಖ ಸ್ವಾಮಿ – ದಾಸಣ್ಣ ಎದುರಿಗೆ ಕುಂತು ಬಿಟ್ಟರಣ್ಣ
ಸ್ವಾಮಿ ಎದುರಾಗಿ ಮುಖಕ್ಕೆ ಸೆರಗಾಕಿಕೊಂಡು ಪಾತಮ್ಮ ಕುಂತಾಳಣ್ಣ
ದಾಸಣ್ಣ ತತ್ತರಲೇ ಎಲೆ ಅಡಿಕೆಯ ಅಂಬುತ್ತಿದ್ದಂಗೆಯ

ಪಾತಮ್ಮ ಎಲೆ ಅಡಿಕೆ ಚೀಲನೆ ಪಟ್ಟನೆ ತೆಗೆದು ಸ್ವಾಮಿ ಪಾದಕೆ
ನಮಸ್ಕಾರ ಮಾಡಿ । ದಾಸಣ್ಣನ ನಮಸ್ಕಾರ ಮಾಡಿ
ಎಲೆ ಅಡಿಕೆ ಕೊಡುತಾಳೆ ನೋಡೋ । ಮೂವರೆ ಎಲೆ ಅಡಿಕೆ ಹಾಕೋತಾರೆ
ನಡಿಯಪ್ಪ ಮುಂದಕ್ಕೆ ಹೋಗೋ ಸಮಯ ಆಗುತ್ತೆದೆ ಅಂಬ್ತಾನಂತೋ
ಗುಡಾರ ಗನಗುರುವೆ ಯಾವ ರಸ್ತೆನೆ ಮಾರ್ಗ ಹೋಗಬೇಕು
ಎಲ್ಲಿಗೆ ಹೋಗಬೇಕು ಯಾವ ಸ್ಥಳ ಸೇರಬೇಕು ಗನಗುರುವೆ
ನಡಿಯಪ್ಪ ದಾಸಣ್ಣ ಸಿರಾದ ಮೂಡಗಡಿಕೆ ಚನ್ನನಕುಂಟೆ ಅಯಿತಪ್ಪ
ಚನ್ನನಕುಂಟೆ ಮೂಡಕಡಿಕೆ ಕಟ್ಟೆಪ್ಪನಹಳ್ಳಿ ಅಯಿತಪ್ಪ
ಕಟ್ಟೆಪ್ಪನಹಳ್ಳಿ ಏಣಿಗೆ ಹೋಗಿ ಸುತ್ತ ಬೆರಗಾಕಿಕೊಂಡು
ಗುಡಾರನೆ ಹೊಯ್ಕೊಂಡು ವಾಸನೆ ಮಾಡಿಬೇಕಪ್ಪ
ಆಗ ನೋಡ ಗಾನಗುರುವೆ । ಇಬ್ಬರೂ ಮಾತಾಡಿಕೊಂಡು
ಸೀರ್‍ಯದ ಮೂಡುಗಡಿಕೆ ಚನ್ನನಕುಂಟೆ ಏಣಿಗೆ ಬಂದು
ಸುತ್ತ ಬೆರಗಾಕಿಕೊಂಡು । ಬೆರಗಿನೊಳಗೆ ಗೂಡಾರ ಹೊಯ್ಕೊಂಡು
ಸ್ವಾಮಿ ದೊಡ್ಡಾನು ಅಲ್ಲಿ ವಾಸನ ಮಾಡುತಾನಣ್ಣ ।
ಆರು ತಿಂಗಳು ಬೆರಗಾಕಿಕೊಂಡು ವಾಸನೆ ಮಾಡುತಾರಣ್ಣ
ಅಂತೆಂಬ ಕಾಲಕ್ಕೆ ಆರು ಜನ ಅಣ್ಣ ತಮ್ಮಗಳು ಪಾತಮ್ಮನ
ಹುಡುಕಿಕೊಂಡು ಬಂದರಂತಪ್ಪ । ದೇಶನೆಲ್ಲಾ ಕಾಲಘಟ್ಟಿಕೊಂಡು
ಬರುತಾರಣ್ಣ । ಆಗ ಬೆರಗಿನ ತಾವ ಊದುರ ಕಂಡ
ಇಲ್ಲಾದರೂ ಸೇರಿರಬಹುದೆಂದು ನರಮನುಷ್ಯ ಇರಬಹುದೆಂದು
ಯಾರಪ್ಪ ಇರಾರು ನಮ್ಮ ದಾಸರ ಚನ್ನೋಜಿ ಕಂಡೋರು
ಎಂದು ಕೂಗಿಕೊಂಡು ಬರುವಾಗ್ಗೆ ದಾಸರ ಚನ್ನಪ್ಪ
ಬೆರಗು ಬಿಟ್ಟು ಹೊರಗೆ ಬಂದು ನೆಂಟ್ರನ ಒಳಗೆ ಕರೆತಾನಪ್ಪ ।
ಬಂದಂತ ಆರು ಜನ ಅಣ್ಣ ತಮ್ಮಗಳ ಸ್ನಾನನೇ ಮಾಡಿಕೊಂಡು
ಬೆರಗಾನೇ ಸೇರುತಾರಣ್ಣ । ಪಾತಮ್ಮ ಬಂದಂತ ಅಣ್ಣಗಳಿಗೆ
ಮಡಲಕ್ಕಿಯೊಳಗೆ ಅನ್ನನೇ ಮಾಡಿ ಹಂಚಿಕ್ಕಿಕೊಂಡು ಊಟಾನ ಮಾಡುತಾರಮ್ಮ ।
ಮೂರು ತಿಂಗಳು ತುಂಬುತ್ತಿದ್ದಂಗೆ ಹೇಳುತಾನಲ್ಲ ಗನಗುರುವು ।
ಅಲ್ಲ ಕಣ ದಾಸಣ್ಣ ನಿನಗೆ ಮಾನ ಮರ್ವಾದೆ ಇಲ್ಲವೆ ।
ಏಳು ತಿಂಗಳಿಂದ ಏಳು ಸೇರು ಮಡಿಲಕ್ಕಿಯೊಳಗೆ ಹೆಣ್ಣು ಮಗು
ಹಂಚಿಕೆ ಬೇಕಾದರೆ ಗಂಡಸಾಗಿ ಸುಮ್ಮನಿರುವುದೇ ।
ಏನು ಮಾಡಲಿ ಗನಗುರುವೆ । ಎಲ್ಲಿ ಕಳ್ಳತನ ಮಾಡಲಿ ನಾನು
ಕೇಳಪ್ಪ ದಾಸಣ್ಣ ಯಾರ ಮನೆಗೂ ನುಗ್ಗಬೇಡ । ಕಳ್ಳತನ ಬೇಡ
ಮಂಗಳವಾರದ ದಿವಸ ಸಿರಾದ ಪಟ್ಟಣದಾಗೆ ಭಾರಿ ಸಂತೆ ಕಲಿತದೆ

ಸಂತೆಗೋಗಿ ಭಿಕ್ಷನೆ ಮಾಡಿದರೆ ಹೀರೇಕಾಯಿ । ಬೆಂಡೆಕಾಯ ।
ಗೋರಿಕಾಯಿ । ಹಾಗಲಕಾಯಿ । ಬೇಕು ಬೇಕಾದ ತರಕಾರಿ ಸಿಗುತ್ತೈತೆ
ಬೇಕಾದಷ್ಟು ದುಡ್ಡು ಸಿಗುತ್ತೈತೆ । ತಕ್ಕೋ ಬರೋಗಪ್ಪ ನೀನು ।

## ಸಿರಾ ಸಂತೆಯಲ್ಲಿ ಮಾಗೋಡು ದಾಸಯ್ಯ

ಆಗ ನೋಡೋ ಭಗವಂತ ಮೇಲುಕುಂಟೆ ಏಣಿನಾಗೆ
ಲಿಂಗದ ಬೀರಯ್ಯ ಕನಕದಾಸಪ್ಪ ಇಬ್ಬರೂ ವ್ಯಾಜ್ಯನ ಮಾಡಿಬಿಟ್ಟು
ಇಬ್ಬರೂ ಸತ್ತು ಎರಡು ವರ್ಷನೆ ತುಂಬೈತೆ ।
ಎಲಯಂಕೆಗಳನ್ನೆಲ್ಲಾ ಗೆದ್ದಲು ತಿಂದಿರೋದು ।
ಸರ್ಕಾರದವರು ಇದರ ವ್ಯಾಜ್ಯನ ಬಗೆಹರಿಸಲಾರದೆ
ಸಿರಾ ಸೀಮೆಗೆ ಯಾರಾದರೂ ನಾಮ ಇಕ್ಕೋ ದಾಸಯ್ಯಗಳಿದ್ದರೆ
ಮೇಲುಕುಂಟೆ ಏಣಿನೊಳಗೆ ಪವಾಡ ಎತ್ತಬಹುದು ।
ವೀಳ್ಯ ಹಿಡಿಯರಣ್ಣಾ । ಅಂತೆಂದು ಸಾರಿಸೆವರಣ್ಣಾ
ಆ ಹೊತ್ತಿನ ಕಾಲಕ್ಕೆ ಯಾವ ದಾಸಯ್ಯನೂ ಮುಂದೆ ಬರಲಿಲ್ಲ
ಸುತ್ತ ಮೂರು ಗಾವುದದೊಳಗೆ ದಾಸಪ್ಪಗಳೆಲ್ಲಾ ಕೈಕಾಲು
ಮುಖ ತೊಳೆದು ಒಳಗೋಗಿ ನಾಮ ಇಟ್ಟುಕೊಂಡು
ಊಟಾನೆ ಮಾಡಿಬಿಟ್ಟು । ಹೊರಾಕೆ ಬರುವಾಗ್ಗೆ ನಾಮನೆ ಕೆಡಿಸೆವರಣ್ಣಾ ।
ಹಣೆ ಮೇಲೆ ನಾಮ ಇಕ್ಕೋ ದಾಸಪ್ಪಗಳು ಯಾರೂ ಇಲ್ಲ ನೋಡೋ ।

## ಸರ್ಕಾರದ ಸೆರೆಯಾದ ರಂಗನಾಥ

ಮಂಗಳವಾರದೊಳಗೆ ಹೊತ್ತು ಹುಟ್ಟಿ ಬರುವಾಗ್ಗೆ ದಾಸರ ಚನ್ನಪ್ಪ
ಕೈಕಾಲು ಮುಖ ತೊಳಕೊಂಡು ಒಂದು ದುಡ್ಡಿನ ಬಿಳಿನಾಮ ।
ಒಂದು ದುಡ್ಡಿನ ಕೆಂಪುನಾಮ ತಕ್ಕೊಂಡು ಹಣೆಮೇಲೆ ಪಟ್ಟೆನಾಮ
ಎದೆಮೇಲೆ ಗೀರುನಾಮ । ರಟ್ಟೆಮೇಲೆ ಕಡ್ಡಿನಾಮ ತೆಗೆದಾನು
ಬಿರಿದು ಬವನಾಸಿ ಕಂಕಳಾಗಿ ಹಾಕಿಕೊಂಡು ಬಲಗೈ ಜಾಗಟೆನೆ
ಹಿಡಕೊಂಡು ದಾಸಣ್ಣ ಬೆರಗು ಬಿಟ್ಟು ಆಚೆಗೆ ಹೋಗುತಾನೆ ನೋಡೋ
ಬೆರಗು ಬಿಟ್ಟು ಹೋಗುವಾಗ್ಗೆ । ಸಾಹಸ ಉಕ್ಕಿನ ಕಂಬದವನು
ಉರಿಬಾಣದವನು । ಶನಿವಾರಯ್ಯ ಸಹಸ್ರ ನಾಮದವನು
ಸಹಸ್ರ ಬಾಣದವನು ಹೇಳುತಾನಲ್ಲಪ್ಪ । ದಾಸರ ಚನ್ನಪ್ಪ
ನನ್ನ ಮಾತು ಮೀರಬೇಡ । ನನ್ನ ಮಾತು ಚನ್ನಾಗಿ ಕೇಳೋ
ಚನ್ನೋಜಿ ನೀನು । ಮೇನ್ ರೋಡಿಗೆ ಹೋಗಬೇಡ ।

ಹೊರ ಹಟ್ಟಿಗೆ ಹೋಗಿ ಭಿಕ್ಷೆನೆ ಮಾಡಿ ಓಡಿ ಬಂದು ಬಿಡಪ್ಪ
ಹೊರಟ್ಟಿಗೆ ಭಿಕ್ಷೆ ಮಾಡಿ ಬೇಗನೆ ಸೇರಿಕೋಬೇಕಪ್ಪ ನೀನು ।
ಆಗಲಪ್ಪ ಗನಗುರುವೆ ಅಂದು ಹೇಳಿ ದಾಸಣ್ಣ
ಬೆರಗು ಬಿಟ್ಟು ಆಚೆಗೆ ಹೋಗುತ್ತಿದ್ದಂಗೆ
ದಾಸರ ಚನ್ನಪ್ಪ ನೆಟ್ಟಗೆ ರೋಡಿಗೆ ಹೋದನಣ್ಣ
ಮೇನ್ ರೋಡಿನಲ್ಲಾ ಜಾಗಟೆ ಬಡಿದಾನೋ ।
ಜಾಗಟೆ ಬಡಿಯುತಾನೆ । ಗೋವಿಂದ ಗೋವಿಂದ ಗೋವಿಂದ ಅಂಬುತಾನೆ ।
ಗೋವಿಂದ ಗೋವಿಂದ ಅಂಬಾ ಶಬ್ದನೇ ಬಾಯಿಂದ ಹೊರಡಾದು
ಹರಿಯೇ ಹರಿಯೇ ಹರಿಯೇ ಎಂದು ನೆಟ್ಟನೆ ದಾಸಪ್ಪ
ತಾಲ್ಲೂಕು ಕಚೇರಿ ಹೋಗುತಾನೆ ನೋಡೋ । ತಾಲ್ಲೂಕು ಕಚೇರಿಗೆ
ಬಂದು ಗೋವಿಂದ ಗೋವಿಂದ ಅನ್ನುತಿದ್ದಂಗೆಯ
ಕಚೇರಿಯವರು ಹೋಗ್ರಪ್ಪ ಮೇಲುಕುಂಟೆ ಏಣಿನಾಗೆ
ಪವಾಡ ಎತ್ತೋ ಧೀರ ಈ ಹೊತ್ತು ಸಿಕ್ಕಿದನಣ್ಣಾ । ಕರಕೊಂಡು
ಬರೋಗಿರೆಂದು ಜವಾನರಿಗೆ ಅಡ್ರರ್ ಮಾಡುತಾನಣ್ಣೋ ।
ಜವಾನರಿಗೆ ಅರ್ಡರ್ ಮಾಡುತ್ತಿದ್ದಂಗೆ ದಾಸರ ಚನ್ನಪ್ಪನ
ಕರಕೊಂಡೋಗಿ ಕಚೇರಿ ಮುಂಚೆ ನಿಲ್ಲಿಸಿಕೊಂಡರಲ್ಲೋ ।
ಕಚೇರಿ ಮುಂದೆ ನಿಲ್ಲಿಸಿಕೊಂಡು ಇಲ್ಲಿಗೆ ಏಳು ವರ್ಷದಿಂದ
ಎತ್ತಿದ ವೀಳ್ಯವು ಇಳಿಸಿಲ್ಲವಪ್ಪ । ಈಗ ಮೇಲುಕುಂಟೆ ಏಣಿನಾಗೆ
ಪವಾಡ ಎತ್ತಬೇಕು ನೀನು । ವೀಳ್ಯವು ಹಿಡಿಯಬೇಕು ।
ಪವಾಡ ಅಂದ್ರೆ ಗೊತ್ತಿಲ್ಲ । ವೀಳ್ಯವೆಂದರೆ ನನಗೆ ತಿಳಿದಿಲ್ಲ
ಬಿಡ್ರಣ್ಣ ಅಂದು ಬೇಕಾದಂಗೆ ಹೇಳುತಾನಣ್ಣ । ಎಷ್ಟು ಹೇಳಿದರೂ
ದಾಸಣ್ಣನ ಆಚೆಗೆ ಬಿಡೋದಿಲ್ಲ । ದಾಸಣ್ಣ ವೀಳ್ಯ ಹಿಡಿಯೋದಿಲ್ಲ ।
ಹೊತ್ತು ಮೂರು ಗಂಟೆ ಆದರೂ ದಾಸಣ್ಣನನ್ನು ಬಿಡೋದಿಲ್ಲ
ಆರು ಗಂಟೆಯಾದರೂ ಖಂಡಿತವಾಗಿಯೂ ಬಿಡೋದಿಲ್ಲವಪ್ಪ । ನಿರ್ಬಂಧ
ಮಾಡುತಾರೆ । ಜುಲ್ಮಾನೆ ಮಾಡುತಾರೆ । ಅವರ ಬಲವಂತ ತಾಳಲಾರದ
ದಾಸರ ಚನ್ನಪ್ಪ ಹೋಗ್ರಪ್ಪ ಹೊತ್ತು ಹುಟ್ಟಿ ಬರುವಾಗ್ಗೆ ಮೇಲುಕುಂಟೆ
ಏಣಿನಾಗ ಪವಾಡ ಎತ್ತುತೀನೆಂದು । ವೀಳ್ಯ ಹಿಡಿದು ಬಿಟ್ಟನಣ್ಣ
ವೀಳ್ಯವು ಹಿಡಿಯುತ್ತಿದ್ದಂಗೆ ದಾಸಣ್ಣನ್ನು ಬಿಟ್ಟು ಬನ್ನಿ ಎಂದು
ಜವಾನರಿಗೆ ಆರ್ಡರ್ ಮಾಡುತಾರೋ । ಮುಂದೆ ಇಬ್ಬರು ಜವಾನರು
ಹಿಂದೆ ಇಬ್ಬರು ಜವಾನರು । ನಡು ಮಧ್ಯೆ ದಾಸಣ್ಣನ ಕರಕೊಂಡು
ಬೆರಗಿಗೆ ಹೋದರಲ್ಲೋ । ದಾಸಣ್ಣನನ್ನು ಬೆರಗಿಗೆ ಬಿಟ್ಟು ಜವಾನರು
ಹಿಂದಿರಿಗಿ ಬರುತ್ತಿದ್ದಂಗೆ ಗನಗುರುವು ಹೇಳೆನಲ್ಲೋ ।

ಬಾರಣ್ಣ ದಾಸಣ್ಣ । ಏನೇನು ತರಕಾರಿ । ಎಷ್ಟು ದುಡ್ಡು ತಂದಿದ್ದೀಯ
ತತ್ತಾರೋ ನೋಡೋನ ನಾವು । ಮನೆಹಾಳು ದೇವರೆ ಅಂತೆಂದು
ದಾಸಣ್ಣ ಕಣ್ಣಾಗೆ ನೀರು ಹಾಕುತಾನಲ್ಲೋ । ದಾಸಣ್ಣನ ಕರೆಮುಖ
ಬಿದ್ದತೈತಣ್ಣ । ಅಂತೆಂಬಾ ಮಾತಿಗೆ ಸ್ವಾಮಿ ದೊಡ್ಡಾನು ಹೇಳುತಾನೆ
ಯಾಕಪ್ಪ ದಾಸಣ್ಣ ಸೀರ್‍ಯದ ಪೇಟೆಯೊಳಗೆ ನಿನ್ನ ಒಡೆದವರು ಯಾರು
ಬಡಿದವರು ಯಾರು । ನ್ಯಾಯವಾಗಿ ಹೇಳು ।
ಇನ್ನು ಐದು ದಿನದೊಳಗೆ ಅವರ ಮನೆತನ ಸುಟ್ಟು ಭಸ್ಮ ಮಾಡುತೀನಿ ।
ದಾಸಣ್ಣ ತಗ್ಗಿಸಿದ ತಲೆ ಮೇಲೆ ಎತ್ತಲಿಲ್ಲ ।
ಹೋಗಪ್ಪ ದಾಸಣ್ಣ ನಿನ್ನಂತ ಸತ್ಯವಂತರನ್ನ ನಾನೆಲ್ಲಿಯೂ ನೋಡಲಿಲ್ಲ ।
ಸೋಮವಾರ ಹೊತ್ತು ಹುಟ್ಟಿ ಬರುವಾಗ್ಗೆ ನಿನ್ನ ಶಕ್ತಿ ಸಾಹಸ
ಮೇಲುಕುಂಟೆ ಏಣಿನಾಗೆ ನೋಡುತೀನಿ ।

## ಸತ್ತ ಶವಗಳನ್ನು ಬದುಕಿಸಿದ ಪ್ರಸಂಗ

ಆಗ ನೋಡ ಭಗವಂತ ಬೆಳಿಗ್ಗೆ ಹೊತ್ತು ಹುಟ್ಟುತ್ತಿದ್ದಂಗೆ
ಸೀರ್‍ಯದ ಸುತ್ತಮುತ್ತ ಟಾಂಟಾಮು ಹೊಡಿತಾನಲ್ಲೋ ।
ಸೋಮವಾರ ಹೊತ್ತು ಹುಟ್ಟುವುದರೊಳಗೆ ಮೇಲುಕುಂಟೆ ಏಣಿನಾಗೆ
ಸಿರ್‍ಯಾದ ಸುತ್ತಲೂ ಟಾಂಮು ಟಾಂಮು ಹೊಡಿತಾರಣ್ಣೋ
ಟಾಮು ಟಾಮು ಹೊಡಿವಾಗ್ಗೆ ಭಾನುವಾರ ಮಧ್ಯಾಹ್ನ ಮೂರು ಗಂಟೆಗೆ
ದಿಕ್ಕು ದಿಕ್ಕಿನ ಪ್ರಜೆಗಳೆಲ್ಲಾ ಗೌಡಾಳಿಕೆ ಪ್ರಜೆಪಾಲಕರೆಲ್ಲಾ ಮೇಲುಕುಂಟೆ ಏಣಿಗೆ
ಬಂದು ಗುಡಾರ ಹೊಡೆಕೊಂಡು । ಡೇರೇನೆ ಹೊಡೆಕೊಂಡು
ಜನಾದಿ ಜನವೆಲ್ಲಾ ಕಲೆತು ಬಿಟ್ಟರಣ್ಣಾ ।
ಜನಾದಿ ಜನವೆಲ್ಲಾ ಕಲೆಯುತ್ತಿದ್ದಂಗೆ ಭಾನುವಾರ ಅರ್ಧನೆ ಹೊತ್ತಿಗೆ
ಬೆರಗಿನತಕೆ ಜವಾನು ಬಂದು ಬಾರಣ್ಣಾ ದಾಸಣ್ಣ
ಮೇಲುಕುಂಟೆ ಏಣಿನಾಗೆ ಹೋಗಬೇಕು । ಪ್ರಜೆಗಳೆಲ್ಲಾ ಕರಿತವರೆ
ಪ್ರಜೆ ಪಾಲಕರೆಲ್ಲಾ ಗೌಡಾಳಿಕೆಯಲ್ಲ ಕಲೆತವರೆ ನೋಡೋ
ಆಗ ನೋಡೋ ಭಗವಂತ ಅವರವರೆ ಆಯುಧಗಳನೆಲ್ಲಾ ತಕ್ಕೊಂಡು
ಮೇಲುಕುಂಟೆ ಏಣಿಗೆ ಹೊರಟು ಹೋಗುತಾನಲ್ಲೋ ।
ಮೇಲುಕುಂಟೆ ಏಣಿಗೆ ಹೋಗಿ । ಕಾರೆಂಬ ಕತ್ತಲಲ್ಲಿ ಆಗಲೇ ದಾಸಣ್ಣ
ಸುಡಿಗೇನೆ ಬೆಳಕಿನಲ್ಲಿ ದೊಣ್ಣೆ ಬಿದ್ದಂಗೆ ಬಿದ್ದಿದ್ದ ಎಂಕೆಗಳನ್ನೆಲ್ಲಾ
ಕೂಡಿಕ್ಕು ತಾನಲ್ಲೋ । ಎಲ ಯಂಕೆಗಳನ್ನು ಕೂಡಿಸಿ ಎರಡು ಅಗ್ರದೆಲೆ
ತರಿಸಿ ಮೇಲುಕುಂಟೆ ಏಣಿನ ಮೇಲೆ ಅಗ್ರದ ಎಲೆಹಾಕಿ

ಎರಡು ಶವಗಳನ್ನು ಜೋಡಿಸುತ್ತಾನಲ್ಲೋ ।
ಶವಗಳನ್ನ ಜೋಡಿಸಿ ದಾಸಣ್ಣ ಕಾಲುದೆಸೆಯಲ್ಲಿ ನಿಂತು
ಬಲಗೈಲಿ ಜಾಗಟೆನೆ ಕುಟ್ಟುತಾನೆ । ಹರಿಯೇ ಹರಿಯೇ ಹರಿಯೇ
ಗೋವಿಂದ ಅಂದು ಬಡಿದುಕೊಳ್ಳುತಾನಣ್ಣ
ಭಾನುವಾರ ಸಕ್ಕಟ್ಟೆ ಸರಹೊತ್ತಿನಲ್ಲಿ ಹೋದ ದಾಸಣ್ಣ ।
ಸೋಮವಾರ ಹೊತ್ತು ಹುಟ್ಟಿ ಬರುತ್ತೈತೆ । ಎರಡು ಶವದೊಳಗೆ
ಒಂದು ಶವನೂ ಮೇಲೆ ಎದ್ದು ನಿಲ್ಲದಿಲ್ಲವೋ । ಆಗ ದಾಸಣ್ಣಗೆ
ಕರಿ ಮುಖ ಬಿದ್ದವೆ । ದಾಸಣ್ಣನ ಮುಖ ನೋಡಾಕೆ ಆಗೋದಿಲ್ಲ
ಬಂದಂತ ರಾಜ ದೊರೆ ಗೌಡಾಳಿಕೆಯಲ್ಲ । ಪ್ರಜೆ ಪಾಲಕರೆಲ್ಲಾ
ಜೇನುಗರಿದಂಗೆ ದಾಸಯ್ಯನಿಗೆ ಅಪಹಾಸ್ಯ ಮಾಡುತಾರಲ್ಲೋ
ಈಗ ದಾಸಪ್ಪ ಪವಾಡ ಎತ್ತಿರೆ ಸರಿಹೋಯ್ತು ಇಲ್ಲದಿದ್ದರೆ
ಕಲ್ಲು ಬಾಣಕ್ಕೆ ಕೊಡಬೇಕೆಂದು ಮಾತಾಡಿಕೊಳ್ಳುತಾರಲ್ಲೋ
ಕಲ್ಲು ಬಾಣಕ್ಕೆ ಕೊಡಬೇಕೆಂದು ಹೇಳುತ್ತಿದ್ದಂಗೆ ದಾಸಣ್ಣನಿಗೆ
ಮುಂಗೈಯ್ಯಗೆ ಅಂಗಾಲಗೆ ಕಿಚ್ಚು ನೆಟ್ಟಗಾಡುತ್ತೈತೋ ।
ಪಾತಮ್ಮ ಪಾತಮ್ಮ ನಿನ್ನ ಗಂಡನಿಗೆ ಮೇಲುಕುಂಟೆ ಏಣಿನಾಗೆ
ಕಲ್ಲು ಬಾಣಕೆ ಕೊಡುತಾರೆ ಏನು ಮಾಡುತೀಯಮ್ಮ ನೀನು
ಎಲ್ಲಿಗೋ ಹೋಗಿ ಸೇರುತೀಯ ತಾಯಿ ನೀನು ।
ಅಂತೆಂಬಾ ಮಾತಿಗೆ ಪಾತಮ್ಮ ಗೋಳೋ ಅಂಬ್ತಾಳೆ ನೋಡೋ
ಯಾಕೆ ಕಳಿಸಿದೆ ಗನಗುರುವೆ । ಇದ್ದದ್ದು ಉಂಡುಕೊಂಡು
ಕಾಲಹರಣ ಮಾಡುತ್ತಿದ್ದೆವು ನಾವು । ಈವೊತ್ತು ನಾನು ಪರದೇಶಿ ।
ಯಾರ ಬಾಗಿಲಿಗೆ ಹೋಗಲಿ ನಾನು । ತಂದೆ ಬಿಟ್ಟೆ ತಾಯಿ ಬಿಟ್ಟೆ
ಬಂಧು ಬಳಗ ಬಿಟ್ಟು ಸಕಲ ಸರ್ಮಿೀಷ್ಟೆ ನೀನೆ ಅಂಬ್ತಾ ನಂಬಿ ಬಂದೆ
ಈ ಹೊತ್ತು ಯಾರ ಬಾಗಿಲಿಗೆ ಹೋಗಲಿ ತಂದೆ ನಾನು ।
ಸ್ವಾಮಿ ದೊಡ್ಡಾನು ಹೇಳುತಾನೆ ನೋಡು ಖಂಡಿತವಾಗಿಯೂ
ಕಣ್ಣೀರು ಹಾಕಬೇಡ । ನಾಳೆ ಹನ್ನೆರಡು ಗಂಟೆಯೊಳಗೆ
ನಿನ್ನ ಗಂಡನ ಕರಕೊಂಡು ಉಕ್ಕಿನ ಉರಿಬಾಣ ಧರಿಸಿ
ಮುಂಗಾರು ಮಿಂಚಿನಂತೆ ಮೇಲುಕುಂಟೆ ಏಣಿಗೆ
ಹೊರಟು ಹೋಗುತೇನೆ । ಹೋಗಿ ಯಾರಿಗೂ ಪತ್ತೆ ಇಲ್ಲದಂಗೆ
ಪವಾಡ ಎತ್ತಿತ್ತೀನಿ ನಾನು ।
ಹನ್ನೆರಡು ಗಂಟೆ ಹೊಡೆಯಾ ಹೊತ್ತಿಗೆ ದಾಸರ ಚನ್ನಪ್ಪ
ಪವಾಡ ಎತ್ತಿತೀ ನೀನು ಅಂತೆಂದು ಮುಖದ ಮೇಲೆ
ನೀರು ಚೆಲ್ಲಾಡುತಾವೆ ।

ಪವಾಡ ನೋಡಾಕೆ ಬಂಜಂತ ದೊರೆ ದಾಸರೆಲ್ಲ ಗೌಡಾಳಿಕೆಲ್ಲಾ
ಪ್ರಜೆ ಪಾಲಕರೆಲ್ಲಾ ಬೆರಗಾಗಿ ನೋಡುತಾರಂತೋ ।
ಹೇಳುತಾನಲ್ಲಪ್ಪ ಗನಗುರುವೆ ಜಾಗ್ರತೆ ಒಂದಗ್ರದೆಲೆ ತರಿಸಪ್ಪ
ಬಿದ್ದಿರೊ ಎಲಯಂಕೆನೆಲ್ಲಾ ತೊಳೆದು ಬಿಡಪ್ಪ ನೀನು
ತೊಳೆದು ಅಗ್ರದೆಲೆ ಮೇಲೆ ಮನುಷ್ಯರಂಗೆ ಜೋಡಿಸಿ
ಹಣೆ ಮೇಲೆ ಕೆಂಪುನಾಮ । ಬಿಳಿನಾಮ ಎದೆಯ ಮೇಲೆ
ಪಟ್ಟೆ ಪಡೆ ತೆಗೆಯಪ್ಪ । ರಟ್ಟೆ ಮೇಲೆ ಮುದ್ರೆ ತೆಗೆಯಪ್ಪ
ಹೇಳಪ್ಪ ದಾಸರ ಚನ್ನೋಜಿ ಬ್ಯಾಟೆ ಪತ್ರೆ ತಂದು
ಎರಡು ಶವಕೂ ಸಮವಾಗಿ ಮುಡಿಸಬೇಕಣ್ಣ ನೀನು
ಎರಡು ಶವಕೂ ಬ್ಯಾಟೆ ಪತ್ರೆ ತಂದು ಸಮನಾಗಿ ಮುಡಿಸು
ತ್ತಿದ್ದಂಗೆ ಹೇಳುತಾನಲ್ಲಪ್ಪ ಗನಗುರುವು । ಕೇಳಪ್ಪ
ಚನ್ನೋಜಿ ಇಷ್ಟು ಜನರ ಮುಂದೆ ನಮ್ಮ ಸತ್ಯನೆ ಉಳಿಯಬೇಕು
ಸಾಹಸವೇ ತೋರಿಸಬೇಕು । ಅಂಜಬೇಡ ಅಳುಕಬೇಡ
ಸೂರಿ ತಕ್ಕೊಂಡು ನಿನ್ನ ಬಲಗಡೆ ಒಳದೊಡೆ ಸೀಳಿಕೋಬೇಕಪ್ಪ
ಅದರಾಗಿನ ರಕ್ತೊ ಒಂದು ತೊಟ್ಟು ಭೂಮಿಯೊಳಗೆ
ಬೀಳದಂಗೆ ಮೂರು ಬೊಗಸೆ ರಕ್ತ ತಕ್ಕೊಂಡು
ಎರಡು ಶವಕೂ ಸಮನಾಗಿ ಚಲ್ಲಬೇಕಣ್ಣ ನೀನು
ಆಗ ನೋಡೋ ಭಗವಂತ ದೊಡ್ಡೋನು ಕರುಣೆಯಿಂದ
ದೈವ ದೃಷ್ಟಿಯಿಂದ ಮೇಲುಕುಂಟೆ ಏಣಿನ ಮೇಲೆ
ದಾಸರ ಚನ್ನಪ್ಪ ಕಟ್ಟು ಸೂರಿ ತಕ್ಕೊಂಡು ಬಲಗಡೆ
ಒಳತೊಡೆ ಸೀಳಿಬಿಟ್ಟು ಒಂದು ತೊಟ್ಟು ರೈತ ಕೆಳಗೆ ಬೀಳದಂಗೆ
ಮೂರು ಬೊಗಸೆ ರಯಿತನ ಹಿಡಿದು ಬಿಟ್ಟನಣ್ಣಾ ।
ಮೂರು ಬೊಗಸೆ ರಯಿತನ ಹಿಡಿದು ಎರಡು ಶವಕ್ಕೂ
ಸಮವಾಗಿ ಚಲ್ಲುತ್ತಿದ್ದಂಗೆ ಕೇಳಮ್ಮ ದಾಸರ ಚನ್ನೋಜಿ
ಎರಡು ಶವದ ಮಧ್ಯೆ ತಲೆದಿಂಬಿನಲ್ಲಿ ನಿಂತು ಜಾಗಟೆ
ತಕ್ಕೊಂಡು । ಮೂರು ಸೊಲ್ಲು ಗೋವಿಂದ ಗೋವಿಂದ ಗೋವಿಂದ
ಅಂತಂದು ಹೇಳಪ್ಪ ಅಂದು ಹೇಳುತ್ತಿದ್ದಂಗೆ
ಏಳು ವರ್ಷ ಗೆದ್ದಲಿಡಿದು ಎಲಯಂಕೆಗಳೆಲ್ಲಾ ನರನರ ಎದ್ದು ನಿಂತವಣ್ಣ
ಎರಡು ಶವಗಳು ಎದ್ದು ನಿಂತುಕೊಳ್ಳುತ್ತಿದ್ದಂಗೆ ಹೇಳುತಾನೆ ಗುರುವು
ಕಂಡೆ ಅಂದಿರಾ ಕಾಣೆ ಅಂದಿರಾ ಯಣ್ಣ ಏಳು ಹೆಜ್ಜೆ ನಡೆಸಿ ಬಿಟ್ಟನಣ್ಣಾ
ಮೇಲುಕುಂಟೆ ಏಣಿನಾಗೆ ಏಳು ಹೆಜ್ಜೆ ನಡೆಸಿಬಿಟ್ಟು ಕಲ್ಲು ಬಾಣಕೆ ಕೊಟ್ಟನಂತೋ
ಕಲ್ಲು ಬಾಣಕೆ ಕೊಡುತ್ತಿದ್ದಂಗೆ ಬಂದಂತ ದೊರೆ ದಾಸರೆಲ್ಲಾ

ಗೌಡಾಳಿಕೆಯಲ್ಲಾ ವಾರಿ ರುಮಾಲು ಕಂಬಿ ಪೇಟದವರೆಲ್ಲಾ
ಕಂಠಿಹಾರ ಜಾಮಾಲೆಗಳನೆಲ್ಲಾ ತೆಗೆದು ಸ್ವಾಮಿಗೆ ಕೊಡುವಾಗ
ಹೇಳುತಾನೆ ಗನಗುರುವು । ಹಾರ ಪೇಟೆ ಜಾಮಲೆ ಸರ ಬೇಕಿಲ್ಲ
ಕಂಡೋರ ಸ್ವತ್ತಿಗೆ ಆಸೆ ಪಡಬೇಡಿರಣ್ಣಾ
ಹೆಂಗೆ ಬಂದಿದ್ದೊರೋ ಹಾಗೆನೆ ನಿಂತುಕೋ ಬೇಕರಣ್ಣಾ
ಕಟ್ಟಿದ ಕೈ ಬಿಡಲಿಲ್ಲ ದಾಸಣ್ಣ । ಮುಚ್ಚಿದ ಬಾಯಿ ತೆಗೆಯಲಿಲ್ಲ
ದಾಸಣ್ಣ ಮೇಲಕುಂಟೆ ಏಣಿನಾಗೆ ನಿಂತಾನೆ ನೋಡೋ ।
ಆ ಹೊತ್ತಿನ ದಿವಸದಲ್ಲಿ ಎತ್ತ ನೋಡಿದರೂ ಜಾತ್ರೆ ಶಬ್ದ
ನೋಡಕಾಗೋದಿಲ್ಲ । ಕಾಯಿ ಗಾಳಿ ಶಬ್ದ ಗೋವಿಂದ ಗೋವಿಂದ ಅಂಬುತಾರೆ ।
ಕಂಬಳಿನೇ ಹಾಸುತಾರೆ । ಬಟ್ಟೆನೆ ಹಾಸುತಾರೆ । ಮೂಟೆ ಕಟ್ಟಿಕೊಂಡು ಹೋಗುತಾರೆ
ಯಾರಾರ ಕೊಂಡೋಗಲಿ ನೀನು ಮಾತ್ರ ಕಂಡಾರ ಸ್ವತ್ತಿಗೆ ಆಸೆಬೇಡ ದಾಸಣ್ಣ
ಬಂದಂತ ದೊರೆ ಗೌಡಾಳಿಕೆಯಲ್ಲಾ ಬಿಡು ದಾಸಣ್ಣ ಕೈನ
ತೆಗಿಯಪ್ಪ ಕಣ್ಣು ಬಿಡಪ್ಪ ಎಂದು ಕೂಗುತಾನಲ್ಲೋ ।
ಬಾರಿ ಬಿರುದು ಕಂಬಿ ಬಿರುದು ಮಾತು ಕೇಳಣ್ಣ ನೋಡೋ
ನಮ್ಮ ಸೀರ್‍ಯದ ಪೇಟೆಯೊಳಗೆ ಅರ್ಧನೆ ಪೇಟೆ ಕೇಳಪ್ಪ
ನಮ್ಮ ದರ್ಬಾರಿನೊಳಗೆ ಅರ್ಧನೆ ದರ್ಬಾರು ಕೇಳಪ್ಪ
ನಮ್ಮ ದೌಲತ್ತಿನೊಳಗರ್ಧ ದೌಲತ್ತು ಕೇಳಪ್ಪ ಕೊಟ್ಟೇವು
ಅವರ ದರ್ಬಾರ ಬೇಕಿಲ್ಲ । ಸೀರ್‍ಯದ ಪೇಟೆ ಬೇಕಿಲ್ಲ
ಅದ್ಯಾವುದು ಬ್ಯಾಡ ಅಂತೆಂದು ಹೇಳುತಾನೆ ಗನಗುರುವು ।
ಹೆದರಬೇಡ ದಾಸಣ್ಣ ಕಡಿಮೆ ಬಿರಿದಿಗೆ ಒಪ್ಪಬ್ಯಾಡ
ಭಾರಿನೆ ಬಿರುದು ಕೇಳಪ್ಪ ಕೊಟ್ಟೇವು ನಾವು ।
ಹೊತ್ತು ಹೋಗುತ್ತೈತೆ ಹನ್ನೆರಡು ಗಂಟೆ ಆಗುತ್ತೈತೆ
ಬೆಟ್ಟಂದು ಬೇಸಿಗೆ ಉಟ್ಟೆಂಬ ಉರಿ ಬಿಸಿಲು
ಕಾಲಲ್ಲೆ ಉರಿದು ಅಪ್ಪಳವಾಗುತ್ತವೆ ಜಾಗ್ರತೆ ಹೇಳಪ್ಪ ನೀನು ।

**ಕಂಬದ ರಂಗ ಸಿರಾದ ಸಂತೆ ಸುಂಕ ಪಡೆದ ಪ್ರಸಂಗ**

ಹೇಳುತಾನಲ್ಲೋ ಗನಗುರುವು ಕೇಳಣ್ಣ ದಾಸಣ್ಣ
ಈಗ ಬಂದಿರೋ ಪ್ರಜೆ ಪಾಲಕರೆಲ್ಲಾ ಸೇರಿ ದೊರೆ
ಗೌಡಾಳಿಕೆಯಲ್ಲ ಹೋಗಿ ಸೀರ್‍ಯ ಕೆರೆ ಹಿಂದಲ
ತೂಬಿನ ಗುಂಡಿ ಹಿಂದಲ ಗದ್ದೆ ಮಾನ್ಯ ಮಾಡಬೇಕು
ಕಲ್ಲಾಕಬೇಕು । ಕಂಬಿಗೆ ರಾತು ಮಾಡಬೇಕೆಂದು

ಕೇಳಣ್ಣ ನೀನು । ಮಂಗಳವಾರದ ಸಂತೆನ ಸುಂಕವ
ಕೊಡಬೇಕೆಂದು ಹೇಳಪ್ಪ ನೀನು ।
ದಾಸಣ್ಣ ಗನಗುರುವಿನ ಅಪ್ಪಣೆಯಂತೆ ಸೀರ್‍ಯದ ಕೆರೆಯ
ತೂಬಿನ ಗುಂಡಿ ಗದ್ದೆನೂ । ಮಂಗಳವಾರದ ಸಂತೆ ಸುಂಕನೂ
ಕೇಳುತಾನೋ ಗನಗುರುವೆ ।
ಆಗ ಬಂದಂತ ದೊರೆ ಪಾಲಕರೆಲ್ಲರೂ ಗೌಡಾಳಿಕೆಯಲ್ಲಾ
ನಮಗೆ ಮಾನನೇ ಬರೋದಿಲ್ಲ । ಗೌಡಾಳಿಕೆ ಉಳಿಯೋದಿಲ್ಲ
ಇನ್ನೂ ಹೆಚ್ಚಿನ ಬಿರುದು ಕೇಳಪ್ಪ ದಾಸಣ್ಣ ನೀನು ।
ಸ್ವಾಮಿ ದಾಸಣ್ಣ ಸಾಕಪ್ಪ ಅಂಬುತಿದ್ದಂಗೆಯೆ
ಸಿರ್‍ಯಾದ ಕೆರೆಯ ತೂಬಿನ ಗುಂಡಿ ಗದ್ದೆ ಮಾನ್ಯ ಮಾಡಿ
ಮಂಗಳವಾರದ ಸಂತೆ ಜೀರೆ ಮಾಡಿ ಬಂದಂತ ಪ್ರಜೆಪಾಲಕರೆಲ್ಲಾ
ಅವರವರ ಪಾಡಿಗೆ ಹೊರಟು ಬಿಟ್ಟರಣ್ಣ ।
ದಾಸರ ಚನ್ನಪ್ಪ ಬೆರಗಿನೊಳಗೆ ಹೋಗುತಾನೆ ನೋಡೋ ।
ಮಂಗಳವಾರ ಹೊತ್ತು ಹುಟ್ಟುವಾಗ್ಗೆ ನೂರು ದಾಸರ ಕರೆತರುತಾನೆ ದಾಸಣ್ಣ
ನೂರೊಂದು ದಾಸರಾಗ ಜಾಗಟೆ ಬಡುಕೊಂಡು ಕಾಲು ಕಡಗ ಹಾಕೊಂಡು
ಸೀರ್‍ಯದ ಸೀಮೆಗೆ ಬೆಸಗೆ ಮಾಡಾಕೆ ಹೋಗುತಾರಣ್ಣ
ಅರ್ಧನೆ ಪೇಟೆಯೊಳಗೆ ಕೋರಿ ಬೀಸಾಕಿ ನೆಳ್ಳೆ ಬೀಳುತ್ತಿದ್ದಂಗೆ
ಏಳು ತಿಂಗಳ ಬಸುರಿ ಹೊಟ್ಟೆಯೊಳಗಳ ಪಿಂಡ ನೆಗೆದು ಹೋಯಿತಣ್ಣಾ
ಹೊಟ್ಟೆಯೊಳಗಳ ಪಿಂಡ ನೆಗೆದು ಬೀಳುತ್ತಿದ್ದಂಗೆ
ಬೆರಗಿನಿಂದ ಕೂಗುತಾನೋ ತಂದೆ । ಬೇಡ ದಾಸಣ್ಣ
ಮುಂದೆ ಹೆಜ್ಜೆ ಇಡಬೇಡ । ಈ ಹೊತ್ತು ಸೀರ್‍ಯದ
ಪೇಟೆ ಉಳಿಯೋದಿಲ್ಲ । ಹಾಳಾಗಿ ಹೋಗುತ್ತದೆ
ನಿನ್ನಿಂದ ಖಂಡಿತವಾಗಿಯೂ ಸೀರ್‍ಯದ ಪೇಟೆ ಉಳಿಯೋದಿಲ್ಲ ।
ಸ್ವಾಮಿ ಅಪ್ಪಣೆಯಂತೆ ದಾಸರ ಚನ್ನಪ್ಪ ನೂರು ದಾಸರ ಕರಕೊಂಡು
ಮುಂದಕೆ ಇಕ್ಕಿದ ಹೆಜ್ಜೆ ಹಿಂದಕ್ಕೆ ತಕ್ಕೊಂಡು ಬೆರಗಿಗೆ ಬಂದಂನಂತೋ ।
ಮೂರು ತಿಂಗಳು ವಾಸನ ಮಾಡಿ ಮೂರು ತಿಂಗಳು ತುಂಬುತ್ತಿದ್ದಂಗೆ
ಹೇಳುತಾನೆ ಗನಗುರುವು ।
ಹೇಳಪ್ಪ ಗುಡಾರ ಕಿತ್ತುಕೊಂಡು ಮುಂದೆ ಹೋಗಾನ ನಾವು ।
ಗುಡಾರ ಕಿತ್ತರಾಗ ಸ್ವಾಮಿನೆ ತಕ್ಕೊಂಡು ಹೆಗಲಲ್ಲಿಟ್ಟು
ಎಲ್ಲಿಗೆ ಸೇರಬೇಕು ಗನಗುರುವೆ ಅಂದಾನೆ ಕೇಳುತಾನೆ
ನಡಿಯಣ್ಣ ನಾವು ತ್ಯಾಗದ ಹೊಲದಲ್ಲಿ ಕಮರದ ಮರ
ಒಳ್ಳೆಯ ಹೊಲದತಾವ ಬಿಳಿಯಾನೆ ಬಂಡೈತೆ

ಬಿಳಿಯಾನೆ ಬಂಡೆತಾವ ಸುತ್ತನೆ ಬೆರಗಾಕಿಕೊಂಡು
ಬೆರಗಿನೊಳಗೆ ಗುಡಾರ ಹೂಯ್ಕೊಂಡು ವಾಸೆ ಮಾಡಬೇಕು
ಒಳ್ಳೆಯ ಹೊಲದ ತಾವ ತುಂಬಿದ ಮಳೆಯಲ್ಲಿ ತೂರಿ
ತೂರಿ ಬಂದರಾಗ । ಏಳು ಜನ ಅಣ್ಣ ತಮ್ಮಗಳು ಏಳು ಸಂಸಾರ
ಗುಡಿಸಲು ಕಟ್ಟಿಕೊಂಡು ವಾಸನೆ ಮಾಡುತಾರೋ ।
ವಾಸೆ ಮಾಡೂ ಕಾಲದಲ್ಲಿ ಉತ್ತರದೇಶಿ ಸಿಳ್ಳಿಕ್ಯಾತರು
ಹೊರಟು ಹೋಗುತ್ತಿದ್ದರಾಗ । ಬೆರಗಿನ ತಾವೆಲ್ಲ ಉದರನಾ ಕಂಡು
ಇಲ್ಲಿ ಯಾರಾದರೂ ಇರಬಹುದೆಂದು ಮೆಳೆಗಾಗಿ ತೂರಿ ಬಂದು
ಎಷ್ಟು ದೂರದಲ್ಲಿ ಗುಡ್ಲು ಕಟ್ಟಿಕೊಂಡು ವಾಸನೆ ಮಾಡುತಾರೋ
ವಾಸನೆ ಮಾಡೋ ಕಾಲದಲ್ಲಿ ಏಳು ಜನ ಅಣ್ಣ ತಮ್ಮಗಳು
ಮಾತಾಡಿಕೊಂಡು ಸಿಳ್ಳಿಕ್ಯಾತರಿಗೆ ದುಡ್ಡು ಕೊಟ್ಟು
ನಾಟಕವ ಆಡಿಸುತಾರೋ । ಅಂದಿನಿಂದ ಸಿಳ್ಳಿಕ್ಯಾತರ
ಬಂಡೆ ಎಂಬ ಹೆಸರು ಬಂದೈತೆ ಗನಗುರುವೆ

ದೊಡ್ಡಾನೆ ದೈವಾಗೋ ಅಣ್ಣಯ್ಯ ದೈವಾಗೋ
ಅಣ್ಣ ಮಾಗೋಡು ರಂಗಯ್ಯ ನೆಲೆನಿಂತೋ
ಅಣ್ಣ ಮಾಗೋಡು ನೆಲೆನಿಂತ ಬಬ್ಬೂಬೂರು ರಂಗ
ದೊಡ್ಡಾನು ಮುದ್ರಿಕೆ ಬಿಗಿದಚ್ಚಿರೋ ।
ಆವಿನ ಮಾತಿಗೆ ಕೇರಿ ಸುಟ್ಟಾತಗೆ
ಆರೇಳು ಮಾವಯ್ಯಗಳ ಕೊಂದಾತಗೆ ಸೀರ್‍ಯ ಕೊಳದ
ಬಂಡೇಲಿ ನೆಲಸಿದ ಕಂಬದ ರಂಗಯ್ಯಗೆ ಆರತಿ ತಂದೆತ್ತಿರೋ
ಶ್ರೀಮದ್ರಮರಮಣ ಗೋವಿಂದ ಗೋವಿಂದ ।
ಅಮ್ಮಾಜಮ್ಮನ ಪಾದವೇ ಗತಿ ಗೋವಿಂದ ಗೋವಿಂದ
ಕಂಬದ ರಂಗನ ಪಾದವೇ ಗತಿ ಗೋವಿಂದ ಗೋವಿಂದ
ಜಯ ಜಯ ಪಾರ್ವತಿಪತೆ ಹರಹರ ಮಹಾದೇವ
ಕಂಬದ ರಂಗನ ಕತೆ ಮಾಡಿಸಿದ, ಕೇಳಿದ ಮಾನ್ಯರಿಗೆ
ಅವರು ಹೋದ ಬಂದ ಕಡೆ, ತೋಟ ತುಡಿಕೆ ಕುರಿದನ
ವಿದ್ಯ ಬುದ್ದಿ ಸಕಲ ಸಂಪತ್ತು ಲಭಿಸುತ್ತೆ
ಸ್ವಾಮಿ ಕತೆ ಮಾಡಿದ ಮನೇಲಿ ಶಾಂತಿ ನೆಮ್ಮದಿ
ಲಕ್ಷ್ಮಿ ನಾಲ್ಕು ಮೂಲೆಗೂ ನಾಟ್ಯ ಮಾಡುತಾಳೋ

❑ ❑ ❑

## ಅರ್ಥಕೋಶ

ಅಪ್ಪೆ – ಬೊಬ್ಬೆ ಬರುವುದು
ಅಂಗಾರ – ಮಡಿಲು ತುಂಬುವುದು
ಕವಳ – ಊಟ
ಗೌಡಶಾನಿ – ಒಡತಿ
ದಪನ – ಸಮಾಧಿ
ರಾಮಕಳಸ – ದೇವಾಲಯ ಮೇಲಿನ ಕಳಸ
ರಾವುದು – ತಂಗುವುದು
ವೈಗಂಡ – ಕಾಲಿಗೆ ಹಾಕುವ ಕಡಗ
ಉದಾಸಿಲು – ತಲೆಬಾಗಿಲು
ತಡಾದು – ಬಿಟ್ಟು ಮುಂದೆ ಸಾಗು
ಪಂಚಗಾರ – ಅಕ್ಕಸಾಲಿ
ಸ್ಥಾನಿಕರು – ದೇವರ ಪೂಜಾರಿಗಳು
ವಾದರ – ಬಡಗಿ
ಚನ್ನಗುಷ್ಠಿಮರ – ಬ್ಯಾಟೆ ಮರ
ಬವನಾಸಿ – ದಾಸಯ್ಯನ ಜೋಳಿಗೆ